ಆದಿಕವಿ ಶ್ರೀವಾಲ್ಮೀಕಿಮಹಾಮುನಿವಿರಚಿತ

ರಾಮಾಯಣ

ಅಯೋಧ್ಯಾಕಾಂಡ ಭಾಗ – ೨

ಕನ್ನಡ ಅನುವಾದ ಸಹಿತ



ಸೀತಾದೇವೀಯುತಂ ವೀರಂ ಸರ್ವಭೂಷಣಭೂಷಿತಮ್ । ಸೀತಾಪತಿಂ ಹರಿಂ ಧ್ಯಾಯೇದಯೋಧ್ಯಾಕಾಂಡ ಉತ್ತಮೇ ॥

ವಾಲ್ಮೀಕಿರಾಮಾಯಣ

ಅಯೋಧ್ಯಾಕಾಂಡ

ಭಾಗ-೨

ಕನ್ನಡ ಅನುವಾದಸಹಿತ

ಸಮಗ್ರ ವಾಲ್ಮೀಕಿರಾಮಾಯಣ ಕನ್ನಡ ಅನುವಾದ ಯೋಜನೆ

ಅನುಗ್ರಹ

ಶ್ರೀ 1008 ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರು

ಶ್ರೀಮದುತ್ತರಾದಿಮಠ

ಸಂಪಾದಕರು

ಡಾ. ವಿದ್ವಾನ್ ಸತ್ಯಧ್ಯಾನಾಚಾರ್ಯ ಕಟ್ಟಿ

ಅಧ್ಯಕ್ಷರು, ದ್ವೈತವೇದಾಂತ ಪ್ರತಿಷ್ಠಾನ

ಅನುವಾದಕರು

ಪಂ. ಹಯವದನ ಪುರಾಣಿಕರು

ರಾಷ್ಟ್ರಪತಿ ಪ್ರಶಸ್ತಿ ಪುರಸ್ಕೃತರು

This Volume is published with the grant from
Govt. of Karnataka

ಪ್ರಕಾಶಕರು

ದ್ವೈತವೇದಾಂತ ಅಧ್ಯಯನ ಮತ್ತು ಸಂಶೋಧನ ಪ್ರತಿಷ್ಠಾನ

(ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದಿದೆ)

ಬೆಂಗಳೂರು-560 004.

Vālmiki Rāmāyaṇa - Ayodhyākāṇḍa-Vol.2

Published by	**Dvaita Vedanta Studies & Research Foundation** No.11, Uttaradi Matha Compound, Basavanagudi, Bengaluru-560 004. Phone : **080 - 7968 9974** email : dvfbangalore@gmail.com

Edition	Year	Copies	Total
First	2023	1,000	1,000

No. of Pages : xx + 474

©	Publisher
Price.	**Rs. 2000/- (set of 10 books)**
Cover Design by	K M Sheshagiri

Copies can be had from

Dvaita Vedanta Studies and Research Foundation

No.11, Uttaradi Matha Compound,
Basavanagudi, Bengaluru-560 004.
Phone : 080-79689974

★ ಸಮಗ್ರ ವಾಲ್ಮೀಕಿರಾಮಾಯಣ ★

ಕನ್ನಡ ಅನುವಾದ ಯೋಜನೆಯ ಕಾರ್ಯಕಾರಿ ಸಮಿತಿ

ಅಧ್ಯಕ್ಷರು	ಡಾ. ಸತ್ಯಧ್ಯಾನಾಚಾರ್ಯ ಕಟ್ಟಿ
ಸದಸ್ಯರು	ಡಾ. ಕಾಂತೇಶಾಚಾರ್ಯ ಕದರಮಂಡಲಗಿ
	ಡಾ. ಎ.ಬಿ.ಶ್ಯಾಮಾಚಾರ್ಯ
	ಡಾ. ಎಸ್.ಆರ್.ಪಾಂಡುರಂಗಿ

Typeset and Printed at : **VAGARTHA**
Hanumantha Nagar Bangalore 19. Ph.22427677

॥ ಶ್ರೀಃ ॥

॥ ಶ್ರೀಮೂಲರಾಮದಿಗ್ವಿಜಯರಾಮವೇದವ್ಯಾಸಾಃ ವಿಜಯಂತೇ ॥

ಯದನುಗ್ರಹತಃ ಸರ್ವದಿಗ್ವಿಜಯೋ ಭವತೀಪ್ಸಿತಃ ।
ನಮಾಮ್ಯಹಂ ದಿಗ್ವಿಜಯರಾಮಂ ಪೂರ್ಣಧಿಯಾऽರ್ಚಿತಮ್ ॥

ವಂದೇ ಮಂದೇತರಾನಂದಂ ದಶಸ್ಯಂದನನಂದನಮ್ ।
ಶುಭಲೀಲಜಗನ್ಮೂಲರಾಮಂ ಪೂರ್ಣಧಿಯಾऽರ್ಚಿತಮ್ ॥

॥ ಶ್ರೀದಿಗ್ವಿಜಯರಾಮೋ ವಿಜಯತೇ ॥
॥ ಶ್ರೀಭಾರತೀರಮಣಾಯ ನಮಃ ॥
॥ ಸಮಸ್ತಗುರುಭ್ಯೋ ನಮಃ ॥

ಮುನ್ನುಡಿ

'ಶ್ರೀರಾಮ' ಎಲ್ಲರ ಬದುಕಿಗೆ 'ಅಯನ.' ಆಧಾರ, ಸರ್ವಾಧಾರ. ಅದಕ್ಕೇ ಇದು ರಾಮಾಯಣ. ತಂದೆ ದಶರಥನಿಗೆ, ತಾಯಿ ಕೌಸಲ್ಯಗೆ, ಋಷಿ ವಿಶ್ವಾಮಿತ್ರರಿಗೆ, ಜನಸ್ಥಾನದ ಮುನಿಗಳಿಗೆ, ಶಪಿತ ಅಹಿಲ್ಯೆಗೆ, ಪರಶುರಾಮನಲ್ಲಿಯ ಅತುಲನ ನಾಶಕ್ಕೆ, ಜನಕಮಹಾರಾಜನ ಮಗಳು ಸೀತೆಗೆ, ಪ್ರೀತಿಯ ಭಕ್ತ ಹನುಮಂತನಿಗೆ ರಾಮನೇ ಅಯನ.

ಕಾಡಿನಲ್ಲಿಯ ಜಯಂತ, ಶಬರಿ, ಶರಭಂಗ, ವಿರಾಧ, ಕಬಂಧ, ವಾಲಿ, ಸುಗ್ರೀವ, ವಿಭೀಷಣರ ಉದ್ಧಾರಕ್ಕೆ ರಾಮನೇ ಅಯನ. ಇದು ರಾಮಾಯಣ. ಶ್ರೀರಾಮನ ಚರಿತ್ರೆ. ರಾಮನನ್ನು ರಾಮನೇ ಬಲ್ಲ. ಅದಕ್ಕೇ ಹಯಗ್ರೀವದೇವ ನೂರು ಕೋಟಿ ಶ್ಲೋಕದ ಮೂಲರಾಮಾಯಣ ಬರೆದ. ಅದರ ಸಂಕ್ಷೇಪ ಈ ವಾಲ್ಮೀಕಿಯ ರಾಮಾಯಣ. ತ್ರೇತಾಯುಗದ ಇತಿಹಾಸ. ಮಹಾಭಾರತ ದ್ವಾಪರದ ಇತಿಹಾಸ. ಇವೆರಡು ಭಾರತದ ಕಣ್ಣುಗಳು. ವೇದಗಳ ಸಾರ. ಸಂಸ್ಕೃತಿಯ ಮೂಲಾಧಾರ. ಮನುಕುಲದ ಭಾಷ್ಯ. ತತ್ತ್ವಜ್ಞಾನದ ಆಕರ. ಹರಿಯ ಮಹಿಮೆ. ಸಂಸಾರ ದಾಟಲು ಹರಿಗೋಲು. ''**ರಾಮೋ ವಿಗ್ರಹವಾನ್ ಧರ್ಮಃ**'' 'ರಾಮ' ಧರ್ಮದ ಮೂರ್ತಿ. ಅವನ ಅರಿವು ಧರ್ಮದ ಜ್ಞಾನ. ಆದರ್ಶದ ತಿಳಿವು. ಬದುಕನ್ನು ಅಂದಗೊಳಿಸುವುದು. ಬುದ್ಧಿ ಶುದ್ಧವಾಗುವುದು. ಜೀವನ ಮಂಗಲವಾಗುವುದು.

ವಾಲ್ಮೀಕಿಯ ರಾಮಾಯಣ ಆದಿಕಾವ್ಯ. ಅಪಾರ ರಾಮಾಯಣಸಾಹಿತ್ಯಕ್ಕೆ ಆದಿಬೀಜ. ಸಂಪೂರ್ಣ ವಿಷ್ಣುಸಹಸ್ರನಾಮಕ್ಕೆ ಸಮಾನವಾದದ್ದು ಒಂದು ರಾಮಶಬ್ದ. ''ರಾಮಾಯಣ'' ಅನಂತವೇದ ಪಠಿಸಿದ ಫಲ ನೀಡುವ ಮಹಾಕೃತಿ. ರಾಮಾಯಣ ತಿಳಿಯದವ ಭಾರತೀಯನೇ ಅಲ್ಲ. ಇದು ಸರ್ವರಿಂದ ಸದಾ ಶ್ರವಣೀಯ.

ವಾಲ್ಮೀಕಿರಾಮಾಯಣ ಇದು ಭಕ್ತಿಕಾವ್ಯ. ಭಕ್ತಿಗಾಗಿ, ಭಕ್ತಿಯಿಂದ ಬರೆದದ್ದು. ರಾಮನ ಪ್ರಾಪ್ತಿ ಭಕ್ತಿಯಿಂದಲೇ ಸಾಧ್ಯ. ಭಕ್ತಿ ಇಲ್ಲದೇ ರಾಮನ ಪ್ರಾಪ್ತಿ ಇಲ್ಲ. 'ಭಕ್ತಿ' ಬದುಕಿನ ಮುಖ್ಯಸಾಧನ. ಜ್ಞಾನ ಹಾಗೂ ಪ್ರೀತಿಯ ನೆಲೆಯೇ ಭಕ್ತಿ.

''ಜ್ಞಾನಪೂರ್ವಃ ಪರಃ ಸ್ನೇಹಃ ಭಕ್ತಿಃ'' ''ಮಾಹಾತ್ಮ್ಯಜ್ಞಾನಪೂರ್ವಸ್ತು ಸುದೃಢಃ ಸರ್ವತೋಽಧಿಕಃ । ಸ್ನೇಹಃ ಭಕ್ತಿರಿತಿ ಪ್ರೋಕ್ತಃ'' ಶ್ರೀರಾಮನ ಮಹಿಮಾಜ್ಞಾನ, ಅವನಲ್ಲಿ ಅಪಾರ ಸ್ನೇಹವೇ ಭಕ್ತಿ. ಇದು ವಾಲ್ಮೀಕಿಯ ಧ್ಯೇಯ. ಅದಕ್ಕೆ ರಾಮಾಯಣ ನಿರ್ಮಾಣ. ರಾಮಕಥೆಯ ನಿರ್ಣಯ.

ಗಾಯತ್ರೀವ್ಯಾಖ್ಯಾನ ವಾಲ್ಮೀಕಿರಾಮಾಯಣ

ಓಂಕಾರದ ವ್ಯಾಖ್ಯಾನವೇ ಗಾಯತ್ರಿಯು. ಮೂರುಪಾದ, ಇಪ್ಪತ್ನಾಲ್ಕು ಅಕ್ಷರಗಳ ಗಾಯತ್ರಿ. ಇದು ವೇದಸಾರ. ಗಾಯತ್ರಿಯ ಮೂರು ಪಾದಗಳ ವ್ಯಾಖ್ಯಾನವೇ ಸಾರಭೂತ ಪುರುಷಸೂಕ್ತ. ಪುರುಷಸೂಕ್ತದ ವ್ಯಾಖ್ಯಾನವೇ ಸಂಪೂರ್ಣ ವೇದಗಳು. ಗಾಯತ್ರಿಯ ಸ್ವರೂಪವೇ ಸಮಗ್ರ ವಾಲ್ಮೀಕಿ ರಾಮಾಯಣ.

''ಗಾಯತ್ರ್ಯಾಶ್ಚ ಸ್ವರೂಪಂ ತದ್ರಾಮಾಯಣಮಿತಿ ಸ್ಮೃತಮ್''

ವಾಲ್ಮೀಕಿ ರಾಮಾಯಣದ ಪ್ರಾರಂಭ ''ತ'' ಅಕ್ಷರದಿಂದ ಆಗುವುದು. ಅದು ಗಾಯತ್ರಿಯ ಮೊದಲ ಅಕ್ಷರ. ರಾಮಾಯಣದ ಮೊದಲ ಶ್ಲೋಕ **''ತಪಃಸ್ವಾಧ್ಯಾಯನಿರತಂ ತಪಸ್ವೀ ವಾಗ್ವಿದಾಂ ವರಮ್ ।''** (ವಾ.ರಾ. ೧-೧-೧) 'ತ' ದಿಂದ ಆರಂಭ. ಇದು ಗಾಯತ್ರೀಮಂತ್ರದ ಮೊದಲ ವರ್ಣದ ಪ್ರತಿನಿಧಿ. ಗಾಯತ್ರಿಯಲ್ಲಿ ಇಪ್ಪತ್ನಾಲ್ಕು ವರ್ಣ. ರಾಮಾಯಣದ ಒಂದೊಂದು ಸಾವಿರ ಶ್ಲೋಕ ಒಂದೊಂದು ಗಾಯತ್ರೀ ಅಕ್ಷರದ ಪ್ರತಿನಿಧಿ. ಇಪ್ಪತ್ನಾಲ್ಕು ಸಾವಿರ ಶ್ಲೋಕ ೨೪ ಅಕ್ಷರಗಳ ಪ್ರತಿನಿಧಿ. ಗಾಯತ್ರಿಯ ಆರಂಭ 'ತ'ದಿಂದ, ಗಾಯತ್ರಿಯ ಸಮಾಪ್ತಿ 'ತ್'ದಿಂದ. ರಾಮಾಯಣದ ಕೊನೆಯ ಶ್ಲೋಕ

''ತತಃ ಸಮಾಗತಾನ್ ಸರ್ವಾನ್ ಸ್ಥಾಪ್ಯ ಲೋಕಗುರುರ್ದಿವಿ ।
ಹೃಷ್ಟೈಃ ಪ್ರಮುದಿತೈರ್ದೇವೈರ್ಜಗಾಮ ತ್ರಿದಿವಂ ಮಹತ್ ॥

–ವಾ.ರಾ.ಉತ್ತರ ೧೧೦-೨೮

ವಾಲ್ಮೀಕಿ ರಾಮಾಯಣದ ಕೊನೆಯ ಶ್ಲೋಕದ ಕೊನೆಯ ಅಕ್ಷರ ''ತ್''.

ರಾಮಾಯಣದ ಮೊದಲ ಅಕ್ಷರ, ಗಾಯತ್ರಿಯ ಮೊದಲ ಅಕ್ಷರ 'ತ'

ರಾಮಾಯಣ ಹಾಗೂ ಗಾಯತ್ರಿಯ ಕೊನೆಯ ಅಕ್ಷರ ''ತ್''. ಎರಡೂ .... (ತತ್) ೨೪ ಸಾವಿರ ಶ್ಲೋಕದ ಸಮಗ್ರಸಾರ, ಪ್ರತಿನಿಧಿಯೇ ''ತತ್''.

ಸಂಪೂರ್ಣ ರಾಮಾಯಣವೇ **'ತತ್'** ಗಾಯತ್ರಿಯ ವ್ಯಾಖ್ಯಾನರೂಪ-ವಾಗಿದೆ. ಗಾಯತ್ರಿಯ ಇಪ್ಪತ್ನಾಲ್ಕು ಅಕ್ಷರಗಳ ವ್ಯಾಖ್ಯಾನವೇ ವಾಲ್ಮೀಕಿ ರಾಮಾಯಣದ ಇಪ್ಪತ್ನಾಲ್ಕು ಸಾವಿರ ಶ್ಲೋಕಗಳು. ಗಾಯತ್ರಿಯ ಒಂದೊಂದು ಅಕ್ಷರವನ್ನು ರಾಮಾಯಣದ ಒಂದೊಂದು ಸಾವಿರ ಶ್ಲೋಕಗಳು ವ್ಯಾಖ್ಯಾನಿಸುವವು.

''ಇತಿಹಾಸಪುರಾಣಃ ಪಂಚಮೋ ವೇದಾನಾಂ ವೇದಃ'' ಇತಿಹಾಸ-ಪುರಾಣ ಗಳು ಐದನೇ ವೇದ. **'ರಾಮಾಯಣ'** ಇದು ಇತಿಹಾಸ. ಇದು ಪಂಚಮವೇದ.

ಇತಿಹಾಸ, ಪುರಾಣಗಳು ವೇದದ ವಿಶಾಲ ವ್ಯಾಖ್ಯಾನ. ವೇದದ ವಿಸ್ತೃತ ರೂಪ. **''ಇತಿಹಾಸಪುರಾಣಾಭ್ಯಾಂ ವೇದಂ ಸಮುಪಬೃಂಹಯೇತ್''** ವೇದದ ಅರ್ಥ-ವಿಸ್ತಾರಕ್ಕಾಗಿ, ವ್ಯಾಖ್ಯಾನರೂಪವಾಗಿ, ದೃಷ್ಟಾಂತಸಹಿತವಾದುದೇ ರಾಮಾಯಣ-ವೆಂಬ ಇತಿಹಾಸ.

''ರಾಮಾಯಣಂ ಮಹಾಕಾವ್ಯಂ ಸರ್ವವೇದೇಷು ಸಮ್ಮತಮ್ ।
ಸರ್ವಪಾಪಪ್ರಶಮನಂ ದುಷ್ಟಗ್ರಹನಿವಾರಣಮ್ ॥''

-ವಾ.ರಾ.ಮಾಹಾತ್ಮ್ಯ ೧-೧೯

ಸಮಗ್ರವೇದಸಮ್ಮತವಾದದ್ದು ಈ ರಾಮಾಯಣ ಮಹಾಕಾವ್ಯ. ರಾಮಾಯಣದ ರೂಪದಲ್ಲಿ ವೇದಾರ್ಥಗಳ ಸಂಯೋಜನೆ. ಅಂತೆಯೇ ರಾಮಾಯಣ ಎಲ್ಲ ಪಾಪಪರಿಹಾರಕ. ದುಷ್ಟಗ್ರಹಬಾಧೆನಿವಾರಕ.

ರಾಮಾಯಣ ಸ್ವರೂಪ

ವಾಲ್ಮೀಕಿರಾಮಾಯಣದಲ್ಲಿ ಏಳು ಕಾಂಡಗಳು. ಐದು ನೂರಕ್ಕೂ ಹೆಚ್ಚು ಸರ್ಗಗಳು. ಇಪ್ಪತ್ನಾಲ್ಕು ಸಾವಿರ ಶ್ಲೋಕಗಳು. ಇಲ್ಲಿ ಯಾವ ಕಾಂಡವೂ ಪ್ರಕ್ಷಿಪ್ತವಲ್ಲ. ಆಮೇಲೆ ರಚಿಸಿದ್ದೂ ಅಲ್ಲ.

''ಚತುರ್ವಿಂಶತಿ ಸಹಸ್ರಾಣಿ ಶ್ಲೋಕಾನಾಮುಕ್ತವಾನ್ ಋಷಿಃ ।
ತಥಾ ಸರ್ಗಶತಾನ್ ಪಂಚ ಷಟ್‌ಕಾಂಡಾನಿ ತಥೋತ್ತರಮ್ ॥

-ವಾ.ರಾ.ಬಾಲ. ೪-೨

ಇಪ್ಪತ್ನಾಲ್ಕು ಸಾವಿರ ಶ್ಲೋಕಗಳು, ಏಳು ಕಾಂಡಗಳು, ಐದು ನೂರಕ್ಕೂ ಹೆಚ್ಚು ಸರ್ಗಗಳು. ಇದು ರಾಮಾಯಣದ ಸ್ವರೂಪ.

ರಾಮಾಯಣದ ಏಳು ಕಾಂಡಗಳು ಆಧ್ಯಾತ್ಮಿಕ ಸಾಧಕನು ಏರುವ ಏಳು ಮೆಟ್ಟಿಲುಗಳು. ಸಾಧನದ ಸೋಪಾನಗಳು. ಸಾಧಿಸಬೇಕಾದ ಗುಣಗಳು. ಇವು ವೇದದ ಏಳು ಸಂದೇಶಗಳು. ಕಾಂಡದ ಬೀಜವೇ ಏಳು ಸಂಖ್ಯಾಕವಾಗಿದೆ. ಕಾಂಡದ ಹೆಸರುಗಳೂ ಏಳು. ಸಂದೇಶ–ಆದೇಶಗಳನ್ನು ಸುಲಭವಾಗಿ, ಸರಳವಾಗಿ ಬಿಂಬಿಸುವವು.

ಸಮಗ್ರ ವಾಲ್ಮೀಕಿ ರಾಮಾಯಣ ಕನ್ನಡ ಅನುವಾದ ಯೋಜನೆಯ ಹಿನ್ನಲೆ

ದ್ವೈತವೇದಾಂತ ಅಧ್ಯಯನ ಸಂಶೋಧನ ಪ್ರತಿಷ್ಠಾನವು ಅನೇಕ ದಶಕಗಳಿಂದ ಪ್ರಾಚೀನ–ಅಪ್ರಕಟಿತ ಗ್ರಂಥಗಳ ಪ್ರಕಾಶನಕಾರ್ಯದಲ್ಲಿ ಪರಿಪೂರ್ಣವಾಗಿ ತೊಡಗಿದ್ದು, ಈಗಾಗಲೇ ಸಂಸ್ಕೃತ–ಕನ್ನಡ–ಇಂಗ್ಲೀಷ್ ಮೊದಲಾದ ಭಾಷೆಗಳಲ್ಲಿ ನೂರಕ್ಕೂ ಹೆಚ್ಚು ಗ್ರಂಥಗಳು ಪ್ರಕಟಿತವಾಗಿವೆ. ಪ್ರಕೃತ ಧರ್ಮಪ್ರಚಾರಕಾರ್ಯದ ಪ್ರಧಾನ ಅಂಗವಾಗಿ ಸಮಗ್ರ ವಾಲ್ಮೀಕಿ ರಾಮಾಯಣದ ಕನ್ನಡ ಅನುವಾದ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದ್ದು, ೧೦ ಸಂಪುಟಗಳಲ್ಲಿ ಪೂರ್ಣ ರಾಮಾಣಯದ ಕನ್ನಡ ಅನುವಾದಗಳು ಹೊರಬರುತ್ತಿವೆ.

ದ್ವೈತವೇದಾಂತ ಅಧ್ಯಯನ ಸಂಶೋಧನ ಪ್ರತಿಷ್ಠಾನವು ಸಮಗ್ರ ವಾಲ್ಮೀಕಿ ರಾಮಾಯಣದ ಕನ್ನಡ ಅನುವಾದ ಯೋಜನೆ ಕೈಗೆತ್ತಿಕೊಳ್ಳಲು ಇದು ಹಿನ್ನಲೆಯಾಗಿದೆ. ಪರಮಪೂಜ್ಯರಾದ, **ಶ್ರೀಮದುತ್ತರಾದಿಮಠಾಧೀಶರಾದ ಶ್ರೀ೧೦೦೮ಶ್ರೀಸತ್ಯಾತ್ಮತೀರ್ಥಶ್ರೀಪಾದಂಗಳವರ ಪೀಠಾರೋಹಣ ರಜತಮಹೋತ್ಸವ-ದಲ್ಲಿ ನಾವಿದ್ದೇವೆ.** ಬೆಂಗಳೂರಿನ ಕೋಟೆ ಹೈಸ್ಕೂಲ್ ಆವರಣದಲ್ಲಿ ಶ್ರೀರಾಮಸೇವಾ–ಮಂಡಲಿಯ ವತಿಯಿಂದ ಪ್ರತಿವರ್ಷ ನಡೆಸುವ ರಾಮಾಯಣ ವಿಶೇಷ ಪ್ರವಚನ ಕಾರ್ಯಕ್ರಮದಲ್ಲಿ ಶ್ರೀಪಾದಂಗಳವರು ೨೫ ವರ್ಷಗಳಿಂದ ಸತತವಾಗಿ ರಾಮಾಯಣಪ್ರವಚನ ನಡೆಸಿಕೊಡುತ್ತಿದ್ದಾರೆ. ಈ ಬಾರಿ ನಡೆಯುತ್ತಿರುವುದು ಶ್ರೀಪಾದಂಗಳವರ ೨೫ನೇ ವರ್ಷದ ರಾಮಾಯಣ ಪ್ರವಚನ. ಮತ್ತು ಶ್ರೀಪಾದಂಗಳವರಿಗೆ ೫೦ ವಸಂತಗಳು ತುಂಬಿದ ಹಿನ್ನಲೆಯಲ್ಲಿ ಸುವರ್ಣ–ಮಹೋತ್ಸವದ ಸಂಭ್ರಮ. ಹೀಗಾಗಿ ಶ್ರೀಪಾದಂಗಳವರ ೫೦ ವಸಂತಗಳ ಸುವರ್ಣಮಹೋತ್ಸವ, ೨೫ನೇ ವರ್ಷದ ರಾಮಾಯಣ ಪ್ರವಚನ ಮತ್ತು ಶ್ರೀಪಾದಂಗಳವರ ೨೫ನೇ ವರ್ಷದ ಪೀಠಾರೋಹಣ ಮಹೋತ್ಸವಗಳ ಸವಿನೆನಪಿಗಾಗಿ ದ್ವೈತವೇದಾಂತ ಅಧ್ಯಯನ ಸಂಶೋಧನಪ್ರತಿಷ್ಠಾನವು ಸಮಗ್ರ

ರಾಮಾಯಣದ ಕನ್ನಡ ಅನುವಾದ ಯೋಜನೆ ಕೈಗೆತ್ತಿಕೊಂಡು, ಅದರ ಸಂಪೂರ್ಣ ೧೦ ಸಂಪುಟಗಳನ್ನು ಈ ಸಂದರ್ಭದಲ್ಲಿ ಶ್ರೀಪಾದಂಗಳವರ ಮೂಲಕ ಲೋಕಾರ್ಪಣೆ ಮಾಡಿ, ಶ್ರೀರಾಮಚಂದ್ರನಲ್ಲಿ ಸಮರ್ಪಣೆ ಮಾಡುತ್ತಿದೆ.

ಈ ಅನುವಾದಕಾರ್ಯದಲ್ಲಿ ಅನೇಕ ವಿದ್ವಾಂಸರು ಸಂಪೂರ್ಣವಾಗಿ ಸಹಕರಿಸಿ, ತಮ್ಮ ಸುಂದರ ಬರವಣಿಗೆಯಲ್ಲಿ ಕನ್ನಡ ಅನುವಾದ ಮಾಡಿಕೊಟ್ಟಿದ್ದಾರೆ.

೧) ಬಾಲಕಾಂಡ - ಪಂ. ಹಯವದನ ಪುರಾಣಿಕರು

೨) ಅಯೋಧ್ಯಾಕಾಂಡ ಭಾಗ-೧ ಪಂ. ಹಯವದನ ಪುರಾಣಿಕರು

೩) ಅಯೋಧ್ಯಾಕಾಂಡ ಭಾಗ-೨ - ಪಂ. ಹಯವದನ ಪುರಾಣಿಕರು

೪) ಅರಣ್ಯಕಾಂಡ - ಪಂ. ರಾಮವಿಠ್ಠಲಾಚಾರ್ಯ

೫) ಕಿಷ್ಕಿಂಧಾಕಾಂಡ - ಪಂ. ನಾಗರಹಳ್ಳಿ ಶ್ರೀನಿವಾಸಾಚಾರ್ಯ

೬) ಸುಂದರಕಾಂಡ - ಪಂ. ಕೃಷ್ಣಾಚಾರ್ಯ ಬಿದರಹಳ್ಳಿ

೭) ಯುದ್ಧಕಾಂಡ ಭಾಗ-೧ ಪಂ. ಕಾಂತೇಶಾಚಾರ್ಯ ಕದರಮಂಡಲಗಿ

೮) ಯುದ್ಧಕಾಂಡ ಭಾಗ-೨ ಪಂ. ವೇಂಕಟಗಿರೀಶಾಚಾರ್ಯ ಎ. ಎಸ್.

೯) ಉತ್ತರಕಾಂಡ ಭಾಗ-೧ ಪಂ. ವಾದಿರಾಜಾಚಾರ್ಯ ಕರಣಮ್

೧೦) ಉತ್ತರಕಾಂಡ ಭಾಗ-೨ ಪಂ. ಕಮಲಾಪುರ ಗುರುರಾಜಾಚಾರ್ಯ

ಸದಾ ಪಾಠ-ಪ್ರವಚನ-ಸಂಶೋಧನಗಳಲ್ಲಿಯೇ ತಲ್ಲೀನರಾಗಿ, ಬಿಡುವಿಲ್ಲದ ಸಮಯದಲ್ಲಿಯೂ ತಮ್ಮ ಅಮೂಲ್ಯವಾದ ಸಮಯವನ್ನು ನಮಗಾಗಿ ಕೊಟ್ಟು, ವ್ಯಾಖ್ಯಾನಗಳ ವಿಶೇಷ ವಿಚಾರಗಳನ್ನು ಸೇರಿಸಿಕೊಂಡು ಸುಂದರವಾದ ಕನ್ನಡ ಅನಾವಾದ ಮಾಡಿಕೊಟ್ಟಿರುವ ಈ ಎಲ್ಲ ವಿದ್ವಾಂಸರಿಗೆ ಕೃತಜ್ಞತಾಪೂರ್ವಕವಾದ ನಮಸ್ಕಾರಗಳು.

ಅಯೋಧ್ಯಾಕಾಂಡ

ರಾಮಾಯಣದ ಏಳು ಕಾಂಡಗಳಲ್ಲಿ ಬಾಲಕಾಂಡ ಮೊದಲನೇ ಕಾಂಡ-ವಾದರೆ, ಎರಡನೇ ಕಾಂಡ ಅದು ಅಯೋಧ್ಯಾಕಾಂಡ. ರಾಮನ ಪಾದುಕೆಯ ಪಟ್ಟಾಭಿಷೇಕ, ಭರತನ ತ್ಯಾಗ, ದಶರಥನ ರಾಮಪ್ರೀತಿ, ರಾಮನ ವನಗಮನ ಇದು ಜೀವಾಳ.

ಮನಸ್ಸು ಬಾಲಕನಂತಾದರೆ ಸಾಧಕ ಅಯೋಧ್ಯ. ಮನಸ್ಸು ನಿರ್ವಿಕಾರ. ಪರಿಸ್ಥಿತಿ, ಆವೇಶ, ಉದ್ವೇಗ, ಮಾನಾಪಮಾನಗಳು ಮನಸ್ಸಿನ ಮೇಲೆ ಯುದ್ಧ ಮಾಡಲಾರವು. ವಿಕೃತಗೊಳಿಸವು.

''ಯೋದ್ಧುಂ ಯೋಗ್ಯಾ ಯೋಧ್ಯಾ, ನ ಯೋಧ್ಯಾ ಅಯೋಧ್ಯಾ''

ಪರಿಸ್ಥಿತಿ-ಮನಸ್ಸುಗಳ ದ್ವಂದ್ವ. ಬಾಲಕನಂತೆ ಮನಸ್ಸು ನಿರ್ವಿಕಾರ. ಅದೇ ಅಯೋಧ್ಯೆ. ರಾಮಾಯಣದಲ್ಲಿ ಎರಡನೇ ಕಾಂಡ ಅಯೋಧ್ಯಾಕಾಂಡ. ಯುದ್ಧವಿಲ್ಲದ ಕಾಂಡವಿದು. ರಾಜನಾಗಲು ಹೊರಟ ರಾಮ, ನಾರಮಡಿಯುಟ್ಟು ಕಾಡದಾರಿ ಹಿಡಿದ. ಯಾರನ್ನೂ ದೂರಲಿಲ್ಲ. ಆಸೆ ಇಲ್ಲ. ಸಹಜ ಸಹನೆ. **''ವಿಕಾರೋ ನೈವ ಲಕ್ಷಿತಃ''** ಮುಖದಲ್ಲಿಯೂ ಸರ್ವಥಾ ವಿಕಾರವಿಲ್ಲ. ರಾಮನ ಅಯೋಧ್ಯತೆ. ಇಲ್ಲಿಯೇ ಶ್ರೀರಾಮ ಉಳಿದಿದ್ದರೆ ತಮ್ಮಂದಿರಲ್ಲಿ, ತಾಯಂದಿರಲ್ಲಿ, ತಂದೆಗೂ ಪರಸ್ಪರ ಸಂಘರ್ಷ. ಮನಸ್ತಾಪ. ಅದನ್ನು ತಪ್ಪಿಸಲು ಕಾಡಿಗೆ ತೆರಳಿದ. ಅಯೋಧ್ಯನಾದ ರಾಮ ಕಾಡಿಗೆ ಮಡದಿ, ತಮ್ಮನೊಡನೆ ತೆರಳಿದ. ದ್ವೇಷ, ಅತೃಪ್ತಿ ಇಲ್ಲದೇ ಸಂತಸದಿಂದ ಅಯೋಧ್ಯನಾಗಿ ಅಯೋಧ್ಯೆಯಿಂದ ವನಕ್ಕೆ ತೆರಳಿದ.

ತಂದೆ-ತಾಯಿಗಳ, ಮಕ್ಕಳ, ಅಣ್ಣ-ತಮ್ಮಂದಿರ, ಪತಿ-ಪತ್ನಿಯರ, ರಾಜ-ಪ್ರಜೆಗಳ ಪ್ರೀತಿ ತುಂಬಿದ ಕಾಂಡ. ಅನಂತಗುಣಗಣಿ ರಾಮ. ವಿವೇಕ, ಪ್ರೀತಿಯ ಲಕ್ಷ್ಮಣ. ಭಕ್ತಿಯ ಭರತ. ಸಾತ್ತ್ವಿಕ ಶತ್ರುಘ್ನ. ಇವರಿಂದ ಅರಮನೆ ಅಯೋಧ್ಯೆಯಾಯಿತು. ಸ್ವಾರ್ಥ ಸೋತಿತು. ಸಂಘರ್ಷ ಕರಗಿತು. ಇದು ತ್ಯಾಗದ ಅಯೋಧ್ಯಾಕಾಂಡ. ಬಾಲಕನಾಗಿ ಅಯೋಧ್ಯನಾಗುವ ದ್ವಿತೀಯ ಸೋಪಾನ.

ಅಯೋಧ್ಯಾಕಾಂಡದ ಕನ್ನಡ ಅನುವಾದಕರು

ದ್ವೈತವೇದಾಂತ ಅಧ್ಯಯನ ಸಂಶೋಧನ ಪ್ರತಿಷ್ಠಾನವು ಕೈಗೆತ್ತಿಕೊಂಡ ಸಮಗ್ರ ವಾಲ್ಮೀಕಿ ರಾಮಾಯಣ ಕನ್ನಡ ಅನುವಾದದ ಬೃಹತ್ಕಾರ್ಯದಲ್ಲಿ ಎರಡನೇ ಕಾಂಡವಾದ ಅಯೋಧ್ಯಾಕಾಂಡವನ್ನು ಪೂರ್ಣವಾಗಿ ಕನ್ನಡದಲ್ಲಿ ಅನುವಾದಿಸಿ ಕೊಟ್ಟವರು **ಪಂ. ಹಯವದನ ಪುರಾಣಿಕರು.**

ಶ್ರೀಯುತರು ಪೂರ್ಣಪ್ರಜ್ಞವಿದ್ಯಾಪೀಠದ ಮೊದಲತಂಡದ ವಿದ್ಯಾರ್ಥಿಗಳಾಗಿ, ಪರಮಪೂಜ್ಯ ಪೇಜಾವರಮಠಾಧೀಶರಾದ ಶ್ರೀವಿಶ್ವೇಶತೀರ್ಥರಲ್ಲಿ ಅಧ್ಯಯನ ಮಾಡಿ, ಸುಧಾಮಂಗಳ ನೆರವೇರಿಸಿ ಹೊರಬಂದವರು. ೧೯೭೫ ರಿಂದ ಪೂರ್ಣಪ್ರಜ್ಞವಿದ್ಯಾಪೀಠದ ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿದವರು.

ವ್ಯಾಸಸಾಹಿತ್ಯ ಹಾಗೂ ದಾಸಸಾಹಿತ್ಯ ಎರಡರಲ್ಲಿಯೂ ಅಗಾಧವಾದ ಪಾಂಡಿತ್ಯವನ್ನು ಪಡೆದಿದ್ದ ಇವರು ಅತ್ಯುತ್ತಮ ಲೇಖಕರು. ಮಾಧ್ವಮಹಾ-ಮಂಡಲದ ಸರ್ವಮೂಲಗ್ರಂಥಗಳ ಕನ್ನಡ ಅನುವಾದ ಯೋಜನೆಯಲ್ಲಿ ಸಮಗ್ರ ಮಹಾಭಾರತತಾತ್ಪರ್ಯನಿರ್ಣಯಕ್ಕೆ, ಸಮಗ್ರ ಭಾಗವತತಾತ್ಪರ್ಯನಿರ್ಣಯಕ್ಕೆ ವಿಸ್ತೃತವಾದ ಕನ್ನಡ ಅನುವಾದ ಬರೆದ ವಿಶೇಷಕೀರ್ತಿ ಇವರದ್ದು. ಸಮಗ್ರ ಭಾಗವತಕ್ಕೆ ಕನ್ನಡ ಅನುವಾದ ಮಾಡಿ ಸುಲಲಿತಭಾಗವತ ಕೊಟ್ಟಿದ್ದಾರೆ. ಋಗ್ಭಾಷ್ಯಕ್ಕೆ ವಿಮರ್ಶಾತ್ಮಕವಾಗಿ ಪೂರ್ಣ ಅನುವಾದ ಮಾಡಿದ್ದರ ಜೊತೆಗೆ ಸಂಪೂರ್ಣ ಹರಿಕಥಾಮೃತಸಾರಕ್ಕೆ ಹಾಗೂ ಲಕ್ಷ್ಮೀಶೋಭಾನ ಕೃತಿಗಳಿಗೆ ವಿಶೇಷರೀತಿಯಲ್ಲಿ ಅನುವಾದ ಮಾಡಿದ ದೊಡ್ಡ ಸಾಧನೆ ಅವರದ್ದು.

ಪೂರ್ಣಪ್ರಜ್ಞ ವಿದ್ಯಾಪೀಠದ ವತಿಯಿಂದ ಕೈಗೊಳ್ಳಲಾದ ಸಮಗ್ರ ನ್ಯಾಯಸುಧಾ ಕನ್ನಡ ಅನುವಾದ ಯೋಜನೆಯಲ್ಲಿ ಪುರಾಣಿಕರದು ಬಹಳ ಮಹತ್ವದ ಪಾತ್ರ. ಎಲ್ಲ ವಿದ್ವಾಂಸರು ತಮಗೆ ನೀಡಿದ ಭಾಗಗಳನ್ನು ಕನ್ನಡದಲ್ಲಿ ಅನುವಾದ ಮಾಡಿ ಕೊಟ್ಟಾಗ ಅದೆಲ್ಲವನ್ನೂ ಸರಿಯಾಗಿ ಅವಲೋಕಿಸಿ, ಅವಶ್ಯಕತೆ ಇದ್ದಲ್ಲಿ ತಿದ್ದುಪಡಿ ಮಾಡಿ, ಪ್ರಧಾನ ಸಂಪಾದಕರಾಗಿ, ಸುಧಾಸೌರಭ ಪ್ರಕಾಶನಕ್ಕೆ ಮುಖ್ಯವಾಗಿ ನೆರವಾದರು.

ಅವರ ಸಾಧನೆಗೆ ರಾಷ್ಟ್ರಪತಿಪ್ರಶಸ್ತಿ ಸಹಿತ ನೂರಾರು ಪ್ರಶಸ್ತಿಗಳು ಅವರಿಗೆ ಸಂದಿವೆ. ಉತ್ತಮ ವಾಕ್ಪಟುತ್ವವನ್ನೂ ಹೊಂದಿದ್ದ ಇವರು ವಿದ್ವತ್ಸಭೆಗಳಲ್ಲಿ ಎಲ್ಲರೂ ತಲೆದೂಗುವಂತೆ ವಿಷಯ ಮಂಡಿಸುತ್ತಿದ್ದರು.

ಇವರು ವಾಲ್ಮೀಕಿ ರಾಮಾಯಣದ ಬಾಲಕಾಂಡ ಹಾಗೂ ಅಯೋಧ್ಯಾ-ಕಾಂಡದ ಸಂಪೂರ್ಣ ಕನ್ನಡ ಅನುವಾದ ಮಾಡಿಕೊಟ್ಟು, ನಮ್ಮ ಸಂಸ್ಥೆಯ ಸಮಗ್ರ ವಾಲ್ಮೀಕಿ ರಾಮಾಯಣ ಕನ್ನಡ ಅನುವಾದ ಬೃಹತ್ಕಾರ್ಯಕ್ಕೆ ವಿಶೇಷ ಸಹಕಾರ ನೀಡಿದ್ದಾರೆ.

ವಿಶೇಷವೆಂದರೆ, ವಿದ್ವಾಂಸರ ಮೂಲಕ ವಾಲ್ಮೀಕಿ ರಾಮಾಯಣಕ್ಕೆ ಕನ್ನಡ ಅನುವಾದ ಮಾಡಿಸಬೇಕು ಎಂದು ಅಂದುಕೊಂಡ ಕೂಡಲೇ ನೆನಪಾದದ್ದು ಪಂ.ಹಯವದನ ಪುರಾಣಿಕರು. ಅವರನ್ನು ಸಂಪರ್ಕಿಸಿ ಬಾಲಕಾಂಡದ ಅನುವಾದ ಮಾಡಿಕೊಡಬೇಕೆಂದು ಕೇಳಿಕೊಂಡೆವು. ಆಶ್ಚರ್ಯವೆಂದರೆ, ನಾವು ಅವರನ್ನು ಭೇಟಿಯಾಗಿ ಬಂದ ಹತ್ತುದಿನಗಳಲ್ಲಿಯೇ ಬಾಲಕಾಂಡದ ಪೂರ್ಣ ಅನುವಾದ ಮಾಡಿ ನಮಗೆ ಕಳಿಸಿಬಿಟ್ಟರು.

ನಂತರ ಅಯೋಧ್ಯಾಕಾಂಡದ ಅನುವಾದ ಆಗಬೇಕಿತ್ತು. ಇನ್ನೊಬ್ಬ ವಿದ್ವಾಂಸರಿಗೆ ಅದರ ಜವಾಬ್ದಾರಿ ನೀಡಿದ್ದೆವು. ಆದರೆ ಕಾರಣಾಂತರದಿಂದ ಅವರಿಗೆ ಅಯೋಧ್ಯಾಕಾಂಡದ ಅನುವಾದ ಮಾಡಲು ಸಾಧ್ಯವಾಗಲಿಲ್ಲ. ನಾವು ಮತ್ತೆ ಪಂ. ಹಯವದನ ಪುರಾಣಿಕರನ್ನೇ ಸಂಪರ್ಕಿಸಿ, ಅಯೋಧ್ಯಾಕಾಂಡದ ಅನುವಾದವನ್ನೂ ಮಾಡಿಕೊಡಲು ವಿನಂತಿಸಿಕೊಂಡೆವು. ನಮ್ಮ ವಿನಂತಿಗೆ ಸ್ಪಂದಿಸಿ, ಕೇವಲ ಹತ್ತು ದಿನಗಳಲ್ಲಿ ಅಯೋಧ್ಯಾಕಾಂಡದ ಅನುವಾದವನ್ನೂ ಪೂರ್ಣವಾಗಿ ಮುಗಿಸಿ ಕಳಿಸಿಕೊಟ್ಟರು. ಅವರ ಆ ವೇಗದ ಬರವಣಿಗೆ, ಅವರ ವ್ಯುತ್ಪತ್ತಿ ಇವುಗಳನ್ನು ಕಂಡು ಬಹಳ ಆಶ್ಚರ್ಯಚಕಿತರಾದೆವು. ಅಂತಹ ಅದ್ಭುತ ಬರಹಗಾರರು ಇವರು.

ಇಂತಹ ಅಪಾರ ಸದ್ಗುಣಗಳ ಗಣಿಗಳಾಗಿದ್ದ ಇವರು ಇತ್ತೀಚೆಗೆ ದೈವಾಧೀನರಾದದ್ದು ಭಗವಂತನ ಸಂಕಲ್ಪ. ಅವರಿಗೆ ಜನ್ಮಜನ್ಮಾಂತರದಲ್ಲಿಯೂ ಶ್ರೀಮದಾಚಾರ್ಯರ ಶಾಸ್ತ್ರದ ಅಧ್ಯಯನ–ಅಧ್ಯಾಪನ–ಲೇಖನಾದಿಗಳನ್ನು ಮಾಡುವ ಸೌಭಾಗ್ಯವನ್ನು ಭಗವಂತ ಕೊಡಲಿ ಎಂದು ಹಾರೈಸುತ್ತ, ಅವರಿಗೆ ಈ ಸಂದರ್ಭದಲ್ಲಿ ಸ್ಮರಣಪೂರ್ವಕವಾಗಿ ವಿಶೇಷ ನಮನಗಳನ್ನು ಸಲ್ಲಿಸುತ್ತಿದ್ದೇವೆ.

ಕೃತಜ್ಞತೆಗಳು

◆ ಯಾವುದೇ ಒಂದು ಕಾರ್ಯ ಯಶಸ್ವಿಯಾಗಿ ಪೂರ್ಣಗೊಳ್ಳಬೇಕಾದರೆ, ಗುರುಗಳ ಆಶೀರ್ವಾದ ಮುಖ್ಯ ಕಾರಣ. ಇಂದು ನಮ್ಮ ಸಮಗ್ರ ರಾಮಾಯಣ ಕನ್ನಡ ಅನುವಾದ ಯೋಜನೆ ಯಶಸ್ವಿಯಾಗಿ ಪೂರ್ಣಗೊಳ್ಳಲು ಪರಮಪೂಜ್ಯರಾದ, **ಶ್ರೀಮದುತ್ತರಾದಿಮಠಾಧೀಶರಾದ, ಶ್ರೀ ೧೦೦೮ ಶ್ರೀಸತ್ಯಾತ್ಮತೀರ್ಥ-ಶ್ರೀಪಾದಂಗಳವರು** ನಮ್ಮ ಮೇಲೆ ಮಾಡಿದ ಪರಮಾನುಗ್ರಹವೇ ಪ್ರಮುಖ ಕಾರಣ. ನಮ್ಮ ಯೋಜನೆಯ ವಿವರವನ್ನು ತಿಳಿಸಿ ಶ್ರೀಪಾದಂಗಳವರಲ್ಲಿ ಪ್ರಾರ್ಥಿಸಿಕೊಂಡಾಗ, ಶ್ರೀಗಳವರು ಶ್ರೀಮೂಲರಾಮನಲ್ಲಿ ವಿಶೇಷವಾಗಿ ಪ್ರಾರ್ಥಿಸಿ, ಅನುಗ್ರಹಪೂರ್ವಕವಾಗಿ ಮಂತ್ರಾಕ್ಷತೆ ಇತ್ತು ಹರಸಿದರು. ಜೊತೆಗೆ ತಮ್ಮ ಅಮೂಲ್ಯವಾದ ಅನುಗ್ರಹಸಂದೇಶವನ್ನೂ ಕಳಿಸಿ ಪರಮಾನುಗ್ರಹ ಮಾಡಿದ್ದಾರೆ. ಅಂತಹ ಗುರುಗಳಿಗೆ ಭಕ್ತಿಪೂರ್ವಕ ಸಾಷ್ಟಾಂಗ ಪ್ರಣಾಮಗಳು.

◆ ದ್ವೈತವೇದಾಂತ ಅಧ್ಯಯನ ಸಂಶೋಧನ ಪ್ರತಿಷ್ಠಾನವು ಅಧ್ಯಯನ–ಸಂಶೋಧನಗಳಿಗೆ ಅತ್ಯುಪಯುಕ್ತವಾದ ನೂರಾರು ಅಪೂರ್ವ ಗ್ರಂಥಗಳನ್ನು ಪ್ರಕಾಶನ ಮಾಡಿ ವಿದ್ವಾಂಸರ, ಸಂಶೋಧಕರ, ವಿದ್ಯಾರ್ಥಿಗಳ, ಜಿಜ್ಞಾಸುಗಳ ಮೆಚ್ಚುಗೆಗೆ ಪಾತ್ರವಾಗಿರುವ ಉತ್ತಮಸಂಸ್ಥೆಯಾಗಿದೆ. ಸಂಸ್ಥೆಯು ಈ ಮಟ್ಟಕ್ಕೆ

ಬೆಳೆಯುವುದಕ್ಕೆ ಮುಖ್ಯಕಾರಣ **ಪ್ರೊ. ಕೆ. ಟಿ. ಪಾಂಡುರಂಗಿ** ಅವರು. ಸಂಸ್ಥೆಯನ್ನು ಕಟ್ಟಿ, ಅದರ ಸರ್ವಾಂಗೀಣ ಅಭಿವೃದ್ಧಿಗೆ ಬಹಳ ಪರಿಶ್ರಮವಹಿಸಿ, ಬೆಳೆಸಿ, ಇಂದು ಉನ್ನತಮಟ್ಟಕ್ಕೆ ತಂದು ನಿಲ್ಲಿಸಿದ್ದಾರೆ. ಸಮಗ್ರ ವಾಲ್ಮೀಕಿ ರಾಮಾಯಣಕ್ಕೆ ಕನ್ನಡ ಅನುವಾದ ಮಾಡಿಸಿ ಪ್ರಕಾಶನ ಮಾಡಬೇಕೆಂದು ಅವರು ಇಚ್ಛೆಪಟ್ಟಿದ್ದರು. ಅವರ ಇಚ್ಛೆಗೆ ತಕ್ಕಂತೆ ಇಂದು ಸಮಗ್ರ ವಾಲ್ಮೀಕಿ ರಾಮಾಯಣಕ್ಕೆ ಅನುವಾದ ಸಿದ್ಧವಾಗಿ ಪ್ರಕಾಶನವಾಗುತ್ತಿದೆ. ಆದರೆ ದೈವಸಂಕಲ್ಪ. ಇಂದು ಆ ಕಾರ್ಯವನ್ನು ನೋಡಿ ಸಂತೋಷಪಡಲು ಅವರು ನಮ್ಮೊಂದಿಗೆ ಇಲ್ಲ. ಆದರೂ ಅವರ ಸಂಕಲ್ಪ ಇಂದು ನೆರವೇರಿದೆ ಎಂಬ ಸಂತೃಪ್ತಿ ನಮಗುಂಟಾಗಿದೆ. ಅಂತಹ ಸಂಸ್ಥೆಯ ರೂವಾರಿಗಳು, ನಮ್ಮೆಲ್ಲರಿಗೆ ಮಾರ್ಗದರ್ಶಕರೂ ಆಗಿದ್ದ **ಪ್ರೊ. ಕೆ. ಟಿ. ಪಾಂಡುರಂಗಿ** ಅವರಿಗೆ ನನ್ನ ವಿಶೇಷ ನಮಸ್ಕಾರಗಳು.

◆ ಸಮಗ್ರ ರಾಮಾಯಣ ಕನ್ನಡ ಅನುವಾದ ಪ್ರಕಾಶನಕಾರ್ಯಕ್ಕೆ **ದ್ವೈತವೇದಾಂತ ಅಧ್ಯಯನ ಸಂಶೋಧನ ಪ್ರತಿಷ್ಠಾನದ** ಎಲ್ಲ ವಿದ್ವಾಂಸರು, ಪದಾಧಿಕಾರಿಗಳು, ಸದಸ್ಯರು ವಿಶೇಷವಾಗಿ ಸಹಕರಿಸಿದ್ದಾರೆ.

◆ ಶೋಧಕೇಂದ್ರದ ಸಂಶೋಧಕರಾದ **ಡಾ. ಕಾಂತೇಶಾಚಾರ್ಯ ಕದರಮಂಡಲಗಿ** ಅವರು ಹಾಗೂ ಸಂಶೋಧನಪ್ರತಿಷ್ಠಾನದ ಕಾರ್ಯದರ್ಶಿಗಳಾದ **ಡಾ.ಎ.ಬಿ. ಶಾಮಾಚಾರ್** ಮತ್ತು ಖಜಾಂಚಿಗಳಾದ **ಡಾ. ಎಸ್. ಆರ್. ಪಾಂಡುರಂಗಿ** ಅವರು ನಮ್ಮ ಈ ಸಮಗ್ರ ರಾಮಾಯಣ ಕನ್ನಡ ಅನುವಾದ ಪ್ರಕಾಶನಕಾರ್ಯಕ್ಕೆ ವಿಶೇಷವಾಗಿ ಸಹಕಾರ ನೀಡಿ, ಯಶಸ್ವಿಗೊಳಿಸಿದ್ದಾರೆ. ಅವರೆಲ್ಲರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.

◆ ಗ್ರಂಥ ಅಂದವಾಗಿ ಹೊರಬರಲು ಅಂದವಾದ ಅಕ್ಷರಜೋಡಣೆ ಹಾಗೂ ಸುಂದರವಾದ ಮುದ್ರಣವೂ ಕಾರಣ. ಶ್ರೀಯುತ ಫಣಿ ಅವರು ಬಹಳ ಪರಿಶ್ರಮಪೂರ್ವಕವಾಗಿ ಅಂದವಾಗಿ ಅಕ್ಷರಜೋಡಣೆ ಮಾಡಿಕೊಟ್ಟಿದ್ದಾರೆ. ಮತ್ತು ವಾಗರ್ಥ ಮುದ್ರಣಾಲಯ ಅವರು ರಾಮಾಯಣದ ಈ ಅನುವಾದ ಕೃತಿಯನ್ನು ಸುಂದರವಾಗಿ ಮುದ್ರಿಸಿ, ಓದುಗರ ಕೈ ಸೇರಿಸಿದ್ದಾರೆ. ಅವರಿಗೆ ಹೃತ್ಪೂರ್ವಕ ಧನ್ಯವಾದಗಳು.

ಡಾ. ಸತ್ಯಧ್ಯಾನಾಚಾರ್ಯ ಕಟ್ಟಿ
ಅಧ್ಯಕ್ಷರು,
ದ್ವೈತವೇದಾಂತ ಅಧ್ಯಯನ ಸಂಶೋಧನ ಪ್ರತಿಷ್ಠಾನ

ವಿಷಯಾನುಕ್ರಮಣಿಕಾ

ಸರ್ಗ ಸಂಖ್ಯೆ	ವಿಷಯ	ಪುಟ ಸಂಖ್ಯೆ
56.	ರಾಮಾದಿಗಳು ಚಿತ್ರಕೂಟ ಪರ್ವತಕ್ಕೆ ಹೋದದ್ದು. ಅಲ್ಲಿ ಭರದ್ವಾಜ-ಮುನಿಗಳು ನಿರ್ದೇಶಿಸಿದ್ದ ಸ್ಥಳದಲ್ಲಿ ಪರ್ಣಶಾಲೆಯನ್ನು ನಿರ್ಮಿಸಿದ್ದು.	1
57.	ಸುಮಂತ್ರನು ಅಯೋಧ್ಯೆಯನ್ನು ಪ್ರವೇಶ ಮಾಡಿದ್ದು. ದಶರಥನಿಗೆ ರಾಮನ ವೃತ್ತಾಂತವನ್ನು ನಿವೇದಿಸಿದ್ದು. ಅದನ್ನು ಕೇಳಿ ಕೌಸಲ್ಯಾದಿಗಳೆಲ್ಲ ಮೂರ್ಛೆಗೊಂಡದ್ದು.	11
58.	ಸುಮಂತ್ರನು ದಶರಥನಿಗೆ ರಾಮ-ಲಕ್ಷ್ಮಣ-ಸೀತೆಯರ ವಚನಾದಿಗಳನ್ನು ಹೇಳಿದ್ದು.	18
59.	ಸುಮಂತ್ರನು ರಾಮಾದಿಗಳ ವನಗಮನ ಪ್ರಕಾರವನ್ನು ಮತ್ತೊಮ್ಮೆ ಹೇಳಿದ್ದು. ರಾಮಾದಿಗಳ ಕುರಿತಾಗಿ ದಶರಥನು ಪ್ರಲಾಪಿಸಿದ್ದು.	26
60.	ದುಃಖಿತಪ್ತಳಾದ ಕೌಸಲ್ಯೆಗೆ ಸುಮಂತ್ರನು ಸಮಾಧಾನ ಹೇಳಿದುದು.	35
61.	ಕೌಸಲ್ಯೆ ದಶರಥನನ್ನು ನಿಂದಿಸಿದ್ದು.	40
62.	ದುಃಖಿತನಾದ ದಶರಥನು ಬಾಲ್ಯದಲ್ಲಿ ತಾನು ಮಾಡಿದಂತಹ ಮುನಿಸುತನ ವಧವನ್ನು ಸ್ಮರಿಸಿಕೊಂಡದ್ದು. ತನ್ನನ್ನು ನಿಂದಿಸುತ್ತಿರುವ ಕೌಸಲ್ಯೆಗೆ ಕೈಮುಗಿದು ಸಾಂತ್ವನ ಹೇಳಿದ್ದು.	46
63.	ದಶರಥನು ಬಾಲ್ಯದಲ್ಲಿ ತಾನು ಮಾಡಿದಂತಹ ಮುನಿಕುಮಾರವಧವನ್ನು ಕೌಸಲ್ಯೆಗೆ ಹೇಳಿದುದು.	50
64.	ಋಷಿದಂಪತಿಗಳು ತನಗೆ ಶಾಪ ಕೊಟ್ಟದ್ದನ್ನೂ ಸಹ ಕೌಸಲ್ಯೆಗೆ ದಶರಥ ಹೇಳಿದ್ದು. ಮುಂದಿನ ರಾತ್ರಿಯಲ್ಲಿ ರಾಮನನ್ನೇ ಸ್ಮರಿಸುವವನಾಗಿ ದಶರಥನು ಪ್ರಾಣತ್ಯಾಗ ಮಾಡಿದ್ದು.	62
65.	ಬೆಳಿಗ್ಗೆ ಎದ್ದಾಗ ದಶರಥನು ಮೃತನಾಗಿರುವುದನ್ನು ತಿಳಿದಂತಹ ಕೌಸಲ್ಯಾದಿಗಳು ಪ್ರಲಾಪಿಸಿದುದು.	78
66.	ಕೌಸಲ್ಯೆಯು ಕೈಕೇಯಿಯನ್ನು ನಿಂದಿಸುವ ಮೂಲಕವಾಗಿ ರಾಮಾದಿಗಳನ್ನು ಕುರಿತು ಶೋಚಿಸಿದ್ದು. ಮಂತ್ರಿಗಳು ರಾಜ ದಶರಥನ ಶರೀರವನ್ನು ತೈಲದ್ರೋಣಿಯಲ್ಲಿ ಇಟ್ಟದ್ದು.	84

67. ಮಾರ್ಕಂಡೇಯರೇ ಮೊದಲಾದ ಎಲ್ಲ ಋಷಿಗಳು ಸೇರಿ ''ರಾಜ್ಯದಲ್ಲಿ ರಾಜನೇ ಇಲ್ಲದೇ ಹೋದರೆ ಏನೇನು ಸಮಸ್ಯೆಗಳು ಉಂಟಾಗುತ್ತವೆ'' ಎಂಬುದಾಗಿ ಹೇಳುವ ಮೂಲಕ ಯಾರೊಬ್ಬರನ್ನಾದರೂ ರಾಜ್ಯದಲ್ಲಿ ರಾಜನನ್ನಾಗಿ ಅಭಿಷೇಕ ಮಾಡುವ ಆಲೋಚನೆ ಮಾಡಿದುದು. 91

68. ಭರತನನ್ನು ಕರೆತರುವುದಕ್ಕಾಗಿ ವಸಿಷ್ಠರು ದೂತನನ್ನು ಕಳುಹಿಸಿದುದು. 98

69. ಆ ರಾತ್ರಿ ಭರತನು ದುಃಸ್ವಪ್ನ ಕಂಡದ್ದು. ತಾನು ಕಂಡ ದುಃಸ್ವಪ್ನವನ್ನು ಗೆಳೆಯರಲ್ಲಿ ಹೇಳಿಕೊಂಡದ್ದು. 104

70. ದೂತನು ಬಂದು ''ವಸಿಷ್ಠರು ನಿನ್ನನ್ನು ಬಹಳ ಬೇಗ ನೋಡಲು ಬಯಸಿದ್ದಾರೆ'' ಎಂದು ಭರತನಿಗೆ ತಿಳಿಸಿದುದು. 108

71. ಭರತನು ಅಲ್ಲಿಂದ ಹೊರಟ ಮೇಲೆ ಎಂಟನೇ ದಿನ ಅಯೋಧ್ಯಾನಗರಕ್ಕೆ ಹೋಗಿ ತಲುಪಿದ್ದು. ಅಲ್ಲಿ ದಶರಥನ ಅಂತಃಪುರಕ್ಕೆ ಹೋದದ್ದು. 114

72. ದಶರಥನ ಅಂತಃಪುರದಲ್ಲಿ ದಶರಥನು ಕಾಣದ ಕಾರಣ ಕೈಕೇಯಿಯ ಅಂತಃಪುರಕ್ಕೆ ಹೋಗಿ ತಂದೆ ದಶರಥ ಎಲ್ಲಿ? ಎಂಬುದಾಗಿ ಕೈಕೇಯಿಗೆ ಭರತನು ಪ್ರಶ್ನಿಸಿದ್ದು. ರಾಮನು ವನವಾಸಕ್ಕೆ ತೆರಳಿದ್ದು ಹಾಗೂ ದಶರಥನು ಮೃತನಾದದ್ದು ಎಲ್ಲ ವಿಚಾರವನ್ನು ಭರತನಿಗೆ ಹೇಳಿ ರಾಜ್ಯ-ದಲ್ಲಿ ಪಟ್ಟಾಭಿಷಿಕ್ತನಾಗುವಂತೆ ಭರತನಿಗೆ ಕೈಕೇಯಿ ಪ್ರಚೋದಿಸಿದುದು. 123

73. ಭರತನು ಬಹಳವಾಗಿ ಕೈಕೇಯಿಯನ್ನು ನಿಂದಿಸಿದುದು. 133

74. ''ರಾಮನನ್ನು ವನದಿಂದ ಮರಳಿ ಅಯೋಧ್ಯೆಗೆ ಕರೆತಂದು ಅವನಿಗೆ ಪಟ್ಟಾಭಿಷೇಕ ಮಾಡುತ್ತೇನೆ'' ಎಂಬುದಾಗಿ ಭರತ ಹೇಳಿದ್ದು. 139

75. ಭರತನು ಕೌಸಲ್ಯೆಯ ಅಂತಃಪುರಕ್ಕೆ ಹೋದದ್ದು. ರಾಮನ ವನಗಮನವು ತನಗೆ ಸಮ್ಮತವಲ್ಲ ಎಂದು ಶಪಥ ಪೂರ್ವಕವಾಗಿ ಹೇಳಿದುದು. ಕೌಸಲ್ಯೆಯು ಭರತನನ್ನು ತನ್ನ ತೊಡೆಯಮೇಲೆ ಕೂಡಿಸಕೊಂಡು ರೋದಿಸಿದ್ದು. 147

76. ದಶರಥನ ಔರ್ಧ್ವದೈಹಿಕ ಕರ್ಮಗಳನ್ನು ಮಾಡಿದುದು. 161

77. ಹನ್ನೆರಡನೇ ದಿನದಲ್ಲಿ ಭರತ-ಶತ್ರುಘ್ನರು ದಶರಥನ ಶ್ರಾದ್ಧಾದಿಗಳನ್ನು ಮಾಡಿ, ಬ್ರಾಹ್ಮಣರಿಗೆ ಧನದಾನ ಮಾಡಿದುದು. ಅಸ್ಥಿಸಂಚಯನ ಕ್ರಿಯೆಗಳನ್ನು ನೆರವೇರಿಸಿದುದು. 166

78. ಶತ್ರುಘ್ನನು ಸಖಿಯರ ಮಧ್ಯದಲ್ಲಿ ಇದ್ದಂತಹ ಮಂಥರೆಯನ್ನು ಹಿಡಿದು, ಭೂಮಿಯಲ್ಲಿ ಬೀಳಿಸಿ, ಅತ್ತಿಂದಿತ್ತ ಉರುಳಾಡಿಸಿ, ಕೈಕೇಯಿಯನ್ನು ನಿಂದಿಸಿದ್ದು. ಭರತನು ಬಂದು ಶತ್ರುಘ್ನನ ಕೈಯಿಂದ ಮಂಥರೆಯನ್ನು ಬಿಡಿಸಿದ್ದು. 172

79. ಮಂತ್ರಿಗಳು ಬಂದು ರಾಜ್ಯದ ಪಟ್ಟಾಭಿಷೇಕ ಸ್ವೀಕಾರ ಮಾಡಬೇಕೆಂದು ಭರತನಿಗೆ ಪ್ರಾರ್ಥಿಸಿದ್ದು. ಭರತನು ಆ ಪ್ರಾರ್ಥನೆಯನ್ನು ನಿಷೇಧ ಮಾಡಿ, ರಾಮನನ್ನು ಕರೆತರುವುದಕ್ಕಾಗಿ ತಾನು ವನಕ್ಕೆ ಹೋಗಲು ಮಾರ್ಗ ಪರಿಷ್ಕಾರಕ್ಕಾಗಿ ಶಿಲ್ಪಿಗಳನ್ನು ನಿಯೋಜಿಸಿದ್ದು. 177

80. ಶಿಲ್ಪಿಗಳು ಗಂಗಾತೀರದ ವರೆಗೆ ಸುಗಮವಾದ ಮಾರ್ಗವನ್ನು ನಿರ್ಮಾಣ ಮಾಡಿದುದು. 181

81. ರಾಜಸಭೆಯನ್ನು ಪ್ರವೇಶಿಸಿದಂತಹ ವಸಿಷ್ಠರು ಮಂತ್ರಾಲೋಚನೆ ಮಾಡುವುದಕ್ಕಾಗಿ ಭರತ-ಶತ್ರುಘ್ನರನ್ನು ಕರೆಸಿದ್ದು. 185

82. ವಸಿಷ್ಠರು ಭರತನಿಗೆ ರಾಜ್ಯಸ್ವೀಕಾರ ಮಾಡುವಂತೆ ಹೇಳುವುದು. ಭರತನು ಅದಕ್ಕೆ ಒಪ್ಪದೇ ರಾಮನನ್ನು ಕರೆತರುವುದಕ್ಕಾಗಿ ತಾನು ವನಕ್ಕೆ ಹೋಗುವುದಾಗಿ ಪ್ರತಿಜ್ಞೆ ಮಾಡಿದುದು. ಮಂತ್ರಿ ಸುಮಂತ್ರನು ವನಕ್ಕೆ ಹೋಗಲು ಸೇನೆಯನ್ನು ಸನ್ನದ್ಧಗೊಳಿಸಿದುದು. 189

83. ಭರತನು ಪರಿವಾರಸಮೇತನಾಗಿ ಹೊರಟು ಗಂಗಾತೀರಕ್ಕೆ ಹೋದದ್ದು. 197

84. ಅಲ್ಲಿ ''ಶೃಂಗಿವೇರ''ಪುರದಲ್ಲಿ ಗುಹನು ಭರತನನ್ನು ನೋಡಿ ಭರತನಲ್ಲಿ ದೋಷವನ್ನು ಶಂಕಿಸಿದ್ದು. (ಭರತನ ಬಗ್ಗೆ ತಪ್ಪು ತಿಳಿದದ್ದು) ಅನಂತರ ವಿಚಾರ ಮಾಡಿದಾಗ ಭರತ ನಿರ್ದುಷ್ಟ ಎಂದು ತಿಳಿದು, ಆ ರಾತ್ರಿಯಲ್ಲಿ ಗುಹನು ಭರತನಿಗೆ ಫಲಮೂಲಾದಿಗಳನ್ನು ಕೊಟ್ಟು ಆತಿಥ್ಯ ಮಾಡಿ, ಪ್ರಯಾಣಾಯಾಸ ಶಮನ ಮಾಡಿದ್ದು. 202

85. ಭರತನು ರಾತ್ರಿ ಪೂರ್ಣ ಗುಹನ ಜೊತೆ ಕುಳಿತು ಮಾತನಾಡಿದುದು. 206

86. ರಾಮ-ಲಕ್ಷ್ಮಣರು ಜಟೆಯನ್ನು ಧಾರಣೆ ಮಾಡುವ ಮೂಲಕವಾಗಿ ಭರದ್ವಾಜರ ಆಶ್ರಮಕ್ಕೆ ಹೋದ ವೃತ್ತಾಂತವನ್ನು ಗುಹ ಭರತನಿಗೆ ಹೇಳಿದುದು. 211

87. ಶ್ರೀರಾಮನ ವೃತ್ತಾಂತವನ್ನು ವಿವರವಾಗಿ ಕೇಳುವುದು. 216

88. ರಾಮಕಥಾಶ್ರವಣದಿಂದ ಕೌಸಲ್ಯಾದಿಗಳು ಪರಿಶೋಕಪಟ್ಟದ್ದು. ಭರತನು ಬಹುವಾಗಿ ಪ್ರಯತ್ನ ಮಾಡಿ ರಾಮನನ್ನು ವನದಿಂದ ಮರಳಿ ಕರೆತರುವ ಪ್ರತಿಜ್ಞೆ ಮಾಡಿದುದು. 223

89. ಗುಹನು ತಂದಂತಹ ನೌಕೆ (ದೋಣಿ)ಗಳಿಂದ ಭರತನು ಗಂಗಾನದಿಯನ್ನು ದಾಟಿದುದು. ಅಲ್ಲಿ ಭರದ್ವಾಜರ ಆಶ್ರಮಕ್ಕೆ ಹೋದುದು. 229

90. ಭರದ್ವಾಜರು ಭರತನಿಗೆ ರಾಮನ ವಿಷಯದಲ್ಲಿ, ರಾಮನ ಯೋಗಕ್ಷೇಮದ ಬಗ್ಗೆ ಪ್ರಶ್ನೆ ಮಾಡಿದುದು. ಭರತನು ಭರದ್ವಾಜರಿಗೆ ತಾನು ರಾಮನನ್ನು ಅಯೋಧ್ಯಾಪಟ್ಟಣಕ್ಕೆ ಕರೆದೊಯ್ಯುವುದಕ್ಕಾಗಿ ಬಂದದ್ದಾಗಿ ಹೇಳಿದ್ದು. ಭರತನ ಆ ಮಾತಿನಿಂದ ಸಂತುಷ್ಟರಾದ ಭರದ್ವಾಜ ಋಷಿಗಳು ಆ ರಾತ್ರಿ ತಮ್ಮ ಆಶ್ರಮದಲ್ಲಿಯೇ ಕಳೆಯಬೇಕೆಂದು ಹೇಳಿದುದು. 234

91. ಭರದ್ವಾಜರು ಆ ರಾತ್ರಿಯಲ್ಲಿ ಸೈನ್ಯಸಮೇತನಾದ ಭರತನಿಗೆ ಆತಿಥ್ಯವನ್ನು ಮಾಡಿದ್ದು. 239

92. ಮರುದಿನ ಬೆಳಿಗ್ಗೆ ಭರದ್ವಾಜರು ಭರತನಿಗೆ ಚಿತ್ರಕೂಟಕ್ಕೆ ಹೋಗಲು ಮಾರ್ಗ ತಿಳಿಸಿದ್ದು. ಭರತನು ಚಿತ್ರಕೂಟಕ್ಕೆ ಹೊರಟದ್ದು. 257

93. ಭರತನು ಚಿತ್ರಕೂಟಕ್ಕೆ ಹೋಗಿ ರಾಮನ ಪರ್ಣಶಾಲೆಯನ್ನು ಹುಡುಕಿದುದು. ಧೂಮದರ್ಶನದಿಂದ ರಾಮಾಶ್ರಮ ಉಂಟೆಂದು ಸಂದೇಹ ಉಳ್ಳವನಾಗಿ, ತನ್ನ ಸೈನ್ಯವನ್ನು ದೂರದಲ್ಲಿಯೇ ನಿಲ್ಲಿಸಿ, ಸ್ವಲ್ಪ ಪರಿವಾರದೊಂದಿಗೆ ರಾಮಾಶ್ರಮಕ್ಕೆ ಹೋದದ್ದು. 265

94. ಸೀತೆಯ ಜೊತೆ ಸಂಚಾರ ಮಾಡುತ್ತ ರಾಮನು ಚಿತ್ರಕೂಟವನ್ನು ವರ್ಣಿಸಿದುದು. 271

95. ಮಂದಾಕಿನೀ ವರ್ಣನೆ

ಚಿತ್ರಕೂಟದಲ್ಲಿ ಸುಂದರಕಾನನದಲ್ಲಿ ಸೀತೆಯ ಜೊತೆ ರಾಮನು ವಿಹಾರ ಮಾಡಿದುದು. ತನ್ನ ತೊಡೆಯ ಮೇಲೆ ಮಲಗಿದಂತಹ ಸೀತೆಯ ತಿಲಕವು (ಹಣೆಯ ಮೇಲಿನ ಕುಂಕುಮವು) ಅಳಿಸಿಹೋಗುತ್ತಿರಲು, ರಾಮನು ರಕ್ತಶಿಲೆಯಿಂದ ತಿಲಕ ರಚಿಸಿ ಸೀತೆಯ ಹಣೆಯಲ್ಲಿ ಹಚ್ಚಿದುದು.

ಅದೇ ರೀತಿ ಹೂವುಗಳಿಂದ ಸೀತೆಯ ತುರುಬು ಪೂರ್ಣ ಮಾಡಿದುದು. ಈ ರೀತಿ ವಿಹಾರ ಮಾಡಿ ರಾಮನು ತನ್ನ ಆಶ್ರಮಕ್ಕೆ ಮರಳಿ ಹೋದದ್ದು. ಲಕ್ಷ್ಮಣನು ತಂದಂತಹ ಆಹಾರವನ್ನು ಪಕ್ವ ಮಾಡಿ ಸೀತೆಯು ರಾಮ-ಲಕ್ಷ್ಮಣರಿಗೆ ಬಡಿಸಿ, ತಾನೂ ಉಂಡು, ಉಳಿದದ್ದನ್ನು ಕಾಗೆಗಳಿಗೆ

ಹಾಕಿದುದು. ಆ ಕಾಗೆಗಳಲ್ಲಿ ಒಂದು ಕಾಗೆ ಸೀತೆಯ ಎದೆಯಲ್ಲಿ ಕುಕ್ಕಿದುದು. ಅದನ್ನು ಕಂಡು ಕುಪಿತನಾದ ರಾಮನು ಆ ಕಾಗೆಯ ಮೇಲೆ ಇಷೀಕಾಸ್ತ್ರವನ್ನು ಪ್ರಯೋಗಿಸಿದ್ದು. ಮೂರುಲೋಕಗಳಲ್ಲಿ ಎಲ್ಲಿಯೂ ರಕ್ಷಣೆ ಸಿಗದೇ (ಅಸ್ತ್ರದಿಂದ ರಕ್ಷಿಸುವವರು ಯಾರೂ ಇಲ್ಲದಾದಾಗ) ಕೊನೆಗೆ ತನ್ನ ಪಾದಗಳಲ್ಲಿಯೇ ಬಂದು ಬಿದ್ದಂತಹ (ತನಗೇ ಶರಣು ಬಂದಂತಹ) ಕಾಗೆಯನ್ನು ಒಂದು ಕಣ್ಣನ್ನು ನಾಶಪಡಿಸುವ ಶಿಕ್ಷೆ ನೀಡಿ ರಾಮನು ರಕ್ಷಿಸಿದುದು. 276

96. ಸೇನೆಯ ಕೋಲಾಹಲ ಶಬ್ದಗಳನ್ನು ಕೇಳುವುದರಿಂದ ಹಾಗೂ ಸೇನೆಯ ಸಂಚಾರದಿಂದ ಎದ್ದಂತಹ ಧೂಲಿಯನ್ನು ಕಂಡಿದ್ದರಿಂದ ಕುತೂಹಲ ಉಂಟಾಗಿ ಅದಕ್ಕೆ ಕಾರಣ ಏನೆಂದು ತಿಳಿದುಕೊಳ್ಳಲು ರಾಮನು ಲಕ್ಷ್ಮಣನಿಗೆ ಹೇಳಿದುದು. ಲಕ್ಷ್ಮಣನು ಗಿಡದ ತುದಿಯನ್ನು ಏರಿ ಸೈನ್ಯಸಹಿತನಾಗಿ ಭರತನು ಬರುತ್ತಿರುವುದನ್ನು ನಿರ್ಧರಿಸಿಕೊಂಡು, ಭರತನಲ್ಲಿ ತಪ್ಪು ತಿಳಿದವನಾಗಿ 'ಭರತನನ್ನು ಕೊಲ್ಲುತ್ತೇನೆ' ಎಂಬುದಾಗಿ ಹೇಳಿದುದು. 281

97. ಭರತನ ಮೇಲೆ ಕುದ್ಧನಾದಂತಹ ಲಕ್ಷ್ಮಣನನ್ನು ಕಂಡು, ಭರತನ ಶುದ್ಧ ಸ್ವಭಾವಾದಿಗಳನ್ನು ಹೇಳುವ ಮೂಲಕ ಲಕ್ಷ್ಮಣನಿಗೆ ರಾಮನು ಸಾಂತ್ವನ ಹೇಳಿದುದು. ರಾಮನ ಮಾತುಗಳನ್ನು ಕೇಳಿ ಸಮಾಹಿತನಾದ ಲಕ್ಷ್ಮಣನು ಗಿಡದಿಂದ ಕೆಳಗೆ ಇಳಿದುದು. 287

98. ಗುಹ-ಶತ್ರುಘ್ನರಿಂದ ಸಹಿತನಾದ ಭರತನು ಮುಂದೆ ಬರುತ್ತಾ ಒಂದು ಸ್ಥಳದಲ್ಲಿ ಧೂಮವನ್ನು ಕಂಡು ಆ ಪ್ರದೇಶವು ರಾಮನ ಆಶ್ರಮವಾಗಿದೆ ಎಂದು ನಿರ್ಧಾರ ಮಾಡಿದುದು. 294

99. ಭರತನು ರಾಮನ ಆಶ್ರಮಕ್ಕೆ ಬಂದದ್ದು. ತನ್ನನ್ನು ನಮಸ್ಕರಿಸುತ್ತಿರುವ ಭರತ-ಶತ್ರುಘ್ನರನ್ನು ರಾಮನು ಆಲಿಂಗಿಸಿಕೊಂಡದ್ದು. 298

100. ರಾಮನು ಭರತನಿಗೆ ತಂದೆ-ತಾಯಿಗಳ ಕುಶಲಪ್ರಶ್ನೆ ಕೇಳುವ ಮೂಲಕ ಲೋಕಕ್ಕೆ ರಾಜನೀತಿಯ ಶಿಕ್ಷಣ ನೀಡಿದ್ದು. 306

101. ''ಯಾವ ಕಾರಣ ನನ್ನ ನಿಮಿತ್ತವಾಗಿ ನಿನಗೆ ವನವಾಸ ಉಂಟಾಯಿತು ಹಾಗೂ ತಂದೆ ದಶರಥನ ಮರಣ ಆಯಿತೋ ಆ ಕಾರಣಕ್ಕಾಗಿ ನಾನು ಸರ್ವಧರ್ಮವಿಹೀನನಾಗಿದ್ದೇನೆ'' ಎಂದು ಭರತನು ಹೇಳಿದ್ದು. 326

102. ರಾಮಾದಿಗಳು ಮಂದಾಕಿನೀ ನದಿಗೆ ಹೋಗಿ ತಂದೆ ದಶರಥನಿಗಾಗಿ ತಿಲಾಂಜಲಿ ಪ್ರದಾನ ಮಾಡಿದ್ದು. 328

103. ಕೌಸಲ್ಯಾದಿಗಳಿಂದ ಸಹಿತರಾಗಿ ವಸಿಷ್ಠರು ರಾಮನ ಆಶ್ರಮಕ್ಕೆ ಬಂದದ್ದು. ಎಲ್ಲರೂ ರಾಮನ ಸಮೀಪದಲ್ಲಿ ಕುಳಿತದ್ದು. 338

104. ಭರತನು ಕೈಕೇಯಿಯನ್ನು ನಿಂದಿಸುವ ಮೂಲಕ ರಾಮನಿಗೆ ರಾಜ್ಯಸ್ವೀಕಾರ ಮಾಡುವಂತೆ ಪ್ರಾರ್ಥನೆ ಮಾಡಿದುದು. ತಂದೆಗೆ ಕೊಟ್ಟ ಮಾತಿಗೆ ಅನುಸಾರವಾಗಿ ತನ್ನ ವನವಾಸ ಹಾಗೂ ಭರತನು ರಾಜ್ಯಪರಿಪಾಲನ ಮಾಡುವುದು ಅವಶ್ಯ ಕರ್ತವ್ಯವೆಂದು ರಾಮನು ಉತ್ತರಿಸಿದುದು. 346

105. ''ಯದ್ಯಪಿ ತಂದೆ ದಶರಥನು ಕೈಕೇಯಿಯ ನಿರ್ಬಂಧದಿಂದಾಗಿ ನನಗೆ ರಾಜ್ಯವನ್ನು ನೀಡಿದ್ದುದು. ಆದರೂ ಸಹ ಅವಳ ಅನುಮತಿಯಿಂದಲೇ ನಾನು ನಿನಗೆ ರಾಜ್ಯವನ್ನು ಕೊಡುತ್ತಿದ್ದೇನೆ. ಸ್ವೀಕಾರ ಮಾಡು'' ಎಂಬುದಾಗಿ ಭರತನು ರಾಮನಿಗೆ ಪ್ರಾರ್ಥನೆ ಮಾಡಿಕೊಂಡದ್ದು. ಅದಕ್ಕೆ ರಾಮನು ಶಾಸ್ತ್ರಾರ್ಥವನ್ನು ತಿಳಿಸಿಕೊಡುವ ಮೂಲಕ ಭರತನೇ ರಾಜ್ಯಪಾಲನ ಮಾಡುವಂತೆ ಹೇಳಿದುದು. 352

106. ರಾಜ್ಯಸ್ವೀಕಾರ ಮಾಡುವಂತೆ ಮತ್ತೊಮ್ಮೆ ಭರತನು ರಾಮನಿಗೆ ಪ್ರಾರ್ಥನೆ ಮಾಡಿಕೊಂಡಿದ್ದು. ರಾಮನು ಅದನ್ನು ಅಂಗೀಕರಿಸದೇ ಇರುವುದು. ಅನಂತರ ಕೌಸಲ್ಯಾದಿಗಳೂ ಸಹ ರಾಮನಿಗೆ ರಾಜ್ಯಸ್ವೀಕಾರ ಮಾಡುವಂತೆ ಪ್ರಾರ್ಥನೆ ಮಾಡಿಕೊಂಡದ್ದು. 362

107. ''ಕೇವಲ ಕೈಕೇಯೀ ನಿರ್ಬಂಧದಿಂದಾಗಿ ಮಾತ್ರ ಈಗ ರಾಜ್ಯ ನಿನ್ನದು ಎಂದು ತಿಳಿಯಬೇಡ. ಕಿಂತು ಕೈಕೇಯಿಯನ್ನು ವಿವಾಹ ಮಾಡಿಕೊಳ್ಳುವ ಸಮಯದಲ್ಲಿಯೇ ರಾಜಾ ದಶರಥನು ಕನ್ಯಾಶುಲ್ಕವಾಗಿ ಈ ರಾಜ್ಯವನ್ನು ನೀಡಿದ್ದಾನಾದ್ದರಿಂದಲೂ ಈ ರಾಜ್ಯ ನಿನ್ನದೇ ಆಗಿದೆ'' ಎಂಬುದಾಗಿ ಭರತನಿಗೆ ರಾಮನು ತಿಳಿಸಿದುದು. 370

108. ಜಾಬಾಲಿ ಋಷಿಗಳು ನಾಸ್ತಿಕಮತವನ್ನು ಅವಲಂಬಿಸಿ, ರಾಜ್ಯಸ್ವೀಕಾರ ಮಾಡುವಂತೆ ರಾಮನಿಗೆ ಪ್ರಾರ್ಥನೆ ಮಾಡಿದುದು. 375

109. ರಾಮನು ನಾಸ್ತಿಕಮತವನ್ನು ನಿರಾಕರಿಸುತ್ತಿರಲು, ''ರಾಮನು ರಾಜ್ಯವನ್ನು ಸ್ವೀಕಾರ ಮಾಡುವುದಕ್ಕಾಗಿಯೇ ನಾನು ನಾಸ್ತಿಕಮತವನ್ನು ಅವಲಂಬಿಸಿದ್ದು'' ಎಂದು ಜಾಬಾಲಿಋಷಿಗಳು ಹೇಳಿದುದು. 379

110. ಜಾಬಾಲಿಗಳ ಮೇಲೆ ಕ್ರುದ್ಧನಾದಂತಹ ರಾಮನನ್ನು ವಸಿಷ್ಠರು ಸಾಂತ್ವನ ಮಾಡಿದುದು. ಜ್ಯೇಷ್ಠಮಗನೇ ರಾಜ್ಯಕ್ಕೆ ರಾಜನಾಗಲು ಅರ್ಹನಾಗುವುದರಿಂದ ನೀನು ರಾಜ್ಯವನ್ನು ಸ್ವೀಕಾರ ಮಾಡಬೇಕೆಂದು ವಸಿಷ್ಠರು ಹೇಳಿದುದು. 391

111. ರಾಮನು ರಾಜ್ಯವನ್ನು ಸ್ವೀಕರಿಸಲು ಒಪ್ಪದ ಕಾರಣ ಭರತನು ಪ್ರಾಯೋಪವೇಶಕ್ಕೆ ಕುಳಿತದ್ದು. ಪ್ರಾಯೋಪವೇಶವು ಕ್ಷತ್ರಿಯರಿಗೆ ವಿಹಿತ-(ಧರ್ಮ)ವಲ್ಲ ಎಂದು ತಿಳಿಸಿ, ರಾಮನು ಪ್ರಾಯೋಪವೇಶ ಕೈಬಿಡುವಂತೆ ಭರತನಿಗೆ ತಿಳಿಸಿದುದು. ಮತ್ತು ತಾನು ಹದಿನಾಲ್ಕು ವರ್ಷಗಳ ಅನಂತರ ರಾಜ್ಯವನ್ನು ಸ್ವೀಕರಿಸುವುದಾಗಿಯೂ ತಿಳಿಸಿದುದು. 399

112. ಋಷಿಗಂಧರ್ವಸಿದ್ಧಾದಿಗಳು ಭರತಾದಿಗಳನ್ನು ಪ್ರಶಂಸಿದುದು. ಭರತನಿಂದ ಪ್ರಾರ್ಥಿತನಾದ ರಾಮನು ತನ್ನ ಪ್ರತಿನಿಧಿಯಾಗಿ ರಾಜ್ಯಪರಿಪಾಲನೆಗಾಗಿ ತನ್ನ ಎರಡು ಪಾದುಕೆಗಳನ್ನು ನೀಡಿದುದು. ಹದಿನಾಲ್ಕು ವರ್ಷಗಳು ಮುಗಿದ ಕೂಡಲೇ ರಾಮನು ಅಯೋಧ್ಯೆಗೆ ಮರಳಿ ಬರದಿದ್ದರೆ ತಾನು ಅಗ್ನಿಪ್ರವೇಶ ಮಾಡುವುದಾಗಿ ಭರತನು ಹೇಳಿದುದು. ಅನಂತರ ಭರತನು ಅಯೋಧ್ಯೆಗೆ ಮರಳಿ ಹೊರಟದ್ದು. 408

113. ಸೇನೆ ಪರಿವಾರದಿಂದ ಸಹಿತನಾಗಿ ಮರಳಿ ಹೊರಟಂತಹ ಭರತನು ಮಾರ್ಗಗಳನ್ನು ದಾಟುವ ಮೂಲಕ ಅಯೋಧ್ಯೆಯ ಸಮೀಪಕ್ಕೆ ಹೋದದ್ದು. 415

114. ಅಯೋಧ್ಯಾಪಟ್ಟಣವು ತಾತ್ಕಾಲಿಕವಾಗಿ ಶೋಭಾರಹಿತವಾಗಿದ್ದುದನ್ನು ಕವಿಗಳು (ವಾಲ್ಮೀಕಿಗಳು) ವರ್ಣಿಸಿದುದು. ಭರತನು ದಶರಥನ ಅಂತಃಪುರವನ್ನು ಪ್ರವೇಶ ಮಾಡಿದುದು. 420

115. ಭರತನು ಎಲ್ಲ ತಾಯಂದಿರನ್ನು ಅಯೋಧ್ಯೆಯಲ್ಲಿ ವಾಸಿಸಲು ಇರಿಸಿ, ಶತ್ರುಘ್ನಾದಿಗಳಿಂದ ಸಹಿತನಾಗಿ ತಾನು ನಂದಿಗ್ರಾಮಕ್ಕೆ ಹೋದದ್ದು. ರಾಮಪಾದುಕಾ ಪಟ್ಟಾಭಿಷೇಕ. 427

116. ಎಲ್ಲ ತಪಸ್ವಿಗಳು ಬೇರೆ ಸ್ಥಳಗಳಿಗೆ ಹೋಗುವ ಅಪೇಕ್ಷೆಪಡುವುದನ್ನು ತಿಳಿದ ರಾಮನು ಅದಕ್ಕೆ ಕಾರಣವೇನೆಂದು ಕೇಳಿದುದು. ಕುಲಪತಿಗಳಾದ ವಾಲ್ಮೀಕಿಗಳು ''ನಿನ್ನ ನಿಮಿತ್ತವಾಗಿ ಖರದೂಷಣಾದಿ ರಾಕ್ಷಸರು ಬಂದು ನಮ್ಮನ್ನು ಕೊಲ್ಲುತ್ತಾರೆ. ಆದ್ದರಿಂದ ನಾವು ಬೇರೆ ಸ್ಥಳಗಳಿಗೆ ಹೋಗುತ್ತೇವೆ'' ಎಂಬುದಾಗಿ ರಾಮನಿಗೆ ಹೇಳಿ ಹೊರಟದ್ದು. 433

117. ಅಲ್ಲಿಯೇ ವಾಸ ಮಾಡಿದರೆ ದೋಷ (ಸಮಸ್ಯೆ) ಉಂಟಾಗಬಹುದೆಂದು ಬಗೆದ ರಾಮನು ಬೇರೆಡೆ ಹೋದದ್ದು. ಮಾರ್ಗಮಧ್ಯದಲ್ಲಿ ಅತ್ರಿಋಷಿಗಳ ಆಶ್ರಮಕ್ಕೆ ಹೋದದ್ದು. ಅಲ್ಲಿ ಅತ್ರಿಋಷಿಗಳ ಪತ್ನಿ ಅನಸೂಯೆಯು ಸೀತೆಯನ್ನು ಆದರಿಸಿ ಪ್ರಶಂಸಿಸಿ ಅವಳಿಗೆ ಪಾತಿವ್ರತ್ಯಧರ್ಮವನ್ನು ಉಪದೇಶಿಸಿದುದು. 452

118. ಅನಸೂಯೆಯ ಉಪದೇಶ ಕೇಳಿ ಅವಳಿಗೆ ಕೃತಜ್ಞತೆಯನ್ನು ಅರ್ಪಿಸಿ, ತಾನು ಆ ಧರ್ಮವನ್ನು ತಾಯಿ-ಅತ್ತೆ ಮುಂತಾದವರ ಉಪದೇಶದಿಂದಲೇನೇ ಹಿಂದೆಯೇ ತಿಳಿದಿದ್ದದ್ದಾಗಿ ಸೀತೆ ಹೇಳಿದುದು. ಅನಸೂಯೆಯು ಸೀತೆಗೆ ದಿವ್ಯವಾದ ಮಾಲ್ಯ-ಗಂಧಾದಿಗಳನ್ನು ಕೊಟ್ಟಿದುದು. 458

119. ಅನಸೂಯೆಯು ಸೀತೆಗೆ ರಾಮನ ಸಮೀಪಕ್ಕೆ ಹೋಗುವಂತೆ ಪ್ರಚೋದನೆ ಮಾಡಿದುದು. ಅನಸೂಯೆಯು ತನಗೆ ಅಂಗರಾಗಾದಿಗಳನ್ನು ಕೊಟ್ಟ ವಿಚಾರವನ್ನು ಸೀತೆ ರಾಮನಿಗೆ ಹೇಳಿದುದು. 469

ಆ ಸಂದರ್ಭದಲ್ಲಿ ಮುನಿಗಳು ಬಂದು ತಮಗೆ ರಾಕ್ಷಸರು ಮಾಡುತ್ತಿರುವ ಉಪದ್ರವಗಳನ್ನು ನಿವೇದಿಸುವ ಮೂಲಕ ಆ ರಾಕ್ಷಸರನ್ನೆಲ್ಲ ಸಂಹರಿಸುವಂತೆ ರಾಮನಿಗೆ ಪ್ರಾರ್ಥನೆ ಮಾಡಿಕೊಂಡದ್ದು. ರಾಮನು ದಂಡಕಾರಣ್ಯವನ್ನು ಪ್ರವೇಶಿಸಿದುದು.

ಅಯೋಧ್ಯಾಕಾಂಡ ಮುಗಿಯಿತು.

ಶುಭಾಶಂಸನೆ

ಶ್ರೀಯುತರಾದ ದಿ. ಗುರುರಾಜ ರಾಯರು ABB ಕಂಪನಿಯಲ್ಲಿ ಉನ್ನತ ಹುದ್ದೆಯಲ್ಲಿದ್ದವರು. ಶ್ರೀರಾಘವೇಂದ್ರಸ್ವಾಮಿಗಳವರಿಗೆ ವಿಶೇಷಸೇವೆ ಸಲ್ಲಿಸಿದವರು. ಶ್ರೀಸತ್ಯನಾಥತೀರ್ಥರ ಮೂಲವೃಂದಾವನಕ್ಕೆ ರಜತಕವಚದ ವಿಶೇಷಸೇವೆ ಸಲ್ಲಿಸಿದವರು.

ಇಂತಹ ಉದಾರದಾನಿಗಳಾದ ಶ್ರೀಯುತ ದಿ. ಗುರುರಾಜ್ ಭುಜಂಗರಾವ್ ಇವರ ಸ್ಮರಣಾರ್ಥವಾಗಿ ಅವರ ಪತ್ನಿ ಶ್ರೀಮತಿ ಜಯಶ್ರೀ ಗುರುರಾಜ್ ಇವರು ಹಾಗೂ ಅವರ ಮಗಳು ಶ್ರೀಮತಿ ಸಿಂಧೂಜಾ ಗುರುರಾಜ್ ಇವರು ರಾಮಾಯಣದ ಅಯೋಧ್ಯಾ ಕಾಂಡದ ಈ ಸಂಪುಟದ ಪ್ರಕಾಶನಕ್ಕೆ ಸಂಪೂರ್ಣ ಆರ್ಥಿಕಸೇವೆ ಸಲ್ಲಿಸಿದ್ದಾರೆ.

ಈ ಮೂಲಕ ಶ್ರೀರಾಮಚಂದ್ರನ, ಶ್ರೀವೇದವ್ಯಾಸದೇವರ, ಶ್ರೀಮದಾಚಾರ್ಯರ ವಿಶೇಷಸೇವೆ ಸಲ್ಲಿಸಿದ ಶ್ರೀಮತಿ ಜಯಶ್ರೀ ಗುರುರಾಜ್ ಹಾಗೂ ಶ್ರೀಮತಿ ಸಿಂಧೂಜಾ ಗುರುರಾಜ್ ಇವರಿಗೆ ಹಾಗೂ ಇವರ ಕುಟುಂಬಕ್ಕೆ ಭಗವಂತ ಉತ್ತಮ ಆರೋಗ್ಯ, ಆಯುಷ್ಯ ನೀಡಿ, ಜ್ಞಾನ-ಭಕ್ತಿ-ವೈರಾಗ್ಯಗಳನ್ನು ಕೊಟ್ಟು ಅವರಿಂದ ಹೆಚ್ಚೆಚ್ಚು ಸಾಧನೆ ಮಾಡಿಸಲಿ ಎಂಬುದಾಗಿ ಪ್ರಾರ್ಥಿಸುತ್ತ, ಅವರಿಗೆ ಈ ಸಂದರ್ಭದಲ್ಲಿ ವಿಶೇಷವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇವೆ.

-ಡಾ. ಸತ್ಯಧ್ಯಾನಾಚಾರ್ಯ ಕಟ್ಟಿ
ಅಧ್ಯಕ್ಷರು, ದ್ವೈತವೇದಾಂತ ಅಧ್ಯಯನ
ಮತ್ತು ಸಂಶೋಧನ ಪ್ರತಿಷ್ಠಾನ

॥ ಶ್ರೀಮದ್ವಾಲ್ಮೀಕಿರಾಮಾಯಣಮ್ ॥

ಅಯೋಧ್ಯಾಕಾಂಡಃ

ಷಟ್‌ಪಂಚಾಶಃ ಸರ್ಗಃ

ಸರ್ಗ – 56

ಚಿತ್ರಕೂಟಪರ್ವತದಲ್ಲಿ ಪರ್ಣಶಾಲೆಯನ್ನು ನಿರ್ಮಾಣ ಮಾಡಿ ವಾಸಮಾಡಲು ತೊಡಗಿದುದು.

ಅಥ ರಾತ್ರ್ಯಾಂ ವ್ಯತೀತಾಯಾಮವಸುಪ್ತಮನಂತರಮ್ ।
ಪ್ರಬೋಧಯಾಮಾಸ ಶನೈರ್ಲಕ್ಷ್ಮಣಂ ರಘುನಂದನಃ ॥೧॥

ರಾತ್ರಿ ಕಳೆದಾಗ ಲಕ್ಷ್ಮಣನಿಗೆ ಎಚ್ಚರವಾಗಿದ್ದರೂ ತಿರುಗಿ ಆಲಸ್ಯದಿಂದ ಅವನು ಇನ್ನೂ ಮಲಗಿಯೇ ಇದ್ದ. ಶ್ರೀರಾಮ ಅವನನ್ನು ಮೆಲ್ಲನೆ ಎಬ್ಬಿಸಿದ.

ಸೌಮಿತ್ರೇ ಶೃಣು ವನ್ಯಾನಾಂ ವಲ್ಗು ವ್ಯಾಹರತಾಂ ಸ್ವನಮ್ ।
ಸಂಪ್ರತಿಷ್ಠಾಮಹೇ ಕಾಲಃ ಪ್ರಸ್ಥಾನಸ್ಯ ಪರಂತಪ ॥೨॥

''ಲಕ್ಷ್ಮಣ, ಕಾಡಿನ ಮೃಗಪಕ್ಷಿಗಳು ಮಧುರವಾಗಿ ಉಲಿಯುವ ಧ್ವನಿಯನ್ನು ಆಲಿಸು. ಇದು ನಮ್ಮ ಪ್ರಯಾಣಕ್ಕೆ ಸರಿಯಾದ ಕಾಲವಾಗಿದೆ. ನಾವಿನ್ನು ಹೊರಡೋಣ.''

ಸ ಸುಪ್ತಃ ಸಮಯೇ ಭ್ರಾತ್ರಾ ಲಕ್ಷ್ಮಣಃ ಪ್ರತಿಬೋಧಿತಃ ।
ಜಹೌ ನಿದ್ರಾಂ ಚ ತಂದ್ರೀಂ ಚ ಪ್ರಸಕ್ತಂ ಚ ಪಥಿ ಶ್ರಮಮ್ ॥೩॥

ಮಲಗಿದ್ದ ಲಕ್ಷ್ಮಣ, ಸಕಾಲದಲ್ಲಿ ಶ್ರೀರಾಮನು ಎಚ್ಚರಿಸಿದಾಗ, ನಿದ್ದೆ ಆಲಸ್ಯ-ಗಳನ್ನೂ ಹಿಂದಿನ ದಿನ ಉಂಟಾಗಿದ್ದ ಮಾರ್ಗಾಯಾಸವನ್ನೂ ತೊರೆದನು.

ಹದಿನಾಲ್ಕು ವರ್ಷಕಾಲವೂ ವನವಾಸದಲ್ಲಿ ಲಕ್ಷ್ಮಣ ಆಹಾರ ನಿದ್ದೆಗಳನ್ನು ತೊರೆದು ಕಟ್ಟೆಚ್ಚರದಿಂದ ಸೀತಾರಾಮರ ಸೇವೆ ಮಾಡುತ್ತಿದ್ದ. ಆ ಸೇವೆಯಲ್ಲಿ ಸುಖಿಸುತ್ತಿದ್ದ,

ಧನವ ಸಂರಕ್ಷಿಸುವ ಫಣಿ ತಾ
ನುಣದೆ ಮತ್ತೊಬ್ಬರಿಗೆ ಕೊಡದನು
ದಿನದಿ ನೋಡುತ ಸುಖಿಸುವಂದದಿ...॥

ಎಂದು ಹರಿಕಥಾಮೃತಸಾರದಲ್ಲಿ ಶ್ರೀಹರಿ ಭಕ್ತರನ್ನು ಕಾಯುವ ಪರಿಯನ್ನು ವರ್ಣಿಸಿದ್ದಾರೆ. ಹಾಗೇ ಲಕ್ಷ್ಮಣನೂ ಶೇಷನಾಗನೇ ಆಗಿದ್ದರಿಂದ ದೊಡ್ಡನಿಧಿ ರೂಪರಾದ ಸೀತಾರಾಮರನ್ನು ಹಾವಿನಂತೆ ಸದಾ ಕಾಪಾಡುತ್ತಿದ್ದ ಎಂದು ನಾವು ತಿಳಿದಿದ್ದರೆ ಅದು ಸುಳ್ಳೆಂದು ವಾಲ್ಮೀಕಿ ಇಲ್ಲಿ ಹೇಳುವಂತೆ ಕಾಣುತ್ತಿದೆ. ಶ್ರೀರಾಮನೇ ಲಕ್ಷ್ಮಣನನ್ನು ಇಲ್ಲಿ ಎಬ್ಬಿಸುತ್ತಿದ್ದಾನೆ! ವಸ್ತುತಃ

ಸತ್ಪತ್ರಗಂಧಪುಷ್ಪಾದ್ಯೈರರ್ಚಯಾಮಿ ಯಥಾ ಹರೇ ।
ಅನುಜ್ಞಾಂ ದೇಹಿ ದೇವೇಶ ಸಂಸಾರಾರ್ತಿ ನಿವೃತ್ತಯೇ ॥

ಎಂದು ಭಕ್ತ ಭಗವಂತನಲ್ಲಿ ಅವನ ಸೇವೆಗೆ ಅನುಜ್ಞೆ ಪಡೆಯುವುದು ಆವಶ್ಯಕವಾದ್ದರಿಂದ ಲಕ್ಷ್ಮಣನು ಶ್ರೀರಾಮನ ಅನುಜ್ಞೆಯನ್ನು ಇಲ್ಲಿ ಈರೀತಿ ಪಡೆದಿದ್ದಾನೆ. ಅದಕ್ಕೆ ಮುಂದೆ ಎಂದೂ ಲಕ್ಷ್ಮಣ ನಿದ್ದೆ ಮಾಡಿದ್ದರ ಉಲ್ಲೇಖವಿಲ್ಲ.

ತತ ಉತ್ಥಾಯ ತೇ ಸರ್ವೇ ಸ್ಪೃಷ್ಟ್ವಾ ನದ್ಯಾಃ ಶಿವಂ ಜಲಮ್ ।
ಪಂಥಾನಮೃಷಿಣಾದಿಷ್ಟಂ ಚಿತ್ರಕೂಟಸ್ಯ ತಂ ಯಯುಃ ॥೪॥

ಅವರು ಮೂವರು ಮೇಲೆದ್ದು ಯಮುನೆಯ ಮಂಗಳಜಲದಲ್ಲಿ ಸ್ನಾನ ಆಚಮನಾದಿ ವಿಧಿಗಳನ್ನು ತೀರಿಸಿ ಭರದ್ವಾಜಮುನಿಯು ಹೇಳಿದ್ದ ಚಿತ್ರಕೂಟ-ಪರ್ವತದ ಹಾದಿಯನ್ನು ಹಿಡಿದು ನಡೆದರು.

ತತಃ ಸಂಪ್ರಸ್ಥಿತಃ ಕಾಲೇ ರಾಮಃ ಸೌಮಿತ್ರಿಣಾ ಸಹ ।
ಸೀತಾಂ ಕಮಲಪತ್ರಾಕ್ಷೀಮಿದಂ ವಚನಮಬ್ರವೀತ್ ॥೫॥

ಲಕ್ಷ್ಮಣನೊಂದಿಗೆ ದಾರಿ ನಡೆಯುತ್ತ ಶ್ರೀರಾಮ ಆಗಾಗ ಕಮಲನಯನೆ ಸೀತೆಗೆ ವನಸಿರಿಯನ್ನು ತೋರಿಸುತ್ತ ನುಡಿದ.

ಆದೀಪ್ತಾನಿವ ವೈದೇಹಿ ಸರ್ವತಃ ಪುಷ್ಪಿತಾನ್ನಗಾನ್ ।
ಸ್ಫೋಟಃ ಪುಷ್ಪೈಃ ಕಿಂಶುಕಾನ್ ಪಶ್ಯ ಮಾಲಿನಃ ಶಿಶಿರಾತ್ಯಯೇ ॥೬॥

ವಸಂತದಲ್ಲಿ ಹೂಬಿಟ್ಟು ಹೂಮಾಲೆ ಧರಿಸಿದಂತಿರುವ ಮುತ್ತುಗದ ಮರಗಳು ಎಲ್ಲೆಡೆ ಬೆಂಕಿಯ ಕಾಂತಿಯಿಂದ ಹೊಳೆಯುವ ತಮ್ಮ ಹೂಗಳಿಂದ ಶೋಭಿಸುತ್ತಿವೆ ನೋಡು, ಸೀತೆ!

ಪಶ್ಯ ಭಲ್ಲಾತಕಾನ್ ಬಿಲ್ವಾನ್ ನರೈರನುಪಸೇವಿತಾನ್ ।
ಫಲಪುಷ್ಪೈರವನತಾನ್ ನೂನಂ ಶಕ್ಷ್ಯಾಮ ಜೀವಿತುಮ್ ॥೭॥

ಈ ಗೇರುಮರ, ಬಿಲ್ವಮರಗಳನ್ನು ನೋಡು. ಜನರು ಇವನ್ನು ಸೇವಿಸ-ದಿರುವುದರಿಂದ ಹೂ ಹಣ್ಣುಗಳ ಭಾರದಿಂದ ಬಾಗಿವೆ. ಇಲ್ಲಿ ನಾವು ಹಾಯಾಗಿ ಜೀವಿಸಿರಬಲ್ಲೆವು.

ಪಶ್ಯ ದ್ರೋಣಪ್ರಮಾಣಾನಿ ಲಂಬಮಾನಾನಿ ಲಕ್ಷ್ಮಣ ।
ಮಧೂನಿ ಮಧುಕಾರೀಭಿಃ ಸಂಭೃತಾನಿ ನಗೇ ನಗೇ ॥೮॥

ಜೇನುಹುಳುಗಳಿಂದ ಸಂಗ್ರಹಿಸಲ್ಪಟ್ಟ ನಾಲ್ಕು ಕೊಳಗಗಳಷ್ಟು ಜೇನಿನಿಂದ ತುಂಬಿದ ಜೇನುಗೂಡುಗಳು ಪ್ರತಿಯೊಂದು ಮರದಲ್ಲಿ ಜೋತಾಡುತ್ತಿರುವುದನ್ನು ನೋಡು ಲಕ್ಷ್ಮಣ.

ಏಷ ಕ್ರೋಶತಿ ನತ್ಯೂಹಸ್ತಂ ಶಿಖೀ ಪ್ರತಿಕೂಜತಿ ।
ರಮಣೀಯೇ ವನೋದ್ದೇಶೇ ಪುಷ್ಪಸಂಸ್ತರಸಂಕಟೇ ॥೯॥

ಹೂವಿನ ಹಾಸಿಗೆಗಳಿಂದ ತುಂಬಿದ ರಮಣೀಯವಾದ ವನಪ್ರದೇಶದಲ್ಲಿ ಈ ಚಾತಕಪಕ್ಷಿ ಕೂಗುತ್ತಿದೆ. ಅದಕ್ಕೆ ಪ್ರತಿಯಾಗಿ ನವಿಲು ಕೂಗುತ್ತದೆ.

ಮಾತಂಗಯೂಥಾನುಸೃತಂ ಪಕ್ಷಿಸಂಘಾನುನಾದಿತಮ್ ।
ಚಿತ್ರಕೂಟಮಿಮಂ ಪಶ್ಯ ಪ್ರವೃದ್ಧಶಿಖರಂ ಗಿರಿಮ್ ॥೧೦॥

ದೊಡ್ಡ ದೊಡ್ಡ ಶಿಖರಗಳಿಂದ ಕೂಡಿದ ಈ ಚಿತ್ರಕೂಟ ಪರ್ವತವನ್ನು ನೋಡು. ಆನೆಗಳ ಹಿಂಡುಗಳಿಂದ ಮತ್ತು ಹಕ್ಕಿಗಳ ಕಲರವಗಳಿಂದ ತುಂಬಿದೆ.

ಸಮಭೂಮಿತಲೇ ರಮ್ಯೇ ದ್ರುಮೈರ್ಬಹುಭಿರಾವೃತೇ ।
ಪುಣ್ಯೇ ರಂಸ್ಯಾಮಹೇ ತಾತ ಚಿತ್ರಕೂಟಸ್ಯ ಕಾನನೇ ॥೧೧॥

ಅಪ್ಪ, ಲಕ್ಷ್ಮಣ, ಸಮತಳವಾದ ರಮ್ಯವಾದ ಈ ನೆಲದ ಮೇಲೆ ಬಹು ವೃಕ್ಷಗಳು ಹರಡಿವೆ. ಇಂಥ ಪವಿತ್ರವಾದ ಚಿತ್ರಕೂಟದ ವನದಲ್ಲಿ ನಾವು ವಿಹರಿಸೋಣ.

ತತಸ್ತೌ ಪಾದಚಾರೇಣ ಗಚ್ಛಂತೌ ಸಹ ಸೀತಯಾ ।
ರಮ್ಯಮಾಸೇದತುಃ ಶೈಲಂ ಚಿತ್ರಕೂಟಂ ಮನೋರಮಮ್ ॥೧೨॥

ಹೀಗೆ ರಾಮಲಕ್ಷ್ಮಣರು ಸೀತೆಯೊಂದಿಗೆ ಕಾಲ್ನಡೆಯಿಂದ ನಡೆಯುತ್ತ ರಮ್ಯವಾದ ಮನೋಹರವಾದ ಚಿತ್ರಕೂಟ ಪರ್ವತವನ್ನು ಸೇರಿದರು.

ತಂ ತು ಪರ್ವತಮಾಸಾದ್ಯ ನಾನಾಪಕ್ಷಿಗಣಾಯುತಮ್ ।
ಬಹುಮೂಲಫಲಂ ರಮ್ಯಂ ಸಂಪನ್ನಂ ಸರಸೋದಕಮ್ ॥೧೩॥

ಬಹು ಹಣ್ಣುಗಡ್ಡೆಗಳಿಂದ ತಿಳಿನೀರ ಕೊಳಗಳಿಂದ ಸಮೃದ್ಧವಾದ ನಾನಾ ಪಕ್ಷಿಸಮೂಹಗಳಿಂದ ಕೂಡಿದ ಆ ಪರ್ವತವನ್ನು ಹೋಗಿ ಸೇರಿದ ಬಳಿಕ ಶ್ರೀರಾಮನುಡಿದ.

ಮನೋಜ್ಞೋಽಯಂ ಗಿರಿಃ ಸೌಮ್ಯ ನಾನಾದ್ರುಮಲತಾಯುತಃ ।
ಬಹುಮೂಲಫಲೋ ರಮ್ಯಃ ಸ್ವಾಜೀವಃ ಪ್ರತಿಭಾತಿ ಮೇ ॥೧೪॥

ಲಕ್ಷ್ಮಣ, ಈ ಬೆಟ್ಟ ಬಲು ಮನೋಜ್ಞವಾಗಿದೆ. ನಾನಾ ಮರಗಿಡಬಳ್ಳಿಗಳಿಂದ ತುಂಬಿದೆ. ಬಹು ಗಡ್ಡೆ ಹಣ್ಣುಗಳಿಂದ ಯುಕ್ತವಾಗಿ ರಮ್ಯವಾಗಿದ್ದು ಸುಖವಾಗಿ ವಾಸಮಾಡಲು ಯೋಗ್ಯವಾಗಿದೆ ಎಂದು ನನಗೆ ಅನಿಸುತ್ತಿದೆ.

ಮುನಯಶ್ಚ ಮಹಾತ್ಮಾನೋ ವಸಂತ್ಯಸ್ಮಿನ್ ಶಿಲೋಚ್ಚಯೇ ।
ಅಯಂ ವಾಸೋ ಭವೇತ್ತಾವದತ್ರ ಸೌಮ್ಯ ರಮೇಮಹಿ ॥೧೫॥

ಮಹಾತ್ಮರಾದ ಮುನಿಗಳು ಈ ಬೆಟ್ಟದಲ್ಲಿ ವಾಸಮಾಡುತ್ತಾರೆ. ಇದೇ ನಮಗೆ ವಾಸಸ್ಥಾನವಾಗುವುದು. ಇಲ್ಲಿ ನಾವು ವಿಹಾರ ಮಾಡೋಣ ಲಕ್ಷ್ಮಣ.

ಇತಿ ಸೀತಾ ಚ ರಾಮಶ್ಚ ಲಕ್ಷ್ಮಣಶ್ಚ ಕೃತಾಂಜಲಿಃ ।
ಅಭಿಗಮ್ಯಾಶ್ರಮಂ ಸರ್ವೇ ವಾಲ್ಮೀಕಿಮಭಿವಾದಯನ್ ॥೧೬॥

ಹೀಗೆ ಶ್ರೀರಾಮಲಕ್ಷ್ಮಣ ಸೀತೆಯರು ಮೂವರೂ ಕೈಮುಗಿದು ವಾಲ್ಮೀಕಿ-ಮುನಿಯ ಆಶ್ರಮಕ್ಕೆ ತೆರಳಿ ಮುನಿಗೆ ಅಭಿವಾದನಗೈದರು.

ತಾನ್ ಮಹರ್ಷಿಃ ಪ್ರಮುದಿತಃ ಪೂಜಯಾಮಾಸ ಧರ್ಮವಿತ್ ।
ಆಸ್ಯತಾಮಿತಿ ಚೋವಾಚ ಸ್ವಾಗತಂ ತು ನಿವೇದ್ಯ ಚ ॥೧೭॥

ಧರ್ಮಾತ್ಮರಾದ ಮುನಿಗಳು ಪ್ರಸನ್ನರಾಗಿ ಅವರನ್ನು ಸತ್ಕರಿಸಿದರು. ಸ್ವಾಗತವನ್ನು ಹೇಳಿ ಕುಳಿತುಕೊಳ್ಳಲು ಹೇಳಿದರು.

ತತೋಽಬ್ರವೀನ್ಮಹಾಬಾಹುರ್ಲಕ್ಷ್ಮಣಂ ಲಕ್ಷ್ಮಣಾಗ್ರಜಃ ।
ಸಂನಿವೇದ್ಯ ಯಥಾನ್ಯಾಯಮಾತ್ಮಾನಮೃಷಯೇ ಪ್ರಭುಃ ॥೧೮॥

ಲಕ್ಷ್ಮಣಾನಯ ದಾರೂಣಿ ದೃಢಾನಿ ಚ ವರಾಣಿ ಚ ।
ಕುರುಷ್ವಾವಸಥಂ ಸೌಮ್ಯ ವಾಸೇ ಮೇಽಭಿರತಂ ಮನಃ ॥೧೯॥

ಮಹಾಬಾಹು ಪ್ರಭು ಶ್ರೀರಾಮಚಂದ್ರ ತನ್ನ ಬಗ್ಗೆ ಯಥಾಕ್ರಮವಾಗಿ ಎಲ್ಲ ವೃತ್ತಾಂತವನ್ನು ಮುನಿಗೆ ಹೇಳಿ, ಲಕ್ಷ್ಮಣನಿಗೆ ನುಡಿದ, ಲಕ್ಷ್ಮಣ, ಇಲ್ಲಿ ವಾಸ-ಮಾಡಲು ನನ್ನ ಮನಸ್ಸು ಬಯಸಿದೆ. ದೃಢವಾದ ಉತ್ತಮವಾದ ಮರದ ತುಂಡುಗಳನ್ನು ತಾ. ಪರ್ಣಶಾಲೆಯನ್ನು ನಿರ್ಮಿಸು.

ತಸ್ಯ ತದ್ವಚನಂ ಶ್ರುತ್ವಾ ಸೌಮಿತ್ರಿರ್ವಿವಿಧಾನ್ ದ್ರುಮಾನ್ ।
ಆಜಹಾರ ತತಶ್ಚಕ್ರೇ ಪರ್ಣಶಾಲಾಮರಿಂದಮಃ ॥೨೦॥

ಶ್ರೀರಾಮನ ಮಾತನ್ನು ಕೇಳಿ ಲಕ್ಷ್ಮಣ ನಾನಾ ಬಗೆಯ ಮರದ ತುಂಡುಗಳನ್ನು ತಂದ, ಪರ್ಣಶಾಲೆಯನ್ನು ನಿರ್ಮಿಸಿದ.

ತಾಂ ನಿಷ್ಠಿತಾಂ ಬದ್ಧಕಟಾಂ ದೃಷ್ಟ್ವಾ ರಾಮಃ ಸುದರ್ಶನಾಮ್ ।
ಶುಶ್ರೂಷಮಾಣಮೇಕಾಗ್ರಮಿದಂ ವಚನಮಬ್ರವೀತ್ ॥೨೧॥

ಆ ಪರ್ಣಶಾಲೆ ಸುದೃಢವಾಗಿತ್ತು ದ್ವಾರಯುಕ್ತವಾಗಿತ್ತು. ನೋಡಲು ಸುಂದರ-ವಾಗಿತ್ತು. ಶ್ರೀರಾಮಾಜ್ಞೆಯನ್ನು ಕೇಳಲು ಏಕಾಗ್ರತೆಯಿಂದ ನಿಂತ ಲಕ್ಷ್ಮಣನಿಗೆ ಶ್ರೀರಾಮ ನುಡಿದ.

ಚಿತ್ರಕೂಟದಲ್ಲಿದ್ದ ವಾಲ್ಮೀಕಿಮುನಿ, ಮುಂದೆ ಅಯೋಧ್ಯೆಯಲ್ಲಿ ಶ್ರೀರಾಮ ಪಟ್ಟಾಭಿಷಿಕ್ತನಾಗಿ ಆಳಲು ತೊಡಗಿದಾಗ, ಅವನ ಸಮೀಪದಲ್ಲಿ ತಮಸಾ ನದೀತೀರದಲ್ಲಿ ವಾಸಮಾಡಿದರು. ಚಿತ್ರಕೂಟವನ್ನು ತೊರೆದು ಹೋದರು. ಚಿತ್ರಕೂಟದಲ್ಲಿ ಖರಾಸುರನ ಉಪಟಳ ಮಿತಿಮೀರಿತು ಎನ್ನುವುದು ಒಂದು ಕಾರಣ. ಮುಖ್ಯವಾಗಿ ಅವರಿಗೆ ರಾಮನ ಸಾಮೀಪ್ಯ ಅಭಿಲಷಿತವಾಗಿತ್ತೆನ್ನ-ಬಹುದು. ಅದರಿಂದ ಚಿತ್ರಕೂಟದಲ್ಲಿದ್ದ ವಾಲ್ಮೀಕಿಯೆ ಬೇರೆ, ತಮಸಾತೀರದಲ್ಲಿ ರಾಮಾಯಣವನ್ನು ರಚಿಸಿದ ವಾಲ್ಮೀಕಿಯೆ ಬೇರೆ ಎನ್ನಬೇಕಾಗಿಲ್ಲ.

ಏಣೇಯಂ ಮಾಂಸಮಾಹೃತ್ಯ ಶಾಲಾಂ ಯಕ್ಷ್ಯಾಮಹೇ ವಯಮ್ ।
ಕರ್ತವ್ಯಂ ವಾಸ್ತುಶಮನಂ ಸೌಮಿತ್ರೇ ಚಿರಜೀವಿಭಿಃ ॥೨೨॥

ಲಕ್ಷ್ಮಣ, ನಾವು ಜಿಂಕೆಯ ಮಾಂಸವನ್ನು ತಂದು ವಾಸ್ತುಪುರುಷನನ್ನು ಆರಾಧಿಸೋಣ. ಬಹುಕಾಲ ವಾಸಮಾಡುವವರು ವಾಸ್ತುಶಾಂತಿಯನ್ನು ಮಾಡಬೇಕಾಗುತ್ತದೆ.

ಮೃಗಂ ಹತ್ವಾನಯ ಕ್ಷಿಪ್ರಂ ಲಕ್ಷ್ಮಣೇಹ ಶುಭೇಕ್ಷಣ ।
ಕರ್ತವ್ಯಃ ಶಾಸ್ತ್ರದೃಷ್ಟೋ ಹಿ ವಿಧಿರ್ಧರ್ಮಮನುಸ್ಮರ ॥೨೩॥

ಶುಭನಯನ ಲಕ್ಷ್ಮಣ, ಬೇಗನೆ ಒಂದು ಜಿಂಕೆಯನ್ನು ಕೊಂದು ತಾ. ಶಾಸ್ತ್ರವಿಹಿತವಾದ ಕರ್ಮವನ್ನು ಮಾಡಬೇಕು. ಶಾಸ್ತ್ರವಿಧಿಯನ್ನು ಗಮನದಲ್ಲಿಟ್ಟುಕೊಳ್ಳು.

ಭ್ರಾತುರ್ವಚನಮಾಜ್ಞಾಯ ಲಕ್ಷ್ಮಣಃ ಪರವೀರಹಾ ।
ಚಕಾರ ಸ ಯಥೋಕ್ತಂ ಚ ತಂ ರಾಮಃ ಪುನರಬ್ರವೀತ್ ॥೨೪॥

ಶತ್ರುವೀರನಾಶಕನಾದ ಲಕ್ಷ್ಮಣನು ಅಣ್ಣನ ಮಾತನ್ನು ಕೇಳಿ ಅದರಂತೇ ಮಾಡಿದ. ಅವನಿಗೆ ಪುನಃ ರಾಮ ನುಡಿದ.

ಏಣೇಯಂ ಶ್ರಪಯಸ್ವೈತಚ್ಛಾಲಾಂ ಯಕ್ಷ್ಯಾಮಹೇ ವಯಮ್ ।
ತ್ವರ ಸೌಮ್ಯ ಮುಹೂರ್ತೋಽಯಂ ಧ್ರುವಶ್ಚ ದಿವಸೋಽಪ್ಯಯಮ್ ॥

ಜಿಂಕೆಯ ಮಾಂಸವನ್ನು ಅಗ್ನಿಯಲ್ಲಿ ಪಾಕಮಾಡು, ವಾಸ್ತು ಪುರುಷನನ್ನು ನಾವು ಆರಾಧಿಸೋಣ. ಬೇಗನೆ ಈ ಕಾರ್ಯವನ್ನು ಮಾಡು. ಈ ಮುಹೂರ್ತವೂ ಒಳ್ಳೆಯ ತಿಥಿ ನಕ್ಷತ್ರಯುಕ್ತವಾದ ಈ ಹಗಲೂ ಕೂಡ 'ಧ್ರುವ'ವೆನಿಸಿದೆ.

ಸ ಲಕ್ಷ್ಮಣಃ ಕೃಷ್ಣಮೃಗಂ ಹತ್ವಾ ಮೇಧ್ಯಂ ಪ್ರತಾಪವಾನ್ ।
ಅಥ ಚಿಕ್ಷೇಪ ಸೌಮಿತ್ರಿಃ ಸಮಿದ್ಧೇ ಜಾತವೇದಸಿ ॥೨೬॥

ಪ್ರತಾಪಶಾಲಿ ಲಕ್ಷ್ಮಣ ಯಜ್ಞಕ್ಕೆ ಯೋಗ್ಯವಾದ ಕೃಷ್ಣಮೃಗವನ್ನು ಕೊಂದು ಜ್ವಲಿಸುವ ಯಾಗಾಗ್ನಿಯಲ್ಲಿ ಹಾಕಿದ.

ತಂ ತು ಪಕ್ವಂ ಸಮಾಜ್ಞಾಯ ನಿಷ್ಟಪ್ತಂ ಛಿನ್ನಶೋಣಿತಮ್ ।
ಲಕ್ಷ್ಮಣಃ ಪುರುಷವ್ಯಾಘ್ರಮಥ ರಾಘವಮಬ್ರವೀತ್ ॥೨೭॥

ಅದು ಬೆಂದು ರಕ್ತ ಸುರಿಸುವುದನ್ನು ನಿಲ್ಲಿಸಿತೆಂದು ತಿಳಿದು ಲಕ್ಷ್ಮಣನು ಶ್ರೀರಾಮನಿಗೆ ಹೇಳಿದ.

ಅಯಂ ಕೃಷ್ಣಃ ಸಮಾಪ್ತಾಂಗಃ ಶೃತಃ ಕೃಷ್ಣಮೃಗೋ ಯಥಾ ।
ದೇವತಾಂ ದೇವಸಂಕಾಶ ಯಜಸ್ವ ಕುಶಲೋ ಹ್ಯಸಿ ॥೨೮॥

ಈ ಕೃಷ್ಣಮೃಗವನ್ನು ನಾನು ಈಗ ಸರ್ವಾಂಗಪಾಕ ಮಾಡಿದ್ದೇನೆ. ನೀನು ಯಜ್ಞಕಾರ್ಯದಲ್ಲಿ ಕುಶಲನಾಗಿರುವೆ. ದೇವಸದೃಶನೆ, ದೇವತೆಗಳನ್ನು ಆರಾಧಿಸು.

ರಾಮಃ ಸ್ನಾತ್ವಾ ತು ನಿಯತೋ ಗುಣವಾನ್ ಜಪ್ಯಕೋವಿದಃ ।
ಸಂಗ್ರಹೇಣಾಕರೋತ್ಸರ್ವಾನ್ ಮಂತ್ರಾನ್ ಸತ್ರಾವಸಾನಿಕಾನ್ ॥೨೯॥

ಶ್ರೀರಾಮ ಒಡನೆ ಸ್ನಾನಮಾಡಿ ನಿಯಮಾನುಷ್ಠಾನ ಮಾಡಿ ವಾಸ್ತುಯಜ್ಞದ ಕೊನೆವರೆಗಿನ ಎಲ್ಲ ಮಂತ್ರಗಳನ್ನೂ ಸಂಕ್ಷೇಪವಾಗಿ ಜಪಿಸಿದ. ಜಪಕೋವಿದನಾದ ಶ್ರೀರಾಮ ಜಪಪೂರ್ವಕವಾಗಿ ಯಜ್ಞಕಾರ್ಯವನ್ನು ನಡೆಸಿದ.

ಇಷ್ಟ್ವಾ ದೇವಗಣಾನ್ ಸರ್ವಾನ್ ವಿವೇಶ ಸದನಂ ಶುಚಿಃ ।
ಬಭೂವ ಚ ಮನೋಹ್ಲಾದೋ ರಾಮಸ್ಯಾಮಿತತೇಜಸಃ ॥೩೦॥

ಎಲ್ಲ ವಾಸ್ತುದೇವತೆಗಳನ್ನು ಆರಾಧಿಸಿ ಆದ ಬಳಿಕ ಶುಚಿಯಾದ ಪರ್ಣಶಾಲೆ-ಯನ್ನು ಶ್ರೀರಾಮ ಪ್ರವೇಶಿಸಿದ. ಅಮಿತತೇಜನಾದ ರಾಮನ ಮನಸಿಗೆ ಆಹ್ಲಾದ-ವಾಯಿತು.

ವೈಶ್ವದೇವಬಲಿಂ ಕೃತ್ವಾ ರೌದ್ರಂ ವೈಷ್ಣವಮೇವ ಚ ।
ವಾಸ್ತುಸಂಶಮನೀಯಾನಿ ಮಂಗಲಾನಿ ಪ್ರವರ್ತಯನ್ ॥೩೧॥

ವೈಶ್ವದೇವ ಭೂತಬಲಿ, ರೌದ್ರ ಬಲಿ, ವೈಷ್ಣವ ಬಲಿಗಳನ್ನೂ ವಾಸ್ತುಶಾಂತಿಗಾಗಿ ಪುಣ್ಯಾಹವಾಚನಗಳನ್ನೂ ನಡೆಸಿದ, ಶ್ರೀರಾಮ.

ಜಪಂ ಚ ನ್ಯಾಯತಃ ಕೃತ್ವಾ ಸ್ನಾತ್ವಾ ನದ್ಯಾಂ ಯಥಾವಿಧಿ ।
ಪಾಪಸಂಶಮನಂ ರಾಮಶ್ಚಕಾರ ಬಲಿಮುತ್ತಮಮ್ ॥೩೨॥

ವಿಧ್ಯುಕ್ತವಾಗಿ ಜಪಮಾಡಿ ಪುನಃ ನದಿಯಲ್ಲಿ ವಿಧ್ಯುಕ್ತವಾಗಿ ಸ್ನಾನ ಮಾಡಿ ಪಾಪಶಾಂತಿಗಾಗಿ ಉತ್ತಮವಾದ ಪಿತ್ರಾದಿ ಬಲಿಯನ್ನೂ ಮಾಡಿದ.

ವೇದಿಸ್ಥಲವಿಧಾನಾನಿ ಚೈತ್ಯಾನ್ಯಾಯತನಾನಿ ಚ ।
ಆಶ್ರಮಸ್ಯಾನುರೂಪಾಣಿ ಸ್ಥಾಪಯಾಮಾಸ ರಾಘವಃ ॥೩೩॥

ಲಕ್ಷ್ಮಣ, ನಾವು ಜಿಂಕೆಯ ಮಾಂಸವನ್ನು ತಂದು ವಾಸ್ತುಪುರುಷನನ್ನು ಆರಾಧಿಸೋಣ. ಬಹುಕಾಲ ವಾಸಮಾಡುವವರು ವಾಸ್ತುಶಾಂತಿಯನ್ನು ಮಾಡಬೇಕಾಗುತ್ತದೆ.

ಮೃಗಂ ಹತ್ವಾನಯ ಕ್ಷಿಪ್ರಂ ಲಕ್ಷ್ಮಣೇಹ ಶುಭೇಕ್ಷಣ ।
ಕರ್ತವ್ಯಃ ಶಾಸ್ತ್ರದೃಷ್ಟೋ ಹಿ ವಿಧಿಧರ್ಮಮನುಸ್ಮರ ॥೨೩॥

ಶುಭನಯನ ಲಕ್ಷ್ಮಣ, ಬೇಗನೆ ಒಂದು ಜಿಂಕೆಯನ್ನು ಕೊಂದು ತಾ. ಶಾಸ್ತ್ರವಿಹಿತವಾದ ಕರ್ಮವನ್ನು ಮಾಡಬೇಕು. ಶಾಸ್ತ್ರವಿಧಿಯನ್ನು ಗಮನದಲ್ಲಿಟ್ಟುಕೊಳ್ಳು.

ಭ್ರಾತುರ್ವಚನಮಾಜ್ಞಾಯ ಲಕ್ಷ್ಮಣಃ ಪರವೀರಹಾ ।
ಚಕಾರ ಸ ಯಥೋಕ್ತಂ ಚ ತಂ ರಾಮಃ ಪುನರಬ್ರವೀತ್ ॥೨೪॥

ಶತ್ರುವೀರನಾಶಕನಾದ ಲಕ್ಷ್ಮಣನು ಅಣ್ಣನ ಮಾತನ್ನು ಕೇಳಿ ಅದರಂತೇ ಮಾಡಿದ. ಅವನಿಗೆ ಪುನಃ ರಾಮ ನುಡಿದ.

ಐಣೇಯಂ ಶ್ರಪಯಸ್ವೈತಚ್ಛಾಲಾಂ ಯಕ್ಷ್ಯಾಮಹೇ ವಯಮ್ ।
ತ್ವರ ಸೌಮ್ಯ ಮುಹೂರ್ತೋಽಯಂ ಧ್ರುವಶ್ಚ ದಿವಸೋಽಪ್ಯಯಮ್ ॥

ಜಿಂಕೆಯ ಮಾಂಸವನ್ನು ಅಗ್ನಿಯಲ್ಲಿ ಪಾಕಮಾಡು, ವಾಸ್ತು ಪುರುಷನನ್ನು ನಾವು ಆರಾಧಿಸೋಣ. ಬೇಗನೆ ಈ ಕಾರ್ಯವನ್ನು ಮಾಡು. ಈ ಮುಹೂರ್ತವೂ ಒಳ್ಳೆಯ ತಿಥಿ ನಕ್ಷತ್ರಯುಕ್ತವಾದ ಈ ಹಗಲೂ ಕೂಡ 'ಧ್ರುವ'ವೆನಿಸಿದೆ.

ಸ ಲಕ್ಷ್ಮಣಃ ಕೃಷ್ಣಮೃಗಂ ಹತ್ವಾ ಮೇಧ್ಯಂ ಪ್ರತಾಪವಾನ್ ।
ಅಥ ಚಿಕ್ಷೇಪ ಸೌಮಿತ್ರಿಃ ಸಮಿದ್ಧೇ ಜಾತವೇದಸಿ ॥೨೬॥

ಪ್ರತಾಪಶಾಲಿ ಲಕ್ಷ್ಮಣ ಯಜ್ಞಕ್ಕೆ ಯೋಗ್ಯವಾದ ಕೃಷ್ಣಮೃಗವನ್ನು ಕೊಂದು ಜ್ವಲಿಸುವ ಯಾಗಾಗ್ನಿಯಲ್ಲಿ ಹಾಕಿದ.

ತಂ ತು ಪಕ್ವಂ ಸಮಾಜ್ಞಾಯ ನಿಷ್ಟಪ್ತಂ ಛಿನ್ನಶೋಣಿತಮ್ ।
ಲಕ್ಷ್ಮಣಃ ಪುರುಷವ್ಯಾಘ್ರಮಥ ರಾಘವಮಬ್ರವೀತ್ ॥೨೭॥

ಅದು ಬೆಂದು ರಕ್ತ ಸುರಿಸುವುದನ್ನು ನಿಲ್ಲಿಸಿತೆಂದು ತಿಳಿದು ಲಕ್ಷ್ಮಣನು ಶ್ರೀರಾಮನಿಗೆ ಹೇಳಿದ.

ಅಯಂ ಕೃಷ್ಣಃ ಸಮಾಪ್ತಾಂಗಃ ಶೃತಃ ಕೃಷ್ಣಮೃಗೋ ಯಥಾ ।
ದೇವತಾಂ ದೇವಸಂಕಾಶ ಯಜಸ್ವ ಕುಶಲೋ ಹ್ಯಸಿ ॥೨೮॥

ಈ ಕೃಷ್ಣಮೃಗವನ್ನು ನಾನು ಈಗ ಸರ್ವಾಂಗಪಾಕ ಮಾಡಿದ್ದೇನೆ. ನೀನು ಯಜ್ಞಕಾರ್ಯದಲ್ಲಿ ಕುಶಲನಾಗಿರುವೆ. ದೇವಸದೃಶನೆ, ದೇವತೆಗಳನ್ನು ಆರಾಧಿಸು.

ರಾಮಃ ಸ್ನಾತ್ವಾ ತು ನಿಯತೋ ಗುಣವಾನ್ ಜಪ್ಯಕೋವಿದಃ ।
ಸಂಗ್ರಹೇಣಾಕರೋತ್ಸರ್ವಾನ್ ಮಂತ್ರಾನ್ ಸತ್ರಾವಸಾನಿಕಾನ್ ॥೨೯॥

ಶ್ರೀರಾಮ ಒಡನೆ ಸ್ನಾನಮಾಡಿ ನಿಯಮಾನುಷ್ಠಾನ ಮಾಡಿ ವಾಸ್ತುಯಜ್ಞದ ಕೊನೆವರೆಗಿನ ಎಲ್ಲ ಮಂತ್ರಗಳನ್ನೂ ಸಂಕ್ಷೇಪವಾಗಿ ಜಪಿಸಿದ. ಜಪಕೋವಿದನಾದ ಶ್ರೀರಾಮ ಜಪಪೂರ್ವಕವಾಗಿ ಯಜ್ಞಕಾರ್ಯವನ್ನು ನಡೆಸಿದ.

ಇಷ್ಟಾ ದೇವಗಣಾನ್ ಸರ್ವಾನ್ ವಿವೇಶ ಸದನಂ ಶುಚಿಃ ।
ಬಭೂವ ಚ ಮನೋಹ್ಲಾದೋ ರಾಮಸ್ಯಾಮಿತತೇಜಸಃ ॥೩೦॥

ಎಲ್ಲ ವಾಸ್ತುದೇವತೆಗಳನ್ನು ಆರಾಧಿಸಿ ಆದ ಬಳಿಕ ಶುಚಿಯಾದ ಪರ್ಣಶಾಲೆಯನ್ನು ಶ್ರೀರಾಮ ಪ್ರವೇಶಿಸಿದ. ಅಮಿತತೇಜನಾದ ರಾಮನ ಮನಸಿಗೆ ಆಹ್ಲಾದವಾಯಿತು.

ವೈಶ್ವದೇವಬಲಿಂ ಕೃತ್ವಾ ರೌದ್ರಂ ವೈಷ್ಣವಮೇವ ಚ ।
ವಾಸ್ತುಸಂಶಮನೀಯಾನಿ ಮಂಗಲಾನಿ ಪ್ರವರ್ತಯನ್ ॥೩೧॥

ವೈಶ್ವದೇವ ಭೂತಬಲಿ, ರೌದ್ರ ಬಲಿ, ವೈಷ್ಣವ ಬಲಿಗಳನ್ನೂ ವಾಸ್ತುಶಾಂತಿಗಾಗಿ ಪುಣ್ಯಾಹವಾಚನಗಳನ್ನೂ ನಡೆಸಿದ, ಶ್ರೀರಾಮ.

ಜಪಂ ಚ ನ್ಯಾಯತಃ ಕೃತ್ವಾ ಸ್ನಾತ್ವಾ ನದ್ಯಾಂ ಯಥಾವಿಧಿ ।
ಪಾಪಸಂಶಮನಂ ರಾಮಶ್ಚಕಾರ ಬಲಿಮುತ್ತಮಮ್ ॥೩೨॥

ವಿಧ್ಯುಕ್ತವಾಗಿ ಜಪಮಾಡಿ ಪುನಃ ನದಿಯಲ್ಲಿ ವಿಧ್ಯುಕ್ತವಾಗಿ ಸ್ನಾನ ಮಾಡಿ ಪಾಪಶಾಂತಿಗಾಗಿ ಉತ್ತಮವಾದ ಪಿತ್ರಾದಿ ಬಲಿಯನ್ನೂ ಮಾಡಿದ.

ವೇದಿಸ್ಥಲವಿಧಾನಾನಿ ಚೈತ್ಯಾನ್ಯಾಯತನಾನಿ ಚ ।
ಆಶ್ರಮಸ್ಯಾನುರೂಪಾಣಿ ಸ್ಥಾಪಯಾಮಾಸ ರಾಘವಃ ॥೩೩॥

ಆಶ್ರಮಕ್ಕೆ ಅನುರೂಪವಾಗಿ ವೇದಿಸ್ಥಲ ಚೈತ್ಯ ಆಯತನಗಳಲ್ಲಿ ಆಯಾ ದೇವತೆಗಳನ್ನು ಆವಾಹಿಸಿದ; ಶ್ರೀರಾಮ.

ವನ್ಯೈರ್ಮಾಲ್ಯೈಃ ಫಲೈರ್ಮೂಲೈಃ ಪಕ್ವೈರ್ಮಾಂಸೈರ್ಯಥಾವಿಧಿ ।
ಅದ್ಭಿರ್ಜಪೈಶ್ಚ ವೇದೋಕ್ತೈರ್ದರ್ಭೈಶ್ಚ ಸಸಮಿತ್ಕುಶೈಃ ॥೩೪॥

ತೌ ತರ್ಪಯಿತ್ವಾ ಭೂತಾನಿ ರಾಘವೌ ಸಹ ಸೀತಯಾ ।
ತದಾ ವಿವಿಶತುಃ ಶಾಲಾಂ ಸುಶುಭಾಂ ಶುಭಲಕ್ಷಣೌ ॥೩೫॥

ಕಾಡಿನ ಹೂಮಾಲೆ ಫಲ ಮೂಲ ಪಕ್ವಮಾಂಸ ಜಪತರ್ಪಣ ಸಮಿತ್ ದರ್ಭೆ-ಗಳಿಂದಲೂ ವೇದೋಕ್ತಹೋಮಗಳಿಂದಲೂ ಸರ್ವಭೂತಗಳಿಗೆ ತೃಪ್ತಿನೀಡಿ ಶುಭ-ಲಕ್ಷಣ ಉಳ್ಳ ರಾಮಲಕ್ಷ್ಮಣರು ಸೀತಾಸಮೇತರಾಗಿ ಶುಭಕರವಾದ ಪರ್ಣಶಾಲೆ-ಯನ್ನು ಪ್ರವೇಶಿಸಿದರು.

ವಾಸ್ತುಶಾಂತಿ :

ಶ್ರೀರಾಮನು ಲಕ್ಷ್ಮಣನಿಂದ ಪರ್ಣಶಾಲೆಯನ್ನು ನಿರ್ಮಾಣ ಮಾಡಿ ವಿಧ್ಯುಕ್ತ-ವಾಗಿ ವಾಸ್ತುಶಾಂತಿ ಪೂರ್ವಕ ಗೃಹಪ್ರವೇಶ ಮಾಡಿದಂತೆ ವಾಲ್ಮೀಕಿ ವರ್ಣಿಸುತ್ತಾನೆ.

ವಾಸ್ತು ಪುರುಷನು ವರಾಹರೂಪಿ ಹರಿಯ ಮೈ ಬೆವರಿಂದ ಜನಿಸಿದ ಒಬ್ಬ ದೇವ. ಅವನು ತನ್ನ ಮೈಯಲ್ಲಿ ಬ್ರಹ್ಮಾದಿ ಸರ್ವದೇವತೆಗಳಿಗೆ ಸ್ಥಾನ ನೀಡಿದ್ದಾನೆ. ಮನೆ ದೇವಾಲಯ ಸರೋವರ ಉದ್ಯಾನ ಮುಂತಾದವುಗಳ ನಿರ್ಮಾಣಕ್ಕೆ ಯೋಗ್ಯವಾದ ಭೂಪ್ರದೇಶವು 'ವಾಸ್ತು' ಎನಿಸುತ್ತದೆ. ಕಾಪಿಲ ಪಾಂಚರಾತ್ರ ಪ್ರಕಾರ ವಾಸ್ತುದೇವನು ಸಮಸ್ತ ಭೂಮಂಡಲದಲ್ಲಿ ವಾಸ್ತುವಿಗೆ ಅಭಿಮಾನಿಯಾಗಿ ಅಧಿಪತಿಯಾಗಿ ವಾಸ್ತುಮಂಡಲದಲ್ಲಿ ಆಗ್ನೇಯ ವಾಯವ್ಯಮೂಲೆಗಳಲ್ಲಿ ಎರಡು ಮೊಣಕಾಲುಗಳಿಟ್ಟು 'ಈಶಮೂರ್ಧ' ಮಂಡಲದ ಈಶಾನ್ಯ ಮೂಲೆಯಲ್ಲಿ ತಲೆ ಉಳ್ಳವನು. ಊರ್ಧ್ವಕೇಶದ ಕೃಷ್ಣವರ್ಣದ ವೃತ್ತನೇತ್ರದ ಶತಕೋಟಿ ಯೋಜನ-ಗಾತ್ರದ ದೈತ್ಯಾಕಾರದ ಶರೀರದಿಂದ ಭೂಮಿಯನ್ನೆಲ್ಲ ವ್ಯಾಪಿಸಿದ್ದಾನೆ. 'ಪ್ರೋತ್ತಾನಃ' ಮೇಲುಮುಖವಾಗಿ ನೆಲದಲ್ಲಿ ಒರಗಿ 'ಹೃದಂಜಲಿಃ' ಎದೆಯ ಮೇಲೆ ಕೈಜೋಡಿಸಿದ್ದಾನೆ. ತನ್ನಿಂದ ವಂದ್ಯರಾಗಿ ಮೈಯಲ್ಲಿ ನೆಲೆಸಿರುವ ದೇವತೆಗಳೊಂದಿಗೆ ಹೋಮಹವನ ಶಾಂತಿ ಪೂಜಾಕರ್ಮಗಳನ್ನು ಸ್ವೀಕರಿಸುತ್ತಾನೆ.

ಈ ಭೂಮಿ ಇರುವಷ್ಟುಕಾಲ ಇದ್ದು ಲಯಕಾಲದಲ್ಲಿ ಭೂಮಿಯೊಂದಿಗೇ ಲಯಹೊಂದುತ್ತಾನೆ. ಅವನನ್ನು ಪೂಜಿಸಿದರೆ ನಾವು ಮಾಡುವ ಸತ್ಕರ್ಮಗಳು

ದೇವತೆಗಳಿಗೆ ಇಷ್ಟವಾಗುತ್ತವೆ, ಸತ್ಫಲದಾಯಕವಾಗುತ್ತವೆ. ಅವನನ್ನು ಪೂಜಿಸದೆ ಮಾಡುವ ಸತ್ಕರ್ಮಗಳು ಆಸುರವಾಗುತ್ತವೆ, ಅಸುರರ ಪಾಲಾಗುತ್ತವೆ, ವಿಪರೀತವಾಗಿ ಅಶುಭ ಫಲಕಾರಣವಾಗುತ್ತವೆ—

'ಅನರ್ಚಿತೇ ವಾಸ್ತುದೇವೇ ಕೃತಂ ಕರ್ಮಾಸುರಂ ಭವೇತ್'

ಅವನನ್ನು ಪೂಜಿಸದಿದ್ದರೆ ಹರಿಯಾಜ್ಞೆಯಂತೆ ಆತ ಎದ್ದು ಹೊರಟು ಹೋಗುತ್ತಾನೆ. ಆಗ ದೇವತೆಗಳೆಲ್ಲರೂ ಯಜಮಾನನನ್ನು ಶಪಿಸಿ ಹೊರಟು ಹೋಗುತ್ತಾರೆ.

ಯದ್ಯಪಿ ವಾಸ್ತುವನ್ನು ಅಸುರನೆಂದು ಕರೆದುದೂ ಉಂಟು—

'ಯಾವದ್ ಭೂಮಿಃ ಸ್ಥಿರಾ ಲೋಕೇ ತಾವದ್ ವಾಸ್ತ್ವಸುರಃ ಸ್ಮೃತಃ।'

ಆದರೆ ಪ್ರಹ್ಲಾದ ಬಲಿ ಬಾಣಾದಿ ಅಸುರರಂತೇ ಈತನೂ 'ರಹಿತಾಸುರ'ನಾದ ಅಸುರ. ಜಾತಿಯಿಂದ ಅಸುರ, ಗುಣದಲ್ಲಿ ಸುರನೆ. ಈತ ಜನಿಸಿದೊಡನೆ ಬಲದರ್ಪದಿಂದ ಬಲಿಚಕ್ರವರ್ತಿಯಂತೆ ದೇವಲೋಕವನ್ನು ಆಕ್ರಮಿಸಿದ್ದು ನಿಜ. ಆದರೆ ಬಲಿಯನ್ನು ಪಾತಾಳಕ್ಕೆ ತಳ್ಳಿ ಅಲ್ಲಿಯೇ ಅವನಿಗೆ ಲೋಕಾಧಿಪತ್ಯವಿತ್ತು ಕಾಪಾಡಿದ್ದ, ವಾಮನ. ಹಾಗೇ ಈತನನ್ನು ಭೂಮಿಗೆ ತಳ್ಳಿ ವಾಸ್ತುಗಳಿಗೆ ಅಧಿಪತಿಯಾಗಿ ಮಾಡಿ ಅವನ ಮೈಯಲ್ಲಿ ಚತುರ್ಮುಖ ಬ್ರಹ್ಮನು ನೆಲೆಸಿ ಕಾಪಾಡಿದ. ಅವನೆದೆಯಲ್ಲಿ ಸಮಸ್ತ ದೇವತೆಗಳೂ ಕೂಡ ಬ್ರಹ್ಮನನ್ನು ಸುತ್ತುವರಿದು ನಿಂತು ಸೇವಿಸುತ್ತಿದ್ದಾರೆ.

ಅದರಿಂದ ಶ್ರೀರಾಮ ಲಕ್ಷ್ಮಣನಿಗೆ ನುಡಿದ— 'ಕರ್ತವ್ಯಂ ವಾಸ್ತುಶಮನಂ'

ತಾಂ ವೃಕ್ಷಪರ್ಣಾಚ್ಛದನಾಂ ಮನೋಜ್ಞಾಂ
ಯಥಾಪ್ರದೇಶಂ ಸುಕೃತಾಂ ವಿವಾತಾಮ್ ।
ವಾಸಾಯ ಸರ್ವೇ ವಿವಿಶುಃ ಸಮೇತಾಃ
ಸಭಾಂ ಯಥಾ ದೇವಗಣಾಃ ಸುಧರ್ಮಾಮ್ ॥೩೬॥

ಮರದ ಎಲೆಗಳ ಹೊದ್ದಿಕೆ ಹೊಂದಿದ್ದು ಶಿಲ್ಪಶಾಸ್ತ್ರಾನುಗುಣವಾಗಿ ನಿರ್ಮಿತವಾಗಿದ್ದು ಬಿರುಗಾಳಿಯ ರಭಸವನ್ನು ತಡೆದುಕೊಳ್ಳುವಂಥ ಮನೋಜ್ಞವಾದ ಆ ಪರ್ಣಶಾಲೆ ದೇವತೆಗಳ ಸುಧರ್ಮಸಭೆಯಂತೆ ಭವ್ಯವಾಗಿತ್ತು. ದೇವತೆಗಳು ಆ ಸಭೆಯನ್ನು ಪ್ರವೇಶಿಸಿದಂತೆ ಸೀತಾರಾಮ ಲಕ್ಷ್ಮಣರು ಮೂವರೂ ವಾಸಕ್ಕೆ ಆ ಮನೆಯನ್ನು ಪ್ರವೇಶಿಸಿದರು.

ಅನೇಕನಾನಾಮೃಗಪಕ್ಷಿಸಂಕುಲೇ
ವಿಚಿತ್ರಪತ್ರಸ್ತಬಕೈರ್ದ್ರುಮೈರ್ಯುತೇ ।
ವನೋತ್ತಮೇ ವ್ಯಾಲಮೃಗಾನುನಾದಿತೇ
ತದಾ ವಿಜಹ್ರುಃ ಸುಸುಖಂ ಜಿತೇಂದ್ರಿಯಾಃ ॥೩೭॥

ಅನೇಕ ನಾನಾವಿಧ ಮೃಗಪಕ್ಷಿಗಳಿಂದಲೂ ವಿಚಿತ್ರವಾದ ಎಲೆ ಹೂ-ಗೊಂಚಲುಗಳುಳ್ಳ ಮರಗಳಿಂದಲೂ ಯುಕ್ತವಾಗಿದ್ದು ಕ್ರೂರಮೃಗಗಳ ಧ್ವನಿಯಿಂದಲೂ ಕೂಡಿದ ಉತ್ತಮವಾದ ಚಿತ್ರಕೂಟಪರ್ವತದ ಅರಣ್ಯಗಳಲ್ಲಿ ಜಿತೇಂದ್ರಿಯರಾದ ಅವರು ಮೂವರೂ ವಿಹರಿಸಿದರು.

ಸುರಮ್ಯಮಾಸಾದ್ಯ ತು ಚಿತ್ರಕೂಟಂ
ನದೀಂ ಚ ತಾಂ ಮಾಲ್ಯವತೀಂ ಸುತೀರ್ಥಾಮ್ ।
ನನಂದ ರಾಮೋ ಮೃಗಪಕ್ಷಿಜುಷ್ಟಾಂ
ಜಹೌ ಚ ದುಃಖಂ ಪುರವಿಪ್ರವಾಸಾತ್ ॥೩೮॥

ಮೃಗಪಕ್ಷಿಗಳು ವಾಸಮಾಡುವ ಬಲು ರಮ್ಯವಾದ ಆ ಚಿತ್ರಕೂಟ ಪರ್ವತವನ್ನೂ ತಿಳಿನೀರಿನ ಆ ಮಂದಾಕಿನೀನದಿಯನ್ನೂ ಹೋಗಿ ಸೇರಿ ಶ್ರೀರಾಮ ನಗರವನ್ನು ತೊರೆದು ಬಂದ ದುಃಖವನ್ನು ಮರೆತುಬಿಟ್ಟ.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಐವತ್ತಾರನೇ ಸರ್ಗ ಮುಗಿಯಿತು.

❖

ಸಪ್ತಪಂಚಾಶಃ ಸರ್ಗಃ

ಸರ್ಗ – 57

ಸುಮಂತ್ರನು ಅಯೋಧ್ಯೆಗೆ ಹಿಂದಿರುಗಿ ಬರುವುದು.

ಕಥಯಿತ್ವಾ ಸುದುಃಖಾರ್ತಃ ಸುಮಂತ್ರೇಣ ಚಿರಂ ಸಹ ।
ರಾಮೇ ದಕ್ಷಿಣಕೂಲಸ್ಥೇ ಜಗಾಮ ಸ್ವಗೃಹಂ ಗುಹಃ ॥೧॥

ಇತ್ತ ಗುಹನು ಸುಮಂತ್ರನೊಂದಿಗೆ ಬಹಳ ಹೊತ್ತು ದುಃಖಾರ್ತನಾಗಿ ಸಂಭಾಷಣ ಮಾಡಿ, ಶ್ರೀರಾಮ ಗಂಗೆಯ ದಕ್ಷಿಣ ತೀರವನ್ನು ಸೇರಿದಾಗ, ತಾನು ತನ್ನ ಅರಮನೆಗೆ ನಡೆದ.

ಭರದ್ವಾಜಾಭಿಗಮನಂ ಪ್ರಯಾಗೇ ಚ ಸಭಾಜನಮ್ ।
ಆ ಗಿರೇರ್ಗಮನಂ ತೇಷಾಂ ತತ್ರಸ್ಥೈರಭಿಲಕ್ಷಿತಮ್ ॥೨॥

ಶ್ರೀರಾಮ ಭರದ್ವಾಜರ ಆಶ್ರಮಕ್ಕೆ ನಡೆದುದು ಪ್ರಯಾಗದಲ್ಲಿ ಅವನಿಗೆ ಮಹರ್ಷಿಗಳು ಸತ್ಕರಿಸಿದುದು, ಮುಂದೆ ಅವನು ಚಿತ್ರಕೂಟ ಪರ್ವತದವರೆಗೆ ಪ್ರಯಾಣ ಮಾಡಿದ್ದು ಇವೆಲ್ಲವನ್ನೂ ಸುಮಂತ್ರ ಗುಹನ ಚಾರರ ಮೂಲಕ ಕೇಳಿ ತಿಳಿದುಕೊಂಡ.

ಅನುಜ್ಞಾತಃ ಸುಮಂತ್ರೋಽಥ ಯೋಜಯಿತ್ವಾ ಹಯೋತ್ತಮಾನ್ ।
ಅಯೋಧ್ಯಾಮೇವ ನಗರೀಂ ಪ್ರಯಯೌ ಗಾಢದುರ್ಮನಾಃ ॥೩॥

ಬಳಿಕ ಸುಮಂತ್ರನು ಗುಹನಿಗೆ ಹೋಗಿಬರುವೆನೆಂದು ಹೇಳಿ ಬಲು ದುಃಖದಿಂದ ಕುದುರೆಗಳನ್ನು ರಥಕ್ಕೆ ಹೂಡಿ ಅಯೋಧ್ಯಾಪಟ್ಟಣದ ಕಡೆಗೇ ಪ್ರಯಾಣ ಮಾಡಿದ.

ಸ ವನಾನಿ ಸುಗಂಧೀನಿ ಸರಿತಶ್ಚ ಸರಾಂಸಿ ಚ ।
ಪಶ್ಯನ್ನತಿಯಯೌ ಶೀಘ್ರಂ ಗ್ರಾಮಾಣಿ ನಗರಾಣಿ ಚ ॥೪॥

ಅವನು ಸುಗಂಧಭರಿತವಾದ ಕಾಡುಗಳನ್ನೂ ನದೀ ಸರೋವರಗಳನ್ನೂ ಹಳ್ಳಿಪಟ್ಟಣಗಳನ್ನೂ ನೋಡುತ್ತ ಶೀಘ್ರವಾಗಿ ಪ್ರಯಾಣ ಮಾಡಿದ.

ತತಃ ಸಾಯಾಹ್ನಸಮಯೇ ದ್ವಿತೀಯೇಽಹನಿ ಸಾರಥಿಃ ।
ಅಯೋಧ್ಯಾಂ ಸಮನುಪ್ರಾಪ್ಯ ನಿರಾನಂದಾಂ ದದರ್ಶ ಹ ॥೫॥

ಶ್ರೀರಾಮನನ್ನು ಅಗಲಿದ ನಂತರ ಮೂರನೆಯ ದಿನ ಸಾಯಂಕಾಲದಲ್ಲಿ ಸಾರಥಿ ಸುಮಂತ್ರನು ಅಯೋಧ್ಯೆಯನ್ನು ಸೇರಿ ಆನಂದರಹಿತವಾದ ಆ ನಗರವನ್ನು ನೋಡಿದ.

ಸ ಶೂನ್ಯಮಿವ ನಿಃಶಬ್ದಾಂ ದೃಷ್ಟ್ವಾ ಪರಮದುರ್ಮನಾಃ ।
ಸುಮಂತ್ರಶ್ಚಿಂತಯಾಮಾಸ ಶೋಕವೇಗಸಮಾಹತಃ ॥೬॥

ನಿಃಶಬ್ದವಾಗಿದ್ದು ಶೂನ್ಯದಂತೆ ಇದ್ದ ಆ ನಗರವನ್ನು ಕಂಡು ಬಲು ದುಃಖಿತನಾಗಿದ್ದ ಸುಮಂತ್ರ ಶೋಕವೇಗದ ಆಘಾತವನ್ನು ಹೊಂದಿ ಆಲೋಚಿಸಿದ.

ಕಚ್ಚಿನ್ನ ಸಗಜಾ ಸಾಶ್ವಾ ಸಜನಾ ಸಜನಾಧಿಪಾ ।
ರಾಮಸಂತಾಪದುಃಖೇನ ದಗ್ಧಾ ಶೋಕಾಗ್ನಿನಾ ಪುರೀ ॥೭॥

ಆನೆ ಕುದುರೆಗಳೊಂದಿಗೆ, ಪ್ರಜೆಗಳೊಂದಿಗೆ, ರಾಜನೊಂದಿಗೆ ಇಡೀ ನಗರವೇ ಶ್ರೀರಾಮನ ವಿರಹ ದುಃಖದಿಂದ ಶೋಕಾಗ್ನಿಯಿಂದ ಭಸ್ಮವಾಗಿಲ್ಲ ತಾನೆ?

ಇತಿ ಚಿಂತಾಪರಃ ಸೂತೋ ವಾಜಿಭಿಃ ಶೀಘ್ರಪಾತಿಭಿಃ ।
ನಗರದ್ವಾರಮಾಸಾದ್ಯ ತ್ವರಿತಃ ಪ್ರವಿವೇಶ ಹ ॥೮॥

ಹೀಗೆ ಆಲೋಚಿಸುತ್ತಲೇ ಸುಮಂತ್ರ ಶೀಘ್ರಗಾಮಿಗಳಾದ ಕುದುರೆಗಳಿಂದ ನಗರದ್ವಾರವನ್ನು ಸೇರಿ ಬೇಗನೆ ಪ್ರವೇಶಿಸಿದ.

ಸುಮಂತ್ರಮಭಿಯಾಂತಂ ತಂ ಶತಶೋಥ ಸಹಸ್ರಶಃ ।
ಕ್ವ ರಾಮ ಇತಿ ಪೃಚ್ಛಂತಃ ಸೂತಮಭ್ಯದ್ರವನ್ನರಾಃ ॥೯॥

ಸುಮಂತ್ರ ನಗರಕ್ಕೆ ಹಿಂತಿರುಗಿ ಬರುತ್ತಿದ್ದಂತೆಯೇ ನೂರಾರು ಸಾವಿರಾರು ಸಂಖ್ಯೆಯಲ್ಲಿ ಪ್ರಜೆಗಳು 'ಎಲ್ಲಿ ಶ್ರೀರಾಮ!' ಎಂದು ಕೇಳುತ್ತ ಇದಿರಿಗೆ ಧಾವಿಸಿ ಬಂದರು.

ತೇಷಾಂ ಶಶಂಸ ಗಂಗಾಯಾಮಹಮಾಪೃಚ್ಛ್ಯ ರಾಘವಮ್ ।
ಅನುಜ್ಞಾತೋ ನಿವೃತ್ತೋಽಸ್ಮಿ ಧಾರ್ಮಿಕೇಣ ಮಹಾತ್ಮನಾ ॥೧೦॥

'ಗಂಗಾತೀರದಲ್ಲಿ ನಾನು ಶ್ರೀರಾಮನ ಅನುಜ್ಞೆಯನ್ನು ಕೇಳಿ ಪಡೆದೆ. ಧಾರ್ಮಿಕನಾದ ಮಹಾತ್ಮ ನನಗೆ ಅನುಜ್ಞೆ ನೀಡಿದ. ಅದರಿಂದ ಹಿಂತಿರುಗಿ ಬಂದಿದ್ದೇನೆ' ಎಂದು ಸುಮಂತ್ರ ಪ್ರಜೆಗಳಿಗೆ ಹೇಳಿದ.

ತೇ ತೀರ್ಣಾ ಇತಿ ವಿಜ್ಞಾಯ ಬಾಷ್ಪಪೂರ್ಣಮುಖಾ ಜನಾಃ ।
ಅಹೋ ಧಿಗಿತಿ ನಿಃಶ್ವಸ್ಯ ಹಾ ರಾಮೇತಿ ಚ ಚುಕ್ರುಶುಃ ॥೧೧॥

ಅವರು ನದಿ ದಾಟಿದರೆಂದು ತಿಳಿದು ಪ್ರಜೆಗಳು ಮುಖವನ್ನು ಕಣ್ಣೀರಿಂದ ತೊಯಿಸಿಕೊಂಡು ಅಯ್ಯೋ ಹಾಳಾದೆವೆಂದು ನಿಟ್ಟುಸಿರಿಟ್ಟು ಹಾ ರಾಮ ಎಂದು ಕೂಗಿಕೊಂಡರು.

ಶುಶ್ರಾವ ಚ ವಚಸ್ತೇಷಾಂ ವೃಂದಂ ವೃಂದಂ ಚ ತಿಷ್ಠತಾಮ್ ।
ಹತಾಃ ಸ್ಮ ಖಲು ಯೇ ನೇಹ ಪಶ್ಯಾಮ ಇತಿ ರಾಘವಮ್ ॥೧೨॥

'ಶ್ರೀರಾಮನನ್ನು ಇಲ್ಲಿ ಕಾಣದೆ ನಾವು, ನಿಜವಾಗಿ ಹಾಳಾಗಿ ಹೋಗುತ್ತಿದ್ದೇವೆ' ಎಂದು ಪ್ರಜೆಗಳು ಅಲ್ಲಲ್ಲಿ ಗುಂಪುಗುಂಪಾಗಿ ನಿಂತು ಮಾತನಾಡಿಕೊಳ್ಳುತ್ತಿದ್ದುದನ್ನು ಸುಮಂತ್ರ ಆಲಿಸಿದ.

ದಾನಯಜ್ಞವಿವಾಹೇಷು ಸಮಾಜೇಷು ಮಹತ್ಸು ಚ ।
ನ ದ್ರಕ್ಷ್ಯಾಮಃ ಪುನರ್ಜಾತು ಧಾರ್ಮಿಕಂ ರಾಮಮಂತರಾ ॥೧೩॥

ದಾನ ಯಜ್ಞ ವಿವಾಹಗಳಲ್ಲಿ, ಜನರ ದೊಡ್ಡ ದೊಡ್ಡ ಕೂಟಗಳಲ್ಲಿ ಎಲ್ಲ ವ್ಯವಹಾರಗಳು ಯಶಸ್ವಿಯಾಗಿ ನಡೆಯುವಂತೆ ನಡುವೆ ಜೊತೆಗೇ ನಿಂತಿರುತ್ತಿದ್ದ ಧಾರ್ಮಿಕನಾದ ಶ್ರೀರಾಮನನ್ನು ಹಾಗೆ ಪುನಃ ಎಂದೂ ನಾವು ಕಾಣುವಂತಿಲ್ಲ–ವಾಗಿದೆ.

ಕಿಂ ಸಮರ್ಥಂ ಜನಸ್ಯಾಸ್ಯ ಕಿಂ ಪ್ರಿಯಂ ಕಿಂ ಸುಖಾವಹಮ್ ।
ಇತಿ ರಾಮೇಣ ನಗರಂ ಪಿತೃವತ್ ಪರಿಪಾಲಿತಮ್ ॥೧೪॥

ಯಾರಿಗೆ ಯಾವುದು ಉಚಿತ ಯಾವುದು ಪ್ರಿಯ ಯಾವುದು ಸುಖಕರ ಎಂದು ನೋಡಿಕೊಳ್ಳುತ್ತ ಶ್ರೀರಾಮ ಇಡೀ ನಗರವನ್ನು ತಂದೆಯಂತೆ ಕಾಪಾಡುತ್ತಿದ್ದ.

ವಾತಾಯನಗತಾನಾಂ ಚ ಸ್ತ್ರೀಣಾಮನ್ತರಾಪಣಮ್ ।
ರಾಮಶೋಕಾಭಿತಪ್ತಾನಾಂ ಶುಶ್ರಾವ ಪರಿದೇವನಮ್ ॥೧೫॥

ರಾಮವಾರ್ತಾಶ್ರವಣದ ತವಕದಿಂದ ಕಿಟಕಿಗಳಲ್ಲಿ ನಿಂತ ನಾರಿಯರು ಗೋಳಿಡುವುದನ್ನೂ, ಮಾರ್ಗದ ಇಕ್ಕೆಲಗಳ ಅಂಗಡಿ ಮುಂಗಟ್ಟುಗಳ ದಾರಿಯಾಗಿ ಮುಂದೆ ಸಾಗುತ್ತಿದ್ದ ಸುಮಂತ್ರ ಆಲಿಸಿದ.

ಸ ರಾಜಮಾರ್ಗಮಧ್ಯೇನ ಸುಮಂತ್ರಃ ಪಿಹಿತಾನನಃ ।
ಯತ್ರ ರಾಜಾ ದಶರಥಸ್ತದೇವೋಪಯಯೌ ಗೃಹಮ್ ॥೧೬॥

ರಾಮನನ್ನು ಕರೆತಾರದೆ ರಾಜಮಾರ್ಗದಲ್ಲಿ ಸಾಗಲು ಲಜ್ಜೆಯಿಂದ ಮುಖ ಮುಚ್ಚಿಕೊಂಡೇ ಸುಮಂತ್ರ ರಾಜಾ ದಶರಥನಿದ್ದ ಅದೇ ಅರಮನೆಯ ಬಳಿಗೆ ಬಂದು ಸೇರಿದ.

ಸೋಽವತೀರ್ಯ ರಥಾಚ್ಛೀಘ್ರಂ ರಾಜವೇಶ್ಮ ಪ್ರವಿಶ್ಯ ಚ ।
ಕಕ್ಷ್ಯಾಃ ಸಪ್ತಾಭಿಚಕ್ರಾಮ ಮಹಾಜನಸಮಾಕುಲಾಃ ॥೧೭॥

ರಥದಿಂದಿಳಿದು ಬೇಗನೆ ಅರಮನೆಯನ್ನು ಪ್ರವೇಶಿಸಿ ಜನನಿಬಿಡವಾಗಿದ್ದ ಏಳು ತೊಟ್ಟಿಗಳನ್ನು ದಾಟಿದ.

ಹಮ್ಯೈರ್ಯಮಾನೈಃ ಪ್ರಾಸಾದೈರವೇಕ್ಷ್ಯಾಥ ಸಮಾಗತಮ್ ।
ಹಾಹಾಕಾರಕೃತಾ ನಾರ್ಯೋ ರಾಮಾದರ್ಶನಕರ್ಶಿತಾಃ ॥೧೮॥

ಧನಿಕರ ಬಂಗಲೆಗಳನ್ನೂ ಏಳು ಮಾಳಿಗೆಗಳನ್ನೂ ರಾಜಸೌಧಗಳನ್ನೂ ಏರಿ ನಾರಿಯರು ಸುಮಂತ್ರನೊಬ್ಬನೇ ಬಂದುದನ್ನು ಕಂಡರು. ಶ್ರೀರಾಮನ ದರ್ಶನದಿಂದ ವಂಚಿತರಾದೆವೆಂದು ಶೋಕದಿಂದ ಹಾಹಾಕಾರ ಮಾಡಿದರು.

ಆಯತೈರ್ವಿಮಲೈರ್ನೇತ್ರೈರಶ್ರುವೇಗಪರಿಪ್ಲುತೈಃ ।
ಅನ್ಯೋನ್ಯಮಭಿವೀಕ್ಷಂತೇಽವ್ಯಕ್ತಮಾರ್ತತರಾಃ ಸ್ತ್ರಿಯಃ ॥೧೯॥

ಅತ್ಯಂತ ಶೋಕಾರ್ತರಾದ ನಾರಿಯರು ಕಣ್ಣೀರ ಕೊಡಿಯನ್ನೇ ಹರಿಸುತ್ತ ನಿಡಿದಾದ ನಿರ್ಮಲವಾದ ನಯನಗಳಿಂದ ವ್ಯಕ್ತವಾಗಿ ಎಲ್ಲರೂ ನೋಡುವಂತೆ ಪರಸ್ಪರವಾಗಿ ಅವಲೋಕನ ಗೈದರು.

ತತೋ ದಶರಥಸ್ತ್ರೀಣಾಂ ಪ್ರಾಸಾದೇಭ್ಯಸ್ತತಸ್ತತಃ ।
ರಾಮಶೋಕಾಭಿತಪ್ತಾನಾಂ ಮಂದಂ ಶುಶ್ರಾವ ಜಲ್ಪಿತಮ್ ॥೨೦॥

ಅಲ್ಲಲ್ಲಿ ಮಾಳಿಗೆಗಳ ಮೇಲಿಂದ, ದಶರಥನ ರಾಣಿಯರು ರಾಮಶೋಕದಿಂದ ಬೆಂದು ಮೆಲ್ಲನೆ ಹೇಳಿಕೊಳ್ಳುತ್ತಿದ್ದ ಮಾತುಗಳನ್ನು ಸುಮಂತ್ರ ಕೇಳಿಸಿಕೊಂಡ.

ಸಹ ರಾಮೇಣ ನಿರ್ಯಾತೋ ವಿನಾ ರಾಮಮಿಹಾಗತಃ ।
ಸೂತಃ ಕಿಂ ನಾಮ ಕೌಸಲ್ಯಾಂ ಕ್ರೋಶಂತೀಂ ಪ್ರತಿವಕ್ಷ್ಯತಿ ॥೨೧॥

ಶ್ರೀರಾಮನ ಜೊತೆಗೇ ಹೋದವನು ಸುಮಂತ್ರ, ಈಗ ಅವನನ್ನು ಬಿಟ್ಟೇ ಹಿಂತಿರುಗಿದ್ದಾನೆ. ಅಳುತ್ತಿರುವ ಕೌಸಲ್ಯೆಯನ್ನು ಇನ್ನು ಅವನು ಏನು ತಾನೆ ಸಮಾಧಾನ ಮಾಡಬಲ್ಲ?

ಯಥಾ ಚ ಮನ್ಯೇ ದುರ್ದೇವಮೇವಂ ನ ಸುಕರಂ ಧ್ರುವಮ್ ।
ಆಚ್ಛಿದ್ಯ ಪುತ್ರೇ ನಿರ್ಯಾತೇ ಕೌಸಲ್ಯಾ ಯತ್ರ ಜೀವತಿ ॥೨೨॥

ಮಗನು ತಾಯಿಯ ಕರುಳಿನ ಸಂಬಂಧವನ್ನು ತೊಡೆದುಕೊಂಡು ಹೊರಟು-ಹೋದಾಗ ಆ ತಾಯಿ ಕೌಸಲ್ಯೆಯ ಬಾಳು ಅವಳಿಗೆ ನಿಜವಾಗಿಯೂ ದುರ್ಭರವೆ ಸರಿ. ನನಗೂ ಅದು ನಿಶ್ಚಯವಾಗಿ ನೂಕಲಾಗದ ಕೆಟ್ಟ ಬಾಳು.

ಸತ್ಯರೂಪಂ ತಂ ತದಾಖ್ಯಂ ರಾಜ್ಞಃ ಸ್ತ್ರೀಣಾಂ ನಿಶಾಮಯನ್ ।
ಪ್ರದೀಪ್ತಮಿವ ಶೋಕೇನ ವಿವೇಶ ಸಹಸಾ ಗೃಹಮ್ ॥೨೩॥

ರಾಜನ ರಾಣೀವಾಸದವರು ಆಡಿದ ಆ ಸತ್ಯವಾದ ಮಾತನ್ನು ಕೇಳುತ್ತ ಶೋಕದಿಂದ ಇನ್ನಷ್ಟು ಬೇಯುತ್ತ ಸುಮಂತ್ರ ವೇಗವಾಗಿ ಅರಮನೆಯನ್ನು ಹೊಕ್ಕ.

ಸ ಪ್ರವಿಶ್ಯಾಷ್ಟಮೀಂ ಕಕ್ಷ್ಯಾಂ ರಾಜಾನಂ ದೀನಮಾತುರಮ್ ।
ಪುತ್ರಶೋಕಪರಿದ್ಯೂನಮಪಶ್ಯತ್ ಪಾಂಡರೇ ಗೃಹೇ ॥೨೪॥

ಎಂಟನೇ ತೊಟ್ಟಿಯನ್ನು ಸುಮಂತ್ರ ಹೊಕ್ಕು ಅಲ್ಲಿ ಕಾಂತಿಹೀನವಾದ ಮನೆಯಲ್ಲಿ ಪುತ್ರಶೋಕದಿಂದ ಸೊರಗಿ ಬಳಲಿ ದೀನನಾಗಿ ಕುಳಿತ್ತಿದ್ದ ರಾಜನನ್ನು ಭೆಟ್ಟಿ ಮಾಡಿದ.

ಅಭಿಗಮ್ಯ ತಮಾಸೀನಂ ನರೇಂದ್ರಮಭಿವಾದ್ಯ ಚ ।
ಸುಮಂತ್ರೋ ರಾಮವಚನಂ ಯಥೋಕ್ತಂ ಪ್ರತ್ಯವೇದಯತ್ ॥೨೫॥

ಆಸನದಲ್ಲಿ ಕುಳಿತಿದ್ದ ರಾಜನ ಬಳಿ ಸಾರಿ ಅಭಿವಾದನ ಮಾಡಿ ಸುಮಂತ್ರ ಅವನಿಗೆ ರಾಮನು ಆಡಿದ ಮಾತನ್ನು ಯಥಾವತ್ತಾಗಿ ನಿವೇದಿಸಿದ.

ಸ ತೂಷ್ಣೀಮೇವ ತಚ್ಛ್ರುತ್ವಾ ರಾಜಾ ವಿಭ್ರಾಂತಚೇತನಃ ।
ಮೂರ್ಛಿತೋ ನ್ಯಪತದ್ಭೂಮೌ ರಾಮಶೋಕಾಭಿಪೀಡಿತಃ ॥೨೬॥

ರಾಜನು ಮೌನದಿಂದ ಅದನ್ನು ಕೇಳಿಸಿಕೊಂಡು ಮತಿವಿಭ್ರಮಣೆ ಹೊಂದಿ ರಾಮಶೋಕ ಪೀಡೆಯಿಂದ ಮೂರ್ಛಿತನಾಗಿ ನೆಲದಲ್ಲಿ ಬಿದ್ದ.

ತತೋಽಂತಃಪುರಮಾವಿದ್ಧಂ ಮೂರ್ಛಿತೇ ಪೃಥಿವೀಪತೌ ।
ಉಚ್ಛ್ರಿತ್ಯ ಬಾಹೂ ಚುಕ್ರೋಶ ನೃಪತೌ ಪತಿತೇ ಕ್ಷಿತೌ ॥೨೭॥

ರಾಜ ಮೂರ್ಛಿತನಾಗಿ ನೆಲದಲ್ಲಿ ಬಿದ್ದಾಗ ಇಡೀ ಅಂತಃಪುರವೇ ಆಘಾತ-ಗೊಂಡು ಎರಡೂ ತೋಳುಗಳನ್ನೆತ್ತಿ ಕೂಗಿಕೊಂಡಿತು.

ಸುಮಿತ್ರಯಾ ತು ಸಹಿತಾ ಕೌಸಲ್ಯಾ ಪತಿತಂ ಪತಿಮ್ ।
ಉತ್ಥಾಪಯಾಮಾಸ ತದಾ ವಚನಂ ಚೇದಮಬ್ರವೀತ್ ॥೨೮॥

ಕೌಸಲ್ಯೆ ಸುಮಿತ್ರೆಯೊಂದಿಗೆ ಬಂದು, ಬಿದ್ದಿದ್ದ ಪತಿಯನ್ನು ಹಿಡಿದೆತ್ತಿ ನುಡಿದಳು.

ಇಮಂ ತಸ್ಯ ಮಹಾಭಾಗ ದೂತಂ ದುಷ್ಕರಕಾರಿಣಃ ।
ವನವಾಸಾದನುಪ್ರಾಪ್ತಂ ಕಸ್ಮಾನ್ನ ಪ್ರತಿಭಾಷಸೇ ॥೨೯॥

'ಮಹಾಭಾಗ್ಯಶಾಲಿಯೆ, ದುಷ್ಕರಕಾರ್ಯವನ್ನು ಮಾಡುವ ರಾಮನ ಸಂದೇಶ-ವನ್ನು ಹೊತ್ತು ದೂತನಾದ ಸುಮಂತ್ರ ವನವಾಸದಿಂದ ಹಿಂತಿರುಗಿ ಬಂದಿದ್ದಾನೆ. ಅವನನ್ನು ನೀನು ಏಕೆ ಮಾತನಾಡಿಸುತ್ತಿಲ್ಲ?

ಅದ್ಯೇಮಮನಯಂ ಕೃತ್ವಾ ವ್ಯಪತ್ರಪಸಿ ರಾಘವ ।
ಉತ್ತಿಷ್ಠ ಸುಕೃತಂ ತೇಽಸ್ತು ಶೋಕೇ ನ ಸ್ಯಾತ್ ಸಹಾಯತಾ ॥೩೦॥

'ಈ ಅಕೃತ್ಯವನ್ನು ಮಾಡಿದ ಬಳಿಕ ಈಗ ಅದಕ್ಕೆ ನೀನು ನಾಚುತ್ತಿರುವೆ! ಮಹಾರಾಜ, ಎದ್ದೇಳು, ಪುಣ್ಯಕ್ಕೆ ಭಾಗಿಯಾಗು. ಸುಮ್ಮನೆ ಶೋಕಿಸುತ್ತಿದ್ದರೆ ನಿನಗೆ ಯಾರೂ ಸಹಾಯಕ್ಕೆ ಬರುವುದಿಲ್ಲ.

ದೇವ ಯಸ್ಯಾ ಭಯಾದ್ರಾಮಂ ನಾನುಪೃಚ್ಛಸಿ ಸಾರಥಿಮ್ ।
ನೇಹ ತಿಷ್ಠತಿ ಕೈಕೇಯೀ ವಿಸ್ರಬ್ಧಂ ಪ್ರತಿಭಾಷ್ಯತಾಮ್ ॥೩೧॥

'ಮಹಾರಾಜ, ಕೈಕೇಯಿಯ ಭಯದಿಂದ ತಾನೆ, ನೀನು ರಾಮನ ಯೋಗಕ್ಷೇಮ-ವನ್ನು ಸಾರಥಿಯೊಡನೆ ವಿಚಾರಿಸುತ್ತಿಲ್ಲ? ಆದರೆ ಆ ಕೈಕೇಯಿ ಇಲ್ಲಿ ಇಲ್ಲ. ಏನೂ ಭಯಪಡದೆ ಸುಮಂತ್ರನೊಡನೆ ಸಮಾಲೋಚನೆ ಮಾಡಬಹುದು'.

ಸಾ ತಥೋಕ್ತ್ವಾ ಮಹಾರಾಜಂ ಕೌಸಲ್ಯಾ ಶೋಕಲಾಲಸಾ ।
ಧರಣ್ಯಾಂ ನಿಪಪಾತಾಶು ಬಾಷ್ಪವಿಪ್ಲುತಭಾಷಿಣೀ ॥೩೨॥

ಕೌಸಲ್ಯೆ ಮಹಾರಾಜನಿಗೆ ಹೀಗೆ ಹೇಳಿ ತಾನೇ ಇನ್ನೂ ಹೆಚ್ಚು ದುಃಖಗೊಂಡು ಅತ್ತು ಒಡನೆ ಕಣ್ಣೀರಿನಿಂದ ಕುತ್ತಿಗೆ ಬಿಗಿಯುತ್ತಿದ್ದಂತೆ, ನೆಲದಮೇಲೆ ಬಿದ್ದಳು.

ವಿಲಪಂತೀಂ ತಥಾ ದೃಷ್ಟ್ವಾ ಕೌಸಲ್ಯಾಂ ಪತಿತಾಂ ಭುವಿ ।
ಪತಿಂ ಚಾವೇಕ್ಷ್ಯ ತಾಃ ಸರ್ವಾಃ ಸಮಂತಾದ್ರುರುದುಃ ಸ್ತ್ರಿಯಃ ॥೩೩॥

ಕೌಸಲ್ಯೆ ಅಳುತ್ತ ನೆಲದಲ್ಲಿ ಬಿದ್ದುದನ್ನೂ, ಪತಿಯೂ ನೆಲದ ಮೇಲೊರಗಿ-ದುದನ್ನೂ ಕಂಡು ರಾಣಿವಾಸದ ಎಲ್ಲ ಸ್ತ್ರೀಯರೂ ಎಲ್ಲಕಡೆ ರೋದಿಸಿದರು.

ತತಸ್ತಮಂತಃಪುರನಾದಮುತ್ಥಿತಂ
ಸಮೀಕ್ಷ್ಯ ವೃದ್ಧಾಸ್ತರುಣಾಶ್ಚ ಮಾನವಾಃ ।
ಸ್ತ್ರಿಯಶ್ಚ ಸರ್ವಾ ರುರುದುಃ ಸಮಂತತಃ
ಪುರಂ ತದಾಸೀತ್ ಪುನರೇವ ಸಂಕುಲಮ್ ॥೩೪॥

ದಶರಥನ ಅಂತಃಪುರದಲ್ಲಿ ಹೀಗೆ ಅಳುವ ಶಬ್ದ ಎದ್ದಿದ್ದನ್ನು ಕಂಡು ವೃದ್ಧರು ತರುಣರೆನ್ನದೆ ಎಲ್ಲ ಸ್ತ್ರೀಪುರುಷರೂ ಎಲ್ಲೆಡೆ ರೋದನ ಮಾಡಿದರು. ನಗರವೇ ಆಗ ಪುನಃ ವ್ಯಾಕುಲಗೊಂಡಿತು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಐವತ್ತೇಳನೇ ಸರ್ಗ ಮುಗಿಯಿತು.

❖

ಅಷ್ಟಪಂಚಾಶಃ ಸರ್ಗಃ

ಸರ್ಗ – 58

ಸುಮಂತ್ರನು ಶ್ರೀರಾಮನ ಸಂದೇಶವನ್ನು ಅರುಹುವುದು.

ಪ್ರತ್ಯಾಶ್ವಸ್ತೋ ಯದಾ ರಾಜಾ ಮೋಹಾತ್ ಪ್ರತ್ಯಾಗತಸ್ಮೃತಿಃ ।
ಅಥಾಜುಹಾವ ತಂ ಸೂತಂ ರಾಮವೃತ್ತಾಂತಕಾರಣಾತ್ ॥೧॥

ಕೌಸಲ್ಯೆ ಸುಮಿತ್ರೆಯರ ಶೈತ್ಯೋಪಚಾರದಿಂದ ಮೂರ್ಛೆ ತಿಳಿದೆದ್ದು ದಶರಥನು ರಾಮನ ವೃತ್ತಾಂತವನ್ನು ತಿಳಿಯಲು ಸುಮಂತ್ರನನ್ನು ಕರೆಸಿಕೊಂಡ.

ಅಥ ಸೂತೋ ಮಹಾರಾಜಂ ಕೃತಾಂಜಲಿರುಪಸ್ಥಿತಃ ।
ರಾಮಮೇವಾನುಶೋಚಂತಂ ದುಃಖಶೋಕಸಮನ್ವಿತಮ್ ॥೨॥

ಸುಮಂತ್ರನು ಬಂದು ಮಹಾರಾಜನ ಬಳಿ ಕೈಮುಗಿದು ನಿಂತ. ಮಹಾರಾಜ ದುಃಖಶೋಕ ಯುಕ್ತನಾಗಿ ರಾಮನ ಬಗ್ಗೆಯೇ ಶೋಕಿಸಿದ.

ವೃದ್ಧಂ ಪರಮಸಂತಪ್ತಂ ನವಗ್ರಹಮಿವ ದ್ವಿಪಮ್ ।
ವಿನಿಃಶ್ವಸಂತಂ ಧ್ಯಾಯಂತಮಸ್ವಸ್ಥಮಿವ ಕುಂಜರಮ್ ॥೩॥

ಆಗತಾನೆ ಬಂಧನಕ್ಕೊಳಗಾಗಿ ಅಸ್ವಸ್ಥವಾದ ಆನೆಯಂತೆ ಪರಮ ಸಂತಾಪದಿಂದ ನಿಟ್ಟುಸಿರಿಡುತ್ತ, ತನ್ನ ಒಡನಾಡಿಗಳನ್ನು ನೆನೆವ ಆನೆಯಂತೆ ಧ್ಯಾನಮಗ್ನನಾಗಿ ಕುಳಿತು ಬಿಟ್ಟ ವೃದ್ಧನಾದ ಮಹಾರಾಜ.

ರಾಜಾ ತು ರಜಸಾ ಸೂತಂ ಧ್ವಸ್ತಾಂಗಂ ಸಮುಪಸ್ಥಿತಮ್ ।
ಅಶ್ರುಪೂರ್ಣಮುಖಂ ದೀನಮುವಾಚ ಪರಮಾರ್ತವತ್ ॥೪॥

ಪ್ರಯಾಣದಿಂದ ಮೈಯೆಲ್ಲ ದೂಳಿನಿಂದ ಮುಚ್ಚಿಹೋದ ಸುಮಂತ್ರ ಬಳಿಯಲ್ಲಿ ಬಂದು ಬಹಳ ಶೋಕದಿಂದ ದೈನ್ಯದಿಂದ ಕಣ್ಣೀರು ಸುರಿಸುತ್ತ ನಿಂತಾಗ ದಶರಥ ಮಾತನಾಡಲು ತೊಡಗಿದ.

ಕ್ವ ನು ವತ್ಸ್ಯತಿ ಧರ್ಮಾತ್ಮಾ ವೃಕ್ಷಮೂಲಮುಪಾಶ್ರಿತಃ ।
ಸೋಽತ್ಯಂತಸುಖಿತಃ ಸೂತ ಕಿಮಶಿಷ್ಯತಿ ರಾಘವಃ ॥೫॥

ಪರಮಸುಖಿಯಾಗಿದ್ದ ಧರ್ಮಾತ್ಮನಾದ ರಾಮ ಇನ್ನು ಯಾವ ಮರದ ಬುಡದಲ್ಲಿ ವಾಸಮಾಡುತ್ತಾನೆ, ಸುಮಂತ್ರ, ಅವನು ಏನನ್ನು ಉಣ್ಣುತ್ತಾನೆ?

ದುಃಖಸ್ಯಾನುಚಿತೋ ದುಃಖಂ ಸುಮಂತ್ರ ಶಯನೋಚಿತಃ ।
ಭೂಮಿಪಾಲಾತ್ಮಜೋ ಭೂಮೌ ಶೇತೇ ಕಥಮನಾಥವತ್ ॥೬॥

ವನವಾಸ ದುಃಖ ಉಣಲು ತಕ್ಕನವಲ್ಲ, ಮಿದುವಾದ ಹಾಸಿಗೆ ಮೇಲೇ ಮಲಗಲು ತಕ್ಕವನು, ರಾಜಕುಮಾರ ರಾಮ ಅನಾಥನಂತೆ ಬರಿನೆಲದ ಮೇಲೆ ದುಃಖದಿಂದ ಹೇಗೆ ಮಲಗುತ್ತಾನೆ?

ಯಂ ಯಾಂತಮನುಯಾಂತಿ ಸ್ಮ ಪದಾತಿರಥಕುಂಜರಾಃ ।
ಸ ವತ್ಸ್ಯತಿ ಕಥಂ ರಾಮೋ ವಿಜನಂ ವನಮಾಶ್ರಿತಃ ॥೭॥

ರಾಮ ವಿಹಾರಕ್ಕೆ ಹೊರಟರೆ ಅವನ ಹಿಂದೆ ಪದಾತಿ ರಥ ಗಜ ಸೈನ್ಯಗಳು ಹಿಂಬಾಲಿಸುತ್ತಿದ್ದುವು. ಅಂಥ ರಾಮನು ನಿರ್ಜನವಾದ ಅರಣ್ಯವನ್ನು ಸೇರಿ ಹೇಗೆ ವಾಸಮಾಡಬಲ್ಲ?

ವ್ಯಾಲೈರ್ಮೃಗೈರಾಚರಿತಂ ಕೃಷ್ಣಸರ್ಪನಿಷೇವಿತಮ್ ।
ಕಥಂ ಕುಮಾರೌ ವೈದೇಹ್ಯಾ ಸಾರ್ಧಂ ವನಮುಪಸ್ಥಿತೌ ॥೮॥

ಕ್ರೂರಮೃಗಗಳ ಸಂಚಾರದಿಂದ ಕೂಡಿದ, ಕೃಷ್ಣಸರ್ಪಗಳು ವಾಸಮಾಡುವ ಅರಣ್ಯವನ್ನು ಕುಮಾರರಾದ ರಾಮಲಕ್ಷ್ಮಣರು ಸೀತೆಯೊಂದಿಗೆ ಹೇಗೆ ಆಶ್ರಯಿಸಿದರು?

ಸುಕುಮಾರ್ಯಾ ತಪಸ್ವಿನ್ಯಾ ಸುಮಂತ್ರ ಸಹ ಸೀತಯಾ ।
ರಾಜಪುತ್ರೌ ಕಥಂ ಪದ್ಭ್ಯಾಮವರುಹ್ಯ ರಥಾದ್ಗತೌ ॥೯॥

ಸುಮಂತ್ರ, ರಾಜಕುಮಾರರು ಕಷ್ಟಕ್ಕೀಡಾದ ಸುಕುಮಾರಿಯಾದ ಸೀತೆಯೊಂದಿಗೆ ರಥದಿಂದಿಳಿದು ಕಾಲ್ನಡಿಗೆಯಿಂದ ಹೇಗೆ ಕಾಡಿಗೆ ಹೋದರು?

ಸಿದ್ಧಾರ್ಥಃ ಖಲು ಸೂತ ತ್ವಂ ಯೇನ ದೃಷ್ಟೌ ಮಮಾತ್ಮಜೌ ।
ವನಾಂತಂ ಪ್ರವಿಶಂತೌ ತಾವಶ್ವಿನಾವಿವ ಮಂದರಮ್ ॥೧೦॥

ಸುಮಂತ್ರ, ನೀನೇ ನಿಜವಾಗಿ ಧನ್ಯ. ಮಂದರ ಪರ್ವತವನ್ನು ಅಶ್ವಿನೀ ದೇವತೆಗಳು ಪ್ರವೇಶಿಸುವಂತೆ ನನ್ನ ಮಕ್ಕಳು ಅರಣ್ಯಪ್ರದೇಶವನ್ನು ಪ್ರವೇಶಿಸಿದ್ದನ್ನು ಕಣ್ಣಾರೆ ಕಂಡು ಆನಂದಿಸಿದೆ.

ಅಶ್ವಿನೀದೇವತೆಗಳು ದೇವ ವೈದ್ಯರು. ಮಂದರಪರ್ವತವು ಕ್ಷೀರಸಮುದ್ರ ಮಥನದಿಂದ 'ಅಮೃತ' ಎಂಬ ದಿವ್ಯರಸಾಯನೌಷಧವನ್ನು ಉತ್ಪಾದಿಸಿದ, ಎಲ್ಲ ಗಿಡಮೂಲಿಕೆಗಳಿಗೆ ಆಕರವಾದ ಬೆಟ್ಟ. ಆ ಗಿಡಮೂಲಿಕೆಗಳನ್ನು ಅರಿಸಿ ತಂದು ಕ್ಷೀರಸಮುದ್ರದಲ್ಲಿ ಹಾಕಿ ಮಥನ ಮಾಡಿದಾಗಲೇ ಹಾಲಿನೊಂದಿಗೆ ಸೇರಿ ಕ್ವಾಥವಾಗಿ ಪರಿಣಾಮಗೊಂಡು ಅಮೃತವೆನಿಸಿದುವು. ಇದು,

'ಕ್ಷಿಪ್ತ್ವಾ ಕ್ಷೀರೋದಧೌ ಸರ್ವಾ ವೀರುತ್ ತೃಣ ಲತೌಷಧೀಃ ।'

(ಭಾಗವತ 8.6.22)

ಎಂದು ಭಾಗವತದಲ್ಲಿ ಉಕ್ತವಾಗಿದೆ. ಈ ಗಿಡಮೂಲಿಕೆಗಳನ್ನು ಅರಿಸಿ ತಂದುದು ಪ್ರಾಯಃ ಈ ದೇವವೈದ್ಯರಾದ ಅತಿ ಸುಂದರ ತರುಣರಾದ ಅಶ್ವಿನೀ-ದೇವತೆಗಳು. ಈ ಕಾರ್ಯಕ್ಕಾಗಿ ಅವರು ಮಂದರಪರ್ವತ ಪ್ರದೇಶದಲ್ಲಿ ಪ್ರವೇಶ ಮಾಡಿದ್ದರಿಂದ ಅವರೇ ಅತಿಸುಂದರ ತರುಣರಾದ ರಾಮಲಕ್ಷ್ಮಣರ ವನಪ್ರವೇಶಕ್ಕೆ ನಿದರ್ಶನವಾಗಿ ವಾಲ್ಮೀಕಿಗೆ ಕಂಡಿರಬಹುದು.

ಕಿಮುವಾಚ ವಚೋ ರಾಮಃ ಕಿಮುವಾಚ ಚ ಲಕ್ಷ್ಮಣಃ ।
ಸುಮಂತ್ರ ವನಮಾಸಾದ್ಯ ಕಿಮುವಾಚ ಚ ಮೈಥಿಲೀ ॥೧೧॥

ಸುಮಂತ್ರ, ಕಾಡಿಗೆ ಹೊರಡುತ್ತ ರಾಮನೇನೆಂದ, ಲಕ್ಷ್ಮಣನೇನೆಂದ? ಸೀತೆ ಏನೆಂದಳು?

ಆಸಿತಂ ಶಯಿತಂ ಭುಕ್ತಂ ಸೂತ ರಾಮಸ್ಯ ಕೀರ್ತಯ ।
ಜೀವಿಷ್ಯಾಮ್ಯಹಮೇತೇನ ಯಯಾತಿರಿವ ಸಾಧುಷು ॥೧೨॥

ಸುಮಂತ್ರ! ರಾಮನು ಹೇಗೆ ಕುಳಿತ, ಹೇಗೆ ಮಲಗಿದ, ಹೇಗೆ ಉಂಡ ಎಂಬುದನ್ನು ಎಲ್ಲವನ್ನೂ ಹೇಳು. ಅದನ್ನೆ ಚಿಂತಿಸುತ್ತೇನೆ. ಅದರ ಬಲದಿಂದಲೇ ಸಜ್ಜನರ ನಡುವೆ ಯಯಾತಿಯಂತೆ ನಾನು ಬದುಕಿರುತ್ತೇನೆ.

ಯದ್ಯಪಿ ಯಯಾತಿರಾಜ ಶುಕ್ರಾಚಾರ್ಯರ ಶಾಪದಿಂದ ಮುಪ್ಪನ್ನು ಹೊಂದಿದರೂ ಅದನ್ನು ಮಗನಾದ ಪೂರುವಿಗೆ ಕೊಟ್ಟು ಅವನ ಯೌವನವನ್ನು ತಾನು ಸ್ವೀಕರಿಸಿ, ಕೆಲಕಾಲ ವಿಷಯಸುಖ ಅನುಭವಿಸಿದ. ಆದರೂ ಎಷ್ಟು ಅನುಭವಿಸಿದರೂ ಸಾಕೆನಿಸದಿದ್ದಾಗ, ತಿರುಗಿ ಪೂರುವಿಗೇ ಅವನ ಯೌವನವನ್ನು ಹಿಂತಿರುಗಿಸಿ, ಮುಪ್ಪನ್ನು ಪಡೆದು, ಕಾಡಿಗೆ ಹೋಗಿ ಪರಬ್ರಹ್ಮಧ್ಯಾನದಲ್ಲಿ ಜೀವನ್ಮುಕ್ತಿಯನ್ನು ಗಳಿಸಿದ. ದಶರಥ ತಾನೂ ಹಾಗೇ ರಾಮಧ್ಯಾನದಲ್ಲಿ ಜೀವನ್ಮುಕ್ತಿಯನ್ನು ಅನುಭವಿಸುವೆನೆಂದುಕೊಂಡ.

ಇತಿ ಸೂತೋ ನರೇಂದ್ರೇಣ ಚೋದಿತಃ ಸಜ್ಜಮಾನಯಾ ।
ಉವಾಚ ವಾಚಾ ರಾಜಾನಂ ಸ ಬಾಷ್ಪಪರಿರಬ್ಧಯಾ ॥೧೩॥

ಹೀಗೆ ದಶರಥ ಸುಮಂತ್ರನಿಗೆ ಹೇಳಿದಾಗ, ಸುಮಂತ್ರ ಕಣ್ಣೀರಿಂದ ಗದ್ಗದವಾದ ಧ್ವನಿಯಿಂದ ತಡವರಿಸುತ್ತ ರಾಜನಿಗೆ ಹೇಳತೊಡಗಿದ.

ಅಬ್ರವೀನ್ಮಾಂ ಮಹಾರಾಜ ಧರ್ಮಮೇವಾನುಪಾಲಯನ್ ।
ಅಂಜಲಿಂ ರಾಘವಃ ಕೃತ್ವಾ ಶಿರಸಾಭಿಪ್ರಣಮ್ಯ ಚ ॥೧೪॥

ಮಹಾರಾಜ, ರಾಮನು ನಿನಗೆ ಕೈಮುಗಿದು ಶಿರಬಾಗಿ ನಮಿಸಿ ಧರ್ಮಸಮ್ಮತ-ವಾದ ರೀತಿಯಿಂದ ನನಗೆ ಈ ಮಾತ್ರನ್ನು ನುಡಿದ.

ಸೂತ ಮದ್ವಚನಾತ್ತಸ್ಯ ತಾತಸ್ಯ ವಿದಿತಾತ್ಮನಃ ।
ಶಿರಸಾ ವಂದನೀಯಸ್ಯ ವಂದ್ಯೌ ಪಾದೌ ಪುನಃ ಪುನಃ ॥೧೫॥

'ಸುಮಂತ್ರ! ನೀನು ನನ್ನ ಪರವಾಗಿ ರಾಜನಿಗೆ ಕೈಮುಗಿದು ತಲೆಬಾಗಿ ನಮಿಸಿ ಧರ್ಮಾತ್ಮನೆಂದು ಪ್ರಸಿದ್ಧನೂ ತಲೆಬಾಗಿ ನಮಿಸಲು ಅರ್ಹನೂ ಆದ ತಂದೆಯ ಪಾದಗಳನ್ನು 'ರಾಮ ಅಭಿವಾದನ ಮಾಡುತ್ತಿದ್ದಾನೆ' ಎಂದು ನನ್ನ ಪರವಾಗಿ ಹೇಳುತ್ತ ಪುನಃಪುನಃ ಅಭಿವಾದನ ಮಾಡು.

ಸರ್ವಮಂತಃಪುರಂ ವಾಚ್ಯಂ ಸೂತ ಮದ್ವಚನಾತ್ತ್ವಯಾ ।
ಆರೋಗ್ಯಮವಿಶೇಷೇಣ ಯಥಾರ್ಹಮಭಿವಾದನಮ್ ॥೧೬॥

ಅಂತಃಪುರದಲ್ಲಿರುವ ಎಲ್ಲ ಮಾತೆಯರಿಗೂ ಏನೂ ವ್ಯತ್ಯಾಸಮಾಡದೆ 'ರಾಮ ನಿಮ್ಮ ಆರೋಗ್ಯವನ್ನು ವಿಚಾರಿಸುತ್ತಿದ್ದಾನೆ. ಯಥಾ ಯೋಗ್ಯವಾಗಿ ಎಲ್ಲರಿಗೂ ಅಭಿವಾದನ ಮಾಡುತ್ತಿದ್ದಾನೆ' ಎಂದು ನೀನು ನನ್ನ ಪರವಾಗಿ ಹೇಳಬೇಕು.

ಮಾತಾ ಚ ಮಮ ಕೌಸಲ್ಯಾ ಕುಶಲಂ ಚಾಭಿವಾದನಮ್ ।
ಅಪ್ರಮಾದಂ ಚ ವಕ್ತವ್ಯಾ ಬ್ರೂಯಾಶ್ಚೈನಾಮಿದಂ ವಚಃ ॥೧೭॥

ನನ್ನ ಮಾತೆಯಾದ ಕೌಸಲ್ಯೆಗೂ 'ರಾಮನು ನಿನ್ನ ಆರೋಗ್ಯವನ್ನು ವಿಚಾರಿಸು-ತ್ತಿದ್ದಾನೆ. ಅಭಿವಾದನ ಮಾಡುತ್ತಿದ್ದಾನೆ. ಧರ್ಮಾಚರಣೆಯಲ್ಲಿ ಎಚ್ಚರ ದಿಂದಿರಲು ಕೇಳಿಕೊಳ್ಳುತ್ತಿದ್ದಾನೆ 'ಎಂದು ನನ್ನ ಪರವಾಗಿ ಹೇಳಬೇಕು. ಮತ್ತು ಈ ಮಾತನ್ನು ಹೇಳಬೇಕು.

ಧರ್ಮನಿತ್ಯಾ ಯಥಾಕಾಲಮಗ್ನ್ಯಾಗಾರಪರಾ ಭವ ।
ದೇವಿ ದೇವಸ್ಯ ಪಾದೌ ಚ ದೇವವತ್ ಪರಿಪಾಲಯ ॥೧೮॥

ದೇವಿ, ನೀನು ಪತಿದೇವನ ಪಾದಗಳನ್ನು ದೇವರಂತೆ ಸೇವಿಸು. ಧರ್ಮವನ್ನು ತಪ್ಪದೆ ಆಚರಿಸು. ಕಾಲಕಾಲಕ್ಕೆ ಅಗ್ನಿಶಾಲೆಯಲ್ಲಿ ಅಗ್ನಿಯ ಆರಾಧನೆ ಮಾಡು.

ಅಭಿಮಾನಂ ಚ ಮಾನಂ ಚ ತ್ಯಕ್ತ್ವಾ ವರ್ತಸ್ವ ಮಾತೃಷು ।
ಅನು ರಾಜಾನಮಾರ್ಯಾಂ ಚ ಕೈಕೇಯಿಮಂಬ ಕಾರಯ ॥೧೯॥

ಸವತಿಯರ ನಡುವೆ ತಾನು ಹಿರಿಯಳೆನ್ನುವ ಬಿಗುಮಾನವನ್ನೂ ಎಲ್ಲರೂ ತನ್ನನ್ನು ಓಲೈಸಬೇಕೆನ್ನುವ ಆಗ್ರಹವನ್ನೂ ಬಿದಿಗಿಟ್ಟು, ಮಹಾರಾಜನ ಅನಂತರ, ಕೈಕೇಯಿಯನ್ನು ಅಷ್ಟೇ ಆದರದಿಂದ ಕಾಣು.

ಕುಮಾರೇ ಭರತೇ ವೃತ್ತಿರ್ವರ್ತಿತವ್ಯಾ ಚ ರಾಜವತ್ ।
ಅಪ್ಯಜ್ಯೇಷ್ಠಾ ಹಿ ರಾಜಾನೋ ರಾಜಧರ್ಮಮನುಸ್ಮರ ॥೨೦॥

ಕುಮಾರ ಭರತನನ್ನು ರಾಜನಂತೇ ಗೌರವದಿಂದ ಕಾಣು. ರಾಜರು ವಯಸ್ಸಿನಲ್ಲಿ ಸಣ್ಣವರೇ ಆದರೂ ಅವರನ್ನು ಗೌರವದಿಂದಲೇ ಕಾಣಬೇಕು. ರಾಜಧರ್ಮ ವನ್ನು ಸ್ಮರಿಸಬೇಕು. ಅದನ್ನು ಎಂದೂ ಮರೆಯಬಾರದು.

ಭರತಃ ಕುಶಲಂ ವಾಚ್ಯೋ ವಾಚ್ಯೋ ಮದ್ವಚನೇನ ಚ ।
ಸರ್ವಾಸ್ವೇವ ಯಥಾನ್ಯಾಯಂ ವೃತ್ತಿಂ ವರ್ತಸ್ವ ಮಾತೃಷು ॥೨೧॥

ಭರತನಿಗೂ ನನ್ನ ಪರವಾಗಿ ಯೋಗಕ್ಷೇಮಗಳನ್ನು ವಿಚಾರಿಸು. ನನ್ನ ಪರವಾಗಿ ಈ ಮಾತನ್ನು ಹೇಳು. ಎಲ್ಲ ಮಾತೆಯರಲ್ಲಿಯೂ ಯಥಾಯೋಗ್ಯವಾಗಿ ಸಮಾನ-ವಾಗಿ ನಡೆದುಕೊಳ್ಳು.

ವಕ್ತವ್ಯಶ್ಚ ಮಹಾಬಾಹುರಿಕ್ಷ್ವಾಕುಕುಲನಂದನಃ ।
ಪಿತರಂ ಯೌವರಾಜ್ಯಸ್ಥೋ ರಾಜ್ಯಸ್ಥಮನುಪಾಲಯ ॥೨೨॥

ಮಹಾಬಾಹುವಾದ ಭರತನಿಗೆ ಈ ಮಾತನ್ನು ಹೇಳು, ರಾಜನಾಗಿರುವ ತಂದೆಯನ್ನು ಯುವರಾಜನಾಗಿ ಸೇವಿಸುತ್ತಿರು.

ಅತಿಕ್ರಾಂತವಯಾ ರಾಜಾ ಮಾ ಸ್ಮೈನಂ ವ್ಯಪರೋರುಧಃ ।
ಕುಮಾರರಾಜ್ಯೇ ಜೀವ ತ್ವಂ ತಸ್ಯೈವಾಜ್ಞಾಪ್ರವರ್ತನಾತ್ ॥೨೩॥

'ರಾಜನು ಯೌವನದ ವಯಸ್ಸನ್ನು ದಾಟಿದ್ದಾನೆ. ಅವನ ಅಧಿಕಾರವನ್ನು ಕಸಿದುಕೊಳ್ಳಬೇಡ. ದೇಶದಲ್ಲಿ ಅವನ ಆಜ್ಞೆಯನ್ನೇ ಎಲ್ಲೆಡೆ ನಡೆಯುವಂತೆ ಮಾಡು. ನೀನು ಯುವರಾಜನಾಗಿಯೇ ಮೆರೆಯುತ್ತಿರು'.

ಅಬ್ರವೀಚ್ಚಾಪಿ ಮಾಂ ಭೂಯೋ ಭೃಶಮಶ್ರೂಣಿ ವರ್ತಯನ್ ।
ಮಾತೇವ ಮಮ ಮಾತಾ ತೇ ದ್ರಷ್ಟವ್ಯಾ ಪುತ್ರಗರ್ಧಿನೀ ॥೨೪॥

ಶ್ರೀರಾಮ ಹೀಗೆ ಹೇಳಿ, ಮತ್ತೂ ಕಣ್ಣುಗಳಲ್ಲಿ ಧಾರಾಕಾರವಾಗಿ ಕಣ್ಣೀರು ಸುರಿಸುತ್ತ, ಹೇಳಿದ, 'ಭರತ, ಪುತ್ರವತ್ಸೆಯಾದ ನನ್ನ ತಾಯಿಯನ್ನೂ ನಿನ್ನ ತಾಯಿಯಂತೆಯೇ ನೀನು ಕಾಣಬೇಕು.

ಇತ್ಯೇವಂ ಮಾಂ ಮಹಾರಾಜ ಬ್ರುವನ್ನೇನ ಮಹಾಯಶಾಃ ।
ರಾಮೋ ರಾಜೀವತಾಮ್ರಾಕ್ಷೋ ಭೃಶಮಶ್ರೂಣ್ಯವರ್ತಯತ್ ॥೨೫॥

ಸುಮಂತ್ರ ನುಡಿದ, 'ಹೀಗೆ ಹೇಳುತ್ತಲೇ, ಮಹಾರಾಜ, ಮಹಾಯಶಸ್ವಿಯಾದ ಕಮಲದಂತೆ ಕೆಂಪಾದ ಕಣ್ಣುಳ್ಳ ಶ್ರೀರಾಮ ಧಾರಾಕಾರವಾಗಿ ಕಣ್ಣೀರು ಸುರಿಸಿದ'.

ಲಕ್ಷ್ಮಣಸ್ತು ಸುಸಂಕ್ರುದ್ಧೋ ನಿಃಶ್ವಸನ್ ವಾಕ್ಯಮಬ್ರವೀತ್ ।
ಕೇನಾಯಮಪರಾಧೇನ ರಾಜಪುತ್ರೋ ವಿವಾಸಿತಃ ॥೨೬॥

'ಲಕ್ಷ್ಮಣನು ಮಾತ್ರ ಬಲುಕೋಪದಿಂದ ಬುಸುಗುಟ್ಟುತ್ತ ನುಡಿದ, 'ರಾಜನೆ, ನೀನು ಯಾವ ತಪ್ಪಿಗಾಗಿ ಈ ರಾಜಕುಮಾರ ರಾಮನನ್ನು ಕಾಡಿಗೆ ಅಟ್ಟಿದೆ?' ಎಂದು.

ರಾಜ್ಞಾ ತು ಖಲು ಕೈಕೇಯ್ಯಾ ಲಘು ತ್ವಾಶ್ರಿತ್ಯ ಶಾಸನಮ್ ।
ಕೃತಂ ಕಾರ್ಯಮಕಾರ್ಯಂ ವಾ ವಯಂ ಯೇನಾಭಿಪೀಡಿತಾಃ ॥೨೭॥

'ರಾಜಾ ದಶರಥನು ತುಚ್ಛವಾದ ಕೈಕೇಯಿಯ ಆಜ್ಞೆಗೆ ತಲೆಬಾಗಿ ಹೀಗೆ ಮಾಡಿದ್ದು ಧರ್ಮವೆ ಅಧರ್ಮವೆ ಏನಿದ್ದರೂ ಅದರಿಂದ ನಾವಂತೂ ಬಹಳ ಕಷ್ಟಕ್ಕೇ ಈಡಾಗಿದ್ದೇವೆ.

ಯದಿ ಪ್ರವ್ರಾಜಿತೋ ರಾಮೋ ಲೋಭಕಾರಣಕಾರಿತಮ್ ।
ವರದಾನನಿಮಿತ್ತಂ ವಾ ಸರ್ವಥಾ ದುಷ್ಕೃತಂ ಕೃತಮ್ ॥೨೮॥

ಕೈಕೇಯಿಗೆ ರಾಜ್ಯದ ಆಸೆ ಇದ್ದಿದ್ದರಿಂದಾಗಲೀ, ಅವಳಿಗೆ ತಾನು ವರ ಕೊಟ್ಟಿದ್ದ–

ರಿಂದಾಗಲಿ ರಾಮನನ್ನು ರಾಜ ಕಾಡಿಗೆ ಅಟ್ಟಿದ್ದರೆ ಅದು ಸರ್ವಥಾ ದುಷ್ಕಾರ್ಯವೇ ಸರಿ.

ರಾಜ್ಯದಾಸೆ ಕೈಕೇಯಿಗೆ ಇದ್ದರೆ ದಶರಥ ಅವಳನ್ನು ಶಿಕ್ಷಿಸಬಹುದಿತ್ತು. ಪತಿಗೆ ಸತಿಯ ಮೇಲೆ ಅಧಿಕಾರವಿದೆ. ತಾನು ಮಾತು ಕೊಟ್ಟಿದ್ದೇನೆ ಎನ್ನುವುದಾದರೆ, ರಾಜ್ಯವನ್ನೇ ಕೊಡುವೆನೆಂದೇನೂ ವಿಶೇಷವಾಗಿ ಮಾತು ಕೊಟ್ಟರಲಿಲ್ಲ. ಬೇರೇ-ನಾದರೂ ಕೇಳು ಎನ್ನಬಹುದಾಗಿತ್ತು. ಎಂದು ಲಕ್ಷ್ಮಣನ ವಾದ. ವಸ್ತುತಃ ಅವನು ವಾದ ಮಾಡುತ್ತಿಲ್ಲ. ರಾಮನಿಗೆ ವನವಾಸವಾಯಿತೆಂದು ವಿಲಾಪ ಮಾಡುತ್ತಿದ್ದಾನೆ. ಆದರೆ 'ಏನು ಬೇಕಾದರೂ ಕೇಳು' ಎಂದು ಹಿಂದೆಯೇ ಎರಡು ವರ ಕೊಟ್ಟಿದ್ದ-ರಿಂದ ಈಗ ಬೇರೇನಾದರೂ ಕೇಳು ಎನ್ನಲು ಅವಕಾಶವಿಲ್ಲ.

ಇದಂ ತಾವದ್ಯಥಾಕಾಮಮೀಶ್ವರಸ್ಯ ಕೃತೇ ಕೃತಮ್ ।
ರಾಮಸ್ಯ ತು ಪರಿತ್ಯಾಗೇ ನ ಹೇತುಮುಪಲಕ್ಷಯೇ ॥೨೯॥

ದೈವಪ್ರೇರಣೆಯಿಂದಲೆ ದೈವೇಚ್ಛೆಗನುಸಾರವಾಗಿ ಹೀಗೆ ಮಾಡಿದ್ದರೂ ರಾಮ-ನನ್ನು ಪರಿತ್ಯಾಗ ಮಾಡಲು ಅವನಲ್ಲಿ ಏನು ದೋಷವಿತ್ತೆಂಬುದು ನನಗೆ ಕಾಣುತ್ತಿಲ್ಲ. ನಿರಪರಾಧಿಯಾದ ಜ್ಯೇಷ್ಠಪುತ್ರನನ್ನು ಪರಿತ್ಯಾಗ ಮಾಡಿದ್ದು ಪಾಪಕೃತ್ಯವೇ ಸರಿ.

ಅಸಮೀಕ್ಷ್ಯ ಸಮಾರಾಬ್ಧಂ ವಿರುದ್ಧಂ ಬುದ್ಧಿಲಾಘವಾತ್ ।
ಜನಯಿಷ್ಯತಿ ಸಂಕ್ರೋಶಂ ರಾಘವಸ್ಯ ವಿವಾಸನಮ್ ॥೩೦॥

ಬುದ್ಧಿಹೀನತೆಯಿಂದ ಚೆನ್ನಾಗಿ ಆಲೋಚಿಸದೇ ಹೀಗೆ ಮಾಡಿದ್ದು ಧರ್ಮ ವಿರುದ್ಧ. ಅದರಿಂದ ರಾಮನನ್ನು ಕಾಡಿಗೆ ಅಟ್ಟಿದ್ದು. ಇಹಪರಗಳಲ್ಲಿ ದುಃಖ ಕಾರಣವೆ.

ಅಹಂ ತಾವನ್ಮಹಾರಾಜೇ ಪಿತೃತ್ವಂ ನೋಪಲಕ್ಷಯೇ ।
ಭ್ರಾತಾ ಭರ್ತಾ ಚ ಬಂಧುಶ್ಚ ಪಿತಾ ಚ ಮಮ ರಾಘವಃ ॥೩೧॥

ಸುಮಂತ್ರ, ನಾನು ಮಹಾರಾಜನಲ್ಲಿ ಪಿತನನ್ನೂ ಗುರುವನ್ನೂ ಕಾಣುವುದಿಲ್ಲ. ಭ್ರಾತನಾದ ರಾಮನೇ ನನಗೆ ಪಿತನೂ ಗುರುವೂ ಬಂಧುವೂ ಎಂದುಕೊಳ್ಳುತ್ತೇನೆ.

ಸರ್ವಲೋಕಪ್ರಿಯಂ ತ್ಯಕ್ತ್ವಾ ಸರ್ವಲೋಕಹಿತೇ ರತಮ್ ।
ಸರ್ವಲೋಕಂ ವಿರುಧ್ಯೇಮಂ ಕಥಂ ರಾಜಾ ಭವಿಷ್ಯಸಿ ॥೩೨॥

ಸರ್ವಲೋಕಪ್ರಿಯನಾದ ಸರ್ವಲೋಕಹಿತಕಾರಿಯಾದ ರಾಮನನ್ನು ಪರಿತ್ಯಾಗ ಮಾಡಿ ಈ ಸರ್ವಲೋಕದ ವಿರೋಧ ಕಟ್ಟಿಕೊಂಡು ಹೇಗೆ ರಾಜನೆನಿಸುವೆ?

ಸರ್ವಪ್ರಜಾಭಿರಾಮಂ ಹಿ ರಾಮಂ ಪ್ರವ್ರಾಜ್ಯ ಧಾರ್ಮಿಕಂ ।
ಸರ್ವಲೋಕಂ ವಿರುಧ್ಯೇಮಂ ಕಥಂ ರಾಜಾ ಭವಿಷ್ಯಸಿ ॥೩೩॥

ಸರ್ವ ಪ್ರಜೆಗಳಿಗೂ ಸುಖದಾಯಕನಾದ ಧಾರ್ಮಿಕನಾದ ರಾಮನನ್ನು ಕಾಡಿಗೆ ಅಟ್ಟುವ ಮೂಲಕ ಸರ್ವಪ್ರಜೆಗಳ ವಿರೋಧ ಮಾಡಿ ಹೇಗೆ ರಾಜನೆನಿಸುವೆ?

ಜಾನಕೀ ತು ಮಹಾರಾಜ ನಿಃಶ್ವಸಂತೀ ತಪಸ್ವಿನೀ ।
ಭೂತೋಪಹತಚಿತ್ತೇವ ವಿಷ್ಠಿತಾ ವಿಸ್ಮಿತಾ ಸ್ಥಿತಾ ॥೩೪॥

ಲಕ್ಷ್ಮಣ ಹೀಗೆ ಹೇಳುತ್ತಿದ್ದಾಗ, ಮಹಾರಾಜ, ಪಾಪ, ಕಷ್ಟದಲ್ಲಿ ಸಿಲುಕಿ ಕೊಂಡು ಶೋಚನೀಯಳಾದ ಸೀತೆ ಭೂತಪೀಡೆಯಿಂದ ಬುದ್ಧಿಸ್ವಾಸ್ಥ್ಯವನ್ನು ಕಳೆದು-ಕೊಂಡವಳಂತೆ ದಿಙ್ಮೂಢಳಾಗಿ ನಿಟ್ಟುಸಿರಿಡುತ್ತ ಸುಮ್ಮನೇ ನಿಂತಿದ್ದಳು.

ಅದೃಷ್ಟಪೂರ್ವವ್ಯಸನಾ ರಾಜಪುತ್ರೀ ಯಶಸ್ವಿನೀ ।
ತೇನ ದುಃಖೇನ ರುದತೀ ನೈವ ಮಾಂ ಕಿಂಚಿದಬ್ರವೀತ್ ॥೩೫॥

ಯಶಸ್ವಿನಿ ರಾಜಕುಮಾರಿ ಸೀತೆ ಇಂಥ ಕಷ್ಟವನ್ನು ಹಿಂದೆ ಕಂಡವಳಲ್ಲ. ಆದರಿಂದ ದುಃಖದಿಂದ ಕಣ್ಣೀರಿಟ್ಟಳು ಹೊರತು ನಿನಗೆ ತನ್ನ ಸಂದೇಶವನ್ನು ಏನೂ ಹೇಳಲಿಲ್ಲ.

ಉದ್ವೀಕ್ಷಮಾಣಾ ಭರ್ತಾರಂ ಮುಖೇನ ಪರಿಶುಷ್ಯತಾ ।
ಮುಮೋಚ ಸಹಸಾ ಬಾಷ್ಪಂ ಮಾಂ ಪ್ರಯಾಂತಮುದೀಕ್ಷ್ಯ ಸಾ ॥೩೬॥

ನಾನು ಹೊರಟಿದ್ದನ್ನು ನೋಡಿ ಸೀತೆ ಬಾಡಿದ ಮುಖದಿಂದ ಪತಿಯನ್ನು ನೋಡುತ್ತ ಧಾರಾಕಾರವಾಗಿ ಕಣ್ಣೀರು ಸುರಿಸಿದಳು.

ತಥೈವ ರಾಮೋಽಶ್ರುಮುಖಃ ಕೃತಾಂಜಲಿಃ
ಸ್ಥಿತೋಽಭವಲ್ಲಕ್ಷ್ಮಣಬಾಹುಪಾಲಿತಃ ।
ತಥೈವ ಸೀತಾ ರುದತೀ ತಪಸ್ವಿನೀ
ನಿರೀಕ್ಷತೇ ರಾಜರಥಂ ತಥೈವ ಮಾಮ್ ॥೩೭॥

ರಾಮನೂ ಹಾಗೇ ಲಕ್ಷ್ಮಣನ ಬಾಹು ಪಾಲಿತನಾಗಿ ಕೈಮುಗಿದುಕೊಂಡು ಕಣ್ಣೀರಿಡುತ್ತ ನಿಂತ. ನೋವಿನಿಂದ ಸೀತೆಯೂ ಅಳುತ್ತ ರಾಜರಥವನ್ನೂ ನನ್ನನ್ನು ನೋಡುತ್ತ ನಿಂತಳು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಐವತ್ತೆಂಟನೇ ಸರ್ಗ ಮುಗಿಯಿತು.

ಏಕೋನಷಷ್ಟಿತಮಃ ಸರ್ಗಃ

ಸರ್ಗ – 59

ದಶರಥನ ವಿಲಾಪ

ಇತಿ ಬ್ರುವಂತಂ ತಂ ಸೂತಂ ಸುಮಂತ್ರಂ ಮಂತ್ರಿಸತ್ತಮಮ್ ।
ಬ್ರೂಹಿ ಶೇಷಂ ಪುನರಿತಿ ರಾಜಾ ವಚನಮಬ್ರವೀತ್ ॥೧॥

ಒಳ್ಳೆಯ ಮಂತ್ರಿಯೂ ಆದ ಸಾರಥಿ ಸುಮಂತ್ರ ಹೀಗೆ ರಾಮನ ಸಂದೇಶವನ್ನು ಹೇಳುವಾಗ, 'ಇನ್ನು ಮುಂದೆ ಹೇಳಬೇಕಾಗಿರುವುದನ್ನು ಹೇಳು' ಎಂದ ದಶರಥ.

ತಸ್ಯ ತದ್ವಚನಂ ಶ್ರುತ್ವಾ ಸುಮಂತ್ರೋ ಬಾಷ್ಪವಿಕ್ಲವಃ ।
ಕಥಯಾಮಾಸ ಭೂಯೋಽಪಿ ರಾಮಸಂದೇಶವಿಸ್ತರಮ್ ॥೨॥

ರಾಜನ ಆ ಮಾತನ್ನು ಕೇಳಿ ಸುಮಂತ್ರ ಕಣ್ಣೀರಿಡುತ್ತ ಇನ್ನೂ ಮುಂದೆ ರಾಮನ ಸಂದೇಶವನ್ನು ವಿಸ್ತಾರವಾಗಿ ಹೇಳಿದ.

ಜಟಾಃ ಕೃತ್ವಾ ಮಹಾರಾಜ ಚೀರವಲ್ಕಲಧಾರಿಣೌ ।
ಗಂಗಾಮುತ್ತೀರ್ಯ ತೌ ವೀರೌ ಪ್ರಯಾಗಾಭಿಮುಖೌ ಗತೌ ॥೩॥

ಮಹಾರಾಜ, ವೀರ ರಾಮಲಕ್ಷ್ಮಣರಿಬ್ಬರೂ ಜಟಾಧಾರಿಗಳಾಗಿ ನಾರುಡೆ ಉಟ್ಟು ಗಂಗೆಯನ್ನು ದಾಟಿ ಪ್ರಯಾಗದ ಕಡೆಗೆ ಪ್ರಯಾಣ ಮಾಡಲು ತೊಡಗಿದರು.

ಅಗ್ರತೋ ಲಕ್ಷ್ಮಣೋ ಯಾತಿ ಪಾಲಯಾನ್ ರಘುನಂದನಮ್ ।
ಅನಂತರಂ ಚ ಸೀತಾಥ ರಾಘವೋ ರಘುನಂದನಃ ॥೪॥

ಮುಂದಿನಿಂದ ಲಕ್ಷ್ಮಣನು ರಾಮನನ್ನು ರಕ್ಷಿಸುತ್ತ ನಡೆದ. ಬಳಿಕ ಸೀತೆ, ಬಳಿಕ ರಘುನಂದನ ರಾಮ, ಹೀಗೆ ನಡೆದರು.

ತಾಂಸ್ತಥಾ ಗಚ್ಛತೋ ದೃಷ್ಟ್ವಾ ನಿವೃತ್ತೋಽಸ್ಮ್ಯವಶಸ್ತದಾ ॥೫॥

ಅವರು ಹಾಗೆ ಹೋಗುವುದನ್ನು ಕಂಡು ಪರವಶನಾಗಿ ನಾನು ಹಿಂತಿರುಗಿದೆ.

ಮಮ ತ್ವಶ್ವಾ ನಿವೃತ್ತಸ್ಯ ನ ಪ್ರಾವರ್ತಂತ ವರ್ತ್ಮನಿ ।
ಉಷ್ಣಮಶ್ರು ಪ್ರಮುಂಚಂತೋ ರಾಮೇ ಸಂಪ್ರಸ್ಥಿತೇ ವನಮ್ ॥೬॥

ನಾನು ಹಿಂತಿರುಗಿದರೂ ನನ್ನ ಕುದುರೆಗಳು ದಾರಿ ತುಳಿಯಲು ನಿರಾಕರಿಸಿ-ದುವು. ರಾಮ ಕಾಡಿಗೆ ಹೊರಟಿದ್ದನ್ನು ಕಂಡು ನನ್ನ ಕುದುರೆಗಳು ಬಿಸಿಕಣ್ಣೀರನ್ನು ಸುರಿಸುತ್ತ, ಹಿಂದಿನಂತೆ ಉತ್ಸಾಹದಿಂದ ಚಲಿಸಲಿಲ್ಲ.

ಉಭಾಭ್ಯಾಂ ರಾಜಪುತ್ರಾಭ್ಯಾಮಥ ಕೃತ್ವಾಹಮಂಜಲಿಮ್ ।
ಪ್ರಸ್ಥಿತೋ ರಥಮಾಸ್ಥಾಯ ತದ್ದುಃಖಮಪಿ ಧಾರಯನ್ ॥೭॥

ನಾನೂ ಕೂಡ ಇಬ್ಬರು ರಾಜಕುಮಾರರಿಗೂ ಕೈಮುಗಿದು ರಥವನ್ನೇರಿ ಅವರ ವಿಯೋಗ ದುಃಖವನ್ನು ಹೊತ್ತೇ ಹೊರಟೆ.

ಗುಹೇನ ಸಾರ್ಧಂ ತತ್ರೈವ ಸ್ಥಿತೋಽಸ್ಮಿ ದಿವಸಾನ್ ಬಹೂನ್ ।
ಆಶಯಾ ಯದಿ ಮಾಂ ರಾಮಃ ಪುನಃ ಶಬ್ದಾಪಯೇದಿತಿ ॥೮॥

ಗಂಗಾತೀರದಲ್ಲಿ ನಾನು ಗುಹನೊಂದಿಗೆ ಬಹುದಿನ, ಅಂದರೆ ಮೂರುದಿನಗಳ-ಕಾಲ ಇದ್ದೆ. ರಾಮನೇನಾದರೂ ಹಿಂತಿರುಗಿ ಬಂದು ನನ್ನನ್ನು ಕೂಗಿ ಕರೆಯುವನೋ ಎಂದು ಆಸೆ.

ವಿಷಯೇ ತೇ ಮಹಾರಾಜ ರಾಮವ್ಯಸನಕರ್ಶಿತಾಃ ।
ಅಪಿ ವೃಕ್ಷಾಃ ಪರಿಮ್ಲಾನಾಃ ಸಪುಷ್ಪಾಂಕುರಕೋರಕಾಃ ॥೯॥

ನಾನು ಹಿಂತಿರುಗಿ ಬರುವಾಗ ದಾರಿಯಲ್ಲಿ ಈ ಮೂರು ದಿನಗಳಲ್ಲಿಯೇ ದೇಶದಲ್ಲೆಲ್ಲ ಬಹಳ ಬದಲಾವಣೆ ನನಗೆ ಕಂಡುಬಂದಿತು. ಮರಗಳಲ್ಲಿ ಹೂ ಚಿಗುರು ಮೊಗ್ಗು ಎಲ್ಲವೂ ಬಾಡಿದ್ದುವು.

ಉಪತಪ್ತೋದಕಾ ನದ್ಯಃ ಪಲ್ವಲಾನಿ ಸರಾಂಸಿ ಚ ।
ಪರಿಶುಷ್ಕಪಲಾಶಾನಿ ವನಾನ್ಯುಪವನಾನಿ ಚ ॥೧೦॥

ನದಿ ಹಳ್ಳ ಕೆರೆಗಳು ಎಲ್ಲವೂ ಬತ್ತಿ ಹೋಗಿದ್ದುವು. ವನ ಉಪವನಗಳಲ್ಲಿ ಮರದೆಲೆಗಳು ಒಣಗಿದ್ದುವು.

ನ ಚ ಸರ್ಪಂತಿ ಸತ್ತ್ವಾನಿ ವ್ಯಾಲಾ ನ ಪ್ರಚರಂತಿ ಚ ।
ರಾಮಶೋಕಾಭಿಭೂತಂ ತನ್ನಿಷ್ಕೂಜಮಭವದ್ವನಮ್ ॥೧೧॥

ಕಾಡುಗಳಲ್ಲಿ ಹಾವುಗಳು ಸರಿಯಲಿಲ್ಲ, ಮೃಗಗಳು ಸಂಚರಿಸಲಿಲ್ಲ. ರಾಮನ ವಿರಹ ಶೋಕದಿಂದ ಅರಣ್ಯವೆಲ್ಲವೂ ನಿಃಶಬ್ದವಾಗಿತ್ತು.

ಲೀನಪುಷ್ಕರಪತ್ರಾಶ್ಚ ನರೇಂದ್ರ ಕಲುಷೋದಕಾಃ ।
ಸಂತಪ್ತಪದ್ಮಾಃ ಪದ್ಮಿನ್ಯೋ ಲೀನಮೀನವಿಹಂಗಮಾಃ ॥೧೨॥

ಕೊಳಗಳಲ್ಲಿ ರಾಜನೆ, ನೀರು ಕಲುಷಿತವಾಗಿತ್ತು. ಪದ್ಮಪತ್ರಗಳು ನೀರೊಳಗೇ ಅಡಗಿದ್ದುವು. ಪದ್ಮಗಳು ಬಾಡಿದ್ದುವು. ಮೀನುಗಳು ಹಕ್ಕಿಗಳು ಕೊಳಗಳಲ್ಲಿ ಮರೆ-ಯಾಗಿದ್ದುವು.

ಜಲಜಾನಿ ಚ ಪುಷ್ಪಾಣಿ ಮಾಲ್ಯಾನಿ ಸ್ಥಲಜಾನಿ ಚ ।
ನಾದ್ಯ ಭಾಂತ್ಯಲ್ಪಗಂಧೀನಿ ಫಲಾನಿ ಚ ಯಥಾಪುರಮ್ ॥೧೩॥

ನೀರಲ್ಲಿಯೂ ನೆಲದಲ್ಲಿಯೂ ಬೆಳೆಯುವ ಹೂಗಳಲ್ಲಿ ಸುಗಂಧ ಕಡಿಮೆ-ಯಾಗಿತ್ತು. ಅವುಗಳ ಕಾಂತಿಯೂ ಮಸುಕಾಗಿತ್ತು. ಹಣ್ಣುಗಳೂ ಹಿಂದಿನಂತೆ ಶೋಭಿಸಲಿಲ್ಲ.

ಅತ್ಯೋದ್ಯಾನಾನಿ ಶೂನ್ಯಾನಿ ಪ್ರಲೀನವಿಹಗಾನಿ ಚ ।
ನ ಚಾಭಿರಾಮಾನಾರಾಮಾನ್ ಪಶ್ಯಾಮಿ ಮನುಜರ್ಷಭ ॥೧೪॥

ಉದ್ಯಾನಗಳು ಶೂನ್ಯವಾಗಿದ್ದುವು. ಹಕ್ಕಿಗಳು ಮರೆಯಾಗಿದ್ದುವು. ತೋಟಗಳು ರಾಜನೆ, ಹಿಂದಿನಂತೆ ಕಣ್ಣು ಸೆಳೆಯುತ್ತಿರಲಿಲ್ಲ.

ಪ್ರವಿಶಂತಮಯೋಧ್ಯಾಂ ಮಾಂ ನ ಕಶ್ಚಿದಭಿನಂದತಿ ।
ನರಾ ರಾಮಮಪಶ್ಯಂತೋ ನಿಃಶ್ವಸಂತಿ ಮುಹುರ್ಮುಹುಃ ॥೧೫॥

ಅಯೋಧ್ಯಾನಗರವನ್ನು ನಾನು ಪ್ರವೇಶಿಸಿದಾಗ ಯಾರೂ ನನ್ನನ್ನು ಅಭಿನಂದಿಸಲಿಲ್ಲ. ರಾಮನನ್ನು ಕಾಣದೆ ಜನರು ಪುನಃ ಪುನಃ ನಿಟ್ಟುಸಿರುಬಿಟ್ಟರು.

ದೇವ ರಾಜರಥಂ ದೃಷ್ಟ್ವಾ ವಿನಾ ರಾಮಮಿಹಾಗತಮ್ ।
ದುಃಖಾದಶ್ರುಮುಖಃ ಸರ್ವೋ ರಾಜಮಾರ್ಗಗತೋ ಜನಃ ॥೧೬॥

ರಾಜನೆ, ರಾಮನಿಲ್ಲದೆ ರಾಜರಥ ಇಲ್ಲಿಗೆ ಬಂದುದನ್ನು ನೋಡಿ ರಾಜಮಾರ್ಗ-ದಲ್ಲಿದ್ದ ಜನರು ಎಲ್ಲರೂ ದುಃಖದಿಂದ ಕಣ್ಣೀರು ಸುರಿಸಿದರು.

ಹರ್ಮ್ಯೈರ್ವಿಮಾನೈಃ ಪ್ರಾಸಾದೈರವೇಕ್ಷ್ಯ ರಥಮಾಗತಮ್ ।
ಹಾಹಾಕಾರಕೃತಾ ನಾರ್ಯೋ ರಾಮದರ್ಶನಕರ್ಶಿತಾಃ ॥೧೭॥

ಧನಿಕರ ಬಂಗಲೆಗಳನ್ನೂ ಏಳು ಮಾಳಿಗೆಗಳನ್ನೂ ರಾಜಸೌಧಗಳನ್ನು ಏರಿ ನಿಂತು ನೋಡಿದ ನಾರಿಯರು ರಾಮನಿಲ್ಲದೆ ಬರಿ ರಥ ಬಂದುದನ್ನು ಕಂಡು ರಾಮ-ದರ್ಶನದಿಂದ ವಂಚಿತರಾದೆವೆಂದು ಹಾಹಾಕಾರ ಮಾಡಿದರು.

ಆಯತೈರ್ವಿಮಲೈರ್ನೇತ್ರೈರಶ್ರುವೇಗಪರಿಪ್ಲುತೈಃ ।
ಅನ್ಯೋನ್ಯಮಭಿವೀಕ್ಷಂತೇಽವ್ಯಕ್ತಮಾರ್ತತರಾಃ ಸ್ತ್ರಿಯಃ ॥೧೮॥

ಅತ್ಯಂತ ಶೋಕಾರ್ತರಾದ ನಾರಿಯರು ಕಣ್ಣೀರು ಕೋಡಿ ಹರಿಸಿ ನಿಡಿದಾದ ನಿರ್ಮಲವಾದ ನಯನಗಳಿಂದ ವ್ಯಕ್ತವಾಗಿ ಎಲ್ಲರೂ ನೋಡುವಂತೆ ಪರಸ್ಪರ ಅವಲೋಕನ ಗೈದರು.

ನಾಮಿತ್ರಾಣಾಂ ನ ಮಿತ್ರಾಣಾಮುದಾಸೀನಜನಸ್ಯ ಚ ।
ಅಹಮಾರ್ತತಯಾ ಕಿಂಚಿದ್ವಿಶೇಷಮುಪಲಕ್ಷಯೇ ॥೧೯॥

ಶತ್ರುಗಳಿರಲಿ ಮಿತ್ರರಿರಲಿ ಉದಾಸೀನರಿರಲಿ ಎಲ್ಲರೂ ದುಃಖಾರ್ತರೆ. ಈ ವಿಷಯದಲ್ಲಿ ಅವರಲ್ಲಿ ಯಾವುದೇ ವ್ಯತ್ಯಾಸವನ್ನು ನಾನು ಕಾಣಲಿಲ್ಲ.

ಅಪ್ರಹೃಷ್ಟಮನುಷ್ಯಾ ಚ ದೀನನಾಗತುರಂಗಮಾ ।
ಆರ್ತಸ್ವರಪರಿಗ್ಲಾನಾ ವಿನಿಃಶ್ವಸಿತನಿಃಸ್ವನಾ ॥೨೦॥

ಅಯೋಧ್ಯೆಯಲ್ಲಿ ಮನುಷ್ಯರಿಗೆ ಹರ್ಷವಿಲ್ಲ. ಸೈನ್ಯದಲ್ಲಿ ಆನೆ ಕುದುರೆಗಳೂ ಸೊರಗಿವೆ. ನೋವು ನರಳಿಕೆಯ ಧ್ವನಿಯಿಂದ ನಗರದಲ್ಲಿ ಉತ್ಸಾಹ ಉಡುಗಿದೆ. ನಿಟ್ಟುಸಿರಿನ ಧ್ವನಿಯೇ ಕೇಳಿಬರುತ್ತಿದೆ.

ನಿರಾನಂದಾ ಮಹಾರಾಜ ರಾಮಪ್ರವ್ರಾಜನಾತುರಾ ।
ಕೌಸಲ್ಯಾ ಪುತ್ರಹೀನೇವ ಅಯೋಧ್ಯಾ ಪ್ರತಿಭಾತಿ ಮಾ ॥೨೧॥

ಮಹಾರಾಜ, ಅಯೋಧ್ಯೆಯಲ್ಲಿ ಆನಂದವಿಲ್ಲ. ರಾಮ ಕಾಡಿಗೆ ಹೋದನೆಂದು ದುಃಖವೇ ತುಂಬಿದೆ. ಪುತ್ರಹೀನಳಾದ ಕೌಸಲ್ಯೆಯಂತೆಯೆ ಅಯೋಧ್ಯಾನಗರಿ ನನಗೆ ಕಂಡುಬರುತ್ತಿದೆ.

ಸೂತಸ್ಯ ವಚನಂ ಶ್ರುತ್ವಾ ರಾಜಾ ಪರಮದೀನಯಾ ।
ಬಾಷ್ಪೋಪಹತಯಾ ವಾಚಾ ತಂ ಸೂತಮಿದಮಬ್ರವೀತ್ ॥೨೨॥

ಸುಮಂತ್ರನ ಮಾತನ್ನು ಕೇಳಿ ರಾಜಾ ದಶರಥನು ಕಣ್ಣೀರಿನಿಂದ ಗದ್ಗದಗೊಂಡ ಪರಮದೀನವಾದ ವಾಣಿಯಿಂದ ನುಡಿದ.

ಕೈಕೇಯ್ಯಾ ಹಿ ನಿಯುಕ್ತೇನ ಪಾಪಾಭಿಜನಭಾವಯಾ ।
ನ ಮಯಾ ಮಂತ್ರಕುಶಲೈರ್ವೃದ್ಧೈಃ ಸಹ ಸಮರ್ಥಿತಮ್ ॥೨೩॥

ಪತಿಯ ಸಾವನ್ನು ಬಯಸಿದ ತಾಯಿಯ ಮಗಳು ಕೈಕೇಯಿ ಅದೇ ರೀತಿಯ ಪಾಪಭಾವನೆಯಿಂದ ರಾಮನನ್ನು ಕಾಡಿಗೆ ಅಟ್ಟಲು ನನಗೆ ಒತ್ತಡ ಹೇರಿದ್ದರಿಂದ ನಾನು ಮಂತ್ರಾಲೋಚನೆಯಲ್ಲಿ ಕುಶಲರಾದ ವೃದ್ಧರೊಡನೆ ಸಮಾಲೋಚನೆ ಮಾಡಲಿಲ್ಲ, ನಿಜ.

ನ ಸುಹೃದ್ಭಿರ್ನ ಚಾಮಾತ್ಯೈರ್ಮಂತ್ರಯಿತ್ವಾ ನ ನೈಗಮೈಃ ।
ಮಯಾಯಮರ್ಥಃ ಸಂಮೋಹಾತ್ ಸ್ತ್ರೀಹೇತೋಃ ಸಹಸಾಕೃತಃ ॥೨೪॥

ಮಿತ್ರರೊಡನೆ ಮಂತ್ರಿಗಳೊಡನೆ ಶಾಸ್ತ್ರಜ್ಞರೊಡನೆಯೂ ಸಮಾಲೋಚನೆ ಮಾಡಲಿಲ್ಲ. ನಿಜ. ಆದರೂ ನಾನು ಸ್ತ್ರೀವಶನಾಗಿ ಅವಳ ಮೇಲಿನ ಮೋಹದಿಂದ ರಾಮನನ್ನು ವನವಾಸಕ್ಕೆ ಕಳಿಸುವ ಈ ಕಾರ್ಯ 'ಸಹಸಾ' ಯುಕ್ತಾಯುಕ್ತ ವಿಮರ್ಶೆಯನ್ನೇ ಮಾಡದೇ 'ಅಕೃತಃ' ಮಾಡಿದ್ದಲ್ಲ.

'ಕೈಕೇಯಿ ಬಹಳ ಬುದ್ಧಿವಂತಿಕೆಯಿಂದ ಮೋಸದಿಂದ ನನ್ನನ್ನು ಧರ್ಮಪಾಶದಲ್ಲಿ ಬಿಗಿದು ಈ ಕೆಲಸ ಮಾಡಿಸಿದಳು. ('ಸಹಸಾ ಅಕೃತಃ' ಎಂದು ಪದವಿಭಾಗ.) ಅದಕ್ಕೇ ಅವಳನ್ನು ಪರಿತ್ಯಾಗ ಮಾಡಿದ್ದೇನೆ ನೋಡು'.

ಭವಿತವ್ಯತಯಾ ನೂನಮಿದಂ ವಾ ವ್ಯಸನಂ ಮಹತ್ ।
ಕುಲಸ್ಯಾಸ್ಯ ವಿನಾಶಾಯ ಪ್ರಾಪ್ತಂ ಸೂತ ಯದೃಚ್ಛಯಾ ॥೨೫॥

ಸುಮಂತ್ರ, ಮಹತ್ತಾದ ಈ ವ್ಯಸನವು ನಿಶ್ಚಿತವಾಗಿ ದೈವಪ್ರೇರಣೆಯಿಂದ ನಡೆಯಲೇಬೇಕಿತ್ತು. ('ವಾ' ಎಂಬುದು 'ವೈ' ಅರ್ಥದಲ್ಲಿದೆ) ಈ ಕುಲದ ನಾಶಕ್ಕಾಗಿಯೇ ದೈವಾತ್ ಇದು ಸಂಭವಿಸಿದೆ.

'ಅದರಿಂದ ಇದು ನನ್ನ ಪಾಪಕರ್ಮವೆಂದು ನೀನು ತಿಳಿಯಬೇಡ. ನಾನು ಬೇಡವೆಂದರೂ ನನ್ನಿಂದ 'ಯದೃಚ್ಛಯಾ' ರಾಮನೇ ಈ ಸತ್ಯಧರ್ಮವನ್ನು ಮಾಡಿಸಿದ್ದಾನೆ'.

ಇದು ಪಾಪವಾಗಿದ್ದರೆ ಇಂಥ ಘೋರವಾದ ಮಹಾಪಾಪಕ್ಕೆ ನರಕ ಶಿಕ್ಷೆಯಾಗುತ್ತಿತ್ತು, ಆದರೆ ದಶರಥ ಸ್ವರ್ಗಕ್ಕೇ ಹೋಗಿದ್ದಾನೆ! ಒಂದುವೇಳೆ

ಪಾಪಕರ್ಮವೇ ಆಗಿದ್ದರೂ ಪಾಪ ಪ್ರಾರಬ್ಧವನ್ನು ಉಂಡು ತೀರಿಸಿದ್ದರಿಂದ ಅಜಾಮಿಳನಿಗೆ ಹೇಗೋ ಹಾಗೆ ದಶರಥನಿಗೂ ಈ ಪಾಪಲೇಪವಾಗಲಿಲ್ಲ.

ಸೂತ ಯದ್ಯಸ್ತಿ ತೇ ಕಿಂಚಿತ್ ಮಯಾ ತು ಸುಕೃತಂ ಕೃತಮ್ ।
ತ್ವಂ ಪ್ರಾಪಯಾಶು ಮಾಂ ರಾಮಂ ಪ್ರಾಣಾಃ ಸಂತ್ವರಯಂತಿ ಮಾಮ್ ॥

ಸುಮಂತ್ರ, ನಾನು ನಿನಗೇನಾದರೂ ಸ್ವಲ್ಪ ಉಪಕಾರ ಮಾಡಿದ್ದರೆ ನೀನು ನನ್ನನ್ನು ರಾಮನ ಬಳಿಗೆ ಒಯ್ದುಬಿಡು. ನನ್ನ ಪ್ರಾಣಗಳು ನನಗೆ ರಾಮದರ್ಶನಕ್ಕೆ ಬಹಳ ಅವಸರಗೊಳಿಸುತ್ತಿವೆ.

ನಾನು ರಾಮದರ್ಶನ ಮಾಡದಿದ್ದರೆ ಅವು ನನ್ನನ್ನು ಬಿಟ್ಟೇ ಹೋಗುತ್ತವೆ.

ಯದ್ಯದ್ಯಾಪಿ ಮಮೈವಾಜ್ಞಾ ನಿವರ್ತಯತು ರಾಘವಮ್ ।
ನ ಶಕ್ಷ್ಯಾಮಿ ವಿನಾ ರಾಮಂ ಮುಹೂರ್ತಮಪಿ ಜೀವಿತುಮ್ ॥೨೭॥

'ಈಗಲೂ ನನ್ನ ಆಜ್ಞೆ ನಡೆಯುವುದಾದರೆ ನನ್ನಾಜ್ಞೆಯಂತೆ ರಾಮನನ್ನು ವನವಾಸದಿಂದ ಹಿಂತಿರುಗಿಸು. ರಾಮನಿಲ್ಲದೆ ಒಂದು ಮುಹೂರ್ತವೂ ನಾನು ಬದುಕಿರಲಾರೆ.

ಅಥವಾಪಿ ಮಹಾಬಾಹುರ್ಗತೋ ದೂರಂ ಭವಿಷ್ಯತಿ ।
ಮಾಮೇವ ರಥಮಾರೋಪ್ಯ ಶೀಘ್ರಂ ರಾಮಾಯ ದರ್ಶಯ ॥೨೮॥

'ಅಥವಾ, ರಾಮ ಈಗ ಬಹಳ ದೂರ ಹೋಗಿರುತ್ತಾನೆ, ಅವನನ್ನು ಬಲುಬೇಗನೆ ಕರೆತರುವುದು ಅಶಕ್ಯವೆಂದರೆ, ನನ್ನನ್ನೇ ರಥದಲ್ಲಿ ಏರಿಸಿ ಶೀಘ್ರವಾಗಿ ನನಗೆ ರಾಮನ ಭೇಟ್ಟಿ ಮಾಡಿಸು.

ವೃತ್ತದಂಷ್ಟ್ರೋ ಮಹೇಷ್ವಾಸಃ ಕ್ವಾಸೌ ಲಕ್ಷ್ಮಣಪೂರ್ವಜಃ ।
ಯದಿ ಜೀವಾಮಿ ಸಾಧ್ವೇನಂ ಪಶ್ಯೇಯಂ ಸೀತಯಾ ಸಹ ॥೨೯॥

'ದುಂಡುಮಲ್ಲಿಗೆ ಮೊಗ್ಗಿನಂಥ ದುಂಡಾದ ದಂತಗಳುಳ್ಳವನು, ಲಕ್ಷ್ಮಣನಣ್ಣ, ರಾಮ ಎಲ್ಲಿದ್ದಾನೆ? ಅವನನ್ನು ನೋಡುವವರೆಗೂ ನಾನು ಬದುಕಿದ್ದರೆ ಸೀತಾ–ಸಮೇತನಾದ ಆತನನ್ನು ಚೆನ್ನಾಗಿ ನೋಡುವೆ.

ಲೋಹಿತಾಕ್ಷಂ ಮಹಾಬಾಹುಮಾಮುಕ್ತಮಣಿಕುಂಡಲಮ್ ।
ರಾಮಂ ಯದಿ ನ ಪಶ್ಯೇಯಂ ಗಮಿಷ್ಯಾಮಿ ಯಮಕ್ಷಯಮ್ ॥೩೦॥

'ಕೆಂಪುಕಣ್ಣಿನವನು ನೀಳವಾದ ತೋಳುಗಳುಳ್ಳವನು ರತ್ನಕುಂಡಲ ಧರಿಸಿದವನು, ಇಂಥ ರಾಮನನ್ನು ನಾನು ಕಾಣದೆ ಹೋದರೆ ಸತ್ತೇಹೋಗುವೆನು.

ಅತೋ ನು ಕಿಂ ದುಃಖತರಂ ಯೋऽಹಮಿಕ್ಷ್ವಾಕುನಂದನಮ್ ।
ಇಮಾಮವಸ್ಥಾಮಾಪನ್ನೋ ನೇಹ ಪಶ್ಯಾಮಿ ರಾಘವಮ್ ॥೩೧॥

'ಈ ಅವಸ್ಥೆಯಲ್ಲಿರುವ ನಾನು ಈಗ ಇಕ್ಷ್ವಾಕು ನಂದನ ರಾಮನನ್ನು ನೋಡಲು ಶಕ್ತನಾಗುತ್ತಿಲ್ಲ ಎಂದರೆ ಇದಕ್ಕಿಂತ ಹೆಚ್ಚಿನ ದುಃಖದ ಸಂಗತಿ ಏನಿದೆ?

ಹಾ ರಾಮ ರಾಮಾನುಜ ಹಾ ಹಾ ವೈದೇಹಿ ತಪಸ್ವಿನಿ ।
ನ ಮಾಂ ಜಾನೀತ ದುಃಖೇನ ಮ್ರಿಯಮಾಣಮನಾಥವತ್ ॥೩೨॥

'ಹಾ ರಾಮ, ಹಾ ಲಕ್ಷ್ಮಣ, ಹಾ ಶೋಚನೀಯಳಾದ ಸೀತೆ! ನಿಮ್ಮ ವಿರಹ ದುಃಖದಿಂದ ನಾನು ಅನಾಥನಂತೆ ಸಾಯುತ್ತಿರುವುದನ್ನು ನೀವು ತಿಳಿಯಲಾರಿರಿ'.

ಸ ತೇನ ರಾಜಾ ದುಃಖೇನ ಭೃಶಮರ್ಪಿತಚೇತನಃ ।
ಅವಗಾಢಃ ಸುದುಷ್ಪಾರಂ ಶೋಕಸಾಗರಮಬ್ರವೀತ್ ॥೩೩॥

ರಾಜಾ ದಶರಥನು ವಿರಹ ದುಃಖವನ್ನು ಎದೆಯಲ್ಲಿ ತುಂಬಿಕೊಂಡು ಶೋಕ-ಸಾಗರದಲ್ಲಿ ಮುಳುಗಿ ಈ ಶೋಕಸಾಗರ ನನ್ನಿಂದ ದಾಟಲಾಗದುದೆಂದು ಹೇಳಿಕೊಳ್ಳುತ್ತಾನೆ.

ರಾಮಶೋಕಮಹಾऽऽಭೋಗಃ ಸೀತಾವಿರಹಪಾರಗಃ ।
ಶ್ವಸಿತೋರ್ಮಿಮಹಾವರ್ತೋ ಬಾಷ್ಪಫೇನಜಲಾವಿಲಃ ॥೩೪॥

ದಶರಥನ ಶೋಕಸಾಗರ ಅವನೇ ಹೇಳುವಂತೆ, ರಾಮವಿರಹದ ಶೋಕವೇ ಈ ಶೋಕಸಾಗರದ ವಿಸ್ತಾರವಾದ ಜಲರಾಶಿ. ('ಮಹಾ–ಆಭೋಗ' ಎಂದು ಬಿಡಿಸ-ಬೇಕು) ಸೀತಾ ವಿರಹ ಶೋಕವೆಂಬ ತೀರದವರೆಗೆ ಅದು ವ್ಯಾಪಿಸಿದೆ. ನನ್ನ ದುಃಖದ ನಿಟ್ಟುಸಿರು ದೊಡ್ಡ ಅಲೆ ಮತ್ತು ಸುಳಿ. ಕಣ್ಣೀರ ಕೋಡಿಯೇ ನೊರೆಗಳಿಂದ ಕೂಡಿದ್ದು ನದೀ ಮುಖದಲ್ಲಿ ಸಾಗರ ಜಲವನ್ನು ರಾಡಿಯಾಗಿಸುವ ನದೀಜಲ.

ಬಾಹುವಿಕ್ಷೇಪಮೀನೌಘೋ ವಿಕ್ರಂದಿತಮಹಾಸ್ವನಃ ।
ಪ್ರಕೀರ್ಣಕೇಶಶೈವಾಲಃ ಕೈಕೇಯೀಬಡಬಾಮುಖಃ ॥೩೫॥

ದುಃಖ ಅಸಹನೆಗಳಿಂದ ನಾನು ಮತ್ತೆ ಮತ್ತೆ ಕೈಕೊಡವುತ್ತಿರುವುದೇ ಸಾಗರದಲ್ಲಿ ವೇಗವಾಗಿ ಚಲಿಸುವ ಮೀನಿನ ಸಮೂಹ. ದುಃಖದಿಂದ 'ಹಾ' ಎಂದು ನಾನು ಕೂಗಿಕೊಳ್ಳುವುದೇ ಈ ಸಮುದ್ರದ ಮಹಾಘೋಷ. ದುಃಖದಿಂದ ನಾನು ತಲೆಕೂದಲು ಕೆದರಿಕೊಂಡಿರುವುದೇ ಪಾಚಿ. ಈ ಶೋಕಸಾಗರದ ಗರ್ಭದಲ್ಲಿರುವ ವಡವಾನಲವು ಕೈಕೇಯಿ.

ಮಮಾಶ್ರುವೇಗಪ್ರಭವಃ ಕುಬ್ಜಾವಾಕ್ಯಮಹಾಗ್ರಹಃ ।
ವರವೇಲೋ ನೃಶಂಸಾಯಾ ರಾಮಪ್ರವ್ರಾಜನಾ ಯತಃ ॥೩೬॥

ನನ್ನ ವೇಗದ ಕಣ್ಣೀರ ಧಾರೆಗಳಿಂದ ನಿರ್ಮಿತವಾದುದು ಈ ಶೋಕಸಾಗರ. ಮಂಥರೆಯ ಚಾಡಿ ಮಾತುಗಳೇ ಇಲ್ಲಿ ಮಹಾಗಾತ್ರದ ಮೊಸಳೆಗಳು. ಕ್ರೂರಳಾದ ಕೈಕೇಯಿಗೆ ನಾನು ಕೊಟ್ಟ ರಾಮ ವನವಾಸ ಕಾರಣವಾಗಿರುವ ಎರಡು ವರಗಳೇ ಈ ಸಾಗರದ ತೀರಗಳು ('ಪ್ರವ್ರಾಜನಾ–ಯತಃ' ಎಂದು ಬಿಡಿಸಬೇಕು.).

ಯಸ್ಮಿನ್ ಬತ ನಿಮಗ್ನೋಽಹಂ ಕೌಸಲ್ಯೇ ರಾಘವಂ ವಿನಾ ।
ದುಸ್ತರೋ ಜೀವತಾ ದೇವಿ ಮಯಾಯಂ ಶೋಕಸಾಗರಃ ॥೩೭॥

ದೇವಿ ಕೌಸಲ್ಯೆ, ನಾನು ಈ ಬಗೆಯ ಶೋಕಸಾಗರದಲ್ಲಿ ಅಯ್ಯೋ, ಮುಳುಗುತ್ತಿದ್ದೇನೆ. ರಾಮನಿಲ್ಲದಿದ್ದರೆ ನನ್ನ ಜೀವಮಾನದಲ್ಲಿ ಈ ಸಾಗರವನ್ನು ನಾನು ದಾಟಲಾರೆ.

ಅಶೋಭನಂ ಯೋಽಹಮಿಹಾದ್ಯ ರಾಘವಂ
ದಿದೃಕ್ಷಮಾಣೋ ನ ಲಭೇ ಸುಲಕ್ಷಣಮ್ ।
ಇತೀವ ರಾಜಾ ವಿಲಪನ್ ಮಹಾಯಶಾಃ
ಪಪಾತ ತೂರ್ಣಂ ಶಯನೇ ಸ ಮೂರ್ಛಿತಃ ॥೩೮॥

'ರಾಮನನ್ನೂ ಲಕ್ಷ್ಮಣನನ್ನೂ ಕಾಣುವ ಭಾಗ್ಯ ನನಗೆ ಇಲ್ಲವಾದುದು ನಾನು ಹಿಂದೆ ಮಾಡಿದ್ದ ಒಂದು ಪಾಪದ ಫಲವೇ ಸರಿ' ಎಂದು ಗೋಳಿಡುತ್ತ ಮಹಾ ಯಶಸ್ವಿಯಾದ ರಾಜ ಒಡನೆ ಮೈಮರೆತು ಶಯ್ಯೆಯ ಮೇಲೆ ಒರಗಿದ.

ಇತಿ ವಿಲಪತಿ ಪಾರ್ಥಿವೇ ಪ್ರನಷ್ಟೇ
ಕರುಣತರಂ ದ್ವಿಗುಣಂ ಚ ರಾಮಹೇತೋಃ ।
ವಚನಮನುನಿಶ್ಯಮ್ಯ ತಸ್ಯ ದೇವೀ
ಭಯಮಗಮತ್ ಪುನರೇವ ರಾಮಮಾತಾ ॥೩೯॥

ರಾಜ ಗೋಳಿಡುತ್ತ ರಾಮನಿಗಾಗಿ ಹಿಂದಿನಿಂದಲೂ ಎರಡುಪಟ್ಟು ಹೆಚ್ಚು ದುಃಖದಿಂದ ಮೈಮರೆತಾಗ ಅವನ ಮಾತನ್ನು ಕೇಳಿ ರಾಮಮಾತೆ ದೇವಿ ಕೌಸಲ್ಯೆ ಪುನಃ ಎರಡು ಪಟ್ಟು ಹೆಚ್ಚಾಗಿ ಭಯಪಟ್ಟಳು.

ಪುತ್ರವಿಯೋಗದೊಂದಿಗೇ ಈಗ ಪತಿವಿಯೋಗವೂ ಆಗುವುದೆ? ಎಂದು ಆತಂಕಗೊಂಡಳು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಐವತ್ತೊಂಭತ್ತನೇ ಸರ್ಗ ಮುಗಿಯಿತು.

❖

ಷಷ್ಟಿತಮಃ ಸರ್ಗಃ

ಸರ್ಗ – 60

ಕೌಸಲ್ಯೆಗೆ ಸುಮಂತ್ರನು ಸಮಾಧಾನ ಹೇಳುವುದು.

ತತೋ ಭೂತೋಪಸೃಷ್ಟೇವ ವೇಪಮಾನಾ ಪುನಃ ಪುನಃ ।
ಧರಣ್ಯಾಂ ಗತಸತ್ತ್ವೇವ ಕೌಸಲ್ಯಾ ಸೂತಮಬ್ರವೀತ್ ॥೧॥

ಬಳಿಕ ಕೌಸಲ್ಯೆ ದೆವ್ವ ಹಿಡಿದವಳಂತೆ ಪುನಃ ಪುನಃ ನಡುಗುತ್ತ, ಬುದ್ಧಿಸ್ವಾಸ್ಥ್ಯ ಕಳೆದುಕೊಂಡವಳಂತೆ ನೆಲದ ಮೇಲೆ ಬಿದ್ದು ಸುಮಂತ್ರನಿಗೆ ಹೇಳಿದಳು.

ನಯ ಮಾಂ ಯತ್ರ ಕಾಕುತ್ಸ್ಥಃ ಸೀತಾ ಯತ್ರ ಚ ಲಕ್ಷ್ಮಣಃ ।
ತಾನ್ ವಿನಾ ಕ್ಷಣಮಪ್ಯತ್ರ ಜೀವಿತುಂ ನೋತ್ಸಹೇ ಹ್ಯಹಮ್ ॥೨॥

ರಾಮ ಎಲ್ಲಿರುವನೋ, ಎಲ್ಲಿ ಸೀತೆ, ಎಲ್ಲಿ ಲಕ್ಷ್ಮಣ ಇರುವರೋ ಅಲ್ಲಿಗೇ ನನ್ನನ್ನು ಕರೆದೊಯ್ಯು, ಸುಮಂತ್ರ, ಅವರನ್ನು ಬಿಟ್ಟು ನಾನೊಂದು ಕ್ಷಣವೂ ಬದುಕಿರಲಾರೆ.

ನಿವರ್ತಯ ರಥಂ ಶೀಘ್ರಂ ದಂಡಕಾನ್ನಯ ಮಾಮಪಿ ।
ಅಥ ತಾನ್ನಾನುಗಚ್ಛಾಮಿ ಗಮಿಷ್ಯಾಮಿ ಯಮಕ್ಷಯಮ್ ॥೩॥

ರಥವನ್ನು ಬೇಗನೆ ಕಾಡಿನ ಕಡೆಗೆ ಹಿಂತಿರುಗಿಸು. ನನ್ನನ್ನು ದಂಡಕಾರಣ್ಯಕ್ಕೆ ಕರೆದೊಯ್ಯು. ಕಾಡಿನಲ್ಲಿ ಅವರನ್ನು ನಾನು ಹಿಂಬಾಲಿಸೆನಾದರೆ ಯಮಲೋಕಕ್ಕೆ ಹೋದೇನು.

ಬಾಷ್ಪವೇಗೋಪಹತಯಾ ಸ ವಾಚಾ ಸಜ್ಜಮಾನಯಾ ।
ಇದಮಾಶ್ವಾಸಯನ್ ದೇವೀಂ ಸೂತಃ ಪ್ರಾಂಜಲಿರಬ್ರವೀತ್ ॥೪॥

ಸೂತನಾದ ಸುಮಂತ್ರ ಕಣ್ಣೀರ ವೇಗದಿಂದ ಬಿಕ್ಕುತ್ತ ಕೈಮುಗಿದುಕೊಂಡು ಗದ್ಗದ ಧ್ವನಿಯಿಂದ ದೇವಿಯನ್ನು ಸಂತೈಸುತ್ತ ನುಡಿದ.

ತ್ಯಜ ಶೋಕಂ ಚ ಮೋಹಂ ಚ ಸಂಭ್ರಮಂ ದುಃಖಜಂ ತಥಾ ।
ವ್ಯವಧೂಯ ಚ ಸಂತಾಪಂ ವನೇ ವತ್ಸ್ಯತಿ ರಾಘವಃ ॥೫॥

ದೇವಿ, ಶೋಕಮೋಹಗಳನ್ನು ಬಿಡು, ದುಃಖದಿಂದಾಗುವ ಆತಂಕವನ್ನೂ ಬಿಡು.

ರಾಮ ಕೋಪತಾಪಗಳನ್ನು ದೂರಮಾಡಿಕೊಂಡು ಕಾಡಿನಲ್ಲಿ ಬದುಕಿಯೇ ಇರುತ್ತಾನೆ.

ಲಕ್ಷ್ಮಣಶ್ಚಾಪಿ ರಾಮಸ್ಯ ಪಾದೌ ಪರಿಚರನ್ ವನೇ ।
ಆರಾಧಯತಿ ಧರ್ಮಜ್ಞಃ ಪರಲೋಕಂ ಜಿತೇಂದ್ರಿಯಃ ॥೬॥

ಲಕ್ಷ್ಮಣನೂ ಕೂಡ ಕಾಡಿನಲ್ಲಿ ರಾಮನ ಪಾದಸೇವೆ ಮಾಡುತ್ತ ಪರಲೋಕ ಸಾಧನೆ ಮಾಡಿಕೊಳ್ಳುತ್ತಾನೆ. ಅವನು ಧರ್ಮಜ್ಞ, ಜಿತೇಂದ್ರಿಯ.

ವಿಜನೇಽಪಿ ವನೇ ಸೀತಾ ವಾಸಂ ಪ್ರಾಪ್ಯ ಗೃಹೇಷ್ವಿವ ।
ವಿಸ್ರಂಭಂ ಲಭತೇಽಭೀತಾ ರಾಮೇ ವಿನ್ಯಸ್ತಮಾನಸಾ ॥೭॥

ನಿರ್ಜನ ಅರಣ್ಯದಲ್ಲಿಯೂ ಕೂಡ ಅರಮನೆಯಂತೆಯೇ ವಾಸ ಮಾಡುತ್ತಾಳೆ, ಸೀತೆಯೂ ಕೂಡ. ರಾಮನಲ್ಲಿಯೇ ಮನಸ್ಸಿಟ್ಟು ನಿರ್ಭೀತಳಾಗಿ ಪತಿ ಸುಖವನ್ನೇ ಪಡೆಯುತ್ತಾಳೆ.

ನಾಸ್ಯಾ ದೈನ್ಯಂ ಕೃತಂ ಕಿಂಚಿತ್ ಸುಸೂಕ್ಷ್ಮಮಪಿ ಲಕ್ಷ್ಯತೇ ।
ಉಚಿತೇವ ಪ್ರವಾಸಾನಾಂ ವೈದೇಹೀ ಪ್ರತಿಭಾತಿ ಮೇ ॥೮॥

ಸೀತೆಯಲ್ಲಿ, 'ಅಯ್ಯೋ, ವನವಾಸ ಮಾಡ್ತುತಿದ್ದೇನೆ' ಎನ್ನುವ ದುಗುಡವನ್ನು ನಾನು ಒಂದಿಷ್ಟೂ ಕೂಡ ಕಾಣಲಿಲ್ಲ. ಪರಊರ ಪ್ರವಾಸಗಳಿಗೆ ಅಭ್ಯಾಸವಾಗಿದ್ದು ಅವಳು ತಕ್ಕವಳೆಂದೇ ನನಗೆ ಅನಿಸುತ್ತದೆ.

ನಗರೋಪವನಂ ಗತ್ವಾ ಯಥಾ ಸ್ಮ ರಮತೇ ಪುರಾ ।
ತಥೈವ ರಮತೇ ಸೀತಾ ನಿರ್ಜನೇಷು ವನೇಷ್ವಪಿ ॥೯॥

ಹಿಂದೆ ನಗರದ ಉದ್ಯಾನಗಳಿಗೆ ಹೋಗಿ ಹೇಗೆ ವಿಹಾರ ಮಾಡುತ್ತಿದ್ದಳೋ ಹಾಗೇ ಈಗ ನಿರ್ಜನ ಅರಣ್ಯದಲ್ಲಿಯೂ ಸೀತೆ ವಿಹಾರ ಮಾಡುತ್ತಿದ್ದಾಳೆ.

ಬಾಲೇವ ರಮತೇ ಸೀತಾ ಬಾಲಚಂದ್ರನಿಭಾನನಾ ।
ರಾಮಾ ರಾಮೇ ಹ್ಯಧೀನಾತ್ಮಾ ವಿಜನೇಽಪಿ ವನೇ ಸತೀ ॥೧೦॥

'ಬಾಲಚಂದ್ರ'ನಂತೆ,ಹುಣ್ಣಿಮೆರಾತ್ರಿಯಲ್ಲಿ ಉದಿಸುವ ಪೂರ್ಣಚಂದ್ರನಂತೆ, ಎಸೆವ ಮೊಗದವಳು ಚೆಲುವೆ ಸೀತೆ, ಮುಗ್ಧಬಾಲೆಯಂತೆಯೇ ನಿರ್ಜನ ಅರಣ್ಯದಲ್ಲಿಯೂ ಕೂಡ ರಾಮನಲ್ಲಿಯೇ ಮನಸ್ಸಿಟ್ಟು ಸುಖವಾಗಿ ವಾಸಮಾಡುತ್ತಿದ್ದಾಳೆ.

ತದ್ಗತಂ ಹೃದಯಂ ಹ್ಯಸ್ಯಾಸ್ತದಧೀನಂ ಚ ಜೀವಿತಮ್ ।
ಅಯೋಧ್ಯಾಪಿ ಭವೇತ್ತಸ್ಯಾ ರಾಮಹೀನಾ ತಥಾ ವನಮ್ ॥೧೧॥

ಅವಳ ಮನಸ್ಸು ರಾಮನಲ್ಲಿ ರಾಮನಿಗಾಗಿಯೇ ಇರುತ್ತದೆ. ಅವಳ ಬಾಳೂ ರಾಮನಲ್ಲಿ ರಾಮನಿಗಾಗಿಯೇ ಮುಡಿಪಾಗಿದೆ. ರಾಮನನ್ನು ಬಿಟ್ಟು ಅಯೋಧ್ಯೆಯಲ್ಲಿ ಅವಳು ಇರುತ್ತಿದ್ದರೆ ಅಯೋಧ್ಯೆ ಅವಳ ಪಾಲಿಗೆ ಘೋರ ಅರಣ್ಯವೇ ಆಗುತ್ತಿತ್ತು.

ಪಥಿ ಪೃಚ್ಛತಿ ವೈದೇಹೀ ಗ್ರಾಮಾಂಶ್ಚ ನಗರಾಣಿ ಚ ।
ಗತಿಂ ದೃಷ್ಟ್ವಾ ನದೀನಾಂ ಚ ಪಾದಪಾನ್ ವಿವಿಧಾನಪಿ ॥೧೨॥

ದಾರಿನಡೆಯುವಾಗ ಸೀತೆ ರಾಮನಲ್ಲಿ ಗ್ರಾಮ ನಗರಗಳನ್ನೂ ನದೀಪ್ರವಾಹ-ಗಳನ್ನೂ ನಾನಾ ಬಗೆಯ ಮರಗಿಡಗಳನ್ನೂ ಏನು ಏನೆಂದು ಕೇಳುತ್ತಾಳೆ.

ರಾಮಂ ವಾ ಲಕ್ಷ್ಮಣಂ ವಾಪಿ ದೃಷ್ಟ್ವಾ ಜಾನಾತಿ ಜಾನಕೀ ।
ಅಯೋಧ್ಯಾಕ್ರೋಶಮಾತ್ರೇ ತು ವಿಹಾರಮಿವ ಸಂಶ್ರಿತಾ ॥೧೩॥

ಬಳಿಯಲ್ಲಿ ರಾಮನನ್ನಾಗಲಿ ಲಕ್ಷ್ಮಣನನ್ನಾಗಲಿ ಕಂಡರೆ ಸೀತೆ ತಾನು ಅಯೋಧ್ಯೆಗೆ ಕೇವಲ ಕಾಲು ಯೋಜನ ದೂರದ ವಿಹಾರಸ್ಥಳದಲ್ಲಿದ್ದಂತೇ ತಿಳಿಯುತ್ತಾಳೆ.

ಇದಮೇವ ಸ್ಮರಾಮ್ಯಸ್ಯಾಃ ಸಹಸೈವೋಪಜಲ್ಪಿತಮ್ ।
ಕೈಕೇಯೀಸಂಶ್ರಿತಂ ವಾಕ್ಯಂ ನೇದಾನೀಂ ಪ್ರತಿಭಾತಿ ಮಾಮ್ ॥೧೪॥

'ಅಯೋಧ್ಯೆಗೆ ಸಮೀಪದಲ್ಲಿರುವ ವಿಹಾರಸ್ಥಳ ಇದು ಅರಣ್ಯ' ಎಂದು ಮುಂತಾಗಿ ಸೀತೆ ಹೇಳುತ್ತಿದ್ದುದೆ ನನಗೆ ಈಗ ಸ್ಮರಣೆಗೇ ಬರುತ್ತಿದೆ. ಇನ್ನು ಕೈಕೇಯಿಯ ಬಗ್ಗೆ ಅವಳು ಅಕಸ್ಮಾತ್ ಆಡಿದ ನಿಂದೆಯ ಮಾತು ಯಾವುದೂ ನನಗೆ ಈಗ ನೆನಪಾಗುತ್ತಿಲ್ಲ'.

ಧ್ವಂಸಯಿತ್ವಾ ತು ತದ್ವಾಕ್ಯಂ ಪ್ರಮಾದಾತ್ ಪರ್ಯುಪಸ್ಥಿತಮ್ ।
ಹ್ಲಾದನಂ ವಚನಂ ಸೂತೋ ದೇವ್ಯಾ ಮಧುರಮಬ್ರವೀತ್ ॥೧೫॥

ಹೀಗೆ ಸುಮಂತ್ರ ತಾನು ಬಾಯಿತಪ್ಪಿ ಹೇಳಹೊರಟಿದ್ದ ಕೈಕೇಯೀ ನಿಂದೆಯ ಮಾತನ್ನು ಮರೆಮಾಡಿ, ಕೌಸಲ್ಯೆಗೆ ಇಷ್ಟವಾಗಬಹುದಾದ ಸೀತೆಯಾಡಿದ ಬೇರೆ ಸವಿನುಡಿಯನ್ನು ಮಾತ್ರ ಆಡಿತೋರಿಸಿದ.

ಅಧ್ವನಾ ವಾತವೇಗೇನ ಸಂಭ್ರಮೇಣಾತಪೇನ ಚ ।
ನ ವಿಗಚ್ಛತಿ ವೈದೇಹ್ಯಾಶ್ಚಂದ್ರಾಂಶುಸದೃಶೀ ಪ್ರಭಾ ॥೧೬॥

ಪ್ರಯಾಣದಾಯಾಸ, ಗಾಳಿಯ ವೇಗ, ಮೃಗದರ್ಶನದಿಂದಾಗಬಹುದಾದ ಭಯ, ಬಿಸಿಲಿನ ತಾಪ ಇವಾವುದರಿಂದಲೂ ಬೆಳದಿಂಗಳಿನಂಥ ಸೀತೆಯ ಶರೀರ-ಕಾಂತಿ ಬಾಡುವುದಿಲ್ಲ.

ಸದೃಶಂ ಶತಪತ್ರಸ್ಯ ಪೂರ್ಣಚಂದ್ರೋಪಮಪ್ರಭಮ್ ।
ವದನಂ ತದ್ವದಾನ್ಯಾಯಾ ವೈದೇಹ್ಯಾ ನ ವಿಕಂಪತೇ ॥೧೭॥

ಸವಿನುಡಿಯನ್ನೇ ಆಡುವ ಸೀತೆಯ ಮುಖ ಯಾವಾಗಲೂ ಚಂದ್ರ ಸಮಾನ ಕಾಂತಿಯನ್ನು ಸೂಸುತ್ತದೆ, ಕಮಲದಂತೆ ಸುಂದರವಾಗಿರುತ್ತದೆ. ಎಂದೂ ಕಾಂತಿಹೀನವಾಗದು.

ಅಲಕ್ತರಸರಕ್ತಾಭಾವಲಕ್ತರಸವರ್ಜಿತೌ ।
ಅದ್ಯಾಪಿ ಚರಣೌ ತಸ್ಯಾಃ ಪದ್ಮಕೋಶಸಮಪ್ರಭೌ ॥೧೮॥

ಲಾಕ್ಷಾರಸವನ್ನು ಹಚ್ಚದಿದ್ದರೂ ಲಾಕ್ಷಾರಸದಂತೆ ಕೆಂಪಾಗಿಯೇ ಇರುವ ಸೀತೆಯ ಪಾದಗಳು ಇಂದಿಗೂ ಕೆಂದಾವರೆಗೆ ಹೋಲುತ್ತವೆ.

ನೂಪುರೋದ್ಘುಷ್ಟಹೇಲೇವ ಖೇಲಂ ಗಚ್ಛತಿ ಭಾಮಿನೀ ।
ಇದಾನೀಮಪಿ ವೈದೇಹೀ ತದ್ರಾಗಾನ್ನ್ಯಸ್ತಭೂಷಣಾ ॥೧೯॥

ನೂಪುರ ಧ್ವನಿಯಿಂದ ಹಂಸಧ್ವನಿಯನ್ನು ಮೀರಿಸುವಂತೆ ವಿಲಾಸಪೂರ್ಣವಾಗಿ ನಡೆಯುತ್ತಾಳೆ ಸೀತೆ. ರಾಮನ ಮೇಲಿನ ಪ್ರೀತಿಯಿಂದ ಅವನ ಸಂತೋಷಕ್ಕಾಗಿ ನೂಪುರ ಮುಂತಾದ ಆಭರಣಗಳನ್ನು ಧರಿಸುತ್ತಾಳೆ.

ಗಜಂ ವಾ ವೀಕ್ಷ್ಯ ಸಿಂಹಂ ವಾ ವ್ಯಾಘ್ರಂ ವಾ ವನಮಾಶ್ರಿತಾ ।
ನಾಹಾರಯತಿ ಸಂತ್ರಾಸಂ ಬಾಹೂ ರಾಮಸ್ಯ ಸಂಶ್ರಿತಾ ॥೨೦॥

ರಾಮನ ತೋಳನ್ನಾಶ್ರಯಿಸಿರುವ ಸೀತೆ ಕಾಡಿನಲ್ಲಿರುವಾಗ ಆನೆಯನ್ನಾಗಲಿ ಸಿಂಹವನ್ನಾಗಲಿ ಹುಲಿಯನ್ನಾಗಲಿ ಕಂಡರೆ ಭಯಪಡುವುದಿಲ್ಲ.

ನ ಶೋಚ್ಯಾಸ್ತೇ ನ ಚಾತ್ಮಾ ತೇ ಶೋಚ್ಯೋ ನಾಪಿ ಜನಾಧಿಪಃ ।
ಇದಂ ಹಿ ಚರಿತಂ ಲೋಕೇ ಪ್ರತಿಷ್ಠಾಸ್ಯತಿ ಶಾಶ್ವತಮ್ ॥೨೧॥

ದೇವಿ, ನೀನು ಅವರಿಗಾಗಿಯಾಗಲಿ ತನಗಾಗಿಯಾಗಲಿ ರಾಜನಿಗಾಗಿಯಾಗಲಿ ಆತಂಕಪಡುವ ಕಾರಣವಿಲ್ಲ. ಇಂಥ ಸಂಗತಿ ಲೋಕದಲ್ಲಿ ಶಾಶ್ವತವಾಗಿ ನಡೆಯುತ್ತಲೇ ಇರುತ್ತದೆ.

ವಿಧೂಯ ಶೋಕಂ ಪರಿಹೃಷ್ಟಮಾನಸಾ
ಮಹರ್ಷಿಯಾತೇ ಪಥಿ ಸುವ್ಯವಸ್ಥಿತಾಃ ।
ವನೇ ರತಾ ವನ್ಯಫಲಾಶನಾಃ ಪಿತುಃ
ಶುಭಾಂ ಪ್ರತಿಜ್ಞಾಂ ಪರಿಪಾಲಯಂತಿ ತೇ ॥೨೨॥

ರಾಮ ಸೀತಾ ಲಕ್ಷ್ಮಣರು ವನವಾಸ ದುಃಖವನ್ನು ಲೆಕ್ಕಿಸದೆ ಪ್ರಸನ್ನಚಿತ್ತರಾಗಿ, ಮಹರ್ಷಿಗಳು ನಡೆದ ದಾರಿಯಲ್ಲಿ ಸ್ಥಿರವಾಗಿದ್ದು, ಕಾಡಿನ ಹಣ್ಣುಹಂಪಲನ್ನು ಮೆದ್ದು ವನವಿಹಾರ ಮಾಡುವರು. ತಂದೆಯ ಶುಭಕರವಾದ ಪ್ರತಿಜ್ಞೆಯನ್ನು ಪಾಲಿಸುವರು.

ತಥಾಪಿ ಸೂತೇನ ಸುಯುಕ್ತವಾದಿನಾ
ನಿವಾರ್ಯಮಾಣಾ ಸುತಶೋಕಕರ್ಶಿತಾ ।
ನ ಚೈವ ದೇವೀ ವಿರರಾಮ ಕೂಜಿತಾತ್
ಪ್ರಿಯೇತಿ ಪುತ್ರೇತಿ ಚ ರಾಘವೇತಿ ಚ ॥೨೩॥

ಆದರೂ ಪುತ್ರಶೋಕದಿಂದ ಸೊರಗಿದ್ದ ದೇವಿ ಕೌಸಲ್ಯೆ, ಸುಮಂತ್ರನು ಒಳ್ಳೆಯ ಮಾತಿನಿಂದ ಎಷ್ಟು ಸಂತೈಸಿದರೂ ಬಿಡದೆ 'ಪ್ರಿಯ, ಪುತ್ರ ರಾಮ' ಎಂದು ಕೂಗುತ್ತಲೇ ಇದ್ದಳು, ಅದನ್ನು ನಿಲ್ಲಿಸಲಿಲ್ಲ.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಅರವತ್ತನೇ ಸರ್ಗ ಮುಗಿಯಿತು.

❖

ಏಕಷಷ್ಟಿತಮಃ ಸರ್ಗಃ

ಸರ್ಗ – 61

ಕೌಸಲ್ಯೆ ದಶರಥನನ್ನು ಆಕ್ಷೇಪಿಸುವುದು.

ವನಂ ಗತೇ ಧರ್ಮರತೇ ರಾಮೇ ರಮಯತಾಂ ವರೇ ।
ಕೌಸಲ್ಯಾ ರುದತೀ ಸ್ವಾರ್ತಾ ಭರ್ತಾರಮಿದಮಬ್ರವೀತ್ ॥೧॥

ರಾಮನು ಧರ್ಮನಿರತ. ಪ್ರಜಾರಂಜನ ಮಾಡುವವರಲ್ಲಿ ಮೊದಲಿಗ. ಇಂಥ ರಾಮ ಕಾಡಿಗೆ ಹೋದಾಗ ಕೌಸಲ್ಯೆ ಬಹಳ ದುಃಖಾರ್ತಳಾಗಿ ಅಳುತ್ತ ಪತಿಗೆ ಹೇಳಿದಳು.

ಯದ್ಯಪಿ ತ್ರಿಷು ಲೋಕೇಷು ಪ್ರಥಿತಂ ತೇ ಮಹದ್ಯಶಃ ।
ಸಾನುಕ್ರೋಶೋ ವದಾನ್ಯಶ್ಚ ಪ್ರಿಯವಾದೀ ಚ ರಾಘವಃ ॥೨॥

ಯದ್ಯಪಿ ನಿನ್ನ ಕೀರ್ತಿ ಮೂಲೋಕದಲ್ಲಿ ಹಬ್ಬಿದೆ. ದಶರಥನೆಂದರೆ ದಯಾಪರನು, ಉದಾರಿ ಪ್ರಿಯವನ್ನೇ ಆಡುವವನು ಎಂದು.

ಕಥಂ ನರವರಶ್ರೇಷ್ಠ ಪುತ್ರೌ ತೌ ಸಹ ಸೀತಯಾ ।
ದುಃಖಿತೌ ಸುಖಸಂವೃದ್ಧೌ ವನೇ ದುಃಖಂ ಸಹಿಷ್ಯತಃ ॥೩॥

ಆದರೆ, ರಾಜಶ್ರೇಷ್ಠನೆ, ಆ ನಿನ್ನ ಮಕ್ಕಳಿಬ್ಬರೂ ಸುಖವಾಗಿ ಬೆಳೆದವರು, ಈಗ ದುಃಖಕ್ಕೀಡಾಗಿ ಕಾಡಿನಲ್ಲಿ ಸೀತೆಯೊಂದಿಗೆ ದುಃಖವನ್ನು ನುಂಗಿಕೊಂಡು ಸಹನೆ ಮಾಡಿಕೊಳ್ಳಬೇಕಾಗಿದೆ, ಹೇಗೆ?

ಸಾ ನೂನಂ ತರುಣೀ ಶ್ಯಾಮಾ ಸುಕುಮಾರೀ ಸುಖೋಚಿತಾ ।
ಕಥಮುಷ್ಣಂ ಚ ಶೀತಂ ಚ ಮೈಥಿಲೀ ಪ್ರಸಹಿಷ್ಯತೇ ॥೪॥

ಈ ಸೀತೆ ನವತರುಣಿ ಕೃಶಾಂಗಿ ಕೋಮಲೆ ಸುಖವನ್ನೇ ಅನುಭವಿಸಲು ತಕ್ಕವಳು. ಕಾಡಿನಲ್ಲಿ ಅತಿ ಉಷ್ಣಶೀತಗಳನ್ನು ಸಹಿಸಿಕೊಳ್ಳಬೇಕಾಗಿದೆ, ಹೇಗೆ?

ಭುಕ್ತ್ವಾ ಶನಂ ವಿಶಾಲಾಕ್ಷೀ ಸೂಪದಂಶಾನ್ವಿತಂ ಶುಭಮ್ ।
ವನ್ಯಂ ನೈವಾರಮಾಹಾರಂ ಕಥಂ ಸೀತೋಪಭೋಕ್ಷ್ಯತೇ ॥೫॥

ಉದ್ದಕಣ್ಣಿನವಳು ಸೀತೆ ತೊವ್ವೆ ಉಪ್ಪಿನಕಾಯಿಗಳೊಂದಿಗೆ ಸವಿಯಾದ ಅನ್ನವನ್ನೇ ಉಂಡು ಈಗ ಕಾಡುಧಾನ್ಯವನ್ನು ಹೇಗೆ ತಾನೆ ಉಣ್ಣುತ್ತಾಳೆ?

ಗೀತವಾದಿತ್ರನಿರ್ಘೋಷಂ ಶ್ರುತ್ವಾ ಶುಭಮನಿಂದಿತಾ ।
ಕಥಂ ಕ್ರವ್ಯಾದಸಿಂಹಾನಾಂ ಶಬ್ದಂ ಶ್ರೋಷ್ಯತ್ಯಶೋಭನಮ್ ॥೬॥

ದೋಷರಹಿತಳಾದ ಸೀತೆ ಮಂಗಳಕರವಾದ ಗೀತವಾದ್ಯ ಶಬ್ದಗಳನ್ನೇ ಇಂದಿನವರೆಗೆ ಕೇಳುತ್ತಿದ್ದು ಇದೀಗ ಕಾಡಿನಲ್ಲಿ ಮಾಂಸ ತಿನ್ನುವ ಸಿಂಹಗಳ ಕರ್ಕಶ ಶಬ್ದವನ್ನು ಹೇಗೆ ಆಲಿಸುತ್ತಾಳೆ?

ಮಹೇಂದ್ರಧ್ವಜಸಂಕಾಶಃ ಕ್ವ ನು ಶೇತೇ ಮಹಾಭುಜಃ ।
ಭುಜಂ ಪರಿಘಸಂಕಾಶಮುಪಾಧಾಯ ಮಹಾಬಲಃ ॥೭॥

ಇಂದ್ರಧ್ವಜದಂತೆ ಉನ್ನತಕಾಯನಾದ ಸರ್ವಪೂಜ್ಯನಾದ ಮಹಾಬಾಹು ಮಹಾಬಲನಾದ ರಾಮ ಪರಿಘದಂತೆ ಪುಷ್ಟವಾದ ತೋಳನ್ನು ದಿಂಬಾಗಿ ಮಾಡಿಕೊಂಡು ಎಲ್ಲಿ ಹೇಗೆ ಮಲಗುತ್ತಾನೆ?

ದೇವೇಂದ್ರ ತನಗೆ ಅತಿ ಪ್ರಿಯನಾದ ಉಪರಿಚರ ವಸುಚಕ್ರವರ್ತಿಗೆ ತನ್ನ ಸನ್ನಿಧಾನಉಳ್ಳ ಮೂವತ್ತೆರಡು ಮೊಳ ಉದ್ದದ ಬಿದಿರಿನ ಕೋಲನ್ನಿತ್ತ. ಹನ್ನೆರಡು ಮೊಳ ಎತ್ತರದ ವೇದಿಕೆಯ ಮೇಲೆ ಅದನ್ನು ನೆಟ್ಟು ಪೂಜಿಸಿ ನಾಡಹಬ್ಬವನ್ನೇ ಆಚರಿಸುವ ಪದ್ಧತಿಯನ್ನು ರೂಢಿಗೆ ತಂದ, ವಸುಚಕ್ರವರ್ತಿ. ಇದು ಇಂದ್ರಧ್ವಜ. ಸರ್ವಾಭೀಷ್ಟದಾಯಕ.

ಪದ್ಮವರ್ಣಂ ಸುಕೇಶಾಂತಂ ಪದ್ಮನಿಃಶ್ವಾಸಮುತ್ತಮಮ್ ।
ಕದಾ ದ್ರಕ್ಷ್ಯಾಮಿ ರಾಮಸ್ಯ ವದನಂ ಪುಷ್ಕರೇಕ್ಷಣಮ್ ॥೮॥

ಕಮಲದಂಥ ಕಣ್ಣು ಕಮಲದಂಥ ಸುವಾನೆ ಕಮಲದಂಥ ವರ್ಣಉಳ್ಳ ಅಂದದ ಕುರುಳು ಕೂದಲುಗಳಿಂದ ಕೂಡಿದ ಉತ್ತಮವಾದ ರಾಮನ ಮುಖವನ್ನು ನಾನೆಂದು ಕಾಣುವೆನೊ!

ವಜ್ರಸಾರಮಯಂ ನೂನಂ ಹೃದಯಂ ಮೇ ನ ಸಂಶಯಃ ।
ಅಪಶ್ಯಂತ್ಯಾ ನ ತಂ ಯದ್ವೈ ಫಲತೀದಂ ಸಹಸ್ರಧಾ ॥೯॥

ರಾಮನನ್ನು ಕಾಣದ ನನ್ನೆದೆ ಸಾವಿರ ಚೂರಾಗಿ ಒಡೆಯುತ್ತಿಲ್ಲ. ಎಂದಮೇಲೆ ಅದು ವಜ್ರದಷ್ಟು ಕಠಿನವೆ, ಇದರಲ್ಲಿ ಸಂಶಯವಿಲ್ಲ.

ಯತ್ತ್ವಯಾ ಕರುಣಂ ಕರ್ಮ ವ್ಯಪೋಹ್ಯ ಮಮ ಬಾಂಧವಾಃ ।
ನಿರಸ್ತಾಃ ಪರಿಧಾವಂತಿ ಸುಖಾರ್ಹಾಃ ಕೃಪಣಾ ವನೇ ॥೧೦॥

ನನ್ನ ಬಂಧುಗಳನ್ನು ನೀನು ಅನಾದರಿಂದ ಪರಿತ್ಯಜಿಸಿಬಿಟ್ಟೆ. ಅವರು ಸುಖಕ್ಕೆ ಅರ್ಹರಾಗಿದ್ದೂ ದುಃಖದಿಂದ ಕಾಡಿನಲ್ಲಿ ಹದಿನಾಲ್ಕು ವರ್ಷಕಾಲ ಅಲೆಯುವಂತಾಗಿದೆ. ನೀನು ಮಾಡಿದ ಶೋಚನೀಯವಾದ ಕ್ರೂರ ಕರ್ಮವಿದು.

ಯದಿ ಪಂಚದಶೇ ವರ್ಷೇ ರಾಘವಃ ಪುನರೇಷ್ಯತಿ ।
ಜಹ್ಯಾದ್ರಾಜ್ಯಂ ಚ ಕೋಶಂ ಚ ಭರತೋ ನೋಪಲಕ್ಷ್ಯತೇ ॥೧೧॥

ಒಂದುವೇಳೆ ಹದಿನೈದನೇ ವರ್ಷದಲ್ಲಿ ರಾಮ ಹಿಂತಿರುಗಿ ಬಂದರೂ ಭರತ ರಾಜ್ಯವನ್ನೂ ಕೋಶವನ್ನೂ ಅವನಿಗೆ ಬಿಟ್ಟುಕೊಟ್ಟಾನೆಂದು ನಾನು ಆಲೋಚಿಸಲಾರೆ.

ಭೋಜಯಂತಿ ಕಿಲ ಶ್ರಾದ್ಧೇ ಕೇಚಿತ್ ಸ್ವಾನೇವ ಬಾಂಧವಾನ್ ।
ತತಃ ಪಶ್ಚಾತ್ ಸಮೀಕ್ಷಂತೇ ಕೃತಕಾರ್ಯಾ ದ್ವಿಜರ್ಷಭಾನ್ ॥೧೨॥

ಕೆಲವರು ಶ್ರಾದ್ಧದಲ್ಲಿ ಮೊದಲಿಗೆ ಅನಿಮಂತ್ರಿತರಾದ ಬಂಧುಗಳಿಗೇ ಅನ್ನದಾನ ಮಾಡುತ್ತಾರೆ. ಆ ಕಾರ್ಯ ಮುಗಿದ ಬಳಿಕ ಆಹ್ವಾನಿತರಾದ ಉತ್ತಮ ಬ್ರಾಹ್ಮಣರನ್ನು ಭೋಜನ ಪಂಕ್ತಿಗೆ ನಿರೀಕ್ಷಿಸುತ್ತಾರೆ.

ತತ್ರ ಯೇ ಗುಣವಂತಶ್ಚ ವಿದ್ವಾಂಸಶ್ಚ ದ್ವಿಜಾತಯಃ ।
ನ ಪಶ್ಚಾತ್ತೇಽನುಮನ್ಯಂತೇ ಸುಧಾಮಪಿ ಸುರೋಪಮಾಃ ॥೧೩॥

ಆದರೆ ಆ ಉತ್ತಮಬ್ರಾಹ್ಮಣರಲ್ಲಿ ಗುಣವಂತರೂ ವಿದ್ವಾಂಸರೂ ಆದವರು ದೇವಸದೃಶರಾದವರು ಅಮೃತದಂಥ ಅನ್ನವನ್ನೂ ಕೂಡ ಅಲ್ಲಿ ಉಣಲು ಒಪ್ಪುವುದಿಲ್ಲ, ಇದು ವಿದ್ಯೆಗೆ ಮಾಡಿದ ಅವಮಾನ ಎಂದು.

ಬ್ರಾಹ್ಮಣೇಷ್ವಪಿ ತೃಪ್ತೇಷು ಭುಕ್ತಶೇಷಂ ದ್ವಿಜರ್ಷಭಾಃ ।
ನಾಭ್ಯುಪೈತುಮಲಂ ಪ್ರಾಜ್ಞಾಃ ಶೃಂಗಚ್ಛೇದಮಿವರ್ಷಭಾಃ ॥೧೪॥

ಉಂಡು ತೃಪ್ತರಾದವರು ಬ್ರಾಹ್ಮಣರೇ ಆದರೂ ಅವರ ಭುಕ್ತಶೇಷವನ್ನು ಪ್ರಾಜ್ಞರಾದ ಬ್ರಾಹ್ಮಣೋತ್ತಮರು ಸ್ವೀಕರಿಸಲು ಒಪ್ಪುವುದಿಲ್ಲ; ಒಂದು ಎತ್ತು ಹುಲ್ಲಿನ ತುದಿಯನ್ನು ತಿಂದ ಬಳಿಕ ಉಳಿದ ಹುಲ್ಲನ್ನು ಬೇರೆ ಎತ್ತುಗಳು ತಿನ್ನುವುದಿಲ್ಲ, ಹಾಗೆ.

ಏವಂ ಕನೀಯಸಾ ಭ್ರಾತ್ರಾ ಭುಕ್ತಂ ರಾಜ್ಯಂ ವಿಶಾಂಪತೇ ।
ಭ್ರಾತಾ ಜ್ಯೇಷ್ಠೋ ವರಿಷ್ಠಶ್ಚ ಕಿಮರ್ಥಂ ನಾವಮಂಸ್ಯತೇ ॥೧೫॥

ಅದೇರೀತಿ ರಾಜನೆ, ಕಿರಿಯ ಸೋದರನು ಭೋಗಿಸಿದ ರಾಜ್ಯವನ್ನು ಹಿರಿಯ ಸೋದರನಾದ ಗುಣದಲ್ಲಿಯೂ ಅತ್ಯಂತ ಶ್ರೇಷ್ಠನಾದ ರಾಮ ಏಕೆ ತಿರಸ್ಕರಿಸ-ದಿರುತ್ತಾನೆ?

ನಾಪರೇಣಾಹೃತಂ ಭಕ್ಷ್ಯಂ ವ್ಯಾಘ್ರಃ ಖಾದಿತುಮಿಚ್ಛತಿ ।
ಏವಮೇವ ನರವ್ಯಾಘ್ರಃ ಪರಲೀಢಂ ನ ಮಂಸ್ಯತೇ ॥೧೬॥

ಬೇರೆ ಮೃಗ ಕೊಂದುತಂದ ಕೊಳ್ಳೆಯನ್ನು ಹುಲಿ ಉಣಲು ಬಯಸುವುದಿಲ್ಲ. ಹೀಗೇ, ಪುರುಷೋತ್ತಮನಾದ ರಾಮ ಪರರು ಉಂಡ ಎಂಜಲನ್ನು ಉಣಲು ಬಯಸುವುದಿಲ್ಲ.

ಹವಿರಾಜ್ಯಂ ಪುರೋಡಾಶಾಃ ಕುಶಾ ಯೂಪಾಶ್ಚ ಖಾದಿರಾಃ ।
ನೈತಾನಿ ಯಾತಯಾಮಾನಿ ಕುರ್ವಂತಿ ಪುನರಧ್ವರೇ ॥೧೭॥

ಹವಿಸ್ಸು ಘೃತ ಪುರೋಡಾಶ ಕುಶ ಖದಿರಾದಿ ನಿರ್ಮಿತವಾದ ಯೂಪಸ್ತಂಭ ಇವು ಒಂದು ಯಾಗದಲ್ಲಿ ಉಪಯುಕ್ತವಾಯಿತೆಂದರೆ ಯಾತಯಾಮವೆನಿಸಿ ಇನ್ನೊಂದು ಯಾಗದಲ್ಲಿ ಅವು ಉಪಯೋಗಕ್ಕೆ ಬರಲಾರವು. ಆದರಿಂದ ಅವನ್ನು ಪುನಃ ಉಪಯೋಗಿಸುವುದಿಲ್ಲ.

ತಥಾಹ್ಯಾತ್ತಮಿದಂ ರಾಜ್ಯಂ ಹೃತಸಾರಾಂ ಸುರಾಮಿವ ।
ನಾಭಿಮಂತುಮಲಂ ರಾಮೋ ನಷ್ಟಸೋಮಮಿವಾಧ್ವರಮ್ ॥೧೮॥

ಹಾಗೇ ಸಾರಭಾಗವನ್ನು ಕುಡಿದು ಉಳಿದ ನಿಸ್ಸಾರವಾದ ಸುರೆಯಂತೆ ಸತ್ರದಲ್ಲಿ ಒಬ್ಬ ಋತ್ವಿಜನು ಸೋಮಪಾನ ಮಾಡಿದ ಬಳಿಕ ಅವನು ಮುಂದೆ ಅಶಕ್ತನಾದರೆ ಬೇರೆ ಋತ್ವಿಜರು ಆ ಸತ್ರವನ್ನು ನಡೆಸದಿರುವಂತೆ, ಭರತನು ಉಂಡುಳಿದ ರಾಜ್ಯ-ಸಂಪತ್ತನ್ನು ರಾಮ ಉಪಭೋಗಿಸಲಾರ.

ನೈವಂವಿಧಮಸತ್ಕಾರಂ ರಾಘವೋ ಮರ್ಷಯಿಷ್ಯತಿ ।
ಬಲವಾನಿವ ಶಾರ್ದೂಲೋ ವಾಲಧೇರಭಿಮರ್ಶನಮ್ ॥೧೯॥

ಇಂಥ ಅಪಚಾರವನ್ನು ರಾಮ ಸಹಿಸಲಾರ. ಬಲಿಷ್ಠವಾದ ಹುಲಿ ಬಾಲ-ವನ್ನೆಳೆದರೆ ಹೇಗೆ ಸಹಿಸಲಾರದೋ ಹಾಗೆ.

ನೈತಸ್ಯ ಸಹಿತಾ ಲೋಕಾ ಭಯಂ ಕುರ್ಯುರ್ಮಹಾಮೃಧೇ ।
ಅಧರ್ಮಂ ತ್ವಿಹ ಧರ್ಮಾತ್ಮಾ ಲೋಕಂ ಧರ್ಮೇಣ ಯೋಜಯೇತ್ ॥

ರಾಮ ಬಲಾತ್ಕಾರದಿಂದ ತಾನೇ ರಾಜ್ಯವನ್ನು ಅಪಹರಿಸಬಹುದಿತ್ತು. ಆದರೆ ಹಾಗೆ ಮಾಡಿದರೆ ಅದು ಅಧರ್ಮವಾಗುವುದು ಎಂದು ತಿಳಿದು ಹಾಗೆ ಮಾಡುವುದಿಲ್ಲ.

ಶತ್ರುಗಳಿಂದ ರಾಜ್ಯವನ್ನು ಅಪಹರಿಸಿದರೆ ಅದು ಕ್ಷತ್ರಿಯನಿಗೆ ಧರ್ಮ. ಬಂಧುಗಳಿಂದ ಅಪಹರಿಸುವುದು ಅಧರ್ಮ.

ಒಂದುವೇಳೆ ರಾಮ ಬಲಾತ್ಕಾರ ಮಾಡಿದರೆ ಆಗ ಎಲ್ಲ ಲೋಕ ಒಟ್ಟಾಗಿ ಬಂದರೂ ಮಹಾಯುದ್ಧದಲ್ಲಿ ರಾಮನಿಗೆ ಭಯ ಉಂಟುಮಾಡಲಾರರು. ಆದರೂ ಧರ್ಮಾತ್ಮನಾದ ರಾಮ ಅಧರ್ಮ ಮಾಡಲಾರ. ಅಧರ್ಮಮಾಡುವ ಲೋಕವನ್ನು ಧರ್ಮಮಾರ್ಗಕ್ಕೆ ತಂದಾನು.

ನನ್ವಸೌ ಕಾಂಚನೈರ್ಬಾಣೈರ್ಮಹಾವೀರ್ಯೋ ಮಹಾಭುಜಃ ।
ಯುಗಾಂತ ಇವ ಭೂತಾನಿ ಸಾಗರಾನಪಿ ನಿರ್ದಹೇತ್ ॥೨೧॥

ಮಹಾಬಾಹು ಮಹಾವೀರ್ಯಶಾಲಿ ರಾಮ, ಲಯಕಾಲವು ಎಲ್ಲ ಜಂತುಗಳನ್ನು ಸುಡುವಂತೆ, ಬಂಗಾರದ ಬಾಣಗಳಿಂದ ಸಾಗರಗಳನ್ನು ಕೂಡ ಸುಡಬಲ್ಲ.

ಸ ತಾದೃಶಃ ಸಿಂಹಬಲೋ ವೃಷಭಾಕ್ಷೋ ನರರ್ಷಭಃ ।
ಸ್ವಯಮೇವ ಹತಃ ಪಿತ್ರಾ ಜಲಜೇನಾತ್ಮಜೋ ಯಥಾ ॥೨೨॥

ಸಿಂಹದಂಥ ಬಲ ಗೂಳಿಯಂಥ ಕಣ್ಣುಳ್ಳ ಅಂಥ ಪುರುಷೋತ್ತಮನಾದ ರಾಮನನ್ನು, ಜಲಜಂತು ತನ್ನ ಮರಿಯನ್ನು ತಾನು ನುಂಗುವಂತೆ, ತಂದೆಯಾದ ನೀನೇ ಸ್ವತಃ ನಾಶಗೊಳಿಸಿದೆ.

ದ್ವಿಜಾತಿಚರಿತೋ ಧರ್ಮಃ ಶಾಸ್ತ್ರದೃಷ್ಟಃ ಸನಾತನಃ ।
ಯದಿ ತೇ ಧರ್ಮನಿರತೇ ತ್ವಯಾ ಪುತ್ರೇ ವಿವಾಸಿತೇ ॥೨೩॥

ನೀನು ಧರ್ಮನಿರತನಾದ ಪುತ್ರನನ್ನು ಪರಿತ್ಯಜಿಸಿರುವಾಗ, ನಿನ್ನಲ್ಲಿ ದ್ವಿಜರು ಆಚರಿಸುವ ಶಾಸ್ತ್ರೋಕ್ತವಾದ ಸನಾತನ ಧರ್ಮವಿದೆಯೆ?

ಗತಿರೇಕಾ ಪತಿರ್ನಾರ್ಯಾ ದ್ವಿತೀಯಾ ಗತಿರಾತ್ಮಜಃ ।
ತೃತೀಯಾ ಜ್ಞಾತಯೋ ರಾಜಂಶ್ಚತುರ್ಥೀ ನೇಹ ವಿದ್ಯತೇ ॥೨೪॥

ನಾರಿಗೆ ಪತಿಯೊಬ್ಬನು ಆಸರೆ, ಮಗನು ಎರಡನೇ ಆಸರೆ, ಜ್ಞಾತಿಗಳು ಮೂರನೆ ಆಸರೆ. ರಾಜನೆ,, ನಾರಿಗೆ ನಾಲ್ಕನೇ ಗತಿ ಎಂಬುದಿಲ್ಲ.

ತತ್ರ ತ್ವಂ ಚೈವ ಮೇ ನಾಸ್ತಿ ರಾಮಶ್ಚ ವನಮಾಶ್ರಿತಃ ।
ನ ವನಂ ಗಂತುಮಿಚ್ಛಾಮಿ ಸರ್ವಥಾ ನಿಹತಾ ತ್ವಯಾ ॥೨೫॥

ಈ ಮೂರು ಆಸರೆಗಳಲ್ಲಿ ನನಗೆ ನಿನ್ನ ಆಸರೆಯಂತೂ ಇಲ್ಲ. ಕೈಕೇಯಿಗೆ ವಶನಾಗಿರುವೆ. ಎರಡನೆ ಆಸರೆ ರಾಮ ಕಾಡುಪಾಲಾಗಿದ್ದಾನೆ. ಜ್ಞಾತಿಗಳು ನನಗೆ ಯಾರೂ ಇಲ್ಲ. ಅದಕ್ಕೆ ನಾನೂ ಕಾಡಿಗೆ ಹೋಗಲಾರೆ. ಪತಿಯಾದ ನಿನ್ನ ಸೇವೆಯ ಧರ್ಮ ನನ್ನನ್ನು ಕಟ್ಟಿಹಾಕಿದೆ. ಹೀಗೆ ಅನಾಥೆಯಾದ ನಾನು ಸರ್ವಥಾ ನಿನ್ನಿಂದಲೇ ಹತಳಾಗಿದ್ದೇನೆ.

ಹತಂ ತ್ವಯಾ ರಾಜ್ಯಮಿದಂ ಸರಾಷ್ಟ್ರಂ
ಹತಸ್ತಥಾತ್ಮಾ ಸಹ ಮಂತ್ರಿಭಿಶ್ಚ ।
ಹತಾ ಸಪುತ್ರಾಸ್ಮಿ ಹತಾಶ್ಚ ಪೌರಾಃ
ಸುತಶ್ಚ ಭಾರ್ಯಾ ಚ ತವ ಪ್ರಹೃಷ್ಟೌ ॥೨೬॥

ನೀನು ಈ ರಾಜ್ಯವನ್ನು ರಾಷ್ಟ್ರದೊಂದಿಗೆ ನಾಶಮಾಡಿರುವೆ. ನಿನ್ನನ್ನೂ ಮಂತ್ರಿ-ಗಳೊಂದಿಗೆ ನೀನೆ ನಾಶ ಮಾಡಿಕೊಂಡೆ. ನಾನೂ ಮಗನೊಂದಿಗೆ ಹತಳಾದೆ. ಪ್ರಜೆಗಳೂ ಹತರಾದರು. ಇನ್ನು ಉಳಿದವರಿಬ್ಬರು ಭರತ ಮತ್ತು ನಿನ್ನ ಮಡದಿ ಕೈಕೇಯಿ. ಈ ಇಬ್ಬರು ಮಾತ್ರ ಬಲು ಹರ್ಷಗೊಂಡಿದ್ದಾರೆ.

ಇಮಾಂ ಗಿರಂ ದಾರುಣಶಬ್ದಸಂಶ್ರಿತಾಂ
ನಿಶಮ್ಯ ರಾಜಾ ವಿಮುಮೋಹ ದುಃಖಿತಃ ।
ತತಃ ಸ ಶೋಕಂ ಪ್ರವಿವೇಶ ಪಾರ್ಥಿವಃ
ಸುದುಷ್ಕೃತಂ ಚಾಪಿ ಪುನಸ್ತದಾ ಸ್ಮರನ್ ॥೨೭॥

ಕೌಸಲ್ಯೆ ಆಡಿದ ಕಠೋರಶಬ್ದಯುಕ್ತವಾದ ಈ ಮಾತನ್ನು ಕೇಳಿ ರಾಜಾ ದಶರಥ ದುಃಖದಿಂದ ಮೈಮರೆತ. ಶೋಕದಲ್ಲಿ ಮುಳುಗಿದ. ಹಿಂದೆ ತಾನು ಮಾಡಿದ್ದ ಪಾಪಕೃತ್ಯವೊಂದನ್ನು ಆಗ ನೆನೆದುಕೊಂಡ.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಅರವತ್ತೊಂದನೇ ಸರ್ಗ ಮುಗಿಯಿತು.

ದ್ವಿಷಷ್ಟಿತಮ ಸರ್ಗಃ
ಸರ್ಗ – 62

ಕೌಸಲ್ಯೆ ದಶರಥನ ಕ್ಷಮೆಯನ್ನು ಬೇಡುವುದು.

ಏವಂ ತು ಕ್ರುದ್ಧಯಾ ರಾಜಾ ರಾಮಮಾತ್ರಾ ಸಶೋಕಯಾ ।
ಶ್ರಾವಿತಃ ಪರುಷಂ ವಾಕ್ಯಂ ಚಿಂತಯಾಮಾಸ ದುಃಖಿತಃ ॥೧॥

ಶೋಕಮಗ್ನಳಾದ ಕೌಸಲ್ಯೆ ಕೋಪದಿಂದ ಕಟುವಾಗಿ ನುಡಿದಾಗ ರಾಜಾ ದಶರಥ ದುಃಖಿತನಾಗಿ ಚಿಂತಾಮಗ್ನನಾದ.

ಚಿಂತಯಿತ್ವಾ ಸ ಚ ನೃಪೋ ಮುಮೋಹ ವ್ಯಾಕುಲೇಂದ್ರಿಯಃ ।
ಅಥ ದೀರ್ಘೇಣ ಕಾಲೇನ ಸಂಜ್ಞಾಮಾಪ ಪರಂತಪಃ ॥೨॥

ಚಿಂತೆ ಮಾಡುತ್ತ ರಾಜ ಇಂದ್ರಿಯ ವ್ಯಾಕುಲತೆಯಿಂದ ಮೈಮರೆತ. ಎಷ್ಟೋ ಹೊತ್ತಿನ ಬಳಿಕ ಶತ್ರುನಾಶಕನಾದ ರಾಜ ಎಚ್ಚೆತ್ತುಕೊಂಡ.

ಸ ಸಂಜ್ಞಾಮುಪಲಭ್ಯೈವ ದೀರ್ಘಮುಷ್ಣಂ ಚ ನಿಃಶ್ವಸನ್ ।
ಕೌಸಲ್ಯಾಂ ಪಾರ್ಶ್ವತೋ ದೃಷ್ಟ್ವಾ ಪುನಶ್ಚಿಂತಾಮುಪಾಗಮತ್ ॥೩॥

ಅವನು ಎಚ್ಚರಗೊಂಡು ನಿಡಿದಾದ ಬಿಸಿಯಾದ ಶ್ವಾಸಬಿಡುತ್ತ ಬಳಿಯಲ್ಲಿ ಕೌಸಲ್ಯೆಯನ್ನು ಒಮ್ಮೆ ನೋಡಿ ಪುನಃ ಚಿಂತನೆಗೊಳಗಾದ.

ತಸ್ಯ ಚಿಂತಯಮಾನಸ್ಯ ಪ್ರತ್ಯಭಾತ್ ಕರ್ಮ ದುಷ್ಕೃತಮ್ ।
ಯದನೇನ ಕೃತಂ ಪೂರ್ವಮಜ್ಞಾನಾಚ್ಛಬ್ದವೇಧಿನಾ ॥೪॥

ಅವನು ಚಿಂತಿಸುತ್ತಿದ್ದಂತೆ, ಕಣ್ಣಿಗೆ ಕಾಣದ ಲಕ್ಷ್ಯವನ್ನು ಶಬ್ದದಿಂದಲೇ ಗುರುತಿಸಿ ಅದರ ಮೇಲೆ ಬಾಣವೆಸೆಯುವ 'ಶಬ್ದವೇಧಿ' ವಿದ್ಯೆಯನ್ನರಿತಿದ್ದ ತಾನು, ಹಿಂದೆ ಅಜ್ಞಾನದಿಂದ ಎಸಗಿದ್ದ ಒಂದು ದುಷ್ಕರ್ಮ ತನಗೆ ಈಗ ಹೊಳೆಯಿತು.

ಏಮನಾಸ್ತೇನ ಶೋಕೇನ ರಾಮಶೋಕೇನ ಚ ಪ್ರಭುಃ ।
ದ್ವಾಭ್ಯಾಮಪಿ ಮಹಾರಾಜಃ ಶೋಕಾಭ್ಯಾಮನ್ವತಪ್ಯತ ॥೫॥

ಸಮರ್ಥ ಮಹಾರಾಜನಾದ ದಶರಥ ಆ ದುಷ್ಕರ್ಮದಿಂದಲೂ ರಾಮನನ್ನು ಕಾಡಿಗೆ ಅಟ್ಟಿದ್ದ ಶೋಕದಿಂದಲೂ ಮನದಲ್ಲಿ ನೊಂದು, ಎರಡೂ ಶೋಕಗಳಿಂದ ಪರಿತಪಿಸಿದ.

ದಹ್ಯಮಾನಃ ಸ ಶೋಕಾಭ್ಯಾಂ ಕೌಸಲ್ಯಾಮಾಪ ಭೂಪತಿಃ ।
ವೇಪಮಾನೋಽಂಜಲಿಂ ಕೃತ್ವಾ ಪ್ರಸಾದಾರ್ಥಮವಾಙ್ಮುಖಃ ॥೬॥

ಎರಡು ಶೋಕಗಳಿಂದಲೂ ಏಕಕಕಾಲದಲ್ಲಿ ಬೇಯುತ್ತ ನಡುಗುತ್ತ ತಲೆತಗ್ಗಿಸಿ ಕೌಸಲ್ಯೆಯನ್ನು ಸಮಾಧಾನಗೊಳಿಸುವ ಉದ್ದೇಶದಿಂದ ರಾಜ ಕೈಮುಗಿದು ನುಡಿದ.

ಪ್ರಸಾದಯೇ ತ್ವಾಂ ಕೌಸಲ್ಯೇ ರಚಿತೋಽಯಂ ಮಯಾಂಜಲಿಃ ।
ವತ್ಸಲಾ ಚಾನೃಶಂಸಾ ಚ ತ್ವಂ ಹಿ ನಿತ್ಯಂ ಪರೇಷ್ವಪಿ ॥೭॥

ಕೌಸಲ್ಯೆ ನಾನು ನಿನಗೆ ಕೈಮುಗಿಯುತ್ತೇನೆ. ಪ್ರಸನ್ನಳಾಗು. ನೀನು ಪರರ ವಿಷಯದಲ್ಲಿಯೂ ಸದಾ ವಾತ್ಸಲ್ಯಉಳ್ಳವಳು. ದಯಾಪರಳು ತಾನೆ?

ಭರ್ತಾ ತು ಖಲು ನಾರೀಣಾಂ ಗುಣವಾನ್ನಿರ್ಗುಣೋಽಪಿ ವಾ ।
ಧರ್ಮಂ ವಿಮೃಶಮಾನಾನಾಂ ಪ್ರತ್ಯಕ್ಷಂ ದೇವಿ ದೈವತಮ್ ॥೮॥

ದೇವಿ, ಧರ್ಮ ಅಧರ್ಮಗಳ ಬಗ್ಗೆ ವಿಮರ್ಶೆ ಮಾಡಬಲ್ಲ ನಾರಿಯರಿಗೆ, ಪತಿಯು ಗುಣವಿಲ್ಲದವನಾದರೂ ಪ್ರತ್ಯಕ್ಷ ದೇವತೆಯೆ ಸರಿ.

ಸಾ ತ್ವಂ ಧರ್ಮಪರಾ ನಿತ್ಯಂ ದೃಷ್ಟಲೋಕಪರಾವರಾ ।
ನಾರ್ಹಸೇ ವಿಪ್ರಿಯಂ ವಕ್ತುಂ ದುಃಖಿತಾಪಿ ಸುದುಃಖಿತಮ್ ॥೯॥

ಸದಾ ಧರ್ಮನಿಷ್ಠೆ ಉಳ್ಳವಳು. ಲೋಕದ ರೀತಿನೀತಿಗಳನ್ನು ಬಲ್ಲವಳು. ಅಂಥ ನೀನು ಎಷ್ಟು ದುಃಖಿತೆಯಾದರೂ ದುಃಖದಿಂದ ಬಹಳ ಬೇಯುತ್ತಿರುವ ನನಗೆ ಕಟುನುಡಿಯನ್ನು ನುಡಿಯಬಾರದು.

ತದ್ವಾಕ್ಯಂ ಕರುಣಂ ರಾಜ್ಞಃ ಶ್ರುತ್ವಾ ದೀನಸ್ಯ ಭಾಷಿತಮ್ ।
ಕೌಸಲ್ಯಾ ವ್ಯಸೃಜದ್‌ಬಾಷ್ಪಂ ಪ್ರಣಾಲೀವ ನವೋದಕಮ್ ॥೧೦॥

ದುಃಖಿಯಾದ ರಾಜ ಕರುಣಾಜನಕವಾಗಿ ನುಡಿದ ಈ ಮಾತನ್ನು ಕೇಳಿ ಕೌಸಲ್ಯೆ ಹೊಸ ಮಳೆನೀರನ್ನು ಕೊಳವೆಯ ಮೂಲಕ ಹರಿಸುವಂತೆ ವೇಗವಾಗಿ ಕಣ್ಣೀರಕೋಡಿ ಹರಿಸಿದಳು.

ಸಾ ಮೂರ್ಧ್ನಿ ಬದ್ಧ್ವಾ ರುದತೀ ರಾಜ್ಞಃ ಪದ್ಮಮಿವಾಂಜಲಿಮ್ ।
ಸಂಭ್ರಮಾದಬ್ರವೀತ್ ತ್ರಸ್ತಾ ತ್ವರಮಾಣಾಕ್ಷರಂ ವಚಃ ॥೧೧॥

ಕೌಸಲ್ಯೆ ತಾನು ಪತಿಯಲ್ಲಿ ಮಹಾಅಪರಾಧಗೈದೆನೆಂದು ಭೀತಳಾಗಿ ಬಲು ಆದರದಿಂದ ತನಗೆ ಪತಿಯು ಜೋಡಿಸಿದ್ದ ಕರಗಳನ್ನು ಕಮಲದ ಹೂವಿನಂತೆ ತನ್ನ ತಲೆಯ ಮೇಲೆ ಸೆಳೆದಿರಿಸಿಕೊಂಡು ಅಳುತ್ತ ತಡವರಿಸುತ್ತ ನುಡಿದಳು.

ಪ್ರಸೀದ ಶಿರಸಾ ಯಾಚೇ ಭೂಮೌ ನಿಪತಿತಾಸ್ಮಿ ತೇ ।
ಯಾಚಿತಾಸ್ಮಿ ಹತಾ ದೇವ ಹಂತವ್ಯಾಹಂ ನ ಹಿ ತ್ವಯಾ ॥೧೨॥

ಪತಿದೇವ, ಪ್ರಸನ್ನನಾಗು, ನೆಲದಮೇಲೆ ಬೀಳುತ್ತೇನೆ, ತಲೆಬಾಗಿ ಬೇಡುತ್ತೇನೆ. ನೀನು ನನ್ನಲ್ಲಿ ಹೀಗೆ ಕ್ಷಮಾಯಾಚನೆ ಮಾಡಿದರೆ ನನ್ನನ್ನು ಕೊಂದಂತೆಯೇ ಆಗುವುದು. ಬೇಡ, ಹಾಗೆ ನನ್ನನ್ನು ಕೊಲ್ಲಬೇಡ.

ನೈಷಾ ಹಿ ಸಾ ಸ್ತ್ರೀ ಭವತಿ ಶ್ಲಾಘನೀಯೇನ ಧೀಮತಾ ।
ಉಭಯೋರ್ಲೋಕಯೋರ್ವೀರ ಪತ್ಯಾ ಯಾ ಸಂಪ್ರಸಾದ್ಯತೇ ॥೧೩॥

ಇಹ ಪರಲೋಕಗಳಲ್ಲಿ ಪ್ರಶಂಸಾರ್ಹನಾದ ಧೀಮಂತನಾದ ನಿನ್ನಂಥ ಪತಿಯಿಂದ ಕ್ಷಮಾಯಾಚನೆ ಮಾಡಿಸಿಕೊಳ್ಳುವ ಸ್ತ್ರೀಯು ಸಾಧ್ವಿ ಎನಿಸುವುದಿಲ್ಲ.

ಜಾನಾಮಿ ಧರ್ಮಂ ಧರ್ಮಜ್ಞ ತ್ವಾ ಜಾನೇ ಸತ್ಯವಾದಿನಮ್ ।
ಪುತ್ರಶೋಕಾರ್ತಯಾ ತತ್ತು ಮಯಾ ಕಿಮಪಿ ಭಾಷಿತಮ್ ॥೧೪॥

ನಾನು ಸಾಧ್ವಿಯರ ಧರ್ಮವನ್ನು ಬಲ್ಲೆ. ನೀನು ಸತ್ಯವಾದಿ, ಸತ್ಯಕ್ಕಾಗಿ ರಾಮ-ನನ್ನು ಕಾಡಿಗೆ ಅಟ್ಟಿದೆ ಎಂಬುದನ್ನೂ ಬಲ್ಲೆ. ಆದರೆ ಧರ್ಮಜ್ಞನೆ, ಪುತ್ರ ವಿಯೋಗದ ದುಃಖಾರ್ತಳಾಗಿ ನಾನು ಏನೋ ಆಡಬಾರದುದನ್ನು ಆಡಿಬಿಟ್ಟೆ.

ಶೋಕೋ ನಾಶಯತೇ ಧೈರ್ಯಂ ಶೋಕೋ ನಾಶಯತೇ ಶ್ರುತಮ್ ।
ಶೋಕೋ ನಾಶಯತೇ ಸರ್ವಂ ನಾಸ್ತಿ ಶೋಕಸಮೋ ರಿಪುಃ ॥೧೫॥

ಶೋಕವು ಮನಸಿನ ತಾಳ್ಮೆಯನ್ನು ನಾಶಮಾಡುತ್ತದೆ, ಶೋಕವು ಶಾಸ್ತ್ರಜ್ಞಾನವನ್ನು ನಾಶಪಡಿಸುತ್ತದೆ. ಶೋಕವು ಎಲ್ಲ ಸದ್ಗುಣವನ್ನೂ ನಾಶಪಡಿಸುತ್ತದೆ. ಶೋಕಕ್ಕೆ ಸಮವಾದ ಶತ್ರು ಇಲ್ಲ.

ಶಕ್ಯಮಾಪತಿತಃ ಸೋಢುಂ ಪ್ರಹಾರೋ ರಿಪುಹಸ್ತತಃ ।
ಸೋಢುಮಾಪತಿತಃ ಶೋಕಃ ಸುಸೂಕ್ಷ್ಮೋಽಪಿ ನ ಶಕ್ಯತೇ ॥೧೬॥

ಶತ್ರುವಿನ ಕೈಯಿಂದ ಬೀಳುವ ದೊಡ್ಡ ಏಟನ್ನೂ ತಡೆದುಕೊಳ್ಳುವುದು ಶಕ್ಯ. ಶೋಕವು ಬಹು ಅಲ್ಪವಾಗಿದ್ದರೂ ಸಹಿಸಿಕೊಳ್ಳಲಾಗುವುದಿಲ್ಲ.

ವನವಾಸಾಯ ರಾಮಸ್ಯ ಪಂಚರಾತ್ರೋಽದ್ಯ ಗಣ್ಯತೇ ।
ಯಃ ಶೋಕಹತಹರ್ಷಾಯಾಃ ಪಂಚವರ್ಷೋಪಮೋ ಮಮ ॥೧೭॥

ಇಂದಿಗೆ ರಾಮನ ವನವಾಸದಲ್ಲಿ ಐದು ದಿನಗಳು ಮಾತ್ರ ಕಳೆದಿವೆ. ಆದರೆ ಶೋಕದಿಂದ ಮನಸಿನ ನೆಮ್ಮದಿಯನ್ನೇ ಕಳೆದುಕೊಂಡಿರುವ ನನಗೆ ಈ ಐದು ದಿನಗಳು ಐದು ವರ್ಷಗಳಂತೆಯೇ ಆಗಿವೆ.

ರಾಮ ಅಯೋಧ್ಯೆಯಿಂದ ಹೊರಟ ಆರನೆ ದಿನ ಸಾಯಂಕಾಲ ಸುಮಂತ್ರ ಅಯೋಧ್ಯೆಗೆ ಹಿಂತಿರುಗಿದ್ದಾನೆ.

ತಂ ಹಿ ಚಿಂತಯಮಾನಾಯಾಃ ಶೋಕೋಽಯಂ ಹೃದಿ ವರ್ಧತೇ ।
ನದೀನಾಮಿವ ವೇಗೇನ ಸಮುದ್ರಸಲಿಲಂ ಮಹತ್ ॥೧೮॥

ರಾಮನನ್ನೆ ಚಿಂತಿಸುತ್ತಿರುವ ನನ್ನ ಎದೆಯಲ್ಲಿ ಶೋಕ ಉಕ್ಕುತ್ತಿದೆ. ನದಿಗಳ ವೇಗದಿಂದ ನದೀಮುಖದಲ್ಲಿ ಸಮುದ್ರಜಲ ಉಕ್ಕುವಂತೆ.

ಏವಂ ಹಿ ಕಥಯಂತ್ಯಾಸ್ತು ಕೌಸಲ್ಯಾಯಾಃ ಶುಭಂ ವಚಃ ।
ಮಂದರಶ್ಮಿರಭೂತ್ ಸೂರ್ಯೋ ರಜನೀ ಚಾಭ್ಯವರ್ತತ ॥೧೯॥

ಹೀಗೆ ಕೌಸಲ್ಯೆ ಪತಿಗೆ ಸಂತೈಕೆಯ ಮಾತನ್ನಾಡುತ್ತಿದ್ದಂತೆ ಸೂರ್ಯಕಿರಣಗಳು ಶಾಂತವಾದುವು, ರಾತ್ರಿ ಆಗಮಿಸತೊಡಗಿತು.

ಅಥ ಪ್ರಸಾದಿತೋ ವಾಕ್ಯೈರ್ದೇವ್ಯಾ ಕೌಸಲ್ಯಯಾ ನೃಪಃ ।
ಶೋಕೇನ ಚ ಸಮಾಕ್ರಾಂತೋ ನಿದ್ರಾಯಾ ವಶಮೇಯಿವಾನ್ ॥೨೦॥

ದೇವಿ ಕೌಸಲ್ಯೆ ರಾಜನನ್ನು ಮೃದುನುಡಿಗಳಿಂದ ಸಂತೈಸಿದಾಗ ಶೋಕಪರವಶನಾಗಿದ್ದ ರಾಜ ನಿದ್ರಾಪರವಶನಾದ.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಅರವತ್ತೆರಡನೇ ಸರ್ಗ ಮುಗಿಯಿತು.

❖

ತ್ರಿಷಷ್ಟಿತಮಃ ಸರ್ಗಃ

ಸರ್ಗ – 63

ಋಷಿಕುಮಾರನನ್ನು ತಾನು ಕೊಂದ ವೃತ್ತಾಂತವನ್ನು ದಶರಥ ಕೌಸಲ್ಯೆಗೆ ಹೇಳುವುದು.

ಪ್ರತಿಬುದ್ಧೋ ಮುಹೂರ್ತೇನ ತೋಕೋಪಹತಚೇತನಃ ।
ಅಥ ರಾಜಾ ದಶರಥಶ್ಚಿಂತಾಮಭ್ಯವಪದ್ಯತ ॥೧॥

ಶೋಕದಿಂದ ಮನಃಸ್ವಾಸ್ಥ್ಯ ಕಳೆದುಕೊಂಡ ರಾಜಾ ದಶರಥ ಒಂದು ಮುಹೂರ್ತದ ಬಳಿಕ ಎಚ್ಚೆತ್ತು ಚಿಂತಿಸಲು ತೊಡಗಿದ.

ರಾಮಲಕ್ಷ್ಮಣಯೋಶ್ಚೈವ ವಿವಾಸಾದ್ವಾಸವೋಪಮಮ್ ।
ಆವಿವೇಶೋಪಸರ್ಗಸ್ತಂ ತಮಃ ಸೂರ್ಯಮಿವಾಸುರಮ್ ॥೨॥

ರಾಹುಗ್ರಹಣ ಸೂರ್ಯನನ್ನು ಆವರಿಸುವಂತೆ ರಾಮಲಕ್ಷ್ಮಣರ ವಿಯೋಗ ದಿಂದ ಉಂಟಾದ ಶೋಕ ದೇವೇಂದ್ರನಂಥ ದಶರಥನನ್ನು ಆವರಿಸಿತು.

ಸಭಾರ್ಯೇ ನಿರ್ಗತೇ ರಾಮೇ ಕೌಸಲ್ಯಾಂ ಕೋಸಲೇಶ್ವರಃ ।
ವಿವಕ್ಷುರಸಿತಾಪಾಂಗೀಂ ಸ್ಮೃತ್ವಾ ದುಷ್ಕೃತಮಾತ್ಮನಃ ॥೩॥

ಶ್ರೀರಾಮ ಭಾರ್ಯಾಸಮೇತನಾಗಿ ಅಯೋಧ್ಯೆಯಿಂದ ನಿರ್ಗಮಿಸಿದಾಗ ಕೋಸಲದೇಶಾಧಿಪತಿ ದಶರಥನು ತನ್ನ ಹಿಂದಿನ ದುಷ್ಕರ್ಮವನ್ನೆ ಇದಕ್ಕೆ ಕಾರಣ-ವೆಂದು ಚಿಂತಿಸಿ ಅದನ್ನು ಕಪ್ಪಾದ ಕಡೆಗಣ್ಣ ಕೌಸಲ್ಯೆಗೆ ಹೇಳಲು ಬಯಸಿದ.

ಸ ರಾಜಾ ರಜನಿಂ ಷಷ್ಠೀಂ ರಾಮೇ ಪ್ರವ್ರಾಜಿತೇ ವನಮ್ ।
ಅರ್ಧರಾತ್ರೇ ದಶರಥಃ ಸಂಸ್ಮರನ್ ದುಷ್ಕೃತಂ ಕೃತಮ್ ॥೪॥

ರಾಮನು ಕಾಡಿಗೆ ಹೋಗಿ ಆರನೆಯ ಅರ್ಧರಾತ್ರಿ ವೇಳೆಯಲ್ಲಿ ತಾನು ಹಿಂದೆ ಗೈದಿದ್ದ ಒಂದು ದುಷ್ಕೃತ್ಯವನ್ನು ನೆನಪಿಸಿಕೊಂಡ.

ಸ ರಾಜಾ ಪುತ್ರಶೋಕಾರ್ತಃ ಸ್ಮೃತ್ವಾ ದುಷ್ಕೃತಮಾತ್ಮನಃ ।
ಕೌಸಲ್ಯಾಂ ಪುತ್ರಶೋಕಾರ್ತಾಮಿದಂ ವಚನಮಬ್ರವೀತ್ ॥೫॥

ರಾಜಾ ದಶರಥನು ಪುತ್ರಶೋಕಾರ್ತನಾಗಿ ತನ್ನ ದುಷ್ಕರ್ಮ ಒಂದನ್ನು ನೆನಪಿಸಿ-ಕೊಂಡು ಪುತ್ರ ಶೋಕಾರ್ತಳಾದ ಕೌಸಲ್ಯೆಗೆ ಈ ಮಾತನ್ನು ಹೇಳಿದ.

ಯದಾಚರತಿ ಕಲ್ಯಾಣಿ ಶುಭಂ ವಾ ಯದಿ ವಾऽಶುಭಮ್ ।
ತದೇವ ಲಭತೇ ಭದ್ರೇ ಕರ್ತಾ ಕರ್ಮಜಮಾತ್ಮನಃ ॥೬॥

ಕಲ್ಯಾಣಿ, ಮಾನವನು ಒಳ್ಳೆಯದನ್ನಾಗಲಿ ಕೆಟ್ಟದನ್ನಾಗಲಿ ಏನು ಕರ್ಮವನ್ನು ಮಾಡುವನೋ ತನ್ನ ಕರ್ಮದಿಂದಾಗುವ ಅದೇ ಬಗೆಯ ಫಲವನ್ನು ಕರ್ತನಾದ ಆತ ಪಡೆಯುತ್ತಾನೆ.

ಗುರುಲಾಘವಮರ್ಥಾನಾಮಾರಂಭೇ ಕರ್ಮಣಾಂ ಫಲಮ್ ।
ದೋಷಂ ವಾ ಯೋ ನ ಜಾನಾತಿ ಸ ಬಾಲ ಇತಿ ಹೋಚ್ಯತೇ ॥೭॥

ಕರ್ಮವನ್ನು ಆರಂಭಿಸುವ ಸಮಯದಲ್ಲಿ ಕರ್ಮದ ಫಲವು ಗುರುವೆ ಲಘುವೆ, ಫಲವು ಒಳ್ಳೆಯದೆ ಕೆಟ್ಟದೆ, ಫಲವಿದೆಯೆ ಇಲ್ಲವೆ ಎಂಬುದನ್ನು ಯಾರು ಆಲೋಚಿಸುವುದಿಲ್ಲವೋ ಅವನು ಬಾಲಕ, ಬುದ್ಧಿ ಇಲ್ಲದವನೇ ಎಂದೆನಿಸುತ್ತಾನೆ.

ಕಶ್ಚಿದಾಮ್ರವಣಂ ಛಿತ್ವಾ ಪಲಾಶಾಂಶ್ಚ ನಿಷಿಂಚತಿ ।
ಪುಷ್ಪಂ ದೃಷ್ಟ್ವಾ ಫಲೇ ಗೃಧ್ನುಃ ಸ ಶೋಚತಿ ಫಲಾಗಮೇ ॥೮॥

ಪುಷ್ಪವನ್ನು ನೋಡಿ ಫಲವನ್ನು ಬಯಸುವವನು ಬುದ್ಧಿ ಹೀನನಾದ ಒಬ್ಬ ಮಾನವ, ಮಾವಿನ ತೋಪನ್ನು ಕಡಿದು ಮುತ್ತುಗದ ಮರಗಳಿಗೆ ನೀರೆರೆಯುತ್ತಾನೆ. ಫಲ ಉಂಟಾಗುವ ಸಮಯದಲ್ಲಿ ಮುತ್ತುಗದ ಹಣ್ಣು ತಿಂದರೆ ಒಡನೇ ಹೊಟ್ಟೆ-ನೋವು ಬರುತ್ತದೆ ಎಂದು ವೈದ್ಯರು ಹೇಳುತ್ತಾರೆ. ಅದರಿಂದ ಹೋ, ತಾನು ತಪ್ಪು ಮಾಡಿದೆನೆಂದು ಪಶ್ಚಾತ್ತಾಪಡುತ್ತಾನೆ.

ಮುತ್ತುಗದ ಹೂ ನೋಡಲು ಸುಂದರವಾಗಿರುವುದರಿಂದ ಅದರ ಫಲವೂ ಉತ್ತಮವಿರಬಹುದೆಂದೂ, ಮಾವಿನ ಹೂ ಸುಂದರವಲ್ಲವಾದ್ದರಿಂದ ಅದರ ಹಣ್ಣು ಉತ್ತಮವಿರಲಾರದೆಂದೂ ಭ್ರಮಿಸಿದ ಆತನಿಗೆ ಫಲ ಬರುವ ಸಮಯದಲ್ಲಿ ಆ ಭ್ರಮನಿರಸನವಾಗುತ್ತದೆ.

ಅವಿಜ್ಞಾಯ ಫಲಂ ಯೋ ಹಿ ಕರ್ಮ ತ್ವೇವಾನುಧಾವತಿ ।
ಸ ಶೋಚೇತ್ ಫಲವೇಲಾಯಾಂ ಯಥಾ ಕಿಂಶುಕಸೇಚಕಃ ॥೯॥

ಯಾರು ಫಲವನ್ನು ಸರಿಯಾಗಿ ಊಹಿಸಿಕೊಳ್ಳದೆ ಕರ್ಮವನ್ನೇ ಆತುರಪಟ್ಟು ಮಾಡುವನೋ, ಅವನು ಫಲಕಾಲದಲ್ಲಿ ಮುತ್ತುಗಕ್ಕೆ ನೀರೆರೆದವನಂತೆ, ಪಶ್ಚಾತ್ತಾಪ ಪಡಬೇಕಾಗುತ್ತದೆ.

ಸೋಽಹಮಾಮ್ರವಣಂ ಛಿತ್ವಾ ಪಲಾಶಾಂಶ್ಚ ನ್ಯಷೇಚಯಮ್ ।
ರಾಮಂ ಫಲಾಗಮೇ ತ್ಯಕ್ತ್ವಾ ಪಶ್ಚಾಚ್ಛೋಚಾಮಿ ದುರ್ಮತಿಃ ॥೧೦॥

ನಾನೂ ಕೂಡ ದುರ್ಬುದ್ಧಿಯವನು. ಹಾಗೇ ಮಾವಿನ ತೋಪನ್ನು ಕಡಿದು ಮುತ್ತುಗಕ್ಕೆ ನೀರೆರೆದೆ, ಫಲ ಬರುವ ಕಾಲದಲ್ಲಿ. ರಾಮನನ್ನು ಪರಿತ್ಯಜಿಸಿ ಈಗ ಪಶ್ಚಾತ್ತಾಪ ಪಡುತ್ತಿದ್ದೇನೆ.

ಲಬ್ಧಶಬ್ದೇನ ಕೌಸಲ್ಯೇ ಕುಮಾರೇಣ ಧನುಷ್ಮತಾ ।
ಕುಮಾರಃ ಶಬ್ದವೇಧೀತಿ ಮಯಾ ಪಾಪಮಿದಂ ಕೃತಮ್ ॥೧೧॥

ಕೌಸಲ್ಯೆ, ಹಿಂದೆ ನಾನು ಧನುರ್ಧರನಾದ ಕುಮಾರನಾಗಿದ್ದಾಗ ಶಬ್ದವೇಧಿ ಎಂದು ಹೆಸರುಗಳಿಸಿದೆ. 'ಅಜರಾಜನ ಕುಮಾರ ದಶರಥನು ಶಬ್ದವೇಧಿ' ಎಂದು ಹೊಗಳಿಸಿ-ಕೊಂಡೆ. ಅದರಿಂದ ಒಂದು ಪಾಪಕಾರ್ಯ ಮಾಡಿದೆ.

ತದಿದಂ ಮೇಽನುಸಂಪ್ರಾಪ್ತಂ ದೇವಿ ದುಃಖಂ ಸ್ವಯಂ ಕೃತಮ್ ।
ಸಂಮೋಹಾದಿವ ಬಾಲೇನ ಯದಾ ಸ್ಯಾದ್ಭಕ್ಷಿತಂ ವಿಷಮ್ ॥೧೨॥

ಅದರ ಫಲ, ದೇವಿ, ಈಗ ನನಗೆ ಪ್ರಾಪ್ತವಾಗಿದೆ. ಅದರಿಂದ ಇದು ಸ್ವಯಂಕೃತ-ವಾದ ಅನರ್ಥ. ಇದು ಮುಗ್ಧ ಬಾಲಕನು ತಿಳಿಯದೆ ವಿಷವನ್ನು ಭಕ್ಷಿಸಿದಂತಾಯಿತು.

ಯಥಾನ್ಯಃ ಪುರುಷಃ ಕಶ್ಚಿತ್ ಪಲಾಶೈರ್ಮೋಹಿತೋ ಭವೇತ್ ।
ಏವಂ ಮಯಾಪ್ಯವಿಜ್ಞಾತಂ ಶಬ್ದವೇಧ್ಯಮಯಂ ಫಲಮ್ ॥೧೩॥

ಬುದ್ಧಿ ಇಲ್ಲದ ಮಾನವನೊಬ್ಬ ಮುತ್ತುಗದ ಹೂವಿಗೆ ಮರುಳಾದಂತೆ ನಾನೂ ತಿಳಿಯದೆ ಶಬ್ದವೇಧಿ ಬಾಣಪ್ರಯೋಗರೂಪವಾದ ಕರ್ಮವನ್ನೇ ಮಾಡಿಬಿಟ್ಟೆ.

ಮುತ್ತುಗದ ಹೂ ಬಲು ಆಕರ್ಷಕವಾಗಿರುವುದನ್ನು ಕಂಡು ಅದರ ಫಲ ಇನ್ನೆಷ್ಟು ಆಕರ್ಷಕವಿರಬಹುದೆಂದುಕೊಂಡು ಮುತ್ತುಗಕ್ಕೆ ನೀರೆರೆದಂತೆ ಶಬ್ದವೇಧಿ ಬಾಣಪ್ರಯೋಗ ಕಾಲದಲ್ಲಿ ಅದು ಹೂವಿನಂತೆ ಆಕರ್ಷಕವಾದ ಎಲ್ಲರೂ ಹೊಗಳುವ ಬಹಳ ಒಳ್ಳೆಯ ಹೆಸರು ತಂದಿತೆಂದು ಅದನ್ನೇ ಅಭ್ಯಾಸಮಾಡಿದೆ

ಪೋಷಿಸಿದೆ. ಆದರೆ ಅದರ ಫಲಕಾಲದಲ್ಲಿ ಈಗ ನಿರೀಕ್ಷಿತವಾದ ರಾಮರಾಜ್ಯಾಭಿಷೇಕವೆಂಬ ಫಲ ಬಾರದೆ ಹೋಯಿತು. ಫಲಹಾನಿ ಉಂಟಾಯಿತು. ನನ್ನ ನಿರೀಕ್ಷೆ ಸುಳ್ಳಾಯಿತು. ಶಬ್ದಭೇದಿ ಬಾಣದಿಂದ ಮುನಿಕುಮಾರ ಹತನಾದ್ದರಿಂದ 'ಪುತ್ರವಿಯೋಗದಿಂದಲೇ ನಿನಗೆ ಮರಣ'ವೆಂದು ಘೋರವಾದ ಮುನಿಶಾಪ ಬಂದಿತು. ಈ ಶಾಪ ಪ್ರಭಾವದಿಂದಲೆ ಕೈಕೇಯಿಗೆ ವರದಾನ ಮಾಡಿ ರಾಮನನ್ನು ನಾನು ಕಳೆದುಕೊಂಡೆ, ಪುತ್ರಶೋಕಕ್ಕೆ ತುತ್ತಾದೆ ಎನ್ನುತ್ತಿದ್ದಾನೆ ದಶರಥ. ಇದರ ವಿವರ ಮುಂದೆ ಬರುತ್ತದೆ.

ದೇವ್ಯನೂಢಾ ತ್ವಮಭವೋ ಯುವರಾಜೋ ಭವಾಮ್ಯಹಮ್ ।
ತತಃ ಪ್ರಾವೃಡನುಪ್ರಾಪ್ತಾ ಮದಕಾಮವಿವರ್ಧಿನೀ ॥೧೪॥

ದೇವಿ, ಆಗ ನಾನಿನ್ನೂ ನಿನ್ನನ್ನು ವಿವಾಹವಾಗಿರಲಿಲ್ಲ. ಯುವರಾಜನಾಗಿದ್ದೆ. ಆಗ ಮದಕಾಮ ವರ್ಧಕವಾದ ಮಳೆಗಾಲ ಬಂದಿತ್ತು.

ಉಪಾಸ್ಯ ಹಿ ರಸಾನ್ ಭೌಮಾಂಸ್ತಪ್ತಾ ್ವ ಚ ಜಗದಂಶುಭಿಃ ।
ಪರೇತಾಚರಿತಾಂ ಭೀಮಾಂ ರವಿರಾವಿಶತೇ ದಿಶಮ್ ॥೧೫॥

ಆಗ ಸೂರ್ಯನು ನೆಲದ ನೀರನ್ನು ಹೀರಿ, ಲೋಕವನ್ನು ಬಿಸಿಲಿನಿಂದ ಸುಟ್ಟು ದಕ್ಷಿಣ ದಿಕ್ಕನ್ನು ಸೇರುತ್ತಾನೆ.

ಉಷ್ಣಮಂತರ್ದಧೇ ಸದ್ಯಃ ಸ್ನಿಗ್ಧಾ ದದೃಶಿರೇ ಘನಾಃ ।
ತತೋ ಜಹೃಷಿರೇ ಸರ್ವೇ ಭೇಕಸಾರಂಗಬರ್ಹಿಣಃ ॥೧೬॥

ಆಗ ಬಿಸಿಲು ಮಾಯವಾಗುತ್ತದೆ. ಜಲಭರಿತವಾದ ಮೋಡಗಳು ಒಡನೆ ಕಂಡು ಬರುತ್ತವೆ. ಕಪ್ಪೆ ಚಾತಕ ನವಿಲುಗಳು ಎಲ್ಲವೂ ನಲಿಯುತ್ತವೆ.

ಕ್ಲಿನ್ನಪಕ್ಷೋತ್ತರಾಃ ಸ್ನಾತಾಃ ಕೃಚ್ಛ್ರಾದಿವ ಪತತ್ರಿಣಃ ।
ವೃಷ್ಟಿವಾತಾವಧೂತಾಗ್ರಾನ್ ಪಾದಪಾನಭಿಪೇದಿರೇ ॥೧೭॥

ಹಕ್ಕಿಗಳು ತಮ್ಮ ರೆಕ್ಕೆಗಳನ್ನು ಮಳೆಯಲ್ಲಿ ತೋಯಿಸಿಕೊಂಡು ಕೃಚ್ಛ್ರಾದಿ ವ್ರತಸ್ನಾನ ಮಾಡಿದವರಂತೆ ಮಳೆಗಾಳಿಗಳಲ್ಲಿ ಹೊಯ್ದಾಡುವ ಮರದ ತುದಿಗಳಲ್ಲಿ ನಿಲ್ಲುತ್ತವೆ.

ಪತಿತೇನಾಂಭಸಾ ಘನ್ನಃ ಪತಮಾನೇ ಚಾಸಕೃತ್ ।
ಆಬಭೌ ಮತ್ತಸಾರಂಗಸ್ತೋಯರಾಶಿರಿವಾಚಲಃ ॥೧೮॥

ಮತ್ತೆ ಮತ್ತೆ ಬಿದ್ದಿರುವ ಬೀಳುತ್ತಿರುವ ನೀರಿನಲ್ಲಿ ತೊಯ್ದು ಮದಿಸಿದ ಚಾತಕಪಕ್ಷಿ ಸಮುದ್ರದಂತೆ ನಿಶ್ಚಲವಾಗಿ ನಿಂತು ಕಂಗೊಳಿಸುತ್ತದೆ.

ಪಾಂಡರಾರುಣವರ್ಣಾನಿ ಸ್ರೋತಾಂಸಿ ವಿಮಲಾನ್ಯಪಿ ।
ಸುಸ್ರುವುರ್ಗಿರಿಧಾತುಭ್ಯಃ ಸಭಸ್ಮಾನಿ ಭುಜಂಗವತ್ ॥೧೯॥

ನಿರ್ಮಲವಾದ ನೀರಿನ ಪ್ರವಾಹ ಬೆಟ್ಟಗಳಿಂದ ಇಳಿದು ಬರುವಾಗ ಬಿಳಿಯಾದ ಪರ್ವತಧಾತುಗಳ ಸಂಬಂಧದಿಂದ ಬಿಳಿಯಾಗಿಯೂ ಕೆಂಪುಧಾತು ಸಂಪರ್ಕದಿಂದ ಕೆಂಪಾಗಿಯೂ ಕಾಳ್ಗಿಚ್ಚಿನ ಬೂದಿಯ ಸಂಸರ್ಗದಿಂದ ಬೂದು ಬಣ್ಣವಾಗಿಯೂ ವಕ್ರವಾಗಿ ಹರಿಯುತ್ತ ಹಾವುಗಳಂತೆಯೂ ಕಂಡುಬರುತ್ತವೆ.

ತಸ್ಮಿನ್ನತಿಸುಖೇ ಕಾಲೇ ಧನುಷ್ಮಾನಿಷುಮಾನ್ ರಥೀ ।
ವ್ಯಾಯಾಮಕೃತಸಂಕಲ್ಪಃ ಸರಯೂಮನ್ವಗಾಂ ನದೀಮ್ ॥೨೦॥

ಇಂಥ ಅತಿಸುಖಕರವಾದ ಕಾಲದಲ್ಲಿ ನಾನು ಬೇಟೆಯಾಡುವ ಉತ್ಸಾಹದಿಂದ ಬಿಲ್ಲುಬಾಣಗಳನ್ನು ಧರಿಸಿ ರಥವೇರಿ ಸರಯೂನದಿಯ ತೀರದಲ್ಲಿ ಸಂಚರಿಸಿದೆ.

ನಿಪಾನೇ ಮಹಿಷಂ ರಾತ್ರೌ ಗಜಂ ವಾಭ್ಯಾಗತಂ ನದೀಮ್ ।
ವನ್ಯಂ ವಾ ಶ್ವಾಪದಂ ಕಂಚಿಜ್ಜಿಘ್ರಾಂಸುರಜಿತೇಂದ್ರಿಯಃ ॥೨೧॥

ಆ ಸಮಯದಲ್ಲಿ ನನ್ನ ಮನಸ್ಸು ನನ್ನ ವಶದಲ್ಲಿರಲಿಲ್ಲ. ಅಜಿತೇಂದ್ರಿಯನಾಗಿದ್ದೆ. ಅದರಿಂದ ರಾತ್ರಿ ವೇಳೆಯಲ್ಲಿ ನದೀತೀರಕ್ಕೆ ನೀರು ಕುಡಿಯಲು ಯಾವುದಾದ-ರೊಂದು ಕಾಡೆಮ್ಮೆಯಾಗಲಿ ಆನೆಯಾಗಲಿ ಬೇರೆ ಹಿಂಸ್ರಮೃಗವಾಗಲಿ ಬಂದರೆ ಬೇಟೆಯಾಡಬೇಕೆಂದು ಬಯಸಿದೆ.

ಯದ್ಯಪಿ ಬೇಟೆ ಕ್ಷತ್ರಿಯರಿಗೆ ನಿಷಿದ್ಧವಲ್ಲ. ಆದರೆ ಬೇಟೆಯ ಚಾಪಲ್ಯ ಅವರಿಗೂ ನಿಷಿದ್ಧವೆ. ತತ್ರಾಪಿ ಆನೆಯನ್ನು ಕೊಲ್ಲುವುದು ಹೆಚ್ಚು ಪಾಪಕರ.

'ಲಕ್ಷ್ಮೀಕಾಮೋ ಯುದ್ಧಾದನ್ಯತ್ರ ಕರಿವಧಂ ನ ಕುರ್ಯಾತ್'

'ಸಂಪತ್ತನ್ನು ಬಯಸುವವನು ಯುದ್ಧದಲ್ಲಿ ಹೊರತು ಬೇರೆ ಸಂದರ್ಭದಲ್ಲಿ ಆನೆಯನ್ನು ವಧಿಸಬಾರದು' ಎಂದು ಚಾಕ್ಷುಷಸ್ಮೃತಿ ಎಚ್ಚರಿಸುತ್ತದೆ. ಹೀಗೆ ನಿಷಿದ್ಧವಾದ ಬೇಟೆಯನ್ನು ಜಿತೇಂದ್ರಿಯನಾದ ಧರ್ಮಾತ್ಮನಾದ ದಶರಥ ಮಾಡಲು ಹೊರಟಿದ್ದು, 'ತತ್ಕಾಲದಲ್ಲಿ ಅವನು ಪ್ರಾರಬ್ಧವಶದಿಂದ

ಅಜಿತೇಂದ್ರಿಯನಾಗಿದ್ದರಿಂದ' ಎಂದು ವಾಲ್ಮೀಕಿ ಹೇಳುತ್ತಿದ್ದಾನೆ. ಈ ಇಂದ್ರಿಯ ಚಾಪಲ್ಯಕ್ಕೆ ಕಾರಣವಾದ ಪ್ರಾರಬ್ಧವೆ ಮುಂದೆ ರಾಮವಿರಹಕ್ಕೂ ಕಾರಣ. ರಾಮವಿರಹ ಶಿಕ್ಷೆಯಿಂದಲೇ ಪ್ರಾರಬ್ಧ ಪರಿಹಾರವಾಯಿತು.

ಅಥಾಂಧಕಾರೇ ತ್ವಶ್ರೌಷಂ ಜಲೇ ಕುಂಭಸ್ಯ ಪೂರ್ಯತಃ ।
ಅಚಕ್ಷುರ್ವಿಷಯೇ ಘೋಷಂ ವಾರಣಸ್ಯೇವ ನರ್ದತಃ ॥೨೨॥

ರಾತ್ರಿ ವೇಳೆ ಕಣ್ಣಿಗೆ ಕಾಣದ ಪ್ರದೇಶದಲ್ಲಿ, ಆನೆ ನೀರು ಕುಡಿಯುವಂಥ, ಬಿಂದಿಗೆಯಲ್ಲಿ ನೀರು ತುಂಬುವ ಒಂದು ಶಬ್ದವನ್ನು ಕೇಳಿದೆ.

ತತೋಽಹಂ ಶರಮುದ್ಧೃತ್ಯ ದೀಪ್ತಮಾಶೀವಿಷೋಪಮಮ್ ।
ಶಬ್ದಂ ಪ್ರತಿ ಗಜಪ್ರೇಪ್ಸುರಭಿಲಕ್ಷ್ಯ ತ್ವಪಾತಯಮ್ ॥೨೩॥

ಆಗ ಆನೆ ನೀರು ಕುಡಿಯುತ್ತಿದೆ ಎಂಬ ಭ್ರಮೆಯಿಂದ ಆನೆಯನ್ನು ಬೇಟೆ-ಯಾಡಲು ಬಯಸಿ ನಾನು ತೀಕ್ಷ್ಣವಾದ ಸರ್ಪ ಸದೃಶವಾದ ಬಾಣವನ್ನು ಎತ್ತಿಕೊಂಡು ಶಬ್ದ ಬಂದ ಕಡೆಗೆ ಗುರಿ ಇಟ್ಟು ಎಸೆದೆ.

ಅಮುಂಚಂ ನಿಶಿತಂ ಬಾಣಮಹಮಾಶೀವಿಷೋಪಮಮ್ ॥೨೪॥

ವಿಷಸರ್ಪದಂಥ ಉಗ್ರವಾದ ಹರಿತವಾದ ಬಾಣವನ್ನು ಪ್ರಯೋಗಿಸಿದೆ.

ರಾಜ ಪಶ್ಚಾತ್ತಾಪದಿಂದ ತಾನು ಮಾಡಿದ ತಪ್ಪನ್ನು ಪುನಃ ಪುನಃ ಹೇಳುತ್ತಿದ್ದಾನೆ.

ತತ್ರ ವಾಗುಷಸಿ ವ್ಯಕ್ತಾ ಪ್ರಾದುರಾಸೀದ್ವನೌಕಸಃ ।
ಹಾ ಹೇತಿ ಪತತಸ್ತೋಯೇ ಬಾಣಾಭಿಹತಮರ್ಮಣಃ ॥೨೫॥

'ಆಗ ಉಷಃಕಾಲ. ನಾನು ಬಾಣವನ್ನೆಸೆದ ಪ್ರದೇಶದಲ್ಲಿ ಒಬ್ಬ ವನವಾಸಿಯು ಮರ್ಮಸ್ಥಳದಲ್ಲಿ ಬಾಣದಿಂದ ಗಾಯಗೊಂಡು ನೀರಲ್ಲಿ ಬೀಳುತ್ತ 'ಹಾ ಹಾ' ಎಂದು ಕೂಗಿದ ಧ್ವನಿ ಸ್ಪಷ್ಟ ಕೇಳಿಸಿತು.

ತಸ್ಮಿನ್ನಿಪತಿತೇ ಬಾಣೇ ವಾಗಭೂತ್ತತ್ರ ಮಾನುಷೀ ।
ಕಥಮಸ್ಮದ್ವಿಧೇ ಶಸ್ತ್ರಂ ನಿಪತೇತ್ತು ತಪಸ್ವಿನಿ ॥೨೬॥

ಬಾಣ ಅಲ್ಲಿ ಬಿದ್ದೊಡನೆ ಮನುಷ್ಯನ ಕೂಗು ಕೇಳಿಸಿತು. 'ನನ್ನಂಥ ತಪಸ್ವಿಯ ಮೇಲೆ ಆಯುಧ ಹೇಗೆ ಬಿದ್ದಿತು?' ಎಂದು.

ಪ್ರವಿವಿಕ್ತಾಂ ನದೀಂ ರಾತ್ರಾವುದಾಹಾರೋಽಹಮಾಗತಃ ।
ಇಷುಣಾಭಿಹತಃ ಕೇನ ಕಸ್ಯ ವಾ ಕಿಂ ಕೃತಂ ಮಯಾ ॥೨೭॥

ನಿರ್ಜನವಾದ ನದೀತೀರದಲ್ಲಿ ನೀರನ್ನು ಕೊಂಡೊಯ್ಯಲೆಂದು ನಾನು ಬಂದಿದ್ದೆ. ನನ್ನನ್ನು ಬಾಣದಿಂದ ಹೊಡೆದವನು ಯಾರು? ನಾನು ಯಾರಿಗೆ ಏನು ಅಪರಾಧ ಮಾಡಿದ್ದೇನೆ?

ಋಷೇರ್ಹಿ ನ್ಯಸ್ತದಂಡಸ್ಯ ವನೇ ವನ್ಯೇನ ಜೀವತಃ ।
ಕಥಂ ನು ಶಸ್ತ್ರೇಣ ವಧೋ ಮದ್ವಿಧಸ್ಯ ವಿಧೀಯತೇ ॥೨೮॥

ಪ್ರಾಣಹಿಂಸೆಯನ್ನು ಪರಿತ್ಯಜಿಸಿ ಅರಣ್ಯೋತ್ಪನ್ನವಾದ ಹಣ್ಣುಗಡ್ಡೆಗಳಿಂದಲೇ ಜೀವಿಸುತ್ತಿರುವ ನನ್ನಂಥ ಋಷಿಯನ್ನು ಶಸ್ತ್ರದಿಂದ ವಧಿಸುವುದು ಹೇಗೆ ಯುಕ್ತ-ವಾಗುವುದು?

ಜಟಾಭಾರಧರಸ್ಯೈವ ವಲ್ಕಲಾಜಿನವಾಸಸಃ ।
ಕೋ ವಧೇನ ಮಮಾರ್ಥೀ ಸ್ಯಾತ್ಕಿಂ ವಾಸ್ಯಾಪಕೃತಂ ಮಯಾ ॥೨೯॥

ಭಾರವಾದ ಜಡೆಯನ್ನು ಧರಿಸಿ ನಾರುಡೆ ಅಜಿನಗಳನ್ನು ಉಟ್ಟಿರುವ ನನ್ನನ್ನು ಕೊಂದು ಏನಾದರೂ ದ್ರವ್ಯಲಾಭವನ್ನು ಗಳಿಸುವವನು ಯಾರುತಾನೆ ಇರುತ್ತಾನೆ? ಅಥವಾ ಅವನಿಗೆ ನಾನು ಏನು ಅಪರಾಧ ಮಾಡಿರಲು ಸಾಧ್ಯ?

ಏವಂ ನಿಷ್ಫಲಮಾರಬ್ಧಂ ಕೇವಲಾನರ್ಥಸಂಹಿತಮ್ ।
ನ ಕಶ್ಚಿತ್ಸಾಧು ಮನ್ಯೇತ ಯಥೈವ ಗುರುತಲ್ಪಗಮ್ ॥೩೦॥

ಗುರುಪತ್ನೀ ಸಂಗ ಮಾಡಿದವನಂತೆ, ಇಹದಲ್ಲಿ ಏನೂ ಫಲವಿಲ್ಲದೆ ಪರದಲ್ಲಿಯೂ ಅನರ್ಥಕಾರಿಯಾಗಿರುವ ಈ ಕೃತ್ಯವನ್ನು ಮಾಡಿದವನು ಯಾರ ಆದರಕ್ಕೂ ಯೋಗ್ಯನೆನಿಸಲಾರ. ಯಾರೂ ಇದನ್ನು ಮೆಚ್ಚಲಾರರು.

ನಾಹಂ ತಥಾನುಶೋಚಾಮಿ ಜೀವಿತಕ್ಷಯಮಾತ್ಮನಃ ।
ಮಾತರಂ ಪಿತರಂ ಚೋಭಾವನುಶೋಚಾಮಿ ಮದ್ವಧೇ ॥೩೧॥

ನಾನು ನನ್ನ ಜೀವಿತ ಕೊನೆಗೊಂಡಿದ್ದಕ್ಕೆ ಹೆಚ್ಚು ಶೋಕಿಸುವುದಿಲ್ಲ. ನನ್ನ ವಧೆಯಾದ್ದರಿಂದ ನನ್ನ ತಾಯಿತಂದೆಗಳಿಬ್ಬರ ವಧೆಯೂ ಆದಂತೆಯೇ ಎಂದು ಶೋಕಿಸುತ್ತೇನೆ.

ತದೇತನ್ಮಿಥುನಂ ವೃದ್ಧಂ ಚಿರಕಾಲಭೃತಂ ಮಯಾ ।
ಮಯಿ ಪಂಚತ್ವಮಾಪನ್ನೇ ಕಾಂ ವೃತ್ತಿಂ ವರ್ತಯಿಷ್ಯತಿ ॥೩೨॥

ಈ ವೃದ್ಧ ದಂಪತಿಗಳನ್ನು ನಾನು ಬಹುಕಾಲದಿಂದ ಪೋಷಿಸಿದ್ದೇನೆ. ನಾನು ಮರಣ ಹೊಂದಿದ ಬಳಿಕ ಅವರು ಹೇಗೆ ಜೀವನ ನಿರ್ವಹಿಸುವರು?

ವೃದ್ಧೌ ಚ ಮಾತಾಪಿತರಾವಹಂ ಚೈಕೇಷುಣಾ ಹತಃ ।
ಕೇನ ಸ್ಮ ನಿಹತಾಃ ಸರ್ವೇ ಸುಬಾಲೇನಾಕೃತಾತ್ಮನಾ ॥೩೩॥

'ವೃದ್ಧರಾದ ತಾಯಿ ತಂದೆಗಳೂ ನಾನೂ ಮೂವರೂ ಕೂಡ ಒಂದೇ ಬಾಣ-ಪ್ರಹಾರದಿಂದ ಹತರಾದೆವು. ಸ್ವಲ್ಪವೂ ಬುದ್ಧಿ ಇಲ್ಲದೆ ಇಂದ್ರಿಯನಿಗ್ರಹ ವಿಲ್ಲದೆ ನಮ್ಮನ್ನು ಮೂವರನ್ನೂ ಕೊಂದವನು ಯಾರು?'

ತಾಂ ಗಿರಂ ಕರುಣಾಂ ಶ್ರುತ್ವಾ ಮಮ ಧರ್ಮಾನುಕಾಂಕ್ಷಿಣಃ ।
ಕರಾಭ್ಯಾಂ ಸಶರಂ ಚಾಪಂ ವ್ಯಥಿತಸ್ಯಾಪತದ್ಭುವಿ ॥೩೪॥

ಧರ್ಮಾಚರಣೆಯಲ್ಲಿ ಆಸಕ್ತಿ ಹೊಂದಿರುವ ನಾನು ಆ ಕರುಣಾಜನಕವಾದ ಮಾತನ್ನು ಕೇಳಿ ವ್ಯಥೆಪಟ್ಟೆ. ವ್ಯಥೆಯಿಂದ ನನ್ನ ಕೈಯಲ್ಲಿದ್ದ ಧನುರ್ಬಾಣಗಳು ನೆಲದ ಮೇಲೆ ಜಾರಿದುವು.

ತಸ್ಯಾಹಂ ಕರುಣಂ ಶ್ರುತ್ವಾ ನಿಶಿ ಲಾಲಪತೋ ಬಹು ।
ಸಂಭ್ರಾಂತಃ ಶೋಕವೇಗೇನ ಭೃಶಮಾಸಂ ವಿಚೇತನಃ ॥೩೫॥

ರಾತ್ರಿಯಲ್ಲಿ ಬಹಳ ಗೋಳಿಡುತ್ತಿದ್ದ ಋಷಿಯ ಕರುಣಾಜನಕವಾದ ಮಾತನ್ನು ಕೇಳಿ ನಾನು ಬಲು ಕಳವಳಗೊಂಡೆ. ಶೋಕಾವೇಗದಿಂದ ಬಹಳ ವ್ಯಗ್ರಚಿತ್ತನಾದೆ.

ತಂ ದೇಶಮಹಮಾಗಮ್ಯ ದೀನಸತ್ತ್ವಃ ಸುದುರ್ಮನಾಃ ।
ಅಪಶ್ಯಮಿಷುಣಾ ತೀರೇ ಸರಯ್ವಾಸ್ತಾಪಸಂ ಹತಮ್ ॥೩೬॥

ಸತ್ವ ಉಡುಗಿ ನೊಂದ ಮನಸಿನಿಂದ ಸರಯೂ ತೀರದ ಆ ಪ್ರದೇಶಕ್ಕೆ ಬಂದು ನನ್ನ ಬಾಣದಿಂದ ಹತನಾದ ತಾಪಸನನ್ನು ಕಂಡೆ.

ಅವಕೀರ್ಣಜಟಾಭಾರಂ ಪ್ರವಿದ್ಧಕಲಶೋದಕಮ್ ।
ಪಾಂಸುಶೋಣಿತದಿಗ್ಧಾಂಗಂ ಶಯಾನಂ ಶರಪೀಡಿತಮ್ ॥೩೭॥

ತಾಪಸನ ಜಟಾಭಾರ ಬಿಚ್ಚಿಹೋಗಿತ್ತು. ಕಲಶಜಲ ಬೆಲ್ಲಿತ್ತು. ಮೈ ಕೆಸರು ನೆತ್ತರು-ಗಳಿಂದ ಲೇಪಿತವಾಗಿತ್ತು. ಬಾಣದೇಟಿನಿಂದ ಆತ ನರಳುತ್ತ ನೆಲದ ಮೇಲೊರಗಿದ್ದ.

ಸ ಮಾಮುದ್ವೀಕ್ಷ್ಯ ನೇತ್ರಾಭ್ಯಾಂ ತ್ರಸ್ತಮಸ್ವಸ್ಥಚೇತಸಮ್ ।
ಇತ್ಯುವಾಚ ವಚಃ ಕ್ರೂರಂ ದಿಧಕ್ಷನ್ನಿವ ತೇಜಸಾ ॥೩೮॥

ಭಯಪಟ್ಟು ವ್ಯಗ್ರಚಿತ್ತನಾಗಿದ್ದ ನನ್ನನ್ನು ಆತ ಎರಡು ಕಣ್ಣುಗಳಿಂದ ತೇಜಸ್ಸಿ-ನಿಂದಲೇ ಸುಟ್ಟುಬಿಡುವಂತೆ ದಿಟ್ಟಿಸಿ ನೋಡಿ ಕಟುವಾದ ಮಾತನ್ನು ನುಡಿದ.

ಕಿಂ ತವಾಪಕೃತಂ ರಾಜನ್ ವನೇ ನಿವಸತಾ ಮಯಾ ।
ಜಿಹೀರ್ಷುರಂಭೋ ಗುರ್ವರ್ಥಂ ಯದಹಂ ತಾಡಿತಸ್ತ್ವಯಾ ॥೩೯॥

'ಕಾಡಿನಲ್ಲಿ ವಾಸ ಮಾಡುತ್ತಿರುವವನು ನಾನು, ನಿನಗೇನು ಅಪರಾಧ ಮಾಡಿದ್ದೇನೆ? ತಾಯಿ-ತಂದೆಗಳಿಗಾಗಿ ನೀರು ತರಲೆಂದು ಬಂದಿದ್ದೆ. ರಾಜನೆ, ಏಕೆ ನೀನು ನನ್ನನ್ನು ಹೊಡೆದೆ?

ಏಕೇನ ಖಲು ಬಾಣೇನ ಮರ್ಮಣ್ಯಭಿಹತೇ ಮಯಿ ।
ದ್ವಾವಂಧೌ ನಿಹತೌ ವೃದ್ಧೌ ಮಾತಾ ಜನಯಿತಾ ಚ ಮೇ ॥೪೦॥

'ಒಂದೇ ಬಾಣದಿಂದ ಇತ್ತ ನೀನು ನನ್ನನ್ನು ಮರ್ಮಸ್ಥಳದಲ್ಲಿ ಹೊಡೆದಾಗ ಅತ್ತ ಇಬ್ಬರು ಅಂಧರು ವೃದ್ಧರು ನನ್ನ ತಾಯಿತಂದೆಗಳು ಹತರಾದರು.

ತೌ ಕಥಂ ದುರ್ಬಲಾವಂಧೌ ಮತ್ಪ್ರತೀಕ್ಷೌ ಪಿಪಾಸಿತೌ ।
ಚಿರಮಾಶಾಕೃತಾಂ ತೃಷ್ಣಾಂ ಕಷ್ಟಾಂ ಸಂಧಾರಯಿಷ್ಯತಃ ॥೪೧॥

'ಅವರು ದುರ್ಬಲರು ಅಂಧರು, ನೀರಡಿಸಿ ನನಗಾಗಿ ಕಾಯುತ್ತಿದ್ದಾರೆ. ಮಗನು ನಮಗೆ ನೀರು ತರುವನೆಂದು ನಿರೀಕ್ಷೆ ಮಾಡುತ್ತ ಬಲುಕಷ್ಟಕರವಾದ ನೀರಡಿಕೆಯನ್ನು ಬಹಳಹೊತ್ತು ಅವರು ಹೇಗೆ ತಡೆದುಕೊಳ್ಳುತ್ತಾರೆ?

ನ ನೂನಂ ತಪಸೋ ವಾಸ್ತಿ ಫಲಯೋಗಃ ಶ್ರುತಸ್ಯ ವಾ ।
ಪಿತಾ ಯನ್ಮಾಂ ನ ಜಾನಾತಿ ಶಯಾನಂ ಪತಿತಂ ಭುವಿ ॥೪೨॥

'ನನ್ನ ಅಥವಾ ತಂದೆತಾಯಿಗಳ ತಪಸ್ಸಿಂದಾಗಲಿ ವಿದ್ಯೆಯಿಂದಾಗಲಿ ಫಲ ಲಾಭವೇನಿಲ್ಲವೆಂದು ತೋರುತ್ತದೆ. ಏಕೆಂದರೆ ನಾನು ನೆಲದಲ್ಲಿ ಬಿದ್ದು ಒರಗಿದ್ದನ್ನು ತಂದೆ ತಿಳಿಯುವುದಿಲ್ಲ.

ಜಾನನ್ನಪಿ ಚ ಕಿಂ ಕುರ್ಯಾದಶಕ್ತಿರಪರಿಕ್ರಮಃ ।
ಭಿದ್ಯಮಾನಮಿವಾಶಕ್ತಿಸ್ತ್ರಾತುಮನ್ಯೋ ನಗೋ ನಗಮ್ ॥೪೩॥

'ತಿಳಿದರೂ ಕೂಡ ಅಶಕ್ತ, ಎದ್ದು ಓಡಾಡಲಾಗದವನು, ಆವನೇನು ತಾನೆ ಮಾಡಬಲ್ಲ? ಒಂದು ಮರ ಮುರಿದು ಬೀಳುವಾಗ ಇನ್ನೊಂದು ಮರ ಅದನ್ನು ಕಾಪಾಡಲು ಶಕ್ತವಲ್ಲ.

ಪಿತುಸ್ತ್ವಮೇವ ಮೇ ಗತ್ವಾ ಶೀಘ್ರಮಾಚಕ್ಷ್ವ ರಾಘವ ।
ನ ತ್ವಾಮನುದಹೇತ್ ಕ್ರುದ್ಧೋ ವನಂ ವಹ್ನಿರಿವೈಧಿತಃ ॥೪೪॥

'ದಶರಥ! ತಂದೆಗೆ ನೀನೇ ಬೇಗನೆ ಹೋಗಿ ಹೇಳು. ಧಗಧಗಿಸುವ ಕಾಳ್ಗಿಚ್ಚು ಕಾಡನ್ನು ಸುಡುವಂತೆ ಕುಪಿತನಾದ ತಂದೆ ನಿನ್ನನ್ನು ಸುಡಬಾರದು ತಾನೆ?

ಇಯಮೇಕಪದೀ ರಾಜನ್ ಯತೋ ಮೇ ಪಿತುರಾಶ್ರಮಃ ।
ತಂ ಪ್ರಸಾದಯ ಗತ್ವಾ ತ್ವಂ ನ ತ್ವಾಂ ಸ ಕುಪಿತಃ ಶಪೇತ್ ॥೪೫॥

'ರಾಜನೆ, ನನ್ನ ತಂದೆಯ ಆಶ್ರಮವಿರುವಲ್ಲಿಗೆ ಇದು ದಾರಿ. ಹೋಗಿ ಅವನಲ್ಲಿ ಕ್ಷಮೆ ಕೇಳು. ಅವನು ಕುಪಿತನಾಗಿ ನಿನ್ನನ್ನು ಸುಡಬಾರದು.

ವಿಶಲ್ಯಂ ಕುರು ಮಾಂ ರಾಜನ್ ಮರ್ಮ ಮೇ ನಿಶಿತಃ ಶರಃ ।
ರುಣದ್ಧಿ ಮೃದು ಸೋತ್ಸೇಧಂ ತೀರಮಂಬುರಯೋ ಯಥಾ ॥೪೬॥

'ರಾಜನೆ, ನನ್ನ ಮರ್ಮಸ್ಥಳದಿಂದ ಬಾಣವನ್ನು ಕಿತ್ತುಬಿಡು. ಮಿದುವಾದ ಎತ್ತರದ ತೀರವನ್ನು ಪ್ರವಾಹದ ವೇಗದಂತೆ, ನನ್ನ ಮರ್ಮಸ್ಥಳವನ್ನು ಹರಿತವಾದ ನಿನ್ನ ಬಾಣವು ಪೀಡಿಸುತ್ತಿದೆ'.

ಸಶಲ್ಯಃ ಕ್ಲಿಶ್ಯತೇ ಪ್ರಾಣೈರ್ವಿಶಲ್ಯೋ ವಿನಶಿಷ್ಯತಿ ।
ಇತಿ ಮಾಮವಿಶಚ್ಚಿಂತಾ ತಸ್ಯ ಶಲ್ಯಾಪಕರ್ಷಣೇ ॥೪೭॥

ಕೌಸಲ್ಯೆ, ನಾನು ಚಿಂತೆಗೊಳಗಾದೆ, ಬಾಣ ನೆಟ್ಟೇ ಇದ್ದರೆ, ಋಷಿಕುಮಾರನ ಪ್ರಾಣಗಳು ಅಸ್ವಸ್ಥವಾಗಿದ್ದು ಹೊರಟುಹೋಗಲೂ ಶಕ್ತವಾಗದಿರುವುದರಿಂದ ಅವನು ಬಹಳ ವೇದನೆ ಪಡುತ್ತಾನೆ. ಬಾಣವನ್ನು ಕಿತ್ತರೆ ಸತ್ತೇ ಹೋಗುತ್ತಾನೆ. ಬಾಣವನ್ನು ಕೀಳುವ ವಿಷಯದಲ್ಲಿ ನನಗೆ ಈ ಚಿಂತೆ ಕಾಡುತ್ತಿತ್ತು.

ದುಃಖಿತಸ್ಯ ಚ ದೀನಸ್ಯ ಮಮ ಶೋಕಾತುರಸ್ಯ ಚ ।
ಲಕ್ಷಯಾಮಾಸ ಹೃದಯೇ ಚಿಂತಾಂ ಮುನಿಸುತಸ್ತದಾ ॥೪೮॥

ದುಃಖಿತ ದೀನ ಮತ್ತು ಶೋಕಾತುರನಾದ ನನ್ನ ಹೃದಯದಲ್ಲಿ ಈ ಚಿಂತೆ ಉಂಟಾದುದನ್ನು ಋಷಿಕುಮಾರ ಗಮನಿಸಿದ.

ತಾಮ್ಯಮಾನಂ ಸ ಮಾಂ ಕೃಚ್ಛ್ರಾದುವಾಚ ಪರಮಾರ್ತವತ್ ।
ಸೀದಮಾನೋ ವಿವೃತ್ತಾಂಗೋಽಚೇಷ್ಟಮಾನೋ ಗತಃ ಕ್ಷಯಮ್ ॥೪೯

ಬಲುವೇದನೆಗೊಂಡು ಬಲಗುಂದಿ ಕಣ್ಣುಕೈಕಾಲುಗಳಲ್ಲಿ ವಿಕಾರ ಹೊಂದಿ ಅಂಗಗಳಲ್ಲಿ ಸ್ತಬ್ಧನಾಗಿ ಸಾವಿನ ಸಮೀಪಕ್ಕೆ ಬಂದ ಮುನಿಕುಮಾರ ಕಷ್ಟದಿಂದ ದುಃಖಿತನಾಗಿದ್ದ ನನಗೆ ಹೇಳಿದ.

ಸಂಸ್ತಭ್ಯ ಶೋಕಂ ಧೈರ್ಯೇಣ ಸ್ಥಿರಚಿತ್ತೋ ಭವಾಮ್ಯಹಮ್ ।
ಬ್ರಹ್ಮಹತ್ಯಾಕೃತಂ ಪಾಪಂ ಹೃದಯಾದಪನೀಯತಾಮ್ ॥೫೦॥

'ನೋವನ್ನು ತಾಳ್ಮೆಯಿಂದ ತಡೆದುಕೊಂಡು ನಾನು ಸ್ಥಿರಚಿತ್ತನಾಗುತ್ತೇನೆ. ನೀನು ತನಗೆ ಬ್ರಹ್ಮಹತ್ಯಾ ಪಾಪ ಬಂದೀತೆಂಬ ಆತಂಕವನ್ನು ಹೃದಯದಿಂದ ದೂರ ಮಾಡಿಕೊಳ್ಳು.

ನ ದ್ವಿಜಾತಿರಹಂ ರಾಜನ್ ಮಾ ಭೂತ್ತೇ ಮನಸೋ ವ್ಯಥಾ ।
ಶೂದ್ರ್ಯಾಯಾಮಸ್ಮಿ ವೈಶ್ಯೇನ ಜಾತೋ ಜನಪದಾಧಿಪ ॥೫೧॥

'ರಾಜನೆ, ನಾನು ದ್ವಿಜನಲ್ಲ. ನಿನ್ನ ಮನಸ್ಸಿನಲ್ಲಿ ಆ ವ್ಯಥೆ ಬೇಡ. ಶೂದ್ರಸ್ತ್ರೀಯಲ್ಲಿ ವೈಶ್ಯನಿಂದ ಜನಿಸಿದವನು ನಾನು, 'ಕರಣ' ಎಂಬ ಸಂಕರಜಾತಿಯವನು.

ವೈಶ್ಯನಿಂದ ಶೂದ್ರಸ್ತ್ರೀಯಲ್ಲಿ ಜನಿಸಿದವನು ವೈಶ್ಯನೆನಿಸುವುದಿಲ್ಲ. ಕರಣ-ನೆನಿಸುತ್ತಾನೆ.

ಇತ್ಯೇವಂ ವದತಃ ಕೃಚ್ಛ್ರಾದ್ಬಾಣಾಭಿಹತಮರ್ಮಣಃ ।
ವಿಘೂರ್ಣತೋ ವಿಚೇಷ್ಟಸ್ಯ ವೇಪಮಾನಸ್ಯ ಭೂತಲೇ ॥೫೨॥

ತಸ್ಯ ತ್ವತಾಮ್ಯಮಾನಸ್ಯ ತಂ ಬಾಣಮಹಮುದ್ಧರಮ್ ।
ಸ ಮಾಮುದ್ವೀಕ್ಷ್ಯ ಸಂತ್ರಸ್ತೋ ಜಹೌ ಪ್ರಾಣಾಂಸ್ತಪೋಧನಃ ॥೫೩॥

ಮುನಿಕುಮಾರ ಮರ್ಮಸ್ಥಳದಲ್ಲಿ ಬಾಣದೇಟು ಬಿದ್ದಿದ್ದರಿಂದ ಕಷ್ಟದಿಂದ ಒಮ್ಮೆ ನೆಲದ ಮೇಲೆ ಕೈಕಾಲು ಝಾಡಿಸುತ್ತಾನೆ, ಒಮ್ಮೆ ನಿಶ್ಚೇಷ್ಟನಾಗುತ್ತಾನೆ, ಒಮ್ಮೆ ನಡುಗುತ್ತಾನೆ. ಹೀಗೆ ಬಹಳವಾಗಿ ನರಳುತ್ತಿದ್ದ ಆತನ ಮೈಯಿಂದ ಬಾಣವನ್ನು ನಾನು ಕಿತ್ತು ತೆಗೆದೆ. ತಪೋಧನನಾದ ಆತ ನಡುಗುತ್ತ ನನ್ನನ್ನು ದಿಟ್ಟಿಸಿ ನೋಡಿ ಪ್ರಾಣಗಳನ್ನು ತ್ಯಜಿಸಿದ.

ಜಲಾರ್ದ್ರಗಾತ್ರಂ ತು ವಿಲಪ್ಯ ಕೃಚ್ಛ್ರಂ
ಮರ್ಮವ್ರಣಂ ಸಂತತಮುಚ್ಛ್ವಸಂತಮ್ ।
ತತಃ ಸರಯ್ವಾಂ ತಮಹಂ ಶಯಾನಂ
ಸಮೀಕ್ಷ್ಯ ಭದ್ರೇಽಸ್ಮಿ ಭೃಶಂ ವಿಷಣ್ಣಃ ॥೫೪॥

ಕಷ್ಟಕರವಾಗಿ ಮರ್ಮಾಘಾತವನ್ನು ಹೊಂದಿ ನೀರಿಂದ ತೋಯ್ದು ಗೋಳಿಟ್ಟು, ಎಡೆಬಿಡದೆ ಊರ್ಧ್ವಶ್ವಾಸಬಿಡುತ್ತ ಸರಯೂತೀರದಲ್ಲಿ ಸತ್ತು ನೆಲದ ಮೇಲೆ ಒರಗಿದ ಆ ಮುನಿಕುಮಾರನನ್ನು ನೋಡಿ, ಕೌಸಲ್ಯೆ, ನಾನು ಬಹಳ ವಿಷಣ್ಣನಾದೆ.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಅರವತ್ತಮೂರನೇ ಸರ್ಗ ಮುಗಿಯಿತು.

❖

ಚತುಃಷಷ್ಟಿತಮಃ ಸರ್ಗಃ

ಸರ್ಗ – 64

ದಶರಥನ ಮರಣ

ವಧಮಪ್ರತಿರೂಪಂ ತು ಮಹರ್ಷೇಸ್ತಸ್ಯ ರಾಘವಃ ।
ವಿಲಪನ್ನೇವ ಧರ್ಮಾತ್ಮಾ ಕೌಸಲ್ಯಾಂ ಪುನರಬ್ರವೀತ್ ॥೧॥

ಧರ್ಮಾತ್ಮ ದಶರಥನು ತನಗೆ ಅತ್ಯಂತ ಅನುಚಿತವಾದ ಆ ಮುನಿಕುಮಾರನ ವಧ ವೃತ್ತಾಂತವನ್ನು ಅಳುತ್ತಲೇ ಕೌಸಲ್ಯೆಗೆ ಪುನಃ ಹೇಳಲು ತೊಡಗಿದ.

ತದಜ್ಞಾನಾನ್ಮಹತ್ ಪಾಪಂ ಕೃತ್ವಾ ಸಂಕುಲಿತೇಂದ್ರಿಯಃ ।
ಏಕಸ್ತ್ವಚಿಂತಯಂ ಬುದ್ಧ್ಯಾ ಕಥಂ ನು ಸುಕೃತಂ ಭವೇತ್ ॥೨॥

ಅಜ್ಞಾನದಿಂದ ಅಂದು ನಾನು ಮಹಾಪಾಪವನ್ನು ಮಾಡಿ ಇಂದ್ರಿಯ ಕ್ಷೋಭೆ-ಗೊಳಗಾಗಿ ಏಕಾಕಿಯಾಗಿ ಮನಸ್ಸಿನಲ್ಲಿ ಚಿಂತಿಸಿದೆ. 'ಈಗ ನಾನು ಮುನಿಕುಮಾರನ ಮಾತನ್ನು ಹೇಗೆ ಸರಿಯಾಗಿ ನಡೆಸಿಕೊಟ್ಟೇನು?' ಎಂದು.

ತತಸ್ತಂ ಘಟಮಾದಾಯ ಪೂರ್ಣಂ ಪರಮವಾರಿಣಾ ।
ಆಶ್ರಮಂ ತಮಹಂ ಪ್ರಾಪ್ಯ ಯಥಾಖ್ಯಾತಪಥಂ ಗತಃ ॥೩॥

ಬಳಿಕ ಆ ಕಲಶವನ್ನು ಶುದ್ಧಜಲದಿಂದ ತುಂಬಿಕೊಂಡು ಹಿಡಿದು ಮುನಿಕುಮಾರ ಹೇಳಿದ ದಾರಿಯಿಂದ ನಡೆದು ಆಶ್ರಮವನ್ನು ಸೇರಿದೆ.

ತತ್ರಾಹಂ ದುರ್ಬಲಾವಂಧೌ ವೃದ್ಧಾವಪರಿಣಾಯಕೌ ।
ಅಪಶ್ಯಂ ತಸ್ಯ ಪಿತರೌ ಲೂನಪಕ್ಷಾವಿವ ದ್ವಿಜೌ ॥೪॥

ದುರ್ಬಲರೂ ಅಂಧರೂ ವೃದ್ಧರೂ ಅನಾಥರೂ ಆಗಿದ್ದು ರೆಕ್ಕೆ ಕತ್ತರಿಸಿದ ಹಕ್ಕಿಗಳಂತಿದ್ದ ಆ ತಂದೆ ತಾಯಿಗಳನ್ನು ಅಲ್ಲಿ ಕಂಡೆ.

ತನ್ನಿಮಿತ್ತಾಭಿರಾಸೀನೌ ಕಥಾಭಿರಪರಿಕ್ರಮೌ ।
ತಾಮಾಶಾಂ ಮತ್ಕೃತೇ ಹೀನಾವುಪಾಸೀನಾವನಾಥವತ್ ॥೫॥

ಅವರು ಅತ್ತಿತ್ತ ಓಡಾಡದೆಯೆ ಮಗನ ಕುರಿತಾಗಿ ಮಾತನಾಡಿಕೊಳ್ಳುತ್ತ ಮಗನು ನೀರು ತರುವನೆಂದು ಆಸೆಯಿಂದ, ಆ ಆಸೆ ನನ್ನ ಅಪರಾಧದ ಕಾರಣದಿಂದ ಈಡೇರದಂತಾಗಿದ್ದರೂ ಆಸೆ ಇಟ್ಟುಕೊಂಡು, ಅನಾಥರಾಗಿ ಸುಮ್ಮನೆ ಕುಳಿತಿದ್ದರು.

ಶೋಕೋಪಹತಚಿತ್ತಶ್ಚ ಭಯಸಂತ್ರಸ್ತಚೇತನಃ ।
ತಚ್ಚಾಶ್ರಮಪದಂ ಗತ್ವಾ ಭೂಯಃ ಶೋಕಮಹಂ ಗತಃ ॥೬॥

ಶೋಕದಿಂದ ವ್ಯಗ್ರಚಿತ್ತನಾಗಿ ಭಯಭೀತಮನಸಿನವನಾಗಿ ನಾನು ಆಶ್ರಮ-ಪ್ರದೇಶವನ್ನು ಸೇರಿ ಇನ್ನೂ ಹೆಚ್ಚಿನ ಶೋಕಕ್ಕೊಳಗಾದೆ.

ಪದಶಬ್ದಂ ತು ಮೇ ಶ್ರುತ್ವಾ ಮುನಿರ್ವಾಕ್ಯಮಭಾಷತ ।
ಕಿಂ ಚಿರಾಯಸಿ ಮೇ ಪುತ್ರ ಪಾನೀಯಂ ಕ್ಷಿಪ್ರಮಾನಯ ॥೭॥

ದೂರದಿಂದ ನನ್ನ ಹೆಜ್ಜೆಯ ಸಪ್ಪಳವನ್ನು ಕೇಳಿದ ಮುನಿ ನುಡಿದ, 'ಏಕೆ ವಿಲಂಬ ಮಾಡುತ್ತಿರುವೆ ಮಗು, ಬೇಗನೆ ನೀರನ್ನು ತಾ'

ಯನ್ನಿಮಿತ್ತಮಿದಂ ತಾತ ಸಲಿಲೇ ಕ್ರೀಡಿತಂ ತ್ವಯಾ ।
ಉತ್ಕಂಠಿತಾ ತೇ ಮಾತೇಯಂ ಪ್ರವಿಶ ಕ್ಷಿಪ್ರಮಾಶ್ರಮಮ್ ॥೮॥

'ಅಪ್ಪ, ಏಕೆ ನೀನು ನೀರಲ್ಲಿ ಆಟವಾಡಿದೆ? ನಿನ್ನ ಮಾತೆ ನಿನಗಾಗಿ ಕಾತರದಿಂದ ಕಾಯತ್ತಿದ್ದಾಳೆ. ಬೇಗನೆ ಆಶ್ರಮದೊಳಗೆ ಬಾ'.

ಯದ್ವ್ಯಲೀಕಂ ಕೃತಂ ಪುತ್ರ ಮಾತ್ರಾ ತೇ ಯದಿ ವಾ ಮಯಾ ।
ನ ತನ್ಮನಸಿ ಕರ್ತವ್ಯಂ ತ್ವಯಾ ತಾತ ತಪಸ್ವಿನಾ ॥೯॥

'ನಾನಾಗಲಿ ನಿನ್ನ ಮಾತೆಯಾಗಲಿ ನಿನಗೆ ಅಪ್ರಿಯವೇನಾದರೂ ಮಾಡಿದ್ದರೆ ಮಗು, ತಪಸ್ವಿಯಾದ ನೀನು ಅದನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಡ.

ಗತಿಸ್ತ್ವಮಗತೀನಾಂ ಚ ಚಕ್ಷುಸ್ತ್ವಂ ಹೀನಚಕ್ಷುಷಾಮ್ ।
ಸಮಾಸಕ್ತಾಸ್ತ್ವಯಿ ಪ್ರಾಣಾಃ ಕಿಂ ತ್ವಂ ನೋ ನಾಭಿಭಾಷಸೇ ॥೧೦॥

'ಅನಾಥರಿಗೆ ನಾಥ, ಕಣ್ಣಿಲ್ಲದವರಿಗೆ ಕಣ್ಣಾಗುವಂಥವನು ನೀನು. ನಮ್ಮ ಇಂದ್ರಿಯಗಳು ನಿನ್ನಲ್ಲೇ ಆಸಕ್ತವಾಗಿವೆ. ನೀನೇಕೆ ಮಾತನಾಡುತ್ತಿಲ್ಲ?

ಮುನಿಮವ್ಯಕ್ತಯಾ ವಾಚಾ ತಮಹಂ ಸಜ್ಜಮಾನಯಾ ।
ಹೀನವ್ಯಂಜನಯಾ ಪ್ರೇಕ್ಷ್ಯ ಭೀತಭೀತ ಇವಾಬ್ರುವಮ್ ॥೧೧॥

ಮಗನೇ ಬಂದನೆಂದುಕೊಂಡು ಮುನಿ ತಡವರಿಸುತ್ತ ಅಸ್ಪುಟವಾಗಿ ಅವ್ಯಕ್ತವಾಗಿ ಮಾತನಾಡುತ್ತಿರುವುದನ್ನು ನೋಡಿ ನಾನು ಭೀತಚಿತ್ತನಾಗಿ ನುಡಿದೆ.

ಮನಸಃ ಕರ್ಮ ಚೇಷ್ಟಾಭಿರಭಿಸಂಸ್ತಭ್ಯ ವಾಗ್ಬಲಮ್ ।
ಆಚಚಕ್ಷೇ ತ್ವಹಂ ತಸ್ಮೈ ಪುತ್ರವ್ಯಸನಜಂ ಭಯಮ್ ॥೧೨॥

ಮನಸಿನಲ್ಲಿ ಉಂಟಾಗಿದ್ದ ಭಯವನ್ನು ಮಾತಿನ ಬಲದಿಂದಲೂ ಕೈಕಾಲುಗಳ ನಿರ್ಭಯ ವರ್ತನೆಗಳಿಂದಲೂ ಮರೆಮಾಚುತ್ತ ನಾನು ಮುನಿಗೆ ಬಂದಿರುವ ಪುತ್ರಶೋಕ ಭಯವನ್ನು ಹೇಳಿದೆ.

ಕ್ಷತ್ರಿಯೋಽಹಂ ದಶರಥೋ ನಾಹಂ ಪುತ್ರೋ ಮಹಾತ್ಮನಃ ।
ಸಜ್ಜನಾವಮತಂ ದುಃಖಮಿದಂ ಪ್ರಾಪ್ತಂ ಸ್ವಕರ್ಮಜಮ್ ॥೧೩॥

'ನಾನು ಕ್ಷತ್ರಿಯ, ದಶರಥ. ನಾನು ಮಹಾತ್ಮನಾದ ನಿನ್ನ ಪುತ್ರನಲ್ಲ. ಸಜ್ಜನರು ನಿಂದಿಸುವಂಥ, ನನ್ನ ಅಕೃತ್ಯದಿಂದಲೇ ಉಂಟಾದ, ಒಂದು ದುಃಖ ಈಗ ನಮಗೆ ಪ್ರಾಪ್ತವಾಗಿದೆ.

ಭಗವಂಶ್ಚಾಪಹಸ್ತೋಽಹಂ ಸರಯೂತೀರಮಾಗತಃ ।
ಜಿಘಾಂಸುಃ ಶ್ವಾಪದಂ ಕಂಚಿನ್ನಿಪಾನೇ ವಾಗತಂ ಗಜಮ್ ॥೧೪॥

'ಪೂಜ್ಯನೆ, ನಾನು ಧನುರ್ಧಾರಿಯಾಗಿ ಸರಯೂತೀರಕ್ಕೆ ಬಂದೆ, ನೀರು ಕುಡಿಯಲು ಬರುವ ಯಾವುದಾದರೂ ಕ್ರೂರಮೃಗವನ್ನಾಗಲಿ ಕಾಡಾನೆ ಯನ್ನಾಗಲಿ ಬೇಟೆಯಾಡಲು ಬಯಸಿದೆ.

ತತ್ರ ಶ್ರುತೋ ಮಯಾ ಶಬ್ದೋ ಜಲೇ ಕುಂಭಸ್ಯ ಪೂರ್ಯತಃ ।
ದ್ವಿಪೋಽಯಮಿತಿ ಮತ್ವಾಹಂ ಬಾಣೇನಾಭಿಹತೋ ಮಯಾ ॥೧೫॥

'ಆಗ ಕಲಶದಲ್ಲಿ ನೀರು ತುಂಬುವ ಶಬ್ದ ನನಗೆ ಕೇಳಿಸಿತು. 'ಇದು ಆನೆ' ಎಂದು ಭಾವಿಸಿದೆ, ನಾನು. ಬಾಣದಿಂದ ಹೊಡೆದೆ.

ಗತ್ವಾ ನದ್ಯಾಸ್ತತಸ್ತೀರಮಪಶ್ಯಮಿಷುಣಾ ಹೃದಿ ।
ವಿನಿರ್ಭಿನ್ನಂ ಗತಪ್ರಾಣಂ ಶಯಾನಂ ಭುವಿ ತಾಪಸಮ್ ॥೧೬॥

'ಬಳಿಕ ನದಿಯ ತೀರಕ್ಕೆ ಹೋಗಿ, ಬಾಣದಿಂದ ಎದೆಯೊಡೆದು ಅಸುನೀಗಿ ನೆಲದ ಮೇಲೆ ಒರಗಿರುವ ತಾಪಸನನ್ನು ಕಂಡೆ.'

ಭಗವನ್ ಶಬ್ದಮಾಲಕ್ಷ್ಯ ಮಯಾ ಗಜಜಿಘಾಂಸುನಾ ।
ವಿಸೃಷ್ಟೋಂಭಸಿ ನಾರಾಚಸ್ತತಸ್ತೇ ನಿಹತಃ ಸುತಃ ॥೧೭॥

'ಪೂಜ್ಯನೆ, ಶಬ್ದ ಬಂದಲ್ಲಿಗೆ ಗುರಿಇಟ್ಟು ಆನೆಯನ್ನು ಕೊಲ್ಲಬಯಸಿದ ನಾನು ನೀರಿನಲ್ಲಿ ಬಾಣವನ್ನು ಪ್ರಯೋಗಿಸಿದೆ. ಆಗ ಆ ಬಾಣದಿಂದ ಹತನಾದುದು ನಿನ್ನ ಪುತ್ರ.

ತತಸ್ತಸ್ಯೈವ ವಚನಾದುಪೇತ್ಯ ಪರಿತಪ್ಯತಃ ।
ಸ ಮಯಾ ಸಹಸಾ ಬಾಣ ಉದ್ಧೃತೋ ಮರ್ಮಣಸ್ತದಾ ॥೧೮॥

'ಆಗ ಯಾತನೆ ಪಡುತ್ತಿದ್ದ ಕುಮಾರನ ಬಳಿಗೆ ನಾನು ಹೋಗಿ ಅವನ ಮಾತಿನಿಂದಲೇ ಮರ್ಮಸ್ಥಳದಲ್ಲಿ ಚುಚ್ಚಿದ್ದ ಬಾಣವನ್ನು ಬಲವಾಗಿ ಕಿತ್ತು ತೆಗೆದೆ.

ಸ ಚೋದ್ಧೃತೇನ ಬಾಣೇನ ಸಹಸಾ ಸ್ವರ್ಗಮಾಸ್ಥಿತಃ ।
ಭವಂತೌ ಪಿತರೌ ಶೋಚನ್ನಂಧಾವಿತಿ ವಿಲಪ್ಯ ಚ ॥೧೯॥

'ಬಾಣವನ್ನು ಕಿತ್ತುತೆಗೆದಿದ್ದರಿಂದ ಅವನು ತಂದೆ ತಾಯಿಗಳಾದ ನಿಮ್ಮನ್ನು ವೃದ್ಧರೆಂದು, ನಿಮ್ಮನ್ನು ಮುಂದೆ ಯಾರು ರಕ್ಷಿಸುವವರೆಂದು ಶೋಕಿಸಿ ಗೋಳಿಡುತ್ತ ಅಲ್ಲಿಯೇ ಸ್ವರ್ಗಸ್ಥನಾದ.

ಅಜ್ಞಾನಾದ್‌ಭವತಃ ಪುತ್ರಃ ಸಹಸಾಭಿಹತೋ ಮಯಾ ।
ಶೇಷಮೇವಂ ಗತೇ ಯತ್ ಸ್ಯಾತ್ತತ್ ಪ್ರಸೀದತು ಮೇ ಮುನಿಃ ॥೨೦॥

'ನಾನು ಅಜ್ಞಾನದಿಂದ ವಿಚಾರಮಾಡದೆ ನಿನ್ನ ಪುತ್ರನನ್ನು ಹೊಡೆದೆ. ನಿಮ್ಮ ರಕ್ಷಕನಾದ ಪುತ್ರನು ಹೀಗೆ ಹೊರಟುಹೋದಾಗ ಮುಂದೆ ನಾನು ಮಾಡಬೇಕಾಗಿರುವ ನಿಮ್ಮ ರಕ್ಷಣೆಯನ್ನು ಮಾಡಲು ನೀವೇ ನನಗೆ ಆದೇಶ ನೀಡಿ ಅನುಗ್ರಹಿಸಬೇಕು.

ಸ ತಚ್ಛ್ರುತ್ವಾ ವಚಃ ಕ್ರೂರಂ ಮಯೋಕ್ತಮಘಶಂಸಿನಾ ।
ನಾಶಕತ್ತೀವ್ರಮಾಯಾಸಂ ಸ ಕರ್ತುಂ ಭಗವಾನ್ ಮುನಿಃ ॥೨೧॥

ಕಠೋರವಾದ ನನ್ನ ಆ ದುಃಖಸಂದೇಶದ ಮಾತನ್ನು ಕೇಳಿಯೂ ಆ ಪೂಜ್ಯ ಋಷಿ ನನ್ನನ್ನು ಭಸ್ಮಮಾಡುವ ತೀವ್ರಶಾಪ ನೀಡುವ ಪ್ರಯತ್ನವನ್ನು ಮಾಡಲಿಲ್ಲ.

ಸ ಬಾಷ್ಪಪೂರ್ಣನಯನೋ ನಿಃಶ್ವಸನ್ ಶೋಕಕರ್ಶಿತಃ ।
ಮಾಮುವಾಚ ಮಹಾತೇಜಾಃ ಕೃತಾಂಜಲಿಮುಪಸ್ಥಿತಮ್ ॥೨೨॥

ಮಹಾತೇಜನಾದ ಆ ಋಷಿಯು ಕೈಮುಗಿದು ಬಳಿ ನಿಂತ ನನಗೆ, ಮುಖವೆಲ್ಲ ಕಣ್ಣೀರಿಂದ ತೊಳೆಯುತ್ತ ನಿಟ್ಟುಸಿರುಬಿಡುತ್ತ ಶೋಕದಿಂದ ಮೈಮರೆತು, ನುಡಿದ.

ಯದ್ಯೇತದಶುಭಂ ಕರ್ಮ ನ ತ್ವಂ ಮೇ ಕಥಯೇಃ ಸ್ವಯಮ್ ।
ಫಲೇನ್ಮೂರ್ಧಾ ಸ್ಮ ತೇ ರಾಜನ್ ಸದ್ಯಃ ಶತಸಹಸ್ರಧಾ ॥೨೩॥

'ಈ ನಿನ್ನ ದುಷ್ಕರ್ಮವನ್ನು ನೀನೆ ಸ್ವತಃ ಹೇಳಿ ಕ್ಷಮೆ ಬೇಡದಿರುತ್ತಿದ್ದರೆ, ನನ್ನ ಶಾಪದಿಂದ, ರಾಜನೆ! ನಿನ್ನ ತಲೆ ಕ್ಷಣದಲ್ಲಿ ನೂರು ಸಾವಿರ ಹೋಳಾಗಿ ಹೋಗುತ್ತಿತ್ತು.

ಕ್ಷತ್ರಿಯೇಣ ವಧೋ ರಾಜನ್ ವಾನಪ್ರಸ್ಥೇ ವಿಶೇಷತಃ ।
ಜ್ಞಾನಪೂರ್ವಂ ಕೃತಃ ಸ್ಥಾನಾಚ್ಚ್ಯವಯೇದಪಿ ವಜ್ರಿಣಮ್ ॥೨೪॥

'ವಿಶೇಷವಾಗಿ ವಾನಪ್ರಸ್ಥಾಶ್ರಮದವರನ್ನು ಕ್ಷತ್ರಿಯನು ತಿಳಿದೂ ತಿಳಿದೂ ವಧಮಾಡಿದರೆ ಅವನು ಇಂದ್ರಪದವಿಯಲ್ಲಿರುವವನೆ ಆದರೂ ವಜ್ರಾಯುಧ ಹಿಡಿದವನೆ ಆದರೂ ತನ್ನ ಪದವಿಯಿಂದ ಚ್ಯುತನಾಗುವನು.

ಸಪ್ತಧಾ ತು ಫಲೇನ್ಮೂರ್ಧಾ ಮುನೌ ತಪಸಿ ತಿಷ್ಠತಿ ।
ಜ್ಞಾನಾದ್ವಿಸೃಜತಃ ಶಸ್ತ್ರಂ ತಾದೃಶೇ ಬ್ರಹ್ಮವಾದಿನಿ ॥೨೫॥

'ಬ್ರಹ್ಮಜ್ಞಾನಿಯಾಗಿ ಮುನಿಯಾಗಿ ತಪಸ್ಸಿನಲ್ಲಿರುವವನ ಮೇಲೆ ಕ್ಷತ್ರಿಯನು ಶಸ್ತ್ರಪ್ರಯೋಗ ಮಾಡಿದರೆ ಅವನ ತಲೆ ಏಳು ಚೂರಾಗಿ ಸೀಳಿ ಹೋಗುತ್ತದೆ.

ಅಜ್ಞಾನಾದ್ಧಿ ಕೃತಂ ಯಸ್ಮಾದಿದಂ ತೇನೈವ ಜೀವಸಿ ।
ಅಪಿ ಹ್ಯದ್ಯ ಕುಲಂ ನ ಸ್ಯಾದಿಕ್ಷ್ವಾಕೂಣಾಂ ಕುತೋ ಭವಾನ್ ॥೨೬॥

'ಈ ಅಕೃತ್ಯವನ್ನು ನೀನು ತಿಳಿಯದೇ ಮಾಡಿದ್ದರಿಂದಲೇ ನೀನು ಬದುಕಿ ಉಳಿದಿರುವೆ. ಇಲ್ಲದಿದ್ದರೆ ಇಕ್ಷ್ವಾಕು ಕುಲವೇ ನಾಶವಾಗುತ್ತಿತ್ತು. ಇನ್ನು ನಿನ್ನ ಉಳಿವು ಎಲ್ಲಿ?

ನಯ ನೌ ನೃಪ ತಂ ದೇಶಮಿತಿ ಮಾಂ ಚಾಭ್ಯಭಾಷತ ।
ಅದ್ಯ ತಂ ದ್ರಷ್ಟುಮಿಚ್ಛಾವಃ ಪುತ್ರಂ ಪಶ್ಚಿಮದರ್ಶನಮ್ ॥೨೭॥

'ರಾಜನೆ, ನಮ್ಮನ್ನು ಅಲ್ಲಿಗೆ ಕರೆದುಕೊಂಡು ಹೋಗು. ನಾವು ನಮ್ಮ ಮಗನ ಕೊನೆಯ ದರ್ಶನವನ್ನು ಮಾಡಲು ಬಯಸಿದ್ದೇವೆ' ಎಂದು ಮುನಿ ನನಗೆ ಹೇಳಿದ.

ದುಧಿರೇಣಾನುಲಿಪ್ತಾಂಗಂ ಪ್ರಕೀರ್ಣಾಜಿನವಾಸಸಮ್ ।
ಶಯಾನಂ ಭುವಿ ನಿಸ್ಸಂಜ್ಞಂ ಧರ್ಮರಾಜವಶಂ ಗತಮ್ ॥೨೮॥

'ಮೈಯೆಲ್ಲ ರಕ್ತದಿಂದ ತೊಯ್ದುಕೊಂಡು ಅಸ್ತವ್ಯಸ್ತವಾದ ಅಜಿನದುಡುಗೆ ಯಿಂದ ಯಮನ ವಶನಾಗಿ ಪ್ರಜ್ಞೆಯಿಲ್ಲದೆ ನೆಲದ ಮೇಲೊರಗಿರುವ ನಮ್ಮ ಮಗನ ಅಂತಿಮದರ್ಶನ ನಮಗಾಗಲಿ'.

ಅಥಾಹಮೇಕಸ್ತಂ ದೇಶಂ ನೀತ್ವಾ ತೌ ಭೃಶದುಃಖಿತೌ ।
ಅಸ್ಪರ್ಶಯಮಹಂ ಪುತ್ರಂ ತಂ ಮುನಿಂ ಸಹ ಭಾರ್ಯಯಾ ॥೨೯॥

ಬಹಳ ದುಃಖಿತರಾದ ಅವರಿಬ್ಬರನ್ನೂ ನಾನೊಬ್ಬನೇ ಆ ಸ್ಥಳಕ್ಕೆ ಕರೆದೊಯ್ದು ಇಬ್ಬರಿಂದಲೂ ಮಗನ ಸ್ಪರ್ಶಮಾಡಿಸಿದೆ.

ತೌ ಪುತ್ರಮಾತ್ಮನಃ ಸ್ಪೃಷ್ಟ್ವಾ ತಮಾಸಾದ್ಯ ತಪಸ್ವಿನೌ ।
ನಿಪೇತತುಃ ಶರೀರೇಽಸ್ಯ ಪಿತಾ ಚಾಸ್ಯೇದಮಬ್ರವೀತ್ ॥೩೦॥

ತಪಸ್ವಿಗಳಾದ ಅವರು ಮಗನ ಬಳಿಗೆ ಬಂದು ಮುಟ್ಟಿನೋಡಿ ಅವನ ಮೈಮೇಲೆ ಬಿದ್ದರು. ತಂದೆ ಅವನಿಗೆ ನುಡಿದ.

ನಾಭಿವಾದಯಸೇ ಮಾದ್ಯ ನ ಚ ಮಾಮಭಿಭಾಷಸೇ ।
ಕಿಂ ನು ಶೇಷೇಽದ್ಯ ಭೂಮೌ ತ್ವಂ ವತ್ಸ ಕಿಂ ಕುಪಿತೋಽಸಿ ॥೩೧॥

'ಮಗು, ನಿನಗೆ ಕೋಪವೆ? ಏಕೆ ನೆಲದ ಮೇಲೆ ಒರಗಿರುವೆ? ನನಗೆ ನೀನೀಗ ಅಭಿವಾದನ ಮಾಡುತ್ತಿಲ್ಲ ಮಾತನ್ನೂ ಆಡುತ್ತಿಲ್ಲ.

ನ ತ್ವಹಂ ತೇ ಪ್ರಿಯಃ ಪುತ್ರ ಮಾತರಂ ಪಶ್ಯ ಧಾರ್ಮಿಕ ।
ಕಿಂ ನು ನಾಲಿಂಗಸೇ ಪುತ್ರ ಸುಕುಮಾರಂ ವಚೋ ವದ ॥೩೨॥

'ಧರ್ಮಿಷ್ಠನಾದ ಮಗನೆ, ನಾನು ನಿನಗೆ ಪ್ರಿಯನಾಗಿರದಿದ್ದರೆ ಬೇಡ. ತಾಯಿಯನ್ನಾದರೂ ನೋಡು. ಏಕೆ ನಮ್ಮನ್ನು ಈಗ ಆಲಿಂಗಿಸುತ್ತಿಲ್ಲ? ಮುದ್ದಾದ ಮಾತನ್ನಾಡು, ಮಗು.

ಕಸ್ಯ ವಾಪರರಾತ್ರೇಽಹಂ ಶ್ರೋಷ್ಯಾಮಿ ಹೃದಯಂಗಮಮ್ ।
ಅಧೀಯಾನಸ್ಯ ಮಧುರಂ ಶಾಸ್ತ್ರಂ ವಾನ್ಯದ್ವಿಶೇಷತಃ ॥೩೩॥

'ಮುಂದೆ ಮುಂಜಾನೆ ಸಮಯದಲ್ಲಿ ನಿನ್ನಂತೆ ಬಲು ಮಧುರವಾಗಿ ಶಾಸ್ತ್ರವನ್ನಾಗಲಿ ಬೇರೆ ಪುರಾಣವನ್ನಾಗಲಿ ಪಠಿಸಬಲ್ಲ ಯಾರಿಂದ ಹೃದಯಂಗಮ-ವಾದ ಮಾತನ್ನು ನಾವು ಆಲಿಸಬಲ್ಲೆವು?

ಕೋ ಮಾಂ ಸಂಧ್ಯಾಮುಪಾಸ್ಯೈವ ಸ್ನಾತ್ವಾ ಹುತಹುತಾಶನಃ ।
ಶ್ಲಾಘಯಿಷ್ಯತ್ಯುಪಾಸೀನಃ ಪುತ್ರಶೋಕಭಯಾರ್ದಿತಮ್ ॥೩೪॥

'ಸ್ನಾನ ಸಂಧ್ಯೆ ಹೋಮಾದಿಗಳನ್ನು ಮುಗಿಸಿ ನನ್ನ ಬಳಿ ಕುಳಿತು ಮೈಗೆ ಸುಗಂಧ ಲೇಪನ ಮಾಡುತ್ತ ಇನ್ನಾರು ಪುತ್ರಶೋಕಭಯಪೀಡಿತನಾದ ನನ್ನನ್ನು ಸೇವಿಸುವರು?

ಕಂದಮೂಲಫಲಂ ಹೃತ್ವಾ ಕೋ ಮಾಂ ಪ್ರಿಯಮಿವಾತಿಥಿಮ್ ।
ಭೋಜಯಿಷ್ಯತ್ಯಕರ್ಮಣ್ಯಮಪ್ರಗ್ರಹಮನಾಯಕಮ್ ॥೩೫॥

'ಕರ್ಮ ಮಾಡದೆ ಪ್ರತಿಗ್ರಹವನ್ನೂ ಮಾಡದೆ ಅನಾಥನಾಗಿ ಕುಳಿತಿರುವ ನನಗೆ ಇನ್ನು ಯಾರು ಕಂದ ಮೂಲ ಫಲಗಳನ್ನು ತಂದು ಪ್ರಿಯ ಅತಿಥಿಯನ್ನು ಉಣಿಸು-ವಂತೆ ನನ್ನನ್ನು ಉಣಿಸುತ್ತಾನೆ?

ಇಮಾಮಂಧಾಂ ಚ ವೃದ್ಧಾಂ ಚ ಮಾತರಂ ತೇ ತಪಸ್ವಿನೀಮ್ ।
ಕಥಂ ವತ್ಸ ಭರಿಷ್ಯಾಮಿ ಕೃಪಣಾಂ ಪುತ್ರಗರ್ಧಿನೀಮ್ ॥೩೬॥

'ಮಗನನ್ನು ಪ್ರೀತಿಸುವ, ದೀನಳಾಗಿ ಕಷ್ಟಪಡುವ ವೃದ್ಧಳಾದ ಅಂಧಳಾದ ಈ ನಿನ್ನ ಮಾತೆಯನ್ನು ನಾನು ಹೇಗೆ ಪೋಷಿಸಲಿ?

ತಿಷ್ಠ ಮಾ ಮಾ ಗಮಃ ಪುತ್ರ ಯಮಸ್ಯ ಸದನಂ ಪ್ರತಿ ।
ಶ್ವೋ ಮಯಾ ಸಹ ಗಂತಾಸಿ ಜನನ್ಯಾ ಚ ಸಮೇಧಿತಃ ॥೩೭॥

'ಮಗನೆ, ನಿಲ್ಲು, ಯಮಸದನಕ್ಕೆ ಹೋಗಬೇಡ. ನನ್ನೊಡನೆಯೂ ತಾಯಿ-ಯಿಂದಲೂ ಕೂಡಿಕೊಂಡು ನಾಳೆ ಹೋಗುವಿಯಂತೆ!

ಉಭಾವಪಿ ಚ ಶೋಕಾರ್ತಾವನಾಥೌ ಕೃಪಣೌ ವನೇ ।
ಕ್ಷಿಪ್ರಮೇವ ಗಮಿಷ್ಯಾವಸ್ತ್ವಯಾ ಸಹ ಯಮಕ್ಷಯಮ್ ॥೩೮॥

'ನಾವಿಬ್ಬರೂ ಕಾಡಿನಲ್ಲಿ ಅನಾಥರಾಗಿ ಕಷ್ಟದಿಂದಿರುವವರು ಶೋಕಾರ್ತ ರಾಗಿರುವೆವು. ಬೇಗನೆ ನಿನ್ನ ಜೊತೆಗೇ ಯಮಸದನಕ್ಕೆ ಹೋಗುವೆವು.

ತತೋ ವೈವಸ್ವತಂ ದೃಷ್ಟ್ವಾ ತಂ ಪ್ರವಕ್ಷ್ಯಾಮಿ ಭಾರತೀಮ್।
ಕ್ಷಮತಾಂ ಧರ್ಮರಾಜೋ ಮೇ ಬಿಭೃಯಾತ್ ಪಿತರಾವಯಮ್॥೩೯॥

'ಬಳಿಕ ನಾನು ಅಲ್ಲಿ ಯಮನನ್ನು ಕಂಡು ಹೇಳುತ್ತೇನೆ. 'ತಂದೆ ತಾಯಿಗಳಾದ ನಮ್ಮನ್ನು ಈತ ಕಾಪಾಡುತ್ತಾನೆ. ಶಸ್ತ್ರದಿಂದ ಅಪಮೃತ್ಯು ಹೊಂದಿರುವನೆಂದು ಈತನನ್ನು ಶಿಕ್ಷಿಸಬೇಡ, ಧರ್ಮರಾಜ, ಕ್ಷಮಿಸು' ಎಂದು.

ದಾತುಮರ್ಹತಿ ಧರ್ಮಾತ್ಮಾ ಲೋಕಪಾಲೋ ಮಹಾಯಶಾಃ ।
ಈದೃಶಸ್ಯ ಮಮಾಕ್ಷಯ್ಯಾಮೇಕಾಮಭಯದಕ್ಷಿಣಾಮ್ ॥೪೦॥

'ಮಹಾಯಶಸ್ವಿ ಲೋಕಪಾಲನಾದ ಧರ್ಮಾತ್ಮ ಯಮನು ಅನಾಥನಾದ ನನಗೆ ಪುತ್ರತಾರಣರೂಪವಾದ ಅಕ್ಷಯವಾದ ಅಭಯದಕ್ಷಿಣೆಯನ್ನು ನೀಡುತ್ತಾನೆ.

ಪಿತನು ಅಪಮೃತ್ಯುವಿಗೆ ಈಡಾದ ಪುತ್ರನಿಗೆ ಸದ್ಗತಿ ತಂದುಕೊಡುವುದು ಇಲ್ಲಿ 'ಪುತ್ರತಾರಣ' ಪಿತನಿಗೆ ಈ ಭಾಗ್ಯ ನೀಡುವುದು ಧರ್ಮರಾಜನು ನೀಡುವ ಅಭಯದಕ್ಷಿಣೆ.

ಅಪಾಪೋಽಸಿ ಯದಾ ಪುತ್ರ ನಿಹತಃ ಪಾಪಕರ್ಮಣಾ ।
ತೇನ ಸತ್ಯೇನ ಗಚ್ಛಾಶು ಯೇ ಲೋಕಾಃ ಶಸ್ತ್ರಯೋಧಿನಾಮ್ ॥೪೧॥

'ಮಗು, ನೀನು ನಿನ್ನ ಪ್ರಾರಬ್ಧ ಪಾಪಕರ್ಮವಶದಿಂದ ರಾಜನ ಕೈಯಿಂದ ಹತನಾಗಿ ಈಗ ಪಾಪರಹಿತನಾಗಿರುವೆ. ನನ್ನ ಈ ಸತ್ಯವಚನದಿಂದ ನೀನು ಶಸ್ತ್ರಯೋಧಿಗಳಾದ ವೀರರಿಗೆ ಲಭ್ಯವಾಗಿರುವ ಸ್ವರ್ಗಕ್ಕೆ ಹೋಗು.

ನಿರಪರಾಧಿಯನ್ನು ಧರ್ಮಾತ್ಮನಾದ ರಾಜನು ಶಸ್ತ್ರದಿಂದ ದಂಡಿಸಿದರೂ ಅವನ ಪೂರ್ವಜನ್ಮದ ಅಪರಾಧ ಪರಿಮಾರ್ಜನೆಯಾಗುವುದರಿಂದ ಅಪರಾಧಕ್ಕೆ ಕಾರಣವಾದ ಪೂರ್ವಜನ್ಮದ ಪಾಪ ಪರಿಹಾರವಾಗುವುದು. ಹೊರತು ಶಸ್ತ್ರಮರಣರೂಪದ ಅಪಮೃತ್ಯುದೋಷ ಬರುವುದಿಲ್ಲ. ರಣರಂಗ ದಲ್ಲಿ ಶಸ್ತ್ರದಿಂದ ಹತರಾಗುವವರಿಗೆ ಲಭಿಸುವ ಸ್ವರ್ಗವೇ ಈ ಅಪರಾಧಿಗೆ ಬಂದೀತು.

ಯಂ ಹಿ ಶೂರಾ ಗತಿಂ ಯಾಂತಿ ಸಂಗ್ರಾಮೇಷ್ವನಿವರ್ತಿನಃ ।
ಹತಾಸ್ತ್ವಭಿಮುಖಾಃ ಪುತ್ರ ಗತಿಂ ತಾಂ ಪರಮಾಂ ವ್ರಜ ॥೪೨॥

'ರಣದಲ್ಲಿ ಶತ್ರುಗಳನ್ನಿದಿರಿಸಿ ಪಲಾಯನಮಾಡದೆ ಅವರ ಶಸ್ತ್ರಗಳಿಂದ ಹತನಾಗುವವರು ಯಾವ ಉತ್ತಮ ಗತಿಯನ್ನು ಹೊಂದುವರೋ ಉತ್ತಮವಾದ ಆ ಗತಿಯನ್ನು ಪುತ್ರ, ನೀನು ಪಡೆ.

ಯಾಂ ಗತಿಂ ಸಗರಃ ಶೈಬ್ಯೋ ದಿಲೀಪೋ ಜನಮೇಜಯಃ ।
ನಹುಷೋ ಧುಂಧುಮಾರಶ್ಚ ಪ್ರಾಪ್ತಾಸ್ತಾಂ ಗಚ್ಛ ಪುತ್ರಕ ॥೪೩॥

'ಯಾವ ಗತಿಯನ್ನು ಸಗರ ಶೈಬ್ಯ ದಿಲೀಪ ಜನಮೇಜಯ ನಹುಷ ಧುಂದು-ಮಾರ ರಾಜರುಗಳು ಹೊಂದಿರುವರೋ ಆ ಗತಿಯನ್ನು ಮಗು, ನೀನು ಪಡೆ.

ಯಾ ಗತಿಃ ಸರ್ವಸಾಧೂನಾಂ ಸ್ವಾಧ್ಯಾಯಾತ್ತಪಸಶ್ಚ ಯಾ ।
ಯಾ ಭೂಮಿದಸ್ಯಾಹಿತಾಗ್ನೇರೇಕಪತ್ನೀವ್ರತಸ್ಯ ಚ ॥೪೪॥

ಗೋಸಹಸ್ರಪ್ರದಾತೄಣಾಂ ಗುರುಸೇವಾಭೃತಾಮಪಿ ।
ದೇಹನ್ಯಾಸಕೃತಾಂ ಯಾ ಚ ತಾಂ ಗತಿಂ ಗಚ್ಛ ಪುತ್ರಕ ॥೪೫॥

'ವೇದಾಧ್ಯಾಯನ ತಪಸ್ಸುಗಳಿಂದ ಎಲ್ಲ ಸಜ್ಜನರಿಗೆ ಯಾವ ಸದ್ಗತಿ ಸಿಗುವುದೋ ಭೂದಾನ ಮಾಡುವವನಿಗೆ ಆಹಿತಾಗ್ನಿಯಾದ ಯಾಜ್ಞಿಕನಿಗೆ ಏಕಪತ್ನೀವ್ರತಸ್ಥನಿಗೆ ಸಹಸ್ರಗೋದಾನ ಮಾಡುವವರಿಗೆ ಗುರುಸೇವಾನಿರತರಿಗೆ ಮಹಾಪ್ರಸ್ಥಾನಾದಿ ವಿಧಾನದಿಂದ ಶರೀರತ್ಯಾಗ ಮಾಡುವವರಿಗೆ ಯಾವ ಸದ್ಗತಿ ಲಭ್ಯವೋ ಆ ಸದ್ಗತಿಯನ್ನು ಮಗು ನೀನೂ ಪಡೆ.

ನಹಿ ತ್ವತ್ಕುಲೇ ಜಾತೋ ಗಚ್ಛತ್ಯಕುಶಲಾಂ ಗತಿಮ್ ।
ಸ ತು ಯಾಸ್ಯತಿ ಯೇನ ತ್ವಂ ನಿಹತೋ ಮಮ ಬಾಂಧವಃ ॥೪೬॥

'ನಮ್ಮ ಕುಲದಲ್ಲಿ ಜನಿಸಿದವನು ದುರ್ಗತಿಯನ್ನು ಹೊಂದುವುದಿಲ್ಲ. ಯಾರು ಬಂಧುವಾದ ನಿನ್ನನ್ನು ಕೊಂದನೋ ಅವನು ದುರ್ಗತಿ ಹೊಂದುತ್ತಾನೆ.

ದಶರಥನಿಗೆ ಮುನಿ ಇಲ್ಲಿ ಶಾಪ ಕೊಡುತ್ತಿಲ್ಲ. ನಿರಪರಾಧಿಯನ್ನು ದಂಡಿಸುವ ರಾಜ ದುರ್ಗತಿಯನ್ನು ಹೊಂದುತ್ತಾನೆ ಎನ್ನುವ ವಸ್ತುಸ್ಥಿತಿಯನ್ನು ಹೇಳುತ್ತಿದ್ದಾನೆ. ಶಾಪವನ್ನು ಮುಂದೆ 'ಪುತ್ರ ವಿಯೋಗದಿಂದ ಮರಣ ಹೊಂದು' ಎಂದು ಶಪಿಸುತ್ತಾನೆ. ಶಾಪದ ಫಲವನ್ನು ಅನುಭವಿಸುವುದರಿಂದಲೇ ದಶರಥ ಪ್ರಾರಬ್ಧ ಪಾಪರಹಿತನಾಗಿ ಸ್ವರ್ಗಕ್ಕೆ ಹೋಗುತ್ತಾನೆ.

ಏವಂ ಸ ಕೃಪಣಂ ತತ್ರ ಪರ್ಯದೇವಯತಾಸಕೃತ್ ।
ತತೋಽಸ್ಯೈ ಕರ್ತುಮುದಕಂ ಪ್ರವೃತ್ತಃ ಸಹ ಭಾರ್ಯಯಾ ॥೪೭॥

ಮುನಿಯು ಹೀಗೆ ದುಃಖದಿಂದ ಪುನಃ ಪುನಃ ಗೋಳಿಟ್ಟ. ಬಳಿಕ ಪತ್ನಿಯೊಂದಿಗೆ ಮಗನಿಗೆ ಉದಕಕ್ರಿಯೆ ಮಾಡಲು ತೊಡಗಿದ.

ಸ ತು ದಿವ್ಯೇನ ರೂಪೇಣ ಮುನಿಪುತ್ರಃ ಸ್ವಕರ್ಮಭಿಃ ।
ಸ್ವರ್ಗಮಧ್ಯಾರುಹತ್ ಕ್ಷಿಪ್ರಂ ಶಕ್ರೇಣ ಸಹ ಧರ್ಮವಿತ್ ॥೪೮॥

ಆದರೆ ಧರ್ಮಜ್ಞನಾದ ಮುನಿಕುಮಾರ ಆಗಲೆ ತಾನು ಗಳಿಸಿದ್ದ ಪುಣ್ಯದಿಂದ ದಿವ್ಯರೂಪದಿಂದ ಒಡನೆ ಇಂದ್ರನೊಂದಿಗೆ ಸ್ವರ್ಗಕ್ಕೆ ಏರಿದ.

ಆಬಭಾಷೇ ಚ ತೌ ವೃದ್ಧೌ ಶಕ್ರೇಣ ಸಹ ತಾಪಸಃ ।
ಆಶ್ವಾಸ್ಯ ಚ ಮುಹೂರ್ತಂ ತು ಪಿತರೌ ವಾಕ್ಯಮಬ್ರವೀತ್ ॥೪೯॥

ಮತ್ತು ಇಂದ್ರನೊಂದಿಗೆ ನಿಂತು ಆ ತಾಪಸನು ಮುಹೂರ್ತಕಾಲ ವೃದ್ಧರಾದ ತಂದೆ ತಾಯಿಗಳೊಡನೆ ಸಂಭಾಷಣ ಮಾಡಿದ. ಅವರನ್ನು ಸಂತೈಸಿ ನುಡಿದ.

ಸ್ಥಾನಮಸ್ಮಿ ಮಹತ್ ಪ್ರಾಪ್ತೋ ಭವತೋಃ ಪರಿಚಾರಣಾತ್ ।
ಭವಂತಾವಪಿ ಚ ಕ್ಷಿಪ್ರಂ ಮಮ ಮೂಲಮುಪೈಷ್ಯತಃ ॥೫೦॥

'ನಿಮ್ಮ ಸೇವೆ ಮಾಡಿದ್ದರ ಫಲವಾಗಿ ನಾನು ದೊಡ್ಡ ಸ್ಥಾವನ್ನು ಪಡೆದಿದ್ದೇನೆ. ನೀವೂ ಕೂಡ ಬೇಗನೆ ನನ್ನ ಬಳಿಗೆ ಬರುವಿರಿ'.

ಏವಮುಕ್ತ್ವಾ ತು ದಿವ್ಯೇನ ವಿಮಾನೇನ ವಪುಷ್ಮತಾ ।
ಆರುರೋಹ ದಿವಂ ಕ್ಷಿಪ್ರಂ ಮುನಿಪುತ್ರೋ ಜಿತೇಂದ್ರಿಯಃ ॥೫೧॥

ಹೀಗೆ ಹೇಳಿ ಜಿತೇಂದ್ರಿಯನಾದ ಮುನಿಕುಮಾರ ದಿವ್ಯಶರೀರದಿಂದ ವಿಮಾನ-ವನ್ನೇರಿ ಬೇಗನೆ ಸ್ವರ್ಗವನ್ನೇರಿದ.

ಸ ಕೃತ್ವಾ ತೂದಕಂ ತೂರ್ಣಂ ತಾಪಸಃ ಸಹ ಭಾರ್ಯಯಾ ।
ಮಾಮುವಾಚ ಮಹಾತೇಜಾಃ ಕೃತಾಂಜಲಿಮುಪಸ್ಥಿತಮ್ ॥೫೨॥

ಪತ್ನಿಯೊಂದಿಗೆ ಬೇಗನೆ ಉದಕಕ್ರಿಯೆಯನ್ನು ಮುಗಿಸಿ ಮಹಾತೇಜನಾದ ಮುನಿಯು ಕೈಮುಗಿದು ನಿಂತಿದ್ದ ನನಗೆ ನುಡಿದ.

ಅದ್ಯೈವ ಜಹಿ ಮಾಂ ರಾಜನ್ ಮರಣೇ ನಾಸ್ತಿ ಮೇ ವ್ಯಥಾ ।
ಯಚ್ಛರೇಣೈಕಪುತ್ರಂ ಮಾಂ ತ್ವಮಕಾರ್ಷೀರಪುತ್ರಕಮ್ ॥೫೩॥

'ಈಗಲೆ ನನ್ನನ್ನು ಕೊಂದುಬಿಡು, ರಾಜನೆ, ಮರಣಕ್ಕೆ ನಾನು ವ್ಯಥೆಪಡುವುದಿಲ್ಲ.

ಏಕೆಂದರೆ ನನ್ನ ಒಬ್ಬನೆ ಮಗನನ್ನು ಕೊಂದು ನನಗೆ ನೀನು ಪುತ್ರವಿಯೋಗವನ್ನುಂಟು ಮಾಡಿರುತ್ತಿ.

ತ್ವಯಾ ತು ಯದವಿಜ್ಞಾನಾನ್ನಿಹತೋ ಮೇ ಸುತಃ ಶುಚಿಃ ।
ತೇನ ತ್ವಾಮಭಿಶಪ್ಸ್ಯಾಮಿ ಸುದುಃಖಮತಿದಾರುಣಮ್ ॥೫೪॥

'ನೀನು ತಿಳಿಯದೆ ಪಾಪರಹಿತನಾದ ನನ್ನ ಮಗನನ್ನು ಕೊಂದಿರುವುದರಿಂದ ಪಾಪವಿಲ್ಲದಿದ್ದರೂ ಬಲು ದಾರುಣವಾದ ಅತಿ ದುಃಖಕರವಾದ ಶಾಪವನ್ನು ನಿನಗೆ ನೀಡುತ್ತೇನೆ.

ಪುತ್ರವ್ಯಸನಜಂ ದುಃಖಂ ಯದೇತನ್ಮಮ ಸಾಂಪ್ರತಮ್ ।
ಏವಂ ತ್ವಂ ಪುತ್ರಶೋಕೇನ ರಾಜನ್ ಕಾಲಂ ಗಮಿಷ್ಯಸಿ ॥೫೫॥

ನನಗೆ ಈಗ ಹೇಗೆ ಪುತ್ರಶೋಕದಿಂದ ದುಃಖ ಉಂಟಾಗಿದೆಯೋ, ಹೀಗೇ, ರಾಜನೆ, ನೀನೂ ಕೂಡ ಪುತ್ರಶೋಕದಿಂದ ಮರಣ ಹೊಂದುವೆ.

ಅಜ್ಞಾನಾತ್ತು ಹತೋ ಯಸ್ಮಾತ್ ಕ್ಷತ್ರಿಯೇಣ ತ್ವಯಾ ಮುನಿಃ ।
ತಸ್ಮಾತ್ತ್ವಂ ನಾವಿಶತ್ಯಾಶು ಬ್ರಹ್ಮಹತ್ಯಾ ನರಾಧಿಪ ॥೫೬॥

ಅಜ್ಞಾನದಿಂದ ಕ್ಷತ್ರಿಯನಾದ ನೀನು ಒಬ್ಬ ಮುನಿಯ ಕುಮಾರನನ್ನು ಕೊಂದಿರುವುದರಿಂದ ರಾಜನೆ, ನಿನಗೆ ಅದರಿಂದ ಬ್ರಹ್ಮಹತ್ಯಾಪಾಪ ಸುತ್ತಿಕೊಳ್ಳುವುದಿಲ್ಲ.

ತ್ವಾಮಪ್ಯೇತಾದೃಶೋ ಭಾವಃ ಕ್ಷಿಪ್ರಮೇವ ಗಮಿಷ್ಯತಿ ।
ಜೀವಿತಾಂತಕರೋ ಘೋರೋ ದಾತಾರಮಿವ ದಕ್ಷಿಣಾ ॥೫೭॥

'ಅಪಿ' ಆದರೂ ದಕ್ಷಿಣೆಯು ದಾತೃವಿಗೆ ತಕ್ಕ ಫಲ ನೀಡುವಂತೆ ನಿನಗೆ ನಿನ್ನ ಈ ಕರ್ಮ, ನನಗೆ ಪುತ್ರವಿಯೋಗ ತಂದ ಕರ್ಮ, ಬೇಗನೆ ಫಲ ನೀಡುತ್ತದೆ.

ಏವಂ ಶಾಪಂ ಮಯಿ ನ್ಯಸ್ಯ ವಿಲಪ್ಯ ಕರುಣಂ ಬಹು ।
ಚಿತಾಮಾರೋಪ್ಯ ದೇಹಂ ತನ್ಮಿಥುನಂ ಸ್ವರ್ಗಮಭ್ಯಯಾತ್ ॥೫೮॥

ಹೀಗೆ ನನಗೆ ಶಾಪವಿತ್ತು ಕರುಣಾಜನಕವಾಗಿ ಬಹಳ ಅತ್ತು ಆ ಮುನಿ ದಂಪತಿಗಳು ಚಿತೆಯಲ್ಲಿ ದೇಹವನ್ನು ತ್ಯಜಿಸಿ ಸ್ವರ್ಗವನ್ನು ಹೊಂದಿದರು.

ಯದ್ಯಪಿ ಮುನಿಕುಮಾರನೇ ತಾನು ಬ್ರಾಹ್ಮಣ ಜಾತಿಯವನಲ್ಲ. ಕರಣನೆಂಬ

ಸಂಕರಜಾತಿಯವನು, ಅದರಿಂದ ಬ್ರಹ್ಮಹತ್ಯಾಪಾಪ ನಿನಗೆ ಬರಲಾರದೆಂದು ಹೇಳಿ ಸತ್ತಿದ್ದ. ಆದರೆ ಮುನಿ ಈಗ ಬ್ರಹ್ಮಹತ್ಯೆಯಿಂದ ಅತಿದಾರುಣವಾದ ಪುತ್ರ-ವಿಯೋಗದ ಮರಣ ಹೊಂದುವ ಫಲ ನಿನಗೆ ಲಭಿಸುತ್ತದೆ ಎಂದು ಹೇಳಿದ್ದಾನೆ. ಆದರೂ ವಿರೋಧವಿಲ್ಲ. ಮುನಿಕುಮಾರನ ವಧೆಯಿಂದ ಪಾಪ ಬಾರದಿದ್ದರೂ ಮುನಿಗೆ ಪುತ್ರವಿಯೋಗದ ದುಃಖ ಕೊಟ್ಟಿದ್ದರಿಂದ ಅದೂ ಒಂದು ಬ್ರಹ್ಮಹತ್ಯೆಯೆ ಆಗುವುದರಿಂದ ಅದಕ್ಕೆ ಫಲವಾಗಿ ಮುನಿಯು ಶಾಪ ಕೊಟ್ಟಿದ್ದಾನೆ.

ಯದ್ಯಪಿ ಮುನಿಯು ಇಲ್ಲಿ ಅಜ್ಞಾನದಿಂದ ನೀನು ನನ್ನ ಕುಮಾರನನ್ನು ಕೊಂದಿದ್ದರಿಂದ ಬ್ರಹ್ಮಹತ್ಯಾಪಾಪ ನಿನಗೆ ಬರಲಾರದೆಂದು ಹೇಳಿದ್ದಾನೆ. ಕುಮಾರ ಹೇಳಿದಂತೆ ಬ್ರಾಹ್ಮಣನಲ್ಲದ ಕುಮಾರನ ವಧೆಯಿಂದ ಬ್ರಹ್ಮಹತ್ಯಾ ಪಾಪಕ್ಕೆ ಪ್ರಸಕ್ತಿಯೇ ಇಲ್ಲವಾಗಿರುವಾಗ ಮುನಿ 'ಅಜ್ಞಾನದಿಂದ ವಧೆ ಮಾಡಿದ ಪ್ರಯುಕ್ತ ಪಾಪವಿಲ್ಲ' ಎಂದುದು ಹೇಗೆ ಯುಕ್ತವಾಗುವುದು? ಎಂಬ ಪ್ರಶ್ನೆ ಬರುತ್ತದೆ. ಇದಕ್ಕೆ ಹೀಗೆ ಸಮಾಧಾನ ಹೇಳಬಹುದು. ಕುಮಾರನ ಹತ್ಯೆಯಿಂದ ಬ್ರಹಹತ್ಯಾಪಾಪ ಬಾರದಿರಲು ಕುಮಾರ ಹೇಳುವಂತೆ ಕುಮಾರನು ಅಬ್ರಾಹ್ಮಣನಾಗಿದ್ದುದು ಸಾಮಾನ್ಯವಾಗಿ ಕಾರಣವೇ. ಹಾಗಿದ್ದರೂ ಅದು ಮುಖ್ಯಕಾರಣವಲ್ಲ. ಅಬ್ರಾಹ್ಮಣವಧದಿಂದಲೂ ಬ್ರಹ್ಮಹತ್ಯೆ ಬರಬಹುದು—

'ಶೂದ್ರಯೋನ್ಯಾಂ ಚ ಜಾಯಂತೇ ಮುನಯೋ ವೇದಪಾರಗಾಃ ।'

(ಆದಿ.57.169)

ಎಂದು ಮಹಾಭಾರತ ಹೇಳುವಂತೆ ಶೂದ್ರನಾಗಿಯೂ ಬ್ರಹ್ಮಜ್ಞಾನಿ ಹುಟ್ಟಿ-ಬರಬಹುದು. ಅವನನ್ನು ಕೊಂದರೆ ಬ್ರಹ್ಮಹತ್ಯೆಯಾಗಬಹುದು. ಅದರಿಂದ ರಾಜ ತಿಳಿಯದೆ ಬ್ರಹ್ಮಹತ್ಯೆ ಮಾಡಿರುವುದೇ ಅವನಿಗೆ ಪಾಪ ಬಾರದಿರಲು ಮುಖ್ಯಕಾರಣ. ಈ ಅಭಿಪ್ರಾಯದಿಂದ ಮುನಿ 'ಅಜ್ಞಾನದಿಂದ ನೀನು ಗೈದ ನನ್ನ ಕುಮಾರನ ವಧದಿಂದ ನಿನಗೆ ಪಾಪವಿಲ್ಲ' ಎಂದಿದ್ದಾನೆ. ಮುನಿಕುಮಾರನೂ ಹಾಗೆ ಹೇಳಿದ್ದಾನೆ ಎಂದಿಟ್ಟುಕೊಳ್ಳಬೇಕು.

ಸಂಗ್ರಹ ರಾಮಾಯಣದಲ್ಲಿ ಪ್ರಾಯಃ ಇದೇ ಅಭಿಪ್ರಾಯದಿಂದ ಮುನಿ ಕುಮಾರನ ಬಾಯಿಯಿಂದ ಮಾತ್ರ ಹಾಗೇ ರಾಜನಿಗೆ ಪಾಪವಿಲ್ಲ ಲೇಪವಿಲ್ಲ' ಎಂದು ಹೇಳಿಸಿದ್ದಾರೆ, 'ಸ್ಯಾನ್ನ ತೇ ನವಿದುಷೋ ದ್ವಿಜಹತ್ಯಾ' ಎಂದು. ಮುನಿಯಿಂದ ಹಾಗೆ ಹೇಳಿಸಲಿಲ್ಲ. ಆದರೂ ವಾಲ್ಮೀಕಿ ರಾಮಾಯಣಾನುಸಾರ ಮುನಿಯೂ ಹಾಗೇ ಅಲ್ಲಿ ಹೇಳಿದ್ದಾನೆ ಎಂದಿಟ್ಟುಕೊಳ್ಳಬೇಕು.

ತದೇತಚ್ಚಿಂತಯಾನೇನ ಸ್ಮೃತಂ ಪಾಪಂ ಮಯಾ ಸ್ವಯಮ್ ।
ತದಾ ಬಾಲ್ಯಾತ್ ಕೃತಂ ದೇವಿ ಶಬ್ದವೇಧ್ಯನುಕರ್ಷಿಣಾ ॥೫೯॥

ದೇವಿ, ನನಗೆ ಈ ಪುತ್ರವಿಯೋಗ ಏಕೆ ಉಂಟಾಯಿತೆಂದು ಆಲೋಚಿಸಿದಾಗ ನಾನು ಹಿಂದೆ ಅಜ್ಞಾನದಿಂದ ಮುನಿಕುಮಾರನಿಗೆ ಶಬ್ದವೇಧಿ ವಿದ್ಯೆಯಿಂದ ಬಾಣವೆಸೆದುದು ಬಳಿಕ ನೆಟ್ಟ ಬಾಣವನ್ನು ಕಿತ್ತು ತೆಗೆದುದು ಮೊದಲಾಗಿ ನಾನು ಸ್ವಯಂ ಮಾಡಿದ ಎಲ್ಲ ಪಾಪಕರ್ಮ ನೆನಪಾಯಿತು.

ತಸ್ಯಾಯಂ ಕರ್ಮಣೋ ದೇವಿ ವಿಪಾಕಃ ಸಮುಪಸ್ಥಿತಃ ।
ಅಪಥ್ಯೈಃ ಸಹ ಸಂಭುಕ್ತೋ ವ್ಯಾಧಿಮನ್ನರಸೋ ಯಥಾ ॥೬೦॥

ದೇವಿ, ಆ ಪಾಪಕರ್ಮದ ಫಲ ಇದೀಗ ಪ್ರಾಪ್ತವಾಗಿದೆ. ಅಪಥ್ಯದೊಂದಿಗೆ ಸೇವಿಸಿದ ಅನ್ನರಸ ವ್ಯಾಧಿಯನ್ನು ಉಲ್ಬಣಗೊಳಿಸುವಂತೆ.

ತಸ್ಮಾನ್ಮಾಮಾಗತಂ ಭದ್ರೇ ತಸ್ಯೋದಾರಸ್ಯ ತದ್ವಚಃ ।
ಯದಹಂ ಪುತ್ರಶೋಕೇನ ಸಂತ್ಯಕ್ಷ್ಯಾಮ್ಯದ್ಯ ಜೀವಿತಮ್ ॥೬೧॥

ದೇವಿ, ಅದರಿಂದ ಮುನಿಶ್ರೇಷ್ಠನಾಡಿದ ಮಾತು ನನ್ನ ಸ್ಮೃತಿಪಥಕ್ಕೆ ಈಗ ಬಂದಿದೆ. ಅದರಿಂದ ನಾನಿಂದು ಪುತ್ರಶೋಕದಿಂದ ಅಸು ನೀಗುತ್ತೇನೆ.

ಚಕ್ಷುಭ್ಯಾಂ ತ್ವಾಂ ನ ಪಶ್ಯಾಮಿ ಕೌಸಲ್ಯೇ ಸಾಧು ಮಾಂ ಸ್ಪೃಶ ।
ಇತ್ಯುಕ್ತ್ವಾ ಸ ರುದಂಸ್ತ್ರಸ್ತೋ ಭಾರ್ಯಾಮಾಹ ಚ ಭೂಮಿಪಃ ॥೬೨॥

'ಕಣ್ಣುಗಳಿಂದ ನಾನು ನಿನ್ನನ್ನು ಸರಿಯಾಗಿ ನೋಡಲಾರದವನಾಗಿದ್ದೇನೆ, ಕೌಸಲ್ಯೆ, ನನ್ನನ್ನು ಭದ್ರವಾಗಿ ಹಿಡಿದುಕೊಂಡಿರು' — ಹೀಗೆ ದಶರಥ ಮರಣ ಭಯದಿಂದ ಅಳುತ್ತ ಸತಿಗೆ ನುಡಿದ.

ಯಮಕ್ಷಯಮನುಪ್ರಾಪ್ತಾ ದ್ರಕ್ಷ್ಯಂತಿ ನ ಹಿ ಮಾನವಾಃ ॥೬೩॥

'ಯಮಸದನಕ್ಕೆ ಹೊರಟಿರುವ ಮಾನವರು ಏನೂ ಕಾಣಲಾರರು.

ಯದಿ ಮಾಂ ಸಂಸ್ಪೃಶೇದ್ರಾಮಃ ಸಕೃದದ್ಯ ಲಭೇತ ವಾ
ಧನಂ ವಾ ಯೌವರಾಜ್ಯಂ ವಾ ಜೀವೇಯಮಿತಿ ಮೇ ಮತಿಃ ॥೬೪॥

ರಾಮನು ನನ್ನನ್ನು ಒಮ್ಮೆ ಸ್ಪರ್ಶಿಸಿದರೆ, ಅಥವಾ ನನ್ನ ಧನಸಂಪತ್ತನ್ನು

ಸ್ವೀಕರಿಸಿದರೆ ಅಥವಾ ಯುವರಾಜ ಸಿಂಹಾಸನವನ್ನು ಸ್ವೀಕರಿಸಿದರೆ ಮಾತ್ರ ನಾನು ಬದುಕಿರಬಲ್ಲೆ ಎಂದು ನನಗೆ ಅನಿಸುತ್ತದೆ.

ಏತನ್ಮೇ ಸದೃಶಂ ದೇವಿ ಯನ್ಮಯಾ ರಾಘವೇ ಕೃತಮ್ ।
ಸದೃಶಂ ತತ್ತು ತಸ್ಯೈವ ಯದನೇನ ಕೃತಂ ಮಯಿ ॥೬೫॥

ದೇವಿ, ರಾಮನ ವಿಷಯದಲ್ಲಿ ನನ್ನ ವರ್ತನೆ ನನಗೇ ತಕ್ಕುದಾಗಿರಲಿಲ್ಲ. ನನ್ನ ವಿಷಯದಲ್ಲಿ ಅವನ ವರ್ತನೆಯೇ ಅವನಿಗೆ ತಕ್ಕುದಾಗಿತ್ತು.

ದುರ್ವೃತ್ತಮಪಿ ಕಃ ಪುತ್ರಂ ತ್ಯಜೇದ್ಭುವಿ ವಿಚಕ್ಷಣಃ ।
ಕಶ್ಚ ಪ್ರವ್ರಾಜ್ಯಮಾನೋ ವಾ ನಾಸೂಯೇತ್ ಪಿತರಂ ಸುತಃ ॥೬೬॥

ಲೋಕದಲ್ಲಿ ನಡತೆಗೆಟ್ಟ ಮಗನನ್ನು ಕೂಡ ಯಾವ ವಿವೇಕಿ ತಾನೆ ತ್ಯಜಿಸುತ್ತಾನೆ? ತಾನು ಪರಿತ್ಯಕ್ತನಾಗುತ್ತಿರುವಾಗ ಯಾವ ಮಗನು ತಾನೆ ತಂದೆಯನ್ನು ವಿರೋಧಿಸುವುದಿಲ್ಲ?

ಚಕ್ಷುಷಾ ತ್ವಾಂ ನ ಪಶ್ಯಾಮಿ ಸ್ಮೃತಿರ್ಮಮ ವಿಲುಪ್ಯತೇ ।
ದೂತಾ ವೈವಸ್ವತಸ್ಯೈತೇ ಕೌಸಲ್ಯೇ ತ್ವರಯಂತಿ ಮಾಮ್ ॥೬೭॥

ಕೌಸಲ್ಯೆ, ನನಗೆ ಕಣ್ಣಿಂದ ನಿನ್ನನ್ನು ನೋಡಲಾಗುತ್ತಿಲ್ಲ. ನನ್ನ ಸ್ಮರಣಶಕ್ತಿ ಉಡುಗಿ ಹೋಗುತ್ತಿದೆ. ಯಮದೂತರು ನನ್ನನ್ನು ಒಯ್ಯಲು ಅವಸರಪಡುತ್ತಿದ್ದಾರೆ.

ಅತಸ್ತು ಕಿಂ ದುಃಖತರಂ ಯದಹಂ ಜೀವಿತಕ್ಷಯೇ ।
ನ ಹಿ ಪಶ್ಯಾಮಿ ಧರ್ಮಜ್ಞಂ ರಾಮಂ ಸತ್ಯಪರಾಕ್ರಮಮ್ ॥೬೮॥

ನಾನು ಮೃತನಾದರೆ ಸತ್ಯಪರಾಕ್ರಮನಾದ ಧರ್ಮಜ್ಞನಾದ ರಾಮನನ್ನು ನೋಡಲಾರೆ. ಮರಣದಲ್ಲಿ ಇದಕ್ಕಿಂತ ಹೆಚ್ಚಿನ ದುಃಖವೇನಿದೆ?

ತಸ್ಯಾದರ್ಶನಜಃ ಶೋಕಃ ಸುತಸ್ಯಾಪ್ರತಿಕರ್ಮಣಃ ।
ಉಚ್ಛೋಷಯತಿ ಮೇ ಪ್ರಾಣಾನ್ ವಾರಿ ಸ್ತೋಕಮಿವಾತಪಃ ॥೬೯॥

ನನ್ನ ಕೆಟ್ಟ ವರ್ತನೆಗೆ ಪ್ರತಿಕ್ರಿಯಿಸದ ಮಗನನ್ನು ನೋಡಲಾಗದೆ ಇರುವುದರಿಂದ ಅಲ್ಪಜಲವನ್ನು ಬಿಸಿಲು ಇಂಗಿಸುವಂತೆ ನನ್ನ ಪ್ರಾಣಗಳನ್ನು ಶೋಕವು ಹೀರುತ್ತಿದೆ.

ನ ತೇ ಮನುಷ್ಯಾ ದೇವಾಸ್ತೇ ಯೇ ಚಾರುಶುಭಕುಂಡಲಮ್ ।
ಮುಖಂ ದ್ರಕ್ಷ್ಯಂತಿ ರಾಮಸ್ಯ ವರ್ಷೇ ಪಂಚದಶೇ ಪುನಃ ॥೭೦॥

ಹದಿನೈದನೆ ವರ್ಷದಲ್ಲಿ ಸುಂದರ ಶುಭಕರ ಕುಂಡಲಧಾರಿಯಾದ ರಾಮನ ಮುಖವನ್ನು ಪುನಃ ಯಾರು ನೋಡುವರೋ ಅವರು ಮನುಷ್ಯರಲ್ಲ ದೇವತೆಗಳೆ ಸರಿ.

ಪದ್ಮಪತ್ರೇಕ್ಷಣಂ ಸುಭ್ರು ಸುದಂಷ್ಟ್ರಂ ಚಾರುನಾಸಿಕಮ್ ।
ಧನ್ಯಾ ದ್ರಕ್ಷ್ಯಂತಿ ರಾಮಸ್ಯ ತಾರಾಧಿಪನಿಭಂ ಮುಖಿಮ್ ॥೭೧॥

ಕಮಲದಳದಂಥ ಕಣ್ಣುಗಳು ಸುಂದರವಾದ ಹುಬ್ಬು ಸುಂದರವಾದ ದಂತಪಂಕ್ತಿ ಸುಂದರವಾದ ನಾಸಿಕೆಗಳುಳ್ಳ ಚಂದ್ರನಂಥ ರಾಮನ ಮುಖವನ್ನು ನೋಡುವವರೆ ಧನ್ಯರು.

ಸದೃಶಂ ಶಾರದಸ್ಯೇಂದೋಃ ಫುಲ್ಲಸ್ಯ ಕಮಲಸ್ಯ ಚ ।
ಸುಗಂಧಿ ಮಮ ರಾಮಸ್ಯ ಧನ್ಯಾ ದ್ರಕ್ಷ್ಯಂತಿ ತನ್ಮುಖಿಮ್ ॥೭೨॥

ಶರತ್ಕಾಲದ ಚಂದ್ರನಂತೆ ಅರಳಿದ ಕಮಲದಂತೆ ಇರುವ ಸುವಾಸನೆ ಬೀರುವ ರಾಮನೆ ಮುಖವನ್ನು ಕಾಣುವವರೆ ಧನ್ಯರು.

ನಿವೃತ್ತವನವಾಸಂ ತಾಮಯೋಧ್ಯಾಂ ಪುನರಾಗತಮ್ ।
ದ್ರಕ್ಷ್ಯಂತಿ ಸುಖಿನೋ ರಾಮಂ ಶುಕ್ರಂ ಮಾರ್ಗಗತಂ ಯಥಾ ॥೭೩॥

ವನವಾಸವನ್ನು ಮುಗಿಸಿ ಪುನಃ ಅಯೋಧ್ಯೆಗೆ ಬರುವ ರಾಮನನ್ನು ಮೌಢ್ಯಾದಿ-ಗಳನ್ನು ತೊರೆದು ಸ್ವಸ್ಥಾನಕ್ಕೆ ಬಂದ ಶುಕ್ರನಂತೆ ನೋಡುವವರೇ ಸುಖಿಗಳು.

ಕೌಸಲ್ಯೇ ಚಿತ್ತಮೋಹೇನ ಹೃದಯಂ ಸೀದತೀವ ಮೇ ।
ವೇದಯೇ ನ ಚ ಸಂಯುಕ್ತಾನ್ ಶಬ್ದಸ್ಪರ್ಶರಸಾನಹಮ್ ॥೭೪॥

ಕೌಸಲ್ಯೆ, ಚಿತ್ತಮೋಹದಿಂದ ಹೃದಯ ಸೀಳಿಹೋಗುವಂತಿದೆ. ಇಂದ್ರಿಯ ಯುಕ್ತನಾಗಿ ಶಬ್ದಸ್ಪರ್ಶರಸಗಳನ್ನು ಅನುಭವಿಸಲಾಗದವನಾಗಿದ್ದೇನೆ.

ಚಿತ್ತನಾಶಾದ್ವಿಪದ್ಯಂತೇ ಸರ್ವಾಣ್ಯೇವೇಂದ್ರಿಯಾಣಿ ಮೇ ।
ಕ್ಷೀಣಸ್ನೇಹಸ್ಯ ದೀಪಸ್ಯ ಸಂಸಕ್ತಾ ರಶ್ಮಯೋ ಯಥಾ ॥೭೫॥

ಚಿತ್ತನಾಶದಿಂದ ನನ್ನೆಲ್ಲ ಇಂದ್ರಿಯಗಳು ಉಡುಗಿಹೋಗಿವೆ, ಎಣ್ಣೆ ಮುಗಿದಾಗ ದೀಪದ ಪ್ರಭೆಗಳು ಉಡುಗುವಂತೆ.

ಅಯಮಾತ್ಮಭವಃ ಶೋಕೋ ಮಾಮನಾಥಮಚೇತಸಮ್ ।
ಸಂಸಾದಯತಿ ವೇಗೇನ ಯಥಾಕೂಲಂ ನದೀರಯಃ ॥೭೬॥

ನದಿಯ ವೇಗವು ದಡವನ್ನು ವೇಗವಾಗಿ ಕೊರೆಯುವಂತೆ ನನ್ನೊಳಗಿನ ಶೋಕವು ನನ್ನನ್ನು ಅನಾಥನನ್ನಾಗಿ ನಿಶ್ಚೇತನನನ್ನಾಗಿ ಮಾಡಿ ನಾಶಮಾಡುತ್ತಿದೆ.

ಹಾ ರಾಘವ ಮಹಾಬಾಹೋ ಹಾ ಮಮಾಯಾಸನಾಶನ ।
ಹಾ ಪಿತೃಪ್ರಿಯ ಮೇ ನಾಥ ಹಾದ್ಯ ಕ್ವಾಸಿ ಗತಃ ಸುತ ॥೭೭॥

ಹಾ ರಾಮ ಮಹಾಬಾಹು! ಹಾ ನನ್ನ ದುಃಖಪರಿಹಾರಕನೆ, ಹಾ ಪಿತನಿಗೆ ಪ್ರಿಯನಾದ ನನ್ನೊಡೆಯನೆ, ಹಾ ಕಂದ! ಈಗ ನೀನೆಲ್ಲಿರುವೆ?

ಹಾ ಕೌಸಲ್ಯೇ ವಿನಶ್ಯಾಮಿ ಹಾ ಸುಮಿತ್ರೇ ತಪಸ್ವಿನಿ ।
ಹಾ ನೃಶಂಸೇ ಮಮಾಮಿತ್ರೇ ಕೈಕೇಯಿ ಕುಲಪಾಂಸನಿ ॥೭೮॥

ಹಾ ಕೌಸಲ್ಯೆ, ನನ್ನ ಐಹಿಕವ್ಯಾಪಾರ ಮುಗಿದು ಹೋಯಿತು. ಹಾ! ಸುಮಿತ್ರೆ! ತಪಸ್ವಿನಿ! ಹಾ ಕೈಕೇಯಿ, ನನ್ನ ಶತ್ರುವೆ, ನಿರ್ದಯಳೆ, ಕುಲಕಳಂಕಿನಿಯೆ!

ಇತಿ ರಾಮಸ್ಯ ಮಾತುಶ್ಚ ಸುಮಿತ್ರಾಯಾಶ್ಚ ಸಂನಿಧೌ ।
ರಾಜಾ ದಶರಥಃ ಶೋಚನ್ ಜೀವಿತಾಂತಮುಪಾಗಮತ್ ॥೭೯॥

ಹೀಗೆ ರಾಮಮಾತೆ ಕೌಸಲ್ಯೆ ಮತ್ತು ಸುಮಿತ್ರೆಯರ ಬಳಿಯಲ್ಲಿ ರಾಜಾ ದಶರಥನು ಶೋಕಿಸುತ್ತ ಕೊನೆಯುಸಿರನ್ನೆಳೆದನು.

ತಥಾ ತು ದೀನಂ ಕಥಯನ್ನರಾಧಿಪಃ
ಪ್ರಿಯಸ್ಯ ಪುತ್ರಸ್ಯ ವಿವಾಸನಾತುರಃ ।
ಗತೇಽರ್ಧರಾತ್ರೇ ಭೃಶದುಃಖಪೀಡಿತ-
ಸ್ತದಾ ಜಹೌ ಪ್ರಾಣಮುದಾರದರ್ಶನಃ ॥೮೦॥

ಹೀಗೆ ದೀನನಾಗಿ 'ರಾಮ ರಾಮ' ಎನ್ನುತ್ತ ಪ್ರಿಯಪುತ್ರನ ವಿಯೋಗದಿಂದ ಕಳವಳಿಸುತ್ತ ಅತಿ ದುಃಖದಿಂದ ಪೀಡಿತನಾಗಿ ಮಹಾಜ್ಞಾನಿಯಾದ ರಾಜಾ ದಶರಥ ಅರ್ಧರಾತ್ರಿ ಕಳೆದಾಗ ಪ್ರಾಣತ್ಯಾಗ ಮಾಡಿದನು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಅರವತ್ನಾಲ್ಕನೇ ಸರ್ಗ ಮುಗಿಯಿತು.

ಪಂಚಷಷ್ಟಿತಮಃ ಸರ್ಗಃ

ಸರ್ಗ – 65

ರಾಜಪತ್ನಿಯರ ಶೋಕ

ಅಥ ರಾತ್ರ್ಯಾಂ ವ್ಯತೀತಾಯಾಂ ಪ್ರಾತರೇವಾಪರೇऽಹನಿ ।
ವಂದಿನಃ ಪರ್ಯುಪಾತಿಷ್ಠಂಸ್ತತ್ಪಾರ್ಥಿವನಿವೇಶನಮ್ ॥೧॥

ರಾತ್ರಿ ಕಳೆದಾಗ ಮರುದಿನ ಮುಂಜಾನೆ ಸ್ತುತಿಪಾಠಕರು ಅರಮನೆಗೆ ಬಂದರು.

ಸೂತಾಃ ಪರಮಸಂಸ್ಕಾರಾ ಮಾಗಧಾಶ್ಚೋತ್ತಮಶ್ರುತಾಃ ।
ಗಾಯನಾಃ ಸ್ತುತಿಶೀಲಾಶ್ಚ ನಿಗದಂತಃ ಪೃಥಕ್ ಪೃಥಕ್ ॥೨॥

ಸೂತರು ಉತ್ತಮ ವ್ಯಾಕರಣಶುದ್ಧವಾದ ಶಬ್ದಪ್ರಯೋಗದಲ್ಲಿ ನಿಪುಣರು, ಮಾಗಧರು ರಾಜವಂಶ ಚರಿತ್ರೆಗಳನ್ನು ಚೆನ್ನಾಗಿ ಕೇಳಿ ತಿಳಿದವರು, ವಂದಿಗಳು ತಂತಿವಾದ್ಯ ನುಡಿಸುವಲ್ಲಿ ನಿಪುಣರು. ಎಲ್ಲರೂ ಪ್ರತ್ಯೇಕಪ್ರತ್ಯೇಕವಾಗಿ ತಮ್ಮ ತಮ್ಮ ವಿಶಿಷ್ಟ ಶೈಲಿಯಿಂದ ರಾಜನಿಗೆ ಸ್ತುತಿ ಮಾಡಿ ಹಾಡುವವರು ಸುಪ್ರಭಾತವನ್ನು ಹೇಳಿದರು.

ರಾಜಾನಂ ಸ್ತುವತಾಂ ತೇಷಾಮುದಾತ್ತಾಭಿಹಿತಾಶಿಷಾಮ್ ।
ಪ್ರಾಸಾದಾಭೋಗವಿಸ್ತೀರ್ಣಃ ಸ್ತುತಿಶಬ್ದೋ ವ್ಯಜೃಂಭತ ॥೩॥

ಸೂತ ಮಾಗಧ ವಂದಿಗಳು ರಾಜನನ್ನು ಹೊಗಳಿ ಉದಾತ್ತವಾದ ಹಾರೈಕೆಗಳನ್ನು ಹಾಡಿದಾಗ ಅರಮನೆಯಲ್ಲಿ ಆ ಶಬ್ದ ಪ್ರತಿಧ್ವನಿಸಿತು.

ತತಸ್ತು ಸ್ತುವತಾಂ ತೇಷಾಂ ಸೂತಾನಾಂ ಪಾಣಿವಾದಕಾಃ ।
ಅಪದಾನಾನ್ಯುದಾಹೃತ್ಯ ಪಾಣಿವಾದಾನವಾದಯನ್ ॥೪॥

ಸೂತರು ಹೀಗೆ ಹೊಗಳುತ್ತಿದ್ದರೆ ಕೈತಾಳ ನಿಪುಣರು ರಾಜನ ಪೂರ್ವಕರು ಗೈದ ಅದ್ಭುತ ಸಾಧನೆಗಳನ್ನು ಹೇಳಿ ಕೈತಾಳ ಹಾಕಿದರು.

ತೇನ ಶಬ್ದೇನ ವಿಹಗಾಃ ಪ್ರತಿಬುದ್ಧಾ ವಿಸಸ್ವನುಃ ।
ಶಾಖಾಸ್ಥಾಃ ಪಂಜರಸ್ಥಾಶ್ಚ ಯೇ ರಾಜಕುಲಗೋಚರಾಃ ॥೫॥

ಆ ಶಬ್ದದಿಂದ ಅರಮನೆಯಲ್ಲಿ ಪಂಜರದೊಳಗಿದ್ದ ಮತ್ತು ಹೊರಗೆ ಮರಗಳ

ಕೊಂಬೆಗಳಲ್ಲಿದ್ದ ಗಿಳಿ ಮೈನಾ ಮುಂತಾದ ಹಕ್ಕಿಗಳು ಎಲ್ಲವೂ ಎಚ್ಚರಗೊಂಡು ಹಾಡಲು ತೊಡಗಿದುವು.

ವ್ಯಾಹೃತಾಃ ಪುಣ್ಯಶಬ್ದಾಶ್ಚ ವೀಣಾನಾಂ ಚಾಪಿ ನಿಃಸ್ವನಾಃ ।
ಆಶೀರ್ಗೇಯಂ ಚ ಗಾಥಾನಾಂ ಪೂರಯಾಮಾಸ ವೇಶ್ಮ ತತ್ ॥೬॥

ಪುಣ್ಯಶ್ಲೋಕರಾದ ರಾಜರನ್ನು ಹೊಗಳುವ ಶಬ್ದಗಳು ವೀಣಾಧ್ವನಿಗಳು ಸಂಗೀತ-ಗಳು ಆಶೀರ್ವಾದದ ಹಾಡುಗಳು ಇವೆಲ್ಲ ಧ್ವನಿಗಳು ಅರಮನೆಯಲ್ಲಿ ಪೂರ್ತಿ ತುಂಬಿದುವು.

ತತಃ ಶುಚಿಸಮಾಚಾರಾಃ ಪರ್ಯುಪಸ್ಥಾನಕೋವಿದಾಃ ।
ಸ್ತ್ರೀವರ್ಷವರಭೂಯಿಷ್ಠಾ ಉಪತಸ್ಥುರ್ಯಥಾಪುರಮ್ ॥೭॥

ಬಳಿಕ ಶುಚಿರ್ಭೂತರಾದ ಸದಾಚಾರಿಗಳಾದ ಒಳ್ಳೆಯ ತಜ್ಞ ಪರಿಚಾರಕರಾದ ಸ್ತ್ರೀಯರು ಮತ್ತು ಷಂಡ ಸಮೂಹದವರು ಹಿಂದಿನಂತೆಯೇ ಉಪಸ್ಥಿತರಾದರು.

ಹರಿಚಂದನಸಂಪೃಕ್ತಮುದಕಂ ಕಾಂಚನೈರ್ಘಟೈಃ ।
ಆನಿನ್ಯುಃ ಸ್ನಾನಶಿಕ್ಷಾಜ್ಞಾ ಯಥಾಕಾಲಂ ಯಥಾವಿಧಿ ॥೮॥

ಸ್ನಾನ ವಿಧಿ ತಜ್ಞರಾದ ಪರಿಚಾರಕರು ವಿಧ್ಯುಕ್ತವಾಗಿ ಕಾಲಕ್ಕೆ ಸರಿಯಾಗಿ ಬಂಗಾರದ ಬಿಂದಿಗೆಗಳಲ್ಲಿ ಹರಿಚಂದನ ಮಿಶ್ರಿತವಾದ ಉದಕವನ್ನು ತಂದರು.

ಮಂಗಲಾಲಂಭನೀಯಾನಿ ಪ್ರಾಶನೀಯಾನುಪಸ್ಕರಾನ್ ।
ಉಪಾನಿನ್ಯುಸ್ತಥಾಪ್ಯನ್ಯಾಃ ಕುಮಾರೀಬಹುಲಾಃ ಸ್ತ್ರಿಯಃ ॥೯॥

ಮಂಗಲಕ್ಕಾಗಿ ಸ್ಪರ್ಶಿಸಬೇಕಾಗಿರುವ ಕಪಿಲಾ ದರ್ಪಣ ಮುಂತಾದವುಗಳನ್ನೂ ಆಚಮನಕ್ಕೆ ಗಂಗೋದಕಾದಿಗಳನ್ನೂ ಅಲಂಕಾರ ಮಾಡಿಕೊಳ್ಳಲು ದರ್ಪಣ ವಸ್ತ್ರಾಭರಣಾದಿಗಳನ್ನೂ ಹೆಚ್ಚಾಗಿ ಕುಮಾರಿಯರಿದ್ದ ವಾರಾಂಗನೆಯರು ತಂದರು.

ಸರ್ವಲಕ್ಷಣಸಂಪನ್ನಂ ಸರ್ವಂ ವಿಧಿವದರ್ಚಿತಮ್ ।
ಸರ್ವಂ ಸುಗುಣಲಕ್ಷ್ಮೀವತ್ತದ್ಬಭೂವಾಭಿಹಾರಿಕಮ್ ॥೧೦॥

ರಾಜನಿಗೆ ಮುಂಜಾನೆಯಲ್ಲಿ ಮಂಗಲಕ್ಕಾಗಿ ತಂದ ಎಲ್ಲ ವಸ್ತುಗಳೂ ಸರ್ವಲಕ್ಷಣ ಸಂಪನ್ನವಾಗಿದ್ದುವು. ವಿಧ್ಯುಕ್ತವಾಗಿ ಅಲಂಕೃತವಾಗಿದ್ದುವು. ಒಳ್ಳೆಯ ಗುಣ ಸೌಂದರ್ಯಗಳಿಂದ ಯುಕ್ತವಾಗಿದ್ದುವು.

ತತ್ತು ಸೂರ್ಯೋದಯಂ ಯಾವತ್ ಸರ್ವಂ ಪರಿಸಮುತ್ಸುಕಮ್ ।
ತಸ್ಥಾವನುಪಸಂಪ್ರಾಪ್ತಂ ಕಿಂಸ್ವಿದತ್ಯುಪಶಂಕಿತಮ್ ॥೧೧॥

ಅವೆಲ್ಲವೂ ರಾಜದರ್ಶನಕ್ಕಾಗಿ ಕಾದಿದ್ದುವು. ಸೂರ್ಯೋದಯವಾಗುವ-ವರೆಗೂ ರಾಜದರ್ಶನವಾಗದಿದ್ದಾಗ 'ಇದೇನು' ಎಂದು ಎಲ್ಲರೂ ಸಂದೇಹ ಪಟ್ಟರು.

ಅಥ ಯಾಃ ಕೋಸಲೇಂದ್ರಸ್ಯ ಶಯನಂ ಪ್ರತ್ಯನಂತರಾಃ ।
ತಾಃ ಸ್ತ್ರಿಯಸ್ತು ಸಮಾಗಮ್ಯ ಭರ್ತಾರಂ ಪ್ರತ್ಯಬೋಧಯನ್ ॥೧೨॥

ರಾಜಾ ದಶರಥನ ಶಯನಾಗಾರದ ಸಮೀಪದಲ್ಲಿದ್ದ ಸ್ತ್ರೀಯರು ಬಂದು ರಾಜನನ್ನು ಎಚ್ಚರಗೊಳಿಸಲು ಯತ್ನಿಸಿದರು.

ತಥಾಪ್ಯುಚಿತವೃತ್ತಾಸ್ತಾ ವಿನಯೇನ ನಯೇನ ಚ ।
ನ ಹ್ಯಸ್ಯ ಶಯನಂ ಸ್ಪೃಷ್ಟ್ವಾ ಕಿಂಚಿದಿಪ್ಯುಪಲೇಭಿರೇ ॥೧೩॥

ಅವರು ಭಾರ್ಯೆಯರಾದ್ದರಿಂದ ಭಾರ್ಯೆಯರಿಗೆ ಉಚಿತವಾದ ವರ್ತನೆಗಳಿಂದ ನಯವಿನಯಪೂರ್ವಕವಾಗಿ ಶಯನ ಸ್ಥಾನವನ್ನು ಮುಟ್ಟಿಯೂ ಕೂಡ 'ರಾಜನು ಇನ್ನೂ ಶಯನ ಮಾಡುತ್ತಿದ್ದಾನೆ' ಎನ್ನಲು ಶಯನ ಲಕ್ಷಣವೇನನ್ನೂ ಕಾಣದೆ ಹೋದರು.

ತಾಃ ಸ್ತ್ರಿಯಃ ಸ್ವಪ್ನಶೀಲಜ್ಞಾಶ್ಚೇಷ್ಟಾಸಂಚಲನಾದಿಷು ।
ತಾ ವೇಪಥುಪರೀತಾಶ್ಚ ರಾಜ್ಞಃ ಪ್ರಾಣೇಷು ಶಂಕಿತಾಃ ॥೧೪॥

ಆ ಸ್ತ್ರೀಯರು ನಿದ್ದೆಯ ಲಕ್ಷಣಗಳನ್ನು ತಿಳಿದವರು. ಗೊರಕೆ ಹೊಡೆಯುವುದು ಅಂಗಚಲನೆ ಮುಂತಾದ ನಿದ್ರಾವಸ್ಥೆಯ ಯಾವ ಲಕ್ಷಣವನ್ನೂ ಕಾಣದಿದ್ದಾಗ ರಾಜ ಜೀವದಿಂದಿರುವ ಬಗ್ಗೇ ಸಂದೇಹಪಟ್ಟು ಮೈಯೆಲ್ಲ ನಡುಕವನ್ನು ಹೊಂದಿದರು.

ಪ್ರತಿಸ್ರೋತಸ್ಯಣಾಗ್ರಾಣಾಂ ಸದೃಶಂ ಸಂಚಕಂಪಿರೇ ॥೧೫॥

ವಿರುದ್ಧವಾದ ನದೀಪ್ರವಾಹದಲ್ಲಿ ಸಿಲುಕಿದ ಹುಲ್ಲಿನ ತುದಿಗಳಂತೆ ಆ ಸ್ತ್ರೀಯರು ಬಹಳ ಕಂಪಿಸಿದರು.

ಅಥ ಸಂದೇಹಮಾನಾನಾಂ ಸ್ತ್ರೀಣಾಂ ದೃಷ್ಟ್ವಾ ಚ ಪಾರ್ಥಿವಮ್ ।
ಯತ್ತದಾಶಂಕಿತಂ ಪಾಪಂ ತಸ್ಯ ಜಜ್ಞೇ ವಿನಿಶ್ಚಯಃ ॥೧೬॥

ಸ್ತ್ರೀಯರು ಸಂದೇಹಪಡುತ್ತ ರಾಜನ ಮೈಯನ್ನು ಮುಟ್ಟಿನೋಡಿದಾಗ, ಅವರು ಸಂದೇಹಪಟ್ಟಂತೇ, ರಾಜನು ಹಿಂದಿನ ದಿನವೇ ಮರಣ ಹೊಂದಿದ್ದನೆಂಬುದು ನಿಶ್ಚಯವಾಯಿತು.

ಕೌಸಲ್ಯಾ ಚ ಸುಮಿತ್ರಾ ಚ ಪುತ್ರಶೋಕಪರಾಜಿತೇ ।
ಪ್ರಸುಪ್ತೇ ನ ಪ್ರಬುದ್ಧ್ಯೇತೇऽಯಥಾಕಾಲಸಮನ್ವಿತೇ ॥೧೭॥

ಪುತ್ರಶೋಕದಿಂದ ಪರವಶರಾಗಿದ್ದ ಕೌಸಲ್ಯೆ ಮತ್ತು ಸುಮಿತ್ರೆಯರು ರಾತ್ರಿಯೆಲ್ಲ ಎಚ್ಚೆತ್ತಿದ್ದು ಮುಂಜಾನೆ ಅಕಾಲದಲ್ಲಿ ನಿದ್ದೆ ಹೋಗಿದ್ದರಿಂದ ಅವರು ಇನ್ನೂ ಎಚ್ಚೆತ್ತಿರಲಿಲ್ಲ.

ನಿಷ್ಪ್ರಭಾ ಚ ವಿವರ್ಣಾ ಚ ಸನ್ನಾ ಶೋಕೇನ ಸನ್ನತಾ ।
ನ ವ್ಯರಾಜತ ಕೌಸಲ್ಯಾ ತಾರೇವ ತಿಮಿರಾವೃತಾ ॥೧೮॥

ಕೌಸಲ್ಯೆ ಶೋಕದಿಂದ ಕುಗ್ಗಿ ಕೃಶಳಾಗಿ ವಿವರ್ಣಳಾಗಿ ಕಾಂತಿಹೀನಳಾಗಿ ಉತ್ಪಾತ-ಕಾಲದ ಹೊಗೆಯಲ್ಲಿ ಮುಚ್ಚಿಹೋದ ತಾರೆಯಂತೆ ನಿಷ್ಪ್ರಭಳಾಗಿದ್ದಳು.

ಕೌಸಲ್ಯಾನಂತರಂ ರಾಜ್ಞಃ ಸುಮಿತ್ರಾ ತದನಂತರಮ್ ।
ನ ಸ್ಮ ವಿಭ್ರಾಜತೇ ದೇವೀ ಶೋಕಾಶ್ರುಲುಲಿತಾನನಾ ॥೧೯॥

ರಾಜನ ಬಳಿಯಲ್ಲಿ ಕೌಸಲ್ಯೆ, ಕೌಸಲ್ಯೆಯ ಬಳಿಯಲ್ಲಿ ಸುಮಿತ್ರೆ ಮಲಗಿದ್ದಳು. ಶೋಕಾಶ್ರುವಿನಿಂದ ಒದ್ದೆಯಾದ ಮುಖದವಳು ಸುಮಿತ್ರಾದೇವಿಯೂ ಕೂಡ ಕಾಂತಿಯುಕ್ತಳಾಗಿರಲಿಲ್ಲ. ಮೃತನಾದ ರಾಜನಿಗಿಂತ ದೇವಿಯರಲ್ಲಿ ಏನೂ ವಿಶೇಷವೇ ಕಾಣಲಿಲ್ಲ.

ತೇ ಚ ದೃಷ್ಟ್ವಾ ತಥಾ ಸುಪ್ತೇ ಉಭೇ ದೇವ್ಯೌ ಚ ತಂ ನೃಪಮ್ ।
ಸರ್ವಮೇವೋದ್ಗತಪ್ರಾಣಮಂತಃಪುರಮದೃಶ್ಯತ ॥೨೦॥

ಆ ದೇವಿಯರಿಬ್ಬರೂ ಗಾಢನಿದ್ರೆಯಲ್ಲಿ ಮಲಗಿದ್ದನ್ನೂ, ರಾಜನೂ ಹಾಗೆ ಮಲಗಿದ್ದೇ ಪ್ರಾಣತ್ಯಾಗ ಮಾಡಿದ್ದನ್ನೂ ಕಂಡು ಇಡೀ ಅಂತಃಪುರವೇ ನಿರ್ಜೀವ-ವಾದಂತೆ ಕಂಡುಬಂದಿತು.

ತತಃ ಪ್ರಚುಕ್ರುಶುರ್ದೀನಾಃ ಸಸ್ವರಂ ತಾ ವರಾಂಗನಾಃ ।
ಕರೇಣವ ಇವಾರಣ್ಯೇ ಸ್ಥಾನಪ್ರಚ್ಯುತಯೂಥಪಾಃ ॥೨೧॥

ಸಲಗ ಗುಂಪಿನಿಂದ ತಪ್ಪಿಸಿಕೊಂಡಾಗ ಹೆಣ್ಣಾನೆಗಳು ಚೀರಾಡುವಂತೆ ಆ ರಾಜಪತ್ನಿಯರು ದುಃಖದಿಂದ ದೊಡ್ಡಧ್ವನಿಯಿಂದ ಗೋಳಿಟ್ಟರು.

ತಾಸಾಮಾಕ್ರಂದಶಬ್ದೇನ ಸಹಸೋದ್ಗತಚೇತನೇ ।
ಕೌಸಲ್ಯಾ ಚ ಸುಮಿತ್ರಾ ಚ ತ್ಯಕ್ತನಿದ್ರೇ ಬಭೂವತುಃ ॥೨೨॥

ಆ ಗೋಳಾಟದ ಧ್ವನಿಯಿಂದ ಹೊಡೆದೆಬ್ಬಿಸಿದಂತಾದ ಕೌಸಲ್ಯೆ ಸುಮಿತ್ರೆಯರು ನಿದ್ದೆಯಿಂದ ಎಚ್ಚೆತ್ತರು.

ಕೌಸಲ್ಯಾ ಚ ಸುಮಿತ್ರಾ ಚ ದೃಷ್ಟ್ವಾ ಸ್ಪೃಷ್ಟ್ವಾ ಚ ಪಾರ್ಥಿವಮ್ ।
ಹಾ ನಾಥೇತಿ ಪರಿಕ್ರುಶ್ಯ ಪೇತತುರ್ಧರಣೀತಲೇ ॥೨೩॥

ಕೌಸಲ್ಯೆ ಸುಮಿತ್ರೆಯರು ರಾಜನನ್ನು ಮುಟ್ಟಿ ನೋಡಿ 'ಹಾ! ನಾಥ' ಎಂದು ಕೂಗಿ ನೆಲದಲ್ಲಿ ಬಿದ್ದರು.

ಸಾ ಕೋಸಲೇಂದ್ರದುಹಿತಾ ವೇಷ್ಟಮಾನಾ ಮಹೀತಲೇ ।
ನ ಬಭ್ರಾಜ ರಜೋಧ್ವಸ್ತಾ ತಾರೇವ ಗಗನಾಚ್ಚ್ಯುತಾ ॥೨೪॥

ಕೋಸಲರಾಜಕುಮಾರಿ ಕೌಸಲ್ಯೆ ನೆಲದ ಮೇಲೆ ಹೊರಳುತ್ತ ಮೈಯೆಲ್ಲ ದೂಳಿನಿಂದ ಆವೃತಳಾಗಿ ಗಗನದಿಂದ ಉದುರಿಬಿದ್ದ ತಾರೆಯಂತೆ ಕಾಂತಿಹೀನ-ಳಾದಳು.

ಕೌಸಲ್ಯೆ ಕೋಸಲೇಂದ್ರಕುಮಾರಿ. ದಶರಥನೂ ಕೋಸಲೇಂದ್ರ. ಆದರೆ ಕೌಸಲ್ಯೆಯ ತವರು ದಕ್ಷಿಣಕೋಸಲ. ದಶರಥನದು ಉತ್ತರ ಕೋಸಲ ಎಂದಿಟ್ಟು-ಕೊಳ್ಳಬಹುದು.

ನೃಪೇ ಶಾಂತಗುಣೇ ಜಾತೇ ಕೌಸಲ್ಯಾಂ ಪತಿತಾಂ ಭುವಿ ।
ಅಪಶ್ಯಂಸ್ತಾಃ ಸ್ತ್ರಿಯಃ ಸರ್ವಾ ಹತಾಂ ನಾಗವಧೂಮಿವ ॥೨೫॥

ರಾಜನ ಮೈಯ ಶಾಖ ತಣ್ಣಗಾದಾಗ, ಕೌಸಲ್ಯೆಯೂ ಸತ್ತುಬಿದ್ದ ನಾಗಕನ್ನಿಕೆಯಂತೆ ನೆಲದಲ್ಲಿ ಬಿದ್ದಿದ್ದನ್ನು ರಾಜಪತ್ನಿಯರೆಲ್ಲರೂ ನೋಡಿದರು.

ತತಃ ಸರ್ವಾ ನರೇಂದ್ರಸ್ಯ ಕೈಕೇಯೀಪ್ರಮುಖಾಃ ಸ್ತ್ರಿಯಃ ।
ರುದಂತ್ಯಃ ಶೋಕಸಂತಪ್ತಾ ನಿಪೇತುರ್ಗತಚೇತನಾಃ ॥೨೬॥

ಆಗ ಕೈಕೇಯಿ ಮುಂತಾದ ಎಲ್ಲ ರಾಜನ ಅಂತಃಪುರ ಸ್ತ್ರೀಯರು ಬಂದು ಶೋಕ ಸಂತಾಪದಿಂದ ಅಳುತ್ತ ಮೈಮರೆತು ಬಿದ್ದರು.

ತಾಭಿಃ ಸ ಬಲವಾನ್ನಾದಃ ಕ್ರೋಶಂತೀಭಿರನುದ್ರುತಃ ।
ಯೇನ ಸ್ಫೀತಿಂ ಗತೋ ಭೂಯಸ್ತದ್ಗೃಹಂ ಸಮನಾದಯತ್ ॥೨೭॥

ಆ ಸ್ತ್ರೀಯರು ಅಳುತ್ತ, ಮೊದಲೇ ಅಲ್ಲಿ ತುಂಬಿದ್ದ ಬಲವಾದ ಶಬ್ದವನ್ನು ಇನ್ನೂ ಹೆಚ್ಚಾಗುವಂತೆ ಮಾಡಿದರು. ಅದರಿಂದ ಹೆಚ್ಚಾದ ಆ ಶಬ್ದವು ಅರಮನೆಯನ್ನು ಇನ್ನೂ ಹೆಚ್ಚು ಪ್ರತಿಧ್ವನಿಯಿಂದ ತುಂಬಿಸಿತು.

ತತ್ಪರಿತ್ರಸ್ತಸಂಭ್ರಾಂತಂ ಪರ್ಯುತ್ಸುಕಜನಾಕುಲಮ್ ।
ಸರ್ವತಸ್ತುಮುಲಾಕ್ರಂದಂ ಪರಿತಾಪಾರ್ತಬಾಂಧವಮ್ ॥೨೮॥

ಸದ್ಯೋ ನಿಪತಿತಾನಂದಂ ದೀನವಿಕ್ಲವದರ್ಶನಮ್ ।
ಬಭೂವ ನರದೇವಸ್ಯ ಸದ್ಮ ದಿಷ್ಟಾಂತಮೀಯುಷಃ ॥೨೯॥

ಜನರೆಲ್ಲರೂ ವಿಷಯವೇನೆಂದು ತಿಳಿಯಲು ಉತ್ಸುಕರಾಗಿ ಅರಮನೆಗೆ ಧಾವಿಸಿ ಬಂದು ನೆರೆದರು ವಿಷಯವನ್ನು ತಿಳಿದು ಎಲ್ಲರೂ ಭಯ ಕಳವಳಗಳಿಂದ ಎಲ್ಲೆಡೆ ದೊಡ್ಡ ಹಾಹಾಕಾರ ಮಾಡಿದರು. ಬಂಧುಗಳೆಲ್ಲರೂ ಶೋಕಾರ್ತರಾದರು. ಹೀಗೆ ರಾಜಾದಶರಥ ಮರಣ ಹೊಂದಿದಾಗ ಆನಂದವು ಮಾಯವಾಯಿತು. ದುಃಖ ಕಳವಳಗಳೇ ಎಲ್ಲೆಡೆ ಕಂಡುಬಂದುವು.

ಅತೀತಮಾಜ್ಞಾಯ ತು ಪಾರ್ಥಿವರ್ಷಭಂ
ಯಶಸ್ವಿನಂ ಸಂಪರಿವಾರ್ಯ ಪತ್ನಯಃ ।
ಭೃಶಂ ರುದಂತ್ಯಃ ಕರುಣಂ ಸುದುಃಖಿತಾಃ
ಪ್ರಗೃಹ್ಯ ಬಾಹೂ ವ್ಯಲಪನ್ನನಾಥವತ್ ॥೩೦॥

ಯಶಸ್ವಿಯಾದ ಮಹಾರಾಜ ದಶರಥ ದಿವಂಗತನಾದುದನ್ನು ತಿಳಿದು ಪತ್ನಿಯರು ಬಲು ದುಃಖಗೊಂಡು ಸುತ್ತುವರಿದು ಅವನ ಬಾಹುಗಳನ್ನು ಹಿಡಿದು ಕೊಂಡು ಅನಾಥರಂತೆ ಕರುಣಾಜನಕವಾಗಿ ಕಣ್ಣೀರ ಕೋಡಿಯನ್ನು ಹರಿಸುತ್ತ ಗೋಳಾಡಿದರು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಅರವತ್ತೈದನೇ ಸರ್ಗ ಮುಗಿಯಿತು.

ಷಟ್‌ಷಷ್ಟಿತಮಃ ಸರ್ಗಃ

ಸರ್ಗ – 66

ದಶರಥನ ದೇಹವನ್ನು ಎಣ್ಣೆಯ ಕೊಪ್ಪರಿಗೆಯಲ್ಲಿಡುವುದು.

ತಮಗ್ನಿಮಿವ ಸಂಶಾಂತಮಂಬುಹೀನಮಿವಾರ್ಣವಮ್ ।
ಹತಪ್ರಭಮಿವಾದಿತ್ಯಂ ಸ್ವರ್ಗಸ್ಥಂ ಪ್ರೇಕ್ಷ್ಯ ಪಾರ್ಥಿವಮ್ ॥೧॥

ಕೌಸಲ್ಯಾ ಬಾಷ್ಪಪೂರ್ಣಾಕ್ಷೀ ವಿವಿಧಂ ಶೋಕಕರ್ಶಿತಾ ।
ಉಪಗೃಹ್ಯ ಶಿರೋ ರಾಜ್ಞಃ ಕೈಕೇಯೀಂ ಪ್ರತ್ಯಭಾಷತ ॥೨॥

ನಂದಿ ಹೋದ ಬೆಂಕಿಯಂತೆ, ಅಗಸ್ತ್ಯ ಪಾನ ಮಾಡಿದಾಗ ಬರಿದಾದ ಸಮುದ್ರದಂತೆ, ಪ್ರಭೆ ಇಲ್ಲದ ಸೂರ್ಯನಂತೆ ಕಂಡುಬಂದನು. ಸ್ವರ್ಗಸ್ಥನಾದ ದಶರಥ. ಅದನ್ನು ನೋಡಿ ಕೌಸಲ್ಯೆ ಕಣ್ಣುಗಳಲ್ಲಿ ನೀರು ತುಂಬಿಕೊಂಡು ನಾನಾ ಬಗೆಯ ಶೋಕದಿಂದ ಸೊರಗಿ ರಾಜನ ತಲೆಯನ್ನು ತೊಡೆಯ ಮೇಲೆ ಇರಿಸಿಕೊಂಡು ಕೈಕೇಯಿಗೆ ಹೇಳಿದಳು.

ಸಕಾಮಾ ಭವ ಕೈಕೇಯಿ ಭುಂಕ್ಷ್ವ ರಾಜ್ಯಮಕಂಟಕಮ್ ।
ತ್ಯಕ್ತ್ವಾ ರಾಜಾನಮೇಕಾಗ್ರಾ ನೃಶಂಸೇ ದುಷ್ಟಚಾರಿಣೀ ॥೩॥

'ಕ್ರೂರಳು, ದುಷ್ಕರ್ಮ ಮಾಡುವವಳು, ಕೈಕೇಯಿ! ಈಗ ನೀನು ನಿನ್ನಿಷ್ಟಾರ್ಥವನ್ನು ಅನುಭವಿಸು. ರಾಜನನ್ನು ತೊರೆದು ಒಮ್ಮನಸ್ಸಿನಿಂದ ಒಬ್ಬಳೇ ನಿಷ್ಕಂಟಕವಾದ ರಾಜ್ಯ ಸುಖವನ್ನು ಉಣ್ಣು.

ವಿಹಾಯ ಮಾಂ ಗತೋ ರಾಮೋ ಭರ್ತಾ ಚ ಸ್ವರ್ಗತೋ ಮಮ ।
ವಿಪಥೇ ಸಾರ್ಥಹೀನೇವ ನಾಹಂ ಜೀವಿತುಮುತ್ಸಹೇ ॥೪॥

ನನ್ನ ರಾಮ ನನ್ನನ್ನು ಬಿಟ್ಟು ಹೊರಟುಹೋದ. ನನ್ನ ಪತಿ ಸ್ವರ್ಗಸ್ಥನಾದ. ಇನ್ನು ದುರ್ಗಮವಾದ ದಾರಿಯಲ್ಲಿ ಜೊತೆ ಪ್ರಯಾಣಿಕರಿಲ್ಲದವಳಂತೆ ನಾನು ಒಬ್ಬಳೇ ಬದುಕಿರಲಾರೆ.

ಭರ್ತಾರಂ ತಂ ಪರಿತ್ಯಜ್ಯ ಕಾ ಸ್ತ್ರೀ ದೈವತಮಾತ್ಮನಃ ।
ಇಚ್ಛೇಜ್ಜೀವಿತುಮನ್ಯತ್ರ ಕೈಕೇಯ್ಯಾಸ್ಯಕೃತಧರ್ಮಣಃ ॥೫॥

ಧರ್ಮವನ್ನು ತೊರೆದ ಕೈಕೇಯಿ ಹೊರತು ಬೇರೆ ಯಾವ ಸ್ತ್ರೀ ತನಗೆ ದೈವವಾದ ಪತಿಯನ್ನು ತೊರೆದು ಜೀವಿಸಲು ಬಯಸುವಳು?

ನ ಲುಬ್ಧೋ ಬುದ್ಧ್ಯತೇ ದೋಷಾನ್ ಕಿಂಪಾಕಮಿವ ಭಕ್ಷಯನ್ ।
ಕುಬ್ಜಾನಿಮಿತ್ತಂ ಕೈಕೇಯ್ಯಾ ರಾಘವಾಣಾಂ ಕುಲಂ ಹತಮ್ ॥೬॥

ಮನುಷ್ಯನು ವಂಚನೆಗೊಳಗಾಗಿ ಮುತ್ತುಗದ ಹಣ್ಣು ತಿನ್ನುವಾಗ ಅದು ಹೊಟ್ಟೆನೋವಿಗೆ ಕಾರಣವಾಗುತ್ತದೆ ಎನ್ನುವ ದೋಷವನ್ನು ತಿಳಿದಿರುವುದಿಲ್ಲ. ಮಂಥರೆಯ ಮಾತಿನಿಂದ ವಂಚಿತಳಾದ ಕೈಕೇಯಿ ನೀನು ಭರತನಿಗೆ ರಾಜ್ಯ-ಸಿಂಹಾಸನವೆನ್ನುವ ವರ ಪಡೆದು ರಘುಕುಲವನ್ನೇ ನಾಶ ಮಾಡಿರುವೆ.

'ಕಿಂಪಾಕ' ಎಂದರೆ—'ಬೇವಿನ ಹಣ್ಣು' 'ಒಂದು ವಿಷ','ಬೆಳ್ಳುಳ್ಳಿ ಮುಂತಾದುದು' 'ಕಾಕಮರ್ದ ಎಂಬ ವಿಷಫಲ', 'ವಿಷಮಿಶ್ರಿತ ಅನ್ನ', 'ಧತ್ತೂರಾದಿ ಬೀಜ' ಎಂದು ಮುಂತಾಗಿ ವ್ಯಾಖ್ಯಾನಕಾರರು ಒಬ್ಬೊಬ್ಬರೂ ಒಂದೊಂದು ವಿಧವಾಗಿ ಅರ್ಥಮಾಡಿದ್ದಾರೆ. ಹಲಾಯುಧ ಕೋಶದಲ್ಲಿ 'ಕಿಕಂಪಾಕಸ್ತು ಮಹಾಕಾಲಃ' 'ಕಿಂಪಾಕವೆಂದರೆ ಮಹಾಕಾಲ ಎಂಬ ಬಳ್ಳಿ' ಎಂದಿದೆ. ಮೇದಿನೀಕೋಶದಲ್ಲಿ 'ಕಿಂಪಾಕೋ ಮಹಾಕಾಲ ಪಲಾಶಯೋಃ' 'ಕಿಂಪಾಕ ಎಂದರೆ ಮಹಾಕಾಲ ಲತೆ ಮತ್ತು ಪಲಾಶ ವೃಕ್ಷಗಳೆಂ'ದು ಹೇಳಿದೆ. ಶ್ರೀಸತ್ಯಧರ್ಮರು, ಮೇದಿನಿಕೋಶ ಹೇಳುವಂತೆ, ಪಲಾಶವೆಂದರ್ಥ ಯುಕ್ತ ಎನ್ನುತ್ತಾರೆ, ಪಲಾಶ ಭಕ್ಷಣದಿಂದ ಒಡನೆ ಹೊಟ್ಟೆನೋವು ಬರುತ್ತದೆ ಎಂದು ವೈದ್ಯರು ಹೇಳುತ್ತಾರೆ ಎಂದಿದ್ದಾರೆ.

ಅನಿಯೋಗೇ ನಿಯುಕ್ತೇನ ರಾಜ್ಞಾ ರಾಮಂ ವಿವಾಸಿತಮ್ ।
ಸಭಾರ್ಯಂ ಜನಕಃ ಶ್ರುತ್ವಾ ಪರಿತಪ್ಸ್ಯತ್ಯಹಂ ಯಥಾ ॥೭॥

ಮಾಡಬಾರದ ಕಾರ್ಯದಲ್ಲಿ ನಿನ್ನ ಪ್ರೇರಣೆಗೊಳಗಾದ ದಶರಥ ರಾಮನನ್ನು ಸೀತೆಯೊಂದಿಗೆ ಕಾಡಿಗೆ ಕಳಿಸಿದನೆಂದು ಜನಕರಾಜ ಕೇಳಿ ನನ್ನಂತೆಯೆ ಪರಿತಪಿಸುತ್ತಾನೆ.

ಸ ಮಾಮನಾಥಾಂ ವಿಧವಾಂ ನಾದ್ಯ ಜಾನಾತಿ ಧಾರ್ಮಿಕಃ ।
ರಾಮಃ ಕಮಲಪತ್ರಾಕ್ಷೋ ಜೀವನಾಶಮಿತೋ ಗತಃ ॥೮॥

ಧಾರ್ಮಿಕನಾದ ಕಮಲನಯನನಾದ ರಾಮ ಬದುಕಿದ್ದೂ ಕಣ್ಣಿಗೆ ಕಾಣದಂತೆ

ಅಯೋಧ್ಯೆಯಿಂದ ಹೊರಟು ಹೋಗಿದ್ದಾನೆ. ನಾನು ಈಗ ವಿಧವೆ ಅನಾಥೆ ಎಂಬುದನ್ನು ಅವನು ತಿಳಿಯಲಾರ.

ವಿದೇಹರಾಜಸ್ಯ ಸುತಾ ತಥಾ ಸೀತಾ ತಪಸ್ವಿನೀ ।
ದುಃಖಸ್ಯಾನುಚಿತಾ ದುಃಖಂ ವನೇ ಪರ್ಯುದ್ವಿಜಿಷ್ಯತೇ ॥೯॥

ದುಃಖಕ್ಕೆ ತಕ್ಕವಳಲ್ಲವದವಳು ಶೋಚನೀಯಳಾದ ವಿದೇಹರಾಜಸುತೆ ಸೀತೆ. ಕಾಡಿನಲ್ಲಿ ದುಃಖಪಡುತ್ತ ಉದ್ವಿಗ್ನಳಾಗುತ್ತಾಳೆ.

ನದತಾಂ ಭೀಮಘೋಷಾಣಾಂ ನಿಶಾಸು ಮೃಗಪಕ್ಷಿಣಾಮ್ ।
ನಿಶಮ್ಯ ನೂನಂ ಸಂತ್ರಸ್ತಾ ರಾಘವಂ ಸಂಶ್ರಯಿಷ್ಯತಿ ॥೧೦॥

ರಾತ್ರಿಕಾಲಗಳಲ್ಲಿ ಭಯಂಕರ ಶಬ್ದಮಾಡುವ ಮೃಗಪಕ್ಷಿಗಳು ಗರ್ಜನೆ ಮಾಡು-ವಾಗ ಅದನ್ನು ಕೇಳಿ ನಿಶ್ಚಯವಾಗಿ ಭಯಪಟ್ಟು ರಾಮನನ್ನು ತಬ್ಬಿಕೊಳ್ಳುತ್ತಾಳೆ.

ವೃದ್ಧಶ್ಚೈವಾಲ್ಪಪುತ್ರಶ್ಚ ವೈದೇಹೀಮನುಚಿಂತಯನ್ ।
ಸೋಽಪಿ ಶೋಕಸಮಾವಿಷ್ಟೋ ನನು ತ್ಯಕ್ಷ್ಯತಿ ಜೀವಿತಮ್ ॥೧೧॥

ಕೇವಲ ಹೆಣ್ಣುಮಕ್ಕಳಿಗೆ ತಂದೆಯಾಗಿರುವ, ವೃದ್ಧನೂ ಆಗಿರುವ ಜನಕ ರಾಜನು ಸೀತೆಯನ್ನು ನೆನೆಯುತ್ತ ಶೋಕದಲ್ಲಿ ಮುಳುಗಿ ಪ್ರಾಣವನ್ನೇ ಬಿಡುತ್ತಾನೆ.

ಸಾಹಮದ್ಯೈವ ದಿಷ್ಟಾಂತಂ ಗಮಿಷ್ಯಾಮಿ ಪತಿವ್ರತಾ ।
ಇದಂ ಶರೀರಮಾಲಿಂಗ್ಯ ಪ್ರವೇಕ್ಷ್ಯಾಮಿ ಹುತಾಶನಮ್ ॥೧೨॥

ಪತಿವ್ರತೆಯಾದ ನಾನೂ ಕೂಡ ಪತಿಯ ಶರೀರವನ್ನು ಆಲಿಂಗಿಸಿಕೊಂಡು ಚಿತಾಗ್ನಿಯನ್ನು ಪ್ರವೇಶಿಸುತ್ತೇನೆ. ಮರಣವನ್ನು ಹೊಂದುತ್ತೇನೆ.

'ಬ್ರಹ್ಮಚರ್ಯಂ ಅನ್ವಾರೋಹಣಂ ವಾ' ಎಂಬಂತೆ ಕೊನೆವರೆಗೂ ಬ್ರಹ್ಮಚರ್ಯದಿಂದಿರಬೇಕು. ಮತ್ತು,

'ತರ್ಪಣಂ ಪ್ರತ್ಯಹಂ ಕಾರ್ಯಂ ಭರ್ತುಃ ಕುಶತಿಲೋದಕೈಃ ।
ತತ್‌ಪಿತುಸ್ತ್‌ಪಿತುಶ್ಚಾಪಿ ನಾಮಗೋತ್ರಾದಿ ಪೂರ್ವಕಂ ॥''

ಎಂಬಂತೆ ಪ್ರತಿದಿನ, ಪತಿ, ಮಾವ ಮತ್ತು ಅವನ ತಂದೆಗಳಿಗೆ ತಿಲತರ್ಪಣ

ನೀಡಬೇಕು. ಪತ್ಯಂತರ್ಗತ ಹರಿಯನ್ನು ಪೂಜಿಸಬೇಕು. ಅದು ಶಕ್ಯವಿಲ್ಲದಿದ್ದಲ್ಲಿ ಸತಿ ಹೋಗಬಹುದು. ಅದರಿಂದ ರಾಣಿಯರೆಲ್ಲ ಬ್ರಹ್ಮಚರ್ಯದಿಂದ ಇದ್ದರು.

ತಾಂ ತತಃ ಸಂಪರಿಷ್ವಜ್ಯ ವಿಲಪಂತೀಂ ತಪಸ್ವಿನೀಮ್ ।
ವ್ಯಪನಿನ್ಯುಃ ಸುದುಃಖಾರ್ತಾಂ ಕೌಸಲ್ಯಾಂ ವ್ಯಾವಹಾರಿಕಾಃ ॥೧೩॥

ರಾಜನ ಶರೀರವನ್ನು ತಬ್ಬಿಕೊಂಡು ಬಲು ದುಃಖದಿಂದ ಪೀಡಿತಳಾಗಿ ಗೊಳಿಡುತ್ತಿದ್ದ ಶೋಚನೀಯಳಾದ ಕೌಸಲ್ಯೆಯನ್ನು ರಾಜ್ಯದ ವ್ಯವಹಾರಗಳಲ್ಲಿ ನಿಯುಕ್ತರಾದ ಮಂತ್ರಿಗಳು ದೂರ ಕಳಿಸಿದರು.

ತೈಲದ್ರೋಣ್ಯಾಮಥಾಮಾತ್ಯಾಃ ಸಂವೇಶ್ಯ ಜಗತೀಪತಿಮ್ ।
ರಾಜ್ಞಃ ಸರ್ವಾಣ್ಯಥಾದಿಷ್ಟಾಶ್ಚಕ್ರುಃ ಕರ್ಮಾಣ್ಯನಂತರಮ್ ॥೧೪॥

ಬಳಿಕ ಮುಖ್ಯ ಅಮಾತ್ಯರು ವಸಿಷ್ಠರ ಆದೇಶದಂತೆ ರಾಜನ ಪಾರ್ಥಿವ ಶರೀರವನ್ನು ಕೌಸಲ್ಯೆಯ ಭವನದ ಅಗ್ನಿಶಾಲೆಯಲ್ಲಿ ಎಣ್ಣೆಯ ಕೊಪ್ಪರಿಗೆಯಲ್ಲಿ ಜೋಪಾನವಾಗಿಟ್ಟು ಮುಂದಿನ ರಾಜಕಾರ್ಯಗಳನ್ನು ನೆರವೇರಿಸಿದರು.

ನ ತು ಸಂಕಾಲನಂ ರಾಜ್ಞೋ ಏನಾ ಪುತ್ರೇಣ ಮಂತ್ರಿಣಃ ।
ಸರ್ವಜ್ಞಾಃ ಕರ್ತುಮೀಷುಸ್ತೇ ತತೋ ರಕ್ಷಂತಿ ಭೂಮಿಪಮ್ ॥೧೫॥

ಸರ್ವಜ್ಞರಾದ ಮಂತ್ರಿಗಳು ರಾಜನ ಪುತ್ರನೊಬ್ಬನೂ ಇಲ್ಲದೆ ರಾಜನ ಅಂತ್ಯ ಸಂಸ್ಕಾರ ಮಾಡಲು ಇಚ್ಛಿಸಲಿಲ್ಲ. ಅದರಿಂದ ಎಣ್ಣೆಕೊಪ್ಪರಿಗೆಯಲ್ಲಿ ಇಟ್ಟು ಶರೀರ ಹಾಳಾಗದಂತೆ ನೋಡಿಕೊಂಡರು.

ಪುತ್ರನೊಬ್ಬನೂ ಬಾರದೆ ರಾಜನ ಶವಸಂಸ್ಕಾರ ಮಾಡುವುದು ಯುಕ್ತವಲ್ಲ. ಪುತ್ರನಿಗಾಗಿ ಕಾದು ಕುಳಿತರೂ ಶವ ಹಾಳಾಗುವುದರಿಂದ ಅಂತ್ಯೇಷ್ಟಿ ನಡೆಯುವುದಿಲ್ಲ. ಅದಕ್ಕೆ ಪುತ್ರನು ಬರುವವರೆಗೆ ಅದು ಹಾಳಾಗದಂತೆ ಎಣ್ಣೆ ಕೊಪ್ಪರಿಗೆಯಲ್ಲಿ ಇರಿಸಿದರು. ಹೀಗೆ ಸರ್ವಜ್ಞರಾದ್ದರಿಂದ ಅಮಾತ್ಯರು ಧರ್ಮಲೋಪವಾಗದಂತೆ ನೋಡಿಕೊಂಡರು.

ತೈಲದ್ರೋಣ್ಯಾಂ ತು ಸಚಿವೈಃ ಶಾಯಿತಂ ತಂ ನರಾಧಿಪಮ್ ॥
ಹಾ ಮೃತೋಽಯಮಿತಿ ಜ್ಞಾತ್ವಾ ಸ್ತ್ರಿಯಸ್ತಾಃ ಪರ್ಯದೇವಯನ್ ॥೧೬॥

ಹೀಗೆ ರಾಜನನ್ನು ಮಂತ್ರಿಗಳು ಎಣ್ಣೆ ಕೊಪ್ಪರಿಗೆಯಲ್ಲಿ ಮಲಗಿಸಿದಾಗ 'ಹಾ!

ರಾಜನು ನಿಜವಾಗಿ ಸತ್ತು ಹೋದನೆಂ'ದು ತಿಳಿದು ಆ ಅಂತಃಪುರಸ್ತ್ರೀಯರು ಇನ್ನೂ ಹೆಚ್ಚು ಗೋಳಿಡತೊಡಗಿದರು.

ಬಾಹೂನುದ್ಯಮ್ಯ ಕೃಪಣಾ ನೇತ್ರಪ್ರಸ್ರವಣೈರ್ಮುಖೈಃ ।
ರುದಂತ್ಯಃ ಶೋಕಸಂತಪ್ತಾಃ ಕರುಣಂ ಪರ್ಯದೇವಯನ್ ॥೧೭॥

ಅವರು ಕೈಗಳನ್ನೆತ್ತಿ ಮುಖವೆಲ್ಲ ಕಂಬನಿಯಿಂದ ತೊಳೆದು ಶೋಕತಪ್ತರಾಗಿ ಕರುಣಾಜನಕವಾಗಿ ಗೋಳಿಟ್ಟರು.

ಹಾ ಮಹಾರಾಜ ರಾಮೇಣ ಸತತಂ ಪ್ರಿಯವಾದಿನಾ ।
ವಿಹೀನಾಃ ಸತ್ಯಸಂಧೇನ ಕಿಮರ್ಥಂ ವಿಜಹಾಸಿ ನಃ ॥೧೮॥

ಹಾ ಮಹಾರಾಜ! ನಾವು ಮೊದಲೇ ಸತ್ಯಸಂಧನಾದ ಸದಾ ಪ್ರಿಯಭಾಷಿ- ಯಾದ ರಾಮನನ್ನು ಕಳೆದುಕೊಂಡವರು, ನೀನೂ ನಮ್ಮನ್ನೇಕೆ ಬಿಟ್ಟು ಹೋಗುವೆ?

ಕೈಕೇಯ್ಯಾ ದುಷ್ಟಭಾವಾಯಾ ರಾಘವೇಣ ವಿಯೋಜಿತಾಃ ।
ಕಥಂ ಪತಿಘ್ನ್ಯಾ ವತ್ಸ್ಯಾಮಃ ಸಮೀಪೇ ವಿಧವಾ ವಯಮ್ ॥೧೯॥

ದುಷ್ಟಭಾವದವಳಾದ ಕೈಕೇಯಿಂದ ನಾವು ರಾಮನನ್ನು ಅಗಲುವಂತಾ- ಯಿತು. ಇದೀಗ ವಿಧವೆಯರಾಗಿ ಪತಿಯನ್ನು ಕೊಂದ ಕೈಕೇಯಿಯ ಬಳಿಯಲ್ಲಿ ಹೇಗೆ ತಾನೆ ಬಾಳುವೆವು?

ಸ ಹಿ ನಾಥಃ ಸದಾಸ್ಮಾಕಂ ತವ ಚ ಪ್ರಭುರಾತ್ಮವಾನ್ ।
ವನಂ ರಾಮೋ ಗತಃ ಶ್ರೀಮಾನ್ ವಿಹಾಯ ನೃಪತಿಶ್ರಿಯಮ್ ॥೨೦॥

ರಾಮ ನಮಗೆ ಸದಾ ರಕ್ಷಕ. ನಿನಗೂ ಅವನೇ ಸ್ವತಂತ್ರ ಪ್ರಭು. ಗುಣಸಂಪತ್ತುಳ್ಳ ರಾಮನು ರಾಜ್ಯಸಂಪತ್ತನ್ನು ತೊರೆದು ಕಾಡಿಗೆ ಹೋಗಿದ್ದಾನೆ.

ತ್ವಯಾ ತೇನ ಚ ವೀರೇಣ ವಿನಾ ವ್ಯಸನಮೋಹಿತಾಃ ।
ಕಥಂ ವಯಂ ನಿವತ್ಸ್ಯಾಮಃ ಕೈಕೇಯ್ಯಾ ಚ ವಿದೂಷಿತಾಃ ॥೨೧॥

ರಾಜನೆ, ನಾವು ಈಗ ವೀರನಾದ ನಿನ್ನಿಂದಲೂ ರಾಮನಿಂದಲೂ ಅಗಲಿ ದುಃಖ- ಪರವಶರಾಗಿ ಕೈಕೇಯಿಂದಲೂ ರಾಜ್ಯಮದದಿಂದ ತಿರಸ್ಕೃತರಾಗಿ ಅವಳೊಂದಿಗೆ ಹೇಗೆ ತಾನೆ ಬಾಳುವೆವು?

ಯಯಾ ತು ರಾಜಾ ರಾಮಶ್ಚ ಲಕ್ಷ್ಮಣಶ್ಚ ಮಹಾಬಲಃ ।
ಸೀತಯಾ ಸಹ ಸಂತ್ಯಕ್ತಾಃ ಸಾ ಕಮನ್ಯಂ ನ ಹಾಸ್ಯತಿ ॥೨೨॥

ಕೈಕೇಯಿ ಮಹಾಬಲನಾದ ರಾಜನನ್ನೂ ರಾಮನನ್ನೂ ಲಕ್ಷಣನನ್ನೂ ಸೀತೆ ಯೊಂದಿಗೇ ಪರಿತ್ಯಾಗ ಮಾಡಿದಳು. ಇನ್ನು ಯಾರನ್ನು ತಾನೆ ಪರಿತ್ಯಜಿಸಲಾರಳು?

ತಾ ಬಾಷ್ಪೇಣ ಚ ಸಂವೀತಾ ಶೋಕೇನ ವಿಪುಲೇನ ಚ ।
ವ್ಯವೇಷ್ಟಂತ ನಿರಾನಂದಾ ರಾಘವಸ್ಯ ವರಸ್ತ್ರಿಯಃ ॥೨೩॥

ದಶರಥನ ಅಂತಃಪುರ ಸ್ತ್ರೀಯರೆಲ್ಲರೂ ಆನಂದಹೀನರಾಗಿ ಬಹಳ ಶೋಕ-ದಿಂದ ಅತ್ತು ಕಣ್ಣೀರಿನಿಂದ ತೊಯ್ದುಕೊಂಡು ನೆಲದ ಮೇಲೆ ಹೊರಳಾಡಿದರು.

ನಿಶಾ ಚಂದ್ರವಿಹೀನೇವ ಸ್ತ್ರೀವ ಭರ್ತೃವಿವರ್ಜಿತಾ ।
ಪುರೀ ನಾರಾಜತಾಯೋಧ್ಯಾ ವಿನಾ ರಾಜ್ಞಾ ಮಹಾತ್ಮನಾ ॥೨೪॥

ಚಂದ್ರನಿಲ್ಲದ ರಾತ್ರಿಯಂತೆ ಪತಿ ಇಲ್ಲದ ನಾರಿಯಂತೆ ಮಹಾತ್ಮ ದಶರಥನಿಲ್ಲದ ಅಯೋಧ್ಯಾನಗರಿ ಏನೂ ಸೊಗಯಿಸಲಿಲ್ಲ.

ಬಾಷ್ಪಪರ್ಯಾಕುಲಜನಾ ಹಾಹಾಭೂತಕುಲಾಂಗನಾ ।
ಶೂನ್ಯಚತ್ವರವೇಶ್ಮಾಂತಾ ನ ಬಭ್ರಾಜ ಯಥಾಪುರಮ್ ॥೨೫॥

ಜನರು ಬಾಷ್ಪಪೂರಿತರು ಕುಲಸ್ತ್ರೀಯರು ಹಾಹಾಕಾರ ಮಾಡುವರು. ಚೌಕಗಳು ಮನೆಗಳ ಒಳಭಾಗಗಳು ಸಾರಣೆ ರಂಗೋಲಿಗಳಿಲ್ಲದವು. ಹೀಗೆ ಅಯೋಧ್ಯೆಯಲ್ಲಿ ಹಿಂದಿನಂತೆ ಏನೂ ಕಳೆ ಇಲ್ಲದಾಯಿತು.

ಗತೇ ತು ಶೋಕಾತ್ ತ್ರಿದಿವಂ ನರಾಧಿಪೇ
ಮಹೀತಲಸ್ಥಾಸು ನೃಪಾಂಗನಾಸು ಚ ।
ನಿವೃತ್ತಚಾರಃ ಸಹಸಾ ಗತೋ ರವಿಃ
ಪ್ರವೃತ್ತಚಾರಾ ರಜನೀ ಹ್ಯುಪಸ್ಥಿತಾ ॥೨೬॥

ರಾಜಾ ದಶರಥನು ಪುತ್ರಶೋಕದಿಂದ ಸ್ವರ್ಗಸ್ಥನಾದಾಗ ರಾಜಸ್ತ್ರೀಯರು ನೆಲದಲ್ಲಿ ಹೊರಳಾಡಲು ತೊಡಗಿದಾಗ ಒಡನೆ ಸೂರ್ಯನೂ ಸಂಚಾರವನ್ನು ಬಿಟ್ಟು ಹೊರಟುಹೋದ. ರಾತ್ರಿ ತಮಃಪ್ರಸಾರ ಮಾಡುತ್ತ ಬಂದಿತು.

ಋತೇ ತು ಪುತ್ರಾದ್ದಹನಂ ಮಹೀಪತೇ
ನ ರೋಚಯಂತೇ ಸುಹೃದಃ ಸಮಾಗತಾಃ ।
ಇತೀವ ತಸ್ಮಿನ್ ಶಯನೇ ನ್ಯವೇಶಯನ್
ವಿಚಿಂತ್ಯ ರಾಜಾನಮಚಿಂತ್ಯದರ್ಶನಮ್ ॥೨೭॥

ಒಬ್ಬನಾದರೂ ಪುತ್ರನು ಬಾರದೆ ರಾಜನ ಪಾರ್ಥಿವಶರೀರದಹನ ಮಾಡುವುದನ್ನು ನೆರೆದ ಬಂಧುಜನರು ಒಪ್ಪಲಿಲ್ಲ. ಅದಕ್ಕೇ ಆಲೋಚನೆ ಮಾಡಿ ವಸಿಷ್ಠ ಮುಂತಾದ ಅಮಾತ್ಯರು ಅದ್ಭುತರೂಪಉಳ್ಳ ರಾಜಶರೀರವನ್ನು ಎಣ್ಣೆಕೊಪ್ಪರಿಗೆಯಲ್ಲಿಯೇ ಇರಿಸಿದರು.

ಗತಪ್ರಭಾ ದ್ಯೌರಿವ ಭಾಸ್ಕರಂ ವಿನಾ
ವ್ಯಪೇತನಕ್ಷತ್ರಗಣೇವ ಶರ್ವರೀ ।
ಪುರೀ ಬಭಾಸೇ ರಹಿತಾ ಮಹಾತ್ಮನಾ
ನ ಚಾಸ್ರಕಂಠಾಕುಲಮಾರ್ಗಚತ್ವರಾ ॥೨೮॥

ಬಾಷ್ಪದಿಂದ ಗದ್ಗದಗೊಂಡ ಕಂಠದವರಾದ ಜನರಿಂದಲೇ ತುಂಬಿದ ಮಾರ್ಗ ಚೌಕಗಳುಳ್ಳ ಅಯೋಧ್ಯಾನಗರಿ, ಸೂರ್ಯನಿಲ್ಲದೆ ಕಳೆಗೆಟ್ಟ ಆಗಸದಂತೆ, ತಾರೆಗಳಿಲ್ಲದ ರಾತ್ರಿಯಂತೆ, ಮಹಾತ್ಮ ದಶರಥನಿಂದ ರಹಿತವಾಗಿ ಏನೂ ಸೊಗಯಿಸಲಿಲ್ಲ.

ನರಾಶ್ಚ ನಾರ್ಯಶ್ಚ ಸಮೇತ್ಯ ಸಂಘಶೋ
ವಿಗರ್ಹಮಾಣಾ ಭರತಸ್ಯ ಮಾತರಮ್ ।
ತದಾ ನಗರ್ಯಾಂ ನರದೇವಸಂಕ್ಷಯೇ
ಬಭೂವುರಾರ್ತಾ ನ ಚ ಶರ್ಮ ಲೇಭಿರೇ ॥೨೯॥

ರಾಜಾ ದಶರಥನ ಮರಣವಾದಾಗ ಅಯೋಧ್ಯಾನಗರಿಯಲ್ಲಿ ನರನಾರಿಯರು ಗುಂಪುಗುಂಪಾಗಿ ಕೂಡಿ ಭರತನ ಮಾತೆಯನ್ನು ಹಳಿಯುತ್ತ ದುಃಖಾರ್ತರಾದರು. ನೆಮ್ಮದಿ ಹೊಂದಲಿಲ್ಲ.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಅರವತ್ತಾರನೇ ಸರ್ಗ ಮುಗಿಯಿತು.

❖

ಸಪ್ತಷಷ್ಟಿತಮಃ ಸರ್ಗಃ

ಸರ್ಗ – 67

ರಾಜನಿಲ್ಲದ ರಾಷ್ಟ್ರದಲ್ಲಿ ಸಂಭವಿಸುವ ದುರವಸ್ಥೆಯ ವರ್ಣನೆ

ಆಕ್ರಂದಿತನಿರಾನಂದಾ ಸಾಶ್ರುಕಂಠಜನಾಕುಲಾ ।
ಅಯೋಧ್ಯಾಯಾಮವತತಾ ಸಾ ವ್ಯತೀಯಾಯ ಶರ್ವರೀ ॥೧॥

ಆಕ್ರಂದನದಿಂದ ತುಂಬಿದ ಆನಂದಹೀನವಾದ ಬಾಷ್ಪಪೂರಿತಜನರು ಕಷ್ಟದಿಂದ ಅನುಭವಿಸಿದ ರಾತ್ರಿಯು ಅಯೋಧ್ಯೆಯಲ್ಲಿ ಬಹಳ ದೀರ್ಘವಾಗಿ ಕಳೆಯಿತು.

ವ್ಯತೀತಾಯಾಂ ತು ಶರ್ವರ್ಯಾಮಾದಿತ್ಯಸ್ಯೋದಯೇ ತತಃ ।
ಸಮೇತ್ಯ ರಾಜಕರ್ತಾರಃ ಸಭಾಮೀಯುರ್ದ್ವಿಜಾತಯಃ ॥೨॥

ರಾತ್ರಿ ಕಳೆದಾಗ ಸೂರ್ಯನು ಉದಿಸಿದಾಗ ರಾಜಕಾರ್ಯವನ್ನು ನೋಡಿ-ಕೊಳ್ಳುವ ದ್ವಿಜರು ಸಭೆ ಸೇರಿದರು.

ಮಾರ್ಕಂಡೇಯೋಽಥ ಮೌದ್ಗಲ್ಯೋ ವಾಮದೇವಶ್ಚ ಕಾಶ್ಯಪಃ ।
ಕಾತ್ಯಾಯನೋ ಗೌತಮಶ್ಚ ಜಾಬಾಲಿಶ್ಚ ಮಹಾಯಶಾಃ ॥೩॥

ಮಾರ್ಕಂಡೇಯ ಮೌದ್ಗಲ್ಯ ವಾಮದೇವ ಕಶ್ಯಪ ಕಾತ್ಯಾಯನ ಗೌತಮ ಜಾಬಾಲಿ ಈ ದ್ವಿಜರು ಮಹಾಯಶಸ್ವಿಗಳು ರಾಜಕಾರ್ಯನಿರ್ವಾಹ ಮಾಡುವವರು, ಪುರೋಹಿತರು.

ಏತೇ ದ್ವಿಜಾಃ ಸಹಾಮಾತ್ಯೈಃ ಪೃಥಗ್ವಾಚಮುದೈರಯನ್ ।
ವಸಿಷ್ಠಮೇವಾಭಿಮುಖಾಃ ಶ್ರೇಷ್ಠಂ ರಾಜಪುರೋಹಿತಮ್ ॥೪॥

ಈ ದ್ವಿಜರು ಶ್ರೇಷ್ಠ ರಾಜಪುರೋಹಿತನಾದ ವಸಿಷ್ಠನ ಮುಂದೆ ಮಂತ್ರಿಗಳೊಂದಿಗೆ ಸೇರಿ ಪ್ರತ್ಯೇಕಪ್ರತ್ಯೇಕವಾಗಿ ತಮ್ಮ ಅಭಿಪ್ರಾಯಗಳನ್ನು ಮಂಡಿಸಿದರು.

ಅತೀತಾ ಶರ್ವರೀ ದುಃಖಾದ್ಯಾ ನೋ ವರ್ಷಶತೋಪಮಾ ।
ಅಸ್ಮಿನ್ ಪಂಚತ್ವಮಾಪನ್ನೇ ಪುತ್ರಶೋಕೇನ ಪಾರ್ಥಿವೇ ॥೫॥

ಪುತ್ರಶೋಕದಿಂದ ಈ ರಾಜ ದಶರಥನು ಮರಣವನ್ನು ಹೊಂದಿದ ಬಳಿಕ ನಮಗೆ ಈ ಒಂದು ರಾತ್ರಿ ದುಃಖದಿಂದ ನೂರುವರ್ಷಗಳಂತೆ ದೀರ್ಘವಾಗಿ ಕಳೆಯಿತು.

ಸ್ವರ್ಗತಶ್ಚ ಮಹಾರಾಜೋ ರಾಮಶ್ಚಾರಣ್ಯಮಾಶ್ರಿತಃ ।
ಲಕ್ಷ್ಮಣಶ್ಚಾಪಿ ತೇಜಸ್ವೀ ರಾಮೇಣೈವ ಗತಃ ಸಹ ॥೬॥

ಮಹಾರಾಜ ಸ್ವರ್ಗಸ್ಥನಾಗಿದ್ದಾನೆ. ರಾಮ ಕಾಡಿಗೆ ಹೋಗಿದ್ದಾನೆ. ಪರಾಕ್ರಮಿಯಾದ ಲಕ್ಷ್ಮಣನು ರಾಮನೊಂದಿಗೇ ಹೊರಟು ಹೋಗಿದ್ದಾನೆ.

ಉಭೌ ಭರತಶತ್ರುಘ್ನೌ ಕೇಕಯೇಷು ಪರಂತಪೌ ।
ಪುರೇ ರಾಜಗೃಹೇ ರಮ್ಯೇ ಮಾತಾಮಹನಿವೇಶನೇ ॥೭॥

ಶತ್ರುನಾಶಕರಾದ ಭರತ ಶತ್ರುಘ್ನರಿಬ್ಬರೂ ರಾಜಗೃಹನಗರದಲ್ಲಿ ರಮ್ಯವಾದ ತಾತನ ಅರಮನೆಯಲ್ಲಿದ್ದಾರೆ.

ಇಕ್ಷ್ವಾಕೂಣಾಮಿಹಾದ್ಯೈವ ರಾಜಾ ಕಶ್ಚಿದ್ವಿಧೀಯತಾಮ್ ।
ಅರಾಜಕಂ ಹಿ ನೋ ರಾಷ್ಟ್ರಂ ನ ವಿನಾಶಮವಾಪ್ನುಯಾತ್ ॥೮॥

ಈಗಲೆ ಇಕ್ಷ್ವಾಕು ವಂಶದವನೊಬ್ಬನನ್ನು ರಾಜನನ್ನಾಗಿ ಮಾಡೋಣ. ನಮ್ಮ ರಾಷ್ಟ್ರ ಅರಾಜಕವಾಗಿ ನಾಶ ಹೊಂದಬಾರದು.

ನಾರಾಜಕೇ ಜನಪದೇ ವಿದ್ಯುನ್ಮಾಲೀ ಮಹಾಸ್ವನಃ ।
ಅಭಿವರ್ಷತಿ ಪರ್ಜನ್ಯೋ ಮಹೀಂ ದಿವ್ಯೇನ ವಾರಿಣಾ ॥೯॥

ರಾಜ್ಯ ಅರಾಜಕವಾದರೆ ಮಿಂಚಿನಮಾಲೆಯಿಂದ ಮತ್ತು ದೊಡ್ಡ ಗುಡುಗುಗಳಿಂದ ಕೂಡಿದ ಮೋಡವು ದಿವ್ಯಜಲದಿಂದ ನೆಲಕ್ಕೆ ಮಳೆ ಸುರಿಸಲಾರದು.

ನಾರಾಜಕೇ ಜನಪದೇ ಬೀಜಮುಷ್ಟಿಃ ಪ್ರಕೀರ್ಯತೇ ।
ನಾರಾಜಕೇ ಪಿತುಃ ಪುತ್ರೋ ಭಾರ್ಯಾ ವಾ ವರ್ತತೇ ವಶೇ ॥೧೦॥

ರಾಜ್ಯ ಅರಾಜಕವಾದರೆ ಮುಷ್ಟಿಬೀಜಗಳ ಬಿತ್ತನೆಯಾಗದು. ರಾಜ್ಯ ಅರಾಜಕವಾದರೆ ಪಿತನಿಗೆ ಪುತ್ರನಾಗಲಿ ಭಾರ್ಯೆಯಾಗಲಿ ವಿಧೇಯಳಾಗಳು.

ನಾರಾಜಕೇ ಧನಂ ನಾಸ್ತಿ ನಾಸ್ತಿ ಭಾರ್ಯಾಪ್ಯರಾಜಕೇ ।
ಇದಮತ್ಯಾಹಿತಂ ಚಾನ್ಯತ್ ಕುತಃ ಸತ್ಯಮರಾಜಕೇ ॥೧೧॥

ರಾಜ್ಯ ಅರಾಜಕವಾದರೆ ಪ್ರಜೆಗಳಿಗೆ ಧನ ಉಳಿಯುವುದಿಲ್ಲ. ರಾಜ್ಯ ಅರಾಜಕವಾದರೆ ಪುರುಷರಿಗೆ ಭಾರ್ಯೆಯರೂ ಉಳಿಯುವುದಿಲ್ಲ. ಇನ್ನು ಬೇರೇನು ಉಳಿಯುವುದು ಎಲ್ಲವೂ ಕಳ್ಳರ ದರೋಡೆಕೋರರ ವಶವಾಗುವುದು.

ನಾರಾಜಕೇ ಜನಪದೇ ಪ್ರವಿಶಂತಿ ಸಭಾಂ ನರಾಃ ।
ಉದ್ಯಾನಾನಿ ಚ ರಮ್ಯಾಣಿ ಹೃಷ್ಟಾಃ ಪುಣ್ಯಗೃಹಾಣಿ ಚ ॥೧೨॥

ರಾಜ್ಯ ಅರಾಜಕವಾದರೆ ಪ್ರಜೆಗಳು ಉತ್ಸಾಹಭರಿತರಾಗಿ ಸಭೆಯನ್ನೂ ರಮ್ಯ ಉದ್ಯಾನ ಪುಣ್ಯಗೃಹಗಳನ್ನೂ ಪ್ರವೇಶಿಸಲಾರರು.

ನಾರಾಜಕೇ ಜನಪದೇ ಯಜ್ಞಶೀಲಾ ದ್ವಿಜಾತಯಃ ।
ಸತ್ರಾಣ್ಯನ್ವಾಸತೇ ದಾಂತಾ ಬ್ರಾಹ್ಮಣಾಃ ಸಂಶಿತವ್ರತಾಃ ॥೧೩॥

ರಾಜ್ಯ ಅರಾಜಕವಾದರೆ ವ್ರತನಿಷ್ಠರಾದ ಇಂದ್ರಿಯ ನಿಗ್ರಹವುಳ್ಳ ಯಜ್ಞಶೀಲ-ರಾದ ದ್ವಿಜರು ಬ್ರಾಹ್ಮಣರು ಸತ್ರಯಾಗಗಳನ್ನು ನಡೆಸಲಾರರು.

ನಾರಾಜಕೇ ಜನಪದೇ ಮಹಾಯಜ್ಞೇಷು ಯಜ್ವನಃ ।
ಬ್ರಾಹ್ಮಣಾ ವಸುಸಂಪನ್ನಾ ವಿಸೃಜಂತ್ಯಾಪ್ತದಕ್ಷಿಣಾಃ ॥೧೪॥

ರಾಜ್ಯ ಅರಾಜಕವಾದರೆ ಬ್ರಾಹ್ಮಣರು ಯಜ್ಞಶೀಲರಾಗಿ ಧನವಂತರಾಗಿ ಮಹಾಯಜ್ಞಗಳಲ್ಲಿ ಋತ್ವಿಜರಿಗೆ ಸರಿಯಾದ ದಕ್ಷಿಣೆ ನೀಡಲಾರರು.

ನಾರಾಜಕೇ ಜನಪದೇ ಪ್ರಹೃಷ್ಟನಟನರ್ತಕಾಃ ।
ಉತ್ಸವಾಶ್ಚ ಸಮಾಜಾಶ್ಚ ವರ್ಧಂತೇ ರಾಷ್ಟ್ರವರ್ಧನಾಃ ॥೧೫॥

ರಾಜ್ಯ ಅರಾಜಕವಾದರೆ ರಾಷ್ಟ್ರದ ಸುಖವನ್ನು ಹೆಚ್ಚಿಸುವ ಉತ್ಸಾಹಿ ನಟ ನರ್ತಕರಿಂದ ಕೂಡಿದ ದೇವೋತ್ಸವ ಸಮಾಜೋತ್ಸವಗಳು ಹೆಚ್ಚು ನಡೆಯಲಾರವು.

ನಾರಾಜಕೇ ಜನಪದೇ ಸಿದ್ಧಾರ್ಥ ವ್ಯವಹಾರಿಣಃ ।
ಕಥಾಭಿರನುರಜ್ಯಂತೇ ಕಥಾಶೀಲಾಃ ಕಥಾಪ್ರಿಯೈಃ ॥೧೬॥

ರಾಜ್ಯ ಅರಾಜಕವಾದರೆ ನೊಂದವರು ನ್ಯಾಯಾಲಯದ ವ್ಯವಹಾರಗಳಲ್ಲಿ ಹೋರಾಡಿ ಜಯ ಸಂಪಾದಿಸಲಾರರು. ಪುರಾಣ ಹೇಳುವವರು ಶ್ರೋತೃಗಳನ್ನು ಕಥೆಗಳಿಂದ ರಂಜಿಸಲಾರರು.

ನಾರಾಜಕೇ ಜನಪದೇ ಉದ್ಯಾನಾನಿ ಸಮಾಗತಾಃ ।
ಸಾಯಾಹ್ನೇ ಕ್ರೀಡಿತುಂ ಯಾಂತಿ ಕುಮಾರ್ಯೋ ಹೇಮಭೂಷಿತಾಃ ॥

ರಾಜ್ಯ ಅರಾಜಕವಾದರೆ ಬಂಗಾರದಿಂದ ಅಲಂಕರಿಸಿಕೊಂಡು ಕುಮಾರಿಯರು ಸಂಜೆ ಹೊತ್ತಿನಲ್ಲಿ ಉದ್ಯಾನದಲ್ಲಿ ಸೇರಿ ವಿಹರಿಸಲೆಂದು ಹೋಗಲಾರರು.

ನಾರಾಜಕೇ ಜನಪದೇ ವಾಹನೈಃ ಶೀಘ್ರಗಾಮಿಭಿಃ ।
ನರಾ ನಿರ್ಯಾಂತ್ಯರಣ್ಯಾನಿ ನಾರೀಭಿಃ ಸಹ ಕಾಮಿನಃ ॥೧೮॥

ರಾಜ್ಯ ಅರಾಜಕವಾದರೆ ಪ್ರಿಯಕರರು ಪ್ರೇಯಸಿಯರೊಂದಿಗೆ ವಿಹಾರಕ್ಕಾಗಿ ಶೀಘ್ರಗಾಮಿಯಾದ ವಾಹನಗಳಿಂದ ವನಪ್ರದೇಶಗಳಿಗೆ ಹೋಗಲಾರರು.

ನಾರಾಜಕೇ ಜನಪದೇ ಧನವಂತಃ ಸುರಕ್ಷಿತಾಃ ।
ಶೇರತೇ ವಿವೃತದ್ವಾರಾಃ ಕೃಷಿಗೋರಕ್ಷಜೀವಿನಃ ॥೧೯॥

ರಾಜ್ಯ ಅರಾಜಕವಾದರೆ ಕೃಷಿ ಪಶುಪಾಲನಗಳಿಂದ ಬದುಕುವ ಧನಿಕರು ಮನೆ ಬಾಗಿಲು ತೆರೆದಿಟ್ಟು ಸುರಕ್ಷಿತವಾಗಿ ಮಲಗಲಾರರು.

ನಾರಾಜಕೇ ಜನಪದೇ ಬದ್ಧಘಂಟಾ ವಿಷಾಣಿನಃ ।
ಅಟಂತಿ ರಾಜಮಾರ್ಗೇಷು ಕುಂಜರಾಃ ಷಷ್ಟಿಹಾಯನಾಃ ॥೨೦॥

ರಾಜ್ಯ ಅರಾಜಕವಾದರೆ ಒಳ್ಳೆಯ ದಂತ ಉಳ್ಳ ಕೊರಳಲ್ಲಿ ಘಂಟೆ ಕಟ್ಟಿರುವ ಅರವತ್ತು ವರ್ಷ ವಯಸಿನ ಆನೆಗಳು ರಾಜಮಾರ್ಗಗಳಲ್ಲಿ ಸಂಚರಿಸುವುದಿಲ್ಲ.

ನಾರಾಜಕೇ ಜನಪದೇ ಶರಾನ್ ಸಂತತಮಸ್ಯತಾಮ್ ।
ಶ್ರೂಯತೇ ತಲನಿಘ್ನೋಷ ಇಷ್ವಸ್ತ್ರಾಣಾಮುಪಾಸನೇ ॥೨೧॥

ರಾಜ್ಯ ಅರಾಜಕವಾದರೆ ಧನುರ್ವಿದ್ಯಾಭ್ಯಾಸದಲ್ಲಿ ಸತತವಾಗಿ ಬಾಣಗಳನ್ನು ಎಸೆಯುವಾಗ ಹೆದೆಯನ್ನು ಸೆಳೆದು ಟಂಕಾರಮಾಡುವುದು ಕೇಳಿಬರಲಾರದು.

ನಾರಾಜಕೇ ಜನಪದೇ ವಣಿಜೋ ದೂರಗಾಮಿನಃ ।
ಗಚ್ಛಂತಿ ಕ್ಷೇಮಮಧ್ವಾನಂ ಬಹುಪಣ್ಯಸಮಾಚಿತಾಃ ॥೨೨॥

ರಾಜ್ಯ ಅರಾಜಕವಾದರೆ ದೂರದೇಶಕ್ಕೆ ಹೋಗಿ ವ್ಯಾಪಾರ ಮಾಡುವ ವರ್ತಕರು ಬಹಳ ಸರಕುಗಳನ್ನು ತುಂಬಿಕೊಂಡು ಕ್ಷೇಮದಿಂದ ದಾರಿಯಲ್ಲಿ ಪ್ರಯಾಣ ಮಾಡಲಾರರು.

ನಾರಾಜಕೇ ಜನಪದೇ ಚರತ್ಯೇಕತರೋ ವಶೀ ।
ಭಾವಯನ್ನಾತ್ಮನಾತ್ಮಾನಾಂ ಯತ್ರ ಸಾಯಂಗೃಹೋ ಮುನಿಃ ॥೨೩॥

ರಾಜ್ಯ ಅರಾಜಕವಾದರೆ, ಇಂದ್ರಿಯ ನಿಗ್ರಹ ಮಾಡಿಕೊಂಡು ಏಕಾಕಿಯಾಗಿ ಸದಾ ಸಂಚರಿಸುತ್ತ ಸಂಜೆಯಾದಲ್ಲೇ ರಾತ್ರಿ ಕಳೆವ ಯತಿಯು ಆ ರಾಜ್ಯದಲ್ಲಿ ಸಂಚರಿಸಲಾರ.

ನಾರಾಜಕೇ ಜನಪದೇ ಯೋಗಕ್ಷೇಮಃ ಪ್ರವರ್ತತೇ ।
ನ ಚಾಪ್ಯರಾಜಕೇ ಸೇನಾ ಶತ್ರೂನ್ ವಿಷಹತೇ ಯುಧಿ ॥೨೪॥

ರಾಜ್ಯ ಅರಾಜಕವಾದರೆ ಪ್ರಜೆಗಳಿಗೆ ದ್ರವ್ಯಪ್ರಾಪ್ತಿ ಮತ್ತು ಪ್ರಾಪ್ತ ದ್ರವ್ಯರಕ್ಷಣೆ–ಗಳು ನಡೆಯಲಾರವು. ರಾಜ್ಯ ಅರಾಜಕವಾದರೆ ಸೈನ್ಯವು ರಣದಲ್ಲಿ ಶತ್ರುಗಳನ್ನು ಇದಿರಿಸಲಾರದು.

ನಾರಾಜಕೇ ಜನಪದೇ ಹೃಷ್ಟೈಃ ಪರಮವಾಜಿಭಿಃ ।
ನರಾಃ ಸಂಯಾಂತಿ ಸಹಸಾ ರಥೈಶ್ಚ ಪರಿಮಂಡಿತಾಃ ॥೨೫॥

ರಾಜ್ಯ ಅರಾಜಕವಾದರೆ ಜನರು ಅಲಂಕೃತರಾಗಿ ಉತ್ಸಾಹ ತುಂಬಿದ ಶ್ರೇಷ್ಠ ಕುದುರೆಗಳಿಂದ ಮತ್ತು ರಥಗಳಿಂದ ವೇಗವಾಗಿ ಪ್ರಯಾಣ ಮಾಡಲಾರರು.

ನಾರಾಜಕೇ ಜನಪದೇ ನರಾಃ ಶಾಸ್ತ್ರವಿಶಾರದಾಃ ।
ಸಂವದಂತೋऽವತಿಷ್ಠಂತೇ ವನೇಷೂಪವನೇಷು ಚ ॥೨೬॥

ರಾಜ್ಯ ಅರಾಜಕವಾದರೆ ಶಾಸ್ತ್ರಗಳಲ್ಲಿ ತಜ್ಞರಾದ ಜನರು ಅರಣ್ಯಗಳಲ್ಲಿಯೂ ನಗರಗಳಲ್ಲಿಯೂ ವಿದ್ವದ್‌ಗೋಷ್ಠಿಗಳನ್ನು ನಡೆಸಲಾರರು.

ನಾರಾಜಕೇ ಜನಪದೇ ಮಾಲ್ಯಮೋದಕದಕ್ಷಿಣಾಃ ।
ದೇವತಾಭ್ಯರ್ಚನಾರ್ಥಾಯ ಕಲ್ಪ್ಯಂತೇ ನಿಯತೈರ್ಜನೈಃ ॥೨೭॥

ರಾಜ್ಯ ಅರಾಜಕವಾದರೆ ದೇವತಾರ್ಚನೆಗಾಗಿ ಮಾಲೆ ಮೋದಕ ದಕ್ಷಿಣೆಗಳನ್ನು ನಿಯಮಪರರಾದ ಜನರು ಸಿದ್ಧಪಡಿಸಿಕೊಡಲಾರರು.

ನಾರಾಜಕೇ ಜನಪದೇ ಚಂದನಾಗರುರೂಷಿತಾಃ ।
ರಾಜಪುತ್ರಾ ವಿರಾಜಂತೇ ವಸಂತ ಇವ ಶಾಖಿನಃ ॥೨೮॥

ರಾಜ್ಯ ಅರಾಜಕವಾದರೆ ವಸಂತದಲ್ಲಿ ವೃಕ್ಷಗಳಂತೆ ರಾಜ್ಯದಲ್ಲಿ ಚಂದನ ಅಗರು ಸುಗಂಧ ದ್ರವ್ಯ ಭೂಷಿತರಾದ ರಾಜಕುಮಾರರು ಕಂಗೊಳಿಸುವುದಿಲ್ಲ.

ಯಥಾಹ್ಯನುದಕಾ ನದ್ಯೋ ಯಥಾ ವಾಪ್ಯತೃಣಂ ವನಮ್ ।
ಅಗೋಪಾಲಾ ಯಥಾ ಗಾವಸ್ತಥಾ ರಾಷ್ಟ್ರಮರಾಜಕಮ್ ॥೨೯॥

ರಾಷ್ಟ್ರ ಅರಾಜಕವಾದರೆ ನೀರಿಲ್ಲದ ನದಿಯಂತೆ, ಹುಲ್ಲುಗಾವಲು ಇಲ್ಲದ ಅರಣ್ಯದಂತೆ, ಗೋವಳರಿಲ್ಲದ ಗೋವುಗಳಂತೇ ಶೋಭಿಸುವುದಿಲ್ಲ.

ಧ್ವಜೋ ರಥಸ್ಯ ಪ್ರಜ್ಞಾನಂ ಧೂಮೋ ಜ್ಞಾನಂ ವಿಭಾವಸೋಃ ।
ತೇಷಾಂ ಯೋ ನೋ ಧ್ವಜೋ ರಾಜಾ ಸ ದೇವತ್ವಮಿತೋ ಗತಃ ॥೩೦॥

ಧ್ವಜವು ರಥದ ಚಿಹ್ನೆ. ಹೊಗೆ ಬೆಂಕಿಯ ಚಿಹ್ನೆ. ಪ್ರಜೆಗಳಾದ ನಮಗೆ ಚಿಹ್ನೆ-ಯಾಗಿರುವ ರಾಜನು ಈಗ ಸ್ವರ್ಗಸ್ಥನಾಗಿದ್ದಾನೆ.

ನಾರಾಜಕೇ ಜನಪದೇ ಸ್ವಕಂ ಭವತಿ ಕಸ್ಯಚಿತ್ ।
ಮತ್ಸ್ಯಾ ಇವ ನರಾ ನಿತ್ಯಂ ಭಕ್ಷಯಂತಿ ಪರಸ್ಪರಮ್ ॥೩೧॥

ರಾಜ್ಯ ಅರಾಜಕವಾದರೆ ಈ ವಸ್ತು ಮಾತ್ರ ನನ್ನದೆನ್ನುವ ಭಾವನೆ ಯಾರಿಗೂ ಇರುವುದಿಲ್ಲ. ದೊಡ್ಡ ಮೀನು ಸಣ್ಣಮೀನನ್ನು ನುಂಗುವಂತೆ ಮನುಷ್ಯರು ಪರಸ್ಪರ-ವಾಗಿ ಪ್ರಬಲರು ದುರ್ಬಲರನ್ನು ನುಂಗುತ್ತಾರೆ.

ಯೇ ಹಿ ಸಂಭಿನ್ನಮರ್ಯಾದಾ ನಾಸ್ತಿಕಾಶ್ಚಿನ್ನಸಂಶಯಾಃ ।
ತೇಽಪಿ ಭಾವಾಯ ಕಲ್ಪಂತೇ ರಾಜದಂಡನಿಪೀಡಿತಾಃ ॥೩೨॥

ಎಲ್ಲ ನಿಯಮಗಳನ್ನು ತೂರಿದ ನಾಸ್ತಿಕರೂ ಕೂಡ ರಾಜರ ದಂಡನೆಗಳಿಂದ ಪೀಡಿತರಾದರೆ ಕೃತ್ಯಾಕೃತ್ಯ ಸಂಶಯ ಶೂನ್ಯರಾಗಿ ಪ್ರಜೆಗಳ ಸುಖಕ್ಕೇ ಕಾರಣ-ರಾಗುತ್ತಾರೆ.

ಯಥಾ ದೃಷ್ಟಿಃ ಶರೀರಸ್ಯ ನಿತ್ಯಮೇವ ಪ್ರವರ್ತತೇ ।
ತಥಾ ನರೇಂದ್ರೋ ರಾಷ್ಟ್ರಸ್ಯ ಪ್ರಭವಃ ಸತ್ಯಧರ್ಮಯೋಃ ॥೩೩॥

ಕಣ್ಣು ಹೇಗೆ ಶರೀರದ ಹಿತಕ್ಕಾಗಿ ಸದಾ ಪ್ರವೃತ್ತಿ ಮಾಡುವುದೋ ಹಾಗೆ ರಾಜನು ರಾಷ್ಟ್ರದ ಸತ್ಯಧರ್ಮಗಳ ಉಳಿವಿಗಾಗಿ ಪ್ರವೃತ್ತಿ ಮಾಡುತ್ತಾನೆ.

ರಾಜಾ ಸತ್ಯಂ ಚ ಧರ್ಮಶ್ಚ ರಾಜಾ ಕುಲವತಾಂ ಕುಲಮ್ ।
ರಾಜಾ ಮಾತಾ ಪಿತಾ ಚೈವ ರಾಜಾ ಹಿತಕರೋ ನೃಣಾಮ್ ॥೩೪॥

ರಾಜನು ಸತ್ಯಧರ್ಮಗಳಿಗೆ ಪ್ರವರ್ತಕ. ರಾಜನು ಕುಲೀನರ ಕುಲರಕ್ಷಕ. ರಾಜನು ಪ್ರಜೆಗಳಿಗೆ ತಾಯಿಯೂ ತಂದೆಯೂ ಆಗುತ್ತಾನೆ. ರಾಜನು ಪ್ರಜೆಗಳಿಗೆ ಹಿತಕಾರಿ-ಯಾಗುತ್ತಾನೆ.

ಯಮೋ ವೈಶ್ರವಣಃ ಶಕ್ರೋ ವರುಣಶ್ಚ ಮಹಾಬಲಃ ।
ವಿಶಿಷ್ಯತೇ ನರೇಂದ್ರೇಣ ವೃತ್ತೇನ ಮಹತಾ ತತಃ ॥೩೫॥

ರಾಜನು ಇದ್ದರೆ ಅವನು ತನ್ನ ಉತ್ತಮವಾದ ನಡತೆಯಿಂದ ಲೋಕಪಾಲನೆ ಯಲ್ಲಿ ಮಹಾಬಲಿಷ್ಠರಾದ ಯಮ ಕುಬೇರ ಇಂದ್ರ ವರುಣರನ್ನು ಮೀರಿಸುತ್ತಾನೆ.

ಅಹೋ ತಮ ಇವೇದಂ ಸ್ಯಾನ್ನ ಪ್ರಜ್ಞಾಯೇತ ಕಿಂಚನ ।
ರಾಜಾ ಚೇನ್ನ ಭವೇಲ್ಲೋಕೇ ವಿಭಜನ್ ಸಾಧ್ವಸಾಧುನೀ ॥೩೬॥

ಒಳ್ಳೆಯದು ಕೆಟ್ಟದ್ದನ್ನು ವಿವೇಚಿಸಬಲ್ಲ ಒಬ್ಬ ರಾಜನು ಲೋಕದಲ್ಲಿಲ್ಲದೇ ಹೋದರೆ, ಅಯ್ಯೋ! ಈ ಎಲ್ಲವೂ ಅಂಧಕಾರಮಯವಾದೀತು, ಏನೂ ತಿಳಿಯದೇ ಹೋದೀತು.

ಜೀವತ್ಯಪಿ ಮಹಾರಾಜೇ ತವೈವ ವಚನಂ ವಯಮ್ ।
ನಾತಿಕ್ರಮಾಮಹೇ ಸರ್ವೇ ವೇಲಾಂ ಪ್ರಾಪ್ಯೇವ ಸಾಗರಃ ॥೩೭॥

ಗುರುವಸಿಷ್ಠರೆ, ಮಹಾರಾಜರು ಬದುಕಿದ್ದಾಗಲೂ ಕೂಡ ಸಾಗರವು ತೀರವನ್ನು ಹೇಗೋ ಹಾಗೆ ನಾವೂ ಯಾರೂ ಕೂಡ ನಿಮ್ಮ ಮಾತನ್ನು ಮೀರುತ್ತಿರಲಿಲ್ಲ.

ಸ ನಃ ಸಮೀಕ್ಷ್ಯ ದ್ವಿಜವರ್ಯ ವೃತ್ತಂ
ನೃಪಂ ವಿನಾ ರಾಜ್ಯಮರಣ್ಯಭೂತಮ್ ।
ಕುಮಾರಮಿಕ್ಷ್ವಾಕುಸುತಂ ವರೇಣ್ಯಂ
ತ್ವಮೇವ ರಾಜಾನಮಿಹಾಭಿಷಿಂಚ ॥೩೮॥

ದ್ವಿಜೋತ್ತಮ ವಸಿಷ್ಠರೆ, ರಾಜನಿಲ್ಲದಿದ್ದರೆ ರಾಜ್ಯ ಅರಣ್ಯದಂತಾಗುತ್ತದೆ. ನಮ್ಮ ಪರಿಸ್ಥಿತಿಯನ್ನು ನೀವು ನೋಡಿ ಇಕ್ಷ್ವಾಕುವಂಶಕ್ಕೆ ಸೇರಿದ ಶ್ರೇಷ್ಠನಾದ ಕುಮಾರನನ್ನು ರಾಜ್ಯದಲ್ಲಿ ಅಭಿಷೇಕಮಾಡಿರಿ.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಅರವತ್ತೇಳನೇ ಸರ್ಗ ಮುಗಿಯಿತು.

ಅಷ್ಟಷಷ್ಟಿತಮಃ ಸರ್ಗಃ

ಸರ್ಗ – 68

ಭರತನನ್ನು ಕರೆತರಲು ವಸಿಷ್ಠರು ದೂತರನ್ನು ಕಳಿಸುವುದು.

ತೇಷಾಂ ತದ್ವಚನಂ ಶ್ರುತ್ವಾ ವಸಿಷ್ಠಃ ಪ್ರತ್ಯುವಾಚ ಹ ।
ಮಿತ್ರಾಮಾತ್ಯಗಣಾನ್ ಸರ್ವಾನ್ ಬ್ರಾಹ್ಮಣಾಂಸ್ತಾನಿದಂ ವಚಃ ॥೧॥

ಸುಮಂತ್ರ ಮುಂತಾದ ಮಂತ್ರಿಗಳ ಮತ್ತು ಮಾರ್ಕಂಡೇಯ ಮುಂತಾದ ಬ್ರಾಹ್ಮಣರ ಮಾತುಗಳನ್ನು ಕೇಳಿ ವಸಿಷ್ಠರು ಮಿತ್ರ ಅಮಾತ್ಯರನ್ನು ಬ್ರಾಹ್ಮಣರನ್ನು ಎಲ್ಲರನ್ನೂ ಕುರಿತು ಹೇಳಿದರು.

ಯದಸೌ ಮಾತುಲಕುಲೇ ಪುರೇ ರಾಜಗೃಹೇ ಸುಖೀ ।
ಭರತೋ ವಸತಿ ಭ್ರಾತ್ರಾ ಶತ್ರುಘ್ನೇನ ಸಮನ್ವಿತಃ ॥೨॥

ಭರತನು ಸೋದರ ಶತ್ರುಘ್ನನೊಂದಿಗೆ ರಾಜಗೃಹ ನಗರದಲ್ಲಿ ಸೋದರಮಾವನ ಮನೆಯಲ್ಲಿ ಸುಖವಾಗಿ ಇದ್ದಾನೆ.

ತಚ್ಶೀಘ್ರಂ ಜವನಾ ದೂತಾ ಗಚ್ಛಂತು ತ್ವರಿತೈರ್ಹಯೈಃ ।
ಆನೇತುಂ ಭ್ರಾತರೌ ವೀರೌ ಕಿಂ ಸಮೀಕ್ಷಾಮಹೇ ವಯಮ್ ॥೩॥

ಆದ್ದರಿಂದ ವೀರರಾದ ಆ ಸೋದರರನ್ನು ಕರೆತರಲು ವೇಗದ ಕುದುರೆಗಳಿಂದ ಬೇಗನೆ ವೇಗವಾಗಿ ದೂತರು ಹೋಗಲಿ. ಇದಕ್ಕಿಂತ ಬೇರೆ ಇನ್ನೇನನ್ನು ಉಚಿತವೆಂದು ನಾವು ನಿಶ್ಚೈಸಬಲ್ಲೆವು?

ಗಚ್ಛಂತ್ವಿತಿ ತತಃ ಸರ್ವೇ ವಸಿಷ್ಠಂ ವಾಕ್ಯಮಬ್ರುವನ್ ।
ತೇಷಾಂ ತು ವಚನಂ ಶ್ರುತ್ವಾ ವಸಿಷ್ಠೋ ವಾಕ್ಯಮಬ್ರವೀತ್ ॥೪॥

'ದೂತರು ಹೋಗಲಿ' ಎಂದೇ ಎಲ್ಲರೂ ವಸಿಷ್ಠರಿಗೆ ಹೇಳಿದರು. ಅವರ ಮಾತನ್ನು ಕೇಳಿ ವಸಿಷ್ಠರು ಹೇಳಿದರು.

ಏಹಿ ಸಿದ್ಧಾರ್ಥ ವಿಜಯ ಜಯಂತಾಶೋಕನಂದನ ।
ಶ್ರೂಯತಾಮಿತಿಕರ್ತವ್ಯಂ ಸರ್ವಾನೇವ ಬ್ರವೀಮಿ ವಃ ॥೫॥

ಬಾ ಸಿದ್ಧಾರ್ಥ! ವಿಜಯ! ಜಯಂತ! ಅಶೋಕನಂದನ! ನೀವೆಲ್ಲರೂ ಈ ಕಾರ್ಯವನ್ನು ಹೇಗೆ ಮಾಡಬೇಕೆಂಬುದನ್ನು ನಿಮಗೆ ಹೇಳುತ್ತೇನೆ.

ಪುರಂ ರಾಜಗೃಹಂ ಗತ್ವಾ ಶೀಘ್ರಂ ಶೀಘ್ರಜವೈರ್ಹಯೈಃ ।
ತ್ಯಕ್ತಶೋಕೈರಿದಂ ವಾಚ್ಯಃ ಶಾಸನಾದ್ಭರತೋ ಮಮ ॥೬॥

ನೀವು ವೇಗದ ಕುದುರೆಗಳಿಂದ ಬೇಗನೆ ರಾಜಗೃಹ ನಗರಕ್ಕೆ ಹೋಗಿ ನನ್ನಾಜ್ಞೆಯಂತೆ ಶೋಕವನ್ನು ತಡೆದುಕೊಂಡು ಭರತನಿಗೆ ಹೇಳಬೇಕು.

ಪುರೋಹಿತಸ್ತ್ವಾಂ ಕುಶಲಂ ಪ್ರಾಹ ಸರ್ವೇ ಚ ಮಂತ್ರಿಣಃ ।
ತ್ವರಮಾಣಶ್ಚ ನಿರ್ಯಾಹಿ ಕೃತ್ಯಮಾತ್ಯಯಿಕಂ ತ್ವಯಾ ॥೭॥

'ಪುರೋಹಿತನೂ ಎಲ್ಲ ಮಂತ್ರಿಗಳೂ ನಿನಗೆ ಕುಶಲವನ್ನು ಹೇಳುತ್ತಿದ್ದಾರೆ. ಮತ್ತು 'ನೀನು ಬೇಗನೆ ಹೊರಟು ಬಾ. ನಿನ್ನಿಂದ ಒಂದು ಅವಶ್ಯಕಾರ್ಯವಾಗಬೇಕಾಗಿದೆ' ಎಂದೂ ಹೇಳುತ್ತಿದ್ದಾರೆ'.

'ಎಲ್ಲ ಮಂತ್ರಿಗಳೂ ನಿನಗೆ ಕುಶಲವನ್ನು ಹೇಳಿದ್ದಾರೆ' ಎಂದು ದೂತರು ಭರತನಿಗೆ ಹೇಳಬೇಕು ಎಂದಿದ್ದಾರೆ ವಸಿಷ್ಠರು. ಅದರಿಂದ ಸಿದ್ಧಾರ್ಥ ವಿಜಯ ಮುಂತಾದವರು ಮಂತ್ರಿಗಳಲ್ಲ ಎಂದು ತಿಳಿಯಬೇಕು. ಮತ್ತು ಮಂತ್ರಿಯಲ್ಲದ ನಂದನನನ್ನೂ ಜೊತೆಗೆ ವಸಿಷ್ಠರು ಕರೆಯುವುದರಿಂದ ಇವರು ಯಾರೂ ಮಂತ್ರಿ-ಗಳಲ್ಲ. ಅವೇ ಹೆಸರುಳ್ಳ ದೂತರೆನ್ನಬೇಕು. ಬೇರೆ ಉಪಾಯವಿಲ್ಲ ಎಂದು ಗೋವಿಂದರಾಜೀಯ ವ್ಯಾಖ್ಯಾನ ಹೇಳಿದೆ. ಆದರೆ ಸಂಗ್ರಹ ರಾಮಾಯಣದಲ್ಲಿ ಈ ಸಿದ್ಧಾರ್ಥ ಮುಂತಾದವರೆಲ್ಲರೂ ರಾಜನ ಮಂತ್ರಿಗಳೆನ್ನುವುದು ಸ್ಪಷ್ಟವಿದೆ—

ವಸಿಷ್ಠ ಏವಂ ನಿಶ್ಚಿತ್ಯ ರಾಜಾಮಾತ್ಯಾನ್ ಸಮಾದಿಶತ್ ।
ಭೋಭೋ ವಿಜಯ ಸಿದ್ಧಾರ್ಥ ಜಯಂತಾಶೋಕ ಗಚ್ಛತ ॥ (ಅಯೋ.11.5)

ಯದ್ಯಪಿ ಇಲ್ಲಿ ನಂದನನ ಉಲ್ಲೇಖವಿಲ್ಲ. ಅಶೋಕನ ಹೆಸರು ಮಾತ್ರ ಕಾಣುತ್ತದೆ.

ಧೃಷ್ಟಿರ್ಜಯಂತೋ ವಿಜಯಃ ಸಿದ್ಧಾರ್ಥೋ ಹ್ಯರ್ಥಸಾಧಕಃ ।
ಅಶೋಕೋ ಮಂತ್ರಪಾಲಶ್ಚ ಸುಮಂತ್ರಶ್ಚಾಷ್ಟಮೋऽಭವತ್ ॥

ಎಂದು ವಾಲ್ಮೀಕಿಯ ಬಾಲಕಾಂಡ(7.3)ದಲ್ಲಿಯೂ ಅಶೋಕ ಎಂಬ ಹೆಸರಿದೆ. ನಂದನ ಎಂಬ ಹೆಸರಿಲ್ಲ. ಆದ್ದರಿಂದಲೇ ನಂದನನೊಬ್ಬ ಮಂತ್ರಿಯಲ್ಲದವನು ಇಲ್ಲಿ ಸೇರಿದ್ದರಿಂದ ಸಿದ್ಧಾರ್ಥವಿಜಯ ಮುಂತಾದವರೂ ಕೂಡ ಮಂತ್ರಿಗಳಲ್ಲ' ಎನ್ನುತ್ತಾರೆ. ಇದೂ ಸರಿಯಲ್ಲ. 'ಅಶೋಕನಂದನ' ಎಂದು ಒಬ್ಬ ಮಂತ್ರಿಯ ಪೂರ್ತಿ ಹೆಸರು. 'ಅಶೋಕ' ಎಂದು ಅದರ ಏಕದೇಶವನ್ನೇ ಸಂಗ್ರಹ-ರಾಮಾಯಣದಲ್ಲಿ ಹೇಳಿದ್ದಾರೆ ಎನ್ನಬೇಕು.

ಮಾ ಚಾಸ್ಮೈ ಪ್ರೋಷಿತಂ ರಾಮಂ ಮಾ ಚಾಸ್ಮೈ ಪಿತರಂ ಮೃತಮ್ ।
ಭವಂತಃ ಶಂಸಿಷುರ್ಗತ್ವಾ ರಾಘವಾಣಾಮಿಮಂ ಕ್ಷಯಮ್ ॥೮॥

'ರಾಮನ ವನವಾಸವನ್ನೂ ಪಿತೃಮರಣವನ್ನೂ ರಘುವಂಶದವರಿಗೆ ಬಂದ ಈ ವಿಪತ್ತನ್ನೂ ನೀವು ಹೋಗಿ ಅವರಿಗೆ ಹೇಳಬಾರದು'.

ಕೌಶೇಯಾನಿ ಚ ವಸ್ತ್ರಾಣಿ ಭೂಷಣಾನಿ ವರಾಣಿ ಚ ।
ಕ್ಷಿಪ್ರಮಾದಾಯ ರಾಜ್ಞಶ್ಚ ಭರತಸ್ಯ ಚ ಗಚ್ಛತ ॥೯॥

'ಕೇಕಯ ರಾಜನಿಗೂ ಭರತನಿಗೂ ರೇಶಿಮೆವಸ್ತ್ರಗಳನ್ನೂ ಉತ್ತಮ ಆಭರಣ-ಗಳನ್ನೂ ತೆಗೆದುಕೊಂಡು ಬೇಗನೆ ಹೋಗಿರಿ'.

ದತ್ತಪಥ್ಯಶನಾ ದೂತಾ ಜಗ್ಮುಃ ಸ್ವಂ ಸ್ವಂ ನಿವೇಶನಮ್ ।
ಕೇಕಯಾಂಸ್ತೇ ಗಮಿಷ್ಯಂತೋ ಹಯಾನಾರುಹ್ಯ ಸಂಮತಾನ್ ॥೧೦॥

ಹೀಗೆ ಹೇಳಿ ವಸಿಷ್ಠರು ದೂತರಾದ ಮಂತ್ರಿಗಳಿಗೆ ಪ್ರಯಾಣಭತ್ಯಗಳನ್ನು ಕೊಡಿಸಿದರು. ದೂತರು ಉತ್ತಮವಾದ ಕುದುರೆಗಳನ್ನೇರಿ ಕೇಕಯ ದೇಶಕ್ಕೆ ಹೊರಟು ಹೋಗುವ ಮುನ್ನ ತಮ್ಮ ತಮ್ಮ ಮನೆಗಳಿಗೆ ಹೋದರು.

ತತಃ ಪ್ರಾಸ್ಥಾನಿಕಂ ಕೃತ್ವಾ ಕಾರ್ಯಶೇಷಮನಂತರಮ್ ।
ವಸಿಷ್ಠೇನಾಭ್ಯನುಜ್ಞಾತಾ ದೂತಾಃ ಸಂತ್ವರಿತಾ ಯಯುಃ ॥೧೧॥

ಬಳಿಕ ಪ್ರಯಾಣಕ್ಕಾಗಿ ಸಿದ್ಧತೆಗಳನ್ನು ಮಾಡಿಕೊಂಡು ಪುನಃ ವಸಿಷ್ಠರಿಂದ ಅನುಜ್ಞೆಯನ್ನು ಕೇಳಿಪಡೆದು ದೂತರು ಅವಸರದಿಂದ ಕೇಕಯದ ಕಡೆಗೆ ಪ್ರಯಾಣ ಮಾಡಿದರು.

ನ್ಯಂತೇನಾಪರತಾಲಸ್ಯ ಪ್ರಲಂಬಸ್ಯೋತ್ತರಂ ಪ್ರತಿ ।
ನಿಷೇಮಾಣಾಸ್ತೇ ಜಗ್ಮುರ್ನದೀಂ ಮಧ್ಯೇನ ಮಾಲಿನೀಮ್ ॥೧೨॥

ಅಪರತಾಲ ಪರ್ವತದ ಪಶ್ಚಿಮಭಾಗ ಮಾರ್ಗವಾಗಿ ಪ್ರಲಂಬ ಪರ್ವತದ ಉತ್ತರಕ್ಕೆ ಹೋಗಿ ಮಧ್ಯದಲ್ಲಿ ಸಿಗುವ ಮಾಲಿನೀ ನದಿಯನ್ನು ದಾಟಿ ಪುನಃ ಪಶ್ಚಿಮಾಭಿಮುಖವಾಗಿ ದೂತರು ಪ್ರಯಾಣ ಮಾಡಿದರು.

ತೇ ಹಾಸ್ತಿನಪುರೇ ಗಂಗಾಂ ತೀರ್ತ್ವಾ ಪ್ರತ್ಯಙ್ಮುಖಾ ಯಯುಃ ।
ಪಾಂಚಲದೇಶಾನಾಸಾದ್ಯ ಮಧ್ಯೇನ ಕುರುಜಾಂಗಲಮ್ ॥೧೩॥

ಅವರು ಹಸ್ತಿನಾಪುರದಲ್ಲಿ ಗಂಗೆಯನ್ನು ದಾಟಿ ಪುನಃ ಪಶ್ಚಿಮದಿಕ್ಕಿಗೆ ಪ್ರಯಾಣ ಮಾಡಿ ಪಾಂಚಾಲದೇಶವನ್ನು ತಲುಪಿರು. ಅಲ್ಲಿ ಹಿಮಾಲಯದಿಂದ ಆಗ್ನೇಯಕ್ಕೆ ಹರಿಯುವ ಗಂಗೆಯನ್ನು ಹಸ್ತಿನಾಪುರ ಸಮೀಪದಲ್ಲಿ ದಾಟಿ ಉತ್ತರಕ್ಕೆ ಹೋಗಿ ಕುರುಜಾಂಗಲದ ಮಧ್ಯದಲ್ಲಿ ಹಾದು ಮುಂದುವರಿದರು.

ಸರಾಂಸಿ ಚ ಸುಪೂರ್ಣಾನಿ ನದೀಶ್ಚ ವಿಮಲೋದಕಾಃ ।
ನಿರೀಕ್ಷಮಾಣಾಸ್ತೇ ಜಗ್ಮುರ್ದೂತಾಃ ಕಾರ್ಯವಶಾದ್ಭರತಮ್ ॥೧೪॥

ಅಲ್ಲಿ ತುಂಬಿದ ಕೊಳಗಳನ್ನೂ ನಿರ್ಮಲ ಜಲದಿಂದ ಕೂಡಿದ ನದಿಗಳನ್ನೂ ನೋಡುತ್ತ ಎಲ್ಲಿಯೂ ಕಾಲಯಾಪನೆ ಮಾಡದೆ ಕಾರ್ಯವಶದಿಂದ ಬೇಗನೆ ಮುನ್ನಡೆದರು.

ತೇ ಪ್ರಸನ್ನೋದಕಾಂ ದಿವ್ಯಾಂ ನಾನಾವಿಹಗಸೇವಿತಾಮ್ ।
ಅತೀತ್ಯ ಜಗ್ಮುರ್ವೇಗೇನ ಶರದಂಡಾಂ ಜನಾಕುಲಾಮ್ ॥೧೫॥

ನಿರ್ಮಲ ಉದಕವುಳ್ಳ ನಾನಾ ಪಕ್ಷಿಗಳಿಂದ ಸೇವಿತವಾದ ಜನಸಂದಣಿಯಿಂದಲೂ ಕೂಡಿದ ದಿವ್ಯವಾದ ಶರದಂಡಾ ನದಿಯನ್ನು ದಾಟಿ ಮುಂದೆಹೋದರು.

ನಿಕೂಲವೃಕ್ಷಮಾಸಾದ್ಯ ದಿವ್ಯಂ ಸತ್ಯೋಪಯಾತನಮ್ ।
ಅಭಿಗಮ್ಯಾಭಿವಾದ್ಯಂ ತಂ ಕುಲಿಂಗಾಂ ಪ್ರಾವಿಶನ್ ಪುರೀಮ್ ॥೧೬॥

ಆ ನದಿಯ ಪಶ್ಚಿಮತೀರದಲ್ಲಿದ್ದ ಒಂದು ದಿವ್ಯ ವೃಕ್ಷವನ್ನು ತಲುಪಿದರು. ಆ ವೃಕ್ಷ 'ಸತ್ಯೋಪಯಾಚನ' ಹರಕೆ ಹೊತ್ತರೆ ಸತ್ಯವಾಗಿ ಮಾಡುವಂಥದ್ದು ಎಂಬ ಅನ್ವರ್ಥನಾಮ ಉಳ್ಳದ್ದು. ಎಲ್ಲರಿಗೂ ಅದು ನಮಸ್ಕಾರ ಯೋಗ್ಯವಾಗಿದ್ದರಿಂದ ಅದನ್ನು ನಮಿಸಿ ಮುಂದೆ ಕುಲಿಂಗಾನಗರವನ್ನು ಹೋಗಿ ಸೇರಿದರು.

ಅಭಿಕಾಲಂ ತತಃ ಪ್ರಾಪ್ಯ ತೇ ಬೋಧಿಭವನಾಚ್ಚ್ಯುತಾಮ್ ।
ಪಿತೃಪೈತಾಮಹೀಂ ಪುಣ್ಯಾಂ ತೇರುರಿಕ್ಷುಮತೀಂ ನದೀಮ್ ॥೧೭॥

ಅಲ್ಲಿಂದ ಅಭಿಕಾಲ ಎಂಬ ಗ್ರಾಮದ ದಾರಿಯಾಗಿ, ಬೋಧಿಭವನ ಎಂಬ ಪರ್ವತದಿಂದ ಹರಿದುಬರುವ ಇಕ್ಷ್ವಾಕು ವಂಶದವರ ಪಿತೃಪಿತಾಮಹರಿಂದ ಸೇವಿತವಾದ ಇಕ್ಷುಮತೀ ಎಂಬ ಪುಣ್ಯ ನದಿಯನ್ನೂ ದಾಟಿದರು.

ಅವೇಕ್ಷ್ಯಾಂಜಲಿಪಾನಾಂಶ್ಚ ಬ್ರಾಹ್ಮಣಾನ್ ವೇದಪಾರಗಾನ್ ।
ಯಯುರ್ಮಧ್ಯೇನ ಬಾಹ್ಲೀಕಾನ್ ಸುದಾಮಾನಂ ಚ ಪರ್ವತಮ್ ॥

ಇಕ್ಷುಮತೀತೀರ ನಿವಾಸಿಗಳಾದ ವೇದಪಾರಂಗತರಾದ ಬ್ರಾಹ್ಮಣರು ಕೇವಲ ಅಂಜಲಿ ಜಲಪಾನ ಮಾಡಿ ಜೀವಿಸುವವರು. ದೂತರು ಅವರ ದರ್ಶನ ಮಾಡಿ ಬಾಹ್ಲೀಕದೇಶ ಮಧ್ಯದಲ್ಲಿ ಹಾದು ಸುದಾಮಪರ್ವತವನ್ನು ಸೇರಿದರು.

ಅಂಜಲಿ ಜಲಪಾನವೆಂದರೆ ಬೊಗಸೆಯಿಂದ ನೀರನ್ನೆತ್ತಿ ಕುಡಿಯುವುದಲ್ಲ. ಅದು ಅನಾಚಾರ. ಒಂದು ಬೊಗಸೆಯಷ್ಟು ನೀರನ್ನು ಮಾತ್ರ ಕುಡಿಯುತ್ತಿದ್ದರು ಎಂದರ್ಥ.

ವಿಷ್ಣೋಃ ಪದಂ ಪ್ರೇಕ್ಷಮಾಣಾ ವಿಪಾಶಾಂ ಚಾಪಿ ಶಾಲ್ಮಲೀಮ್ ।
ನದೀರ್ವಾಪೀಸ್ತಟಾಕಾನಿ ಪಲ್ವಲಾನಿ ಸರಾಂಸಿ ಚ ॥೧೯॥

ಪಶ್ಯಂತೋ ವಿವಿಧಾಂಶ್ಚಾಪಿ ಸಿಂಹವ್ಯಾಘ್ರಮೃಗದ್ವಿಪಾನ್ ।
ಯಯುಃ ಪಥಾತಿಮಹತಾ ಶಾಸನಂ ಭರ್ತುರೀಪ್ಸವಃ ॥೨೦॥

ಸುದಾಮ ಪರ್ವತದಲ್ಲಿ ವಿಷ್ಣುಪಾದ ದರ್ಶನ ಮಾಡಿ, ವಿಪಾಶಾನದಿಯನ್ನೂ ಶಾಲ್ಮಲೀನದಿಯನ್ನೂ ದಾಟಿ, ನದಿ ಬಾವಿ ಕೊಳ ಹಳ್ಳ ಸರೋವರಗಳನ್ನು ನೋಡುತ್ತ, ನಾನಾ ಬಗೆಯ ಸಿಂಹ ಹುಲಿ ಜಿಂಕೆ ಆನೆಗಳನ್ನೂ ನೋಡುತ್ತ ಅತಿ ದೀರ್ಘವಾದ ಮಾರ್ಗವನ್ನು ಕ್ರಮಿಸಿದರು. ಪ್ರಭುವಿನ ಆಜ್ಞೆಯ ಪಾಲನೆಗಾಗಿ ಮುನ್ನಡೆದರು.

ತೇ ಶ್ರಾಂತವಾಹನಾ ದೂತಾ ವಿಕೃಷ್ಟೇನ ಪಥಾ ತತಃ ।
ಗಿರಿವ್ರಜಂ ಪುರವರಂ ಶೀಘ್ರಮಾಸೇದುರಂಜಸಾ ॥೨೧॥

ಅತಿ ದೀರ್ಘವಾದ ದಾರಿಯಿಂದ ಪ್ರಯಾಣ ಮಾಡಿ, ಕುದುರೆಗಳು ಬಳಲುತ್ತಿದ್ದಂತೆ, ಶ್ರೇಷ್ಠನಗರವಾದ ಗಿರಿವ್ರಜವನ್ನು ಬೇಗನೆ ಬಂದು ಸೇರಿದರು.

ಕೇಕಯ ರಾಜಧಾನಿಯಾದ ರಾಜಗೃಹಕ್ಕೇ ಇನ್ನೊಂದು ಹೆಸರು ಗಿರಿವ್ರಜ.

ಭರ್ತುಃ ಪ್ರಿಯಾರ್ಥಂ ಕುಲರಕ್ಷಣಾರ್ಥಂ
ಭರ್ತುಶ್ಚ ವಂಶಸ್ಯ ಪರಿಗ್ರಹಾರ್ಥಮ್ ।
ಅಹೇಡಮಾನಾಸ್ತ್ವರಯಾ ಸ್ಮ ದೂತಾ
ರಾತ್ರ್ಯಾಂ ತು ತೇ ತತ್ಪುರಮೇವ ಯಾತಾಃ ॥೨೨॥

ಆಜ್ಞೆನೀಡಿದ ವಸಿಷ್ಠರ ಸಂತೋಷಕ್ಕಾಗಿ, ರಾಜನನ್ನು ಆಶ್ರಯಿಸಿರುವ ಪೌರವರ್ಗದವರ ರಕ್ಷಣೆಗಾಗಿ, ರಾಜವಂಶದವನಾದ ಭರತನು ಸಿಂಹಾಸನವನ್ನು ಸ್ವೀಕರಿಸಲಿ ಎಂಬ ಉದ್ದೇಶದಿಂದ ರಾಜದೂತರು, ಅನಾದರದಿಂದ ಏನೂ ವಿಲಂಬ ಮಾಡದೆ, ಅವಸರದಿಂದ ಏಳನೇ ದಿನ ರಾತ್ರಿಯಲ್ಲಿಯೇ ರಾಜಗೃಹ ವನ್ನು ಬಂದು ಸೇರಿದರು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಅರವತ್ತೆಂಟನೇ ಸರ್ಗ ಮುಗಿಯಿತು.

❖

ಏಕೋನ ಸಪ್ತತಿತಮಃ ಸರ್ಗಃ

ಸರ್ಗ – 69

ಭರತನಿಗಾದ ದುಃಸ್ವಪ್ನ

ಯಾಮೇವ ರಾತ್ರಿಂ ತೇ ದೂತಾಃ ಪ್ರವಿಶಂತಿ ಸ್ಮ ತಾಂ ಪುರೀಮ್ ।
ಭರತೇನಾಪಿ ತಾಂ ರಾತ್ರಿಂ ಸ್ವಪ್ನೋ ದೃಷ್ಟೋಽಯಮಪ್ರಿಯಃ ॥೧॥

ಯಾವ ರಾತ್ರಿಯಲ್ಲಿ ಅಯೋಧ್ಯೆಯ ದೂತರು ರಾಜಗೃಹವನ್ನು ಸೇರಿದರೋ ಅದೇರಾತ್ರಿ ಭರತನೂ ಅಪ್ರಿಯವಾದ ದುಃಸ್ವಪ್ನವನ್ನು ಕಂಡನು.

ವ್ಯುಷ್ಟಾಮೇವ ತು ತಾಂ ರಾತ್ರಿಂ ದೃಷ್ಟ್ವಾ ತಂ ಸ್ವಪ್ನಮಪ್ರಿಯಮ್ ।
ಪುತ್ರೋ ರಾಜಾಧಿರಾಜಸ್ಯ ಸುಭೃಶಂ ಪರ್ಯತಪ್ಯತ ॥೨॥

ರಾತ್ರಿ ಕಳೆಯುದ್ದಂತೆ ಬೆಳಗಿನ ಜಾವದಲ್ಲಿ ರಾಜಾಧಿರಾಜ ದಶರಥನ ಪುತ್ರ ಭರತನು ಅಪ್ರಿಯ ದುಃಸ್ವಪ್ನವನ್ನು ಕಂಡು ಬಹಳ ಪರಿತಪಿಸಿದ.

ತಪ್ಯಮಾನಂ ಸಮಾಜ್ಞಾಯ ವಯಸ್ಯಾಃ ಪ್ರಿಯವಾದಿನಃ ।
ಆಯಾಸಂ ಹಿ ಏನೇಷ್ಯಂತಃ ಸಭಾಯಾಂ ಚಕ್ರಿರೇ ಕಥಾಃ ॥೩॥

ಭರತನೇಕೋ ಪರಿತಪಿಸುತ್ತಿದ್ದಾನೆ ಎಂದು ತಿಳಿದ ಪ್ರಿಯವಾದಿಗಳಾದ ಸ್ನೇಹಿತರು ಅವನ ಮನಸಿನ ದುಃಖವನ್ನು ಮರೆಸಲು ಸಭೆಯಲ್ಲಿ ಕಥಾಕಾಲಕ್ಷೇಪ ಮಾಡಲು ತೊಡಗಿದರು.

ವಾದಯಂತಿ ತಥಾ ಶಾಂತಿಂ ಲಾಸಯಂತ್ಯಪಿ ಚಾಪರೇ ।
ನಾಟಕಾನ್ಯಪರೇ ಪ್ರಾಹುರ್ಹಾಸ್ಯಾನಿ ವಿವಿಧಾನಿ ಚ ॥೪॥

ಕೆಲವರು ಭರತನ ಮನಃಶಾಂತಿಗಾಗಿ ವಾದ್ಯ ಸಂಗೀತಗಳನ್ನೂ ವೇಶ್ಯೆಯರ ನೃತ್ಯ ನಾಟ್ಯಗಳನ್ನೂ ನಾಟಕಾಭಿನಯನಯಗಳನ್ನೂ ಹಾಸ್ಯಗೋಷ್ಠಿಗಳನ್ನೂ ಏರ್ಪಡಿಸಿದರು.

ಸ ತೈರ್ಮಹಾತ್ಮಾ ಭರತಃ ಸಖಿಭಿಃ ಪ್ರಿಯವಾದಿಭಿಃ ।
ಗೋಷ್ಠೀಹಾಸ್ಯಾನಿ ಕುರ್ವದ್ಭಿರ್ನ ಪ್ರಾಹೃಷ್ಯತ ರಾಘವಃ ॥೫॥

ಪ್ರಿಯವಾದಿಗಳಾದ ಸ್ನೇಹಿತರ ಸಂಗೀತನಾಟ್ಯಗಳಿಂದಾಗಲಿ ಹಾಸ್ಯಗೋಷ್ಠಿ ಗಳನ್ನು ನಡೆಸಿದ್ದರಿಂದಾಗಲಿ ಮಹಾತ್ಮ ಭರತ ಉಲ್ಲಾಸಪಡಲಿಲ್ಲ.

ತಮಬ್ರವೀತ್ ಪ್ರಿಯಸಖೋ ಭರತಂ ಸಖಿಭಿರ್ವೃತಮ್ ।
ಸುಹೃದ್ಭಿಃ ಪರ್ಯುಪಾಸೀನಃ ಕಿಂ ಸಖೇ ನಾನುಮೋದಸೇ ॥೬॥

ಒಬ್ಬ ಪ್ರಿಯಮಿತ್ರನು ಮಿತ್ರರ ನಡುವೆ ಇದ್ದ ಭರತನನ್ನು ಕೇಳಿದ, ಮಿತ್ರ, ಮಿತ್ರರು ನಿನ್ನನ್ನು ಓಲಗಿಸಿದರೂ ನೀನೇಕೆ ಯಾವುದನ್ನೂ ಸಮ್ಮತಿಸುತ್ತಿಲ್ಲ?

ಏವಂ ಬ್ರುವಾಣಂ ಸುಹೃದಂ ಭರತಃ ಪ್ರತ್ಯುವಾಚ ತಮ್ ।
ಶೃಣು ತ್ವಂ ಯನ್ನಿಮಿತ್ತಂ ಮೇ ದೈನ್ಯಮೇತದುಪಾಗತಮ್ ॥೭॥

ಮಿತ್ರನು ಹೀಗೆ ಹೇಳಿದಾಗ ಭರತ ಹೇಳಿದ, ನನಗೆ ಹೀಗೆ ಕಳವಳ ಉಂಟಾಗಲು ಕಾರಣವನ್ನು ಹೇಳುವೆನು ಕೇಳು.

ಸ್ವಪ್ನೇ ಪಿತರಮದ್ರಾಕ್ಷಂ ಮಲಿನಂ ಮುಕ್ತಮೂರ್ಧಜಮ್ ।
ಪತಂತಮದ್ರಿಶಿಖರಾತ್ ಕಲುಷೇ ಗೋಮಯಹ್ರದೇ ॥೮॥

ಸ್ವಪ್ನದಲ್ಲಿ ನಾನು ನನ್ನ ಪಿತನನ್ನು ಕಂಡೆ. ಅವನು ಮಲಿನನಾಗಿ ತಲೆಕೂದಲು ಕೆದರಿಕೊಂಡು ಬೆಟ್ಟದ ತುದಿಯಿಂದ ಕದಡಿದ ಸಗಣಿಯ ಹೊಂಡದಲ್ಲಿ ಬಿದ್ದ.

ಪ್ಲವಮಾನಶ್ಚ ಮೇ ದೃಷ್ಟಃ ಸ ತಸ್ಮಿನ್ ಗೋಮಯಹ್ರದೇ ।
ಪಿಬನ್ನಂಜಲಿನಾ ತೈಲಂ ಹಸನ್ನಿವ ಮುಹುರ್ಮುಹುಃ ॥೯॥

ಪಿತನು ಬೊಗಸೆಯಿಂದ ಮತ್ತುಮತ್ತು ಎಣ್ಣೆಯನ್ನು ಕುಡಿಯುತ್ತ ನಗುತ್ತ ಆ ಸಗಣಿಯ ಹೊಂಡದಲ್ಲಿ ಈಜುತ್ತಿದ್ದುದನ್ನು ಕಂಡೆ.

ತತಸ್ತಿಲೌದನಂ ಭುಕ್ತ್ವಾ ಪುನಃ ಪುನರಧಃಶಿರಾಃ ।
ತೈಲೇನಾಭ್ಯಕ್ತಸರ್ವಾಂಗಸ್ತೈಲಮೇವಾನ್ವಗಾಹತ ॥೧೦॥

ಬಳಿಕ ಮತ್ತು ಮತ್ತು ಎಳ್ಳಿನ ಅನ್ನ ಉಂಡು ಎಳ್ಳೆಣ್ಣೆಯನ್ನು ಸರ್ವಾಂಗಗಳಿಗೆ ಬಳಿದುಕೊಂಡು ಕೆಳಮುಖವಾಗಿ ಎಣ್ಣೆಯಲ್ಲಿಯೆ ಮುಳುಗಿದ.

ಸ್ವಪ್ನೇಽಪಿ ಸಾಗರಂ ಶುಷ್ಕಂ ಚಂದ್ರಂ ಚ ಪತಿತಂ ಭುವಿ ।
ಉಪರುದ್ಧಾಂ ಚ ಜಗತೀಂ ತಮಸೇವ ಸಮಾವೃತಾಮ್ ॥೧೧॥

ಕನಸಿನಲ್ಲಿ ಸಾಗರವೆ ಬತ್ತಿ ಹೋದಂತೆ ಚಂದ್ರನು ಭೂಮಿಗೆ ಬಿದ್ದಂತೆ ಜಗತ್ತನ್ನು ಕತ್ತಲು ಆವರಿಸಿದಂತೆ ಜಗತ್ತೆ ಕತ್ತಲಲ್ಲಿ ಮಾಯವಾದಂತೆ ಕಂಡೆ.

ಪಿಪವಾಹ್ಯಸ್ಯ ನಾಗಸ್ಯ ವಿಷಾಣಂ ಶಕಲೀಕೃತಮ್ ।
ಸಹಸಾ ಚಾಪಿ ಸಂಶಾಂತಂ ಜ್ವಲಿತಂ ಜಾತವೇದಸಮ್ ॥೧೨॥

ಪಟ್ಟದಾನೆಯ ದಂತ ಚೂರುಚೂರಾದಂತೆ, ಉರಿಯುತ್ತಿದ್ದ ಬೆಂಕಿ ಒಡನೆ ಆರಿದಂತೆ ಕಂಡೆ.

ಅವದೀರ್ಣಾಂ ಚ ಪೃಥಿವೀಂ ಶುಷ್ಕಾಂಶ್ಚ ವಿವಿಧಾನ್ ದ್ರುಮಾನ್ ।
ಅಹಂ ಪಶ್ಯಾಮಿ ವಿಧ್ವಸ್ತಾನ್ ಸಧೂಮಾಂಶ್ಚಾಪಿ ಪರ್ವತಾನ್ ॥೧೩॥

ಭೂಮಿ ಸೀಳಿಹೋದಂತೆ ನಾನಾ ಬಗೆಯ ಮರಗಳು ಒಣಗಿ ಹೋದಂತೆ ಪರ್ವತಗಳು ಕೆಳಗೆ ಉರುಳಿಬಿದ್ದು ಹೊಗೆಯಾಡಿದಂತೆ ಕಂಡೆ.

ಪೀಠೇ ಕಾರ್ಷ್ಣಾಯಸೇ ಚೈನಂ ನಿಷಣ್ಣಂ ಕೃಷ್ಣವಾಸಸಮ್ ।
ಪ್ರಹಸಂತಿ ಸ್ಮ ರಾಜಾನಂ ಪ್ರಮದಾಃ ಕೃಷ್ಣಪಿಂಗಲಾಃ ॥೧೪॥

ಕಪ್ಪುಬಟ್ಟೆ ಉಟ್ಟು ಕಬ್ಬಿಣದ ಸಿಂಹಾಸನದಲ್ಲಿ ಕುಳಿತ ರಾಜಾ ದಶರಥನನ್ನು ಕಪ್ಪುಕಂದು ಮೈಯ ಹೆಂಗಸರು ಅಪಹಾಸಮಾಡಿ ನಗುತ್ತಿರುವಂತೆ ಕಂಡೆ.

ತ್ವರಮಾಣಶ್ಚ ಧರ್ಮಾತ್ಮಾ ರಕ್ತಮಾಲ್ಯಾನುಲೇಪನಃ ।
ರಥೇನ ಖರಯುಕ್ತೇನ ಪ್ರಯಾತೋ ದಕ್ಷಿಣಾಮುಖಃ ॥೧೫॥

ಧರ್ಮಾತ್ಮನಾದ ತಂದೆ ಕೆಂಪು ಮಾಲೆ ಗಂಧಗಳನ್ನು ಧರಿಸಿ ಕತ್ತೆಗಳು ಎಳೆಯುವ ರಥದಿಂದ ದಕ್ಷಿಣಾಭಿಮುಖವಾಗಿ ಅವಸರದಿಂದ ಹೋದಂತೆ ಕಂಡೆ.

ಪ್ರಹಸಂತೀವ ರಾಜಾನಂ ಪ್ರಮದಾ ರಕ್ತವಾಸಿನೀ ।
ಪ್ರಕರ್ಷಂತೀ ಮಯಾ ದೃಷ್ಟಾ ರಾಕ್ಷಸೀ ವಿಕೃತಾನನಾ ॥೧೬॥

ಕೆಂಪು ಬಟ್ಟೆ ಉಟ್ಟಿದ್ದ ವಿಕಾರ ಮುಖದ ರಾಕ್ಷಸಸ್ತ್ರೀ ಅಟ್ಟಹಾಸ ಮಾಡುತ್ತ ರಾಜನನ್ನು ಹಿಡಿದೆಳೆದಾಡುತ್ತಿದ್ದಂತೆಯೂ ಕನಸು ಕಂಡೆ.

ಏವಮೇತನ್ಮಯಾ ದೃಷ್ಟಮಿಮಾಂ ರಾತ್ರಿಂ ಭಯಾವಹಾಮ್ ।
ಅಹಂ ರಾಮೋऽಥ ವಾ ರಾಜಾ ಲಕ್ಷ್ಮಣೋ ವಾ ಮರಿಷ್ಯತಿ ॥೧೭॥

ಹೀಗೆ ಈ ರಾತ್ರಿ ನನಗೆ ಭಯಾನಕವಾಗಿದ್ದು ರಾತ್ರಿ ಪೂರ್ತಿ ಈ ಬಗೆಯ ಕನಸನ್ನು ಕಂಡೆ. ಇದರಿಂದ ನಾನಾಗಲಿ ರಾಮನಾಗಲಿ ರಾಜನಾಗಲಿ ಲಕ್ಷ್ಮಣನಾಗಲಿ ಮರಣ ಹೊಂದುವರು.

ನರೋ ಯಾನೇನ ಯಃ ಸ್ವಪ್ನೇ ಖರಯುಕ್ತೇನ ಯಾತಿ ಹಿ ।
ಅಚಿರಾತ್ತಸ್ಯ ಧೂಮಾಗ್ರಂ ಚಿತಾಯಾಂ ಸಂಪ್ರದೃಶ್ಯತೇ ॥೧೮॥

ಕನಸಿನಲ್ಲಿ ಕತ್ತೆ ಎಳೆಯುವ ವಾಹನದಿಂದ ಯಾವ ಮನುಷ್ಯ ಪ್ರಯಾಣ ಮಾಡುವನೋ ಅವನ ಚಿತೆಯಲ್ಲಿ ಬೇಗನೆ ಹೊಗೆ ಕಾಣಿಸಿಕೊಳ್ಳುವುದು.

ಏತನ್ನಿಮಿತ್ತಂ ದೀನೋಽಹಂ ತನ್ನ ವಃ ಪ್ರತಿಪೂಜಯೇ ।
ಶುಷ್ಯತೀವ ಚ ಮೇ ಕಂಠೋ ನ ಸ್ವಸ್ಥಮಿವ ಮೇ ಮನಃ ॥೧೯॥

ಈ ಕಾರಣದಿಂದ ನಾನು ದುಃಖಿಸುತ್ತಿದ್ದೇನೆ. ನನ್ನನ್ನು ಉಲ್ಲಾಸಪಡಿಸುವ ನಿಮ್ಮ ಯಾವ ಪ್ರಯತ್ನವನ್ನು ಅಭಿನಂದಿಸುತ್ತಿಲ್ಲ. ನನಗೆ ಗಂಟಲು ಒಣಗುತ್ತಿದೆ. ಮನಸ್ಸು ಅಸ್ವಸ್ಥವಾಗಿದೆ.

ನ ಪಶ್ಯಾಮಿ ಭಯಸ್ಥಾನಂ ಭಯಂ ಚೈವೋಪಧಾರಯೇ ।
ಭ್ರಷ್ಟಶ್ಚ ಸ್ವರಯೋಗೋ ಮೇ ಛಾಯಾ ಚೋಪಹತಾ ಮಮ
ಜುಗುಪ್ಸನ್ನಿವ ಚಾತ್ಮಾನಂ ನ ಚ ಪಶ್ಯಾಮಿ ಕಾರಣಮ್ ॥೨೦॥

ಭಯ ಕಾರಣವೇನೆಂದು ಅರಿಯೆ ಆದರೂ ಭಯಪಡುತ್ತಿದ್ದೇನೆ. ನನ್ನ ಕಂಠಧ್ವನಿ ಕುಂಠಿತವಾಗಿದೆ. ಮೈಕಾಂತಿ ಮಂಕಾಗುತ್ತಿದೆ. ನನ್ನ ಬಗ್ಗೆ ಬೇಸತ್ತಿದ್ದೇನೆ. ಅದಕ್ಕೆ ಕಾರಣವನ್ನರಿಯೆ.

ಇಮಾಂ ಹಿ ದುಃಸ್ವಪ್ನಗತಿಂ ನಿಶಮ್ಯ ತಾಂ
ಅನೇಕರೂಪಾಮವಿತರ್ಕಿತಾಂ ಪುರಾ ।
ಭಯಂ ಮಹತ್ತದ್ಧೃದಯಾನ್ನ ಯಾತಿ ಮೇ
ವಿಚಿಂತ್ಯ ರಾಜಾನಮಚಿಂತ್ಯದರ್ಶನಮ್ ॥೨೧॥

ಹಿಂದೆ ಎಂದೂ ಆಲೋಚನೆ ಮಾಡದಿದ್ದ ನಾನಾ ಬಗೆಯ ಈ ಸ್ವಪ್ನವನ್ನು ಕಂಡು ಮಹತ್ತಾದ ಭಯವು ನನ್ನೆದೆಯಿಂದ ಹೊರಗೆ ಹೋಗುತ್ತಿಲ್ಲ. ರಾಜನ ಅಚಿಂತ್ಯ-ದರ್ಶನ ನನಗೆ ಲಭಿಸುವುದೆ ಇಲ್ಲವೆ ಎಂಬ ಚಿಂತೆ ನನಗಾಗಿದೆ.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಅರವತ್ತೊಂಬತ್ತನೇ ಸರ್ಗ ಮುಗಿಯಿತು.

❖

ಸಪ್ತತಿತಮಃ ಸರ್ಗಃ

ಸರ್ಗ – 70

ಭರತನು ಅಯೋಧ್ಯೆಗೆ ಹೋಗುವುದು.

ಭರತೇ ಬ್ರುವತಿ ಸ್ವಪ್ನಂ ದೂತಾಸ್ತೇ ಕ್ಲಾಂತವಾಹನಾಃ ।
ಪ್ರವಿಶ್ಯಾಸಹ್ಯಪರಿಖಂ ರಮ್ಯಂ ರಾಜಗೃಹಂ ಪುರಮ್ ॥೧॥

ಸಮಾಗಮ್ಯ ಚ ರಾಜ್ಞಾ ಚ ರಾಜಪುತ್ರೇಣ ಚಾರ್ಚಿತಾಃ ।
ರಾಜ್ಞಃ ಪಾದೌ ಗೃಹೀತ್ವಾ ತು ತಮೂಚುರ್ಭರತಂ ವಚಃ ॥೨॥

ಭರತನು ಸ್ನೇಹಿತರಿಗೆ ಸ್ವಪ್ನದ ಬಗ್ಗೆ ಹೇಳುತ್ತಿದ್ದಾಗ ಅಯೋಧ್ಯೆಯ ದೂತರು ಬಳಲಿದ್ದ ಕುದುರೆಗಳೊಡನೆ ಅಭೇದ್ಯವಾದ ಕೋಟೆಯುಳ್ಳ ರಾಜಗೃಹ ಪಟ್ಟಣವನ್ನು ಸೇರಿ ರಾಜಾ ಅಶ್ವಪತಿಯನ್ನೂ ರಾಜಕುಮಾರ ಯುಧಾಜಿತನನ್ನೂ ಬೆಟ್ಟಿಮಾಡಿ ಅವರಿಂದ ಸತ್ಕಾರ ಪಡೆದರು. ಬಳಿಕ ರಾಜಾ ಭರತನ ಕಾಲುಮುಟ್ಟಿ ಅವನಿಗೆ ಹೇಳಿದರು.

ಪುರೋಹಿತಸ್ತ್ವಾಂ ಕುಶಲಂ ಪ್ರಾಹ ಸರ್ವೇ ಚ ಮಂತ್ರಿಣಃ ।
ತ್ವರಮಾಣಶ್ಚ ನಿರ್ಯಾಹಿ ಕೃತ್ಯಮಾತ್ಯಯಿಕಂ ತ್ವಯಾ ॥೩॥

ಪುರೋಹಿತನೂ ಎಲ್ಲ ಮಂತ್ರಿಗಳೂ ನಿನ್ನ ಕುಶಲವನ್ನು ವಿಚಾರಿಸುತ್ತಿದ್ದಾರೆ. ನೀನೀಗ ಬೇಗನೆ ಅಯೋಧ್ಯೆಗೆ ಹೊರಡು. ನಿನ್ನಿಂದ ಒಂದು ಅವಶ್ಯ ಕಾರ್ಯವಾಗಬೇಕಿದೆ.

ಇಮಾನಿ ಚ ಮಹಾರ್ಹಾಣಿ ವಸ್ತ್ರಾಣ್ಯಾಭರಣಾನಿ ಚ ।
ಪ್ರತಿಗೃಹ್ಯ ವಿಶಾಲಾಕ್ಷ ಮಾತುಲಸ್ಯ ಚ ದಾಪಯ ॥೪॥

ಈ ಬೆಲೆ ಬಾಳುವ ವಸ್ತ್ರಾಭರಣಗಳನ್ನು ಸ್ವೀಕರಿಸಿ ತಾತನಿಗೂ ಸೋದರ-ಮಾವನಿಗೂ, ಉಡುಗೊರೆಯಾಗಿ ಕೊಡಿಸು.

ಅತ್ರ ವಿಂಶತಿಕೋಟ್ಯಸ್ತು ನೃಪತೇರ್ಮಾತುಲಸ್ಯ ತೇ ।
ದಶ ಕೋಟ್ಯಸ್ತು ಸಂಪೂರ್ಣಾಸ್ತಥೈವ ಚ ನೃಪಾತ್ಮಜ ॥೫॥

ರಾಜಕುಮಾರ, ಇಲ್ಲಿ ಇಪ್ಪತ್ತು ಕೋಟಿ ವರಹ ಮೌಲ್ಯದ ವಸ್ತುಗಳನ್ನೂ ಪೂರ್ತಿ-ಯಾಗಿ ರಾಜನಿಗೂ ಹತ್ತುಕೋಟಿ ವರಹ ಮೌಲ್ಯದ ವಸ್ತುಗಳನ್ನು ಪೂರ್ತಿಯಾಗಿ ಸೋದರಮಾವನಿಗೂ ಕೊಡಿಸು.

ಪ್ರತಿಗೃಹ್ಯ ತು ತತ್ಸರ್ವಂ ಸ್ವನುರಕ್ತಃ ಸುಹೃಜ್ಜನೇ ।
ದೂತಾನುವಾಚ ಭರತಃ ಕಾಮ್ಯೈಃ ಸಂಪ್ರತಿಪೂಜ್ಯ ತಾನ್ ॥೬॥

ಭರತನು ಆ ಎಲ್ಲ ವಸ್ತುಗಳನ್ನು ಸ್ವೀಕರಿಸಿದ. ಬಂಧುಜನರಲ್ಲಿ ಬಹಳ ಅನುರಕ್ತ-ನಾದ ಭರತನು ಆ ದೂತರನ್ನು ಅಭೀಷ್ಟವಸ್ತುಗಳಿಂದ ಸತ್ಕರಿಸಿ ನುಡಿದ.

ಕಚ್ಚಿತ್ ಸ ಕುಶಲೀ ರಾಜಾ ಪಿತಾ ದಶರಥೋ ಮಮ ।
ಕಚ್ಚಿಚ್ಚಾರೋಗತಾ ರಾಮೇ ಲಕ್ಷ್ಮಣೇ ವಾ ಮಹಾತ್ಮನಿ ॥೭॥

ನಮ್ಮ ಪಿತ ರಾಜಾ ದಶರಥ ಕುಶಲಿಯಾಗಿರುವನೆ? ಮಹಾತ್ಮ ರಾಮ ಮತ್ತು ಲಕ್ಷ್ಮಣರು ನಿರೋಗಿಗಳಾಗಿರುವರೆ?

ಆರ್ಯಾ ಚ ಧರ್ಮನಿರತಾ ಧರ್ಮಜ್ಞಾ ಧರ್ಮದರ್ಶಿನೀ ।
ಅರೋಗಾ ಚಾಪಿ ಕೌಸಲ್ಯಾ ಮಾತಾ ರಾಮಸ್ಯ ಧೀಮತಃ ॥೮॥

ಧರ್ಮನಿರತಳಾದ ಧರ್ಮಜ್ಞಳಾದ ಎಲ್ಲರಲ್ಲಿಯೂ ಧರ್ಮವನ್ನೇ ಕಾಣುವ ಪೂಜ್ಯಳಾದ ಧೀಮಂತನಾದ ರಾಮನ ಮಾತೆ ಕೌಸಲ್ಯೆಯು ನಿರೋಗಿಯಾಗಿರುವಳೆ?

ಕಚ್ಚಿತ್ ಸುಮಿತ್ರಾ ಧರ್ಮಜ್ಞಾ ಜನನೀ ಲಕ್ಷ್ಮಣಸ್ಯ ಯಾ ।
ಶತ್ರುಘ್ನಸ್ಯ ಚ ವೀರಸ್ಯ ಸಾರೋಗಾ ಚಾಪಿ ಮಧ್ಯಮಾ ॥೯॥

ಧರ್ಮಜ್ಞಳಾದ ಸುಮಿತ್ರೆ ವೀರ ಲಕ್ಷ್ಮಣ ಶತ್ರುಘ್ನರ ತಾಯಿ, ನನ್ನ ನಡುತಾಯಿ ನಿರೋಗಿಯಾಗಿರುವಳೆ?

ಆತ್ಮಕಾಮಾ ಸದಾ ಚಂಡೀ ಕ್ರೋಧನಾ ಪ್ರಾಜ್ಞಮಾನಿನೀ ।
ಅರೋಗಾ ಚಾಪಿ ಮೇ ಮಾತಾ ಕೈಕೇಯೀ ಕಿಮುವಾಚ ಹ ॥೧೦॥

ಸ್ವಾರ್ಥಭಾವನೆ ಉಳ್ಳವಳು ಸದಾ ಹಟಮಾರಿ ಕೋಪಿಷ್ಠೆ, ತಾನೇ ಪ್ರಾಜ್ಞಳೆಂದು-ಕೊಳ್ಳುವಳು ನನ್ನ ತಾಯಿ ಕೈಕೇಯಿ ನೀರೋಗಿಯಾಗಿರುವಳೆ? ಅವಳು ಏನು ಹೇಳಿದಳು?

'ದಶರಥನ ಮರಣ ಸೂಚಕವಾದ ದುಃಸ್ವಪ್ನವನ್ನು ಕಂಡೆ. ದೂತರೂ ಬಂದು ನನ್ನಿಂದ ಅವಶ್ಯವಾಗಬೇಕಿದ್ದ ಕಾರ್ಯವಿದೆ ಎನ್ನುತ್ತಿದ್ದಾರೆ. ಅದರಿಂದ ನನ್ನ ತಾಯಿಯ ದುಷ್ಟಸ್ವಭಾವವೇ ದಶರಥನ ಮರಣಕ್ಕೆ ಕಾರಣವಿರಬಹುದು' ಎಂದು

ಭರತ ಊಹಿಸಿದ್ದಾನೆ. ಅದರಿಂದ 'ಅವಳು ಏನು ಹೇಳಿದಳು?' ಎಂದು ಕೇಳುತ್ತಿದ್ದಾನೆ.

ಏವಮುಕ್ತಾಸ್ತು ತೇ ದೂತಾ ಭರತೇನ ಮಹಾತ್ಮನಾ ।
ಊಚುಃ ಸಪ್ರಶ್ರಯಂ ವಾಕ್ಯಮಿದಂ ತಂ ಭರತಂ ತದಾ ॥೧೧॥

ಮಹಾತ್ಮ ಭರತ ಹೀಗೆ ಹೇಳಿದಾಗ ಆ ದೂತರು ವಿನಯದಿಂದ ಸಂಕ್ಷೇಪವಾಗಿ ಹೇಳಿದರು.

ಕುಶಲಾಸ್ತೇ ನರವ್ಯಾಘ್ರ ಯೇಷಾಂ ಕುಶಲಮಿಚ್ಛಸಿ ।
ಶ್ರೀಶ್ಚ ತ್ವಾಂ ವೃಣುತೇ ಪದ್ಮಾ ಯುಜ್ಯತಾಂ ಚಾಪಿ ತೇ ರಥಃ ॥೧೨॥

ಪುರುಷೋತ್ತಮನೆ, ನೀನು ಯಾರ ಕುಶಲವನ್ನು ಕೇಳಿದೆಯೋ ಅವರು ಕುಶಲಿಗಳು. ಪದ್ಮಹಸ್ತೆಯಾದ ಶ್ರೀದೇವಿ ನಿನ್ನನ್ನು ವರಿಸುತ್ತಾಳೆ. ಅಂದರೆ ನಿನಗೆ ಶುಭವಾಗುವುತ್ತದೆ. ಪ್ರಯಾಣಕ್ಕೆ ನಿನ್ನ ರಥ ಸನ್ನದ್ಧವಾಗಲಿ.

ಭರತಶ್ಚಾಪಿ ತಾನ್ ದೂತಾನೇವಮುಕ್ತೋಽಭ್ಯಭಾಷತ ।
ಆಪೃಚ್ಛೇಽಹಂ ಮಹಾರಾಜಂ ದೂತಾಃ ಸಂತ್ವರಯಂತಿ ಮಾಮ್ ॥೧೩॥

ದೂತರು ಹೀಗೆ ಹೇಳಿದಾಗ ಭರತನು ಅವರಿಗೆ ಹೇಳಿದ— 'ದೂತರು ನನ್ನನ್ನು ಅಯೋಧ್ಯೆಗೆ ಪ್ರಯಾಣ ಮಾಡಲು ಅವಸರಪಡಿಸುತ್ತಿದ್ದಾರೆ' ಎಂದು ನಾನು ಮಹಾರಾಜರಿಗೆ ಹೇಳಿ ಅನುಜ್ಞೆಯನ್ನು ಪಡೆಯುತ್ತೇನೆ' ಎಂದು.

ಏವಮುಕ್ತ್ವಾ ತು ತಾನ್ ದೂತಾನ್ ಭರತಃ ಪಾರ್ಥಿವಾತ್ಮಜಃ ।
ದೂತೈಃ ಸಂಚೋದಿತೋ ವಾಕ್ಯಂ ಮಾತಾಮಹಮುವಾಚ ಹ ॥೧೪॥

ದೂತರು ಭರತನಿಗೆ 'ಬೇಗನೆ ಅಯೋಧ್ಯೆಗೆ ಪ್ರಯಾಣ ಮಾಡೆಂ'ದು ಪ್ರೇರಿಸಿ-ದಾಗ ದಶರಥಕುಮಾರನಾದ ಭರತನು ಆ ದೂತರಿಗೆ 'ಹಾಗೇ ಆಗಲಿ' ಎಂದು ಹೇಳಿ ತಾತನ ಮುಂದೆ ಹೀಗೆ ಹೇಳಿದ—

ರಾಜನ್ ಪಿತುರ್ಗಮಿಷ್ಯಾಮಿ ಸಕಾಶಂ ದೂತಚೋದಿತಃ ।
ಪುನರಪ್ಯಹಮೇಷ್ಯಾಮಿ ಯದಾ ಮೇ ತ್ವಂ ಸ್ಮರಿಷ್ಯಸಿ ॥೧೫॥

'ರಾಜನೆ, ದೂತರ ಪ್ರೇರಣೆಯಿಂದ ನಾನು ಈಗ ಪಿತನ ಬಳಿಗೆ ಹೋಗುತ್ತೇನೆ. ನೀನು ನನ್ನನ್ನು ಯಾವಾಗ ಸ್ಮರಿಸುವೆಯೋ ಆಗ ನಾನು ಪುನಃ ಬರುತ್ತೇನೆ.

ಭರತೇನೈವಮುಕ್ತಸ್ತು ನೃಪೋ ಮಾತಾಮಹಸ್ತದಾ ।
ತಮುವಾಚ ಶುಭಂ ವಾಕ್ಯಂ ಶಿರಸ್ಯಾಘ್ರಾಯ ರಾಘವಮ್ ॥೧೬॥

ಭರತ ಹೀಗೆ ಹೇಳಿದಾಗ ರಾಜನಾದ ತಾತನು ಭರನ ನೆತ್ತಿಯನ್ನು ಆಘ್ರಾಣಿಸಿ ಸವಿ ಮಾತನ್ನಾಡಿದ.

ಗಚ್ಛ ತಾತಾನುಜಾನೇ ತ್ವಾಂ ಕೈಕೇಯೀ ಸುಪ್ರಜಾಸ್ತ್ವಯಾ ।
ಮಾತರಂ ಕುಶಲಂ ಬ್ರೂಯಾಃ ಪಿತರಂ ಚ ಪರಂತಪ ॥೧೭॥

'ಮಗು, ಹೋಗು. ನಾನು ಅನುಜ್ಞೆ ನೀಡುತ್ತೇನೆ. ನಿನ್ನಿಂದ ಕೈಕೇಯಿ 'ಸುಪುತ್ರವತಿ' ಎನಿಸಿದಳು. ಮಾತೆಗೂ ಪಿತನಿಗೂ ಅವರ ಕುಶಲವನ್ನು ಕೇಳಿದೆನೆಂದು ಹೇಳು'.

ಪುರೋಹಿತಂ ಚ ಕುಶಲಂ ಯೇ ಚಾನ್ಯೇ ದ್ವಿಜಸತ್ತಮಾಃ ।
ತೌ ಚ ತಾತ ಮಹೇಷ್ವಾಸೌ ಭ್ರಾತರೌ ರಾಮಲಕ್ಷ್ಮಣೌ ॥೧೮॥

'ಪುರೋಹಿತರಾದ ವಸಿಷ್ಠರಿಗೂ ಅಲ್ಲಿ ಇರುವ ಇತರ ಬ್ರಾಹ್ಮಣೋತ್ತಮರಿಗೂ ಮಹಾ ಬಿಲ್ಲುಗಾರರಾದ ರಾಮಲಕ್ಷ್ಮಣ ಸೋದರರಿಗೂ ಕುಶಲವನ್ನು ಕೇಳಿದೆನೆಂದು ಹೇಳು'.

ತಸ್ಮೈ ಹಸ್ತ್ಯುತ್ತಮಾಂಶ್ಚಿತ್ರಾನ್ ಕಂಬಲಾನಜಿನಾನಿ ಚ ।
ಅಭಿಸತ್ಕೃತ್ಯ ಕೈಕೇಯೋ ಭರತಾಯ ಧನಂ ದದೌ ॥೧೯॥

ಕೈಕೇಯರಾಜನು ಹೀಗೆ ಹೇಳಿ ಭರತನಿಗೆ ಉತ್ತಮ ಆನೆಗಳನ್ನು ಸುಂದರವಾದ ರತ್ನಗಂಬಳಿ ಅಜಿನಗಳನ್ನೂ ಕೊಟ್ಟು ಸತ್ಕಾರಪೂರ್ವಕವಾಗಿ ಧನವನ್ನೂ ನೀಡಿದ.

ರುಕ್ಮನಿಷ್ಕಸಹಸ್ರೇ ದ್ವೇ ಷೋಡಶಾಶ್ವಶತಾನಿ ಚ ।
ಸತ್ಕೃತ್ಯ ಕೈಕಯೀಪುತ್ರಂ ಕೇಕಯೋ ಧನಮಾದಿಶತ್ ॥೨೦॥

ಎರಡುಸಾವಿರ ಚಿನ್ನದ ಕಂಠಾಭರಣಗಳನ್ನು ಹದಿನಾರುನೂರು ಕುದುರೆಗಳನ್ನೂ ಸತ್ಕಾರಪೂರ್ವಕವಾಗಿ ಭರತನಿಗೆ ಕೇಕಯರಾಜ ನೀಡಿದ. ಧನವನ್ನೂ ನೀಡಿದ.

ತಥಾಮಾತ್ಯಾನಭಿಪ್ರೇತಾನ್ ವಿಶ್ವಾಸ್ಯಾಂಶ್ಚ ಗುಣಾನ್ವಿತಾನ್ ।
ದದಾವಶ್ವಪತಿಃ ಕ್ಷಿಪ್ರಂ ಭರತಾಯಾನುಯಾಯಿನಃ ॥೨೧॥

ಇಷ್ಟರಾದ ವಿಶ್ವಾಸಯೋಗ್ಯರಾದ ಗುಣವಂತರಾದ 'ಅಮಾತ್ಯ'ರನ್ನೂ ಅಂದರೆ ಅಂಗರಕ್ಷಕರನ್ನು ಭರತನಿಗೆ ಅನುಯಾಯಿಗಳಾಗಿ ಬೇಗನೆ ಅಶ್ವಪತಿರಾಜ ನೀಡಿದ.

ಐರಾವತಾನೈಂದ್ರಶಿರಾನ್ನಾಗಾಂಶ್ಚ ಪ್ರಿಯದರ್ಶನಾನ್ ।
ಖರಾನ್ ಶೀಘ್ರಾನ್ ಸುಸಂಯುಕ್ತಾನ್ ಮಾತುಲೋಽಸ್ಮೈ ಧನಂ ದದೌ ॥

ಸೋದರಮಾವ ಯುಧಾಜಿತನು ಭರತನಿಗೆ ಐರಾವತ ಕುಲದಲ್ಲಿ ಇಂದ್ರ ಶಿರಪರ್ವತದಲ್ಲಿ ಜನಿಸಿದ ಸುಂದರ ಆನೆಗಳನ್ನೂ ವೇಗಉಳ್ಳ ಪಳಗಿದ ಕತ್ತೆಗಳನ್ನೂ ಧನವನ್ನೂ ನೀಡಿದ.

ಅಂತಃಪುರೇಽತಿಸಂವೃದ್ಧಾನ್ ವ್ಯಾಘ್ರವೀರ್ಯಬಲಾನ್ವಿತಾನ್ ।
ದಂಷ್ಟ್ರಾಯುಧಾನ್ ಮಹಾಕಾಯನ್ ಶುನಶ್ಚೋಪಾಯನಂ ದದೌ ॥೨೩

ಅಂತಃಪುರದಲ್ಲಿ ದಷ್ಟಪುಷ್ಟವಾಗಿ ಬೆಳೆದಿದ್ದ, ಹುಲಿಯಂತೆ ಬಲವೀರ್ಯ ಯುಕ್ತವಾದ ಕೋರೆಹಲ್ಲುಗಳೆಂಬ ಆಯುಧಉಳ್ಳ ಎತ್ತರದ ಬೇಟೆ ನಾಯಿಗಳನ್ನು ಉಡುಗೊರೆಯಾಗಿ ನೀಡಿದ.

ಸ ದತ್ತಂ ಕೇಕಯೇಂದ್ರೇಣ ಧನಂ ತನ್ನಾಭ್ಯನಂದತ ।
ಭರತಃ ಕೈಕಯೀಪುತ್ರೋ ಗಮನತ್ವರಯಾ ತದಾ ॥೨೪॥

ಕೈಕೇಯೀ ಪುತ್ರ ಭರತನು ಕೇಕಯರಾಜನಿತ್ತ ಈ ಯಾವ ಸಂಪತ್ತನ್ನೂ ಇಷ್ಟ ಪಡಲಿಲ್ಲ. ಏಕೆಂದರೆ ಆಗ ಅವನು ಅಯೋಧ್ಯೆಗೆ ಹೊರಡುವ ಅವಸರದಲ್ಲಿದ್ದ.

ಬಭೂವ ಹ್ಯಸ್ಯ ಹೃದಯೇ ಚಿಂತಾ ಸುಮಹತೀ ತದಾ ।
ತ್ವರಯಾ ಚಾಪಿ ದೂತಾನಾಂ ಸ್ವಪ್ನಸ್ಯಾಪಿ ಚ ದರ್ಶನಾತ್ ॥೨೫॥

ಭರತನ ಮನಸ್ಸಿನಲ್ಲಿ ಬಲು ದೊಡ್ಡ ಚಿಂತೆ ಆವರಿಸಿತ್ತು. ಹಿಂದಿನ ರಾತ್ರಿಯಲ್ಲಿ ಕಂಡ ಕೆಟ್ಟ ಕನಸು ಮತ್ತು ಅದರ ಬೆನ್ನಲ್ಲೇ ಅಯೋಧ್ಯೆಯಿಂದ ದೂತರು ಬಂದು ಪ್ರಯಾಣಕ್ಕೆ ಅವಸರಪಡಿಸಿದುದು ಇದಕ್ಕೆ ಕಾರಣವಾಗಿತ್ತು.

ಸ ಸ್ವವೇಶ್ಮ ವ್ಯತಿಕ್ರಮ್ಯ ನರನಾಗಾಶ್ವಸಂವೃತಮ್ ।
ಪ್ರಪೇದೇ ಸುಮಹಚ್ಛ್ರೀಮಾನ್ ರಾಜಮಾರ್ಗಮನುತ್ತಮಮ್ ॥೨೬॥

ಬಹಳ ಕಾಂತಿಉಳ್ಳ ಭರತನು ತನ್ನ ಮನೆಯಿಂದ ಹೊರಟು ಪದಾತಿ ಗಜ ಅಶ್ವ ಸೈನ್ಯಯುಕ್ತವಾದ ಅತ್ಯುತ್ತಮವಾದ ರಾಜಮಾರ್ಗವನ್ನು ಸೇರಿದ.

ಅಭ್ಯತೀತ್ಯ ತತೋಽಪಶ್ಯದಂತಃಪುರಮನುತ್ತಮಮ್ ।
ತತಸ್ತದ್ಭರತಃ ಶ್ರೀಮಾನಾವಿವೇಶಾನಿವಾರಿತಃ ॥೨೭॥

ರಾಜಮಾರ್ಗವನ್ನು ದಾಟಿ ಕಾಂತಿಯುಕ್ತನಾದ ಭರತನು ಅಂತಃಪುರವನ್ನು ಕಂಡ. ಯಾರ ತಡೆಯೂ ಇಲ್ಲದೆ ಒಳಗೆ ಪ್ರವೇಶಿಸಿದ.

ಸ ಮಾತಾಮಹಮಾಪೃಚ್ಛ್ಯ ಮಾತುಲಂ ಚ ಯುಧಾಜಿತಮ್ ।
ರಥಮಾರುಹ್ಯ ಭರತಃ ಶತ್ರುಘ್ನಸಹಿತೋ ಯಯೌ ॥೨೮॥

ತಾತನನ್ನೂ ಸೋದರಮಾವನಾದ ಯುಧಾಜಿತನನ್ನೂ ಕೇಳಿ ಅನುಜ್ಞೆ ಪಡೆದು ಭರತನು ಶತ್ರುಘ್ನ ಸಹಿತನಾಗಿ ರಥವೇರಿ ಪ್ರಯಾಣ ಮಾಡಿದ.

ರಥಾನ್ ಮಂಡಲಚಕ್ರಾಂಶ್ಚ ಯೋಜಯಿತ್ವಾ ಪರಶ್ಶತಮ್ ।
ಉಷ್ಟ್ರಗೋಽಶ್ವಖರೈರ್ಯುಕ್ತ್ವಾ ಭರತಂ ಯಾಂತಮನ್ವಯುಃ ॥೨೯॥

ಭರತನು ಹೋಗುವಾಗ, ಅವನ ಹಿಂದೆ, ಭಟರು ಮಂಡಲಚಕ್ರಉಳ್ಳ ನೂರಾರು ರಥಗಳಿಗೆ ಒಂಟೆ ಎತ್ತು ಕುದುರೆ ಕತ್ತೆಗಳನ್ನು ಕಟ್ಟಿ ಹಿಂಬಾಲಿಸಿ ಹೊರಟರು.

ಬಲೇನ ಗುಪ್ತೋ ಭರತೋ ಮಹಾತ್ಮಾ
ಸಹಾರ್ಯಕಸ್ಯಾತ್ಮಸಮೈರಮಾತ್ಯೈಃ ।
ಆದಾಯ ಶತ್ರುಘ್ನಮಪೇತಶತ್ರುಃ
ಗೃಹಾದ್ಯಯೌ ಸಿದ್ಧ ಇವೇಂದ್ರಲೋಕಾತ್ ॥೩೦॥

ತನ್ನ ಸೈನ್ಯ ಮತ್ತು ಯುಧಾಜಿತ ಅಶ್ವಪತಿಗಳ ಸೈನ್ಯಗಳಿಂದ ರಕ್ಷಿತನಾಗಿ ತನಗೆ ಅನುರೂಪರಾದ ಅಂಗರಕ್ಷಕರಿಂದಲೂ ಕೂಡಿಕೊಂಡು ಶತ್ರುರಹಿತನಾದ ಮಹಾತ್ಮ ಭರತನು ಶತ್ರುಘ್ನನನ್ನು ಕರೆದುಕೊಂಡು, ಸಿದ್ಧಪುರುಷನು ಇಂದ್ರಲೋಕದಿಂದ ಹೊರಡುವಂತೆ ಕೇಕಯ ರಾಜನ ಅರಮನೆಯಿಂದ ಹೊರಟ.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಎಪ್ಪತ್ತನೇ ಸರ್ಗ ಮುಗಿಯಿತು.

❖

ಏಕಸಪ್ತತಿಮತಃ ಸರ್ಗಃ

ಸರ್ಗ – 71

ಭರತನು ಅಯೋಧ್ಯೆಗೆ ಬಂದು ಸೇರುವುದು.

ಸ ಪ್ರಾಙ್ಮುಖೋ ರಾಜಗೃಹಾದಭಿನಿರ್ಯಾಯ ರಾಘವಃ ।
ತತಃ ಸುದಾಮಾಂ ದ್ಯುತಿಮಾನ್ ಸಂತೀರ್ಯಾವೇಕ್ಷ್ಯತಾಂ ನದೀಮ್ ॥

ಹ್ಲಾದಿನೀಂ ದೂರಪಾರಾಂ ಚ ಪ್ರತ್ಯಕ್ಸ್ರೋತಸ್ತರಂಗಿಣೀಮ್ ।
ಶತದ್ರುಮತರಚ್ಛ್ರೀಮಾನ್ನದೀಮಿಕ್ಷ್ವಾಕುನಂದನಃ ॥೨॥

ಇಕ್ಷ್ವಾಕು ವಂಶಜನಾದ ಕಾಂತಿಯುಳ್ಳ ಪರಾಕ್ರಮಯುಳ್ಳ ಭರತನು ರಾಜಗೃಹ-ದಿಂದ ಪೂರ್ವಾಭಿಮುಖವಾಗಿ ಹೊರಟು ಸುದಾಮಾ ನದಿಯನ್ನು ನೋಡಿ ದಾಟಿ ವಿಶಾಲವಾಗಿ ಹರಿಯುವ ಹ್ಲಾದಿನೀ ನದಿಯನ್ನೂ ದಾಟಿ, ಪಶ್ಚಿಮವಾಹಿನಿಯಾದ ಶತದ್ರುನದಿಯನ್ನೂ ದಾಟಿದ.

ಏಲಾಧಾನೇ ನದೀಂ ತೀರ್ತ್ವಾ ಪ್ರಾಪ್ಯ ಚಾಪರಪರ್ವತಾನ್ ।
ಶಿಲಾಮಾಕುರ್ವತಿಂ ತೀರ್ತ್ವಾ ಹ್ಯಾಗ್ನೇಯಂ ಶಲ್ಯಕರ್ತನಮ್ ॥೩॥

ಏಲಾಧಾನಗ್ರಾಮದಲ್ಲಿ ನದಿಯನ್ನು ದಾಟಿ ಅಪರಪರ್ವತವೆಂಬ ಗ್ರಾಮವನ್ನು ಸೇರಿ ಶಿಲಾ ಮತ್ತು ಆಕುರ್ವತೀ ನದಿಗಳನ್ನು ದಾಟಿ ಆಗ್ನೇಯದಲ್ಲಿ ಇರುವ ಶಲ್ಯಕರ್ತನ ಗ್ರಾಮವನ್ನು ಸೇರಿದ.

'ಏಲಾಧಾನ ಗ್ರಾಮದಲ್ಲಿರುವ ನದಿ' ಎಂದರೆ, ಆ ನದಿಯ ಹೆಸರೇನು? ಹೇಳಿಲ್ಲ! ಸಂಗ್ರಹರಾಮಾಯಣದಲ್ಲಿ—

ಶತದ್ರು ವೇದಧಾಮಾದಿ ನದೀಸ್ತೀರ್ತ್ವಾಥ ಸತ್ವರಃ । (11.16)

ಎಂದು ಶತದ್ರುನದಿಯನ್ನು ದಾಟಿದ ಬಳಿಕ 'ವೇದಧಾಮಾ' ನದಿಯ ಉಲ್ಲೇಖ ಕಾಣುತ್ತದೆ. ಪ್ರಾಯಃ 'ವೇದಧಾಮಾಂ ನದೀಂತೀರ್ತ್ವಾ' ಎಂದು ಪ್ರಕೃತದಲ್ಲಿ ಪಾಠವಿರಬಹುದು. ಮುಂದೆ ಎಲ್ಲಿಯೂ ವೇದಧಾಮಾ ನದಿಯ ಹೆಸರೇ ವಾಲ್ಮೀಕಿ ರಾಮಾಯಣದಲ್ಲಿ ಬರುವುದಿಲ್ಲ.

ಸತ್ಯಸಂಧಃ ಶುಚಿಃ ಶ್ರೀಮಾನ್ ಪ್ರೇಕ್ಷಮಾಣಃ ಶಿಲಾವಹಾಮ್ ।
ಅತ್ಯಯಾತ್ ಸ ಮಾಹಾಶೈಲಾನ್ ವನಂ ಚೈತ್ರರಥಂ ಪ್ರತಿ ॥೪॥

ಸತ್ಯಸಂಧನೂ ಶುಚಿಯೂ ಕಾಂತಿಉಳ್ಳವನೂ ಆದ ಭರತನು ಶಿಲಾವಹಾ ಎಂಬ ನದಿಯನ್ನು ನೋಡಿ ಮಹಾಪರ್ವತಗಳನ್ನು ದಾಟಿ ಚೈತ್ರರಥವನದ ಕಡೆಗೆ ಪ್ರಯಾಣ ಮಾಡಿದನು.

ಸರಸ್ವತೀಂ ಚ ಗಂಗಾ ಚ ಯುಗ್ಮೇನ ಪ್ರತ್ಯಪದ್ಯತ ।
ಉತ್ತರಾನ್ ವೀರಮತ್ಸ್ಯಾನಾಂ ಭಾರುಂಡಂ ಪ್ರಾವಿಶದ್ವನಮ್ ॥೫॥

ಮುಂದೆ ಅಕ್ಕಪಕ್ಕದಲ್ಲಿ ಜೊತೆಯಾಗಿ ಹರಿಯುತ್ತಿದ್ದ ಸರಸ್ವತೀ ಮತ್ತು ಗಂಗಾ-ನದಿಗಳನ್ನು ಸೇರಿದನು. ವೀರಮತ್ಸ್ಯರ ಉತ್ತರಭಾರುಂಡ ವನವನ್ನು ಸೇರಿದನು.

ವೇಗಿನೀಂ ಚ ಕುಲಿಂಗಾಖ್ಯಾಂ ಹ್ಲಾದಿನೀಂ ಪರ್ವತಾವೃತಾಮ್ ।
ಯಮುನಾಂ ಪ್ರಾಪ್ಯ ಸಂತೀರ್ಣೋ ಬಲಮಾಶ್ವಾಸಯತ್ತದಾ ॥೬॥

ವೇಗಉಳ್ಳ ಆಹ್ಲಾದಜನಕವಾದ ಪರ್ವತಗಳಿಂದ ಆವೃತವಾದ ಕುಲಿಂಗಾ ನದಿಯನ್ನು ದಾಟಿ ಯಮುನಾನದಿಯನ್ನು ಸೇರಿ ದಾಟಿ ಆಯಾಸಗೊಂಡಿದ್ದ ಸೈನ್ಯವನ್ನು ಸಂತೈಸಿದನು.

ಶೀತೀಕೃತ್ಯ ತು ಗಾತ್ರಾಣಿ ಕ್ಲಾಂತಾನಾಶ್ವಸ್ಯ ವಾಜಿನಃ ।
ತತ್ರ ಸ್ನಾತ್ವಾ ಚ ಪೀತ್ವಾ ಚ ಪ್ರಾಯಾದಾದಾಯ ಚೋದಕಮ್ ॥೭॥

ಆಯಾಸಗೊಂಡ ಕುದುರೆಗಳ ಮೈತೊಳೆದು ಸಂತೈಸಿ, ಸ್ನಾನಪಾನಗಳನ್ನು ಮಾಡಿ ಕುಡಿಯುವ ನೀರನ್ನು ಸಂಗ್ರಹಿಸಿ ಮುಂದೆ ಹೊರಟನು.

ರಾಜಪುತ್ರೋ ಮಹಾರಣ್ಯಮನಭೀಕ್ಷ್ಣೋಪಸೇವಿತಮ್ ।
ಭದ್ರೋ ಭದ್ರೇಣ ಯಾನೇನ ಮಾರುತಃ ಖಮಿವಾತ್ಯಯಾತ್ ॥೮॥

ಮಂಗಳಕರನಾದ ರಾಜಪುತ್ರ ಭರತನು ಹೆಚ್ಚು ಜನಸಂಚಾರವಿಲ್ಲದ ಮಹಾ ಅರಣ್ಯಮಾರ್ಗದಲ್ಲಿ ಮಂಗಳಕರವಾದ ರಥದಿಂದ ಆಕಾಶದಲ್ಲಿ ಗಾಳಿ ಸಂಚರಿಸು-ವಂತೆ ಸಂಚರಿಸಿದ.

ಭಾಗೀರಥೀಂ ದುಷ್ಪ್ತರಾಮಂಶುಧಾನೇ ಮಹಾನದೀಮ್ ।
ಉಪಾಯಾದ್ರಾಘವಸ್ತೂರ್ಣಂ ಪ್ರಾಗ್ವಟೇ ವಿಶ್ರುತೇ ಪುರೇ ॥೯॥

ಅಂಶುಧಾನ ನಗರದಲ್ಲಿ ಭಾಗೀರಥೀ ಮಹಾನದಿಯು ದಾಟಲು ಅಸಾಧ್ಯ ಎಂದು ಬಗೆದು ಪ್ರಸಿದ್ಧವಾದ ಪ್ರಾಗ್ವಟ ಎಂಬ ಪಟ್ಟಣದಲ್ಲಿ ಬಂದು ಸೇರಿದ.

ಸ ಗಂಗಾಂ ಪ್ರಾಗ್ವಟೇ ತೀರ್ತ್ವಾ ಸಮಾಯಾತ್ ಕುಟಿಕೋಷ್ಠಿಕಾಮ್ ।
ಸಬಲಸ್ತಾಂ ಸ ತೀರ್ತ್ವಾಥ ಸಮಾಯಾದ್ಧರ್ಮವರ್ಧನಮ್ ॥೧೦॥

ಪಾಗ್ವಟದಲ್ಲಿ ಗಂಗಾನದಿಯನ್ನು ದಾಟಿ ಕುಟಿಕೋಷ್ಠಿಕಾ ನದಿಯನ್ನು ಸೇರಿದ. ಸೈನ್ಯಸಮೇತನಾಗಿ ಆ ನದಿಯನ್ನು ದಾಟಿ ಧರ್ಮವರ್ಧನ ನಗರವನ್ನು ಸೇರಿದ.

ತೋರಣಂ ದಕ್ಷಿಣಾರ್ಧೇನ ಜಂಬೂಪ್ರಸ್ಥಮುಪಾಗಮತ್ ।
ವರೂಥಂ ಚ ಯಯೌ ರಮ್ಯಂ ಗ್ರಾಮಂ ದಶರಥಾತ್ಮಜಃ ॥೧೧॥

ತೋರಣ ಗ್ರಾಮಕ್ಕೆ ಹೋಗಿ ಅಲ್ಲಿ ದಕ್ಷಿಣ ಭಾಗದಲ್ಲಿ ಪ್ರಯಾಣಮಾಡಿ ಜಂಬೂಪ್ರಸ್ಥ ನಗರವನ್ನು ಸೇರಿದ. ಅಲ್ಲಿಂದ ಹೊರಟು ರಮ್ಯವಾದ ವರೂಥ ಗ್ರಾಮವನ್ನು ಸೇರಿದ.

ತತ್ರ ರಮ್ಯೇ ವನೇ ವಾಸಂ ಕೃತ್ವಾಸೌ ಪ್ರಾಙ್ಮುಖೋ ಯಯೌ ।
ಉದ್ಯಾನಮುಜ್ಜಿಹಾನಾಯಾಃ ಪ್ರಿಯಕಾ ಯತ್ರ ಪಾದಪಾಃ ॥೧೨॥

ಅಲ್ಲಿ ರಮ್ಯವಾದ ವನದಲ್ಲಿ ವಾಸಮಾಡಿ ಪೂರ್ವಾಭಿಮುಖವಾಗಿ ಪ್ರಯಾಣ ಮಾಡಿದ. ಉಜ್ಜಿಹಾನಾ ನಗರದ ಉದ್ಯಾನವನ್ನು ಸೇರಿದ. ಅಲ್ಲಿ ಮರಗಳು ಹೆಚ್ಚಾಗಿ ಕದಂಬ ವೃಕ್ಷಗಳೆ.

ಸಾಲಾಂಸ್ತು ಪ್ರಿಯಕಾನ್ ಪ್ರಾಪ್ಯ ಶೀಘ್ರಾನಾಸ್ಥಾಯ ವಾಜಿನಃ ।
ಅನುಜ್ಞಾಪ್ಯಾಥ ಭರತೋ ವಾಹಿನೀಂ ತ್ವರಿತೋ ಯಯೌ ॥೧೩॥

ಸಾಲ ಮತ್ತು ಕದಂಬ ವೃಕ್ಷಗಳಿಂದ ತುಂಬಿದ್ದ ಆ ಉದ್ಯಾನಕ್ಕೆ ಹೋದ ಬಳಿಕ ತನ್ನ ರಥಕ್ಕೆ ವೇಗದ ಕುದುರೆಗಳನ್ನು ಹೂಡಿಸಿ, ಅಲ್ಲಿಂದ ಮುಂದೆ ತನ್ನ ದೇಶವೇ ಆಗಿರುವುದರಿಂದ ಏನೂ ಭಯವಿಲ್ಲದೆ ನಿಧಾನವಾಗಿ ಬರುವಂತೆ ಸೈನ್ಯಗಳಿಗೆ ಆಜ್ಞೆ ಮಾಡಿ ತಾನು ವೇಗವಾಗಿ ಮುಂದೆ ಪ್ರಯಾಣ ಮಾಡಿದ.

ವಾಸಂ ಕೃತ್ವಾ ಸರ್ವತೀರ್ಥೇ ತೀರ್ತ್ವಾ ಚೋತ್ತಾನಿಕಾಂ ನದೀಮ್ ।
ಅನ್ಯಾ ನದೀಶ್ಚ ವಿವಿಧಾಃ ಪಾರ್ವತೀಯೈಸ್ತುರಂಗಮೈಃ ॥೧೪॥

ಹಸ್ತಿಪೃಷ್ಠಕಮಾಸಾದ್ಯ ಕುಟಿಕಾಮತ್ಯವರ್ತತ ।
ತತಾರ ಚ ನರವಾಘ್ಫ್ರೋ ಲೌಹಿತ್ಯೇ ಸಿಕತಾವತೀಮ್ ॥೧೫॥

ಸರ್ವತೀರ್ಥ ಗ್ರಾಮದಲ್ಲಿ ತಂಗಿದ್ದು ಉತ್ತಾನಿಕಾ ನದಿಯನ್ನೂ ಬೇರೆ ನಾನಾ ನದಿಗಳನ್ನೂ ದಾಟಿ ಪರ್ವತಪ್ರದೇಶದ ಕುದುರೆಗಳಿಂದ ಮುಂದೆ ಹೋಗಿ ಹಸ್ತಿಪೃಷ್ಠಕ ಗ್ರಾಮದ ಸಮೀಪದಲ್ಲಿ ಕುಟಿಕಾ ನದಿಯನ್ನು ದಾಟಿದ. ಪುರುಷೋತ್ತಮ ಭರತನು ಲೌಹಿತ್ಯನಗರದ ಬಳಿ ಸಿಕತಾವತೀ ನದಿಯನ್ನು ದಾಟಿದ.

ಏಕಸಾಲೇ ಸ್ಥಾಣುಮತೀಂ ವಿನತೇ ಗೋಮತೀಂ ನದೀಮ್ ।
ಕಲಿಂಗನಗರೇ ಚಾಪಿ ಪ್ರಾಪ್ಯ ಸಾಲವನಂ ತದಾ ॥೧೬॥

ಏಕಸಾಲಗ್ರಾಮದಲ್ಲಿ ಸ್ಥಾಣುಮತೀ ನದಿಯನ್ನೂ ವಿನತಗ್ರಾಮದಲ್ಲಿ ಗೋಮತೀ ನದಿಯನ್ನೂ ಕಲಿಂಗನಗರದ ಸಾಲವೃಕ್ಷಗಳ ವನವನ್ನು ಬೇಗನೆ ಸೇರಿದ.

ಭರತಃ ಕ್ಷಿಪ್ರಮಾಗಚ್ಛತ್ ಸುಪರಿಶ್ರಾಂತವಾಹನಃ ।
ವನಂ ಚ ಸಮತೀತ್ಯಾಶು ಶರ್ವರ್ಯಾಮರುಣೋದಯೇ ॥೧೭॥

ಅಯೋಧ್ಯಾಂ ಮನುನಾ ರಾಜ್ಞಾ ನಿರ್ಮಿತಾಂ ಸಂದದರ್ಶ ಹ ।
ತಾಂ ಪುರೀಂ ಪುರುಷವ್ಯಾಘ್ರಃ ಸಪ್ತರಾತ್ರೋಷಿತಃ ಪಥಿ ॥೧೮॥

ಅಯೋಧ್ಯಾಮಗ್ರತೋ ದೃಷ್ಟ್ವಾ ಸಾರಥಿಂ ವಾಕ್ಯಮಬ್ರವೀತ್ ।
ಏಷಾ ನಾತಿಪ್ರತೀತಾ ಮೇ ಪುಣ್ಯೋದ್ಯಾನಾ ಯಶಸ್ವಿನೀ ॥೧೯॥

ವಾಹನಗಳು ಬಹಳ ಆಯಾಸಗೊಂಡಿದ್ದರೂ ರಾತ್ರಿಯಲ್ಲಿಯೇ ಬೇಗನೆ ಸಾಲವನವನ್ನು ದಾಟಿ ರಾತ್ರಿಯಲ್ಲಿ ಅರುಣೋದಯವಾದಾಗ ಮನು ಮಹಾರಾಜನಿಂದ ನಿರ್ಮಿತವಾದ ಅಯೋಧ್ಯಾನಗರವನ್ನು ಕಂಡನು. ಏಳುದಿನಗಳ ಕಾಲ ಪ್ರಯಾಣ ಮಾಡಿ ಈಗ ಎಂಟನೆ ದಿನ ಮುಂಜಾನೆ ಅಯೋಧ್ಯೆಯನ್ನು ಎದುರಿಗೆ ಕಂಡು ಸಾರಥಿಗೆ ಹೇಳಿದ. ಪುಣ್ಯಕರ ಉದ್ಯಾನವುಳ್ಳ ಸುಪ್ರಸಿದ್ಧವಾದ ಈ ಅಯೋಧ್ಯಾನಗರ ಸಂತಸದಿಂದಿರುವಂತೆ ನನಗೆ ಕಾಣುತ್ತಿಲ್ಲ.

ಅಯೋಧ್ಯಾ ದೃಶ್ಯತೇ ದೂರಾತ್ ಸಾರಥೇ ಪಾಂಡುಮೃತ್ತಿಕಾ ।
ಯಜ್ವಭಿರ್ಗುಣಸಂಪನ್ನೈರ್ಬ್ರಾಹ್ಮಣೈರ್ವೇದಪಾರಗೈಃ ।
ಭೂಯಿಷ್ಠಮೃದ್ಧೈರಾಕೀರ್ಣಾ ರಾಜರ್ಷಿಪರಿಪಾಲಿತಾ । ॥೨೦॥

ಸಾರಥಿ, ಬಿಳಿಬಣ್ಣದ ಅಯೋಧ್ಯೆ ದೂರದಲ್ಲಿ ಕಾಣುತ್ತಿದೆ. ಇದು ಹೆಚ್ಚಾಗಿ ಯಜ್ಞಶೀಲರಾದ ಗುಣಸಂಪನ್ನರಾದ ವೇದಪಾರಂಗತರಾದ ಬ್ರಾಹ್ಮಣರಿಂದ ಮತ್ತು ಧನಿಕರಿಂದ ತುಂಬಿದ್ದು ರಾಜರ್ಷಿಗಳಿಂದ ಪಾಲಿತವಾಗಿದೆ.

ಅಯೋಧ್ಯಾಯಾಂ ಪುರಾ ಶಬ್ದಃ ಶ್ರೂಯತೇ ತುಮುಲೋ ಮಹಾನ್ ।
ಸಮಂತಾನ್ನರನಾರೀಣಾಂ ತಮದ್ಯ ನ ಶೃಣೋಮ್ಯಹಮ್ ॥೨೧॥

ಹಿಂದೆ ಇಲ್ಲಿ ಎಲ್ಲೆಡೆ ನರನಾರಿಯರ ದೊಡ್ಡ ದೊಂಬಿ ಶಬ್ದ ಕೇಳಿ ಬರುತ್ತಿತ್ತು. ಅದು ಈಗ ನನಗೆ ಕೇಳಿಬರುತ್ತಿಲ್ಲ.

ಉದ್ಯಾನಾನಿ ಹಿ ಸಾಯಾಹ್ನೇ ಕ್ರೀಡಿತ್ವೋಪರತೈರ್ನರೈಃ ।
ಸಮಂತಾದ್ವಿಪ್ರಧಾವದ್ಭಿಃ ಪ್ರಕಾಶಂತೇ ಮಮಾನ್ಯದಾ ॥೨೨॥

ಸಾಯಂಕಾಲದಲ್ಲಿ ಇಲ್ಲಿ ಉದ್ಯಾನಗಳಿಗೆ ವಿಹಾರಕ್ಕಾಗಿ ಬಂದು ರಾತ್ರಿವೇಳೆ ವಿಹಾರ ಮಾಡಿ ವಿಶ್ರಾಂತಿ ಪಡೆದು ಮುಂಜಾನೆ ಈ ವೇಳೆಗೆ ಸರಿಯಾಗಿ ತಮ್ಮ ಮನೆಗಳಿಗೆ ಹೋಗುವ ಕಾಮಿಗಳು ಎಲ್ಲೆಡೆ ಓಡಾಡುವುದು ಹಿಂದೆ ಕಂಡು ಬರುತ್ತಿತ್ತು.

ತಾನ್ಯದ್ಯಾನುರುದಂತೀವ ಪರಿತ್ಯಕ್ತಾನಿ ಕಾಮಿಭಿಃ ।
ಅರಣ್ಯಭೂತೇವ ಪುರೀ ಸಾರಥೇ ಪ್ರತಿಭಾತಿ ಮೇ ॥೨೩॥

ಈಗ ಸಾರಥಿಯೆ, ಅಯೋಧ್ಯೆ ಹಾಗೆ ಇಲ್ಲ, ದೊಡ್ಡ ಅರಣ್ಯದಂತಿದೆ. ಕಾಮಿ-ಗಳಿಂದ ಪರಿತ್ಯಕ್ತವಾಗಿ ಅಳುತ್ತಿರುವಂತೆ ನನಗೆ ಕಾಣುತ್ತಿದೆ.

ನ ಹ್ಯತ್ರ ಯಾನೈರ್ದೃಶ್ಯಂತೇ ನ ಗಜೈರ್ನ ಚ ವಾಜಿಭಿಃ ।
ನಿರ್ಯಾಂತೋ ವಾಭಿಯಾಂತೋ ವಾ ನರಮುಖ್ಯಾ ಯಥಾಪುರಮ್ ॥

ಇಲ್ಲಿ ಈಗ ಪಲ್ಲಕ್ಕಿ ಆನೆ ಕುದುರೆಗಳಿಂದ ಹಿಂದಿನಂತೆ ಶ್ರೀಮಂತ ಜನರು ಹೋಗುವುದು ಬರುವುದು ಕಾಣುತ್ತಿಲ್ಲ.

ಉದ್ಯಾನಾನಿ ಪುರಾ ಭಾಂತಿ ಮತ್ತಪ್ರಮುದಿತಾನಿ ಚ ।
ಜನಾನಾಂ ರತಿಸಂಯೋಗೇಷ್ವತ್ಯಂತಂ ಗುಣವಂತಿ ಚ ॥೨೫॥

ಹಿಂದೆ ಇಲ್ಲಿ ಉದ್ಯಾನಗಳು ಮದಿಸಿ ಉಲ್ಲಾಸಗೊಂಡು ಶೋಭಿಸಿದ್ದುವು. ಕಾಮಿ ಜನರ ಪ್ರಣಯ ವಿಹಾರಗಳಿಗೆ ಅತ್ಯಂತ ಪ್ರಶಸ್ತವಾಗಿದ್ದುವು.

ತಾನ್ಯೇತಾನ್ಯದ್ಯ ಪಶ್ಯಾಮಿ ನಿರಾನಂದಾನಿ ಸರ್ವಶಃ ॥೨೬॥

ಅವೇ ಉದ್ಯಾನವನಗಳು ಇದೀಗ ಎಲ್ಲಿಯೂ ಆನಂದ ರಹಿತವಾಗಿರುವುದನ್ನು ನಾನು ನೋಡುತ್ತಿದ್ದೇನೆ.

ಸ್ರಸ್ತಪರ್ಣೈರನುಪಥಂ ವಿಕ್ರೋಶದ್ಭಿರಿವ ದ್ರುಮೈಃ ।
ನಾದ್ಯಾಪಿ ಶ್ರೂಯತೇ ಶಬ್ದೋ ಮತ್ತಾನಾಂ ಮೃಗಪಕ್ಷಿಣಾಮ್ ।
ಸಂರಕ್ತಾಂ ಮಧುರಾಂ ವಾಣೀಂ ಕಲಂ ವ್ಯಾಹರತಾಂ ಬಹು ॥೨೭॥

ದಾರಿಯುದ್ದಕ್ಕೂ ವೃಕ್ಷಗಳ ಎಲೆ ಉದುರಿಸುತ್ತ ರೋದಿಸುವಂತೆ ಕಾಣುತ್ತವೆ. ಸೂರ್ಯೋದಯವಾಗುತ್ತಿದ್ದರೂ ಮದಿಸಿದ ಮೃಗಪಕ್ಷಿಗಳು ಪರಸ್ಪರ ಅನುರಾಗದಿಂದ ಬಹು ಸವಿನುಡಿಗಳನ್ನು ಮಧುರವಾಗಿ ಉಲಿಯುವ ಶಬ್ದ ಇನ್ನೂ ಕೇಳಿ ಬರುತ್ತಿಲ್ಲ.

ಚಂದನಾಗರುಸಂಪೃಕ್ತೋ ಧೂಪಸಂಮೂರ್ಛಿತೋಽತುಲಃ ।
ಪ್ರವಾತಿ ಪವನಃ ಶ್ರೀಮಾನ್ ಕಿಂ ನು ನಾದ್ಯ ಯಥಾಪುರಮ್ ॥೨೮॥

ಚಂದನ ಅಗುರು ಮಿಶ್ರಿತ ಧೂಪ-ಧೂಮದಿಂದ ಹೆಚ್ಚಾಗಿರುವ ಅನುಪಮ-ವಾದ ಮನೋಹರವಾದ ತಂಗಾಳಿ ಏಕೆ ಇನ್ನೂ ಹಿಂದಿನಂತೆ ಬೀಸುತ್ತಿಲ್ಲ?

ಭೇರೀಮೃದಂಗವೀಣಾನಾಂ ಕೋಣಸಂಘಟ್ಟಿತಃ ಪುನಃ ।
ಕಿಮದ್ಯ ಶಬ್ದೋ ವಿರತಃ ಸದಾऽದೀನಗತಿಃ ಪುರಾ ॥೨೯॥

ಭೇರಿ ಮೃದಂಗ ವೀಣೆಗಳನ್ನು ಬಾರಿಸುವ ಶಬ್ದ ಹಿಂದೆ ಎಡೆಬಿಡದೆ ಪುನಃ ಪುನಃ ಕೇಳಿ ಬರುತ್ತಿತ್ತು. ಈಗ ಅದು ನಿಂತುಹೋಗಿದೆ ಏಕೆ? ಇದೊಂದೂ ನನಗೆ ತಿಳಿಯು-ತ್ತಿಲ್ಲ, ಸಾರಥಿ!

ಅನಿಷ್ಟಾನಿ ಚ ಪಾಪಾನಿ ಪಶ್ಯಾಮಿ ವಿವಿಧಾನಿ ಚ ।
ನಿಮಿತ್ತಾನ್ಯಮನೋಜ್ಞಾನಿ ತೇನ ಸೀದತಿ ಮೇ ಮನಃ ॥೩೦॥

ಅನಿಷ್ಟ ಸೂಚಕವಾದ ಅಮಂಗಳಕರವಾದ ಮನಸಿಗೆ ಸುಖಿತಾರದ ನಾನಾ ಬಗೆಯ ಶಕುನಗಳನ್ನೂ ನೋಡುತ್ತಿದ್ದೇನೆ. ನನ್ನ ಮನ ಕುಗ್ಗುತ್ತಿದೆ.

ಸರ್ವಥಾ ಕುಶಲಂ ಸೂತ ದುರ್ಲಭಂ ಮಮ ಬಂಧುಷು ।
ತಥಾ ಹ್ಯಸತಿ ಸಂಮೋಹೇ ಹೃದಯಂ ಸೀದತೀವ ಮೇ ॥೩೧॥

ಸಾರಥಿ, ಸರ್ವಥಾ ನನ್ನ ಬಂಧುಗಳಿಗೆ ಕ್ಷೇಮವಿಲ್ಲ. ಕಳವಳವೇನಿಲ್ಲದಿದ್ದರೂ ಎದೆ ಭಾರವಾಗುತ್ತಿದೆ.

ವಿಷಣ್ಣಃ ಶ್ರಾಂತಹೃದಯಸ್ತ್ರಸ್ತಃ ಸಂಲುಲಿತೇಂದ್ರಿಯಃ ।
ಭರತಃ ಪ್ರವಿವೇಶಾಶು ಪುರೀಮಿಕ್ಷ್ವಾಕುಪಾಲಿತಾಮ್ ॥೩೨॥

ವಿಷಣ್ಣನಾಗಿ ಭಾರವಾದ ಮನಸಿನಿಂದ ಭಯಗೊಂಡು ಕೈಕಾಲು ಉಡುಗು-ತ್ತಿದ್ದಂತೆ ಭರತನು ಇಕ್ಷ್ವಾಕುರಾಜರಿಂದ ಪಾಲಿತವಾದ ಅಯೋಧ್ಯಾ- ನಗರವನ್ನು ಬೇಗನೆ ಸೇರಿದ.

ದ್ವಾರೇಣ ವೈಜಯಂತೇನ ಪ್ರಾವಿಶದ್ಭಾರ್ತವಾಹನಃ ।
ದ್ವಾಃಸ್ಥೈರುತ್ಥಾಯ ವಿಜಯಂ ಪೃಷ್ಟಸ್ತೈಃ ಸಹಿತೋ ಯಯೌ ॥೩೩॥

ನಗರದ ವೈಜಯಂತವೆಂಬ ದಿಡ್ಡೀಬಾಗಿಲಿನ ಮೂಲಕ ಭರತನು ಪ್ರವೇಶಿಸಿದನು. ಕುದುರೆಗಳು ಬಳಲಿದ್ದುವು. ದ್ವಾರಪಾಲಕರು ಮೇಲೆದ್ದು 'ವಿಜಯವೆ ನಿಮಗೆ?' ಎಂದು ಕೇಳುತ್ತಿದ್ದಂತೆ ಅವರೊಂದಿಗೆ ಒಳಗೆ ಪ್ರವೇಶಿಸಿದ.

ಸ ತ್ವನೇಕಾಗ್ರಹೃದಯೋ ದ್ವಾಃಸ್ಥಂ ಪ್ರತ್ಯರ್ಚ್ಯ ತಂ ಜನಮ್ ।
ಸೂತಮಶ್ವಪತೇಃ ಕ್ಲಾಂತಮಬ್ರವೀತ್ತತ್ರ ರಾಘವಃ ॥೩೪॥

ಅಸ್ವಸ್ಥಚಿತ್ತನಾಗಿದ್ದ ಭರತನು ದ್ವಾರದಲ್ಲಿದ್ದ ಜನರನ್ನು ಸವಿಮಾತಿನಿಂದ ಹಿಂದೆ ಕಳಿಸಿ ಬಳಲಿದ್ದ ಅಶ್ವಪತಿ ರಾಜನ ಸಾರಥಿಗೆ ಹೇಳಿದ.

ಕಿಮಹ ತ್ವರಯಾನೀತಃ ಕಾರಣೇನ ವಿನಾನಘ ।
ಅಶುಭಾಶಂಕಿ ಹೃದಯಂ ಶೀಲಂ ಚ ಪತತೀವ ಮೇ ॥೩೫॥

ಪಾಪರಹಿತನೆ, ಕಾರಣವಿಲ್ಲದೆ ನನ್ನನ್ನೇಕೆ ಅವಸರದಿಂದ ಕರೆಸಿದ್ದಾರೆ? ನನ್ನ ಮನಸ್ಸು ಮತ್ತು ಸ್ವಭಾವ ಏನೋ ಅನಿಷ್ಟವಾಗಿರಬಹುದೆಂದು ಶಂಕಿಸುತ್ತಿದೆ, ಕುಸಿಯುತ್ತಿರುವಂತೆ ಕಾಣುತ್ತದೆ.

ಶ್ರುತಾ ನೋ ಯಾದೃಶಃ ಪೂರ್ವಂ ನೃಪತೀನಾಂ ವಿನಾಶನೇ ।
ಆಕಾರಾಂಸ್ತಾನಹಂ ಸರ್ವಾನಿಹ ಪಶ್ಯಾಮಿ ಸಾರಥೇ ॥೩೬॥

ಹಿಂದೆ ರಾಜರುಗಳು ಮರಣ ಹೊಂದಿದಾಗ ಪ್ರಕೃತಿಯಲ್ಲಿ ಏನು ಏರುಪೇರು-ಗಳಾಗುತ್ತಿದ್ದುವೆಂದು ಕೇಳಿದ್ದೇನೆ, ಅವೆಲ್ಲವನ್ನೂ ಇಲ್ಲಿ ಕಾಣುತ್ತಿದ್ದೇನೆ, ಸಾರಥಿ.

ಸಂಮಾರ್ಜನವಿಹೀನಾನಿ ಪರುಷಾಣ್ಯುಪಲಕ್ಷಯೇ ।
ಅಸಂಯತಕವಾಟಾನಿ ಶ್ರೀವಿಹೀನಾನಿ ಸರ್ವಶಃ ॥೩೭॥

ಗೃಹಸ್ಥರ ಮನೆಗಳಲ್ಲಿ ಸಾರಣೆ ಇಲ್ಲದೆ ಒರಟಾಗಿ ಕಾಣುತ್ತವೆ. ಬಾಗಿಲು ಮುಚ್ಚುವುದಿಲ್ಲ. ಅಂದ ಚಂದಗಳೂ ಎಲ್ಲೂ ಕಾಣುವುದಿಲ್ಲ.

ಬಲಿಕರ್ಮವಿಹೀನಾನಿ ಧೂಪಸಂಮೋದನೇನ ಚ ।
ಅನಾಶಿತಕುಟುಂಬಾನಿ ಪ್ರಭಾಹೀನಜನಾನಿ ಚ ॥೩೮॥

ದೇವರಪೂಜೆಗಳಿಲ್ಲ ಧೂಪದ ಸುಗಂಧ ಹರಡುತ್ತಿಲ್ಲ. ಕುಟುಂಬದ ಜನರಿಗೆ ಉಣಿಸುವವರಿಲ್ಲ. ಜನರಲ್ಲಿ ಕಾಂತಿ ಇಲ್ಲ.

ಅಲಕ್ಷ್ಮೀಕಾನಿ ಪಶ್ಯಾಮಿ ಕುಟುಂಬಿಭವನಾನ್ಯಹಮ್ ।
ಅಪೇತಮಾಲ್ಯಶೋಭಾನ್ಯಪ್ಯಸಂಮೃಷ್ಟಾಜಿರಾಣಿ ಚ ॥೩೯॥

ಕುಟುಂಬಿಗಳ ಮನೆಗಳಲ್ಲಿ ಧನಧಾನ್ಯ ಸಂಪತ್ತು ಕಾಣುವುದಿಲ್ಲ. ಹೂಮಾಲೆಗಳ ಅಲಂಕಾರಗಳಿಲ್ಲ. ಅಂಗಳ ಗುಡಿಸಿ ಸಾರಿಸಿಲ್ಲ.

ದೇವಾಗಾರಾಣಿ ಶೂನ್ಯಾನಿ ನ ಚಾಭಾಂತಿ ಯಥಾಪುರಮ್ ।
ದೇವತಾರ್ಚಾಃ ಪ್ರವಿದ್ಧಾಶ್ಚ ಯಜ್ಞಗೋಷ್ಠ್ಯಸ್ತಥಾವಿಧಾಃ ॥೪೦॥

ದೇವಾಲಯಗಳೂ ಶೂನ್ಯವಾಗಿವೆ. ಹಿಂದಿನಂತೆ ಶೋಭಿಸುತ್ತಿಲ್ಲ. ದೇವತಾ-ರ್ಚನೆಗಳು ನಿಂತು ಹೋಗಿವೆ. ಯಜ್ಞಕಾರ್ಯಗಳೂ ನಿಂತುಹೋಗಿವೆ.

ಮಾಲ್ಯಾಪಣೇಷು ರಾಜಂತೇ ನಾದ್ಯ ಪಣ್ಯಾನಿ ವೈ ತಥಾ ।
ದೃಶ್ಯಂತೇ ವಣಿಜೋಽಪ್ಯದ್ಯ ನ ಯಥಾಪೂರ್ವಮತ್ರ ವೈ ॥೪೧॥

ಹೂಮಾರುವ ಅಂಗಡಿಗಳಲ್ಲಿ ಹೂಮಾಲೆಗಳು ಹಿಂದಿನಂತೆ ರಾರಾಜಿಸುತ್ತಿಲ್ಲ. ವರ್ತಕರೂ ಹಿಂದಿನಂತೆ ಉತ್ಸಾಹಿತರಾಗಿ ಕಾಣುತ್ತಿಲ್ಲ.

ಧ್ಯಾನಸಂವಿಗ್ನಹೃದಯಾ ನಷ್ಟವ್ಯಾಪಾರಯಂತ್ರಿತಾಃ ।
ದೇವಾಯತನಚೈತ್ಯೇಷು ದೀನಾಃ ಪಕ್ಷಿಗಣಾಸ್ತಥಾ ॥೪೨॥

ಅಂಗಡಿಗಳಲ್ಲಿ ವ್ಯಾಪಾರವಿಲ್ಲದಂತಾದ್ದರಿಂದ ವರ್ತಕರು ಚಿಂತಾಪರವಾದ ಹೃದಯದವರಾಗಿ ಕಾಣುತ್ತಾರೆ. ದೇವಾಲಯ ಅಶ್ವತ್ಥಕಟ್ಟೆಗಳಲ್ಲಿ ಪಕ್ಷಿಗಳೂ ದುಃಖಿಸುವಂತಿವೆ.

ವಿಷಣ್ಣನಾಗಿ ಭಾರವಾದ ಮನಸಿನಿಂದ ಭಯಗೊಂಡು ಕೈಕಾಲು ಉಡುಗು-ತ್ತಿದ್ದಂತೆ ಭರತನು ಇಕ್ಷ್ವಾಕುರಾಜರಿಂದ ಪಾಲಿತವಾದ ಅಯೋಧ್ಯಾ- ನಗರವನ್ನು ಬೇಗನೆ ಸೇರಿದ.

ದ್ವಾರೇಣ ವೈಜಯಂತೇನ ಪ್ರಾವಿಶಚ್ಛಾಂತವಾಹನಃ ।
ದ್ವಾಃಸ್ಥೈರುತ್ಥಾಯ ವಿಜಯಂ ಪೃಷ್ಟಸ್ತೈಃ ಸಹಿತೋ ಯಯೌ ॥೩೩॥

ನಗರದ ವೈಜಯಂತವೆಂಬ ದಿಡ್ಡೀಬಾಗಿಲಿನ ಮೂಲಕ ಭರತನು ಪ್ರವೇಶಿಸಿದನು. ಕುದುರೆಗಳು ಬಳಲಿದ್ದುವು. ದ್ವಾರಪಾಲಕರು ಮೇಲೆದ್ದು 'ವಿಜಯವೆ ನಿಮಗೆ?' ಎಂದು ಕೇಳುತ್ತಿದ್ದಂತೆ ಅವರೊಂದಿಗೆ ಒಳಗೆ ಪ್ರವೇಶಿಸಿದ.

ಸ ತ್ವನೇಕಾಗ್ರಹೃದಯೋ ದ್ವಾಃಸ್ಥಂ ಪ್ರತ್ಯರ್ಚ್ಯ ತಂ ಜನಮ್ ।
ಸೂತಮಶ್ವಪತೇಃ ಕ್ಲಾಂತಮಬ್ರವೀತ್ತತ್ರ ರಾಘವಃ ॥೩೪॥

ಅಸ್ವಸ್ಥಚಿತ್ತನಾಗಿದ್ದ ಭರತನು ದ್ವಾರದಲ್ಲಿದ್ದ ಜನರನ್ನು ಸವಿಮಾತಿನಿಂದ ಹಿಂದೆ ಕಳಿಸಿ ಬಳಲಿದ್ದ ಅಶ್ವಪತಿ ರಾಜನ ಸಾರಥಿಗೆ ಹೇಳಿದ.

ಕಿಮಹ ತ್ವರಯಾನೀತಃ ಕಾರಣೇನ ವಿನಾನಘ ।
ಅಶುಭಾಶಂಕಿ ಹೃದಯಂ ಶೀಲಂ ಚ ಪತತೀವ ಮೇ ॥೩೫॥

ಪಾಪರಹಿತನೆ, ಕಾರಣವಿಲ್ಲದೆ ನನ್ನನ್ನೇಕೆ ಅವಸರದಿಂದ ಕರೆಸಿದ್ದಾರೆ? ನನ್ನ ಮನಸ್ಸು ಮತ್ತು ಸ್ವಭಾವ ಏನೋ ಅನಿಷ್ಟವಾಗಿರಬಹುದೆಂದು ಶಂಕಿಸುತ್ತಿದೆ, ಕುಸಿಯುತ್ತಿರುವಂತೆ ಕಾಣುತ್ತದೆ.

ಶ್ರುತಾ ನೋ ಯಾದೃಶಃ ಪೂರ್ವಂ ನೃಪತೀನಾಂ ವಿನಾಶನೇ ।
ಆಕಾರಾಂಸ್ತಾನಹಂ ಸರ್ವಾನಿಹ ಪಶ್ಯಾಮಿ ಸಾರಥೇ ॥೩೬॥

ಹಿಂದೆ ರಾಜರುಗಳು ಮರಣ ಹೊಂದಿದಾಗ ಪ್ರಕೃತಿಯಲ್ಲಿ ಏನು ಏರುಪೇರು-ಗಳಾಗುತ್ತಿದ್ದುವೆಂದು ಕೇಳಿದ್ದೇನೆ, ಅವೆಲ್ಲವನ್ನೂ ಇಲ್ಲಿ ಕಾಣುತ್ತಿದ್ದೇನೆ, ಸಾರಥಿ.

ಸಂಮಾರ್ಜನವಿಹೀನಾನಿ ಪರುಷಾಣ್ಯುಪಲಕ್ಷಯೇ ।
ಅಸಂಯತಕವಾಟಾನಿ ಶ್ರೀವಿಹೀನಾನಿ ಸರ್ವಶಃ ॥೩೭॥

ಗೃಹಸ್ಥರ ಮನೆಗಳಲ್ಲಿ ಸಾರಣೆ ಇಲ್ಲದೆ ಒರಟಾಗಿ ಕಾಣುತ್ತವೆ. ಬಾಗಿಲು ಮುಚ್ಚುವುದಿಲ್ಲ. ಅಂದ ಚಂದಗಳೂ ಎಲ್ಲೂ ಕಾಣುವುದಿಲ್ಲ.

ಬಲಿಕರ್ಮವಿಹೀನಾನಿ ಧೂಪಸಂಮೋದನೇನ ಚ ।
ಅನಾಶಿತಕುಟುಂಬಾನಿ ಪ್ರಭಾಹೀನಜನಾನಿ ಚ ॥೩೮॥

ದೇವರಪೂಜೆಗಳಿಲ್ಲ ಧೂಪದ ಸುಗಂಧ ಹರಡುತ್ತಿಲ್ಲ. ಕುಟುಂಬದ ಜನರಿಗೆ ಉಣಿಸುವವರಿಲ್ಲ. ಜನರಲ್ಲಿ ಕಾಂತಿ ಇಲ್ಲ.

ಅಲಕ್ಷ್ಮೀಕಾನಿ ಪಶ್ಯಾಮಿ ಕುಟುಂಬಿಭವನಾನ್ಯಹಮ್ ।
ಅಪೇತಮಾಲ್ಯಶೋಭಾನ್ಯಪ್ಯಸಂಮೃಷ್ಟಾಜಿರಾಣಿ ಚ ॥೩೯॥

ಕುಟುಂಬಿಗಳ ಮನೆಗಳಲ್ಲಿ ಧನಧಾನ್ಯ ಸಂಪತ್ತು ಕಾಣುವುದಿಲ್ಲ. ಹೂಮಾಲೆಗಳ ಅಲಂಕಾರಗಳಿಲ್ಲ. ಅಂಗಳ ಗುಡಿಸಿ ಸಾರಿಸಿಲ್ಲ.

ದೇವಾಗಾರಾಣಿ ಶೂನ್ಯಾನಿ ನ ಚಾಭಾಂತಿ ಯಥಾಪುರಮ್ ।
ದೇವತಾರ್ಚಾಃ ಪ್ರವಿದ್ಧಾಶ್ಚ ಯಜ್ಞಗೋಷ್ಠ್ಯಸ್ತಥಾವಿಧಾಃ ॥೪೦॥

ದೇವಾಲಯಗಳೂ ಶೂನ್ಯವಾಗಿವೆ. ಹಿಂದಿನಂತೆ ಶೋಭಿಸುತ್ತಿಲ್ಲ. ದೇವತಾ-ರ್ಚನೆಗಳು ನಿಂತು ಹೋಗಿವೆ. ಯಜ್ಞಕಾರ್ಯಗಳೂ ನಿಂತುಹೋಗಿವೆ.

ಮಾಲ್ಯಾಪಣೇಷು ರಾಜಂತೇ ನಾದ್ಯ ಪಣ್ಯಾನಿ ವೈ ತಥಾ ।
ದೃಶ್ಯಂತೇ ವಣಿಜೋಽಪ್ಯದ್ಯ ನ ಯಥಾಪೂರ್ವಮತ್ರ ವೈ ॥೪೧॥

ಹೂಮಾರುವ ಅಂಗಡಿಗಳಲ್ಲಿ ಹೂಮಾಲೆಗಳು ಹಿಂದಿನಂತೆ ರಾರಾಜಿಸುತ್ತಿಲ್ಲ. ವರ್ತಕರೂ ಹಿಂದಿನಂತೆ ಉತ್ಸಾಹಿತರಾಗಿ ಕಾಣುತ್ತಿಲ್ಲ.

ಧ್ಯಾನಸಂವಿಗ್ನಹೃದಯಾ ನಷ್ಟವ್ಯಾಪಾರಯಂತ್ರಿತಾಃ ।
ದೇವಾಯತನಚೈತ್ಯೇಷು ದೀನಾಃ ಪಕ್ಷಿಗಣಾಸ್ತಥಾ ॥೪೨॥

ಅಂಗಡಿಗಳಲ್ಲಿ ವ್ಯಾಪಾರವಿಲ್ಲದಂತಾದ್ದರಿಂದ ವರ್ತಕರು ಚಿಂತಾಪರವಾದ ಹೃದಯದವರಾಗಿ ಕಾಣುತ್ತಾರೆ. ದೇವಾಲಯ ಅಶ್ವತ್ಥಕಟ್ಟೆಗಳಲ್ಲಿ ಪಕ್ಷಿಗಳೂ ದುಃಖಿಸುವಂತಿವೆ.

ಮಲಿನಂ ಚಾಶ್ರುಪೂರ್ಣಾಕ್ಷಂ ದೀನಂ ಧ್ಯಾನಪರಂ ಕೃಶಮ್ ।
ಸಸ್ತ್ರೀಪುಂಸಂ ಚ ಪಶ್ಯಾಮಿ ಜನಮುತ್ಕಂಠಿತಂ ಪುರೇ ॥೪೩॥

ನಗರದಲ್ಲಿ ನರನಾರಿಯರು ಜನರೆಲ್ಲರೂ ಮಲಿನರು ಕಣ್ಣಲ್ಲಿ ನೀರು ತುಂಬಿಕೊಂಡು ದೈನ್ಯದಿಂದ ಧ್ಯಾನಪರರಾಗಿ ಕೃಶರಾಗಿದ್ದಾರೆ. ಉದ್ವಿಗ್ನರಾಗಿದ್ದಾರೆ.

ಇತ್ಯೇವಮುಕ್ತ್ವಾ ಭರತಃ ಸೂತಂ ತಂ ದೀನಮಾನಸಃ ।
ತಾನ್ಯರಿಷ್ಟಾನ್ಯಯೋಧ್ಯಾಯಾಂ ಪ್ರೇಕ್ಷ್ಯ ರಾಜಗೃಹಂ ಯಯೌ ॥೪೪॥

ದೀನವಾದ ಮನಸಿನಿಂದ ಅಯೋಧ್ಯೆಯಲ್ಲಿ ಎಲ್ಲೆಲ್ಲೂ ಅಮಂಗಳಗಳನ್ನೇ ಕಂಡು ಭರತನು ಸಾರಥಿಯ ಮುಂದೆ ಹೇಳಿಕೊಳ್ಳುತ್ತ ಅರಮನೆಗೆ ಹೋಗಿ ಸೇರಿದ.

ತಾಂ ಶೂನ್ಯಶೃಂಗಾಟಕವೇಶ್ಮರಥ್ಯಾಂ
ರಜೋऽರುಣದ್ವಾರಕಪಾಟಯಂತ್ರಾಮ್ ।
ದೃಷ್ಟ್ವಾ ಪುರೀಮಿಂದ್ರಪುರಪ್ರಕಾಶಾಂ
ದುಃಖೇನ ಸಂಪೂರ್ಣತರೋ ಬಭೂವ ॥೪೫॥

ಅಯೋಧ್ಯೆಯ ಚೌಕ ಮನೆ ರಾಜಬೀದಿಗಳು ಶೂನ್ಯವಾಗಿದ್ದುವು ದ್ವಾರಗಳ ಬಾಗಿಲು ಅಗಳಿಗಳು ಎಲ್ಲವೂ ದೂಳಿನಿಂದ ಮುಚ್ಚಿ ಕೆಂಪಾಗಿ ಕಾಣುತ್ತಿದ್ದವು. ಇಂದ್ರನ ಅಮರಾವತಿ ಪಟ್ಟಣದಂತಿದ್ದ ಅಯೋಧ್ಯೆಯನ್ನು ಈಗ ಈ ಸ್ಥಿತಿಯಲ್ಲಿ ಕಂಡು ಭರತನು ದುಃಖದಿಂದ ಪೂರ್ತಿ ತುಂಬಿಕೊಂಡನು.

ಬಹೂನಿ ಪಶ್ಯನ್ ಮನಸೋऽಪ್ರಿಯಾಣಿ
ಯಾನ್ಯನ್ಯದಾ ನಾತ್ರ ಪುರೇ ಬಭೂವುಃ ।
ಅವಾಕ್ಶಿರಾ ದೀನಮನಾ ನ ಹೃಷ್ಟಃ
ಪಿತುರ್ಮಹಾತ್ಮಾ ಪ್ರವಿವೇಶ ವೇಶ್ಮ ॥೪೬॥

ಮನಸಿಗೆ ಒಗ್ಗದಂಥ ದೃಶ್ಯಗಳನ್ನೇ ಭರತನು ಕಂಡ. ಹಿಂದೆ ಅವು ಇಲ್ಲಿ ಇರಲಿಲ್ಲ. ಅದರಿಂದ ದೀನಮನಸ್ಕನಾಗಿ ಏನೂ ಉತ್ಸಾಹವಿಲ್ಲದೆ ತಲೆತಗ್ಗಿಸಿಕೊಂಡು ಮಹಾತ್ಮ ಭರತನು ತಂದೆಯ ಅರಮನೆಯನ್ನು ಪ್ರವೇಶಿಸಿದನು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಎಪ್ಪತ್ತೊಂದನೇ ಸರ್ಗ ಮುಗಿಯಿತು.

ದ್ವಿಸಪ್ತತಿತಮಃ ಸರ್ಗಃ

ಸರ್ಗ – 72

ತಂದೆಯ ಮರಣ, ಶ್ರೀರಾಮನ ವನವಾಸಗಳನ್ನು ತಿಳಿದು ಭರತನ ದುಃಖ

ಅಪಶ್ಯಂಸ್ತು ತತಸ್ತತ್ರ ಪಿತರಂ ಪಿತುರಾಲಯೇ ।
ಜಗಾಮ ಭರತೋ ದ್ರಷ್ಟುಂ ಮಾತರಂ ಮಾತುರಾಲಯೇ ॥೧॥

ಪಿತನ ಅರಮನೆಯಲ್ಲಿ ಪಿತನನ್ನು ಕಾಣದೆ ಭರತನು ಮಾತೆಯ ಅಂತಃಪುರದಲ್ಲಿ ಮಾತೆಯನ್ನು ಕಾಣಲು ಹೋದನು.

ಅನುಪ್ರಾಪ್ತಂ ತು ತಂ ದೃಷ್ಟ್ವಾ ಕೈಕೇಯೀ ಪ್ರೋಷಿತಂ ಸುತಮ್ ।
ಉತ್ಪಪಾತ ತದಾ ಹೃಷ್ಟಾ ತ್ಯಕ್ತ್ವಾ ಸೌವರ್ಣಮಾಸನಮ್ ॥೨॥

ಅಯೋಧ್ಯೆಯಿಂದಾಚೆ ದೂರದ ಕೇಕಯ ದೇಶದಲ್ಲಿ ಇದ್ದು ಬಂದ ಮಗನನ್ನು ಕೈಕೇಯಿ ಕಂಡು ಪರಮಾನಂದದಿಂದ ಬಂಗಾರದ ಆಸನವನ್ನು ಬಿಟ್ಟು ಎದ್ದು ಬಂದಳು.

ಸ ಪ್ರವಿಶ್ಯೈವ ಧರ್ಮಾತ್ಮಾ ಸ್ವಗೃಹಂ ಶ್ರೀವಿವರ್ಜಿತಮ್ ।
ಭರತಃ ಪ್ರತಿಜಗ್ರಾಹ ಜನನ್ಯಾಶ್ಚರಣೌ ಶುಭೌ ॥೩॥

ಶೋಭೆಯನ್ನು ಕಳೆದುಕೊಂಡಿದ್ದ ತನ್ನ ಮನೆಯನ್ನು ಧರ್ಮಾತ್ಮನಾದ ಭರತನು ಪ್ರವೇಶಿಸಿ ಜನನಿಯ ಶುಭಚರಣಗಳನ್ನು ಮುಟ್ಟಿ ಅಭಿವಾದನಗೈದ.

ಸಾ ತಂ ಮೂರ್ಧನ್ಯುಪಾಘ್ರಾಯ ಪರಿಷ್ವಜ್ಯ ಯಶಸ್ವಿನಮ್ ।
ಅಂಕೇ ಭರತಮಾರೋಪ್ಯ ಪ್ರಷ್ಟುಂ ಸಮುಪಚಕ್ರಮೇ ॥೪॥

ಯಶೋವಂತನಾದ ಭರತನನ್ನು ತಾಯಿ ಅಪ್ಪಿಕೊಂಡು ನೆತ್ತಿಯನ್ನು ಆಘ್ರಾಣಿಸಿ ತೊಡೆಯ ಮೇಲಿರಿಸಿಕೊಂಡು ಕೇಳಲು ತೊಡಗಿದಳು.

ಅದ್ಯ ತೇ ಕತಿಚಿದ್ರಾತ್ರ್ಯಶ್ಚ್ಯುತಸ್ಯಾರ್ಯಕವೇಶ್ಮನಃ ।
ಅಪಿ ನಾಧ್ವಶ್ರಮಃ ಶೀಘ್ರಂ ರಥೇನಾಪತತಸ್ತವ ॥೫॥

ನೀನು ಅಜ್ಜನ ಮನೆಯಿಂದ ಹೊರಟು ಇಂದಿಗೆ ಎಷ್ಟು ದಿನಗಳಾದುವು? ಅವಸರದಿಂದ ರಥದಲ್ಲಿ ಆಗಮಿಸಿದ ನಿನಗೆ ಮಾರ್ಗಾಯಾಸವಾಗಿರುತ್ತದೆ, ಅಲ್ಲವೆ?

ಆರ್ಯಕಸ್ತೇ ಸುಕುಶಲೀ ಯುಧಾಜಿನ್ಮಾತುಲಸ್ತವ ।
ಪ್ರವಾಸಾಚ್ಚ ಸುಖಿಂ ಪುತ್ರ ಸರ್ವಂ ಮೇ ವಕ್ತುಮರ್ಹಸಿ ॥೬॥

ಅಜ್ಜನು ಕುಶಲಿಯಾಗಿರುವನೆ? ಸೋದರಮಾವ ಕುಶಲಿಯಾಗಿರುವನೆ? ಪ್ರವಾಸ ಸುಖಕರವಾಗಿತ್ತೆ? ಮಗು ಎಲ್ಲವನ್ನೂ ನನಗೆ ಹೇಳು.

ಏವಂ ಪೃಷ್ಟಸ್ತು ಕೈಕೇಯ್ಯಾ ಪ್ರಿಯಂ ಪಾರ್ಥಿವನಂದನಃ ।
ಅಚಷ್ಟ ಭರತಃ ಸರ್ವಂ ಮಾತ್ರೇ ರಾಜೀವಲೋಚನಃ ॥೭॥

ಕೈಕೇಯಿ ಹೀಗೆ ಕೇಳಿದಾಗ ಕಮಲನಯನನಾದ ರಾಜಕುಮಾರ ಭರತನು ಪ್ರಿಯವಾದ ಎಲ್ಲ ಸಂಗತಿಗಳನ್ನೂ ತಾಯಿಗೆ ಹೇಳಿದನು.

ಅದ್ಯ ಮೇ ಸಪ್ತಮೀ ರಾತ್ರಿಶ್ಚ್ಯುತಸ್ಯಾರ್ಯಕವೇಶ್ಮನಃ ।
ಅಂಬಾಯಾಃ ಕುಶಲೀ ತಾತೋ ಯುಧಾಜಿನ್ಮಾತುಲಶ್ಚ ಮೇ ॥೮॥

ನಾನು ಅಜ್ಜನ ಮನೆಯನ್ನು ಬಿಟ್ಟು ಹೊರಟು ಇಂದಿಗೆ ಏಳನೇ ರಾತ್ರಿ ಕಳೆಯಿತು. ನಿನ್ನ ತಂದೆಯೂ ಕುಶಲಿ, ನನ್ನ ಸೋದರಮಾವ ಯುಧಾಜಿತನೂ ಕುಶಲಿ.

ಯನ್ಮೇ ಧನಂ ಚ ರತ್ನಂ ಚ ದದೌ ರಾಜಾ ಪರಂತಪಃ ।
ಪರಿಶ್ರಾಂತಂ ಪಥ್ಯಭವತ್ತತೋಽಹಂ ಪೂರ್ವಮಾಗತಃ ॥೯॥

ನನಗೆ ಶತ್ರುತಾಪಕನಾದ ರಾಜಾ ಅಶ್ವಪತಿ ಕೊಟ್ಟಿರುವ ಧನವನ್ನೂ ಗಜಾಶ್ವಾದಿ ರತ್ನಗಳನ್ನೂ ಅವು ಆಯಾಸಗೊಂಡಿರುವುದರಿಂದ ದಾರಿಯಲ್ಲಿಯೇ ಬಿಟ್ಟು ನಾನು ಮೊದಲಿಗೆ ಬಂದಿದ್ದೇನೆ.

ರಾಜವಾಕ್ಯಹರೈರ್ದೂತೈಸ್ತ್ವರ್ಯಮಾಣೋಽಹಮಾಗತಃ ।
ಯದಹಂ ಪ್ರಷ್ಟುಮಿಚ್ಛಾಮಿ ತದಂಬಾ ವಕ್ತುಮರ್ಹತಿ ॥೧೦॥

ರಾಜನ ಸಂದೇಶವನ್ನು ಹೊತ್ತುತಂದ ದೂತರು ಅವಸರಪಡಿಸಿದ್ದರಿಂದ ನಾನು ಮೊದಲಿಗೇ ಬಂದಿದ್ದೇನೆ. ನಾನು ಕೇಳಲು ಬಯಸಿರುವ ಸಂಗತಿಗಳನ್ನು ನೀನು ನನಗೆ ಹೇಳು.

ಶೂನ್ಯೋಽಯಂ ಶಯನೀಯಸ್ತೇ ಪರ್ಯಂಕೋ ಹೇಮಭೂಷಿತಃ ।
ನ ಚಾಯಮಿಕ್ಷ್ವಾಕುಜನಃ ಪ್ರಹೃಷ್ಟಃ ಪ್ರತಿಭಾತಿ ಮೇ ॥೧೧॥

ಬಂಗಾರದಿಂದ ಅಲಂಕೃತವಾದ ಶಯನಯೋಗ್ಯವಾದ ನಿನ್ನ ಮಂಚ ಶೂನ್ಯವಾಗಿದೆ. ಇಕ್ಷ್ವಾಕು ವಂಶದ ಜನರು ಸಂತೋಷದಿಂದಿಲ್ಲವೆಂದು ನನಗೆ ಕಾಣುತ್ತದೆ.

ರಾಜಾ ಭವತಿ ಭೂಯಿಷ್ಠಮಿಹಾಂಬಾಯಾ ನಿವೇಶನೇ ।
ತಮಹಂ ನಾದ್ಯ ಪಶ್ಯಾಮಿ ದ್ರಷ್ಟುಮಿಚ್ಛನ್ನಿಹಾಗತಃ ॥೧೨॥

ರಾಜಾ ದಶರಥ ಹೆಚ್ಚಾಗಿ ನಿನ್ನ ಅಂತಃಪುರದಲ್ಲಿಯೇ ಇರುತ್ತಾನೆ. ಅವನನ್ನು ನೋಡಲೆಂದು ನಾನು ಇಲ್ಲಿಗೆ ಬಂದೆ. ಅವನನ್ನು ಇಲ್ಲಿ ನಾನು ಕಾಣುತ್ತಿಲ್ಲ.

ಪಿತುರ್ಗ್ರಹೀಷ್ಯೇ ಚರಣೌ ತಂ ಮಮಾಖ್ಯಾಹಿ ಪೃಚ್ಛತಃ ।
ಅಹೋಸ್ವಿದಂಬ ಜ್ಯೇಷ್ಠಾಯಾಃ ಕೌಸಲ್ಯಾಯಾ ನಿವೇಶನೇ ॥೧೩॥

ತಂದೆಯ ಕಾಲುಗಳಿಗೆ ಅಭಿವಾದನ ಮಾಡುವೆನು. ಅವನೆಲ್ಲಿ? ನಾನು ಕೇಳುತ್ತೇನೆ, ಹೇಳು. ಅಥವಾ ಅಮ್ಮ, ಅವನು ಜ್ಯೇಷ್ಠಮಾತೆಯಾದ ಕೌಸಲ್ಯೆಯ ಭವನದಲ್ಲಿರುವನೆ?

ತಂ ಪ್ರತ್ಯುವಾಚ ಕೈಕೇಯೀ ಪ್ರಿಯವದ್ಘೋರಮಪ್ರಿಯಮ್ ।
ಅಜಾನಂತಂ ಪ್ರಜಾನಂತೀ ರಾಜ್ಯಲೋಭೇನ ಮೋಹಿತಾ ॥೧೪॥

ರಾಜ್ಯಲೋಭದಿಂದ ಮೋಹಿತಳಾದ ಕೈಕೇಯಿ, ಭರತನಿಗೆ, ಏನೂ ತಿಳಿಯದವನಿಗೆ, ಎಲ್ಲ ತಿಳಿದವಳು, ಪ್ರಿಯವೆಂಬಂತೆ ಘೋರ ಅಪ್ರಿಯವಾದ ಮಾತನ್ನು ಪ್ರತಿಯಾಗಿ ಹೇಳಿದಳು.

ಯಾ ಗತಿಃ ಸರ್ವಭೂತಾನಾಂ ತಾಂ ಗತಿಂ ತೇ ಪಿತಾ ಗತಃ ।
ರಾಜಾ ಮಹಾತ್ಮಾ ತೇಜಸ್ವೀ ಯಾಯಜೂಕಃ ಸತಾಂ ಗತಿಃ ॥೧೫॥

'ಹುಟ್ಟಿದವರೆಲ್ಲರಿಗೂ ಕೊನೆಯಲ್ಲಿ ಯಾವ ಗತಿಯೋ ಆ ಗತಿಯನ್ನೇ ಸಜ್ಜನರಿಗೆ ಗತಿಯಾದ ಯಜ್ಞಶೀಲ ತೇಜಸ್ವಿ ಮಹಾತ್ಮನಾದ ನಿನ್ನ ಪಿತನಾದ ರಾಜನೂ ಹೊಂದಿದ್ದಾನೆ'.

ತಚ್ಛ್ರುತ್ವಾ ಭರತೋ ವಾಕ್ಯಂ ಧರ್ಮಾಭಿಜನವಾನ್ ಶುಚಿಃ ।
ಪಪಾತ ಸಹಸಾ ಭೂಮೌ ಪಿತೃಶೋಕಬಲಾರ್ದಿತಃ ॥೧೬॥

ಧರ್ಮಶೀಲರ ವಂಶದಲ್ಲಿ ಜನಿಸಿದ ನಿರ್ಮಲಚಿತ್ತನಾದ ಭರತನು ಆ ಮಾತನ್ನು ಕೇಳಿ ಒಡನೆ ಪಿತೃಶೋಕದಿಂದ ಬಲವಾಗಿ ಆಘಾತಗೊಂಡು ನೆಲದಲ್ಲಿ ಬಿದ್ದುಬಿಟ್ಟ.

ಹಾ ಹತೋಽಸ್ಮೀತಿ ಕೃಪಣಾಂ ದೀನಾಂ ವಾಚಮುದೀರಯನ್ ।
ನಿಪಪಾತ ಮಹಾಬಾಹುರ್ಬಾಹೂ ವಿಕ್ಷಿಪ್ಯ ವೀರ್ಯವಾನ್ ॥೧೭॥

'ಹಾ, ನಾನು ಕೆಟ್ಟೆ!' ಎಂದು ಶೋಚನೀಯವಾದ ದೀನವಚನವನ್ನುಸುರುತ್ತ ವೀರ್ಯಶಾಲಿ ಮಹಾಬಾಹು ಭರತನು ಕೈಗಳನ್ನೆತ್ತಿ ನೆಲಕ್ಕೆ ಬಡಿದು ನೆಲದ ಮೇಲೆ ಬಿದ್ದ.

ತತಃ ಶೋಕೇನ ಸಂವಿಗ್ನಃ ಪಿತುರ್ಮರಣದುಃಖಿತಃ ।
ವಿಲಲಾಪ ಮಹಾತೇಜಾ ಭ್ರಾಂತಾಕುಲಿತಚೇತನಃ ॥೧೮॥

ತಂದೆಯ ಮರಣದಿಂದ ದುಃಖಿತನಾಗಿ ಶೋಕದಿಂದ ಕಾತರಗೊಂಡು ಕಂಗೆಟ್ಟ ಮನಸಿನ ಕಳವಳದಿಂದ ಮಹಾತೇಜನಾದ ಭರತನು ವಿಲಾಪ ಮಾಡಿದ.

ಏತತ್ ಸುರುಚಿರಂ ಭಾತಿ ಪಿತುರ್ಮೇ ಶಯನಂ ಪುರಾ ।
ಶಶಿನೇವಾಮಲಂ ರಾತ್ರೌ ಗಗನಂ ತೋಯದಾತ್ಯಯೇ ॥೧೯॥

ನನ್ನ ಪಿತನ ಈ ಶಯನಾಗರವು ಮನೋಜ್ಞವಾಗಿ ಕಂಗೊಳಿಸುತ್ತಿತ್ತು. ಶರತ್ಕಾಲದ ರಾತ್ರಿಯಲ್ಲಿ ಚಂದ್ರನಿಂದ ಶೋಭಿಸುವ ನಿರ್ಮಲವಾದ ಆಕಾಶದಂತಿತ್ತು.

ತದಿದಂ ನ ವಿಭಾತ್ಯದ್ಯ ವಿಹೀನಂ ತೇನ ಧೀಮತಾ ।
ವ್ಯೋಮೇವ ಶಶಿನಾ ಹೀನಂ ವಿಶುಷ್ಕ ಇವ ಸಾಗರಃ ॥೨೦॥

ಅದೇ ಶಯನಾಗಾರ ಇದೀಗ ಧೀಮಂತನಾದ ಆತನಿಲ್ಲದೆ ಚಂದ್ರನಿಲ್ಲದ ಆಕಾಶದಂತೆ ಬತ್ತಿಹೋದ ಸಾಗರದಂತೆ ಏನೂ ಶೋಭಿಸುತ್ತಿಲ್ಲ.

ಬಾಷ್ಪಮುತ್ಸೃಜ್ಯ ಕಂಠೇನ ಸಾರ್ತಃ ಪರಮಪೀಡಿತಃ ।
ಪ್ರಚ್ಛಾದ್ಯ ವದನಂ ಶ್ರೀಮದ್ವಸ್ತ್ರೇಣ ಜಯತಾಂ ವರಃ ॥೨೧॥

ಜಯಶಾಲಿಗಳಲ್ಲಿ ಶ್ರೇಷ್ಠನಾದ ಭರತನು ಬಹಳ ಶೋಕಪೀಡಿತನಾಗಿ, ಸುಂದರ-ವಾದ ವದನವನ್ನು ವಸ್ತ್ರದಿಂದ ಮುಚ್ಚಿಕೊಂಡು, ಬಲು ಆರ್ತನಾಗಿ, ಬಾಷ್ಪಗದ್ಗದಿತ-ವಾದ ಕಂಠದಿಂದ ವಿಲಾಪ ಮಾಡಿದ.

ತಮಾರ್ತಂ ದೇವಸಂಕಾಶಂ ಸಮೀಕ್ಷ್ಯ ಪತಿತಂ ಭುವಿ ।
ನಿಕೃತ್ತಮಿವ ಸಾಲಸ್ಯ ಸ್ಕಂಧಂ ಪರಶುನಾ ವನೇ ॥೨೨॥

ಮಾತಾ ಮಾತಂಗಸಂಕಾಶಂ ಚಂದ್ರಾರ್ಕಸದೃಶಂ ಭುವಃ ।
ಉತ್ಥಾಪಯಿತ್ವಾ ಶೋಕಾರ್ತಂ ವಚನಂ ಚೇದಮಬ್ರವೀತ್ ॥೨೩॥

ಚಂದ್ರ ಸೂರ್ಯರಂತೆ ಮದ್ದಾನೆಯಂತೆ ದೇವನಂತೆ ಕಾಣುವ ಭರತನು ಶೋಕಾರ್ತನಾಗಿ ಕಾಡಿನಲ್ಲಿ ಕೊಡಲಿಯಿಂದ ಕಡಿದು ಬಿದ್ದ ಸಾಲವೃಕ್ಷದ ಕಾಂಡದಂತೆ, ನೆಲದಲ್ಲಿ ಬಿದ್ದುದನ್ನು ಕಂಡು ಮಾತೆ ಕೈಕೇಯಿ ನೆಲದಿಂದ ಮೇಲೆತ್ತಿ ಹೇಳಿದಳು.

ಉತ್ತಿಷ್ಠೋತ್ತಿಷ್ಠ ಕಿಂ ಶೇಷೇ ರಾಜಪುತ್ರ ಮಹಾಯಶಃ ।
ತ್ವದ್ವಿಧಾ ನ ಹಿ ಶೋಚಂತಿ ಸಂತಃ ಸದಸಿ ಸಂಮತಾಃ ॥೨೪॥

'ಮಹಾಯಶಸ್ವಿಯಾದ ರಾಜಕುಮಾರನೆ, ಏಳು ಎದ್ದೇಳು, ಏಕೆ ಬಿದ್ದುಕೊಂಡಿರುವೆ? ನಿನ್ನಂಥ ಸಭ್ಯರಾದ ಸತ್ಪುರುಷರು ಹೀಗೆ ದುಃಖ ಪಡಬಾರದು'.

ದಾನಯಜ್ಞಾಧಿಕಾರಾ ಹಿ ಶೀಲಶ್ರುತಿವಚೋಽನುಗಾ ।
ಬುದ್ಧಿಸ್ತೇ ಬುದ್ಧಿಸಂಪನ್ನ ಪ್ರಭೇವಾರ್ಕಸ್ಯ ಮಂದರೇ ॥೨೫॥

'ಬುದ್ಧಿಸಂಪನ್ನನೆ, ನಿನ್ನ ಬುದ್ಧಿ ಶೋಭಿಸಬೇಕಾದರೆ ದಾನಯಜ್ಞಗಳ ವಿಷಯದಲ್ಲಿಯೇ ಇರಬೇಕು. ಶೀಲಕ್ಕೂ ಶ್ರುತಿವಚನಕ್ಕೂ ಅನುಸರಿಸಬೇಕು. ಸೂರ್ಯಪ್ರಭೆ ಬೇರೆ ಕಡೆಗಿಂತ ಚಿನ್ನದ ಬೆಟ್ಟವಾದ ಮಂದರದ ಮೇಲೆಯೇ ಹೆಚ್ಚು ಶೋಭಿಸುತ್ತದೆ; ಹಾಗೆ ಇದು'.

ಸ ರುದಿತ್ವಾ ಚಿರಂ ಕಾಲಂ ಭೂಮೌ ವಿಪರಿವೃತ್ಯ ಚ ।
ಜನನೀಂ ಪ್ರತ್ಯುವಾಚೇದಂ ಶೋಕೈರ್ಬಹುಭಿರಾವೃತಃ ॥೨೬॥

ಭರತನು ಬಹಳ ಹೊತ್ತು ನೆಲದ ಮೇಲೆ ಹೊರಳಿ ಬಹುಶೋಕದಿಂದ ಆವೃತನಾಗಿ ತಾಯಿಗೆ ಹೇಳಿದ.

ಅಭಿಷೇಕ್ಷ್ಯತಿ ರಾಮಂ ನು ರಾಜಾ ಯಜ್ಞಂ ನು ಯಕ್ಷ್ಯತೇ ।
ಇತ್ಯಹಂ ಕೃತಸಂಕಲ್ಪೋ ಹೃಷ್ಟೋ ಯಾತ್ರಾಮಯಾಸಿಷಮ್ ॥೨೭॥

ರಾಜನು ರಾಮನಿಗೆ ಅಭಿಷೇಕ ಮಾಡುತ್ತಾನೋ ಅಥವಾ ಯಜ್ಞ ಮಾಡುತ್ತಾನೋ ಎಂದು ನಿರೀಕ್ಷಿಸಿ ಇಲ್ಲಿಗೆ ಬರಲು ಸಂಕಲ್ಪ ಮಾಡಿ ಉತ್ಸಾಹದಿಂದ ಪ್ರಯಾಣ ಮಾಡಿ ಬಂದೆ.

ತದಿದಂ ಹ್ಯನ್ಯಥಾಭೂತಂ ವ್ಯವದೀರ್ಣಂ ಮನೋ ಮಮ ।
ಪಿತರಂ ಯೋ ನ ಪಶ್ಯಾಮಿ ನಿತ್ಯಂ ಪ್ರಿಯಹಿತೇ ರತಮ್ ॥೨೮॥

ನನ್ನ ಆ ನಿರೀಕ್ಷೆ ಸುಳ್ಳಾಯಿತು. ನನ್ನ ಮನಸು ಒಡೆದು ಹೋಯಿತು. ನಮಗೆ ಪ್ರಿಯವನ್ನೆ ಹಿತವನ್ನೇ ಮಾಡುವುದರಲ್ಲಿ ಸದಾ ನಿರತನಾಗಿರುವ ಪಿತನನ್ನು ನಾನು ಕಾಣುತ್ತಿಲ್ಲ.

ಅಂಬ ಕೇನಾತ್ಯಗಾದ್ರಾಜಾ ವ್ಯಾಧಿನಾ ಮಯ್ಯನಾಗತೇ ।
ಧನ್ಯಾ ರಾಮಾದಯಃ ಸರ್ವೇ ಯೈಃ ಪಿತಾ ಸಂಸ್ಕೃತಃ ಸ್ವಯಮ್ ॥೨೯॥

ಅಮ್ಮ, ರಾಜ ನಾನು ಬರುವುದರೊಳಗೆ ಅದಾವ ರೋಗದಿಂದ ತೀರಿಕೊಂಡ? ಪಿತನಿಗೆ ಸ್ವತಃ ಶರೀರ ಸಂಸ್ಕಾರ ಮಾಡಿದ ರಾಮ ಮುಂತಾದವರೆಲ್ಲರೂ ನಿಜವಾಗಿ ಧನ್ಯರು.

ನ ನೂನಂ ಮಾಂ ಮಹಾರಾಜಃ ಪ್ರಾಪ್ತಂ ಜಾನಾತಿ ಕೀರ್ತಿಮಾನ್ ।
ಉಪಜಿಘ್ರೇದ್ಧಿ ಮಾಂ ಮೂರ್ಧ್ನಿ ತಾತಃ ಸಂನಾಮ್ಯ ಸತ್ವರಮ್ ॥೩೦॥

ಅಥವಾ ತಂದೆಯು ಸತ್ತಿಲ್ಲ. ಕೀರ್ತಿಶಾಲಿಯಾದ ಮಹಾರಾಜನಿಗೆ ಪ್ರಾಯಃ ನಾನು ಬಂದುದೇ ತಿಳಿದಿಲ್ಲ. ತಿಳಿದಿದ್ದರೆ ಬೇಗನೆ ನನ್ನ ತಲೆ ಬಾಗಿಸಿ ನೆತ್ತಿಯನ್ನು ಆಘ್ರಾಣಿಸುತ್ತಿದ್ದ.

ಕ್ವ ಸ ಪಾಣಿಃ ಸುಖಸ್ಪರ್ಶಸ್ತಾತಸ್ಯಾಕ್ಲಿಷ್ಟಕರ್ಮಣಃ ।
ಯೇನ ಮಾಂ ರಜಸಾ ಧ್ವಸ್ತಮಭೀಕ್ಷ್ಣಂ ಪರಿಮಾರ್ಜತಿ ॥೩೧॥

ಕ್ಲೇಶವಿಲ್ಲದೆ ಎಲ್ಲ ಕರ್ಮಗಳನ್ನೂ ಮಾಡಿ ಪೂರೈಸುವ ತಂದೆ ಆಟವಾಡಿ ಮೈ ಧೂಳು ಮಾಡಿಕೊಂಡು ಬಂದ ನನ್ನನ್ನು ಸದಾ ಕೈಯಿಂದ ಒರೆಸುತ್ತಿದ್ದ. ಸುಖ ಸ್ಪರ್ಶವನ್ನು ಕೊಡುತ್ತಿದ್ದ ಅವನ ಆ ಕೈ ಎಲ್ಲಿ?

ಯೋ ಮೇ ಭ್ರಾತಾ ಪಿತಾ ಬಂಧುರ್ಯಸ್ಯ ದಾಸೋಽಸ್ಮಿ ಧೀಮತಃ ।
ತಸ್ಯ ಮಾಂ ಶೀಘ್ರಮಾಖ್ಯಾಹಿ ರಾಮಸ್ಯಾಕ್ಲಿಷ್ಟಕರ್ಮಣಃ ॥೩೨॥

ಕ್ಲೇಶವಿಲ್ಲದೆ ಕರ್ಮ ಮಾಡುವ ರಾಮ ನನಗೆ ಅಣ್ಣನು ಮಾತ್ರವಲ್ಲ, ತಂದೆ ಬಂಧು ಎಲ್ಲವೂ ಆಗಿದ್ದಾನೆ. ಧೀಮಂತನಾದ ಅವನಿಗೆ ನಾನು ದಾಸ. ಅವನಿಗೆ ನನ್ನ ಆಗಮನವನ್ನು ತಿಳಿಸು.

ಪಿತಾ ಹಿ ಭವತಿ ಜ್ಯೇಷ್ಠೋ ಧರ್ಮಮಾರ್ಯಸ್ಯ ಜಾನತಃ ।
ತಸ್ಯ ಪಾದೌ ಗ್ರಹಿಷ್ಯಾಮಿ ಸ ಹೀದಾನೀಂ ಗತಿರ್ಮಮ ॥೩೩॥

ಧರ್ಮವನ್ನು ಬಲ್ಲ ಸತ್ಪುರುಷನಿಗೆ ಅಣ್ಣನು ತಂದೆಗೆ ಸಮಾನನೆನಿಸುತ್ತಾನೆ. ನಾನು ಅವನ ಪಾದ ಮುಟ್ಟಿ ಅಭಿವಾದನ ಮಾಡುತ್ತೇನೆ. ಈಗ ಅವನೇ ನನಗೆ ಗತಿ.

ಧರ್ಮವಿದ್ಧರ್ಮನಿತ್ಯಶ್ಚ ಸತ್ಯಸಂಧೋ ದೃಢವ್ರತಃ ।
ಆರ್ಯಃ ಕಿಮಬ್ರವೀದ್ರಾಜಾ ಪಿತಾ ಮೇ ಸತ್ಯವಿಕ್ರಮಃ ॥೩೪॥

ಅಮ್ಮ, ನನ್ನ ಪಿತನು ಧರ್ಮಜ್ಞ, ಧರ್ಮನಿಷ್ಠ ಸತ್ಯಸಂಧ. ದೃಢ ವ್ರತನಿಷ್ಠೆ-ಯವನು ಸತ್ಪುರುಷ. ಅವನ ಪರಾಕ್ರಮ ಎಂದೂ ವ್ಯರ್ಥವಾಗುತ್ತಿರಲಿಲ್ಲ. ಕಡೆಗಾಲದಲ್ಲಿ ಅವನೇನು ನುಡಿದ? =

ಪಶ್ಚಿಮಂ ಸಾಧು ಸಂದೇಶಮಿಚ್ಛಾಮಿ ಶ್ರೋತುಮಾತ್ಮನಃ ।
ಇತಿ ಪೃಷ್ಟಾ ಯಥಾತತ್ತ್ವಂ ಕೈಕೇಯೀ ವಾಕ್ಯಮಬ್ರವೀತ್ ॥೩೫॥

ಅವನು ನನಗೆ ನೀಡಿದ ಕೊನೆಯ ಸಂದೇಶವನ್ನು ನಾನು ಚೆನ್ನಾಗಿ ಕೇಳಲು ಬಯಸುತ್ತೇನೆ. ಹೀಗೆ ಕೇಳಿದಾಗ ಕೈಕೇಯಿ ಯಥಾರ್ಥವಾದ ಮಾತನ್ನು ನುಡಿದಳು.

ರಾಮೇತಿ ರಾಜಾ ವಿಲಪನ್ ಹಾ ಸೀತೇ ಲಕ್ಷ್ಮಣೇತಿ ಚ ।
ಸ ಮಹಾತ್ಮಾ ಪರಂ ಲೋಕಂ ಗತೋ ಗತಿಮತಾಂ ವರಃ ॥೩೬॥

'ಹಾ ರಾಮ, ಹಾ ಸೀತೆ, ಹಾ ಲಕ್ಷ್ಮಣ' ಎಂದು ವಿಲಪಿಸುತ್ತ ಜ್ಞಾನಿಶ್ರೇಷ್ಠನೂ ಮಹಾತ್ಮನೂ ಆದ ರಾಜನು ಪರಲೋಕವನ್ನೈದಿದ. ಯಾರಿಗೂ ಸಂದೇಶ ನೀಡಲಿಲ್ಲ.

ಇಮಾಂ ತು ಪಶ್ಚಿಮಾಂ ವಾಚಂ ವ್ಯಾಜಹಾರ ಪಿತಾ ತವ ।
ಕಾಲಧರ್ಮಪರಿಕ್ಷಿಪ್ತಃ ಪಾಶೈರಿವ ಮಹಾಗಜಃ ॥೩೭॥

ಮದ್ದಾನೆ ಸರಪಣಿಗಳಿಂದ ಬಂಧಿತವಾಗುವಂತೆ ನಿನ್ನ ಪಿತನು ಯಮಪಾಶ ದಿಂದ ಬದ್ಧನಾಗಿ ಕೊನೆಯದಾಗಿ ಈ ಮಾತನ್ನು ನುಡಿದ.

ಸಿದ್ಧಾರ್ಥಾಸ್ತೇ ನರಾ ರಾಮಮಾಗತಂ ಸೀತಯಾ ಸಹ ।
ಲಕ್ಷ್ಮಣಂ ಚ ಮಹಾಬಾಹುಂ ದ್ರಕ್ಷ್ಯಂತಿ ಪುನರಾಗತಮ್ ॥೩೮॥

'ರಾಮನು ಸೀತೆಯೊಂದಿಗೆ, ಲಕ್ಷ್ಮಣನೊಂದಿಗೆ ಹಿಂತಿರುಗಿ ಬಂದಾಗ ಅವರನ್ನು ಕಾಣುವ ಜನರೇ ಧನ್ಯರು' ಎಂದೂ ಹೇಳುತ್ತಿದ್ದ.

ತಚ್ಛ್ರುತ್ವಾ ವಿಷಸಾದೈವ ದ್ವಿತೀಯಾಪ್ರಿಯಶಂಸನಾತ್ ।
ವಿಷಣ್ಣವದನೋ ಭೂತ್ವಾ ಭೂಯಃ ಪಪ್ರಚ್ಛ ಮಾತರಮ್ ॥೩೯॥

ಈ ಎರಡನೆ ಅಪ್ರಿಯವಾದ ಮಾತನ್ನು ಕೇಳಿ ಭರತನು ಇನ್ನಷ್ಟು ದುಃಖಿತನಾದ. ವಿಷಣ್ಣವದನನಾಗಿ ಪುನಃ ಮಾತೆಯನ್ನು ಕೇಳಿದ.

ಕ್ವ ಚೇದಾನೀಂ ಸ ಧರ್ಮಾತ್ಮಾ ಕೌಸಲ್ಯಾನಂದವರ್ಧನಃ ।
ಲಕ್ಷ್ಮಣೇನ ಸ ಭ್ರಾತ್ರಾ ಸೀತಯಾ ಚ ಸಮಂ ಗತಃ ॥೪೦॥

ಭ್ರಾತನಾದ ಲಕ್ಷ್ಮಣ ಹಾಗೂ ಸೀತೆಯೊಂದಿಗೆ ಹೊರಟುಹೋದ ಕೌಸಲ್ಯಾನಂದ ವರ್ಧನನಾದ ಧರ್ಮಾತ್ಮನಾದ ರಾಮ ಈಗ ಎಲ್ಲಿರುವನು?

ತಥಾ ಪೃಷ್ಟಾ ಯಥಾತತ್ತ್ವಮಾಖ್ಯಾತುಮುಪಚಕ್ರಮೇ ।
ಮಾತಾಸ್ಯ ಯುಗಪದ್ವಾಕ್ಯಂ ವಿಪ್ರಿಯಂ ಪ್ರಿಯಶಂಕಯಾ ॥೪೧॥

ಭರತನು ಹೀಗೆ ಕೇಳಿದಾಗ ಕೈಕೇಯಿ ಭರತನಿಗೆ ಪ್ರಿಯವಾದೀತೆಂದು ಬಗೆದು ಅಪ್ರಿಯವಾದ ಮಾತನ್ನೆ ಏನೂ ತಡವರಿಸದೆ ಒಂದೇ ಉಸಿರಿಗೆ ನಡೆದ ಸಂಗತಿ-ಗಳನ್ನು ಒಮ್ಮೆಲೆ ಹೇಳಲು ತೊಡಗಿದಳು.

ಸ ಹಿ ರಾಜಸುತಃ ಪುತ್ರ ಚೀರವಾಸಾ ಮಹಾವನಮ್ ।
ದಂಡಕಾನ್ ಸಹ ವೈದೇಹ್ಯಾ ಲಕ್ಷ್ಮಣಾನುಚರೋ ಗತಃ ॥೪೨॥

'ಮಗನೆ, ರಾಜಕುಮಾರ ರಾಮನು ಸೀತೆಯೊಂದಿಗೆ ಮತ್ತು ಅನುಚರನಾಗಿ ಹೊರಟ ಲಕ್ಷ್ಮಣನೊಂದಿಗೆ ನಾರುಡೆಯುಟ್ಟು ದಂಡಕ ಮಹಾರಣ್ಯಕ್ಕೆ ಹೊರಟು ಹೋದ'.

ತಚ್ಛ್ರುತ್ವಾ ಭರತಸ್ತ್ರಸ್ತೋ ಭ್ರಾತುಶ್ಚಾರಿತ್ರಶಂಕಯಾ ।
ಸ್ವಸ್ಯ ವಂಶಸ್ಯ ಮಾಹಾತ್ಮ್ಯತ್ ಪ್ರಷ್ಟುಂ ಸಮುಪಚಕ್ರಮೇ ॥೪೩॥

ಅದನ್ನು ಭರತನು ಭ್ರಾತನ ಚಾರಿತ್ರದಲ್ಲಿ ಸಂದೇಹಪಟ್ಟು, ತನ್ನ ವಂಶದ ಮಾಹಾತ್ಮ್ಯಕ್ಕೆ ಧಕ್ಕೆ ಬಂದಿತೆ ಎಂದು ಭಯಪಟ್ಟು, ಕೇಳಲು ತೊಡಗಿದ.

ಕಚ್ಚಿನ್ನ ಬ್ರಾಹ್ಮಣಧನಂ ಹೃತಂ ರಾಮೇಣ ಕಸ್ಯಚಿತ್ ।
ಕಚ್ಚಿನ್ನಾಢ್ಯೋ ದರಿದ್ರೋ ವಾ ತೇನಾಪಾಪೋ ವಿಹಿಂಸಿತಃ ॥೪೪॥

ಯಾವುದೋ ಕಾರಣಕ್ಕೆ ರಾಮ ಬ್ರಾಹ್ಮಣಧನವನ್ನು ಅಪಹರಿಸಲಿಲ್ಲ ತಾನೆ? ನಿಷ್ಪಾಪನಾದ ಶ್ರೀಮಂತನನ್ನಾಗಲಿ ಬಡವನನ್ನಾಗಲಿ ರಾಮನು ಹಿಂಸಿಸಲಿಲ್ಲ ತಾನೆ?

ಕಚ್ಚಿನ್ನ ಪರದಾರಾನ್ ವಾ ರಾಜಪುತ್ರೋಽಭಿಮನ್ಯತೇ ।
ಕಸ್ಮಾತ್ ಸ ದಂಡಕಕಾರಣ್ಯೇ ಭ್ರೂಣಹೇವ ವಿವಾಸಿತಃ ॥೪೫॥

ರಾಜಕುಮಾರ ರಾಮನು ಪರಸ್ತ್ರೀಯನ್ನು ಅಪರಿಸಲಿಲ್ಲ ತಾನೆ? ಭ್ರೂಣಹತ್ಯಾ-ಕಾರಿಯಂತೆ ರಾಮ ದಂಡಕಾರಣ್ಯಕ್ಕೆ ಕಳಿಸಲ್ಪಟ್ಟಿದ್ದು ಏಕೆ?

ಅಥಾಸ್ಯ ಚಪಲಾ ಮಾತಾ ತತ್ ಸ್ವಕರ್ಮ ಯಥಾತಥಮ್ ।
ತೇನೈವ ಸ್ತ್ರೀಸ್ವಭಾವೇನ ವ್ಯಾಹರ್ತುಮುಪಚಕ್ರಮೇ ॥೪೬॥

ಚಪಲೆಯಾದ ಮಾತೆ ಕೈಕೇಯಿ ಹಟಮಾರಿ ಹೆಣ್ಣಿನ ಸ್ವಭಾವದಂತೆ ತಾನು ಮಾಡಿದ ದುಷ್ಕರ್ಮವನ್ನು ಯಥಾವತ್ತಾಗಿ ಹೇಳಲು ತೊಡಗಿದಳು.

ಏವಮುಕ್ತಾ ತು ಕೈಕೇಯೀ ಭರತೇನ ಮಹಾತ್ಮನಾ ।
ಉವಾಚ ವಚನಂ ಹೃಷ್ಟಾ ಮೂಢಾ ಪಂಡಿತಮಾನಿನೀ ॥೪೭॥

ಮಹಾತ್ಮ ಭರತನ ಪ್ರಶ್ನೆಗಳನ್ನು ಕೇಳಿ, ತಾನು ಪಂಡಿತೆ ಎಂದು ಅಭಿಮಾನ ಪಟ್ಟಿದ್ದ ಮೂಢೆ ಕೈಕೇಯಿ ಉತ್ಸಾಹದಿಂದ ಹೇಳಿದಳು.

ನ ಬ್ರಾಹ್ಮಣಧನಂ ಕಿಂಚಿದ್ಧೃತಂ ರಾಮೇಣ ಧೀಮತಾ ।
ಕಚ್ಚಿನ್ನಾಢ್ಯೋ ದರಿದ್ರೋ ವಾ ತೇನಾಪಾಪೋ ವಿಹಿಂಸಿತಃ ॥೪೮॥

'ಧೀಮಂತನಾದ ರಾಮ ಬ್ರಾಹ್ಮಣ ಧನವನ್ನೇನೂ ಅಪಹರಿಸಲಿಲ್ಲ. ನಿಷ್ಪಾಪನಾದ ಶ್ರೀಮಂತನನ್ನಾಗಲಿ ಬಡವನನ್ನಾಗಲಿ ಹಿಂಸಿಸಲಿಲ್ಲ.

ನ ರಾಮಃ ಪರದಾರಾಂಶ್ಚ ಚಕ್ಷುರ್ಭ್ಯಾಮಪಿ ಪಶ್ಯತಿ ।
ಮಯಾ ತು ಪುತ್ರ ಶ್ರುತ್ವೈವಂ ರಾಮಸ್ಯೈವಾಭಿಷೇಚನಮ್ ॥೪೯॥

ಯಾಚಿತಸ್ತೇ ಪಿತಾ ರಾಜ್ಯಂ ರಾಮಸ್ಯ ಚ ವಿವಾಸನಮ್ ।
ಸ ಸ್ವವೃತ್ತಿಂ ಸಮಾಸ್ಥಾಯ ಪಿತಾ ತೇ ತತ್ತಥಾಕರೋತ್ ॥೫೦॥

'ರಾಮ ಪರಸ್ತ್ರೀಯರನ್ನು ಕಣ್ಣೆತ್ತಿಯೂ ನೋಡುವುದಿಲ್ಲ. ಮಗನೆ, ನಾನು ರಾಮನಿಗೆ ಅಭಿಷೇಕವೆಂದು ಕೇಳಿ, ನಿನ್ನ ಪಿತನಲ್ಲಿ ನಿನಗೆ ರಾಜ್ಯವನ್ನೂ ರಾಮನ ವನವಾಸವನ್ನೂ ಕೇಳಿದೆ. ನಿನ್ನ ಪಿತನು ಪ್ರತಿಜ್ಞಾಪಾಲನ ಧರ್ಮವನ್ನು ಕೈಗೊಂಡು ಹಾಗೇ ವರಗಳನ್ನು ನೀಡಿದ.

ರಾಮಶ್ಚ ಸಹಸೌಮಿತ್ರಿಃ ಪ್ರೇಷಿತಃ ಸಹ ಸೀತಯಾ ।
ತಮಪಶ್ಯನ್ ಪ್ರಿಯಂ ಪುತ್ರಂ ಮಹೀಪಾಲೋ ಮಹಾಯಶಾಃ ॥೫೧॥

ಪುತ್ರಶೋಕಪರಿದ್ಯೂನಃ ಪಂಚತ್ವಮುಪಪೇದಿವಾನ್ ।
ತ್ವಯಾ ತ್ವಿದಾನೀಂ ಧರ್ಮಜ್ಞ ರಾಜತ್ವಮವಲಂಬ್ಯತಾಮ್ ।
ತ್ವತ್ಕೃತೇ ಹಿ ಮಯಾ ಸರ್ವಮಿದಮೇವಂವಿಧಂ ಕೃತಮ್ ॥೫೨॥

'ಅದರಂತೆ ರಾಮನನ್ನು ಸೀತಾಲಕ್ಷ್ಮಣರೊಂದಿಗೆ ಕಾಡಿಗೆ ಕಳಿಸಿದ ಬಳಿಕ ಪ್ರಿಯಪುತ್ರನಾದ ಆತನನ್ನು ಮಹಾಯಶಸ್ವಿಯಾದ ರಾಜನು ಕಾಣದೆ ಪುತ್ರಶೋಕ ಪೀಡಿತನಾಗಿ ಅಸುನೀಗಿದ. ನಿನಗಾಗಿ ಇದೆಲ್ಲವನ್ನೂ ನಾನು ಹೀಗೆ ಮಾಡಿಬಿಟ್ಟೆ. ಧರ್ಮಜ್ಞನೆ, ನೀನೀಗ ರಾಜ್ಯಭಾರವನ್ನು ಕೈಗೊಳ್ಳು'.

ಮಾ ಶೋಕಂ ಮಾ ಚ ಸಂತಾಪಂ ಧೈರ್ಯಮಾಶ್ರಯ ಪುತ್ರಕ
ತ್ವದಧೀನಾ ಹಿ ನಗರೀ ರಾಜ್ಯಂ ಚೈತದನಾಯಕಮ್ ॥೫೩॥

'ಶೋಕಿಸಬೇಡ, ಸಂತಾಪ ಪಡಬೇಡ, ಧೈರ್ಯವನ್ನು ತಾಳು, ಮಗು, ಈಗ ನಿನ್ನ ಅಧೀನ ಈ ಅಯೋಧ್ಯಾನಗರ. ನಾಯಕನಿಲ್ಲದ ಈ ರಾಜ್ಯವೂ ನಿನ್ನ ಅಧೀನ.

ತತ್ ಪುತ್ರ ಶೀಘ್ರಂ ವಿಧಿನಾ ವಿಧಿಜ್ಞೈ-
ರ್ವಸಿಷ್ಠಮುಖ್ಯೈಃ ಸಹಿತೋ ದ್ವಿಜೇಂದ್ರೈಃ ।
ಸಂಕಾಲ್ಯ ರಾಜಾನಮದೀನಸತ್ವ-
ಮಾತ್ಮಾನಮುರ್ವ್ಯಾಮಭಿಷೇಚಯಸ್ವ ॥೫೪॥

'ಅದುದರಿಂದ ಮಗನೆ, ನೀನು ಬೇಗನೆ ವಿಧಿಜ್ಞರಾದ ವಸಿಷ್ಠ ಮುಂತಾದ ಬ್ರಾಹ್ಮಣೋತ್ತಮರಿಂದ ಕೂಡಿ ಮಹಾಪರಾಕ್ರಮಿಯಾದ ರಾಜನ ಉತ್ತರಕ್ರಿಯೆ-ಗಳನ್ನು ವಿಧಿಪೂರ್ವಕವಾಗಿ ಮಾಡಿ ಭೂಮಿಗೆ ಅಧಿಪತಿಯಾಗಿ ಪಟ್ಟಾಭಿಷಿಕ್ತನಾಗು'.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಎಪ್ಪತ್ತೆರಡನೇ ಸರ್ಗ ಮುಗಿಯಿತು.

ತ್ರಿಸಪ್ತತಿತಮಃ ಸರ್ಗಃ

ಸರ್ಗ – 73

ಭರತನು ಕೈಕೇಯಿಯನ್ನು ನಿಂದಿಸುವುದು.

ಶ್ರುತ್ವಾ ತು ಪಿತರಂ ವೃತ್ತಂ ಭ್ರಾತರೌ ಚ ವಿವಾಸಿತೌ ।
ಭರತೋ ದುಃಖಸಂತಪ್ತ ಇದಂ ವಚನಮಬ್ರವೀತ್ ॥೧॥

ಪಿತನು ಮರಣ ಹೊಂದಿದ್ದನ್ನೂ ರಾಮಲಕ್ಷ್ಮಣರು ಕಾಡಿಗೆ ಹೋದುದನ್ನೂ ಕೇಳಿ ದುಃಖದಿಂದ ಸಂತಾಪಗೊಂಡ ಭರತನು ನುಡಿದ.

ಕಿಂ ನು ಕಾರ್ಯಂ ಹತಸ್ಯೇವ ಮಮ ರಾಜ್ಯೇನ ಶೋಚತಃ ।
ವಿಹೀನಸ್ಯಾಥ ಪಿತ್ರಾ ಚ ಭ್ರಾತ್ರಾ ಪಿತೃಸಮೇನ ಚ ॥೨॥

ಪಿತನನ್ನೂ ಪಿತೃಸಮಾನನಾದ ಅಣ್ಣನನ್ನೂ ಕಳೆದುಕೊಂಡು ಶೋಕಿಸುವ ಹತನಾದ ಮಂದಭಾಗ್ಯನಾದ ನನಗೆ ರಾಜ್ಯದಿಂದ ಏನಾಗಬೇಕು?

ದುಃಖೇ ಮೇ ದುಃಖಮಕರೋರ್ವ್ರಣೇ ಕ್ಷಾರಮಿವಾದಧಾಃ ।
ರಾಜಾನಂ ಪ್ರೇತಭಾವಸ್ಥಂ ಕೃತ್ವಾ ರಾಮಂ ಚ ತಾಪಸಮ್ ॥೩॥

ಗಾಯದ ಮೇಲೆ ಉಪ್ಪು ಸುರಿವಂತೆ ದುಃಖದ ಮೇಲೆ ದುಃಖ ಉಂಟು-ಮಾಡಿರುವೆ. ರಾಜನನ್ನು ಕೊಂದಿರುವೆ. ಜೊತೆಗೆ ರಾಮನನ್ನೂ ತಾಪಸನನ್ನಾಗಿ ಮಾಡಿರುವೆ.

ಕುಲಸ್ಯ ತ್ವಮಭಾವಾಯ ಕಾಲರಾತ್ರಿರಿವಾಗತಾ ।
ಅಂಗಾರಮುಪಗೂಹ್ಯ ತ್ವಾಂ ಪಿತಾ ಮೇ ನಾವಬುದ್ಧವಾನ್ ॥೪॥

ಕುಲದ ನಾಶಕ್ಕಾಗಿ ಕಾಳರಾತ್ರಿಯಂತೆ ನೀನು ಬಂದಿರುವೆ. ನನ್ನ ಪಿತನು ಬೆಂಕಿಕೆಂಡವನ್ನು ಆಲಿಂಗಿಸುತ್ತ ನಿನ್ನನ್ನು ತಿಳಿಯದೆ ಹೋದನು.

ಮೃತ್ಯುಮಾಪಾದಿತೋ ರಾಜಾ ತ್ವಯಾ ಮೇ ಪಾಪದರ್ಶಿನಿ ।
ಸುಖಂ ಪರಿಹೃತಂ ಮೋಹಾತ್ ಕುಲೇಽಸ್ಮಿನ್ ಕುಲಪಾಂಸಿನಿ ॥೫॥

ಕುಲ ಕಳಂಕಿನಿ, ಪಾಪವನ್ನೇ ಕಾಣುವವಳೆ, ನೀನು ನನಗಾಗಿ ನನ್ನ ರಾಜನನ್ನೇ ಕೊಂದು ಬಿಟ್ಟೆ! ಮೂಢತನದಿಂದ ಈ ಕುಲಕ್ಕೆ ಸುಖವಿಲ್ಲದಂತೆ ಮಾಡಿಬಿಟ್ಟೆ.

ತ್ವಾಂ ಪ್ರಾಪ್ಯ ಹಿ ಪಿತಾ ಮೇಽದ್ಯ ಸತ್ಯಸಂಧೋ ಮಹಾಯಶಾಃ ।
ತೀವ್ರದುಃಖಾಭಿಸಂತಪ್ತೋ ವೃತ್ತೋ ದಶರಥೋ ನೃಪಃ ॥೬॥

ಸತ್ಯಸಂಧ ಮಹಾಕೀರ್ತಿಶಾಲಿ ನನ್ನ ಪಿತ ದಶರಥ ಮಹಾರಾಜ ನಿನ್ನ ಕೈಹಿಡಿದು ಇಂದು ತೀವ್ರದುಃಖದಿಂದ ಪರಿತಪಿಸಿ ಕಾಲವಶನಾದ.

ವಿನಾಶಿತೋ ಮಹಾರಾಜಃ ಪಿತಾ ಮೇ ಧರ್ಮವತ್ಸಲಃ ।
ಕಸ್ಮಾತ್ ಪ್ರವ್ರಾಜಿತೋ ರಾಮಃ ಕಸ್ಮಾದೇವ ವನಂ ಗತಃ ॥೭॥

ಧರ್ಮಪ್ರಿಯನಾದ ನನ್ನ ಪಿತನಾದ ಮಹಾರಾಜನನ್ನು ನಾಶಮಾಡಿದೆ. ರಾಮನನ್ನೇಕೆ ದೂರಕ್ಕೆ ಅಟ್ಟಿದೆ? ಅವನೇಕೆ ಕಾಡಿಗೆ ಹೊರಟು ಹೋದ?

ಕೌಸಲ್ಯಾ ಚ ಸುಮಿತ್ರಾ ಚ ಪುತ್ರಶೋಕಾಭಿಪೀಡಿತೇ ।
ದುಷ್ಕರಂ ಯದಿ ಜೀವೇತಾಂ ಪ್ರಾಪ್ಯ ತ್ವಾಂ ಜನನೀಂ ಮಮ ॥೮॥

ನನ್ನ ತಾಯಿಯಾದ ನಿನ್ನನ್ನು ಸವತಿಯಾಗಿ ಪಡೆದ ಮೇಲೆ ಕೌಸಲ್ಯೆ ಸುಮಿತ್ರೆ-ಯರು ಪುತ್ರಶೋಕ ಪೀಡೆಯಿಂದ ಇನ್ನು ಬದುಕಿದರೂ ಕಷ್ಟವೆ.

ನನು ತ್ವಾಯ್ಯೇಽಪಿ ಧರ್ಮಾತ್ಮಾ ತ್ವಯಿ ವೃತ್ತಿಮನುತ್ತಮಾಮ್ ।
ವರ್ತತೇ ಗುರುವೃತ್ತಿಜ್ಞೋ ಯಥಾ ಮಾತರಿ ವರ್ತತೇ ॥೯॥

ಅಣ್ಣನೂ ಧರ್ಮಾತ್ಮ. ನಿನ್ನಲ್ಲಿ ಅವನು ಬಹಳ ಚೆನ್ನಾಗಿ ನಡೆದುಕೊಂಡೆ ಇದ್ದಾನೆ. ಹಿರಿಯರಲ್ಲಿ ಹೇಗೆ ನಡೆದುಕೊಳ್ಳಬೇಕೆಂಬುದು ಅವನಿಗೆ ತಿಳಿದಿರುವುದರಿಂದ ಸ್ವಂತ ತಾಯಿಯಾದ ಕೌಸಲ್ಯೆಯಲ್ಲಿ ಹೇಗೋ ಹಾಗೇ ನಿನ್ನಲ್ಲಿಯೂ ನಡೆದುಕೊಳ್ಳುತ್ತಿದ್ದಾನೆ.

ತಥಾ ಜ್ಯೇಷ್ಠಾ ಹಿ ಮೇ ಮಾತಾ ಕೌಸಲ್ಯಾ ದೀರ್ಘದರ್ಶಿನೀ ।
ತ್ವಯಿ ಧರ್ಮಂ ಸಮಾಸ್ಥಾಯ ಭಗಿನ್ಯಾಮಿವ ವರ್ತತೇ ॥೧೦॥

ನನ್ನ ಹಿರಿಯ ತಾಯಿಯೂ ದೀರ್ಘಾಲೋಚನೆ ಉಳ್ಳವಳು ಸವತಿಯ ಧರ್ಮ-ವನ್ನು ಅನುಸರಿಸುತ್ತ ನಿನ್ನನ್ನು ಒಡಹುಟ್ಟಿದ ತಂಗಿಯಂತೆ ನೋಡಿಕೊಳ್ಳುತ್ತಾಳೆ.

ತಸ್ಯಾಃ ಪುತ್ರಂ ಮಹಾತ್ಮಾನಂ ಚೀರವಲ್ಕಲವಾಸಸಮ್ ।
ಪ್ರಸ್ಥಾಪ್ಯ ವನವಾಸಾಯ ಕಥಂ ಪಾಪೇ ನ ಶೋಚಸಿ ॥೧೧॥

ಅಂಥ ತಾಯಿಯ ಮಗನಾದ ರಾಮನನ್ನು ನಾರುಡೆ ಉಡಿಸಿ ವನವಾಸಕ್ಕೆ ಅಟ್ಟಿ ಹೇಗೆ ಏನೂ ಪಶ್ಚಾತ್ತಾಪ ಪಡದೆ ಇರುವೆ?

ಅಪಾಪದರ್ಶನಂ ಶೂರಂ ಕೃತಾತ್ಮಾನಂ ಯಶಸ್ವಿನಮ್ ।
ಪ್ರವ್ರಾಜ್ಯ ಚೀರವಸನಂ ಕಿಂ ನು ಪಶ್ಯಸಿ ಕಾರಣಮ್ ॥೧೨॥

ಪಾಪವನ್ನು ಕಂಡರಿಯದವನು ಶೂರ ಒಳ್ಳೆಯ ಜ್ಞಾನಿ ಯಶಸ್ವಿ ಇಂಥ ರಾಮನನ್ನು ನಾರುಡೆ ಉಡಿಸಿ ಕಾಡಿಗೆ ಅಟ್ಟಿ ಏನು ಸಾಧನೆ ಮಾಡಬೇಕೆಂದಿರುವಿ?

ಲುಬ್ಧಾಯಾ ವಿದಿತೋ ಮನ್ಯೇ ನ ತೇऽಹಂ ರಾಘವಂ ಪ್ರತಿ ।
ತಥಾ ಹ್ಯನರ್ಥೋ ರಾಜ್ಯಾರ್ಥಂ ತ್ವಯಾऽऽನೀತೋ ಮಹಾನಯಮ್ ॥

ರಾಜ್ಯ ಲೋಭದಿಂದ ಕುರುಡಾದ ನಿನಗೆ ನಾನು ರಾಮನ ಬಗ್ಗೆ ಎಂಥ ಭಕ್ತಿ ಪ್ರೀತಿ ಉಳ್ಳವನೆಂಬುದು ತಿಳಿದೇ ಇಲ್ಲ ಎಂದು ಭಾವಿಸುತ್ತೇನೆ. ಅದರಿಂದಲೆ ರಾಜ್ಯಕ್ಕಾಗಿ ನೀನು ಇಂಥ ಮಹಾ ಅನರ್ಥವನ್ನು ನನಗೆ ತಂದುಕೊಟ್ಟೆ.

ಅಹಂ ಹಿ ಪುರುಷವ್ಯಾಘ್ರಾವಪಶ್ಯನ್ ರಾಮಲಕ್ಷ್ಮಣೌ ।
ಕೇನ ಶಕ್ತಿಪ್ರಭಾವೇಣ ರಾಜ್ಯಂ ರಕ್ಷಿತುಮುತ್ಸಹೇ ॥೧೪॥

ಪುರುಷೋತ್ತಮರಾದ ರಾಮಲಕ್ಷ್ಮಣರನ್ನು ಕಾಣದೆ ನಾನು ಯಾವ ಶಕ್ತಿ ಪ್ರಭಾವದಿಂದ ರಾಜ್ಯವನ್ನು ಪಾಲಿಸಬಲ್ಲೆ?

ತಂ ಹಿ ನಿತ್ಯಂ ಮಹಾರಾಜೋ ಬಲವಂತಂ ಮಹಾಬಲಃ ।
ಉಪಾಶ್ರಿತೋऽಭೂದ್ಧರ್ಮಾತ್ಮಾ ಮೇರುರ್ಮೇರುವನಂ ಯಥಾ॥೧೫॥

ಮಹಾಬಲನಾದ ಧರ್ಮಾತ್ಮನಾದ ಮಹಾರಾಜನು ಕೂಡ ಬಲಿಷ್ಠನಾದ ರಾಮನನ್ನೇ ಮೇರುಪರ್ವತವು ಮೇರುವಿನ ಅರಣ್ಯವನ್ನು ಹೇಗೋ ಹಾಗೆ ಸದಾ ಆಶ್ರಯಿಸಿದ್ದ.

ಸೋऽಹಂ ಕಥಮಿಮಂ ಭಾರಂ ಮಹಾಧುರ್ಯಸಮುದ್ಧೃತಮ್ ।
ದಮ್ಯೋ ಧುರಮಿವಾಸಾದ್ಯ ವಹೇಯಂ ಕೇನ ಚೌಜಸಾ ॥೧೬॥

ದೊಡ್ಡ ಎತ್ತಿಗೆ ಮಾತ್ರ ಹೊರಲಾಗುವ ಭಾರವನ್ನು ಎಳೆಗರು ಹೇಗೋ ಹಾಗೆ ಮಹಾರಾಜ ಹೊತ್ತಿದ್ದ ಈ ರಾಜ್ಯದ ರಕ್ಷಣೆಯ ಭಾರವನ್ನು ನಾನು ತೆಗೆದುಕೊಂಡು ಯಾವ ಸಾಮರ್ಥ್ಯದಿಂದ ತಾನೆ ಹೊರಬಲ್ಲೆ? ನನಗೆ ರಾಮನೇ ಬಲ ಸಾಮರ್ಥ್ಯ ಎಲ್ಲವೂ.

ಅಥವಾ ಮೇ ಭವೇಚ್ಛಕ್ತಿರ್ಯೋಗೈರ್ಬುದ್ಧಿಬಲೇನ ವಾ ।
ಸಕಾಮಾಂ ನ ಕರಿಷ್ಯಾಮಿ ತ್ವಾಮಹಂ ಪುತ್ರಗರ್ಧಿನೀಮ್ ॥೧೭॥

ಸಾಮ ದಾನ ಮುಂತಾದ ಉಪಾಯಗಳ ಬಲದಿಂದಾಗಲಿ ಬುದ್ಧಿಬಲ-ದಿಂದಾಗಲಿ ನನಗೆ ರಾಜ್ಯಭಾರ ಮಾಡುವ ಸಾಮರ್ಥ್ಯ ಒಂದುವೇಳೆ ಬರಬಹುದು. ಆದರೂ ಮಗನ ಮೇಲಿನ ಮೋಹದಿಂದ ಅಕೃತ್ಯವನ್ನು ಮಾಡುವ ನಿನ್ನ ಈ ಮನೋಭಿಲಾಷೆಯನ್ನು ಮಾತ್ರ ಸರ್ವಥಾ ನಾನು ಪೂರೈಸಲಾರೆ.

ನ ಮೇ ವಿಕಾಂಕ್ಷಾ ಜಾಯೇತ ತ್ಯಕ್ತುಂ ತ್ವಾಂ ಪಾಪನಿಶ್ಚಯಾಮ್ ।
ಯದಿ ರಾಮಸ್ಯ ನಾಪೇಕ್ಷಾ ತ್ವಯಿ ಸ್ಯಾನ್ಮಾತೃವತ್ಸದಾ ॥೧೮॥

ರಾಮ ನಿನ್ನನ್ನು ಸದಾ ಮಾತೆಯಂತೆ ನೋಡಿಕೊಂಡಿಲ್ಲದಿರುತ್ತಿದ್ದರೆ ಪಾಪ ಕರ್ಮ ಮಾಡಲು ನಿಶ್ಚಯವನ್ನೇ ಮಾಡುವ ನಿನ್ನನ್ನು ತ್ಯಾಗಮಾಡಲು ನಾನು ಹಿಂದು ಮುಂದು ನೋಡುತ್ತಿರಲಿಲ್ಲ. ತ್ಯಾಗ ಮಾಡಿಬಿಡುತ್ತಿದ್ದೆ.

ಉತ್ಪನ್ನಾ ತು ಕಥಂ ಬುದ್ಧಿಸ್ತವೇಯಂ ಪಾಪದರ್ಶಿನಿ ।
ಸಾಧುಚಾರಿತ್ರವಿಭ್ರಷ್ಟೇ ಪೂರ್ವೇಷಾಂ ನೋ ವಿಗರ್ಹಿತಾ ॥೧೯॥

ಪಾಪಕರ್ಮಬುದ್ಧಿಯವಳೆ, ಸಚ್ಚಾರಿತ್ರ್ಯ ಭ್ರಷ್ಟಳೆ. ನಮ್ಮ ಪೂರ್ವಿಕರು ನಿಂದಿಸು-ತ್ತಿದ್ದ ಈ ದುರ್ಬುದ್ಧಿ ನಿನ್ನಲ್ಲಿ ಹೇಗೆ ತಾನೆ ಹುಟ್ಟಿಕೊಂಡಿತು?

ಅಸ್ಮಿನ್ ಕುಲೇ ಹಿ ಪೂರ್ವೇಷಾಂ ಜ್ಯೇಷ್ಠೋ ರಾಜ್ಯೇऽಭಿಷಿಚ್ಯತೇ ।
ಅಪರೇ ಭ್ರಾತರಸ್ತಸ್ಮಿನ್ ಪ್ರವರ್ತಂತೇ ಸಮಾಹಿತಾಃ ॥೨೦॥

ನಮ್ಮ ಕುಲದಲ್ಲಿ ಜ್ಯೇಷ್ಠಪುತ್ರನಿಗೆ ಪಟ್ಟಾಭಿಷೇಕ ಮಾಡುವುದು, ಉಳಿದ ಸೋದರರು ಅವನಿಗೆ ವಿಧೇಯರಾಗಿರುವುದು ಹಿಂದಿನವರ ಪದ್ಧತಿಯಾಗಿದೆ.

ಅಣ್ಣ ಮದುವೆಯಾಗದಿದ್ದಾಗ ತಮ್ಮ ಮದುವೆಯಾದರೆ ಆ ಅಣ್ಣ ಆ ತಮ್ಮ ಇಬ್ಬರೂ ನರಕ ಭಾಗಿಗಳಾಗುತ್ತಾರೆ ಎಂದು ಮನುಸ್ಮೃತಿ (3.172) ಹೇಳುತ್ತದೆ. ಅಭಿಷೇಕವೂ ಒಂದು ರೀತಿಯ ಮದುವೆಯೆ. ರಾಜನು ರಾಜ್ಯಲಕ್ಷ್ಮಿಯನ್ನು ಮದುವೆಯಾಗುತ್ತಾನೆ. ಅದರಿಂದ ತಂದೆ ರಾಜ್ಯವಾಳುತ್ತಿರುವಾಗಲೆ ಮಗನು ಅಭಿಷೇಕ ಮಾಡಿಸಿಕೊಂಡರೆ ಅವನು ತಾಯಿಗೆ ಗಂಡನಾದಂತೆ. ಹಾಗೇ ತಂದೆಯ ಅನಂತರ ಅಣ್ಣನಿಗೆ ನ್ಯಾಯವಾಗಿ ಬರುತ್ತಿರುವ ರಾಜ್ಯದ ಹಕ್ಕನ್ನು ತಮ್ಮನ್ನು ಕಸಿದುಕೊಂಡರೂ ಅಷ್ಟೇ ಪಾಪ. ಆದರೆ ತಂದೆಯನ್ನು ಕೊಂದು ಅಣ್ಣನನ್ನೂ ಕಾಡಿಗೆ

ಕಳಿಸಿ ತಮ್ಮನಿಗಾಗಿ ರಾಜ್ಯವನ್ನು ಈಗ ಕೈಕೇಯಿ ವರದ ನೆಪದಿಂದ ಕಸಿದು-ಕೊಂಡಿದ್ದಾಳೆ. ಪಾಪಭೀರುವಾದ ಭರತ ಇದನ್ನು ಸರ್ವಥಾ ಒಪ್ಪಲಾರ.

ನ ಹಿ ಮನ್ಯೇ ನೃಶಂಸೇ ತ್ವಂ ರಾಜಧರ್ಮಮವೇಕ್ಷಸೇ ।
ಗತಿಂ ವಾ ನ ವಿಜಾನಾಸಿ ರಾಜವೃತ್ತಸ್ಯ ಶಾಶ್ವತೀಮ್ ॥೨೧॥

ಕ್ರೂರಿ! ನೀನು ರಾಜಧರ್ಮವನ್ನು ತಿಳಿದಿಲ್ಲ ಎಂದು ನನಗೆ ಅನಿಸುತ್ತಿದೆ. ರಾಜಮನೆತನದ ಹಿಂದಿನ ಸನಾತನ ಪರಂಪರೆಯನ್ನು ಕೂಡ ನೀನು ಗಮನಿಸುತ್ತಿಲ್ಲ ಎನಿಸುತ್ತದೆ.

ಸತತಂ ರಾಜವೃತ್ತೇ ಹಿ ಜ್ಯೇಷ್ಠೋ ರಾಜ್ಯೇऽಭಿಷಿಚ್ಯತೇ ।
ರಾಜ್ಞಾಮೇತತ್ ಸಮಂ ತತ್ ಸ್ಯಾದಿಕ್ಷ್ವಾಕೂಣಾಂ ವಿಶೇಷತಃ ॥೨೨॥

ರಾಜರುಗಳಲ್ಲಿ ಹಿಂದಿನಿಂದ ನಡೆದು ಬಂದ ಪರಂಪರೆಯಂತೆ ಜ್ಯೇಷ್ಠಪುತ್ರನಿಗೆ ಅಭಿಷೇಕ ಮಾಡುತ್ತಾರೆ. ಇದು ಎಲ್ಲ ರಾಜರಿಗೂ ಸಮಾನ. ವಿಶೇಷವಾಗಿ ಇಕ್ಷ್ವಾಕುವಂಶದವರು ಇದನ್ನು ಪಾಲಿಸಲೇಬೇಕಾಗಿದೆ.

ತೇಷಾಂ ಧರ್ಮೈಕರಕ್ಷಾಣಾಂ ಕುಲಚಾರಿತ್ರಶೋಭಿನಾಮ್ ।
ಅದ್ಯ ಚಾರಿತ್ರಶೌಂಡೀರ್ಯಂ ತ್ವಾಂ ಪ್ರಾಪ್ಯ ವಿನಿವರ್ತಿತಮ್ ॥೨೩॥

ಇಕ್ಷ್ವಾಕು ಕುಲದವರಿಗೆ ಧರ್ಮರಕ್ಷಣೆಯೊಂದೇ ಆದ್ಯಕರ್ತವ್ಯವಾಗಿತ್ತು. ಕುಲೋಚಿತವಾದ ಚಾರಿತ್ರ್ಯದಿಂದ ಅವರು ಶೋಭಿಸುತ್ತಿದ್ದರು. ಇದೀಗ ನೀನು ಈ ಕುಲದಲ್ಲಿ ಸೇರಿಕೊಂಡ ಬಳಿಕ ಅವರ ಆ ಚಾರಿತ್ರ್ಯದ ಅಭಿಮಾನಕ್ಕೆ ಪೆಟ್ಟು ಬಿದ್ದಂತಾಗಿದೆ.

ತವಾಪಿ ಸುಮಹಾಭಾಗಾ ಜನೇಂದ್ರಾಃ ಕುಲಪೂರ್ವಗಾಃ ।
ಬುದ್ಧೇರ್ಮೋಹಃ ಕಥಮಯಂ ಸಂಭೂತಸ್ತ್ವಯಿ ಗರ್ಹಿತಃ ॥೨೪॥

ನಿನ್ನ ಪೂರ್ವಿಕರಾದ ರಾಜರೂ ಕೂಡ ಒಳ್ಳೆಯ ಚಾರಿತ್ರ್ಯಶಾಲಿಗಳೆ. ಆದರೂ ನಿನ್ನಲ್ಲಿ ಈ ಕೆಟ್ಟ ಬುದ್ಧಿಮೋಹ ಹೇಗೆ ಉಂಟಾಯಿತು?

ನ ತು ಕಾಮಂ ಕರಿಷ್ಯಾಮಿ ತವಾಹಂ ಪಾಪನಿಶ್ಚಯೇ ।
ಯಯಾ ವ್ಯಸನಮಾರಬ್ಧಂ ಜೀವಿತಾಂತಕರಂ ಮಮ ॥೨೫॥

ನನ್ನ ಬಾಳನ್ನೇ ಹಾಳುಮಾಡುವಂಥ ದುಷ್ಟಕಾರ್ಯವನ್ನು ನೀನು ಮಾಡಲು

ಹೊರಟಿರುವೆ. ಪಾಪಕರ್ಮ ಸಂಕಲ್ಪ ಮಾಡುವವಳೆ. ನಾನು ನಿನ್ನ ಈ ಬಯಕೆ-ಯನ್ನು ಈಡೇರಲು ಬಿಡಲಾರೆ.

ಏಷ ತ್ವಿದಾನೀಮೇವಾಹಮಪ್ರಿಯಾರ್ಥಂ ತವಾನಘಮ್ ।
ನಿವರ್ತಯಿಷ್ಯಾಮಿ ವನಾದ್ಭ್ರಾತರಂ ಸ್ವಜನಪ್ರಿಯಮ್ ॥೨೬॥

ನಾನು ಈಗಲೇ ನಿನ್ನ ಮನನೋಯಿಸುವುದಕ್ಕಾಗಿಯೇ ಬಂಧುವತ್ಸಲನಾದ ನಿಷ್ಪಾಪನಾದ ಅಣ್ಣನನ್ನು ಕಾಡಿನಿಂದ ಹಿಂದಕ್ಕೆ ಕರೆತರುತ್ತೇನೆ.

ನಿವರ್ತಯಿತ್ವಾ ರಾಮಂ ಚ ತಸ್ಯಾಹಂ ದೀಪ್ತತೇಜಸಃ ।
ದಾಸಭೂತೋ ಭವಿಷ್ಯಾಮಿ ಸುಸ್ಥಿತೇನಾಂತರಾತ್ಮನಾ ॥೨೭॥

ರಾಮನನ್ನು ಹಿಂದಕ್ಕೆ ಕರೆತಂದು, ಜ್ವಲಿಸುವ ಕಾಂತಿಯುಳ್ಳ ಆತನಿಗೆ ನಾನು ದಾಸನಾಗಿರುತ್ತೇನೆ. ಆಗಲೆ ನನ್ನ ಅಂತರಾತ್ಮಕ್ಕೆ ನೆಮ್ಮದಿ.

ಇತ್ಯೇವಮುಕ್ತ್ವಾ ಭರತೋ ಮಹಾತ್ಮಾ
ಪ್ರಿಯೇತರೈರ್ವಾಕ್ಯಗಣೈಸ್ತುದಂಸ್ತಾಮ್ ।
ಶೋಕಾತುರಶ್ಚಾಪಿ ನನಾದ ಭೂಯಃ
ಸಿಂಹೋ ಯಥಾ ಮಂದರಕಂದರಸ್ಥಃ ॥೨೮॥

ಮಹಾತ್ಮನಾದ ಭರತನು ಶೋಕಾತುರತೆಯಿಂದ ಕೈಕೇಯಿಯನ್ನು ಬಲು ಕಟುವಾದ ಮಾತುಗಳಿಂದ ಚುಚ್ಚುತ್ತ ನಿಂದಿಸಿ, ಮಂದರಪರ್ವತದ ಕಣಿವೆಯಲ್ಲಿ ಗರ್ಜಿಸುವ ಸಿಂಹದಂತೆ ಆರ್ಭಟಿಸಿದ.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಎಪ್ಪತ್ತಮೂರನೇ ಸರ್ಗ ಮುಗಿಯಿತು.

❖

ಚತುಃಸಪ್ತತಿತಮಃ ಸರ್ಗಃ

ಸರ್ಗ – 74

ಭರತನು ಕೈಕೇಯಿಯನ್ನು ಪುನಃ ನಿಂದಿಸುವುದು.

ತಾಂ ತಥಾ ಗರ್ಹಯಿತ್ವಾ ತು ಮಾತರಂ ಭರತಸ್ತದಾ ।
ರೋಷೇಣ ಮಹತಾವಿಷ್ಟಃ ಪುನರೇವಾಬ್ರವೀದ್ವಚಃ ॥೧॥

ಹೀಗೆ ಭರತನು ತಾಯಿಯನ್ನು ನಿಂದಿಸಿ ಮಹಾಕೋಪಾವೇಶದಿಂದ ಪುನಃ ನುಡಿದ.

ರಾಜ್ಯಾದ್ಭ್ರಂಶಸ್ವ ಕೈಕೇಯಿ ನೃಶಂಸೇ ದುಷ್ಟಚಾರಿಣಿ ।
ಪರಿತ್ಯಕ್ತಾ ಚ ಧರ್ಮೇಣ ಮಾ ಮೃತಂ ರುದತೀ ಭವ ॥೨॥

ಕ್ರೂರಿ, ದುಷ್ಕರ್ಮ ಮಾಡುವವಳೆ, ಕೈಕೇಯಿ, ನೀನು ರಾಜ್ಯಭ್ರಷ್ಟಳಾಗು, ಧರ್ಮವು ನಿನ್ನನ್ನು ಕಾಪಾಡದೆ ಕೈಬಿಡಲಿ, ಗತಿಸಿದ ಪತಿಗಾಗಿ, ಬೇರೆ ರಾಣಿಯರ ಜೊತೆಗೆ ನೀನು ಸುಮ್ಮನೆ ಮೊಸಳೆ ಕಣ್ಣೀರು ಸುರಿಸುವ ಆವಶ್ಯಕತೆ ಇಲ್ಲ. ಅದು ನಿನಗೆ ಬರುವುದಿಲ್ಲ.

ಕಿಂ ನು ತೇऽದೂಷಯದ್ರಾಜಾ ರಾಮೋ ವಾ ಭೃಶಧಾರ್ಮಿಕಃ ।
ಯಯೋರ್ಮೃತ್ಯುರ್ವಿವಾಸಶ್ಚ ತ್ವತ್ಕೃತೇ ತುಲ್ಯಮಾಗತೌ ॥೩॥

ರಾಜಾ ದಶರಥನಾಗಲಿ ಬಹಳ ಧಾರ್ಮಿಕನಾದ ರಾಮನಾಗಲಿ ನಿನಗೆ ಏನು ಕೇಡೆಣಿಸಿದ್ದಾರೆ? ಅವರು ನಿನ್ನಿಂದಾಗಿ ಒಮ್ಮೆಲೆ ಮರಣವನ್ನೂ ವನವಾಸವನ್ನೂ ಏಕೆ ಪಡೆಯಬೇಕಾಯಿತು?

ಭ್ರೂಣಹತ್ಯಾಮಸಿ ಪ್ರಾಪ್ತಾ ಕುಲಸ್ಯಾಸ್ಯ ವಿನಾಶನಾತ್ ।
ಕೈಕೇಯಿ ನರಕಂ ಗಚ್ಛ ಮಾ ಚ ಭರ್ತುಃ ಸಲೋಕತಾಮ್ ॥೪॥

ಈ ಕುಲದ ನಾಶವನ್ನೇ ಮಾಡಿ ನೀನೀಗ ಭ್ರೂಣಹತ್ಯಾಪಾಪಕ್ಕೆ ಈಡಾಗಿರುವೆ. ಅದಕ್ಕೆ ನೀನು ನರಕವನ್ನೇ ಹೊಂದಬೇಕು. ಪತಿಲೋಕವನ್ನು ಹೊಂದಬೇಡ.

ತನಗೆ ಜನ್ಮಕೊಟ್ಟ ಪ್ರೀತಿಯ ತಾಯಿಗೆ ಅವಳೆಷ್ಟೇ ತಪ್ಪು ಮಾಡಿದ್ದರೂ ಮಹಾತ್ಮಭರತ ಹೀಗೆ ಹಿಡಿಶಾಪ ಹಾಕುವನೆ? ' ನ ಮಾತುಃ ಪರದೈವತಂ'

ಎಂಬುದು ಅವನಿಗೆ ತಿಳಿದಿಲ್ಲವೆ? ಲಕ್ಷ್ಮಣನೂ ಪ್ರಮಾದದಿಂದ ತಪ್ಪಿ ನಡೆದ ತಂದೆಯಾದ ದಶರಥನನ್ನು ಕೊಲ್ಲಲು ಹೊರಟಿದ್ದ!

ಆದರೆ, ಧರ್ಮರಾಜ ಜೂಜಾಡಿದಾಗ 'ಜೂಜಾಡಿದ ನಿನ್ನ ಕೈಗಳನ್ನು ಸುಡಬೇಕು. ಸಹದೇವ, ಬೆಂಕಿ ತಾರೊ' ಎಂದು ಭೀಮಸೇನನಾಡಿದ ಮಾತಿನ ಆಂತರ್ಯವನ್ನು ನಿರ್ಣಯದಲ್ಲಿ 'ಉತ್ತಮೇ ವಚಸಾ ಶಿಕ್ಷಾ' 'ಉತ್ತಮರಿಗೆ ಮಾತಿನಿಂದಲೇ ಶಿಕ್ಷೆಮಾಡಬೇಕು' ಎಂದಿದ್ದಾರೆ. ಭರತನೂ ಲಕ್ಷ್ಮಣನೂ ಮಾಡಿದ್ದು ಇದನ್ನೇ. ಭರತ ತಾಯಿಗೆ ನರಕವಾಗಲೆಂದು ಶಾಪನೀಡಲಿಲ್ಲ. ಮಾತಿನಿಂದ ಶಿಕ್ಷೆ ನೀಡಿ ನರಕದಿಂದ ಅವಳನ್ನು ತಪ್ಪಿಸಿ ಉದ್ಧಾರ ಮಾಡಿದ. 'ಭರತನನ್ನು ಹೆತ್ತ ತಾಯಿ ನರಕಕ್ಕೆ ಹೋಗಬಾರದು' ಎಂದು ಹೇಳುತ್ತ ಶ್ರೀರಾಮ ಕೈಕೇಯಿಗೂ ಸದ್ಗತಿಯನ್ನಿತ್ತ. 'ಗುರೋರಪ್ಯವಲಿಪ್ತಸ್ಯ... ಕಾರ್ಯಂ ಭವತಿ ಶಾಸನಂ' ಎಂದು ಮನುಸ್ಮೃತಿಯೂ ಹೇಳುವುದು ಇದನ್ನೇ— 'ಗುರುಹಿರಿಯರಿಗೆ ಮಾತಿನಿಂದಲೇ ಶಿಕ್ಷೆ' ಎಂದು.

ಯತ್ತ್ವಯಾ ಹೀದೃಶಂ ಪಾಪಂ ಕೃತಂ ಘೋರೇಣ ಕರ್ಮಣಾ ।
ಸರ್ವಲೋಕಪ್ರಿಯಂ ಹಿತ್ವಾ ಮಮಾಪ್ಯಾಪಾದಿತಂ ಭಯಂ ॥೫॥

ಘೋರವಾದ ಕರ್ಮಮಾಡಿ ಇಂಥ ಮಹಾಪಾಪ ಮಾಡಿದ ನೀನು ಸರ್ವ-ಲೋಕಪ್ರಿಯನಾದ ರಾಮನನ್ನು ನನ್ನ ಪಾಲಿಗೆ ಇಲ್ಲದಂತೆ ಮಾಡಿ ನನಗೂ ಭಯಂಕರ ಪಾಪ ಸುತ್ತಿಕೊಳ್ಳುವಂತೆ ಮಾಡಿರುವೆ.

ತ್ವತ್ಕೃತೇ ಮೇ ಪಿತಾ ವೃತ್ತೋ ರಾಮಶ್ಚಾರಣ್ಯಮಾಶ್ರಿತಃ ।
ಅಯಶೋ ಜೀವಲೋಕೇ ಚ ತ್ವಯಾಹಂ ಪ್ರತಿಪಾದಿತಃ ॥೬॥

ನಿನ್ನಿಂದಾಗಿ ನನ್ನ ತಂದೆ ವಿಧಿವಶನಾದ. ರಾಮನೂ ಕಾಡುಪಾಲಾದ. ಇದೆಲ್ಲವೂ ನನ್ನ ಸಲುವಾಗಿಯೇ ಆಯಿತೆಂದು ನನಗೆ ಅಪಕೀರ್ತಿ ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಹರಡುವಂತೆ ನೀನು ಮಾಡಿರುವೆ.

ಮಾತೃರೂಪೇ ಮಮಾಮಿತ್ರೇ ನೃಶಂಸೇ ರಾಜ್ಯಕಾಮುಕೇ ।
ನ ತೇಽಹಮಭಿಭಾಷ್ಯೋಽಸ್ಮಿ ದುರ್ವೃತ್ತೇ ಪತಿಘಾತಿನಿ ॥೭॥

ತಾಯಿಯ ರೂಪದಲ್ಲಿ ನಿಂತ ನನ್ನ ಶತ್ರುವೆ, ಕ್ರೂರಳೆ, ದುರ್ನಡತೆಯವಳೆ. ರಾಜ್ಯದ ಮೇಲಿನ ಆಸೆಯಿಂದ ಪತಿಯನ್ನೇ ಕೊಂದವಳೆ. ನೀನು ನನ್ನೊಡನೆ ಸಂಭಾಷಣೆಗೂ ಅರ್ಹಳಲ್ಲ.

ಕೌಸಲ್ಯಾ ಚ ಸುಮಿತ್ರಾ ಚ ಯಾಶ್ಚಾನ್ಯಾ ಮಮ ಮಾತರಃ ।
ದುಃಖೇನ ಮಹತಾವಿಷ್ಟಾಸ್ತಾ ತ್ವಂ ಪ್ರಾಪ್ಯ ಕುಲದೂಷಿಣೀಮ್ ॥೮॥

ಕುಲ ನಾಶಕಳಾದ ನಿನ್ನಿಂದಾಗಿ ಕೌಸಲ್ಯೆ ಸುಮಿತ್ರೆ ಇನ್ನೂ ಬೇರೆ ನನ್ನ ಮಾತೆ-ಯರು ಎಲ್ಲರೂ ಮಹತ್ತಾದ ದುಃಖಕ್ಕೆ ಭಾಗಿನಿಯರಾದರು.

ನ ತ್ವಮಶ್ವಪತೇಃ ಕನ್ಯಾ ಧರ್ಮರಾಜಸ್ಯ ಧೀಮತಃ ।
ರಾಕ್ಷಸೀ ತತ್ರ ಜಾತಾಸಿ ಕುಲಪ್ರಧ್ವಂಸಿನೀ ಪಿತುಃ ॥೯॥

ನೀನು ಧರ್ಮದಿಂದ ಬೆಳಗುವ ಧೀಮಂತನಾದ ಅಶ್ವಪತಿಗೆ ತಕ್ಕ ಮಗಳಲ್ಲ. ತಂದೆಯ ಕುಲವನ್ನು ನಾಶಪಡಿಸಲೆಂದೆ ಒಬ್ಬಳು ರಾಕ್ಷಸಿ ನೀನು ಆ ಕುಲದಲ್ಲಿ ಜನಿಸಿರುವೆ.

ಯತ್ತ್ವಯಾ ಧಾರ್ಮಿಕೋ ರಾಮೋ ನಿತ್ಯಂ ಸತ್ಯಪರಾಯಣಃ ।
ವನಂ ಪ್ರಸ್ಥಾಪಿತೋ ದುಃಖಾತ್ ಪಿತಾ ಚ ತ್ರಿದಿವಂ ಗತಃ ॥೧೦॥

ನೀನು ಧಾರ್ಮಿಕನಾದ ಸದಾ ಸತ್ಯಪರಾಯಣನಾದ ರಾಮನನ್ನು ಕಾಡಿಗೆ ಅಟ್ಟಿದ್ದರಿಂದ ಅದೇ ದುಃಖದಿಂದ ತಂದೆಯೂ ದಿವಂಗತನಾಗುವಂತಾಯಿತು. ಅದರಿಂದ ನೀನು ರಾಕ್ಷಸಿಯೇ.

ಯತ್ಪ್ರಧಾನಾಸಿ ತತ್ಪಾಪಂ ಮಯಿ ಪಿತ್ರಾ ವಿನಾಕೃತೇ ।
ಭ್ರಾತೃಭ್ಯಾಂ ಚ ಪರಿತ್ಯಕ್ತೇ ಸರ್ವಲೋಕಸ್ಯ ಚಾಪ್ರಿಯೇ ॥೧೧॥

ಮುಖ್ಯವಾಗಿ ಪಾಪಕರ್ಮ ಮಾಡಲೆಂದೇ ಜನಿಸಿದವಳು, ನೀನು. ನೀನು ಮಾಡಿದ ಆ ಪಾಪ ನನ್ನಲ್ಲಿ ಅಂಟಿಕೊಂಡಿದೆ. ಅದರಿಂದ ನಾನು ತಂದೆಯನ್ನು ಕಳೆದುಕೊಂಡೆ. ಸೋದರರಿಬ್ಬರನ್ನು ಕಳೆದುಕೊಂಡೆ. ಸರ್ವಲೋಕಕ್ಕೂ ಬೇಡವಾದವನಾದೆ.

ಕೌಸಲ್ಯಾಂ ಧರ್ಮಸಂಯುಕ್ತಾಂ ವಿಯುಕ್ತಾಂ ಪಾಪನಿಶ್ಚಯೇ ।
ಕೃತ್ವಾ ಕಂ ಪ್ರಾಪ್ಸ್ಯತೇ ತ್ವದ್ಯ ಲೋಕಂ ನಿರಯಗಾಮಿನಿ ॥೧೨॥

ಕೌಸಲ್ಯೆಯಂಥ ಧರ್ಮನಿಷ್ಠಳಿಗೆ ಪತಿಪುತ್ರರ ವಿಯೋಗ ಉಂಟುಮಾಡಿ, ಓ ಪಾಪ ನಿಶ್ಚಯಳಾದ ನರಕಗಾಮಿನಿಯಾದ ಕೈಕೇಯಿ! ನೀನು ಯಾವ ಲೋಕಕ್ಕೆ ಹೋಗುವೆ? ನರಕಲೋಕವೂ ನಿನಗೆ ಸಾಲದು.

ಕಿಂ ನಾವಬುಧ್ಯಸೇ ಕ್ರೂರೇ ನಿಯತಂ ಬಂಧುಸಂಶ್ರಯಮ್ ।
ಜ್ಯೇಷ್ಠಂ ಪಿತೃಸಮಂ ರಾಮಂ ಕೌಸಲ್ಯಾತನುಸಂಭವಮ್ ॥೧೩॥

ಕ್ರೂರಳೆ, ರಾಮನು ಕೌಸಲ್ಯೆಯ ಉದರದಲ್ಲಿ ಜನಿಸಿ ನನಗೆ ಅಣ್ಣನಾಗಿದ್ದರೂ ತಂದೆಯಂತೆ ಎಲ್ಲ ಬಂಧುಗಳಿಗೂ ಆಶ್ರಯದಾತನಾಗಿದ್ದುದನ್ನು ನೀನು ಸರ್ವಥಾ ತಿಳಿಯದೆ ಹೋದೆಯ?

ಅಂಗಪ್ರತ್ಯಂಗಜಃ ಪುತ್ರೋ ಹೃದಯಾಚ್ಚಾಪಿ ಜಾಯತೇ ।
ತಸ್ಮಾತ್ ಪ್ರಿಯತಮೋ ಮಾತುಃ ಪ್ರಿಯಾ ಏವ ತು ಬಾಂಧವಾಃ ॥೧೪॥

ಪುತ್ರನು ಮಾತಾಪಿತೃಗಳ ತಲೆ ಕೈಕಾಲು ಮುಂತಾದ ಅಂಗಗಳಿಂದಲೂ ಕಣ್ಣು ಮೂಗು ಮುಂತಾದ ಪ್ರತ್ಯಂಗಗಳಿಂದಲೂ ಹೃದಯದಿಂದಲೂ ಜನಿಸುತ್ತಾನೆ. ಅದರಿಂದ ತಾಯಿಗೆ ಮಗನು ಅತ್ಯಂತ ಪ್ರಿಯ. ಉಳಿದ ಬಾಂಧವರು ಕೇವಲ ಪ್ರಿಯರು.

ಅನ್ಯದಾ ಕಿಲ ಧರ್ಮಜ್ಞಾ ಸುರಭಿಃ ಸುರಸಂಮತಾ ।
ವಹಮಾನೌ ದದರ್ಶೋರ್ವ್ಯಾಂ ಪುತ್ರೌ ವಿಗತಚೇತಸೌ ॥೧೫॥

ಒಂದುಬಾರಿ ಧರ್ಮಜ್ಞಳಾದ ದೇವಪೂಜ್ಯಳಾದ ಕಾಮಧೇನು ಮೇಲೆ ಆಕಾಶ-ದಲ್ಲಿ ನಿಂತು ಕೆಳಗೆ ಭೂಲೋಕದಲ್ಲಿ ತನ್ನ ಇಬ್ಬರು ಪುತ್ರರು ನೇಗಿಲನ್ನು ಹೊತ್ತು ಬಳಲಿ ಕಂಗಾಲಾಗಿದ್ದುದನ್ನು ಕಂಡಳು.

ತಾವರ್ಧದಿವಸೇ ಶ್ರಾಂತೌ ದೃಷ್ಟ್ವಾ ಪುತ್ರೌ ಮಹೀತಲೇ ।
ರುರೋದ ಪುತ್ರಶೋಕೇನ ಬಾಷ್ಪಪರ್ಯಾಕುಲೇಕ್ಷಣಾ ॥೧೬॥

ಮಧ್ಯಾಹ್ನ ಕಾಲದಲ್ಲಿ ನೆಲದಮೇಲೆ ನೇಗಿಲನ್ನು ಎಳೆಯುತ್ತ ಬಳಲಿದ್ದ ಇಬ್ಬರು ಪುತ್ರರನ್ನು ಕಂಡು ಕಾಮಧೇನು ಪುತ್ರಶೋಕದಿದಂದ ಕಣ್ಣುಗಳಲ್ಲಿ ನೀರು ತುಂಬಿ-ಕೊಂಡು ರೋದಿಸಿದಳು.

ಅಥಸ್ತಾದ್ವ್ರಜತಸ್ತಸ್ಯಾಃ ಸುರರಾಜ್ಞೋ ಮಹಾತ್ಮನಃ ।
ಬಿಂದವಃ ಪತಿತಾ ಗಾತ್ರೇ ಸೂಕ್ಷ್ಮಾಃ ಸುರಭಿಗಂಧಿನಃ ॥೧೭॥

'ಸುರಭಿ' ಎನಿಸಿದ ಅವಳ ಸುಗಂಧಭರಿತವಾದ ಕಣ್ಣೀರಿನ ಸಣ್ಣಹನಿಗಳು ಅಲ್ಲಿಯೇ ಆಕಾಶದಲ್ಲಿ ಕೆಳಗಡೆ ಸಂಚರಿಸುತ್ತಿದ್ದ ಮಹಾತ್ಮನಾದ ದೇವರಾಜನ ಮೈಮೇಲೆ ಬಿದ್ದುವು.

ನಿರೀಕ್ಷಮಾಣಃ ಶಕ್ರಸ್ತಾಂ ದದರ್ಶ ಸುರಭಿಂ ಸ್ಥಿತಾಮ್ ।
ಆಕಾಶೇ ವಿಷ್ಠಿತಾಂ ದೀನಾಂ ರುದಂತೀಂ ಭೃಶದುಃಖಿತಾಮ್ ॥೧೮॥

ಇಂದ್ರನು ತಲೆಎತ್ತಿ ಮೇಲೆ ನೋಡಿದಾಗ ಅಲ್ಲಿ ಆಕಾಶದಲ್ಲಿ ಕಾಮಧೇನುವು ನಿಶ್ಚಲವಾಗಿ ನಿಂತು ಬಹಳ ದುಃಖಿತಳಾಗಿ ದೈನ್ಯದಿಂದ ಕಣ್ಣೀರು ಸುರಿಸುತ್ತ ಇದ್ದುದನ್ನು ಕಂಡನು.

ತಾಂ ದೃಷ್ಟ್ವಾ ಶೋಕಸಂತಪ್ತಾಂ ವಜ್ರಪಾಣಿರ್ಯಶಸ್ವಿನೀಮ್ ।
ಇಂದ್ರಃ ಪ್ರಾಂಜಲಿರುದ್ವಿಗ್ನಃ ಸುರರಾಜೋऽಬ್ರವೀದ್ವಚಃ ॥೧೯॥

ಯಶಸ್ವಿನಿಯಾದ ಕಾಮಧೇನುವು ಶೋಕದಿಂದ ಬೆಂದಿರುವುದನ್ನು, ವಜ್ರಪಾಣಿ–ಯಾದ ದೇವರಾಜ ಇಂದ್ರನು ಕಂಡು, ಕಳವಳಗೊಂಡು ಕೈಮುಗಿದು ನುಡಿದ.

ಭಯಂ ಕಚ್ಚಿನ್ನ ಚಾಸ್ಮಾಸು ಕುತಶ್ಚಿದ್ವಿದ್ಯತೇ ಮಹತ್ ।
ಕುತೋನಿಮಿತ್ತಃ ಶೋಕಸ್ತೇ ಬ್ರೂಹಿ ಸರ್ವಹಿತೈಷಿಣಿ ॥೨೦॥

ನಮ್ಮಲ್ಲಿ ಯಾರಾದರೊಬ್ಬರಿಂದ ನಿನಗೆ ಮಹಾ ಆಪತ್ತು ಬಂದೊದಗಿಲ್ಲ ತಾನೆ? ಸರ್ವರಿಗೂ ಹಿತವನ್ನು ಬಯಸುವವಳೆ, ನೀನು ಶೋಕಿಸಲು ಏನು ಕಾರಣ?

ಏವಮುಕ್ತಾ ತು ಸುರಭಿಃ ಸುರರಾಜೇನ ಧೀಮತಾ ।
ಪ್ರತ್ಯುವಾಚ ತತೋ ಧೀರಾ ವಾಕ್ಯಂ ವಾಕ್ಯವಿಶಾರದಾ ॥೨೧॥

ಧೀಮಂತನಾದ ದೇವರಾಜ ಹೀಗೆ ಕೇಳಿದಾಗ ಧೀರೆಯೂ ಒಳ್ಳೆಯ ಮಾತುಗಾರಳೂ ಆದ ಕಾಮಧೇನುವು ಪ್ರತಿಯಾಗಿ ನುಡಿದಳು.

ಶಾಂತಂ ಪಾಪಂ ನ ವಃ ಕಿಂಚಿತ್ ಕುತಶ್ಚಿದಮರಾಧಿಪ ।
ಅಹಂ ತು ಮಗ್ನೌ ಶೋಚಾಮಿ ಸ್ವಪುತ್ರೌ ವಿಷಮೇ ಸ್ಥಿತೌ ॥೨೨॥

ದೇವೇಂದ್ರ, ನಿನ್ನಿಂದ ಇಂಥ ಮಾತನ್ನು ಕೇಳಿದ ನನಗೆ ಏನೂ ಅಶುಭವಾಗ–ದಿರಲಿ. ಏಕೆಂದರೆ ನಿಮ್ಮಲ್ಲಿ ಯಾರೊಬ್ಬನಿಂದಲೂ ನನಗೆ ಆಪತ್ತು ಬಂದಿಲ್ಲ. ನಾನು ನನ್ನ ಇಬ್ಬರು ಪುತ್ರರು ಕಷ್ಟದಲ್ಲಿದ್ದು ದುಃಖಿಸುತ್ತಿರುವುದಕ್ಕೆ ಶೋಕ ಪಡುತ್ತಿದ್ದೇನೆ.

ಏತೌ ದೃಷ್ಟ್ವಾ ಕೃಶೌ ದೀನೌ ಸೂರ್ಯರಶ್ಮಿಪ್ರತಾಪಿತೌ ।
ಅದ್ಯಮಾನೌ ಬಲೀವರ್ದೌ ಕರ್ಷಕೇಣ ಸುರಾಧಿಪ ॥೨೩॥

ಮಮ ಕಾಯಾತ್ ಪ್ರಸೂತೌ ಹಿ ದುಃಖಿತೌ ಭಾರಪೀಡಿತೌ ।
ಯೌ ದೃಷ್ಟ್ವಾ ಪರಿತಪ್ಯೇಽಹಂ ನಾಸ್ತಿ ಪುತ್ರಸಮಃ ಪ್ರಿಯಃ ॥೨೪॥

ನನ್ನ ಈ ಇಬ್ಬರು ಪುತ್ರರು ಬಿಸಿಲಿನ ತಾಪದಿಂದ ನೊಂದು ಸೊರಗಿದ್ದರೂ ಬೇಸಾಯಗಾರನು ಬಿಡದೆ ಅವರನ್ನು ಪೀಡಿಸುತ್ತಿದ್ದಾನೆ. ಅವರನ್ನು ಈ ಸ್ಥಿತಿಯಲ್ಲಿ ನೋಡಿ, ನನ್ನ ಉದರದಿಂದ ಜನಿಸಿ, ಭಾರವನ್ನು ಹೊರಲಾರದೆ ದುಃಖಿಸುತ್ತಿರುವು ದನ್ನು ನೋಡಿ ನಾನು ಪರಿತಪಿಸುತ್ತಿದ್ದೇನೆ. ಲೋಕದಲ್ಲಿ ಪುತ್ರನಿಗಿಂತ ಪ್ರಿಯನಿಲ್ಲ.

ಯಸ್ಯಾಃ ಪುತ್ರಸಹಸ್ರೈಸ್ತು ಕೃತ್ಸ್ನಂ ವ್ಯಾಪ್ತಮಿದಂ ಜಗತ್ ।
ತಾಂ ದೃಷ್ಟ್ವಾ ರುದತೀಂ ಶಕ್ರೋ ನ ಸುತಾನ್ಮನ್ಯತೇ ಪರಮ್ ॥೨೫॥

ಕಾಮಧೇನುವಿನ ಸಾವಿರಾರು ಪುತ್ರರಿಂದ ಈ ಜಗವೆಲ್ಲ ತುಂಬಿದ್ದರೂ ಈ ಇಬ್ಬರು ಪುತ್ರರ ಬಗ್ಗೆ ಅವಳು ಕಣ್ಣೀರಿಡುವುದನ್ನು ಕಂಡು ಪುತ್ರನಿಗಿಂತ ಪ್ರಿಯ ನಿನ್ನೊಬ್ಬನಿಲ್ಲವೆಂದು ಮನಗಂಡನು.

ಬೇರೆ ಸಾವಿರಾರು ಪುತ್ರರು ಭೂಮಿಯಲ್ಲಿ ಇದ್ದರೂ ಅವರು ಕಾಮಧೇನು-ವಿಗೆ ಪುತ್ರಸಂತತಿಯವರು ಹೊರತು, ತನ್ನ ಉದರದಿಂದ ಜನಿಸಿದ ಪುತ್ರರಲ್ಲ. ಈ ಇಬ್ಬರು ಮಾತ್ರ ದೇವಲೋಕದಲ್ಲಿ ತನ್ನ ಉದರದಿಂದಲೇ ಜನಿಸಿದವರು. ಕಾರಣಾಂತರದಿಂದ ಭೂಮಿಯಲ್ಲಿ ಪುನಃ ಹುಟ್ಟಿದ್ದಾರೆ. ಕಾಮಧೇನುವಿಗೆ ಅದು ಗೊತ್ತಿದ್ದರಿಂದ ರೋದಿಸಿದಳು.

ಇಂದ್ರೋಽಪ್ಯಶ್ರುನಿಪಾತಂ ತಂ ಸ್ವಗಾತ್ರೇ ಪುಣ್ಯಗಂಧಿನಮ್ ।
ಸುರಭಿಂ ಮನ್ಯತೇ ದೃಷ್ಟ್ವಾ ಭೂಯಸೀಂ ತಾಂ ಸುರೇಶ್ವರಃ ॥೨೬॥

ದೇವರಾಜ ಇಂದ್ರನು ತನ್ನ ಮೈಮೇಲೆ ಕಾಮಧೇನುವಿನ ಸುಗಂಧಭರಿತವಾದ ಕಣ್ಣೀರು ಬಿದ್ದುದನ್ನೂ ಕಂಡು ಅವಳು ಪುತ್ರವಾತ್ಸಲ್ಯಗುಣದಿಂದ 'ಭೂಯಸೀಂ' ಎಷ್ಟು ದೊಡ್ಡವಳಾಗಿರುವಳೆಂಬುದನ್ನು ಮನಗಂಡ.

ಸದಾಪ್ರತಿಮವೃತ್ತಾಯಾ ಲೋಕಧಾರಣಕಾಮ್ಯಯಾ ।
ಶ್ರೀಮತ್ಯಾ ಗುಣನಿತ್ಯಾಯಾಃ ಸ್ವಭಾವಪರಿಚೇಷ್ಟಯಾ ॥೨೭॥

ಯಸ್ಯಾಃ ಪುತ್ರಸಹಸ್ರಾಣಿ ಸಾಪಿ ಶೋಚತಿ ಕಾಮಧುಕ್ ।
ಕಿಂ ಪುನರ್ಯಾ ಏನಾ ರಾಮಂ ಕೌಸಲ್ಯಾ ವರ್ತಯಿಷ್ಯತಿ ॥೨೮॥

ಕಾಮಧೇನು ಸದಾ ಉತ್ತಮ ನಡತೆಯವಳು. ಸದಾ ಸತ್ವಗುಣಭರಿತಳು. ಲೋಕಪೋಷಣ ಕಾಮನೆಯಿಂದ ಶ್ರೀಮಂತಳು. ಪ್ರಾಣಿ ಸಹಜವಾದ ಸಂತಾನೇಚ್ಛೆಯಿಂದ ಅವಳಿಗೆ ಸಾವಿರಾರು ಪುತ್ರರು ಜನಿಸಿದ್ದಾರೆ. ಆದರೂ ಇಬ್ಬರು ಪುತ್ರರ ದುಸ್ಥಿತಿಗೆ ಅವಳು ಶೋಕಿಸುತ್ತಾಳೆ, ಎಂದಮೇಲೆ, ಏಕ ಮಾತ್ರ ಪುತ್ರನನ್ನು ಪಡೆದ ಕೌಸಲ್ಯೆ ಆ ರಾಮನನ್ನು ಆಗಲಿ ಬದುಕಿರಬಲ್ಲಳೆ?

ಏಕಪುತ್ರಾ ಚ ಸಾಧ್ವೀ ಚ ವಿವತ್ಸೇಯಂ ತ್ವಯಾ ಕೃತಾ ।
ತಸ್ಮಾತ್ ತ್ವಂ ಸತತಂ ದುಃಖಂ ಪ್ರೇತ್ಯ ಚೇಹ ಚ ಲಪ್ಸ್ಯಸೇ ॥೨೯॥

ಏಕ ಮಾತ್ರ ಪುತ್ರಳು ಸಾಧ್ವಿ ಕೌಸಲ್ಯೆ ಈಗ ನಿನ್ನಿಂದಾಗಿ ಮಕ್ಕಳೆ ಇಲ್ಲದವಳಾದಳು. ಅದರಿಂದ ನೀನು ಇಹದಲ್ಲಿಯೂ ಪರದಲ್ಲಿಯೂ ಸದಾ ದುಃಖವನ್ನೇ ಹೊಂದುವೆ.

ಅಹಂ ಹ್ಯಪಚಿತಿಂ ಭ್ರಾತುಃ ಪಿತುಶ್ಚ ಸಕಲಾಮಿಮಾಮ್ ।
ವರ್ಧನಂ ಯಶಸಶ್ಚಾಪಿ ಕರಿಷ್ಯಾಮಿ ನ ಸಂಶಯಃ ॥೩೦॥

ನಾನು ಅಣ್ಣನಿಗೆ ರಾಜ್ಯವನ್ನು ಬಿಟ್ಟುಕೊಡುವ ಮೂಲಕ ಅವನ ಸೇವೆ ಮಾಡುತ್ತೇನೆ. ತಂದೆಗೂ ಎಲ್ಲ ಉತ್ತರಕ್ರಿಯೆಗಳ ಮೂಲಕ ಸೇವೆ ಮಾಡುತ್ತೇನೆ. ಆ ಮೂಲಕ ನನ್ನ ಕೀರ್ತಿಯನ್ನು ವರ್ಧಿಸುವಂತೆ ಮಾಡುತ್ತೇನೆ. ಇದರಲ್ಲಿ ಸಂಶಯ ಬೇಡ.

ಆನಾಯ್ಯ ಚ ಮಹಾಬಾಹುಂ ಕೋಸಲೇಂದ್ರಂ ಮಹಾಬಲಮ್ ।
ಸ್ವಯಮೇವ ಪ್ರವೇಕ್ಷ್ಯಾಮಿ ವನಂ ಮುನಿನಿಷೇವಿತಮ್ ॥೩೧॥

ಮಹಾಬಾಹು ಮಹಾಬಲಿ ಕೋಸಲಾಧಿಪತಿ ರಾಮನನ್ನು ಕರೆತಂದು ನಾನೇ ಸ್ವತಃ ಮುನಿಗಳು ವಾಸಿಸುವ ಅರಣ್ಯವನ್ನು ಪ್ರವೇಶಿಸುವೆನು.

ನ ಹ್ಯಹಂ ಪಾಪಸಂಕಲ್ಪೇ ಪಾಪೇ ಪಾಪಂ ತ್ವಯಾ ಕೃತಮ್।
ಶಕ್ತೋ ಧಾರಯಿತುಂ ಪೌರೈರಶ್ರುಕಂಠೈರ್ನಿರೀಕ್ಷಿತಃ ॥೩೨॥

ಪಾಪ ಸಂಕಲ್ಪಳೆ, ಪಾಪಾತ್ಮಳೆ, ಇನ್ನುಮುಂದೆ ಬಾಷ್ಪಗದ್ಗದಕಂಠರಾದ ಪೌರರು ನೋಡುತ್ತಿರುವಂತೇ ನಾನು ನೀನು ಮಾಡಿದ ಪಾಪವನ್ನು ಸಹಿಸಿಕೊಂಡಿರಲು ಶಕ್ತನಾಗಲಾರೆ.

ಸಾ ತ್ವಮಗ್ನಿಂ ಪ್ರವಿಶ ವಾ ಸ್ವಯಂ ವಾ ದಂಡಕಾನ್ ವಿಶ ।
ರಜ್ಜುಂ ಬಧ್ನಾನ ವಾ ಕಂಠೇ ನ ಹಿ ತೇಽನ್ಯತ್ ಪರಾಯಣಮ್ ॥೩೩॥

ನೀನು ಬೆಂಕಿಗಾದರೂ ಹಾರು. ದಂಡಕಾರಣ್ಯವನ್ನಾದರೂ ಹೋಗಿ ಸೇರಿಕೊಳ್ಳು. ಕೊರಳಿಗೆ ನೇಣುಬಿಗಿದುಕೊಂಡಾದರೂ ಸಾಯಿ. ಇವಿಷ್ಟು ಹೊರತು ಬೇರೆ ಯಾವುದೇ ಆಸರೆ ನಿನಗಿಲ್ಲ.

ಅಹಮಪ್ಯವನಿಂ ಪ್ರಾಪ್ತೇ ರಾಮೇ ಸತ್ಯಪರಾಕ್ರಮೇ ।
ಕೃತಕೃತ್ಯೋ ಭವಿಷ್ಯಾಮಿ ವಿಪ್ರವಾಸಿತಕಲ್ಮಷಃ । ॥೩೪॥

ನಾನೂ ಕೂಡ ಸತ್ಯಪರಾಕ್ರಮನಾದ ರಾಮ ರಾಜ್ಯಕ್ಕೆ ಹಿಂತಿರುಗಿ ಬಂದಾಗ, ನನ್ನ ಹೆಸರಿಗೆ ಬಂದ ಕಳಂಕವನ್ನು ತೊಡೆದುಕೊಂಡು ಕೃತಕೃತ್ಯನಾಗುತ್ತೇನೆ.

ಇತಿ ನಾಗ ಇವಾರಣ್ಯೇ ತೋಮರಾಂಕುಶಚೋದಿತಃ ।
ಪಪಾತ ಭುವಿ ಸಂಕ್ರುದ್ಧೋ ನಿಃಶ್ವಸನ್ನಿವ ಪನ್ನಗಃ ॥೩೫॥

ಕೋಪದಿಂದ ಹಾವಿನಂತೆ ಬುಸುಗುಟ್ಟುತ್ತ, ಈಟಿ ಅಂಕುಶಗಳಿಂದ ಪೀಡಿತವಾದ ಆನೆ ಏದುಸಿರುಬಿಡುತ್ತ ಅರಣ್ಯದಲ್ಲಿ ಬೀಳುವಂತೆ, ಬಹಳ ಕ್ರುದ್ಧನಾಗಿದ್ದ ಭರತ ನಿಟ್ಟುಸಿರುಬಿಡುತ್ತ ನೆಲದ ಮೇಲೆ ಬಿದ್ದ.

ಸಂರಕ್ತನೇತ್ರಃ ಶಿಥಿಲಾಂಬರಸ್ತಥಾ
ವಿಧೂತಸರ್ವಾಭರಣಃ ಪರಂತಪಃ ।
ಬಭೂವ ಭೂಮೌ ಪತಿತೋ ನೃಪಾತ್ಮಜಃ
ಶಚೀಪತೇಃ ಕೇತುರಿವೋತ್ಸವಕ್ಷಯೇ ॥೩೬॥

ಕೋಪದಿಂದ ಕಣ್ಣುಕೆಂಪು ಮಾಡಿಕೊಂಡು ಉಟ್ಟಬಟ್ಟೆ ಸಡಿಲಾಗುತ್ತಿದ್ದಂತೆ ಎಲ್ಲ ಆಭರಣಗಳು ಕಳಚಿ ಬೀಳುತ್ತಿದ್ದಂತೆ, ಶತ್ರುತಾಪಕನಾದ ರಾಜಕುಮಾರ ಭರತನು ಮೂರ್ಛಿತನಾಗಿ ಇಂದ್ರೋತ್ಸವದ ಕೊನೆಯಲ್ಲಿ ವಿಸರ್ಜಿತವಾಗಿ ಬೀಳುವ ಇಂದ್ರಧ್ವಜದಂತೆ ನೆಲದಮೇಲೆ ಬಿದ್ದ.

ವಿಸರ್ಜಿತವಾದ ಇಂದ್ರಧ್ವಜಕ್ಕೆ ಉಡಿಸಿದ್ದ ಕೆಂಪುಬಟ್ಟೆ ತೊಡಿಸಿದ್ದ ಆಭರಣ-ಗಳೆಲ್ಲವೂ ಕಳಚಿಬೀಳುತ್ತವೆ. ವೇದಿಕೆಯ ಮೇಲೆ ನೆಟ್ಟಿದ್ದ ಆ ಧ್ವಜವನ್ನು ಕಿತ್ತು ನೆಲದ ಮೇಲೆ ಸ್ಥಾಪಿಸುತ್ತಾರೆ.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಎಪ್ಪತ್ತನಾಲ್ಕನೇ ಸರ್ಗ ಮುಗಿಯಿತು.

ಪಂಚಸಪ್ತತಿತಮಃ ಸರ್ಗಃ

ಸರ್ಗ – 75

ತನ್ನದೇನೂ ತಪ್ಪಿಲ್ಲವೆಂದು ಭರತನು ಕೌಸಲ್ಯೆಯ ಬಳಿಯಲ್ಲಿ ಆಣೆ ಇಡುವುದು.

ದೀರ್ಘಕಾಲಾತ್ ಸಮುತ್ಥಾಯ ಸಂಜ್ಞಾಂ ಲಬ್ಧ್ವಾ ಚ ವೀರ್ಯವಾನ್ ।
ನೇತ್ರಾಭ್ಯಾಮಶ್ರುಪೂರ್ಣಾಭ್ಯಾಂ ದೀನಾಮುದ್ವೀಕ್ಷ್ಯ ಮಾತರಮ್॥೧॥

ಸೋಽಮಾತ್ಯಮಧ್ಯೇ ಭರತೋ ಜನನೀಮಭ್ಯಕುತ್ಸಯತ್ ।
ರಾಜ್ಯಂ ನ ಕಾಮಯೇ ಜಾತು ಮಂತ್ರಯೇ ನಾಪಿ ಮಾತರಮ್ ॥೨॥

ಬಹುಹೊತ್ತು ಮೈಮರೆತು ಬಿದ್ದಿದ್ದ ವೀರ್ಯಶಾಲಿ ಭರತ ಎಚ್ಚರಗೊಂಡು ಎದ್ದುನಿಂತು, ತನ್ನಾಸೆ ಕೈಗೂಡುತ್ತಿಲ್ಲವೆಂದು ಆತಂಕಗೊಂಡಿದ್ದ ಕೈಕೇಯಿಯನ್ನು ನೀರುತುಂಬಿದ ಕಣ್ಣುಗಳಿಂದ ದಿಟ್ಟಿಸಿನೋಡುತ್ತ ಅಷ್ಟರಲ್ಲಿ ಬಂದು ನೆರೆದಿದ್ದ ಅಮಾತ್ಯರ ನಡುವೆ, ತಾಯಿಯನ್ನು ಆಕ್ಷೇಪಿಸಿ ನುಡಿದ. ನಾನು ರಾಜ್ಯವನ್ನು ಬಯಸಲಿಲ್ಲ. ಅದಕ್ಕಾಗಿ ತಾಯಿಯೊಂದಿಗೆ ಸೇರಿ ಪಿತೂರಿ ನಡೆಸಲಿಲ್ಲ.

ಅಭಿಷೇಕಂ ನ ಜಾನಾಮಿ ಯೋಽಭೂದ್ರಾಜ್ಞಾ ಸಮೀಕ್ಷಿತಃ ।
ವಿಪ್ರಕೃಷ್ಟೇ ಹ್ಯಹಂ ದೇಶೇ ಶತ್ರುಘ್ನಸಹಿತೋಽವಸಮ್ ॥೩॥

ಅಭಿಷೇಕದ ಬಗ್ಗೆ ನನಗೇನೂ ಗೊತ್ತೇ ಇರಲಿಲ್ಲ. ರಾಜನು ಅಭಿಷೇಕದ ನಿರ್ಧಾರ ಮಾಡಿದ್ದೂ ನನಗೆ ತಿಳಿದಿರಲಿಲ್ಲ. ಶತ್ರುಘ್ನನೊಂದಿಗೆ ನಾನು ದೂರದೇಶದಲ್ಲಿ ಇದ್ದುಬಿಟ್ಟಿದ್ದೆ.

ವನವಾಸಂ ನ ಜಾನಾಮಿ ರಾಮಸ್ಯಾಹಂ ಮಹಾತ್ಮನಃ ।
ವಿವಾಸನಂ ವಾ ಸೌಮಿತ್ರೇಃ ಸೀತಾಯಾಶ್ಚ ಯಥಾಭವತ್ ॥೪॥

ಮಹಾತ್ಮನಾದ ರಾಮ ವನವಾಸ ಮಾಡಬೇಕಾಗಿ ಬಂದುದು ನನಗೆ ತಿಳಿದೇ ಇರಲಿಲ್ಲ. ಲಕ್ಷ್ಮಣನಿಗಾಗಲಿ ಸೀತೆಗಾಗಲಿ ಗಡಿಪಾರು ಏಕಾಯಿತೆಂದು ತಿಳಿದಿರಲಿಲ್ಲ.

ತಥೈವ ಕ್ರೋಶತಸ್ತಸ್ಯ ಭರತಸ್ಯ ಮಹಾತ್ಮನಃ ।
ಕೌಸಲ್ಯಾ ಶಬ್ದಮಾಜ್ಞಾಯ ಸುಮಿತ್ರಾಮಿದಮಬ್ರವೀತ್ ॥೫॥

ಮಹಾತ್ಮ ಭರತ ಹೀಗೆ ಧ್ವನಿಎತ್ತಿ ಕೂಗಾಡಿದಾಗ ಅವನ ಕಂಠಧ್ವನಿಯನ್ನು ತಿಳಿದು ಕೌಸಲ್ಯೆ ಸುಮಿತ್ರೆಯ ಮುಂದೆ ನುಡಿದಳು.

ಆಗತಃ ಕ್ರೂರಕಾರ್ಯಾಯಾಃ ಕೈಕೇಯ್ಯಾ ಭರತಃ ಸುತಃ ।
ತಮಹಂ ದ್ರಷ್ಟುಮಿಚ್ಛಾಮಿ ಭರತಂ ದೀರ್ಘದರ್ಶಿನಮ್ ॥೬॥

ಅಕೊ, ಬಂದಿದ್ದಾನೆ, ಕ್ರೂರಕರ್ಮ ಮಾಡುವ ಕೈಕೇಯಿಯ ಮಗ ಭರತ! ದೂರಾಲೋಚನೆಯಿಂದ ಕೆಲಸ ಮಾಡುವ ಭರತನನ್ನು ನಾನು ನೋಡಬೇಕು.

ಏವಮುಕ್ತ್ವಾ ಸುಮಿತ್ರಾಂ ಸಾ ವಿವರ್ಣಾ ಮಲಿನಾ ಕೃಶಾ ।
ಪ್ರತಸ್ಥೇ ಭರತೋ ಯತ್ರ ವೇಪಮಾನಾ ವಿಚೇತನಾ ॥೭॥

ಮೈಬಿಳಿಚಿಕೊಂಡು ಸೊರಗಿ ಕೊಳೆಬಟ್ಟೆ ಉಟ್ಟಿದ್ದ ಕೌಸಲ್ಯೆ ಸುಮಿತ್ರೆಗೆ ಹೀಗೆ ಹೇಳಿ ಧೃತಿಗೆಟ್ಟು ನಡುಗುತ್ತ ಭರತನ ಕಡೆಗೆ ಹೊರಟಳು.

ಸ ತು ರಾಮಾನುಜಶ್ಚಾಪಿ ಶತ್ರುಘ್ನಸಹಿತಸ್ತದಾ ।
ಪ್ರತಸ್ಥೇ ಭರತೋ ಯತ್ರ ಕೌಸಲ್ಯಾಯಾ ನಿವೇಶನಮ್ ॥೮॥

ಅಷ್ಟರಲ್ಲಿ ಭರತನೂ ಶತ್ರುಘ್ನನೊಂದಿಗೆ ಕೌಸಲ್ಯೆಯ ಅಂತಃಪುರದ ಕಡೆಗೆ ಹೊರಟಿದ್ದ.

ತತಃ ಶತ್ರುಘ್ನಭರತೌ ಕೌಸಲ್ಯಾಂ ಪ್ರೇಕ್ಷ್ಯ ದುಃಖಿತೌ ।
ಪರ್ಯಷ್ವಜೇತಾಂ ದುಃಖಾರ್ತಾಂ ಪತಿತಾಂ ನಷ್ಟಚೇತನಾಮ್ ॥೯॥

ಶತ್ರುಘ್ನ ಭರತರು ಆಗಲೇ ದುಃಖಾರ್ತಳಾಗಿ ಕಂಗೆಟ್ಟು ಬಿದ್ದ ಕೌಸಲ್ಯೆಯನ್ನು ಕಂಡು ದುಃಖದಿಂದ ಅವಳನ್ನು ತಬ್ಬಿಕೊಂಡರು.

ರುದಂತೌ ರುದತೀ ದುಃಖಾತ್ ಸಮೇತ್ಯಾರ್ಯಾ ಮನಸ್ವಿನೀ ।
ಭರತಂ ಪ್ರತ್ಯುವಾಚೇದಂ ಕೌಸಲ್ಯಾ ಭೃಶದುಃಖಿತಾ ॥೧೦॥

ವೃದ್ಧೆಯೂ ಜ್ಞಾನಿಯೂ ಆದ ಕೌಸಲ್ಯೆ ದುಃಖದಿಂದ ಅಳುತ್ತಿದ್ದ ಆ ಇಬ್ಬರು ಮಕ್ಕಳನ್ನು ಬಳಿಯಲ್ಲಿರಿಸಿಕೊಂಡು ಬಲು ದುಃಖದಿಂದ ನುಡಿದಳು.

ಇದಂ ತೇ ರಾಜ್ಯಕಾಮಸ್ಯ ರಾಜ್ಯಂ ಪ್ರಾಪ್ತಮಕಂಟಕಮ್ ।
ಸಂಪ್ರಾಪ್ತಂ ಬತ ಕೈಕೇಯ್ಯಾ ಶೀಘ್ರಂ ಕ್ರೂರೇಣ ಕರ್ಮಣಾ ॥೧೧॥

ರಾಜ್ಯವನ್ನು ಬಯಸುತ್ತಿದ್ದ ನಿನಗಾಗಿ, ಬೇಗನೆ ಕ್ರೂರಕರ್ಮದಿಂದ ನಿಷ್ಕಂಟಕವಾದ ರಾಜ್ಯವನ್ನು ಕೈಕೇಯಿ ಪಡೆದುಕೊಂಡುಬಿಟ್ಟಳು!

ಪ್ರಸ್ಥಾಯ ಚೀರವಸನಂ ಪುತ್ರಂ ಮೇ ವನವಾಸಿನಮ್ ।
ಕೈಕೇಯೀ ಕಂ ಗುಣಂ ತತ್ರ ಪಶ್ಯತಿ ಕ್ರೂರದರ್ಶಿನೀ ॥೧೨॥

ಆದರೆ,, ನನ್ನ ಮಗ ರಾಮನಿಗೆ ನಾರುಡೆ ಉಡಿಸಿ ವನವಾಸಿಯಾಗಿ ಮಾಡಿಕಳಿಸಿ, ಕ್ರೂರ ಆಲೋಚನೆಯವಳು ಕೈಕೇಯಿ ಆದರಿಂದೇನು ಪ್ರಯೋಜನವನ್ನು ಕಂಡು-ಕೊಂಡಳು? ರಾಮನಿರುತ್ತಿದ್ದರೆ ಅವನೇ ನಿನ್ನನ್ನು ಸಿಂಹಾಸದಲ್ಲಿ ಕೂಡಿಸುತ್ತಿದ್ದ!

ಕ್ಷಿಪ್ರಂ ಮಾಮಪಿ ಕೈಕೇಯೀ ಪ್ರಸ್ಥಾಪಯಿತುಮರ್ಹತಿ ।
ಹಿರಣ್ಯನಾಭೋ ಯತ್ರಾಸ್ತೇ ಸುತೋ ಮೇ ಸುಮಹಾಯಶಾಃ ॥೧೩॥

ನನ್ನನ್ನೂ ಕೂಡ ಕೈಕೇಯಿ ಬೇಗನೆ ಬಂಗಾರದಂಥ ನಾಭಿ ಮುಂತಾದ ಅಂಗಾಂಗಳುಳ್ಳ ಮಹಾಯಶಸ್ವಿಯಾದ ಆ ನನ್ನ ಮಗ ರಾಮನಿರುವಲ್ಲಿಗೇ ಕಳಿಸಲಿ!

ಅಥವಾ ಸ್ವಯಮೇವಾಹಂ ಸುಮಿತ್ರಾನುಚರಾ ಸುಖಮ್ ।
ಅಗ್ನಿಹೋತ್ರಂ ಪುರಸ್ಕೃತ್ಯ ಪ್ರಸ್ಥಾಸ್ಯೇ ಯತ್ರ ರಾಘವಃ ॥೧೪॥

ಅಥವಾ, ಕ್ರೂರಿಯಾದ ಕೈಕೇಯಿ ಅಷ್ಟೂ ಉಪಕಾರವನ್ನು ಮಾಡದಿದ್ದರೆ, ನಾನೇ ಸ್ವತಃ ಅಗ್ನಿಹೋತ್ರವನ್ನು ಮುಂದಿಟ್ಟುಕೊಂಡು ಸುಮಿತ್ರೆಯೊಂದಿಗೆ ಸುಖವಾಗಿ ರಾಮನಿರುವಲ್ಲಿಗೆ ಹೋಗುವೆನು.

ಅಗ್ನಿಹೋತ್ರವು ಗೃಹಸ್ಥನಿಗೆ ಭಾರ್ಯಾಧೀನವಾಗಿ ವಿವಾಹದಿಂದ ಪ್ರಾಪ್ತ-ವಾಗುತ್ತದೆ. ಆ ಅಗ್ನಿಹೋತ್ರದಿಂದಲೇ ಅವನಿಗೆ ಅಂತ್ಯೇಷ್ಟಿ ನಡೆಯಬೇಕು. ಭರತನೇನಾದರೂ ಕೈಕೇಯಿಯೊಂದಿಗೆ ಸೇರಿ ರಾಜ್ಯವನ್ನು ಆಕ್ರಮಿಸಿದರೆ, ಅವನು ನನಗೆ ಉತ್ತರಕ್ರಿಯೆ ಮಾಡಬಾರದು ಎಂದು ದಶರಥ ಅಂತ್ಯಕಾಲದಲ್ಲಿ ಹೇಳಿದ್ದರಿಂದ, ಕೌಸಲ್ಯೆ ದಶರಥನ ಪಾರ್ಥಿವ ಶರೀರವನ್ನು ಅಗ್ನಿಹೋತ್ರದೊಂದಿಗೆ ತಾನೇ ರಾಮನ ಬಳಿಗೇ ಒಯ್ದುಕೊಡುವ ಅಭಿಪ್ರಾಯದಿಂದ 'ನಾನೇ ರಾಮನ ಬಳಿಗೆ ಹೋಗುವೆನೆ'ನ್ನುತ್ತಿದ್ದಾಳೆ.

ಕಾಮಂ ವಾ ಸ್ವಯಮೇವಾದ್ಯ ತತ್ರ ಮಾಂ ನೇತುಮರ್ಹಸಿ ।
ಯತ್ರಾಸೌ ಪುರುಷವ್ಯಾಘ್ರಃ ಪುತ್ರೋ ಮೇ ತಪ್ಯತೇ ತಪಃ ॥೧೫॥

ಅಥವಾ ನೀನೆ ಸ್ವತಃ ನನ್ನ ಮಗ ಪುರುಷೋತ್ತಮ ರಾಮನು ತಪ ಗೈವಲ್ಲಿಗೆ ನನ್ನನ್ನು ಒಯ್ದು ಬಿಟ್ಟು ಬಂದುಬಿಡು.

ಇದಂ ಹಿ ತವ ವಿಸ್ತೀರ್ಣಂ ಧನಧಾನ್ಯಸಮಾಚಿತಮ್ ।
ಹಸ್ತ್ಯಶ್ವರಥಸಂಪೂರ್ಣಂ ರಾಜ್ಯಂ ನಿರ್ಯಾತಿತಂ ತಯಾ ॥೧೬॥

ಏಕೆಂದರೆ ವಿಸ್ತೀರ್ಣವಾದ ಧನಧಾನ್ಯಗಳಿಂದ ತುಂಬಿರುವ ಗಜ ತುರಗ ರಥ ಸೈನ್ಯಗಳಿಂದ ತುಂಬಿದ ಈ ರಾಜ್ಯವನ್ನು ನಿನಗೆ ಕೈಕೇಯಿ ಕೊಡಿಸಿದ್ದಾಳೆ.

ಇತ್ಯಾದಿಬಹುಭಿರ್ವಾಕ್ಯೈಃ ಕ್ರೂರೈಃ ಸಂಭರ್ತ್ಸಿತೋಽನಘಃ ।
ವಿವ್ಯಥೇ ಭರತಸ್ತೀವ್ರಂ ವ್ರಣೇ ತುದ್ಯೇವ ಸೂಚಿನಾ ॥೧೭॥

ಇವೇ ಮುಂತಾದ ಕ್ರೂರವಾದ ಅನೇಕ ಮಾತುಗಳಿಂದ ಕೌಸಲ್ಯೆ ಚುಚ್ಚಿ ನುಡಿದಾಗ ಏನೂ ಅಪರಾಧ ಮಾಡದಿದ್ದ ಭರತನಿಗೆ ಗಾಯದ ಮೇಲೆ ಸೂಜಿ ಚುಚ್ಚಿದಂತಾಗಿ ಬಹಳ ವೇದನೆ ಉಂಟಾಯಿತು.

ಪಪಾತ ಚರಣೇ ತಸ್ಯಾಸ್ತದಾ ಸಂಭ್ರಾಂತಚೇತನಃ ।
ವಿಲಪ್ಯ ಬಹುಧಾऽಸಂಜ್ಞೋ ಲಬ್ಧಸಂಜ್ಞಸ್ತತಃ ಸ್ಥಿತಃ ॥೧೮॥

ಆಗ ಭರತ ಏನೂ ದಿಕ್ಕುತೋಚದವನಂತಾಗಿ ಕೌಸಲ್ಯೆಯ ಕಾಲಿಗೆ ಬಿದ್ದ. ನಾನಾ ರೀತಿಯಿಂದ ಗೋಳಿಟ್ಟು ಮೂರ್ಛೆಗೊಂಡ. ಬಳಿಕ ಎಚ್ಚೆತ್ತು ಎದ್ದು ನಿಂತ.

ಏವಂ ವಿಲಪಮಾನಾಂ ತಾಂ ಭರತಃ ಪ್ರಾಂಜಲಿಸ್ತದಾ ।
ಕೌಸಲ್ಯಾಂ ಪ್ರತ್ಯುವಾಚೇದಂ ಶೋಕೈರ್ಬಹುಭಿರಾವೃತಾಮ್ ॥೧೯॥

ಅನೇಕ ಶೋಕಗಳಿಂದ ಆವೃತಳಾಗಿ ಇನ್ನೂ ಗೋಳಿಡುತ್ತಿದ್ದ ಕೌಸಲ್ಯೆಗೆ ಭರತ ಕೈಮುಗಿದು ಆಣೆಯಿಡುತ್ತಾನೆ.

ಆರ್ಯೇ ಕಸ್ಮಾದಜಾನಂತಂ ಗರ್ಹಸೇ ಮಾಮಕಿಲ್ಬಿಷಮ್ ।
ವಿಪುಲಾಂ ಚ ಮಮ ಪ್ರೀತಿಂ ಸ್ಥಿರಾಂ ಜಾನಾಸಿ ರಾಘವೇ ॥೨೦॥

ಪೂಜ್ಯಳೆ, ಈ ಯಾವ ವಿಷಯವನ್ನು ಅರಿಯದಿದ್ದ ನಿರಪರಾಧಿಯಾದ ನನಗೆ ಏಕೆ ಚುಚ್ಚು ಮಾತುಗಳನ್ನಾಡುವೆ? ನನಗೆ ರಾಮನಲ್ಲಿ ಬಹಳವಾಗಿ ಗಾಢವಾದ ಪ್ರೀತಿ ಇರುವುದು ನಿನಗೆ ಗೊತ್ತಿದೆ.

ಕೃತಾ ಶಾಸ್ತ್ರಾನುಗಾ ಬುದ್ಧಿರ್ಮಾ ಭೂತ್ತಸ್ಯ ಕದಾಚನ ।
ಸತ್ಯಸಂಧಂ ಸತಾಂ ಶ್ರೇಷ್ಠೋ ಯಸ್ಯಾರ್ಯೋऽನುಮತೇ ಗತಃ ॥೨೧॥

ಯಾರ ಅಪೇಕ್ಷಾನುಸಾರ ಸಜ್ಜನರಲ್ಲಿ ಶ್ರೇಷ್ಠನಾದ ಸತ್ಯಸಂಧನಾದ ಪೂಜ್ಯನಾದ ರಾಮ ಕಾಡಿಗೆ ಹೋದನೋ, ಅವನಿಗೆ ಗುರೂಪದೇಶದಿಂದ ಬರುವ ಶಾಸ್ತ್ರಾನುಸಾರಿಯಾದ ವಿವೇಕ ಎಂದೂ ಇಲ್ಲದಂತಾಗಲಿ. ಆ ಅಪರಾಧಿಗೆ ಏನು ಶಿಕ್ಷೆಯೋ ಅದು ನನಗೇ ಬರಲಿ.

ಪ್ರೇಷ್ಯಂ ಪಾಪೀಯಸಾಂ ಯಾತು ಸೂರ್ಯಂ ಚ ಪ್ರತಿ ಮೇಹತು ।
ಹಂತು ಪಾದೇನ ಗಾಂ ಸುಪ್ತಾಂ ಯಸ್ಯಾರ್ಯೋಽನುಮತೇ ಗತಃ ॥೨೨॥

ಯಾರ ಪಿತೂರಿಯಿಂದ ಪೂಜ್ಯನಾದ ರಾಮ ಕಾಡಿಗೆ ಹೋದನೋ, ಅವನು ನಾನಿರಲಿ, ಬೇರೆ ಯಾರೇ ಇರಲಿ ಪಾಪಿಷ್ಠರಿಗೆ ಅತ್ಯಂತ ಪ್ರಿಯನಾಗುವ, ಸೂರ್ಯನಿಗಿದಿರಾಗಿ ಮಲಮೂತ್ರ ವಿಸರ್ಜಿಸುವ, ಮಲಗಿದ ಹಸುವನ್ನು ಕಾಲಿಂದ ಒದೆವ ಮಹಾಪಾಪಕ್ಕೆ ಗುರಿಯಾಗಲಿ.

ಕಾರಯಿತ್ವಾ ಮಹತ್ ಕರ್ಮ ಭರ್ತಾ ಭೃತ್ಯಮನರ್ಥಕಮ್ ।
ಅಧರ್ಮೋ ಯೋಽಸ್ಯ ಸೋಽಸ್ಯಾಸ್ತು ಯಸ್ಯಾರ್ಯೋಽನುಮತೇ ಗತಃ ॥

ಯಾರ ಸಂಚಿನಿಂದಾಗಿ ಪೂಜ್ಯನಾದ ರಾಮ ಕಾಡಿಗೆ ಹೋಗಬೇಕಾಯಿತೋ ಅವನಿಗೆ, ಸೇವಕನಿಂದ ಮಹತ್ತಾದ ಸೇವೆ ಮಾಡಿಸಿಕೊಂಡು ಪ್ರತಿಫಲ ನೀಡದ ಯಜಮಾನನ ಪಾಪ ಸುತ್ತಿಕೊಳ್ಳಲಿ.

ಪರಿಪಾಲಯಮಾನಸ್ಯ ರಾಜ್ಞೋ ಭೂತಾನಿ ಪುತ್ರವತ್ ।
ತತಸ್ತು ದ್ರುಹ್ಯತಾಂ ಪಾಪಂ ಯಸ್ಯಾರ್ಯೋಽನುಮತೇ ಗತಃ ॥೨೪॥

ಯಾರ ಅಪೇಕ್ಷೆಯಿಂದ ಪೂಜ್ಯನಾದ ರಾಮ ಕಾಡುಪಾಲಾದನೋ ಅವನಿಗೆ ಮಕ್ಕಳಂತೆ ಪ್ರಜೆಗಳನ್ನಾಳುವ ರಾಜನಿಗೆ ಸತತ ದ್ರೋಹಗೈದ ಪಾಪ ಬರಲಿ.

ಬಲಿಷಡ್ಭಾಗಮುದ್ಧೃತ್ಯ ನೃಪಸ್ಯಾರಕ್ಷತಃ ಪ್ರಜಾಃ ।
ಅಧರ್ಮೋ ಯಸ್ತು ಸೋಽಸ್ಯಾಸ್ತು ಯಸ್ಯಾರ್ಯೋಽನುಮತೇ ಗತಃ ॥

ಯಾರ ಸಂಚಿನಿಂದ ಪೂಜ್ಯರಾಮ ವನವಾಸಿಯಾದನೋ ಅವನಿಗೆ, ಪ್ರಜೆಗಳ ಆದಾಯದಲ್ಲಿ ಆರನೆ ಒಂದು ಭಾಗವನ್ನು ತೆರಿಗೆಯಾಗಿ ತೆಗೆದುಕೊಂಡು ಅವರನ್ನು ರಕ್ಷಿಸದಿರುವ ರಾಜನ ಪಾಪವೆ ಬರಲಿ.

ಸಂಶ್ರುತ್ಯ ಚ ತಪಸ್ವಿಭ್ಯಃ ಸತ್ರೇ ವೈ ಯಜ್ಞದಕ್ಷಿಣಾಮ್ ।
ತಾಂ ವಿಪ್ರಲಪತಾಂ ಪಾಪಂ ಯಸ್ಯಾಯೋ೯ಽನುಮತೇ ಗತಃ ॥೨೬॥

ಯಾರ ಪಿತೂರಿಯಿಂದ ಪೂಜ್ಯನಾದ ರಾಮ ವನವಾಸಿಯಾಗಬೇಕಾಯಿತೋ ಅವನಿಗೆ, ಯಾಗದಲ್ಲಿ ತಪಸ್ವಿಗಳಾದ ಋತ್ವಿಜರಿಗೆ ಇಷ್ಟು ಯಜ್ಞದಕ್ಷಿಣೆ ನೀಡುವುದಾಗಿ ಮಾತುಕೊಟ್ಟ ಬಳಿಕ ಇಲ್ಲವೆಂದು ಅದನ್ನು ಅಪಲಾಪ ಮಾಡಿದ ಪಾಪ ಬರಲಿ.

ಹಸ್ತ್ಯಶ್ವರಥಸಂಬಾಧೇ ಯುದ್ಧೇ ಶಸ್ತ್ರಸಮಾಕುಲೇ ।
ಮಾ ಸ್ಮ ಕಾರ್ಷೀತ್ ಸತಾಂ ಧರ್ಮಂ ಯಸ್ಯಾಯೋ೯ರ್ನುಮತೇ ಗತಃ ॥

ಯಾರ ಸಂಚಿನಿಂದ ಪೂಜ್ಯನಾದ ರಾಮ ಕಾಡಿಗೆ ಹೋಗಬೇಕಾಯಿತೋ ಅವನಿಗೆ, ಆನೆ ಕುದುರೆ ರಥ ಸೈನ್ಯಗಳ ದಟ್ಟಣೆಯುಳ್ಳ ಶಸ್ತ್ರಗಳ ಭರಾಟೆಯಿಂದ ಕಂಗೆಡಿಸುವ ಯುದ್ಧದಲ್ಲಿ ಉತ್ತಮ ಕ್ಷತ್ರಿಯರಂತೆ ಹೋರಾಡದವನ ಪಾಪ ಬರಲಿ.

ಉಪದಿಷ್ಟಂ ಸುಸೂಕ್ಷ್ಮಾರ್ಥಂ ಶಾಸ್ತ್ರಂ ಯತ್ನೇನ ಧೀಮತಾ ।
ಸ ನಾಶಯತು ದುಷ್ಟಾತ್ಮಾ ಯಸ್ಯಾಯೋ೯ಽನುಮತೇ ಗತಃ ॥೨೮॥

ಯಾರ ಸಂಚಿನಿಂದ ಪೂಜ್ಯರಾಮನು ಕಾಡಿಗೆ ಹೋಗುವಂತಾಯಿತೋ ಅವನಿಗೆ, ಜ್ಞಾನಿಯಾದ ಗುರು ಯತ್ನಪೂರ್ವಕವಾಗಿ ಉಪದೇಶಿಸಿದ ಶಾಸ್ತ್ರಪರಮ ರಹಸ್ಯಾರ್ಥವನ್ನು ಮರೆತು ಬಿಡುವ ದುಷ್ಟಾತ್ಮನ ಪಾಪ ಬರಲಿ.

ಮಾ ಚ ತಂ ವ್ಯೂಢಬಾಹ್ವಂಸಂ ಚಂದ್ರಾರ್ಕಸಮತೇಜಸಮ್ ।
ದ್ರಾಕ್ಷೀದ್ರಾಜ್ಯಸ್ಥಮಾಸೀನಂ ಯಸ್ಯಾಯೋ೯ಽನುಮತೇ ಗತಃ ॥೨೯॥

ಯಾರ ಅಪೇಕ್ಷೆಯಿಂದ ಪೂಜ್ಯರಾಮನು ವನವಾಸ ಮಾಡಬೇಕಾಯಿತೋ ಅವನಿಗೆ ಚಂದ್ರ ಸೂರ್ಯರಂತೆ ಹೊಳೆಯುವ ವಿಶಾಲ ಎದೆ ದೀರ್ಘಬಾಹುಗಳುಳ್ಳ ಆ ರಾಮನು ಪಟ್ಟಾಭಿಷಿಕ್ತನಾಗುವುದನ್ನು ದರ್ಶನ ಮಾಡದ ಪಾಪ ಸುತ್ತಿಕೊಳ್ಳಲಿ.

ಶ್ರೀರಾಮನ ಪಟ್ಟಾಭಿಷೇಕವನ್ನು ಕಾಣದಿರುವುದೇ ಮಹಾಪಾಪಕರ-
ವೆನ್ನುತ್ತಾನೆ ಭರತ.

ಪಾಯಸಂ ಕೃಸರಂ ಛಾಗಂ ವೃಥಾ ಸೋಽಶ್ನಾತು ನಿರ್ಘೃಣಃ ।
ಗುರೂಂಶ್ಚಾಪ್ಯವಜಾನಾತು ಯಸ್ಯಾಯೋ೯ಽನುಮತೇ ಗತಃ ॥೩೦॥

ಯಾರ ಸಂಚಿನಿಂದ ಪೂಜ್ಯ ರಾಮ ವನವಾಸ ಮಾಡುತ್ತಿರುವನೋ ಅವನಿಗೆ ಪಾಯಸ ಎಳ್ಳನ್ನ ಆಡಿನಮಾಂಸಗಳನ್ನು ಪಿತೃಗಳಿಗೆ ನೀಡುವ ಉದ್ದೇಶವಿಲ್ಲದೆ ನಿರ್ದಯತೆಯಿಂದ ವ್ಯರ್ಥವಾಗಿ ಜಿಹ್ವಾಚಾಪಲ್ಯದಿಂದ ಉಣ್ಣುವವನ ಪಾಪ, ಗುರುಗಳನ್ನು ಅವಮಾನಿಸುವವನ ಪಾಪಗಳು ಸುತ್ತಿಕೊಳ್ಳಲಿ.

ಗಾಶ್ಚ ಸ್ಪೃಶತು ಪಾದೇನ ಗುರೂನ್ ಪರಿವದೇತ್ ಸ್ವಯಮ್ ।
ಮಿತ್ರೇ ದ್ರುಹ್ಯೇತ ಸೋಽತ್ಯಂತಂ ಯಸ್ಯಾಯೋರ್ನಾನುಮತೇ ಗತಃ॥೫೧॥

ಗೋವುಗಳನ್ನು ಕಾಲಿಂದ ತುಳಿದ ಪಾಪ, ಗುರುಹಿರಿಯರನ್ನು ಸ್ವತಃ ನಿಂದೆ ಮಾಡಿದ ಪಾಪ, ಮಿತ್ರನಿಗೆ ಅತ್ಯಂತ ದ್ರೋಹ ಮಾಡಿದ ಪಾಪ ಎಲ್ಲವೂ, ಯಾರ ಸಂಚಿನಿಂದ ರಾಮ ಕಾಡಿಗೆ ಹೋದನ್ನೊ ಅವನಿಗೆ ಬರಲಿ.

ವಿಶ್ವಾಸಾತ್ ಕಥಿತಂ ಕಿಂಚತ್ ಪರಿವಾದಂ ಮಿಥಃ ಕ್ವಚಿತ್ ।
ವಿವೃಣೋತು ಸ ದುಷ್ಟಾತ್ಮಾ ಯಸ್ಯಾಯೋರ್ನಾನುಮತೇ ಗತಃ ॥೫೨॥

ಯಾರ ಸಂಚಿನಿಂದ ರಾಮ ಕಾಡಿಗೆ ಹೋದನೋ ಅವನಿಗೆ, 'ಎಲ್ಲರ ಮುಂದೆ ಹೇಳಲಾರನೆಂ'ಬ ವಿಶ್ವಾಸದಿಂದ ರಹಸ್ಯವಾಗಿ ಹೇಳಿದ ಒಬ್ಬನ ಒಂದು ದೋಷವನ್ನು ಎಲ್ಲರ ಮುಂದೆ ಹೇಳಿದ ದುಷ್ಟಾತ್ಮನ ಪಾಪ ಬಂದು ಸೇರಲಿ.

ಅಕರ್ತಾ ಹ್ಯಕೃತಜ್ಞಶ್ಚ ತ್ಯಕ್ತಾತ್ಮಾ ನಿರಪತ್ರಪಃ ।
ಲೋಕೇ ಭವತು ವಿದ್ವೇಷ್ಯೋ ಯಸ್ಯಾಯೋರ್ನಾನುಮತೇ ಗತಃ ॥೫೩॥

ಉಪಕಾರಕ್ಕೆ ಪ್ರತ್ಯುಪಕಾರ ಮಾಡಲಾರ. ಮಾಡಿದ ಉಪಕಾರವನ್ನು ನೆನೆಯಲಾರ, ಸಜ್ಜನರಿಗೆ ಯಾರಿಗೂ ಬೇಡವಾದವನಾಗಿದ್ದೂ ಲಜ್ಜೆ ಇಲ್ಲದೆ ಪಾಪಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳದವನು, ಲೋಕದಲ್ಲಿ ಎಲ್ಲರಿಗೂ ದ್ವೇಷ ಯೋಗ್ಯನೆನಿಸಿದವನು ಇಂಥವನ ಪಾಪವನ್ನು, ಯಾರ ಇಚ್ಛೆಯಿಂದ ಪೂಜ್ಯ ರಾಮನು ವನವಾಸ ಮಾಡುವನೋ ಅವನು ಹೊಂದಲಿ.

ಪುತ್ರೈರ್ದಾರೈಶ್ಚ ಭೃತ್ಯೈಶ್ಚ ಸ್ವಗೃಹೇ ಪರಿವಾರಿತಃ ।
ಸ ಏಕೋ ಮೃಷ್ಟಮಶ್ನಾತು ಯಸ್ಯಾಯೋರ್ನಾನುಮತೇ ಗತಃ ॥೫೪॥

ಯಾರ ಅಪೇಕ್ಷೆಗನುಗುಣವಾಗಿ ರಾಮ ಕಾಡಿಗೆ ಹೋದನೋ ಅವನು, ತಾನು ಸ್ವಂತ ಮನೆಯಲ್ಲಿ ಹೆಂಡತಿ ಮಕ್ಕಳ ಸೇವಕರ ಪರಿವಾರಉಳ್ಳವನಾಗಿದ್ದರೂ ಒಬ್ಬನೇ ಕುಳಿತು ಮೃಷ್ಟಾನ್ನ ಉಣ್ಣುವವನ ಪಾಪಕ್ಕೆ ಗುರಿಯಾಗಲಿ.

ಅಪ್ರಾಪ್ಯ ಸದೃಶಾನ್ ದಾರಾನನಪತ್ಯಃ ಪ್ರಮೀಯತಾಮ್ ।
ಅನವಾಪ್ಯ ಕ್ರಿಯಾಂ ಧರ್ಮ್ಯಾಂ ಯಸ್ಯಾಯೋರ್ಽನುಮತೇ ಗತಃ ॥

ಯಾರ ಅನುಮತಿಯಿಂದ ರಾಮ ಕಾಡಿಗೆ ಹೋದನೋ ಅವನು, ಮಕ್ಕಳಿಲ್ಲ-ದವನಾಗಿದ್ದೂ ಅನುರೂಪಳಾದ ಕನ್ಯೆಯನ್ನು ಮದುವೆಯಾಗದೆ ವರ್ಣಾಶ್ರಮ ಧರ್ಮಗಳನ್ನು ನಡೆಸದೇ ಮೃತನಾಗುವವನ ಪಾಪವನ್ನು ಹೊಂದಲಿ.

ಮಾಽತ್ಮನಃ ಸಂತತಿಂ ದ್ರಾಕ್ಷೀತ್ ಸ್ವೇಷು ದಾರೇಷು ದುಃಖಿತಃ ।
ಆಯುಃ ಸಮಗ್ರಮಪ್ರಾಪ್ಯ ಯಸ್ಯಾಯೋರ್ಽನುಮತೇ ಗತಃ ॥೩೬॥

ಯಾರ ಸಂಚಿನಿಂದ ರಾಮನು ಕಾಡಿಗೆ ತೆರಳಿದನೋ ಅವನು, ತನ್ನ ಪತ್ನಿಯಲ್ಲಿ ಸಂತತಿಯನ್ನು ಪಡೆಯದೆ ದುಃಖಿಸುತ್ತ ಅಕಾಲ ಮರಣ ಹೊಂದುವವನ ಪಾಪಕ್ಕೆ ಗುರಿಯಾಗಲಿ.

ರಾಜಸ್ತ್ರೀಬಾಲವೃದ್ಧಾನಾಂ ವಧೇ ಯತ್ ಪಾಪಮುಚ್ಯತೇ ।
ಭೃತ್ಯತ್ಯಾಗೇ ಚ ಯತ್ ಪಾಪಂ ತತ್ ಪಾಪಂ ಪ್ರತಿಪದ್ಯತಾಮ್ ॥೩೭॥

ಪೂಜ್ಯರಾಮನ ಅರಣ್ಯವಾಸವನ್ನು ಬಯಸಿದವನು ರಾಜ–ಸ್ತ್ರೀ–ಬಾಲ– ವೃದ್ಧರ ವಧೆಯಿಂದ, ಸೇವಕನ ಪರಿತ್ಯಾಗದಿಂದ ಬರುವ ಪಾಪವನ್ನು ಪಡೆಯಲಿ.

ಲಾಕ್ಷಯಾ ಮಧುಮಾಂಸೇನ ಲೋಹೇನ ಚ ವಿಷೇಣ ಚ ।
ಸದೈವ ಬಿಭೃಯಾದ್ಭೃತ್ಯಾನ್ ಯಸ್ಯಾಯೋರ್ಽನುಮತೇ ಗತಃ ॥೩೮॥

ಅರಗು–ಜೇನು–ಮಾಂಸ–ಲೋಹ–ವಿಷಗಳ ಮಾರಾಟದಿಂದಲೇ ಸೇವಕರನ್ನು ಕುಟುಂಬವನ್ನೂ ಸದಾ ಪೋಷಿಸುವವನ ಪಾಪವನ್ನು ರಾಮನ ವನವಾಸವನ್ನು ಅಪೇಕ್ಷಿಸುವವನು ಹೊಂದಲಿ.

ಸಂಗ್ರಾಮೇ ಸಮುಪೋಢೇ ತು ಶತ್ರುಪಕ್ಷಭಯಂಕರೇ ।
ಪಲಾಯಮಾನೋ ವಧ್ಯೇತ ಯಸ್ಯಾಯೋರ್ಽನುಮತೇ ಗತಃ ॥೩೯॥

ಯುದ್ಧವು ಸನ್ನಿಹಿತವಾಗಿದ್ದು ಶತ್ರುಪಕ್ಷ ಭಯಂಕರವಾಗಿರುವಾಗ ಆತ್ಮರಕ್ಷಣೆಗಾಗಿ ಪಲಾಯನ ಮಾಡುವವನನ್ನು ವಧಿಸುವವನ ಪಾಪವು, ರಾಮನ ವನವಾಸವನ್ನು ಅಪೇಕ್ಷಿಸುವವನಿಗೆ ಬರಲಿ.

ಕಪಾಲಪಾಣಿಃ ಪೃಥಿವೀಮಟತಾಂ ಚೀರಸಂವೃತಃ ।
ಭಿಕ್ಷಮಾಣೋ ಯಥೋನ್ಮತ್ತೋ ಯಸ್ಯಾಯೋ೯ऽನುಮತೇ ಗತಃ॥೪೦।

ರಾಮನ ವನವಾಸವನ್ನು ಅನುಮೋದಿಸುವವನು ಚೆಂದಿಬಟ್ಟೆ ಉಟ್ಟು ಕಪಾಲ-ವನ್ನು ಹಿಡಿದುಕೊಂಡು ಭಿಕ್ಷೆಬೇಡುತ್ತ ಉನ್ಮತ್ತನಂತೆ ಅಲೆಯುವಂತಾಗಲಿ.

ಮದ್ಯೇ ಪ್ರಸಕ್ತೋ ಭವತು ಸ್ತ್ರೀಷ್ವಕ್ಷೇಷು ಚ ನಿತ್ಯಶಃ ।
ಕಾಮಕ್ರೋಧಾಭಿಭೂತಸ್ತು ಯಸ್ಯಾಯೋ೯ऽನುಮತೇ ಗತಃ ॥೪೧॥

ರಾಮನ ವನವಾಸವನ್ನು ಅಪೇಕ್ಷಿಸುವವನು ಸದಾ ಮದ್ಯಪಾನದಲ್ಲಿ ಸ್ತ್ರೀಸಂಗ-ದಲ್ಲಿ ಜೂಜಿನಲ್ಲಿ ಆಸಕ್ತನಾಗಿ ಕಾಮಕ್ರೋಧಗಳಿಗೆ ಬಲಿಯಾಗಲಿ.

ಮಾ ಸ್ಮ ಧರ್ಮೇ ಮನೋ ಭೂಯಾದಧರ್ಮಂ ಸ ನಿಷೇವತಾಮ್ ।
ಅಪಾತ್ರವರ್ಷೀ ಭವತು ಯಸ್ಯಾಯೋ೯ऽನುಮತೇ ಗತಃ ॥೪೨॥

ರಾಮನ ವನವಾಸವನ್ನು ತಡೆಯದವನು ಧರ್ಮದಲ್ಲಿ ಶ್ರದ್ಧೆ ಮಾಡದಿರಲಿ ಅಧರ್ಮವನ್ನೆ ಮಾಡುತ್ತಿರಲಿ ಅಪಾತ್ರರಿಗೇ ದಾನ ಮಾಡುತ್ತಿರಲಿ.

ಸಂಚಿತಾನ್ಯಸ್ಯ ವಿತ್ತಾನಿ ವಿವಿಧಾನಿ ಸಹಸ್ರಶಃ ।
ದಸ್ಯುಭಿರ್ವಿಪ್ರಲುಪ್ಯಂತಾಂ ಯಸ್ಯಾಯೋ೯ऽನುಮತೇ ಗತಃ ॥೪೩॥

ರಾಮನ ವನವಾಸಕ್ಕೆ ಸಂಚು ಮಾಡಿದವನು. ಸಂಪಾದಿಸಿದ ನಾನಾ ಬಗೆಯ ಸಾವಿರ ಸಾವಿರ ಸಂಖ್ಯೆಯ ಸಂಪತ್ತುಗಳನ್ನು ಕಳ್ಳಕಾಕರು ದೋಚಲಿ.

ಉಭೇ ಸಂಧ್ಯೇ ಶಯಾನಸ್ಯ ಯತ್ ಪಾಪಂ ಪರಿಕಲ್ಪ್ಯತೇ ।
ತಚ್ಚ ಪಾಪಂ ಭವೇತ್ತಸ್ಯ ಯಸ್ಯಾಯೋ೯ऽನುಮತೇ ಗತಃ ॥೪೪॥

ಎರಡು ಸಂಧ್ಯಾಕಾಲಗಳಲ್ಲಿ ಮಲಗುವವನಿಗೆ ಶಾಸ್ತ್ರದಲ್ಲಿ ಹೇಳಿದ ಪಾಪವು ರಾಮನ ವನವಾಸವನ್ನು ಬಯಸುವವನಿಗೆ ಹೋಗಲಿ.

ಯದಗ್ನಿದಾಯಕೇ ಪಾಪಂ ಯತ್ ಪಾಪಂ ಗುರುತಲ್ಪಗೇ ।
ಮಿತ್ರದ್ರೋಹೇ ಚ ಯತ್ ಪಾಪಂ ತತ್ ಪಾಪಂ ಪ್ರತಿಪದ್ಯತಾಮ್ ॥

ರಾಮನ ವನವಾಸವನ್ನು ಬಯಸಿದವನು ಮನೆಗಳಿಗೆ ಬೆಂಕಿಯಿಡುವವನ,

ಗುರುಪತ್ನಿಯೊಡನೆ ಸಮಾಗಮ ಮಾಡುವವನ, ಮಿತ್ರರಿಗೆ ದ್ರೋಹವೆಸಗುವವನ ಪಾಪಗಳು ಬರಲಿ.

ದೇವತಾನಾಂ ಪಿತೄಣಾಂ ಚ ಮಾತಾಪಿತ್ರೋಸ್ತಥೈವ ಚ ।
ಮಾ ಸ್ಮ ಕಾರ್ಷೀತ್ ಸ ಶುಶ್ರೂಷಾಂ ಯಸ್ಯಾಯೋರ್ಽನುಮತೇ ಗತಃ ॥

ರಾಮನ ವನವಾಸವನ್ನು ಸಮ್ಮತಿಸುವವನು ದೇವತೆಗಳ ಪಿತೃಗಳ ಮಾತಾಪಿತೃಗಳ ಸೇವೆ ಮಾಡದಿರುವ ಪಾಪವನ್ನು ಹೊಂದಲಿ.

ಸತಾಂ ಲೋಕಾತ್ ಸತಾಂ ಕೀರ್ತ್ಯಾಃ ಸಜ್ಜುಷ್ಟಾತ್ ಕರ್ಮಣಸ್ತಥಾ ।
ಭ್ರಶ್ಯತು ಕ್ಷಿಪ್ರಮದ್ಯೈವ ಯಸ್ಯಾಯೋರ್ಽನುಮತೇ ಗತಃ ॥೪೭॥

ರಾಮನ ವನವಾಸವನ್ನು ಅನುಮೋದಿಸುವವನು ಈಗಲೇ ಬೇಗನೆ ಸಜ್ಜನರ ಲೋಕ, ಸಜ್ಜನರ ಕೀರ್ತಿ, ಸಜ್ಜನರ ಕರ್ಮಗಳಿಂದ ಭ್ರಷ್ಟನಾಗಲಿ.

ಅಪಾಸ್ಯ ಮಾತೃಶುಶ್ರೂಷಾಮನರ್ಥೇ ಸೋಽವತಿಷ್ಠತಾಮ್ ।
ದೀರ್ಘಬಾಹುರ್ಮಹಾವಕ್ಷಾ ಯಸ್ಯಾಯೋರ್ಽನುಮತೇ ಗತಃ ॥೪೮॥

ದೀರ್ಘಬಾಹು ವಿಶಾಲವಾದ ಎದೆಯುಳ್ಳ ಪೂಜ್ಯನಾದ ರಾಮನು ಕಾಡಿಗೆ ಹೋಗುವುದನ್ನು ಅನುಮೋದಿಸುವವನು ಮಾತೃ ಶುಶ್ರೂಷೆಯನ್ನು ತ್ಯಜಿಸಿ ಅನರ್ಥಕರವಾದ ಕಾರ್ಯಗಳಲ್ಲಿ ತೊಡಗಲಿ.

ಬಹುಪುತ್ರೋ ದರಿದ್ರಶ್ಚ ಜ್ವರರೋಗಸಮನ್ವಿತಃ ।
ಸ ಭೂಯಾತ್ ಸತತಂ ಕ್ಲೇಶೀ ಯಸ್ಯಾಯೋರ್ಽನುಮತೇ ಗತಃ ॥೪೯॥

ಪೂಜ್ಯರಾಮನ ವನವಾಸವನ್ನು ಅನುಮೋದಿಸುವವನು ಬಹುಪುತ್ರ ವಂತನೂ ದರಿದ್ರನೂ ಜ್ವರ ರೋಗ ಯುಕ್ತನೂ ಸತತ ಕ್ಲೇಶ ಭಾಗಿಯೂ ಆಗಲಿ.

ಆಶಾಮಾಶಂಸಮಾನಾನಾಂ ದೀನಾನಾಮೂರ್ಧ್ವಚಕ್ಷುಷಾಮ್ ।
ಅರ್ಥಿನಾಂ ವಿತಥಾಂ ಕುರ್ಯಾದ್ಯಸ್ಯಾಯೋರ್ಽನುಮತೇ ಗತಃ ॥೫೦॥

ಧನಿಕರನ್ನು ಹೊಗಳುತ್ತ 'ಯಾರು ಭಿಕ್ಷೆ ನೀಡುವರೆಂ'ದು ದೈನ್ಯದಿಂದ ಮೇಲೇ ದೃಷ್ಟಿ ಹಾಯಿಸುವ ಭಿಕ್ಷುಕರಿಗೆ ನಿರಾಸೆ ಉಂಟು ಮಾಡುವವನ ಪಾಪ ಪೂಜ್ಯ ರಾಮನ ವನವಾಸವನ್ನು ಆಶಿಸುವವನಿಗೆ ಸುತ್ತಿಕೊಳ್ಳಲಿ.

ಮಾಯಯಾ ರಮತಾಂ ನಿತ್ಯಂ ಪರುಷಃ ಪಿಶುನೋಽಶುಚಿಃ ।
ರಾಜ್ಞೋ ಭೀತಸ್ತ್ವಧರ್ಮಾತ್ಮಾ ಯಸ್ಯಾಯೋರ್ಽನುಮತೇ ಗತಃ ॥೫೧॥

ಪೂಜ್ಯ ರಾಮನ ವನವಾಸವನ್ನು ಅನುಮೋದಿಸುವ ಪಾಪಿ ನಿತ್ಯವೂ ಕಪಟ ವೃತ್ತಿಯಲ್ಲಿಯೇ ನಿರತನಾಗಲಿ. ಕ್ರೂರಿ, ಚಾಡಿಕೋರ, ಅಶುಚಿಯಾಗಿ ರಾಜನಿಗೆ ಭಯಪಡುತ್ತಿರಲಿ.

ಋತುಸ್ನಾತಾಂ ಸತೀಂ ಭಾರ್ಯಾಮೃತುಕಾಲಾನುರೋಧಿನೀಮ್ ।
ಅತಿವರ್ತೇತ ದುಷ್ಟಾತ್ಮಾ ಯಸ್ಯಾಯೋರ್ಽನುಮತೇ ಗತಃ ॥೫೨॥

ಋತುಸ್ನಾತಳಾಗಿ ಋತುಕಾಲದಲ್ಲಿ ಬಳಿಗೆ ಬಂದ ಭಾರ್ಯೆಯನ್ನು ಅತಿಕ್ರಮಿಸಿ ಹೋಗುವ ದುರಾತ್ಮನ ಪಾಪವನ್ನು ರಾಮನ ವನವಾಸವನ್ನು ಆಶಿಸುವವನು ಹೊಂದಲಿ.

ಧರ್ಮದಾರಾನ್ ಪರಿತ್ಯಜ್ಯ ಪರದಾರಾನ್ನಿಷೇವತಾಮ್ ।
ತ್ಯಕ್ತಧರ್ಮರತಿರ್ಮೂಢೋ ಯಸ್ಯಾಯೋರ್ಽನುಮತೇ ಗತಃ ॥೫೩॥

ಧರ್ಮಪತ್ನಿಯನ್ನು ಪರಿತ್ಯಜಿಸಿ ಪರಸ್ತ್ರೀಸಂಗಮಾಡುವವರ ಪಾಪವನ್ನು ರಾಮನ ವನವಾಸವನ್ನು ಬಯಸುವವನು ಹೊಂದಲಿ. ಅವನು ಧರ್ಮಶ್ರದ್ಧೆ ಯನ್ನು ಕಳೆದುಕೊಂಡ ಮೂರ್ಖನಾಗಲಿ.

ವಿಪ್ರಲುಪ್ತಪ್ರಜಾತಸ್ಯ ದುಷ್ಕೃತಂ ಬ್ರಾಹ್ಮಣಸ್ಯ ಯತ್ ।
ತದೇತತ್ ಪ್ರತಿಪದ್ಯೇತ ಯಸ್ಯಾಯೋರ್ಽನುಮತೇ ಗತಃ ॥೫೪॥

ಬ್ರಾಹ್ಮಣನು ಕುಲದೀಪಕನಾದ ಮಗನನ್ನು ನಾಶಮಾಡಿದರೆ, ನಾಶವಾಗಲು ಬಿಟ್ಟರೆ, ಕುಲದೀಪಕನಾದ ಮಗನನ್ನು ಹೆತ್ತುಕೊಟ್ಟಿರುವ ಪತ್ನಿಯನ್ನು ಪರಿತ್ಯಾಗ ಮಾಡಿದರೆ ಏನು ಪಾಪವನ್ನು ಹೊಂದುವನೋ ಅದೇ ಪಾಪವನ್ನು ಪೂಜ್ಯ ರಾಮನನ್ನು ಕಾಡಿಗೆ ಕಳಿಸಲು ಆಶಿಸುವವನೂ ಹೊಂದಲಿ.

ಪಾನೀಯದೂಷಕೇ ಪಾಪಂ ತಥೈವ ವಿಷದಾಯಕೇ ।
ಯತ್ತದೇಕಃ ಸ ಲಭತಾಂ ಯಸ್ಯಾಯೋರ್ಽನುಮತೇ ಗತಃ ॥೫೫॥

ಕುಡಿವ ನೀರನ್ನು ಕೆಡಿಸುವವನ ಪಾಪ ಮತ್ತು ವಿಷಪ್ರಯೋಗ ಮಾಡುವವನ ಪಾಪ ಎರಡನ್ನೂ ರಾಮನ ವನವಾಸವನ್ನು ಬಯಸುವವನು ಒಬ್ಬನೇ ಹೊಂದಲಿ.

ಬ್ರಾಹ್ಮಣಾಯೋದ್ಯತಾಂ ಪೂಜಾಂ ವಿಹಂತು ಕಲುಷೇಂದ್ರಿಯಃ ।
ಬಾಲವತ್ಸಾಂ ಚ ಗಾಂ ದೋಗ್ಧು ಯಸ್ಯಾಯೋ೯ಽನುಮತೇ ಗತಃ ॥೫೬

ರಾಮನ ವನವಾಸವನ್ನು ಆಶಿಸುವವನು, ಬ್ರಾಹ್ಮಣನಿಗೆ ನಡೆಯುತ್ತಿರುವ ಸತ್ಕಾರವನ್ನು ನಿಲ್ಲಿಸಲಿ. ಎಳಗಂದಿ ಹಸುವನ್ನು ಕರೆದುಕೊಳ್ಳಲಿ. ಕಲ್ಮಷ ಮನಸಿನವನಾಗಲಿ.

ತೃಷಾರ್ತಂ ಸತಿ ಪಾನೀಯೇ ವಿಪ್ರಲಂಭೇನ ಯೋಜಯನ್ ।
ಯತ್ ಪಾಪಂ ಲಭತೇ ತತ್ ಸ್ಯಾತ್ ಯಸ್ಯಾಯೋ೯ಽನುಮತೇ ಗತಃ ॥

ಮನೆಯಲ್ಲಿ ಕುಡಿಯುವ ನೀರಿದ್ದರೂ ಬಾಯಾರಿ ಬಳಲಿ ಬಂದವನಿಗೆ ಇಲ್ಲವೆಂದು ವಂಚನೆ ಮಾಡುವವನು ಏನು ಪಾಪವನ್ನು ಹೊಂದುವನೋ ಅದನ್ನೇ ರಾಮನ ವನವಾಸವನ್ನು ಅನುಮತಿಸಿದವನೂ ಹೊಂದಲಿ.

ಭಕ್ಯಾ ವಿವದಮಾನೇಷು ಮಾರ್ಗಮಾಶ್ರಿತ್ಯ ಪಶ್ಯತಃ ।
ತಸ್ಯ ಪಾಪೇನ ಯುಜ್ಯೇತ ಯಸ್ಯಾಯೋ೯ಽನುಮತೇ ಗತಃ ॥೫೮॥

ತತ್ವನಿರ್ಣಯವಾಗಬೇಕೆಂದು ಭಕ್ತಿಯಿಂದ ಜಿಜ್ಞಾಸುಗಳು ತಮ್ಮ ತಮ್ಮ ಮಾರ್ಗವನ್ನು ಹಿಡಿದು ವಾದವಿವಾದ ಮಾಡುತ್ತಿರುವಾಗ 'ಪಶ್ಯತಃ' ತತ್ವವನ್ನು ತಿಳಿದೂ ಕೂಡ ಹೇಳದೆ 'ಪಶ್ಯತಃ' ಕೇವಲ ನೋಡುತ್ತಿರುವವನ ಪಾಪವನ್ನು ರಾಮನ ವನವಾಸವನ್ನು ಬಯಸುವವನು ಹೊಂದಲಿ.

ಶ್ರದ್ಧೆಯಿಂದ ತತ್ವನಿರ್ಣಯಕ್ಕಾಗಿ ತಮ್ಮ ತಮ್ಮ ರೀತಿಯಿಂದ ವಾದಕಲಹ ಮಾಡುವ ಜನರಿಗೆ ತಿಳಿದವನು ತತ್ವವನ್ನು ತಿಳಿಸಬೇಕು. ಹೊರತು 'ನೀನೂ ಸರಿ, ಅವನೂ ಸರಿ' ಎನ್ನುತ್ತ ಕಲಹ ಇನ್ನಷ್ಟು ಕಾವೇರುವಂತೆ ಮಾಡಬಾರದು.

ತತೋ ಭೂಯ ಇವ ತೇ ತಮೋ
ಯ ಉ ವಿದ್ಯಾಯಾಂ ರತಾಃ – ಈಶೋಪನಿಷತ್

ತಾನು ಕಂಡ ಸತ್ಯವನ್ನು ಉಳಿದವರಿಗೆ ತಿಳಿಸದೆ 'ಯಾವ ಮಾರ್ಗದಲ್ಲಿ ಹೋದರೂ ಒಂದೇ' ಎಂದರೆ, ಸತ್ಯಕ್ಕೆ ಅಪಚಾರ, ಮಹಾಪಾಪ. ರಾಮ ವನವಾಸಕ್ಕೆ ಹೋದರೂ ಸರಿಯೆ ಎಂದು ಅನುಮತಿ ನೀಡುವುದು ಮಹಾಪಾಪ.

ವಿಹೀನಾಂ ಪತಿಪುತ್ರಾಭ್ಯಾಂ ಕೌಸಲ್ಯಾಂ ಪಾರ್ಥಿವಾತ್ಮಜಃ ।
ಏವಮಾಶ್ವಾಸಯನ್ನೇವ ದುಃಖಾರ್ತೋ೯ ನಿಪಪಾತ ಹ ॥೫೯॥

ಪತಿ ಪುತ್ರರಿಬ್ಬರನ್ನೂ ಅಗಲಿದ್ದ ಕೌಸಲ್ಯೆಯನ್ನು ಭರತನು ಸಂತೈಸುತ್ತಲೇ ತಾನು ದುಃಖವನ್ನು ತಡೆಯಲಾರದೆ ಬಿದ್ದುಬಿಟ್ಟ.

ತಥಾ ತು ಶಪಥೈಃ ಕಷ್ಟೈಃ ಶಪಮಾನಮಚೇತಸಮ್ ।
ಭರತಂ ಶೋಕಸಂತಪ್ತಂ ಕೌಸಲ್ಯಾ ವಾಕ್ಯಮಬ್ರವೀತ್ ॥೬೦॥

ಹೀಗೆ ಕಷ್ಟಕರವಾದ ಪ್ರಮಾಣಗಳನ್ನು ಮಾಡುತ್ತ ಶೋಕದಿಂದ ಬೆಂದು ಕಂಗಾಲಾಗಿ ಬಿದ್ದ ಭರತನಿಗೆ ಕೌಸಲ್ಯೆ ನುಡಿದಳು.

ಮಮ ದುಃಖಮಿದಂ ಪುತ್ರ ಭೂಯಃ ಸಮುಪಜಾಯತೇ ।
ಶಪಥೈಃ ಶಪಮಾನೋ ಹಿ ಪ್ರಾಣಾನುಪರುಣತ್ಸಿ ಮೇ ॥೬೧॥

ಮಗು, ನೀನೂ ಶೋಕಿಸಿದರೆ ನನ್ನ ಈ ದುಃಖ ಇನ್ನಷ್ಟು ಹೆಚ್ಚುತ್ತದೆ. ಪ್ರಮಾಣ–ಗಳ ಮೇಲೆ ಪ್ರಮಾಣ ಮಾಡುತ್ತ ನೀನು ನನ್ನ ಪ್ರಾಣಗಳನ್ನೇ ಹಿಂಡುವಿ.

ದಿಷ್ಟ್ಯಾ ನ ಚಲಿತೋ ಧರ್ಮಾದಾತ್ಮಾ ತೇ ಶುಭಲಕ್ಷಣ ।
ವತ್ಸ ಸತ್ಯಪ್ರತಿಜ್ಞೋಽಸಿ ಸತಾಂ ಲೋಕಾನವಾಪ್ಸ್ಯಸಿ ॥೬೨॥

ಸಂತೋಷ. ಮಗು, ನಿನ್ನ ಅಂತಃಕರಣ ಧರ್ಮಮಾರ್ಗದಿಂದ ವಿಚಲಿತವಾಗಿಲ್ಲ. ಶುಭಲಕ್ಷಣನೆ, ನೀನು ಸತ್ಯವಾದ ಶಪಥಗಳನ್ನೇ ಮಾಡಿರುವೆ. ಸಜ್ಜನರ ಲೋಕಗಳನ್ನೇ ನೀನು ಪಡೆಯುವೆ.

ಇತ್ಯುಕ್ತ್ವಾ ಚಾಂಕಮಾನೀಯ ಭರತಂ ಭ್ರಾತೃವತ್ಸಲಮ್ ।
ಪರಿಷ್ವಜ್ಯ ಮಹಾಬಾಹುಂ ರುರೋದ ಭೃಶದುಃಖಿತಾ ॥೬೩॥

ಹೀಗೆ ಹೇಳಿ ಕೌಸಲ್ಯೆ ಸೋದರ ಪ್ರೇಮಿಯಾದ ಮಹಾಬಾಹು ಭರತನನ್ನು ತೊಡೆಯಮೇಲೆ ಕುಳ್ಳಿರಿಸಿಕೊಂಡು ಆಲಿಂಗಿಸಿ ಬಲು ದುಃಖದಿಂದ ಕಣ್ಣೀರು ಸುರಿಸಿದಳು.

ಏವಂ ವಿಲಪಮಾನಸ್ಯ ದುಃಖಾರ್ತಸ್ಯ ಮಹಾತ್ಮನಃ ।
ಮೋಹಾಚ್ಚ ಶೋಕಸಂರೋಧಾದ್ಬಭೂವ ಲುಲಿತಂ ಮನಃ ॥೬೪॥

ಹೀಗೇ ದುಃಖಾರ್ತನಾಗಿ ವಿಲಾಪಗೈವ ಮಹಾತ್ಮನಾದ ಭರತನ ಮನಸ್ಸು ಕೂಡ ಕಳವಳದಿಂದಲೂ ಶೋಕದ ಒತ್ತಡದಿಂದಲೂ ಅಲ್ಲಾಡಿತು.

ಲಾಲಪ್ಯಮಾನಸ್ಯ ವಿಚೇತನಸ್ಯ
ಪ್ರನಷ್ಟಬುದ್ಧೇಃ ಪತಿತಸ್ಯ ಭೂಮೌ ।
ಮುಹುರ್ಮುಹುರ್ನಿಃಶ್ವಸತಶ್ಚ ದೀರ್ಘಂ
ಸಾ ತಸ್ಯ ಶೋಕೇನ ಜಗಾಮ ರಾತ್ರಿಃ ॥೬೫॥

ಭರತನು ಮತ್ತೂ ಮತ್ತೂ ವಿಲಾಪಮಾಡುತ್ತ ಕಂಗಾಲಾಗಿ ದಿಙ್ಮೂಢನಾಗಿ ನೆಲದಲ್ಲಿ ಬಿದ್ದು ಮತ್ತೂ ಮತ್ತೂ ದೀರ್ಘವಾಗಿ ನಿಟ್ಟುಸಿರಿಡುತ್ತಿದ್ದಂತೆಯೇ ಆ ರಾತ್ರಿ ಶೋಕದಿಂದಲೆ ಕಳೆಯಿತು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಎಪ್ಪತ್ತೈದನೇ ಸರ್ಗ ಮುಗಿಯಿತು.

❖

ಷಟ್‌ಸಪ್ತತಿತಮಃ ಸರ್ಗಃ

ಸರ್ಗ – 76

ದಶರಥನ ಉತ್ತರಕ್ರಿಯೆ

ತಮೇವಂ ಶೋಕಸಂತಪ್ತಂ ಭರತಂ ಕೈಕಯೀಸುತಮ್ ।
ಉವಾಚ ವದತಾಂ ಶ್ರೇಷ್ಠೋ ವಸಿಷ್ಠಃ ಶ್ರೇಷ್ಠವಾಗೃಷಿಃ ॥೧॥

ಕೈಕೇಯಿ ಸುತನಾದ ಭರತ ಶೋಕಸಂತಾಪಗೊಂಡಿರುವಾಗ ವಾಗ್ಮಿಗಳಲ್ಲಿ ಶ್ರೇಷ್ಠ-ರಾದ ವಸಿಷ್ಠಮುನಿ ಉತ್ತಮವಾದ ಮಾತನ್ನು ಹೇಳುತ್ತ ಭರತನಿಗೆ ನುಡಿದರು.

ಅಲಂ ಶೋಕೇನ ಭದ್ರಂ ತೇ ರಾಜಪುತ್ರ ಮಹಾಯಶಃ ।
ಪ್ರಾಪ್ತಕಾಲಂ ನರಪತೇಃ ಕುರು ಸಂಯಾನಮುತ್ತಮಮ್ ॥೨॥

ಮಹಾಯಶಸ್ವಿಯಾದ ರಾಜಕುಮಾರ ಭರತನೆ, ನಿನಗೆ ಶುಭವಾಗಲಿ. ಶೋಕ-ವನ್ನು ತಡೆದುಕೊಳ್ಳು. ರಾಜನಿಗೆ ಉತ್ತಮವಾದ ಅಂತ್ಯಸಂಸ್ಕಾರ ಮಾಡು, ಅದಕ್ಕೆ ಯೋಗ್ಯವಾದ ಕಾಲ ಬಂದಿದೆ.

ವಸಿಷ್ಠಸ್ಯ ವಚ ಶ್ರುತ್ವಾ ಭರತೋ ಧಾರಣಾಂ ಗತಃ ।
ಪ್ರೇತಕಾರ್ಯಾಣಿ ಸರ್ವಾಣಿ ಕಾರಯಾಮಾಸ ಧರ್ಮವಿತ್ ॥೩॥

ವಸಿಷ್ಠರ ಮಾತನ್ನು ಕೇಳಿ ಧರ್ಮಜ್ಞನಾದ ಭರತನು ಮನಸಿಗೆ ಧೈರ್ಯ-ತಂದುಕೊಂಡು ರಾಜನಿಗೆ ಎಲ್ಲ ಅಪರಕರ್ಮಗಳನ್ನು ನಡೆಸಿದ.

ಉದ್ಧೃತಂ ತೈಲಸಂಕ್ಲೇದಾತ್ ಸ ತು ಭೂಮೌ ನಿವೇಶಿತಮ್ ।
ಅಪೀತವರ್ಣವದನಂ ಪ್ರಸುಪ್ತಮಿವ ಭೂಪತಿಮ್ ॥೪॥

ಸಂವೇಶ್ಯ ಶಯನೇ ಚಾಗ್ರ್ಯೇ ನಾನಾರತ್ನಪರಿಷ್ಕೃತೇ ।
ತತೋ ದಶರಥಂ ಪುತ್ರೋ ವಿಲಲಾಪ ಸುದುಃಖಿತಃ ॥೫॥

ಎಣ್ಣೆಕೊಪ್ಪರಿಗೆಯಿಂದ ಎತ್ತಿ ನೆಲದ ಮೇಲಿರಿಸಿದಾಗ ದಶರಥನ ಪಾರ್ಥಿವ-ಶರೀರದಲ್ಲಿ ಮುಖದಬಣ್ಣ ಸ್ವಲ್ಪ ಹಳದಿಯಾಗಿತ್ತು. ಆಗಲೂ ಸುಖನಿದ್ದೆಯಲ್ಲಿ ಇದ್ದಂತೇ ಇದ್ದ ರಾಜನ ಮೈಒರೆಸಿ ನಾನಾ ರತ್ನಗಳಿಂದ ಅಲಂಕೃತವಾದ

ಉತ್ತಮವಾದ ಹಾಸಿಗೆ ಮೇಲೆ ಮಲಗಿಸಿ ಪುತ್ರನಾದ ಭರತ ಬಲುದುಃಖಿತನಾಗಿ ವಿಲಾಪ ಮಾಡಿದ.

ಕಿಂ ತೇ ವ್ಯವಸಿತಂ ರಾಜನ್ ಪ್ರೋಷಿತೇ ಮಯ್ಯನಾಗತೇ ।
ವಿವಾಸ್ಯ ರಾಮಂ ಧರ್ಮಜ್ಞಲಕ್ಷ್ಮಣಂ ಚ ಮಹಾಬಲಮ್ ॥೬॥

ಇದೇನು ಮಾಡಿಬಿಟ್ಟೆ ರಾಜನೆ, ನಾನು ದೂರದೇಶದಲ್ಲಿದ್ದಾಗ, ಇನ್ನೂ ಬಾರದಿದ್ದಾಗ ಧರ್ಮಜ್ಞನಾದ ಮಹಾಬಲನಾದ ರಾಮನನ್ನೂ ಲಕ್ಷ್ಮಣನನ್ನೂ ಕಾಡಿಗೆ ಕಳಿಸಿ ಏನು ಮಾಡಿದೆ?

ಕ್ವ ಯಾಸ್ಯಸಿ ಮಹಾರಾಜ ಹಿತ್ವೇಮಂ ದುಃಖಿತಂ ಜನಮ್ ।
ಹೀನಂ ಪುರುಷಸಿಂಹೇನ ರಾಮೇಣಾಕ್ಲಿಷ್ಟಕರ್ಮಣಾ ॥೭॥

ಮಹಾರಾಜ, ಕ್ಲೇಶವಿಲ್ಲದೆ ಎಲ್ಲ ಕಾರ್ಯಗಳನ್ನೂ ನಿರ್ವಹಿಸುವ ಪುರುಷೋತ್ತಮನಾದ ರಾಮನಿಲ್ಲದೆ ದುಃಖಿತರಾದ ಈ ಬಂಧುಗಳನ್ನು ಬಿಟ್ಟು ನೀನು ಎಲ್ಲಿಗೆ ಹೋಗುವೆ.

ಯೋಗಕ್ಷೇಮಂ ತು ತೇ ರಾಜನ್ ಕೋಽಸ್ಮಿನ್ ಕಲ್ಪಯಿತಾ ಪುರೇ ।
ತ್ವಯಿ ಪ್ರಯಾತೇ ಸ್ವಸ್ತಾತ ರಾಮೇ ಚ ವನಮಾಶ್ರಿತೇ ॥೮॥

ಅಪ್ಪ, ನೀನೂ ಸ್ವರ್ಗಕ್ಕೆ ಹೊರಟುಹೋದರೆ, ರಾಮನೂ ಕಾಡಿಗೆ ಹೋದರೆ ಇಲ್ಲಿ ನಿನ್ನ ಈ ಅಯೋಧ್ಯೆಯ ಯೋಗಕ್ಷೇಮವನ್ನು ನೋಡಿಕೊಳ್ಳಬಲ್ಲವನು ಯಾರು?

ವಿಧವಾ ಪೃಥಿವೀ ರಾಜಂಸ್ತ್ವಯಾ ಹೀನಾ ನ ರಾಜತೇ ।
ಹೀನಚಂದ್ರೇವ ರಜನೀ ನಗರೀ ಪ್ರತಿಭಾತಿ ಮಾಮ್ ॥೯॥

ರಾಜನೆ, ನೀನಿಲ್ಲದೆ ಈ ಭೂದೇವಿ, ಈ ಅಯೋಧ್ಯಾನಗರಿ, ಏನೂ ಶೋಭಿಸುವುದಿಲ್ಲ. ಚಂದ್ರನಿಲ್ಲದ ನಿಶಾರಮಣಿಯಂತೇ ನನಗೆ ಕಾಣುತ್ತಿದೆ.

ಏವಂ ವಿಲಪಮಾನಂ ತಂ ಭರತಂ ದೀನಮಾನಸಮ್ ।
ಅಬ್ರವೀದ್ವಚನಂ ಭೂಯೋ ವಸಿಷ್ಠಸ್ತು ಮಹಾಮುನಿಃ ॥೧೦॥

ಹೀಗೆ ದೀನ ಮನಸಿನಿಂದ ವಿಲಾಪ ಮಾಡುತ್ತಿದ್ದ ಭರತನಿಗೆ ವಸಿಷ್ಠ ಮಹಾಮುನಿ ಪುನಃ ಹೇಳಿದರು.

ಪ್ರೇತಕಾರ್ಯಾಣಿ ಯಾನ್ಯಸ್ಯ ಕರ್ತವ್ಯಾನಿ ವಿಶಾಂಪತೇಃ ।
ತಾನ್ಯವ್ಯಗ್ರಂ ಮಹಾಬಾಹೋ ಕ್ರಿಯಂತಾಮವಿಚಾರಿತಮ್ ॥೧೧॥

'ಮಹಾಬಾಹು! ರಾಜನಿಗೆ ಏನು ಅಂತ್ಯಕರ್ಮಗಳನ್ನು ಈಗ ಮಾಡಬೇಕಿದೆಯೊ ಅವುಗಳನ್ನು ಬೇರೆ ಯೋಚನೆಬಿಟ್ಟು ಒಮ್ಮನಸಿನಿಂದ ಮಾಡು'.

ತಥೇತಿ ಭರತೋ ವಾಕ್ಯಂ ವಸಿಷ್ಠಸ್ಯಾಭಿಪೂಜ್ಯ ತತ್ ।
ಋತ್ವಿಕ್‌ಪುರೋಹಿತಾಚಾರ್ಯಾಂಸ್ತ್ವರಯಾಮಾಸ ಸರ್ವಶಃ ॥೧೨॥

ಹಾಗೇ ಆಗಲೆಂದು ಭರತನು ವಸಿಷ್ಠರ ಮಾತನ್ನು ಗೌರವಿಸಿ ಋತ್ವಿಕ್ ಪುರೋಹಿತ ಆಚಾರ್ಯರುಗಳನ್ನು ಎಲ್ಲರನ್ನೂ ಕರ್ತವ್ಯಕರ್ಮಗಳಲ್ಲಿ ತ್ವರೆ ಪಡಿಸಿದ.

'ಪುರೋಹಿತೋ ಹಿತೋ ವೇದಸ್ಮೃತಿಜ್ಞಃ ಸತ್ಯವಾಕ್ ಶುಚಿಃ ।
ಬ್ರಹ್ಮಣ್ಯೋ ವಿಮಲಾಚಾರಃ ಪ್ರತಿಕರ್ತಾऽऽಪದಾಂ ಋಜುಃ ॥'

'ಪ್ರಜೆಗಳಿಗೆ ಹಿತೈಷಿ, ಶ್ರುತಿ ಸ್ಮೃತಿಗಳನ್ನು ಬಲ್ಲವನು, ಸತ್ಯ ನುಡಿವವನು, ಶರೀರ ಮನಸುಗಳಲ್ಲಿ ಕೈಬಾಯಿ ಕಚ್ಚೆಗಳಲ್ಲಿ ಶುಚಿಯಾಗಿರುವವನು, ಬ್ರಾಹ್ಮಣ ಧರ್ಮವನ್ನು ಕಾಪಾಡುವವನು, ನಿರ್ಮಲ ಆಚಾರ ಉಳ್ಳವನು, ದೇಶಕ್ಕೆ ಒದಗಿ-ಬರಬಹುದಾದ ಯಾವುದೇ ಆಪತ್ತಿಗೆ ಮಂತ್ರಬಲದಿಂದ ಮತ್ತು ರಾಜನಿಗೆ ನೀಡುವ ರಾಜನೀತಿ ಸಲಹೆಗಳಿಂದ ಪರಿಹಾರ ಮಾಡಬಲ್ಲವನು, ಮನಸು ಮಾತು ಕೃತಿಗಳಲ್ಲಿ ಕಪಟವಿಲ್ಲದವನು—ಈ ಎಂಟು ಗುಣ ಉಳ್ಳವನೇ ರಾಜ- ಪುರೋಹಿತ' ಎಂದು ಕವಿಕಲ್ಪಲತಾ ಕಾರ ಹೇಳುತ್ತಾನೆ. ಅಗ್ನಿಪುರಾಣದಲ್ಲಿಯೂ,

'ತ್ರಯ್ಯಾಂ ಚ ದಂಡನೀತ್ಯಾಂ ಚ ಕುಶಲಃ ಸ್ಯಾತ್ ಪುರೋಹಿತಃ ।'

'ವೇದವಿದ್ಯೆಯಲ್ಲಿಯೂ ರಾಜಕಾರಣದಲ್ಲಿಯೂ ರಾಜಪುರೋಹಿತನು ನಿಪುಣನಾಗಿರಬೇಕೆಂ'ದು ಹೇಳಿದೆ. ಇಂಥ ರಾಜಪುರೋಹಿತರು ವಸಿಷ್ಠರು. ಅವರೇ ಇಕ್ಷ್ವಾಕು ಕುಲದ ರಾಜರೆಲ್ಲರಿಗೂ ರಾಜಪುರೋಹಿತರು. ಅವರ ಮಾತು ರಾಜರಿಗೆ ಶಿರಸಾಧಾರ್ಯವಾದ್ದರಿಂದ ಭರತ ಅವರ ಮಾತಿನಂತೆ ಬೇಗನೆ ರಾಜನ ಅಪರಕರ್ಮ ನಡೆಸಲು ತೊಡಗುತ್ತಾನೆ.

ಯೇ ತ್ವಗ್ನಯೋ ನರೇಂದ್ರಸ್ಯ ಆಗ್ನ್ಯಾಗಾರಾದ್ಬಹಿಷ್ಕೃತಾಃ ।
ಋತ್ವಿಗ್ಭಿರ್ಯಾಜಕೈಶ್ಚೈವ ತೇऽಹೂಯಂತ ಯಥಾವಿಧಿ ॥೧೩॥

ಉತ್ತಮವಾದ ಹಾಸಿಗೆ ಮೇಲೆ ಮಲಗಿಸಿ ಪುತ್ರನಾದ ಭರತ ಬಲುದುಃಖಿತನಾಗಿ ವಿಲಾಪ ಮಾಡಿದ.

ಕಿಂ ತೇ ವ್ಯವಸಿತಂ ರಾಜನ್ ಪ್ರೋಷಿತೇ ಮಯ್ಯನಾಗತೇ ।
ವಿವಾಸ್ಯ ರಾಮಂ ಧರ್ಮಜ್ಞಲಕ್ಷ್ಮಣಂ ಚ ಮಹಾಬಲಮ್ ॥೬॥

ಇದೇನು ಮಾಡಿಬಿಟ್ಟೆ ರಾಜನೆ, ನಾನು ದೂರದೇಶದಲ್ಲಿದ್ದಾಗ, ಇನ್ನೂ ಬಾರದಿದ್ದಾಗ ಧರ್ಮಜ್ಞನಾದ ಮಹಾಬಲನಾದ ರಾಮನನ್ನೂ ಲಕ್ಷ್ಮಣನನ್ನೂ ಕಾಡಿಗೆ ಕಳಿಸಿ ಏನು ಮಾಡಿದೆ?

ಕ್ವ ಯಾಸ್ಯಸಿ ಮಹಾರಾಜ ಹಿತ್ವೇಮಂ ದುಃಖಿತಂ ಜನಮ್ ।
ಹೀನಂ ಪುರುಷಸಿಂಹೇನ ರಾಮೇಣಾಕ್ಲಿಷ್ಟಕರ್ಮಣಾ ॥೭॥

ಮಹಾರಾಜ, ಕ್ಲೇಶವಿಲ್ಲದೆ ಎಲ್ಲ ಕಾರ್ಯಗಳನ್ನೂ ನಿರ್ವಹಿಸುವ ಪುರುಷೋತ್ತಮನಾದ ರಾಮನಿಲ್ಲದೆ ದುಃಖಿತರಾದ ಈ ಬಂಧುಗಳನ್ನು ಬಿಟ್ಟು ನೀನು ಎಲ್ಲಿಗೆ ಹೋಗುವೆ.

ಯೋಗಕ್ಷೇಮಂ ತು ತೇ ರಾಜನ್ ಕೋऽಸ್ಮಿನ್ ಕಲ್ಪಯಿತಾ ಪುರೇ ।
ತ್ವಯಿ ಪ್ರಯಾತೇ ಸ್ವಸ್ತಾತ ರಾಮೇ ಚ ವನಮಾಶ್ರಿತೇ ॥೮॥

ಅಪ್ಪ, ನೀನೂ ಸ್ವರ್ಗಕ್ಕೆ ಹೊರಟುಹೋದರೆ, ರಾಮನೂ ಕಾಡಿಗೆ ಹೋದರೆ ಇಲ್ಲಿ ನಿನ್ನ ಈ ಅಯೋಧ್ಯೆಯ ಯೋಗಕ್ಷೇಮವನ್ನು ನೋಡಿಕೊಳ್ಳಬಲ್ಲವನು ಯಾರು?

ವಿಧವಾ ಪೃಥಿವೀ ರಾಜಂಸ್ತ್ವಯಾ ಹೀನಾ ನ ರಾಜತೇ ।
ಹೀನಚಂದ್ರೇವ ರಜನೀ ನಗರೀ ಪ್ರತಿಭಾತಿ ಮಾಮ್ ॥೯॥

ರಾಜನೆ, ನೀನಿಲ್ಲದೆ ಈ ಭೂದೇವಿ, ಈ ಅಯೋಧ್ಯಾನಗರಿ, ಏನೂ ಶೋಭಿಸುವುದಿಲ್ಲ. ಚಂದ್ರನಿಲ್ಲದ ನಿಶಾರಮಣಿಯಂತೇ ನನಗೆ ಕಾಣುತ್ತಿದೆ.

ಏವಂ ವಿಲಪಮಾನಂ ತಂ ಭರತಂ ದೀನಮಾನಸಮ್ ।
ಅಬ್ರವೀದ್ವಚನಂ ಭೂಯೋ ವಸಿಷ್ಠಸ್ತು ಮಹಾಮುನಿಃ ॥೧೦॥

ಹೀಗೆ ದೀನ ಮನಸಿನಿಂದ ವಿಲಾಪ ಮಾಡುತ್ತಿದ್ದ ಭರತನಿಗೆ ವಸಿಷ್ಠ ಮಹಾಮುನಿ ಪುನಃ ಹೇಳಿದರು.

ಪ್ರೇತಕಾರ್ಯಾಣಿ ಯಾನ್ಯಸ್ಯ ಕರ್ತವ್ಯಾನಿ ವಿಶಾಂಪತೇಃ ।
ತಾನ್ಯವ್ಯಗ್ರಂ ಮಹಾಬಾಹೋ ಕ್ರಿಯಂತಾಮವಿಚಾರಿತಮ್ ॥೧೧॥

'ಮಹಾಬಾಹು! ರಾಜನಿಗೆ ಏನು ಅಂತ್ಯಕರ್ಮಗಳನ್ನು ಈಗ ಮಾಡಬೇಕಿದೆಯೊ ಅವುಗಳನ್ನು ಬೇರೆ ಯೋಚನೆಬಿಟ್ಟು ಒಮ್ಮನಸಿನಿಂದ ಮಾಡು'.

ತಥೇತಿ ಭರತೋ ವಾಕ್ಯಂ ವಸಿಷ್ಠಸ್ಯಾಭಿಪೂಜ್ಯ ತತ್ ।
ಋತ್ವಿಕ್‌ಪುರೋಹಿತಾಚಾರ್ಯಾಂಸ್ತ್ವರಯಾಮಾಸ ಸರ್ವಶಃ ॥೧೨॥

ಹಾಗೇ ಆಗಲೆಂದು ಭರತನು ವಸಿಷ್ಠರ ಮಾತನ್ನು ಗೌರವಿಸಿ ಋತ್ವಿಕ್ ಪುರೋಹಿತ ಆಚಾರ್ಯರುಗಳನ್ನು ಎಲ್ಲರನ್ನೂ ಕರ್ತವ್ಯಕರ್ಮಗಳಲ್ಲಿ ತ್ವರೆ ಪಡಿಸಿದ.

'ಪುರೋಹಿತೋ ಹಿತೋ ವೇದಸ್ಮೃತಿಜ್ಞಃ ಸತ್ಯವಾಕ್ ಶುಚಿಃ ।
ಬ್ರಹ್ಮಣ್ಯೋ ವಿಮಲಾಚಾರಃ ಪ್ರತಿಕರ್ತಾऽऽಪದಾಂ ಋಜುಃ ॥'

'ಪ್ರಜೆಗಳಿಗೆ ಹಿತೈಷಿ, ಶ್ರುತಿ ಸ್ಮೃತಿಗಳನ್ನು ಬಲ್ಲವನು, ಸತ್ಯ ನುಡಿವವನು, ಶರೀರ ಮನಸುಗಳಲ್ಲಿ ಕೈಬಾಯಿ ಕಚ್ಚೆಗಳಲ್ಲಿ ಶುಚಿಯಾಗಿರುವವನು, ಬ್ರಾಹ್ಮಣ ಧರ್ಮವನ್ನು ಕಾಪಾಡುವವನು, ನಿರ್ಮಲ ಆಚಾರ ಉಳ್ಳವನು, ದೇಶಕ್ಕೆ ಒದಗಿ-ಬರಬಹುದಾದ ಯಾವುದೇ ಆಪತ್ತಿಗೆ ಮಂತ್ರಬಲದಿಂದ ಮತ್ತು ರಾಜನಿಗೆ ನೀಡುವ ರಾಜನೀತಿ ಸಲಹೆಗಳಿಂದ ಪರಿಹಾರ ಮಾಡಬಲ್ಲವನು, ಮನಸು ಮಾತು ಕೃತಿಗಳಲ್ಲಿ ಕಪಟವಿಲ್ಲದವನು—ಈ ಎಂಟು ಗುಣ ಉಳ್ಳವನೇ ರಾಜ- ಪುರೋಹಿತ' ಎಂದು ಕವಿಕಲ್ಪಲತಾ ಕಾರ ಹೇಳುತ್ತಾನೆ. ಅಗ್ನಿಪುರಾಣದಲ್ಲಿಯೂ,

'ತ್ರಯ್ಯಾಂ ಚ ದಂಡನೀತ್ಯಾಂ ಚ ಕುಶಲಃ ಸ್ಯಾತ್ ಪುರೋಹಿತಃ ।'

'ವೇದವಿದ್ಯೆಯಲ್ಲಿಯೂ ರಾಜಕಾರಣದಲ್ಲಿಯೂ ರಾಜಪುರೋಹಿತನು ನಿಪುಣನಾಗಿರಬೇಕೆಂ'ದು ಹೇಳಿದೆ. ಇಂಥ ರಾಜಪುರೋಹಿತರು ವಸಿಷ್ಠರು. ಅವರೇ ಇಕ್ಷ್ವಾಕು ಕುಲದ ರಾಜರೆಲ್ಲರಿಗೂ ರಾಜಪುರೋಹಿತರು. ಅವರ ಮಾತು ರಾಜರಿಗೆ ಶಿರಸಾಧಾರ್ಯವಾದ್ದರಿಂದ ಭರತ ಅವರ ಮಾತಿನಂತೆ ಬೇಗನೆ ರಾಜನ ಅಪರಕರ್ಮ ನಡೆಸಲು ತೊಡಗುತ್ತಾನೆ.

ಯೇ ತ್ವಗ್ನಯೋ ನರೇಂದ್ರಸ್ಯ ಅಗ್ನ್ಯಾಗಾರಾದ್ಬಹಿಷ್ಕೃತಾಃ ।
ಋತ್ವಿಗ್ಭಿರ್ಯಾಜಕೈಶ್ಚೈವ ತೇऽಹೂಯಂತ ಯಥಾವಿಧಿ ॥೧೩॥

ಅಗ್ನಿಶಾಲೆಯಲ್ಲಿ ಶವವನ್ನಿರಿಸಿದ್ದರಿಂದ ರಾಜನ ಗಾರ್ಹಪತ್ಯಾದಿ ಶ್ರೌತಾಗ್ನಿಗಳನ್ನು ಅಲ್ಲಿಂದ ಋತ್ವಿಜರು ಹೊರಗೆ ತಂದು ಪ್ರತಿಷ್ಠೆ ಮಾಡಿದ್ದರು. ಆ ಅಗ್ನಿಗಳಲ್ಲಿ ಋತ್ವಿಜರು ದರ್ಶಯಾಗವನ್ನು ವಿಧ್ಯುಕ್ತವಾಗಿ ನೆರವೇರಿಸಿದರು.

ಶಿಬಿಕಾಯಾಮಥಾರೋಪ್ಯ ರಾಜಾನಂ ಗತಚೇತಸಮ್ ।
ಬಾಷ್ಪಕಂಠಾ ವಿಮನಸಸ್ತಮೂಹುಃ ಪರಿಚಾರಕಾಃ ॥೧೪॥

ಬಳಿಕ ರಾಜನ ಪಾರ್ಥಿವ ಶರೀರವನ್ನು ಪಲ್ಲಕ್ಕಿ ವಾಹನದಲ್ಲಿರಿಸಿ ಬಾಷ್ಪದಿಂದ ಗದ್ಗದಕಂಠರಾದ ಪರಿಚಾರಕರು ದುಃಖತುಂಬಿದ ಮನಸಿನಿಂದ ಅದನ್ನು ಹೊತ್ತರು.

ಹಿರಣ್ಯಂ ಚ ಸುವರ್ಣಂ ಚ ವಾಸಾಂಸಿ ವಿವಿಧಾನಿ ಚ ।
ಪ್ರಕಿರಂತೋ ಜನಾ ಮಾರ್ಗೇ ನೃಪತೇರಗ್ರತೋ ಯಯುಃ ॥೧೫॥

ಜನರು ದಾರಿಯುದ್ದಕ್ಕೂ ಬೆಳ್ಳಿಬಂಗಾರಗಳ ಹೂಗಳನ್ನೂ ನಾನಾ ಬಗೆಯ ಬಟ್ಟೆಗಳನ್ನೂ ಚೆಲ್ಲುತ್ತ ರಾಜನ ವಾಹನದ ಮುಂಭಾಗದಲ್ಲಿ ನಡೆದರು.

ಚಂದನಾಗರುನಿರ್ಯಾಸಾನ್ ಸರಲಂ ಪದ್ಮಕಂ ತಥಾ ।
ದೇವದಾರೂಣಿ ಚಾಹೃತ್ಯ ಚಿತಾಂ ಚಕ್ರುಸ್ತಥಾಪರೇ ॥೧೬॥

ಕೆಲವರು ಚಂದನ ಅಗುರು ಗುಗ್ಗುಲ ಪದ್ಮಕ ಸರಲ ದೇವದಾರು ಮುಂತಾದ ಸುಗಂಧದ ಕಟ್ಟಿಗೆಗಳನ್ನು ತಂದು ಚಿತೆಯನ್ನು ಸಿದ್ಧಗೊಳಿಸಿದರು.

ಗಂಧಾನುಚ್ಚಾವಚಾಂಶ್ಚಾನ್ಯಾಂಸ್ತತ್ರ ದತ್ತ್ವಾ ಥ ಭೂಮಿಪಮ್ ।
ತತಃ ಸಂವೇಶಯಾಮಾಸುಶ್ಚಿತಾಮಧ್ಯೇ ತಮೃತ್ವಿಜಃ ॥೧೭॥

ಬಳಿಕ ಋತ್ವಿಜರು ಆ ಚಿತೆಯ ಮೇಲೆ ನಾನಾಬಗೆಯ ಸುಗಂಧದ್ರವ್ಯಗಳನ್ನು ಅರ್ಪಿಸಿ ಅದರ ಮಧ್ಯದಲ್ಲಿ ರಾಜನ ಶರೀರವನ್ನು ಮಲಗಿಸಿದರು.

ತಥಾ ಹುತಾಶನಂ ದತ್ತ್ವಾ ಜೇಪುಸ್ತಸ್ಯ ತದೃತ್ವಿಜಃ ।
ಜಗುಶ್ಚ ತೇ ಯಥಾಶಾಸ್ತ್ರಂ ತತ್ರ ಸಾಮಾನಿ ಸಾಮಗಾಃ ॥೧೮॥

ಭರತನಿಂದ ಚಿತೆಗೆ ಶ್ರೌತಾಗ್ನಿಯನ್ನು ಇಡಿಸಿ ಋತ್ವಿಜರು ಪಿತೃಯಜ್ಞ ಸಂಬಂಧಿ ಮಂತ್ರಗಳನ್ನು ಜಪಿಸಿದರು. ಶಾಸ್ತ್ರಾನುಸಾರವಾಗಿ ಸಾಮಗ ಋತ್ವಿಜರು ಸಾಮಗಳನ್ನು ಹಾಡಿದರು.

ಶಿಬಿಕಾಭಿಶ್ಚ ಯಾನೈಶ್ಚ ಯಥಾರ್ಹಂ ತಸ್ಯ ಯೋಷಿತಃ ।
ನಗರಾನ್ನಿರ್ಯಯುಸ್ತತ್ರ ವೃದ್ಧೈಃ ಪರಿವೃತಾಸ್ತದಾ ॥೧೯॥

ಮೇನೆಗಳಿಂದ ಬೇರೆ ವಾಹನಗಳಿಂದ ಯಥಾಯೋಗ್ಯವಾಗಿ ದಶರಥನ ರಾಣಿಯರು ವೃದ್ಧರಿಂದ ಪರಿವೃತರಾಗಿ ನಗರದಿಂದ ಹೊರಟು ಬಂದರು.

ಪ್ರಸವ್ಯಂ ಚಾಪಿ ತಂ ಚಕ್ರುಃ ಋತ್ವಿಜೋऽಗ್ನಿಚಿತಂ ನೃಪಮ್ ।
ಸ್ತ್ರಿಯಶ್ಚ ಶೋಕಸಂತಪ್ತಾಃ ಕೌಸಲ್ಯಾಪ್ರಮುಖಾಸ್ತದಾ ॥೨೦॥

ಅಶ್ವಮೇಧಾದಿ ಮಹಾಯಜ್ಞಗಳನ್ನು ಮಾಡುತ್ತಿದ್ದ ರಾಜನಿಗೆ ಋತ್ವಿಜರೂ ಕೌಸಲ್ಯೆ ಮುಂತಾದ ರಾಣಿಯರೂ ಶೋಕದಿಂದ ಬೇಯುತ್ತ ಪ್ರದಕ್ಷಿಣೆ ಮಾಡಿದರು.

ಕ್ರೌಂಚೀನಾಮಿವ ನಾರೀಣಾಂ ನಿನಾದಸ್ತತ್ರ ಶುಶ್ರುವೇ ।
ಆರ್ತಾನಾಂ ಕರುಣಂ ಕಾಲೇ ಕ್ರೋಶಂತೀನಾಂ ಸಹಸ್ರಶಃ ॥೨೧॥

ಸಾವಿರಾರು ಸ್ತ್ರೀಯರು ದುಃಖದಿಂದ ಆಗ ಮಾಡಿದ ರೋದನ ಧ್ವನಿಯು ಹೆಣ್ಣು ಕ್ರೌಂಚಪಕ್ಷಿಗಳ ಕೂಗಿನಂತೇ ಕೇಳಿ ಬಂದಿತು.

ತತೋ ರುದಂತ್ಯೋ ವಿವಶಾ ವಿಲಪ್ಯ ಚ ಪುನಃ ಪುನಃ ।
ಯಾನೇಭ್ಯಃ ಸರಯೂತೀರಮವತೇರುರ್ವರಾಂಗನಾಃ ॥೨೨॥

ಬಳಿಕ ದುಃಖಪರವಶರಾಗಿ ಕಣ್ಣೀರು ಸುರಿಸುತ್ತ ಪುನಃಪುನಃ ಅಳುತ್ತ ರಾಣಿಯರು ವಾಹನಗಳಿಂದ ಸರಯೂ ನದೀತೀರಕ್ಕೆ ಬಂದಿಳಿದರು.

ಕೃತ್ವೋದಕಂ ತೇ ಭರತೇನ ಸಾರ್ಧಂ
ನೃಪಾಂಗನಾ ಮಂತ್ರಿಪುರೋಹಿತಾಶ್ಚ ।
ಪುರಂ ಪ್ರವಿಶ್ಯಾಶ್ರುಪರೀತನೇತ್ರಾ ಭೂಮೌ
ದಶಾಹಂ ವ್ಯನಯಂತ ದುಃಖಮ್ ॥೨೩॥

ರಾಣಿಯರು ಮಂತ್ರಿ ಪುರೋಹಿತರು ಭರತನೊಂದಿಗೆ ಉದಕಕ್ರಿಯೆ ಮಾಡಿ ಪುರಪ್ರವೇಶ ಮಾಡಿ ದುಃಖದಿಂದ ಕಂಬನಿ ಸುರಿಸುತ್ತ ಭೂಶಯನಾದಿಗಳಿಂದ ಹತ್ತುದಿನಗಳ ಆಶೌಚವನ್ನು ಕಳೆದರು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಎಪ್ಪತ್ತಾರನೇ ಸರ್ಗ ಮುಗಿಯಿತು.

ಸಪ್ತಸಪ್ತತಿತಮಃ ಸರ್ಗಃ

ಸರ್ಗ – 77

ಭರತ ಶತ್ರುಘ್ನರು ತಂದೆಯನ್ನು ನೆನೆದು ದುಃಖಿಸುವುದು.

ತತೋ ದಶಾಹೇऽತಿಗತೇ ಕೃತಶೌಚೋ ನೃಪಾತ್ಮಜಃ ।
ದ್ವಾದಶೇऽಹನಿ ಸಂಪ್ರಾಪ್ತೇ ಶ್ರಾದ್ಧಕರ್ಮಾಣ್ಯಕಾರಯತ್ ॥೧॥

ಹತ್ತುದಿನಗಳ ಆಶೌಚ ಕಳೆದ ಬಳಿಕ ಹನ್ನೊಂದನೆ ದಿನ ಶುದ್ಧಿಮಾಡಿಕೊಂಡು ಹನ್ನೆರಡನೆದಿನ ಬಂದಾಗ ಭರತನು ಶ್ರಾದ್ಧಕರ್ಮಗಳನ್ನು ನಡೆಸಿದನು.

ಯದ್ಯಪಿ ಹನ್ನೆರಡು ದಿನ ಕ್ಷತ್ರಿಯರಿಗೆ ಆಶೌಚವಿರುತ್ತದೆ. ಆದರೆ, 'ಕ್ಷತ್ರಿಯಸ್ತು ದಶಾಹೇನ ಸ್ವಕರ್ಮನಿರತಃ ಶುಚಿಃ' ಎಂದು ಪರಾಶರವಚನದಂತೆ ಸ್ವಕರ್ಮನಿರತನಾದ ಕ್ಷತ್ರಿಯನಿಗೆ ಹತ್ತೇ ದಿನ ಆಶೌಚ.

ಬ್ರಾಹ್ಮಣೇಭ್ಯೋ ದದೌ ರತ್ನಂ ಧನಮನ್ನಂ ಚ ಪುಷ್ಕಲಮ್ ।
ಬಾಸ್ತಿಕಂ ಬಹುಶುಕ್ಲಂ ಚ ಗಾಶ್ಚಾಪಿ ಶತಶಸ್ತದಾ ॥೨॥

ಭರತನು ಬ್ರಾಹ್ಮಣರಿಗೆ ರತ್ನ–ಧನ–ಅನ್ನ–ಆಡು–ಬೆಳ್ಳಿ–ಗೋದಾನಗಳನ್ನು ಪುಷ್ಕಳವಾಗಿ ನೂರಾರು ಸಂಖ್ಯೆಯಲ್ಲಿ ಕೊಟ್ಟನು.

ದಾಸೀದಾಸಂ ಚ ಯಾನಂ ಚ ವೇಶ್ಮಾನಿ ಸುಮಹಾಂತಿ ಚ ।
ಬ್ರಾಹ್ಮಣೇಭ್ಯೋ ದದೌ ಪುತ್ರೋ ರಾಜ್ಞಸ್ತಸ್ಯೌರ್ಧ್ವದೈಹಿಕಮ್ ॥೩॥

ದಾಸದಾಸಿಯರನ್ನೂ ವಾಹನಗಳನ್ನೂ ದೊಡ್ಡ ಮನೆಗಳನ್ನೂ ರಾಜಕುಮಾರನು ರಾಜನ ಪರಲೋಕ ಪ್ರಾಪ್ತಿಗಾಗಿ ಬ್ರಾಹ್ಮಣರಿಗೆ ನೀಡಿದನು.

ತತಃ ಪ್ರಭಾತಸಮಯೇ ದಿವಸೇऽಥ ತ್ರಯೋದಶೇ ।
ವಿಲಲಾಪ ಮಹಾಬಾಹುರ್ಭರತಃ ಶೋಕಕರ್ಶಿತಃ ॥೪॥

ಬಳಿಕ ಹದಿಮೂರನೆ ದಿನ ಬೆಳಗಾದಾಗ ಮಹಾಬಾಹುವಾದ ಭರತನು ಶೋಕದಿಂದ ಸೊರಗಿ ವಿಲಾಪ ಮಾಡಿದನು.

ಶಬ್ದಾಪಿಹಿತಕಂಠಸ್ತು ಶೋಧನಾರ್ಥಮುಪಾಗತಃ ।
ಚಿತಾಮೂಲೇ ಪಿತುರ್ವಾಕ್ಯಮಿದಮಾಹ ಸುದುಃಖಿತಃ ॥೫॥

ಪಿತನ ಚಿತೆಯ ಬುಡದ ಸ್ಥಳವನ್ನು ಶೋಧಿಸುವುದಕ್ಕಾಗಿ ಬಂದ ಭರತನು ಬಹಳ ದುಃಖಿತನಾಗಿ ಕಂಠದೊಳಗೆ ಪೂರ್ತಿ ಅಳುವಶಬ್ದವೇ ತುಂಬುವಂತೆ ವಿಲಾಪ ಮಾಡಿದ.

ತಾತ ಯಸ್ಮಿನ್ನಿಸೃಷ್ಟೋಽಹಂ ತ್ವಯಾ ಭ್ರಾತರಿ ರಾಘವೇ ।
ತಸ್ಮಿನ್ ವನಂ ಪ್ರವ್ರಜಿತೇ ಶೂನ್ಯೇ ತ್ಯಕ್ತೋಽಸ್ಮ್ಯಹಂ ತ್ವಯಾ ॥೬॥

ಅಪ್ಪ ನೀನು ಅಣ್ಣ ರಾಮಲ್ಲಿಯೇ ನನ್ನ ರಕ್ಷಣೆಯ ಭಾರವನ್ನಿರಿಸಿ ಈಗ ಅವನು ಕಾಡಿಗೆ ಹೊರಟು ಹೋದಮೇಲೆ ಶೂನ್ಯವಾಗಿರುವ ಈ ಭೂಮಿಯ ಮೇಲೇ ನನ್ನನ್ನು ಬಿಟ್ಟು ಹೋಗಿರುವೆ.

ಯಸ್ಯಾ ಗತಿರನಾಥಾಯಾಃ ಪುತ್ರಃ ಪ್ರವ್ರಾಜಿತೋ ವನಮ್ ।
ತಾಮಂಬಾಂ ತಾತ ಕೌಸಲ್ಯಾಂ ತ್ಯಕ್ತ್ವಾ ತ್ವಂ ಕ್ವ ಗತೋ ನೃಪ ॥೭॥

ಅನಾಥೆಯಾದ ಮಾತೆ ಕೌಸಲ್ಯೆಗೆ ಆಸರೆಯಾಗಬೇಕಿದ್ದ ಮಗನನ್ನು ಕಾಡಿಗೆ ಕಳಿಸಿ ಈಗ ಆ ಮಾತೆಯನ್ನು ಬಿಟ್ಟು ನೀನು ಎಲ್ಲಿಗೆ ಹೋಗಿರುವೆ?

ದೃಷ್ಟ್ವಾ ಭಸ್ಮಾರುಣಂ ತಚ್ಚ ದಗ್ಧಾಸ್ಥಿಸ್ಥಾನಮಂಡಲಮ್ ।
ಪಿತುಃ ಶರೀರನಿರ್ವಾಣಂ ವಿಷ್ಟನನ್ ವಿಷಸಾದ ಸಃ ॥೮॥

ಭಸ್ಮದಿಂದ ಕೆಂಪಾದ ಸುಟ್ಟ ಅಸ್ಥಿಗಳಿಂದ ಯುಕ್ತವಾದ ಬೂದಿರಾಶಿ ಇರುವ ತಂದೆಯ ಶರೀರನಾಶ ಗೈದಿರುವ ಸ್ಥಳವನ್ನು ಕಂಡು ಭರತನು ಬಹಳ ಅತ್ತು ಶೋಕಿಸಿದ.

ಸ ತು ದೃಷ್ಟ್ವಾ ರುದನ್ ದೀನಃ ಪಪಾತ ಧರಣೀತಲೇ ।
ಉತ್ಥಾಪ್ಯಮಾನಃ ಶಕ್ರಸ್ಯ ಯಂತ್ರಧ್ವಜ ಇವ ಚ್ಯುತಃ ॥೯॥

ಉತ್ಸವಕ್ಕಾಗಿ ಯಂತ್ರದ ಮೂಲಕ ಇಂದ್ರಧ್ವಜಕೋಲನ್ನು ವೇದಿಕೆಯ ಮೇಲೆ ಏರಿಸುವ ಸಮಯದಲ್ಲಿ ಯಂತ್ರವೇ ಬಿದ್ದರೆ ಇಂದ್ರಧ್ವಜವು ಧೊಪ್ಪನೆ ಬೀಳುವಂತೆ ಭರತನು ಚಿತಾಭೂಮಿಯನ್ನು ಕಂಡು ದೀನನಾಗಿ ಅಳುತ್ತ ನೆಲದ ಮೇಲೆ ಬಿದ್ದನು.

ಅಭಿಪೇತುಸ್ತತಃ ಸರ್ವೇ ತಸ್ಯಾಮಾತ್ಯಾಃ ಶುಚಿವ್ರತಮ್ ।
ಅಂತಕಾಲೇ ನಿಪತಿತಂ ಯಯಾತಿಮೃಷಯೋ ಯಥಾ ॥೧೦॥

ಆಗ ಪುಣ್ಯಮುಗಿದಮೇಲೆ ಸ್ವರ್ಗದಿಂದ ಚ್ಯುತನಾಗಿ ಬಿದ್ದ ಯಯಾತಿ ಮಹಾರಾಜನನ್ನು ಋಷಿಗಳು ಸುತ್ತುವರಿದಂತೆ, ಶುಚಿವ್ರತನಾದ ಭರತ ಬಿದ್ದಾಗ ಅವನ ಅಮಾತ್ಯರು ಧಾವಿಸಿ ಬಂದು ಸುತ್ತುವರಿದರು.

ಶತ್ರುಘ್ನಶ್ಚಾಪಿ ಭರತಂ ದೃಷ್ಟ್ವಾ ಶೋಕಪರಿಪ್ಲುತಮ್ ।
ವಿಸಂಜ್ಞೋ ನ್ಯಪತದ್ಭೂಮೌ ಭೂಮಿಪಾಲಮನುಸ್ಮರನ್ ॥೧೧॥

ಶೋಕದಲ್ಲಿ ಮುಳುಗಿದ ಭರತನನ್ನು ಕಂಡು ಧೃತಿಗೆಟ್ಟು ಶತ್ರುಘ್ನನೂ ಕೂಡ ದಶರಥನನ್ನು ನೆನೆದು ಮೈಮರೆತು ನೆಲದಲ್ಲಿ ಬಿದ್ದನು.

ಉನ್ಮತ್ತ ಇವ ನಿಶ್ಚೇತಾ ವಿಲಲಾಪ ಸುದುಃಖಿತಃ ।
ಸ್ಮೃತ್ವಾ ಪಿತುರ್ಗುಣಾಂಗಾನಿ ತಾನಿ ತಾನಿ ತದಾ ತದಾ ॥೧೨॥

ದಶರಥನು ಮಕ್ಕಳನ್ನು ಲಾಲನ ಮಾಡುವ ಸಮಯದಲ್ಲಿ ಆಗಾಗ ತೋರು ತ್ತಿದ್ದ ಆಯಾ ಗುಣಗಳನ್ನೂ ಅಂಗಗಳನ್ನೂ ನೆನೆಸಿಕೊಂಡು ಶತ್ರುಘ್ನನು ಬಹಳ ದುಃಖಿತ-ನಾಗಿ ಚಿತ್ತಸ್ವಾಸ್ಥ್ಯವನ್ನು ಕಳೆದುಕೊಂಡು ಉನ್ಮತ್ತನಂತೆ ವಿಲಾಪ ಮಾಡಿದ.

ಮಂಥರಾಪ್ರಭವಸ್ತೀವ್ರಃ ಕೈಕೇಯೀಗ್ರಾಹಸಂಕುಲಃ ।
ವರದಾನಮಯೋಽಕ್ಷೋಭ್ಯೋಽಮಜ್ಜಯಚ್ಛೋಕಸಾಗರಃ ॥೧೩॥

'ಮಂಥರೆಯಿಂದ ಉದ್ಭವಿಸಿದ, ಕೈಕೇಯಿ ಎಂಬ ಮೊಸಳೆಗಳಿಂದ ತುಂಬಿದ, ವರದಾನ ರೂಪವಾದ್ದರಿಂದ ನಾಶಗೊಳಿಸಲಾಗದ, ತೀವ್ರವಾದ ಶೋಕಸಾಗರವು ನಮ್ಮನ್ನು ಮುಳುಗಿಸಿತು.

ಸುಕುಮಾರಂ ಚ ಬಾಲಂ ಚ ಸತತಂ ಲಾಲಿತಂ ತ್ವಯಾ ।
ಕ್ವ ತಾತ ಭರತಂ ಹಿತ್ವಾ ವಿಲಪಂತಂ ಗತೋ ಭವಾನ್ ॥೧೪॥

'ಭರತನು ಸುಂದರ ಬಾಲಕನೆಂದು ಸತತವಾಗಿ ಅವನನ್ನು ಲಾಲಿಸುತ್ತಿದ್ದೆ. ಅಂಥ ಭರತನನ್ನು ಅಳುತ್ತಿದ್ದಂತೇ ಬಿಟ್ಟು ನೀನು ಎಲ್ಲಿಗೆ ಹೊದೆ, ಅಪ್ಪ!

ನನು ಭೋಜ್ಯೇಷು ಪಾನೇಷು ವಸ್ತ್ರೇಷ್ವಾಭರಣೇಷು ಚ ।
ಪ್ರವಾರಯಸಿ ನಃ ಸರ್ವಾಂಸ್ತನ್ನಃ ಕೋಽನ್ಯಃ ಕರಿಷ್ಯತಿ ॥೧೫॥

'ಭಕ್ಷ್ಯ ಭೋಜ್ಯ ಪಾನೀಯ ವಸ್ತ್ರಾಭರಣಗಳನ್ನು ನಮ್ಮೆಲ್ಲರ ಮುಂದಿಟ್ಟು ಸ್ವೀಕರಿಸಲು ಒತ್ತಾಯಮಾಡುತ್ತಿದ್ದೆ. ನೀನು! ಹಾಗೆ ನಮಗೆ ಇನ್ನಾರು ಮಾಡುವರು?

ಅವದಾರಣಕಾಲೇ ತು ಪೃಥಿವೀ ನಾವದೀರ್ಯತೇ ।
ಯಾ ವಿಹೀನಾ ತ್ವಯಾ ರಾಜ್ಞಾ ಧರ್ಮಜ್ಞೇನ ಮಹಾತ್ಮನಾ ॥೧೬॥

'ಧರ್ಮಜ್ಞ ಮಹಾತ್ಮ ರಾಜನಾದ ನಿನ್ನನ್ನು ಅಗಲಿಯೂ ಸ್ವತಃ ಬಿರಿಯದೇ ಇರುವ ಈ ಭೂಮಿ ಬಿರಿಯುವ ಲಯಕಾಲದಲ್ಲಿಯೂ ಬಿರಿಯಲಾರದು.

ಪಿತರಿ ಸ್ವರ್ಗಮಾಪನ್ನೇ ರಾಮೇ ಚಾರಣ್ಯಮಾಶ್ರಿತೇ ।
ಕಿಂ ಮೇ ಜೀವಿತಸಾಮರ್ಥ್ಯಂ ಪ್ರವೇಕ್ಷ್ಯಾಮಿ ಹುತಾಶನಮ್ ॥೧೭॥

'ತಂದೆ ಸ್ವರ್ಗಸ್ಥನಾದ, ರಾಮ ಕಾಡುಪಾಲಾದನೆಂದ ಮೇಲೆ ಇನ್ನು ನನಗೆ ಬದುಕುವ ಸಾಮರ್ಥ್ಯವೇನಿದೆ? ಬೆಂಕಿಯಲ್ಲಿ ಬಿದ್ದು ಬಿಡುತ್ತೇನೆ; ಅಷ್ಟೆ.

ಹೀನೋ ಭ್ರಾತ್ರಾ ಚ ಪಿತ್ರಾ ಚ ಶೂನ್ಯಾಮಿಕ್ಷ್ವಾಕುಪಾಲಿತಾಮ್ ।
ಅಯೋಧ್ಯಾಂ ನ ಪ್ರವೇಕ್ಷ್ಯಾಮಿ ಪ್ರವೇಕ್ಷ್ಯಾಮಿ ತಪೋವನಮ್ ॥೧೮॥

'ಸೋದರನಿಲ್ಲದೆ ತಂದೆಯೂ ಇಲ್ಲದೆ ಶೂನ್ಯವಾಗಿರುವ ಇಕ್ಷ್ವಾಕು ವಂಶದವ-ರಿಂದ ಪಾಲಿತವಾದ ಅಯೋಧ್ಯೆಯನ್ನು ನಾನು ಪ್ರವೇಶಿಸಲಾರೆ, ತಪೋವನವನ್ನೇ ಪ್ರವೇಶಿಸುವೆನು'.

ತಯೋರ್ವಿಲಪಿತಂ ಶ್ರುತ್ವಾ ವ್ಯಸನಂ ಚಾನ್ವವೇಕ್ಷ್ಯ ತತ್ ।
ಭೃಶಮಾರ್ತತರಾ ಭೂಯಃ ಸರ್ವ ಏವಾನುಗಾಮಿನಃ ॥೧೯॥

ಭರತ ಶತ್ರುಘ್ನರೀರ್ವರ ವಿಲಾಪವನ್ನು ಕೇಳಿ ಅವರ ವ್ಯಸನವನ್ನು ಕಂಡು ಸೇವಕವರ್ಗದವರೂ ಕೂಡ ಎಲ್ಲರೂ ಇನ್ನೂ ಹೆಚ್ಚು ಶೋಕಾರ್ತರಾದರದು.

ತತೋ ವಿಷಣ್ಣೌ ಶೋಚಂತೌ ಶತ್ರುಘ್ನಭರತಾವುಭೌ ।
ಧರಣ್ಯಾಂ ಸಂವ್ಯಚೇಷ್ಟೇತಾಂ ಭಗ್ನಶೃಂಗಾವಿವರ್ಷಭೌ ॥೨೦॥

ವಿಷಾದಗೊಂಡು ಶೋಕಿಸುತ್ತ ಶತ್ರುಘ್ನ ಭರತರಿಬ್ಬರೂ ಕೊಂಬು ಮುರಿದ ಹೋರಿಗಳಂತೆ ನೆಲದ ಮೇಲೆ ಹೊರಳಾಡಿದರು.

ತತಃ ಪ್ರಕೃತಿಮಾನ್ ವೈದ್ಯಃ ಪಿತುರೇಷಾಂ ಪುರೋಹಿತಃ ।
ವಸಿಷ್ಠೋ ಭರತಂ ವಾಕ್ಯಮುತ್ಥಾಪ್ಯ ತಮುವಾಚ ಹ ॥೨೧॥

ಆಗ ನಿರ್ವಿಕಾರವಾದ ಮನಃಸ್ಥಿತಿ ಇರುವವರು, ವಿಷಾದಕ್ಕೆ ತತ್ತ್ವೋಪದೇಶದ

ಚಿಕಿತ್ಸೆ ನೀಡುವ ವೈದ್ಯರು, ಈ ಇಕ್ಷ್ವಾಕುಕುಲದವರ ಪುರೋಹಿತರು, ವಸಿಷ್ಠರು ಭರತನನ್ನು ಎಬ್ಬಿಸಿ ನುಡಿದರು.

ತ್ರಯೋದಶೋಽಯಂ ದಿವಸಃ ಪಿತುರ್ವೃತ್ತಸ್ಯ ತೇ ವಿಭೋ ।
ಸಾವಶೇಷಾಸ್ಥಿನಿಚಯೇ ಕಿಮಿಹ ತ್ವಂ ವಿಲಂಬಸೇ ॥೨೨॥

'ಪ್ರಭು, ಇದು ನಿನ್ನ ತಂದೆಯ ಮರಣಾನಂತರದ ಹದಿಮೂರನೆ ದಿನ. ಅಸ್ಥಿ-ಸಂಚಯನಾದಿ ಕರ್ಮಗಳಿನ್ನೂ ಪೂರ್ತಿಯಾಗಿಲ್ಲ. ಇದರಲ್ಲಿ ನೀನು ಏಕೆ ವಿಲಂಬ ಮಾಡುತ್ತಿರುವೆ?'

ತ್ರೀಣಿ ದ್ವಂದ್ವಾನಿ ಭೂತೇಷು ಪ್ರವೃತ್ತಾನ್ಯವಿಶೇಷತಃ ।
ತೇಷು ಚಾಪರಿಹಾರ್ಯೇಷು ನೈವಂ ಭವಿತುಮರ್ಹಸಿ ॥೨೩॥

'ಹಸಿವು-ಬಾಯಾರಿಕೆ, ಶೋಕ-ಮೋಹ, ಜನನ-ಮರಣಗಳು ಎಂಬ ಈ ಮೂರು ದ್ವಂದ್ವಗಳು ಹುಟ್ಟಿದವರೆಲ್ಲರಿಗೂ ಸಮಾನವಾಗಿ ಬರುವವುಗಳು. ಅವು ಬಾರದಂತೆ ಮಾಡಲು ಯಾರಿಗೂ ಸಾಧ್ಯವಿಲ್ಲ. ಅವುಗಳ ವಿಷಯದಲ್ಲಿ ನೀನು ಹೀಗೆ ಶೋಕಿಸಬಾರದು'.

ಸುಮಂತ್ರಶ್ಚಾಪಿ ಶತ್ರುಘ್ನಮುತ್ಥಾಪ್ಯಾಭಿಪ್ರಸಾದ್ಯ ಚ ।
ಶ್ರಾವಯಾಮಾಸ ತತ್ತ್ವಜ್ಞಃ ಸರ್ವಭೂತಭವಾಭವೌ ॥೨೪॥

ತತ್ವಜ್ಞನಾದ ಸುಮಂತ್ರನೂ ಕೂಡ ಶತ್ರುಘ್ನನನ್ನು ಎಬ್ಬಿಸಿ ಸಂತೈಸಿ ಎಲ್ಲ ಪ್ರಾಣಿ-ಗಳಿಗೂ ಸಮಾನವಾಗಿ ಬರುವ ಉತ್ಪತ್ತಿವಿನಾಶಗಳ ಬಗ್ಗೆ ಉಪದೇಶ ಮಾಡಿದ.

ಉತ್ಥಿತೌ ಚ ನರವ್ಯಾಘ್ರೌ ಪ್ರಕಾಶೇತೇ ಯಶಸ್ವಿನೌ ।
ವರ್ಷಾತಪಪರಿಕ್ಲಿನ್ನೌ ಪೃಥಗಿಂದ್ರಧ್ವಜಾವಿವ ॥೨೫॥

ಪುರುಷೋತ್ತಮರಾದ ಯಶಸ್ವಿಗಳಾದ ಭರತಶತ್ರುಘ್ನರು ಎದ್ದು ಮಳೆಬಿಸಿಲು ಗಳಿಂದ ಸೊರಗಿದ ಎರಡು ವಿಲಕ್ಷಣ ಇಂದ್ರಧ್ವಜಗಳಂತೆ ಕಂಡರು.

ಅಶ್ರೂಣಿ ಪರಿಮೃದ್ನಂತೌ ರಕ್ತಾಕ್ಷೌ ದೀನಭಾಷಿಣೌ ।
ಅಮಾತ್ಯಾಸ್ತ್ವರಯಂತಿ ಸ್ಮ ತನಯೌ ಚಾಪರಾಃ ಕ್ರಿಯಾಃ ॥೨೬॥

ಕಣ್ಣು ಕೆಂಪಾಗುವಂತೆ ಕಂಬನಿ ಸುರಿಸಿ ದುಃಖದಿಂದ ವಿಲಾಪಮಾಡುತ್ತಿದ್ದ ಭರತಶತ್ರುಘ್ನರು ಕಣ್ಣೀರನ್ನು ಒರೆಸಿಕೊಂಡರು. ಅಮಾತ್ಯರು ಆ ಕುಮಾರರಿಬ್ಬರನ್ನು ಅಪರಕ್ರಿಯೆಗಳಿಗೆ ತ್ವರೆಪಡಿಸಿದರು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಎಪ್ಪತ್ತೇಳನೇ ಸರ್ಗ ಮುಗಿಯಿತು.

❖

ಅಷ್ಟಸಪ್ತತಿತಮಃ ಸರ್ಗಃ

ಸರ್ಗ ೯ 78

ಮಂಥರೆಯನ್ನು ಕಂಡು ಶತ್ರುಘ್ನನ ಕೋಪ.

ಅಥ ಯಾತ್ರಾಂ ಸಮೀಹಂತಂ ಶತ್ರುಘ್ನೋ ಲಕ್ಷ್ಮಣಾನುಜಃ ।
ಭರತಂ ಶೋಕಸಂತಪ್ತಮಿದಂ ವಚನಮಬ್ರವೀತ್ ॥೧॥

ಅಪರಕ್ರಿಯೆಗಳೆಲ್ಲವೂ ಮುಗಿದ ಬಳಿಕ ರಾಮನ ಬಳಿಗೆ ಹೋಗಲು ಆಲೋಚಿ-ಸುತ್ತಿದ್ದ ಶೋಕಸಂತಪ್ತನಾದ ಭರತನಿಗೆ ಲಕ್ಷ್ಮಣಾನುಜನಾದ ಶತ್ರುಘ್ನನು ನುಡಿದ.

ಗತಿರ್ಯಃ ಸರ್ವಭೂತಾನಾಂ ದುಃಖೇ ಕಿಂ ಪುನರಾತ್ಮನಃ ।
ಸ ರಾಮಃ ಸತ್ತ್ವಸಂಪನ್ನಃ ಸ್ತ್ರಿಯಾ ಪ್ರವ್ರಾಜಿತೋ ವನಮ್ ॥೨॥

ಎಲ್ಲ ಪ್ರಾಣಿಗಳಿಗೂ ದುಃಖ ಬಂದಾಗ ಆಶ್ರಯ ನೀಡುವವನು ರಾಮ. ನಮ್ಮ ವಿಷಯದಲ್ಲಿ ಇನ್ನೇನು ಹೇಳಬೇಕು? ಇಂಥ ಸತ್ವಸಂಪನ್ನನಾದ ರಾಮನನ್ನು ಹೆಂಗಸೊಬ್ಬಳು ಕಾಡುಪಾಲು ಮಾಡಿದಳೆಂದರೆ ಇದೆಂಥ ವಿಪರ್ಯಾಸ!

ಬಲವಾನ್ ವೀರ್ಯಸಂಪನ್ನೋ ಲಕ್ಷ್ಮಣೋ ನಾಮ ಯೋಽಪ್ಯಸೌ ।
ಕಿಂ ನ ಮೋಚಯತೇ ರಾಮಂ ಕೃತ್ವಾಪಿ ಪಿತೃನಿಗ್ರಹಮ್ ॥೩॥

ಲಕ್ಷ್ಮಣನೆಂದರೆ, ಅವನೂ ಬಲಿಷ್ಠ, ವೀರ್ಯಸಂಪನ್ನ. ಅವನೂ ಕೂಡ ಪಿತನನ್ನು ನಿಗ್ರಹಿಸಿಯಾದರೂ ರಾಮನನ್ನು ಆ ಆಪತ್ತಿನಿಂದ ಏಕೆ ಮುಕ್ತಗೊಳಿಸಲಾರದೆ ಹೋದ? ಇದೂ ಆಶ್ಚರ್ಯ!

ಪೂರ್ವಮೇವ ತು ನಿಗ್ರಾಹ್ಯಃ ಸಮವೇಕ್ಷ್ಯ ನಯಾನಯೌ ।
ಉತ್ಪಥಂ ಯಃ ಸಮಾರೂಢೋ ನಾರ್ಯಾ ರಾಜಾ ವಶಂಗತಃ ॥೪॥

ಮೊದಲಿಗೇ ನ್ಯಾಯ ಅನ್ಯಾಯಗಳನ್ನು ವಿಮರ್ಶಿಸಿ, ಸ್ತ್ರೀಗೆ ವಶನಾಗಿ ತಪ್ಪುದಾರಿ ಹಿಡಿದಿದ್ದ ರಾಜನನ್ನು ಲಕ್ಷ್ಮಣನು ನಿಗ್ರಹಿಸಬೇಕಾಗಿತ್ತಲ್ಲವೆ?

ಇತಿ ಸಂಭಾಷಮಾಣೇ ತು ಶತ್ರುಘ್ನೇ ಲಕ್ಷ್ಮಣಾನುಜೇ ।
ಪ್ರಾಗ್ದ್ವಾರೇಽಭೂತ್ತದಾ ಕುಬ್ಜಾ ಸರ್ವಾಭರಣಭೂಷಿತಾ ॥೫॥

ಹೀಗೆ ಲಕ್ಷ್ಮಣಾನುಜನಾದ ಶತ್ರುಘ್ನನು ಮಾತನಾಡುತ್ತಿದ್ದಾಗ ಅರಮನೆಯ ಪೂರ್ವದ್ವಾರಕ್ಕೆ ಸರ್ವಾಭರಣ ಭೂಷಿತಳಾದ ಕುಬ್ಜೆ ಬಂದಳು.

ಲಿಪ್ತಾ ಚಂದನಸಾರೇಣ ರಾಜವಸ್ತ್ರಾಣಿ ಬಿಭ್ರತೀ ।
ವಿವಿಧಂ ವಿವಿಧೈಸ್ತೈಸ್ತೈರ್ಭೂಷಣೈಶ್ಚ ವಿಭೂಷಿತಾ ॥೬॥

ಅವಳು ಮೈಗೆ ಚಂದನರಸ ಲೇಪಿಸಿಕೊಂಡಿದ್ದಳು. ರಾಜಯೋಗ್ಯ ವಸ್ತ್ರಗಳನ್ನು ಉಟ್ಟಿದ್ದಳು. ನಾನಾ ಬಗೆಯ ಆಭರಣಗಳಿಂದ ನಾನಾ ಬಗೆಯಿಂದ ತನ್ನನ್ನು ಸಿಂಗರಿಸಿಕೊಂಡಿದ್ದಳು.

ಮೇಖಲಾದಾಮಭಿಶ್ಚಿತ್ರೈರನ್ಯೈಶ್ಚ ಶುಭಭೂಷಣೈಃ ।
ಬಭಾಸೇ ಬಹುಭಿರ್ಬದ್ಧಾ ರಜ್ಜುಬದ್ಧೇವ ವಾನರೀ ॥೭॥

ಸುಂದರವಾದ ಒಡ್ಯಾಣ ಹಾಗೂ ಬೇರೆ ಅನೇಕ ಸುಂದರ ಆಭರಣಗಳನ್ನು ಕಟ್ಟಿಕೊಂಡು ಮಂಥರೆ ಹಗ್ಗದಿಂದ ಕಟ್ಟಿದ ಹೆಣ್ಣುಕೋತಿಯಂತೇ ಕಾಣುತ್ತಿದ್ದಳು.

ತಾಂ ಸಮೀಕ್ಷ್ಯ ತದಾ ದ್ವಾಃಸ್ಥಾಃ ಸುಭೃಶಂ ಪಾಪಕಾರಿಣೀಮ್ ।
ಗೃಹೀತ್ವಾಽಕರುಣಂ ಕುಬ್ಜಾಂ ಶತ್ರುಘ್ನಾಯ ನ್ಯವೇದಯನ್ ॥೮॥

ಬಹಳ ಪಾಪಕಾರಿಣಿಯಾದ ಆ ಮಂಥರೆಯನ್ನು ದ್ವಾರಪಾಲಕರು ಕಂಡು ಏನೂ ದಯೆ ಇಲ್ಲದೆ ಹಿಡಿದು ಶತ್ರುಘ್ನನಿಗೆ ತಂದೊಪ್ಪಿಸಿದರು.

ಯಸ್ಯಾಃ ಕೃತೇ ವನೇ ರಾಮೋ ನ್ಯಸ್ತದೇಹಶ್ಚ ವಃ ಪಿತಾ ।
ಸೇಯಂ ಪಾಪಾ ನೃಶಂಸಾ ಚ ತಸ್ಯಾಃ ಕುರು ಯಥಾಮತಿ ॥೯॥

ಯಾರ ಕಾರಣದಿಂದಾಗಿ ರಾಮ ವನವಾಸ ಮಾಡುವಂತಾಯಿತೋ ಯಾರ ಕಾರಣದಿಂದಾಗಿ ನಿಮ್ಮ ಪಿತನೂ ಮರಣ ಹೊಂದಿದನೋ ಅವಳೇ ಇವಳು ಮಂಥರೆ. ಪಾಪಿಷ್ಠೆ, ಕ್ರೂರಿ. ಅವಳಿಗೇನು ಮಾಡಬೇಕೆಂದು ತೋರುವುದೋ ಅದನ್ನು ಮಾಡಿರಿ.

ಶತ್ರುಘ್ನಶ್ಚ ತದಾಜ್ಞಾಯ ವಚನಂ ಭೃಶದುಃಖಿತಃ ।
ಅಂತಃಪುರಚರಾನ್ ಸರ್ವಾನಿತ್ಯುವಾಚ ಧೃತವ್ರತಃ ॥೧೦॥

ದ್ವಾರಪಾಲಕರು ಹೇಳಿದ್ದನ್ನು ಕೇಳಿ ವ್ರತನಿಷ್ಠನಾದ ಶತ್ರುಘ್ನನು ಬಹಳ ದುಃಖಿತನಾಗಿ ಅಂತಃಪುರದ ಪರಿಚಾರಕರೆಲ್ಲರಿಗೂ ಹೇಳಿದ.

ತೀವ್ರಮುತ್ಪಾದಿತಂ ದುಃಖಂ ಭ್ರಾತೄಣಾಂ ಮೇ ತಥಾ ಪಿತುಃ ।
ಯಯಾ ಸೇಯಂ ನೃಶಂಸಸ್ಯ ಕರ್ಮಣಃ ಫಲಮಶ್ನುತಾಮ್ ॥೧೧॥

ಇವಳು ನನ್ನ ಸೋದರರಿಗೂ ಪಿತನಿಗೂ ತೀವ್ರ ದುಃಖವನ್ನು ಉಂಟು-ಮಾಡಿದ್ದಾಳೆ. ಅದರಿಂದ ಇವಳು ತನ್ನ ಕ್ರೂರಕರ್ಮಕ್ಕೆ ತಕ್ಕ ಫಲವನ್ನು ಉಣಬೇಕು.

ಏವಮುಕ್ತ್ವಾ ತು ತೇನಾಥ ಸಖೀಜನಸಮಾವೃತಾ ।
ಗೃಹೀತಾ ಬಲವತ್ ಕುಬ್ಜಾ ಸಾ ತದ್ಗೃಹಮನಾದಯತ್ ॥೧೨॥

ಹೀಗೆ ಹೇಳಿ ಶತ್ರುಘ್ನನು ಸ್ನೇಹಿತೆಯರೊಂದಿಗೆ ಬಂದಿದ್ದ ಆ ಕುಬ್ಜೆಯನ್ನು ಬಲಾತ್ಕಾರವಾಗಿ ಹಿಡಿದೆಳೆದ. ಅವಳು ಅರಮನೆ ಪ್ರತಿಧ್ವನಿಸುವಂತೆ ಕಿರಿಚಿಕೊಂಡಳು.

ತತಃ ಸುಭೃಶಸಂತಪ್ತಸ್ತಸ್ಯಾಃ ಸರ್ವಃ ಸಖೀಜನಃ ।
ಕ್ರುದ್ಧಮಾಜ್ಞಾಯ ಶತ್ರುಘ್ನಂ ವಿಪಲಾಯತ ಸರ್ವಶಃ ॥೧೩॥

ಆಗ ಅವಳ ಎಲ್ಲ ಸ್ನೇಹಿತೆಯರೂ ಶತ್ರುಘ್ನನು ಕ್ರುದ್ಧನಾಗಿರುವುದನ್ನು ತಿಳಿದು ಬಲುಭೀತಿಯಿಂದ ಎಲ್ಲೆಡೆಗೆ ಪಲಾಯನಗೈದರು.

ಆಮಂತ್ರ್ಯತ ಕೃತಘ್ನಶ್ಚ ತಸ್ಯಾಃ ಸರ್ವಃ ಸಖೀಜನಃ ।
ಯಥಾಯಂ ಸಮುಪಕ್ರಾಂತೋ ನಿಃಶೇಷಾನ್ನಃ ಕರಿಷ್ಯತಿ ॥೧೪॥

ಸಾನುಕ್ರೋಶಾಂ ವದಾನ್ಯಾಂ ಚ ಧರ್ಮಜ್ಞಾಂ ಚ ಯಶಸ್ವಿನೀಮ್ ।
ಕೌಸಲ್ಯಾಂ ಶರಣಂ ಯಾಮ ಸಾ ಹಿ ನೋಽಸ್ತು ಧ್ರುವಾ ಗತಿಃ ॥೧೫॥

ಮಂಥರೆಯ ಎಲ್ಲ ಸ್ನೇಹಿತೆಯರೂ ಎಲ್ಲ ಪರಿಚಾರಕ ವರ್ಗದವರೂ ಪರಸ್ಪರ ಹೇಳಿಕೊಂಡರು. 'ಈತನು ಮಂಥರೆಯನ್ನು ಹಿಡಿದೆಳೆಯಲಾರಂಭಿಸಿದ ರೀತಿಯನ್ನು ನೋಡಿದರೆ ನಮ್ಮೆಲ್ಲರನ್ನೂ ನಿಃಶೇಷವಾಗಿ ಮುಗಿಸಿ ಬಿಡುವಂತೆ ಕಾಣುತ್ತದೆ. ಅದರಿಂದ ದಯಾಶೀಲಳು, ಉದಾರಳು ಧರ್ಮಜ್ಞಳು ಯಶಸ್ವಿನಿಯೂ ಆಗಿರುವ ಕೌಸಲ್ಯೆಯನ್ನೇ ಮೊರೆಹೋಗಬೇಕು. ಅವಳು ನಿಶ್ಚಯವಾಗಿ ಆಸರೆ ನೀಡುವಳು'.

ಸ ಚ ರೋಷೇಣ ತಾಮ್ರಾಕ್ಷಃ ಶತ್ರುಘ್ನಃ ಶತ್ರುತಾಪನಃ ।
ವಿಚಕರ್ಷ ತದಾ ಕುಬ್ಜಾಂ ಕ್ರೋಶಂತೀಂ ಧರಣೀತಲೇ ॥೧೬॥

ಶತ್ರುತಾಪಕನಾದ ಶತ್ರುಘ್ನನು ರೋಷದಿಂದ ಕೆಂಗಣ್ಣನಾಗಿ ಕುಬ್ಜೆ ಕಿರಿಚಿ ಕೊಳ್ಳುತ್ತಿದ್ದಂತೇ ನೆಲದ ಮೇಲೆ ಎಳೆದಾಡಿದ.

ತಸ್ಯಾ ಹ್ಯಾಕೃಷ್ಯಮಾಣಾಯಾ ಮಂಥರಾಯಾಸ್ತತಸ್ತತಃ ।
ಚಿತ್ರಂ ಬಹುವಿಧಂ ಭಾಂಡಂ ಪೃಥಿವ್ಯಾಂ ತದ್ವ್ಯಶೀರ್ಯತ ॥೧೭॥

ಮಂಥರೆಯನ್ನು ಶತ್ರುಘ್ನನು ಆಭರಣಗಳಲ್ಲಿಯೇ ಹಿಡಿದೆಳೆದಾಡುವಾಗ ಅವಳು ತೊಟ್ಟಿದ್ದ ಸುಂದರವಾದ ನಾನಾ ಬಗೆಯ ಆ ಆಭರಣಗಳು ನೆಲದ ಮೇಲೆ ಅಲ್ಲಲ್ಲಿ ಚೂರುಚೂರಾಗಿ ಬಿದ್ದುವು.

ತೇನ ಭಾಂಡೇನ ಸಂಕೀರ್ಣಂ ಶ್ರೀಮದ್ರಾಜನಿವೇಶನಮ್ ।
ಅಶೋಭತ ತದಾ ಭೂಯಃ ಶಾರದಂ ಗಗನಂ ಯಥಾ ॥೧೮॥

ಭವ್ಯವಾದ ಅರಮನೆ ಆ ಆಭರಣಚೂರುಗಳಿಂದ ತುಂಬಿ ಶರತ್ಕಾಲದ ಆಕಾಶ–ದಂತೆ ಬಹಳ ಕಂಗೊಳಿಸಿತು.

ಸ ಬಲೀ ಬಲವತ್‌ಕ್ರೋಧಾದ್ ಗೃಹೀತ್ವಾ ಪುರುಷರ್ಷಭಃ ।
ಕೈಕೇಯೀಮಭಿನಿರ್ಭರ್ತ್ಸ್ಯ ಬಭಾಷೇ ಪರುಷಂ ವಚಃ ॥೧೯॥

ಬಲಿಷ್ಠನಾದ ಪುರುಷೋತ್ತಮನಾದ ಶತ್ರುಘ್ನನು ಕೈಕೇಯಿಯ ಮುಂದೆಯೇ ಕ್ರೋಧದಿಂದ ಬಲಾತ್ಕಾರವಾಗಿ ಮಂಥರೆಯನ್ನು ಹಿಡಿದು, ಕೈಕೇಯಿಯನ್ನು ಆಕ್ಷೇಪಿಸಿ ಕಟುವಾದ ಮಾತನ್ನಾಡಿದ.

ತೈರ್ವಾಕ್ಯೈಃ ಪರುಷೈರ್ದುಃಖೈಃ ಕೈಕೇಯೀ ಭೃಶದುಃಖಿತಾ ।
ಶತ್ರುಘ್ನಭಯಸಂತ್ರಸ್ತಾ ಪುತ್ರಂ ಶರಣಮಾಗತಾ ॥೨೦॥

ಶತ್ರುಘ್ನನಾಡಿದ ದುಃಖಕರವಾದ ಆ ಕಟುಮಾತುಗಳಿಂದ ಕೈಕೇಯಿ ಬಹಳ ದುಃಖಿತಳಾಗಿ ಶತ್ರುಘ್ನನ ಭಯದಿಂದ ಭೀತಳಾಗಿ ಮಗನಾದ ಭರತನನ್ನೇ ಮೊರೆ–ಹೊಕ್ಕಳು.

ತಾಂ ಪ್ರೇಕ್ಷ್ಯ ಭರತಃ ಕ್ರುದ್ಧಂ ಶತ್ರುಘ್ನಮಿದಮಬ್ರವೀತ್ ।
ಅವಧ್ಯಾಃ ಸರ್ವಭೂತಾನಾಂ ಪ್ರಮದಾಃ ಕ್ಷಮ್ಯತಾಮಿತಿ ॥೨೧॥

ಭರತನು ತನ್ನನ್ನು ಮೊರೆಹೊಕ್ಕ ಕೈಕೇಯಿಯನ್ನು ನೋಡಿ ಕ್ರುದ್ಧನಾಗಿದ್ದ ಶತ್ರುಘ್ನನಿಗೆ ಹೇಳಿದ—'ಯಾವ ಪ್ರಾಣಿಗಳಲ್ಲಿಯೂ ಸ್ತ್ರೀಯನ್ನು ಕೊಲ್ಲಬಾರದು. ಅದರಿಂದ ಕ್ಷಮಿಸು'.

ಹನ್ಯಾಮಹಮಿಮಾಂ ಪಾಪಾಂ ಕೈಕೇಯೀಂ ದುಷ್ಟಚಾರಿಣೀಮ್ ।
ಯದಿ ಮಾಂ ಧಾರ್ಮಿಕೋ ರಾಮೋ ನಾಸೂಯೇನ್ಮಾತೃಘಾತುಕಂ ॥

ಧಾರ್ಮಿಕನಾದ ರಾಮನು ಮಾತೃವಧಮಾಡಿದವನೆಂದು ನನ್ನಲ್ಲಿ ಕೋಪಿಸಿ ಕೊಳ್ಳದಿರುತ್ತಿದ್ದರೆ ದುಷ್ಕರ್ಮಮಾಡುವ ಪಾಪಿಷ್ಠೆಯಾದ ಈ ಕೈಕೇಯಿಯನ್ನು ನಾನೇ ವಧಿಸುತ್ತಿದ್ದೆ.

ಇಮಾಮಪಿ ಹತಾಂ ಕುಬ್ಜಾಂ ಯದಿ ಜಾನಾತಿ ರಾಘವಃ ।
ತ್ವಾಂ ಚ ಮಾಂ ಚ ಹಿ ಧರ್ಮಾತ್ಮಾ ನಾಭಿಭಾಷಿಷ್ಯತೇ ಧ್ರುವಮ್ ॥೨೩॥

ಈ ಮಂಥರೆಯನ್ನು ಕೊಂದರೂ, ಧರ್ಮಾತ್ಮನಾದ ರಾಮನೇನಾದರೂ ಇದನ್ನು ತಿಳಿದರೆ, ಅವನು ನಿನ್ನನ್ನೂ ನನ್ನನ್ನೂ ಸರ್ವಥಾ ಮಾತನಾಡಿಸಲಾರ.

ಭರತಸ್ಯ ವಚಃ ಶ್ರುತ್ವಾ ಶತ್ರುಘ್ನೋ ಲಕ್ಷ್ಮಣಾನುಜಃ ।
ನ್ಯವರ್ತತ ತತೋ ರೋಷಾತ್ತಾಂ ಮುಮೋಚ ಚ ಮಂಥರಾಮ್ ॥೨೪॥

ಭರತನ ಮಾತನ್ನು ಕೇಳಿ ಲಕ್ಷ್ಮಣಾನುಜನಾದ ಶತ್ರುಘ್ನನು ರೋಷದಿಂದ ವಿಮುಖನಾದ. ಮಂಥರೆಯನ್ನೂ ಬಿಟ್ಟುಬಿಟ್ಟ.

ಸಾ ಪಾದಮೂಲೇ ಕೈಕೇಯ್ಯಾ ಮಂಥರಾ ನಿಪಪಾತ ಹ ।
ನಿಃಶ್ವಸಂತೀ ಸುದುಃಖಾರ್ತಾ ಕೃಪಣಂ ವಿಲಲಾಪ ಚ ॥೨೫॥

ಮಂಥರೆ ಕೈಕೇಯಿಯ ಕಾಲಿಗೆ ಬಿದ್ದಳು. ಮತ್ತು ಬಹಳ ದುಃಖದಿಂದ ಆರ್ತ-ಳಾಗಿ ನಿಟ್ಟುಸಿರುಬಿಡುತ್ತ ದೈನ್ಯದಿಂದ ವಿಲಾಪ ಮಾಡಿದಳು.

ಶತ್ರುಘ್ನವಿಕ್ಷೇಪವಿಮೂಢಸಂಜ್ಞಾಂ
ಸಮೀಕ್ಷ್ಯ ಕುಬ್ಜಾಂ ಭರತಸ್ಯ ಮಾತಾ ।
ಶನೈಃ ಸಮಾಶ್ವಾಸಯದಾರ್ತರೂಪಾಂ
ಕ್ರೌಂಚೀಂ ವಿಲಗ್ನಾಮಿವ ವೀಕ್ಷಮಾಣಾಮ್ ॥೨೬॥

ಶತ್ರುಘ್ನನು ಹಿಡಿದೆಳೆದುದರಿಂದ ಪ್ರಜ್ಞೆತಪ್ಪಿ ಆರ್ತಳಾದ ಮಂಥರೆ ಬಲೆಯಲ್ಲಿ ಬಿದ್ದ ಕ್ರೌಂಚಪಕ್ಷಿಯಂತೆ ನೋಡುತ್ತಿದ್ದುದನ್ನು ಕಂಡು ಕೈಕೇಯಿ ನಿಧಾನವಾಗಿ ಸಂತೈಸಿದಳು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಎಪ್ಪತ್ತೆಂಟನೇ ಸರ್ಗ ಮುಗಿಯಿತು.

❖

ಏಕೋನಾಶೀತಿತಮಃ ಸರ್ಗಃ

ಸರ್ಗ – 79

ರಾಜನಾಗೆಂದು ಸಚಿವರ ಪ್ರಾರ್ಥನೆಯನ್ನು ಭರತ ನಿರಾಕರಿಸುವುದು.

ತತಃ ಪ್ರಭಾತಸಮಯೇ ದಿವಸೇ ಚ ಚತುರ್ದಶೇ ।
ಸಮೇತ್ಯ ರಾಜಕರ್ತಾರೋ ಭರತಂ ವಾಕ್ಯಮಬ್ರುವನ್ ॥೧॥

ಬಳಿಕ ಹದಿನಾಲ್ಕನೆ ದಿವಸ ಬೆಳಗಾದಾಗ ಸಚಿವರು ಒಟ್ಟಾಗಿ ಸೇರಿ ಭರತನಿಗೆ ಹೇಳಿದರು.

ಗತೋ ದಶರಥಃ ಸ್ವರ್ಗಂ ಯೋ ನೋ ಗುರುತರೋ ಗುರುಃ ।
ರಾಮಂ ಪ್ರವ್ರಾಜ್ಯ ವೈ ಜ್ಯೇಷ್ಠಂ ಲಕ್ಷ್ಮಣಂ ಚ ಮಹಾಬಲಮ್ ॥೨॥

ನಮಗೆ ಗುರುಗಳೆಲ್ಲರಿಗಿಂತ ಹೆಚ್ಚಾಗಿ ಗುರು ದಶರಥ ಮಹಾರಾಜನು ಜ್ಯೇಷ್ಠ-ನಾದ ರಾಮನನ್ನೂ ಮಹಾಬಲನಾದ ಲಕ್ಷ್ಮಣನನ್ನೂ ಕಾಡಿಗೆ ಕಳಿಸಿ ತಾನು ಸ್ವರ್ಗಸ್ಥನಾದನು.

ತ್ವಮದ್ಯ ಭವ ನೋ ರಾಜಾ ರಾಜಪುತ್ರ ಮಹಾಯಶಃ ।
ಸಂಗತ್ಯಾ ನಾಪರಾಧ್ನೋತಿ ರಾಜ್ಯಮೇತದನಾಯಕಮ್ ॥೩॥

ಈಗ, ಮಹಾಯಶಸ್ವಿ ರಾಜಕುಮಾರ ಭರತನೆ! ನೀನು ನಮಗೆ ರಾಜನಾಗು. ಈಗ ರಾಜ್ಯ ಅನಾಥವಾಗಿದೆ. ಇಂಥ ಸನ್ನಿವೇಶದಲ್ಲಿ ನೀನು ರಾಜ್ಯವನ್ನು ಸ್ವೀಕರಿಸಿದರೆ ತಪ್ಪಾಗುವುದಿಲ್ಲ.

ಅಭಿಷೇಚನಿಕಂ ಸರ್ವಮಿದಮಾದಾಯ ರಾಘವ ।
ಪ್ರತೀಕ್ಷತೇ ತ್ವಾಂ ಸ್ವಜನಃ ಶ್ರೇಣಯಶ್ಚ ನೃಪಾತ್ಮಜ ॥೪॥

ಭರತ, ರಾಜಕುಮಾರ! ಅಭಿಷೇಕಸಾಮಗ್ರಿ ಇದೆಲ್ಲವನ್ನೂ ಹಿಡಿದು ನಿನ್ನವರು ಮತ್ತು ಪ್ರಜೆಗಳು ಎಲ್ಲರೂ ನೀನು ಅಭಿಷೇಕ ಮಾಡಿಸಿಕೊಳ್ಳುವುದನ್ನು ಇದಿರು ನೋಡುತ್ತಿದ್ದಾರೆ.

ರಾಜ್ಯಂ ಗೃಹಾಣ ಭರತ ಪಿತೃಪೈತಾಮಹಂ ಧ್ರುವಮ್ ।
ಅಭಿಷೇಚಯ ಚಾತ್ಮಾನಂ ಪಾಹಿ ಚಾಸ್ಮಾನ್ನರರ್ಷಭ ॥೫॥

ಭರತ, ಪುರುಷೋತ್ತಮ! ಪಿತೃಪಿತಾಮಹರ ಪರಂಪರೆಯಿಂದ ಬಂದಿರುವ ರಾಜ್ಯವನ್ನು ನಿಶ್ಚಯವಾಗಿ ಸ್ವೀಕರಿಸು. ಅಭಿಷೇಕ ಮಾಡಿಸಿಕೊಳ್ಳು ನಮ್ಮನ್ನು ಆಳು.

ಆಭಿಷೇಚನಿಕಂ ಭಾಂಡಂ ಕೃತ್ವಾ ಸರ್ವಂ ಪ್ರದಕ್ಷಿಣಮ್ ।
ಭರತಸ್ತಂ ಜನಂ ಸರ್ವಂ ಪ್ರತ್ಯುವಾಚ ಧೃತವ್ರತಃ ॥೬॥

ಸಚಿವರು ಹೀಗೆ ಹೇಳಿದಾಗ ವ್ರತನಿಷ್ಠನಾದ ಭರತನು ಎಲ್ಲ ಅಭಿಷೇಕ ಸಾಮಗ್ರಿಯನ್ನು ಪ್ರದಕ್ಷಿಣೆ ಮಾಡಿ ಆ ಎಲ್ಲ ಜನರಿಗೆ ಹೇಳಿದ.

ಜ್ಯೇಷ್ಠಸ್ಯ ರಾಜತಾ ನಿತ್ಯಮುಚಿತಾ ಹಿ ಕುಲಸ್ಯ ನಃ ।
ನೈವಂ ಭವಂತೋ ಮಾಂ ವಕ್ತುಮರ್ಹಂತಿ ಕುಶಲಾ ಜನಾಃ ॥೭॥

ಜ್ಯೇಷ್ಠಪುತ್ರನಿಗೇ ಅಭಿಷೇಕ ಮಾಡುವುದು ನಮ್ಮ ಕುಲಕ್ಕೆ ಉಚಿತವಾಗಿದೆ. ಅದರಿಂದ ನನಗೆ ನೀವು ಈ ರೀತಿ ಹೇಳಬಾರದು. ನೀವು ಎಲ್ಲವನ್ನೂ ತಿಳಿದವರು.

ರಾಮಃ ಪೂರ್ವೋ ಹಿ ನೋ ಭ್ರಾತಾ ಭವಿಷ್ಯತಿ ಮಹೀಪತಿಃ ।
ಅಹಂ ತ್ವರಣ್ಯೇ ವತ್ಸ್ಯಾಮಿ ವರ್ಷಾಣಿ ನವ ಪಂಚ ಚ ॥೮॥

ನಮ್ಮೆಲ್ಲರಲ್ಲಿ ಹಿರಿಯನು ಅಣ್ಣ ರಾಮ. ಅವನೇ ರಾಜನಾಗುತ್ತಾನೆ. ನಾನು ಹದಿನಾಲ್ಕು ವರ್ಷಕಾಲ ಕಾಡಿನಲ್ಲಿ ವಾಸಮಾಡುವೆನು.

ಯುಜ್ಯತಾಂ ಮಹತೀ ಸೇನಾ ಚತುರಂಗಮಹಾಬಲಾ ।
ಆನಯಿಷ್ಯಾಮ್ಯಹಂ ಜ್ಯೇಷ್ಠಭ್ರಾತರಂ ರಾಘವಂ ವನಾತ್ ॥೯॥

ಚತುರಂಗ ಮಹಾಬಲ ಉಳ್ಳ ಮಹಾಸೈನ್ಯವನ್ನು ಸಜ್ಜುಗೊಳಿಸಿರಿ. ಹಿರಿಯಣ್ಣ-ನಾದ ರಾಮನನ್ನು ಕಾಡಿನಿಂದ ಕರೆತರುವೆನು.

ಆಭಿಷೇಚನಿಕಂ ಚೈವ ಸರ್ವಮೇತದುಪಸ್ಕೃತಮ್ ।
ಪುರಸ್ಕೃತ್ಯ ಗಮಿಷ್ಯಾಮಿ ರಾಮಹೇತೋರ್ವನಂ ಪ್ರತಿ ॥೧೦॥

ಅಭಿಷೇಕಕ್ಕಾಗಿ ಸಜ್ಜಾಗಿರುವ ಈ ಎಲ್ಲ ಸಾಮಗ್ರಿಯನ್ನು ಮುಂದಿಟ್ಟುಕೊಂಡು ರಾಮನನ್ನು ಕರೆತರುವುದಕ್ಕಾಗಿ ನಾನು ಕಾಡಿಗೆ ಹೋಗುವೆನು.

ತತ್ರೈವ ತಂ ನರವ್ಯಾಘ್ರಮಭಿಷಿಚ್ಯ ಪುರಸ್ಕೃತಮ್ ।
ಆನಯಿಷ್ಯಾಮಿ ವೈ ರಾಮಂ ಹವ್ಯವಾಹಮಿವಾಧ್ವರಾತ್ ॥೧೧॥

ಅಲ್ಲಿಯೇ ಪುರುಷೋತ್ತಮ ರಾಮನಿಗೆ ಪಟ್ಟಾಭಿಷೇಕಮಾಡಿ, ಅವನನ್ನು ಮುಂದಿಟ್ಟುಕೊಂಡು, ಯಜ್ಞಶಾಲೆಯಲ್ಲಿ ಎಲ್ಲ ಯಾಗಗಳಲ್ಲಿ ದಕ್ಷಿಣಾಗ್ನಿಕುಂಡದಿಂದ ಆಹವನೀಯಾಗ್ನಿ ಕುಂಡಕ್ಕೆ ಅಗ್ನಿಪ್ರಣಯನ ಮಾಡುವಂತೆ, ಉತ್ತರವೇದಿ ವಿಧಾನ-ವಿರುವ ವರುಣಪ್ರಘಾಸ ಸಾಕಮೇಧಗಳೆಂಬ ಎರಡು ಚಾತುರ್ಮಾಸ್ಯ ಪರ್ವಗಳಲ್ಲಿ ದಕ್ಷಿಣ ವೇದಿಯಿಂದ ಉತ್ತರವೇದಿಗೆ ಅಗ್ನಿಪ್ರಣಯನ ಮಾಡುವಂತೆ, ರಾಮನನ್ನು ಅರಣ್ಯದಿಂದ ಅಯೋಧ್ಯೆಗೆ ಕರೆತರುವೆನು.

ನ ಸಕಾಮಾಂ ಕರಿಷ್ಯಾಮಿ ಸ್ವಾಮಿಮಾಂ ಮಾತೃಗಂಧಿನೀಮ್ ।
ವನೇ ವತ್ಸ್ಯಾಮ್ಯಹಂ ದುರ್ಗೇ ರಾಮೋ ರಾಜಾ ಭವಿಷ್ಯತಿ ॥೧೨॥

ನನಗೆ ಹೆಸರಿಗೆ ಮಾತ್ರ ತಾಯಿಯಾಗಿರುವ ಕೈಕೇಯಿಯ ಮನೋರಥವನ್ನು ಸರ್ವಥಾ ಪೂರೈಸಲಾರೆ. ದುರ್ಗಮವಾದ ಅರಣ್ಯದಲ್ಲಿ ನಾನೇ ವಾಸ ಮಾಡುವೆನು. ರಾಮನೇ ರಾಜನಾಗುವನು.

ಕ್ರಿಯತಾಂ ಶಿಲ್ಪಿಭಿಃ ಪಂಥಾಃ ಸಮಾನಿ ವಿಷಮಾಣಿ ಚ ।
ರಕ್ಷಿಣಶ್ಚಾನುಸಂಯಾಂತು ಪಥಿ ದುರ್ಗವಿಚಾರಕಾಃ ॥೧೩॥

ಮಾರ್ಗನಿರ್ಮಾಣಕಾರ್ಯದಲ್ಲಿ ನಿರ್ದೇಶಕರು ಮುಂದಾಗಿ ಹೋಗಿ ಅರಣ್ಯ-ದಲ್ಲಿ ಹಳ್ಳತಿಟ್ಟು ಪ್ರದೇಶಗಳನ್ನು ಸಮತಟ್ಟಾಗಿ ಮಾಡಿ ಮಾರ್ಗವನ್ನು ಸಿದ್ಧಪಡಿಸಲಿ. ಮಾರ್ಗಮಧ್ಯದಲ್ಲಿ ಅಲ್ಲಲ್ಲಿ ಕಳ್ಳಕಾಕರು ದುಷ್ಟ ಮೃಗಗಳು ಮುಂತಾದವರಿಂದ ದುರ್ಗಮವಾದ ಸೂಕ್ಷ್ಮ ಪ್ರದೇಶಗಳನ್ನು ಮೊದಲೇ ವಿಚಾರಮಾಡಿ ತಿಳಿಯಬಲ್ಲ ರಕ್ಷಕಭಟರು ಮುಂದಾಗಿ ಹೋಗಿರಲಿ.

ಏವಂ ಸಂಭಾಷಮಾಣಂ ತಂ ರಾಮಹೇತೋರ್ನೃಪಾತ್ಮಜಮ್ ।
ಪ್ರತ್ಯುವಾಚ ಜನಃ ಸರ್ವಃ ಶ್ರೀಮದ್ವಾಕ್ಯಮನುತ್ತಮಮ್ ॥೧೪॥

ರಾಮನನ್ನು ಕರೆತರುವುದಕ್ಕಾಗಿ ರಾಜಕುಮಾರ ಭರತನು ಹೀಗೆ ಶುಭಕರವಾದ ಉತ್ತಮವಾದ ಘೋಷಣೆ ಮಾಡಿದಾಗ ಎಲ್ಲ ಜನರು ಪ್ರತಿಯಾಗಿ ಶುಭಕರವಾದ ಉತ್ತಮ ಪ್ರಶಂಸೆಯ ಮಾತನ್ನಾಡಿದರು.

ಏವಂ ತೇ ಭಾಷಮಾಣಸ್ಯ ಪದ್ಮಾ ಶ್ರೀರುಪತಿಷ್ಠತಾಮ್ ।
ಯಸ್ತ್ವಂ ಜ್ಯೇಷ್ಠೇ ನೃಪಸುತೇ ಪೃಥಿವೀಂ ದಾತುಮಿಚ್ಛಸಿ ॥೧೫॥

'ಹಿರಿಯನಾದ ರಾಜಕುಮಾರನಿಗೆ ರಾಜ್ಯವನ್ನು ಬಿಟ್ಟುಕೊಡಲು ಬಯಸಿ ಹೀಗೆ ಘೋಷಣೆ ಮಾಡುತ್ತಿರುವ ನಿನ್ನಲ್ಲಿ ಪದ್ಮಾಲಯೆ ಮಹಾಲಕ್ಷ್ಮಿ ಸ್ಥಿರವಾಗಿ ನೆಲೆಸಲಿ'

ಅನುತ್ತಮಂ ತದ್ವಚನಂ ನೃಪಾತ್ಮಜ-
ಪ್ರಭಾಷಿತಂ ಸಂಶ್ರವಣೇ ನಿಶಮ್ಯ ಚ ।
ಪ್ರಹರ್ಷಜಾಸ್ತಂ ಪ್ರತಿ ಬಾಷ್ಪಬಿಂದವೋ
ನಿಪೇತುರಾರ್ಯಾನನನೇತ್ರಸಂಭವಾಃ ॥೧೬॥

ರಾಜಕುಮಾರ ಭರತನು ರಾಮಾಭಿಷೇಕ ಪ್ರತಿಜ್ಞೆಯ ವಿಷಯದಲ್ಲಿ ಆಡಿದ ಉತ್ತಮವಾದ ಆ ಘೋಷಣೆಯನ್ನು ಕೇಳಿದಾಗ ಆನಂದದಿಂದ ಅರಳಿದ ಸಜ್ಜನರ ಮುಖ ನೇತ್ರಗಳಿಂದ ಭರತನಿಗೆ ಅರ್ಪಿಸಲು ಬಾಷ್ಪಬಿಂದುಗಳು ಉದುರಿದುವು.

ಊಚುಸ್ತೇ ವಚನಮಿದಂ ನಿಶಮ್ಯ ಹೃಷ್ಟಾಃ
ಸಾಮಾತ್ಯಾಃ ಸಪರಿಷದೋ ವಿಯಾತಶೋಕಾಃ ।
ಪಂಥಾನಂ ನರವರ ಭಕ್ತಿಮಾನ್ ಜನಶ್ಚ
ವ್ಯಾದಿಷ್ಟಸ್ತವ ವಚನಾಚ್ಚ ಶಿಲ್ಪಿವರ್ಗಃ ॥೧೭॥

ಭರತನ ಈ ರಾಮಾಭಿಷೇಕ ಪ್ರತಿಜ್ಞೆಯನ್ನು ಕೇಳಿ ಹರ್ಷಗೊಂಡ ಅಂಗರಕ್ಷಕ ಮಂತ್ರಿಮಂಡಲ ಪ್ರಜಾವರ್ಗದವರೆಲ್ಲರೂ ಶೋಕರಹಿತರಾಗಿ ನುಡಿದರು— 'ಪುರುಷೋತ್ತಮನೆ ನೀನು ಹೇಳಿದಂತೇ ನಿಷ್ಠೆಉಳ್ಳ ಕಾರ್ಯನಿರ್ದೇಶಕ ವರ್ಗ-ದವರಿಗೂ ಕಾರ್ಯಕಾರಿ ಜನರಿಗೂ ಮಾರ್ಗನಿರ್ಮಾಣದ ಆದೇಶವನ್ನು ನೀಡಿದ್ದೇವೆ'.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಎಪ್ಪತ್ತೊಂಬತ್ತನೇ ಸರ್ಗ ಮುಗಿಯಿತು.

❖

ಅಶೀತಿತಮಃ ಸರ್ಗಃ

ಸರ್ಗ – 80

ಅಯೋಧ್ಯೆಯಿಂದ ಗಂಗಾನದಿವರೆಗೆ ಮಾರ್ಗವನ್ನು ಸರಿಪಡಿಸುವುದು.

ಅಥ ಭೂಮಿಪ್ರದೇಶಜ್ಞಾಃ ಸೂತ್ರಕರ್ಮವಿಶಾರದಾಃ ।
ಸ್ವಕರ್ಮಾಭಿರತಾಃ ಶೂರಾಃ ಖನಕಾ ಯಂತ್ರಕಾಸ್ತಥಾ ॥೧॥

ಕರ್ಮಾಂತಿಕಾಃ ಸ್ಥಪತಯಃ ಪುರುಷಾ ಯಂತ್ರಕೋವಿದಾಃ ।
ತಥಾ ವರ್ಧಕಯಶ್ಚೈವ ಮಾರ್ಗಿಣೋ ವೃಕ್ಷತಕ್ಷಕಾಃ ॥೨॥

ಕೂಪಕಾರಾಃ ಸುಧಾಕಾರಾ ವಂಶಕರ್ಮಕೃತಸ್ತಥಾ ।
ಸಮರ್ಥಾ ಯೇ ಚ ದ್ರಷ್ಟಾರಃ ಪುರತಸ್ತೇ ಪ್ರತಸ್ಥಿರೇ ॥೩॥

ಬಳಿಕ ಭೂಪ್ರದೇಶಗಳನ್ನು ಬಲ್ಲವರು ಹಗ್ಗದ ಮೂಲಕ ಭೂಮಿಯನ್ನು ಅಳೆಯುವುದರಲ್ಲಿ ನಿಪುಣರು ತಮ್ಮ ತಮ್ಮ ಕಾರ್ಯಗಳಲ್ಲಿ ಶ್ರದ್ಧೆ ಇರುವವರು ಶೂರರು ನೆಲ ಅಗೆಯುವವರು ಯಂತ್ರನಿರ್ಮಾಣ ಮಾಡುವವರು ಕೂಲಿಯಾಳು-ಗಳು, ಪ್ರಧಾನಶಿಲ್ಪಿಗಳು, ಯಂತ್ರಚಾಲಕರು, ಬಡಗಿಗಳು, ಮಾರ್ಗರಕ್ಷಕರೂ, ಮರ ಕಡಿಯುವವರು, ಬಾವಿ ತೋಡುವವರು, ಬಣ್ಣ ಬಳಿಯು ವವರು ಬಿದಿರಿನ ಕೆಲಸ-ದವರು ಎಲ್ಲ ಕಾರ್ಯಗಳ ಉಸ್ತುವಾರಿ ಮಾಡುವವರು ಎಲ್ಲರೂ ಮುಂದಾಗಿ ಹೊರಟರು.

ಸ ತು ಹರ್ಷಾತ್ತಮುದ್ದೇಶಂ ಜನೌಘೋ ವಿಪುಲಃ ಪ್ರಯಾನ್ ।
ಅಶೋಭತ ಮಹಾವೇಗಃ ಸಮುದ್ರ ಇವ ಪರ್ವಣಿ ॥೪॥

ಉತ್ಸಾಹದಿಂದ ಶ್ರೀರಾಮನ ದರ್ಶನಕ್ಕೆ ವೇಗವಾಗಿ ಹೊರಟ ಆ ಅಪಾರ ಜನಸಮೂಹವು ಪರ್ವಕಾಲದಲ್ಲಿ ಉಕ್ಕುವ ಸಮುದ್ರದಂತೆ ಶೋಭಿಸಿತು.

ತೇ ಸ್ವವಾರಂ ಸಮಾಸ್ಥಾಯ ವರ್ತ್ಮಕರ್ಮಣಿ ಕೋವಿದಾಃ ।
ಕರಣೈರ್ವಿವಿಧೋಪೇತೈಃ ಪುರಸ್ತಾತ್ ಸಂಪ್ರತಸ್ಥಿರೇ ॥೫॥

ಮಾರ್ಗನಿರ್ಮಾಣ ಕುಶಲರಾದ ಆ ಜನರು ತಮ್ಮಲ್ಲಿ ಪ್ರತ್ಯೇಕ ಗುಂಪು ಮಾಡಿ-ಕೊಂಡು ನಾನಾಬಗೆಯ ಸಲಕರಣೆಗಳನ್ನು ಹಿಡಿದುಕೊಂಡು ಮುಂದಾಗಿ ನಡೆದರು.

ಲತಾ ವಲ್ಲೀಶ್ಚ ಗುಲ್ಮಾಂಶ್ಚ ಸ್ಥಾಣೂನಶ್ಮನ ಏವ ಚ ।
ಜನಯಾಂಚಕ್ರಿರೇ ಮಾರ್ಗಂ ಛಿಂದಂತೋ ವಿವಿಧಾನ್ ದ್ರುಮಾನ್॥೬॥

ಮರದ ಕೊಂಬೆ ಬಳ್ಳಿ ಪೊದೆ ಮೋಟುಮರ ಕಲ್ಲುಬಂಡೆಗಳನ್ನೂ ನಾನಾ ಬಗೆಯ ಮರಗಳನ್ನೂ ಕಡಿದು ಮಾರ್ಗವನ್ನು ನಿರ್ಮಿಸಿದರು.

ಅವೃಕ್ಷೇಷು ಚ ದೇಶೇಷು ಕೇಚಿದ್‌ವೃಕ್ಷಾನರೋಪಯನ್ ।
ಕೇಚಿತ್ ಕುಠಾರೈಷ್ಟಂಕೈಶ್ಚ ದಾತ್ರೈಶ್ಛಿಂದನ್ ಕ್ವಚಿತ್ ಕ್ವಚಿತ್ ॥೭॥

ಮರಗಳಿಲ್ಲದ ಕಡೆ ಕೆಲವರು ಮರಗಳನ್ನು ನೆಟ್ಟರು. ಕೆಲವು ಕಡೆ ಕೆಲವರು ಕೊಡಲಿ ಉಳಿಗಳಿಂದ ಕಡಿದುಹಾಕಿದರು.

ಅಪರೇ ವೀರಣಸ್ತಂಬಾನ್ ಬಲಿನೋ ಬಲವತ್ತರಾಃ ।
ವಿಧಮಂತಿ ಸ್ಮ ದುರ್ಗಾಣಿ ಸ್ಥೂಲಾನಿ ಚ ತತಸ್ತತಃ ॥೮॥

ಬಲಿಷ್ಠರು ಇನ್ನು ಕೆಲವರು ಲಾಮಂಚಹುಲ್ಲಿನ ಗಟ್ಟಿ ಬೇರನ್ನು ಕಡಿದು ಹಾಕಿದರು. ಅಲ್ಲಲ್ಲಿ ದುರ್ಗಮವಾದ ಹಳ್ಳತಿಟ್ಟುಗಳನ್ನು ಸಮತಲವನ್ನಾಗಿ ಮಾಡಿದರು.

ಅಪರೇऽಪೂರಯನ್ ಕೂಪಾನ್ ಪಾಂಸುಭಿಃ ಶ್ವಭ್ರಮಾಯತಮ್ ।
ನಿಮ್ನಭಾಗಾಂಸ್ತತಃ ಕೇಚಿತ್ ಸಮಾಂಶ್ಚಕ್ರುಃ ಸಮಂತತಃ ॥೯॥

ಕೆಲವರು ನೀರಿಲ್ಲದ ಬಾವಿಗಳನ್ನು ವಿಸ್ತಾರವಾದ ಹಳ್ಳಗಳನ್ನು ಮಣ್ಣಿನಿಂದ ತುಂಬಿಸಿದರು. ಎಲ್ಲೆಡೆ ತಗ್ಗಾದ ಪ್ರದೇಶಗಳನ್ನು ಕೆಲವರು ಸಮತಲವಾಗಿ ಮಾಡಿದರು.

ಬಬಂಧುರ್ಬಂಧನೀಯಾಂಶ್ಚ ಕ್ಷೋದ್ಯಾನ್ ಸಂಚುಕ್ಷುದುಸ್ತದಾ ।
ಬಿಭಿದುರ್ಭೇದನೀಯಾಂಶ್ಚ ತಾಂಸ್ತಾನ್ ದೇಶಾನ್ನರಾಸ್ತದಾ ॥೧೦॥

ನದೀಪ್ರವಾಹಗಳಿಗೆ ಸೇತುವೆ ಕಟ್ಟಿದರು. ಕಲ್ಲುಬಂಡೆಗಳನ್ನು ಒಡೆದುಹಾಕಿದರು. ಕೊರೆಯಬೇಕಾದ ಆಯಾ ಗುಡ್ಡಗಳಿರುವಲ್ಲಿ ಕೊರೆದು ಸುರಂಗ ಮಾಡಿದರು.

ಅಚಿರೇಣೈವ ಕಾಲೇನ ಪರಿವಾಹಾನ್ ಬಹೂದಕಾನ್ ।
ಚಕ್ರುರ್ಬಹುವಿಧಾಕಾರಾನ್ ಸಾಗರಪ್ರತಿಮಾನ್ ಬಹೂನ್ ॥೧೧॥

ನದಿಗಳಿಗೆ ಅಣೆಕಟ್ಟುಕಟ್ಟಿ ಹೆಚ್ಚು ನೀರು ನಿಲ್ಲುವಂತೆ ಮಾಡಿ ನಾನಾ ಆಕಾರದಲ್ಲಿ ಸಾಗರದಂಥ ಬಹು ನೆರೆ ಬರುವಂತೆ ಮಾಡಿದರು.

ನಿರ್ಜಲೇಷು ಚ ದೇಶೇಷು ಖಾನಯಾಮಾಸುರುತ್ತಮಾನ್ ।
ಉದಪಾನಾನ್ ಬಹುವಿಧಾನ್ ವೇದಿಕಾಪರಿಮಂಡಿತಾನ್ ॥೧೨॥

ನೀರಿಲ್ಲದ ಪ್ರದೇಶಗಳಲ್ಲಿ ಉತ್ತಮವಾದ ನಾನಾವಿಧವಾದ ಬಾವಿಗಳನ್ನು ತೋಡಿಸಿ ಸುತ್ತಲೂ ವೇದಿಕೆಗಳನ್ನು ನಿರ್ಮಿಸಿದರು.

ಸ ಸುಧಾಕುಟ್ಟಿಮತಲಃ ಪ್ರಪುಷ್ಪಿತಮಹೀರುಹಃ ।
ಮತ್ತೋದ್ಘುಷ್ಟದ್ವಿಜಗಣಃ ಪತಾಕಾಭಿರಲಂಕೃತಃ ॥೧೩॥

ಚಂದನೋದಕಸಂಸಿಕ್ತೋ ನಾನಾಕುಸುಮಭೂಷಿತಃ ।
ಬಹ್ವಶೋಭತ ಸೇನಾಯಾಃ ಪಂಥಾಃ ಸುರಪಥೋಪಮಃ ॥೧೪॥

ಹಾದಿಯುದ್ದಕ್ಕೂ ಗಚ್ಚುಹಾಕಿ ಇಕ್ಕೆಲಗಳಲ್ಲಿ ಹೂವಿನ ಮರಗಳನ್ನು ನೆಡಿಸಿದರು. ಮದದಿಂದ ಹಾಡುವ ಹಕ್ಕಿಗಳ ಹಿಂಡುಗಳಿಂದಲೂ ಪತಾಕೆಗಳಿಂದಲೂ ನಾನಾ ಪುಷ್ಪಗಳಿಂದಲೂ ಗಂಧೋದಕ ಸಾರಣೆಗಳಿಂದಲೂ ಸೈನ್ಯದ ಮಾರ್ಗದೇವತೆಗಳ ಮಾರ್ಗದಂತೆ ಬಹುವಾಗಿ ಶೋಭಿಸಿತು.

ಆಜ್ಞಾಪ್ಯಾಥ ಯಥಾಜ್ಞಪ್ತಿ ಯುಕ್ತಾಸ್ತೇऽಧಿಕೃತಾ ನರಾಃ ।
ರಮಣೀಯೇಷು ದೇಶೇಷು ಬಹುಸ್ವಾದುಫಲೇಷು ಚ ॥೧೫॥

ಯೋ ನಿವೇಶಸ್ತ್ವಭಿಮತೋ ಭರತಸ್ಯ ಮಹಾತ್ಮನಃ ।
ಭೂಯಸ್ತಂ ಶೋಭಯಾಮಾಸುರ್ಭೂಷಾಭಿರ್ಭೂಷಣೋಪಮಂ ॥

ಬಳಿಕ ರಮಣೀಯ ಪ್ರದೇಶಗಳಲ್ಲಿ ಬಲು ಸ್ವಾದುವಾದ ಹಣ್ಣುಹಂಪಲು-ಗಳಿರುವಲ್ಲಿ ಮಹಾತ್ಮ ಭರತನಿಗೆ ಇಷ್ಟವಾಗಬಲ್ಲ ವಿಶ್ರಾಂತಿಗೃಹವನ್ನೂ ಆ ಕಾರ್ಯಕ್ಕೆ ಅಧಿಕೃತರಾದ ಜನರು ಶಿಲ್ಪಿಗಳಂತೆ ನಿರ್ಮಾಣ ಮಾಡಿಸಿ ಭೂಷಣಗಳಿಂದ ಸಿಂಗರಿಸಿ, ಭೂಷಣದಂತೆ ತೋರುವ ಆ ಗೃಹವನ್ನು ಇನ್ನೂ ಹೆಚ್ಚು ಶೋಭಿಸುವಂತೆ ಮಾಡಿದರು.

ನಕ್ಷತ್ರೇಷು ಪ್ರಶಸ್ತೇಷು ಮುಹೂರ್ತೇಷು ಚ ತದ್ವಿದಃ ।
ನಿವೇಶಾನ್ ಸ್ಥಾಪಯಾಮಾಸುರ್ಭರತಸ್ಯ ಮಹಾತ್ಮನಃ ॥೧೭॥

ಪ್ರಶಸ್ತವಾದ ನಕ್ಷತ್ರಗಳಲ್ಲಿ ಮುಹೂರ್ತಗಳಲ್ಲಿ ತಜ್ಞರು ಮಹಾತ್ಮ ಭರತನಿಗೆ ದಾರಿಯಲ್ಲಿ ವಿಶ್ರಾಂತಿ ಗೃಹಗಳನ್ನು ಸ್ಥಾಪಿಸಿದರು.

ಬಹುಪಾಂಸುಚಯಾಶ್ಚಾಪಿ ಪರಿಖಾಪರಿವಾರಿತಾಃ ।
ತತ್ರೇಂದ್ರಕೀಲಪ್ರತಿಮಾಃ ಪ್ರತೋಲೀವರಶೋಭಿತಾಃ ॥೧೮॥

ವಿಶ್ರಾಂತಿ ಗೃಹಗಳಿಗೆ ಸುತ್ತಲೂ ಕಂದಕಗಳನ್ನು ನಿರ್ಮಿಸಿದರು. ಅವುಗಳ ಒಳ ಭಾಗದಲ್ಲಿ ಹಸನಾದ ಮಳಲುಮಣ್ಣಿನ ನೆಲವಿರುವಂತೆ ಮಾಡಿದರು. ರಾಜಮಾರ್ಗ-

ಗಳಿಂದ ಅಲಂಕರಿಸಿದರು. ಇಂದ್ರಕೀಲ ಬೆಟ್ಟದಂತೆ ಉನ್ನತವಾಗಿ ಆ ವಿಶ್ರಾಂತಿ-ಗೃಹಗಳು ಶೋಭಿಸಿದುವು.

ಪ್ರಾಸಾದಮಾಲಾ ವಿತತಾಃ ಸೌಧಪ್ರಾಕಾರಸಂವೃತಾಃ ।
ಪತಾಕಾಶೋಭಿತಾಃ ಸರ್ವೇ ಸುನಿರ್ಮಿತಮಹಾಪಥಾಃ ॥೧೯॥

ಏಳು ಮಾಳಿಗೆಗಳ ಮನೆಗಳ ಸಾಲುಗಳು ಅರಮನೆ ಪ್ರಾಕಾರಗಳು ಅಲ್ಲಿ ತುಂಬಿದುವು. ಒಳಗಡೆ ರಾಜಮಾರ್ಗಗಳು ನಿರ್ಮಿತವಾದುವು. ಎಲ್ಲ ಮನೆಗಳೂ ಪತಾಕೆಗಳಿಂದ ಶೋಭಿಸಿದುವು.

ವಿತರ್ದಿಭಿರಿವಾಕಾಶೇ ವಿಟಂಕಾಗ್ರವಿಮಾನಕೈಃ ।
ಸಮುಚ್ಛ್ರಿತೈರ್ನಿವೇಶಾಸ್ತೇ ಬಭುಃ ಶಕ್ರಪುರೋಪಮಾಃ ॥೨೦॥

ಆಕಾಶಗೋಪುರಗಳಂಥ ಪಾರಿವಾಳದ ಗೂಡುಗಳಿಂದ ಯುಕ್ತವಾದ ಉನ್ನತ-ವಾದ ಮನೆಗಳಿಂದ ಆ ವಿಶ್ರಾಂತಿಧಾಮಗಳು ಇಂದ್ರನ ಅಮರಾವತಿಯಂತೆ ಕಂಗೊಳಿಸಿದುವು.

ಜಾಹ್ನವೀಂ ತು ಸಮಾಸಾದ್ಯ ವಿವಿಧದ್ರುಮಕಾನನಾಮ್ ।
ಶೀತಲಾಮಲಪಾನೀಯಾಂ ಮಹಾಮೀನಸಮಾಕುಲಾಮ್ ॥೨೧॥

ನಾನಾ ವಿಧವಾದ ವೃಕ್ಷಗಳ ಅರಣ್ಯಗಳಿಂದಲೂ ತಂಪಾದ ನಿರ್ಮಲ ಜಲ-ದಿಂದಲೂ ದೊಡ್ಡ ಮೀನುಗಳಿಂದಲೂ ತುಂಬಿದ ಗಂಗಾನದೀ ತೀರದವರೆಗೂ ಮಾರ್ಗವು ನಿರ್ಮಿತವಾಯಿತು.

ಸಚಂದ್ರತಾರಾಗಣಮಂಡಿತಂ ಯಥಾ
ನಭಃ ಕ್ಷಪಾಯಾಮಮಲಂ ವಿರಾಜತೇ ।
ನರೇಂದ್ರಮಾರ್ಗಃ ಸ ತಥಾ ವ್ಯರಾಜತ
ಕ್ರಮೇಣ ರಮ್ಯಃ ಶುಭಶಿಲ್ಪಿನಿರ್ಮಿತಃ ॥೨೨॥

ಚಂದ್ರ ಮತ್ತು ನಕ್ಷತ್ರ ಪುಂಜಗಳಿಂದ ಅಲಂಕೃತವಾಗಿ ರಾತ್ರಿಯಲ್ಲಿ ನಿರ್ಮಲ-ವಾದ ಆಕಾಶವು ಹೇಗೆ ಶೋಭಿಸುವುದೋ ಹಾಗೇ ಒಳ್ಳೆಯ ಶಿಲ್ಪಿಗಳಿಂದ ಕ್ರಮೇಣ ನಿರ್ಮಿತವಾದ ರಮ್ಯವಾದ ಆ ರಾಜಮಾರ್ಗವು ಶೋಭಿಸಿತು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಎಂಬತ್ತನೇ ಸರ್ಗ ಮುಗಿಯಿತು.

ಏಕಾಶೀತಿತಮಃ ಸರ್ಗಃ

ಸರ್ಗ – 81

ವಸಿಷ್ಠರು ರಾಜಸಭೆಗೆ ಬಂದು ಭರತನನ್ನು ಕರೆಸುವುದು.

ತತೋ ನಾಂದೀಮುಖೀಂ ರಾತ್ರಿಂ ಭರತಂ ಸೂತಮಾಗಧಾಃ ।
ತುಷ್ಟುವುರ್ವಾಗ್ವಿಶೇಷಜ್ಞಾಃ ಸ್ತವೈರ್ಮಂಗಲಸಂಹಿತೈಃ ॥೧॥

ರಾಜಸ್ತುತ್ಯುಪಕ್ರಮಕ್ಕೆ ಯೋಗ್ಯವಾದ ರಾತ್ರಿಕಾಲದಲ್ಲಿ, ಅಂದರೆ ನಸುಕಿನಲ್ಲಿ, ಹಾಡಲು ಚೆನ್ನಾಗಿ ಬಲ್ಲ ಸೂತ ಮಾರ್ಗರು ಮಂಗಳಾಶೀರ್ವಾದಯುಕ್ತವಾದ ಸ್ತುತಿಗಳಿಂದ ಭರತನ ಗುಣಗಾನವನ್ನು ಮಾಡಲು ತೊಡಗಿದರು.

ಸುವರ್ಣಕೋಣಾಭಿಹತಃ ಪ್ರಾಣದದ್ಯಾಮದುಂದುಭಿಃ ।
ದಧ್ಮುಃ ಶಂಖಾಂಶ್ಚ ಶತಶೋ ವಾದ್ಯಾಂಶ್ಚೋಚ್ಚಾವಚಸ್ವರಾನ್ ॥೨॥

ಬಂಗಾರದ ಕೋಲಿನಿಂದ ಯಾಮದ ಕೊನೆಯಲ್ಲಿ ಬಾರಿಸಿದ ದುಂದುಭಿ, ನಗಾರಿಯು ಶಬ್ದಮಾಡಿತು. ಶಂಖಗಳನ್ನು ಊದಿದರು ಸಣ್ಣದೊಡ್ಡ ಸ್ವರಗಳ ನೂರಾರು ವಾದ್ಯಗಳನ್ನೂ ನುಡಿಸಿದರು.

ಸ ತೂರ್ಯಘೋಷಃ ಸುಮಹಾನ್ ದಿವಮಾಪೂರಯನ್ನಿವ ।
ಭರತಂ ಶೋಕಸಂತಪ್ತಂ ಭೂಯಃ ಶೋಕೈರರಂಧಯತ್ ॥೩॥

ಅಂತರಿಕ್ಷವನ್ನು ತುಂಬುವಂತಿದ್ದ ಬಲು ದೊಡ್ಡದಾದ ಆ ವಾದ್ಯಘೋಷವು ಮೊದಲೇ ಶೋಕದಿಂದ ಬೇಯುತ್ತಿದ್ದ ಭರತನನ್ನು ಇನ್ನೂ ಹೆಚ್ಚಿನ ಶೋಕದಿಂದ ಬೇಯುವಂತೆ ಮಾಡಿತು.

ತತಃ ಪ್ರಬುದ್ಧೋ ಭರತಸ್ತಂ ಘೋಷಂ ಸಂನಿವರ್ತ್ಯ ಚ ।
ನಾಹಂ ರಾಜೇತಿ ಚಾಪ್ಯುಕ್ತ್ವಾ ಶತ್ರುಘ್ನಮಿದಮಬ್ರವೀತ್ ॥೪॥

ಭರತನು ಎಚ್ಚೆತ್ತು ಆ ಘೋಷವನ್ನು ನಿಲ್ಲಿಸಿದ. 'ನಾನು ರಾಜನಲ್ಲ' ಎಂದ. ಶತ್ರುಘ್ನನಿಗೆ ಹೀಗೆ ಹೇಳಿದ.

ಪಶ್ಯ ಶತ್ರುಘ್ನ ಕೈಕೇಯ್ಯಾ ಲೋಕಸ್ಯಾಪಕೃತಂ ಮಹತ್ ।
ವಿಸೃಜ್ಯ ಮಯಿ ದುಃಖಾನಿ ರಾಜಾ ದಶರಥೋ ಗತಃ ॥೫॥

ನೋಡು ಶತ್ರುಘ್ನ, ಕೈಕೇಯಿ ಲೋಕಕ್ಕೆ ಎಂಥ ದೊಡ್ಡ ಅಪಕಾರ ಮಾಡಿದ್ದಾಳೆ! ನನ್ನ ಪಾಲಿಗೆ ದುಃಖಗಳನ್ನು ಬಿಟ್ಟು ರಾಜಾ ದಶರಥ ಹೊರಟು ಹೋಗಿದ್ದಾನೆ.

ತಸ್ಯೈಷಾ ಧರ್ಮರಾಜಸ್ಯ ಧರ್ಮಮೂಲಾ ಮಹಾತ್ಮನಃ ।
ಪರಿಭ್ರಮತಿ ರಾಜಶ್ರೀರ್ನೌರಿವಾಕರ್ಣಿಕಾ ಜಲೇ ॥೬॥

ಆ ಮಹಾತ್ಮ ಧರ್ಮರಾಜನ ಧರ್ಮಮೂಲವಾದ ರಾಜಶ್ರೀಯು ನೀರಿನಲ್ಲಿ ನಾವಿಕನಿಲ್ಲದ ನೌಕೆಯಂತೆ ಗುರಿ ಇಲ್ಲದೆ ಸುತ್ತುತ್ತಿದೆ.

ಯೋ ಹಿ ನಃ ಸುಮಹಾನ್ನಾಥಃ ಸೋಽಪಿ ಪ್ರವ್ರಾಜಿತೋ ವನಮ್ ।
ಅನಯಾ ಧರ್ಮಮುತ್ಸೃಜ್ಯ ಮಾತ್ರಾ ಮೇ ರಾಘವಃ ಸ್ವಯಮ್ ॥೭॥

ಯಾರು ನಮಗೆ ಬಲುದೊಡ್ಡ ಆಸರೆಯಾಗಿರುವನೋ ಆ ರಾಮನನ್ನು ಕೂಡ ಧರ್ಮವನ್ನು ತೊರೆದ ನನ್ನ ಈ ತಾಯಿ ವನಕ್ಕೆ ಅಟ್ಟಿಬಿಟ್ಟಳು.

ಇತ್ಯೇವಂ ಭರತಂ ಪ್ರೇಕ್ಷ್ಯ ವಿಲಪಂತಂ ವಿಚೇತನಮ್ ।
ಕೃಪಣಂ ರುರುದುಃ ಸರ್ವಾಃ ಸಸ್ವರಂ ಯೋಷಿತಸ್ತದಾ ॥೮॥

ಹೀಗೆ ಭರತನು ಮೈಮರೆತು ವಿಲಾಪಮಾಡುವುದನ್ನು ಕಂಡು ಅಂತಃಪುರ ನಾರಿಯರೆಲ್ಲರೂ ದುಃಖದಿಂದ ದೊಡ್ಡಧ್ವನಿಯಿಂದ ಅಳಲು ತೊಡಗಿದರು.

ತಥಾ ತಸ್ಮಿನ್ ವಿಲಪತಿ ವಸಿಷ್ಠೋ ರಾಜಧರ್ಮವಿತ್ ।
ಸಭಾಮಿಕ್ಷ್ವಾಕುನಾಥಸ್ಯ ಪ್ರವಿವೇಶ ಮಹಾಯಶಾಃ ॥೯॥

ಹೀಗೆ ಅರಮನೆಯಲ್ಲಿ ಭರತನು ವಿಲಾಪ ಮಾಡುತ್ತಿದ್ದಾಗ ಅತ್ತ ಮಹಾಯಶಸ್ವಿ ರಾಜಧರ್ಮಜ್ಞರಾದ ವಸಿಷ್ಠರು ಇಕ್ಷ್ವಾಕುಕುಲನಾಥನ ಆಸ್ಥಾನ ಮಂಡಪವನ್ನು ಪ್ರವೇಶಿಸಿದರು.

ಶಾತಕುಂಭಮಯೀಂ ರಮ್ಯಾಂ ಮಣಿರತ್ನಸಮಾಕುಲಾಮ್ ।
ಸುಧರ್ಮಾಮಿವ ಧರ್ಮಾತ್ಮಾ ಸಗಣಃ ಪ್ರತ್ಯಪದ್ಯತ ॥೧೦॥

ಬಂಗಾರದಿಂದ ನಿರ್ಮಿತವಾದ ಮಣಿರತ್ನಗಳಿಂದ ಅಲಂಕೃತವಾದ ದೇವೇಂದ್ರನ 'ಸುಧರ್ಮ' ಎಂಬ ರಾಜಸಭೆಯಂಥ ರಮ್ಯವಾದ ಆಸ್ಥಾನ ಮಂಡಪ ವನ್ನು ಧರ್ಮಾತ್ಮರಾದ ವಸಿಷ್ಠರು ಪರಿವಾರದೊಂದಿಗೆ ಪ್ರವೇಶಿಸಿದರು.

ಸ ಕಾಂಚನಮಯಂ ಪೀಠಂ ಪರಾರ್ಧ್ಯಾಸ್ತರಣಾವೃತಮ್ ।
ಅಧ್ಯಾಸ್ತ ಸರ್ವವೇದಜ್ಞೋ ದೂತಾನನುಶಶಾಸ ಚ ॥೧೧॥

ಶ್ರೇಷ್ಠವಾದ ರತ್ನಗಂಬಳಿ ಹಾಸಿದ ಸುವರ್ಣಮಯ ಪೀಠದಲ್ಲಿ ಸರ್ವವೇದಜ್ಞ-ರಾದ ವಸಿಷ್ಠರು ಕುಳಿತು ದೂತರಿಗೆ ಆಜ್ಞೆಮಾಡಿದರು.

ಬ್ರಾಹ್ಮಣಾನ್ ಕ್ಷತ್ರಿಯಾನ್ ವೈಶ್ಯಾನಮಾತ್ಯಾನ್ ಗಣವಲ್ಲಭಾನ್ ।
ಕ್ಷಿಪ್ರಮಾನಯತಾವ್ಯಗ್ರಾಃ ಕೃತ್ಯಮಾತ್ಯಯಿಕಂ ಹಿ ನಃ ॥೧೨॥

ಬ್ರಾಹ್ಮಣ ಕ್ಷತ್ರಿಯ ವೈಶ್ಯ ಪ್ರಮುಖರನ್ನೂ ಅಮಾತ್ಯರನ್ನೂ ಸೇನಾಪ್ರಮುಖ-ರನ್ನೂ ಏಕಾಗ್ರತೆಯಿಂದ ಬೇಗನೆ ಕರೆತನ್ನಿ. ನಮಗೆ ಬೇಗನೆ ಮಾಡಬೇಕಾದ ಕಾರ್ಯವಿದೆ.

ಸರಾಜಭೃತ್ಯಂ ಶತ್ರುಘ್ನಂ ಭರತಂ ಚ ಯಶಸ್ವಿನಮ್ ।
ಯುಧಾಜಿತಂ ಸುಮಂತ್ರಂ ಚ ಯೇ ಚ ತತ್ರ ಹಿತಾ ಜನಾಃ ॥೧೩॥

ರಾಜನ ಅಂತರಂಗ ಭೃತ್ಯರೊಂದಿಗೆ ಶತ್ರುಘ್ನನನ್ನೂ ಯಶಸ್ವಿಯಾದ ಭರತನನ್ನೂ ಯುಧಾಜಿತನೆಂಬ ಮಂತ್ರಿಯನ್ನೂ ಸುಮಂತ್ರನನ್ನೂ ಮತ್ತು ಎಲ್ಲ ಹಿತೈಷಿಗಳನ್ನೂ ಕರೆತನ್ನಿ.

ತತೋ ಹಲಹಲಾಶಬ್ದಃ ಸುಮಹಾನ್ ಸಮಪದ್ಯತ ।
ರಥೈರಶ್ವೈರ್ಗಜೈಶ್ಚಾಪಿ ಜನಾನಾಮುಪಗಚ್ಛತಾಮ್ ॥೧೪॥

ಒಡನೆ ರಥ ಅಶ್ವ ಗಜಗಳನ್ನೇರಿ ಜನರು ಬರುವ ದೊಡ್ಡ ಕೋಲಾಹಲಶಬ್ದ ಉಂಟಾಯಿತು.

ತತೋ ಭರತಮಾಯಾಂತಂ ಶತಕ್ರತುಮಿವಾಮರಾಃ ।
ಪ್ರತ್ಯನಂದನ್ ಪ್ರಕೃತಯೋ ಯಥಾ ದಶರಥಂ ತಥಾ ॥೧೫॥

ಹಿಂದೆ ದಶರಥನು ಬರುವಾಗ ಪ್ರಜೆಗಳು ಹೇಗೆ ಅಭಿನಂದಿಸುತ್ತಿದ್ದರೋ ಹಾಗೆ, ದೇವೇಂದ್ರ ಬರುವಾಗ ದೇವತೆಗಳು ಅಭಿನಂದಿಸುವಂತೆ, ಭರತನು ಬರುವಾಗ ಪ್ರಜೆಗಳು ಅಭಿನಂದಿಸಿದರು.

ಹ್ರದ ಇವ ತಿಮಿನಾಗಸಂವೃತಃ ಸ್ತಿಮಿತಜಲೋ ಮಣಿಶಂಖಶರ್ಕರಃ ।
ದಶರಥಸುತಶೋಭಿತಾ ಸಭಾ ಸದಶರಥೇವ ಬಭೌ ಯಥಾ ಪುರಾ ॥

ತಿಮಿಂಗಿಲ ನೀರಾನೆಗಳಿಂದ ಮಣಿಶಂಖ ಮಳಲುಗಳಿಂದ ಯುಕ್ತವಾದ ಸ್ತಿಮಿತವಾದ ಜಲ ಉಳ್ಳ ಸಮುದ್ರದಂತೆ, ದಶರಥಸುತನಾದ ಭರತನಿಂದ ಯುಕ್ತವಾದ ಸಭೆಯು ಹಿಂದೆ ದಶರಥನಿಂದ ಯುಕ್ತವಾಗಿ ಹೇಗೋ ಹಾಗೇ ಶೋಭಿಸಿತು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಎಂಬತ್ತೊಂದನೇ ಸರ್ಗ ಮುಗಿಯಿತು.

❖

ದ್ವ್ಯಶೀತಿತಮಃ ಸರ್ಗಃ

ಸರ್ಗ – 82

ವನಕ್ಕೆ ಹೊರಡಲು ಸಿದ್ಧವಾಗಬೇಕೆಂದು ಭರತನು ಸೇನೆಗೆ ಆಜ್ಞಾಪಿಸುವುದು.

ತಾಮಾರ್ಯಗಣಸಂಪೂರ್ಣಾಂ ಭರತಃ ಪ್ರಗ್ರಹಾಂ ಸಭಾಮ್।
ದದರ್ಶ ಬುದ್ಧಿಸಂಪನ್ನಃ ಪೂರ್ಣಚಂದ್ರೋ ನಿಶಾಮಿವ ॥೧॥

ಆರ್ಯ ಜನಸಮೂಹದಿಂದ ತುಂಬಿದ, ವಸಿಷ್ಠಾದಿ ಮಹರ್ಷಿಗಳು ಪರಿಗ್ರಹಿಸಿದ ಆ ರಾಜಸಭೆಯನ್ನು ಬುದ್ಧಿಸಂಪನ್ನನಾದ ಭರತನು ಕಂಡ, ರಾತ್ರಿಯನ್ನು ಪೂರ್ಣಚಂದ್ರನು ಕಾಣುವಂತೆ.

ಆಸನಾನಿ ಯಥಾನ್ಯಾಯಮಾರ್ಯಾಣಾಂ ವಿಶತಾಂ ತದಾ ।
ವಸ್ತ್ರಾಂಗರಾಗಪ್ರಭಯಾ ದ್ಯೋತಿತಾ ಸಾ ಸಭೋತ್ತಮಾ ॥೨॥

ಸಭೆಯನ್ನು ಪ್ರವೇಶಿಸುವ ಆರ್ಯರಿಗೆ ಯಥಾಯೋಗ್ಯವಾಗಿ ಆಸನಗಳ ಏರ್ಪಾಡಾಗಿತ್ತು. ಅವರು ಧರಿಸಿದ್ದ ವಸ್ತ್ರ ಅಂಗರಾಗಗಳ ಪ್ರಭೆಯಿಂದ ಉತ್ತಮ ಸಭೆ ಬೆಳಗಿತು.

ಸಾ ವಿದ್ವಜ್ಜನಸಂಪೂರ್ಣಾ ಸಭಾ ಸುರುಚಿರಾ ತದಾ ।
ಅದೃಶ್ಯತ ಘನಾಪಾಯೇ ಪೂರ್ಣಚಂದ್ರೇವ ಶರ್ವರೀ ॥೩॥

ಶರತ್ಕಾಲದಲ್ಲಿ ಪೂರ್ಣಚಂದ್ರಯುಕ್ತವಾದ ರಾತ್ರಿ ಕಂಗೊಳಿಸುವಂತೆ ವಿದ್ವಾಂಸರಾದ ಜನರಿಂದ ತುಂಬಿದ್ದು ಆ ಸಭೆ ಕಂಗೊಳಿಸಿತು.

ರಾಜ್ಞಸ್ತು ಪ್ರಕೃತೀಃ ಸರ್ವಾಃ ಸಮಗ್ರಾಃ ಪ್ರೇಕ್ಷ್ಯ ಧರ್ಮವಿತ್ ।
ಇದಂ ಪುರೋಹಿತೋ ವಾಕ್ಯಂ ಭರತಂ ಮೃದು ಚಾಬ್ರವೀತ್ ॥೪॥

ರಾಜನ ಪ್ರಜೆಗಳೆಲ್ಲರನ್ನೂ ಸಮಗ್ರವಾಗಿ ನೋಡುತ್ತ ಧರ್ಮಜ್ಞರಾದ ವಸಿಷ್ಠರು ಭರತನಿಗೆ ನಯವಾಗಿ ನುಡಿದರು.

ತಾತ ರಾಜಾ ದಶರಥಃ ಸ್ವರ್ಗತೋ ಧರ್ಮಮಾಚರನ್ ।
ಧನಧಾನ್ಯವತೀಂ ಸ್ಫೀತಾಂ ಪ್ರದಾಯ ಪೃಥಿವೀಂ ತವ ॥೫॥

ಮಗು, ರಾಜಾ ದಶರಥನು ಧರ್ಮವನ್ನಾಚರಿಸುತ್ತ ಧನಧಾನ್ಯಯುಕ್ತವಾದ ಸಮೃದ್ಧವಾದ ಪೃಥಿವಿಯನ್ನು ನಿನಗೆ ನೀಡಿ ಸ್ವರ್ಗಸ್ಥನಾಗಿದ್ದಾನೆ.

ರಾಮಸ್ತಥಾ ಸತ್ಯಧೃತಿಃ ಸತಾಂ ಧರ್ಮಮನುಸ್ಮರನ್ ।
ನಾಜಹಾತ್ ಪಿತುರಾದೇಶಂ ಶಶೀ ಜ್ಯೋತ್ಸ್ನಾಮಿವೋದಿತಃ ॥೬॥

ಹಾಗೆ ಧೃತಿಗೆಡದ ರಾಮನೂ ಸಜ್ಜನರ ಧರ್ಮವನ್ನು ಅನುಸರಿಸಿ, ಉದಿಸಿದ ಚಂದ್ರನು ಬೆಳದಿಂಗಳನ್ನು ಬಿಡದಿರುವಂತೆ, ಪಿತೃವಾಕ್ಯವನ್ನು ತ್ಯಜಿಸದೆ ಅನುಷ್ಠಾನ ಮಾಡುತ್ತಿದ್ದನು.

ಪಿತ್ರಾ ಭ್ರಾತ್ರಾ ಚ ತೇ ದತ್ತಂ ರಾಜ್ಯಂ ನಿಹತಕಂಟಕಮ್ ।
ತದ್ಭುಂಕ್ಷ್ವ ಮುದಿತಾಮಾತ್ಯಃ ಕ್ಷಿಪ್ರಮೇವಾಭಿಷೇಚಯ ॥೭॥

ಪಿತನೂ ಸೋದರನೂ ನಿನಗೆ ನಿಷ್ಕಂಟಕವಾದ ರಾಜ್ಯವನ್ನು ಕೊಟ್ಟಿದ್ದಾರೆ. ಸಂತುಷ್ಟರಾದ ಆ ಅಮಾತ್ಯರೊಂದಿಗೆ ರಾಜ್ಯವನ್ನು ನೀನು ಅನುಭವಿಸು. ಬೇಗನೆ ಅಭಿಷೇಕಮಾಡಿಸಿಕೊಳ್ಳು.

ಉದೀಚ್ಯಾಶ್ಚ ಪ್ರತೀಚ್ಯಾಶ್ಚ ದಾಕ್ಷಿಣಾತ್ಯಾಶ್ಚ ಕೇವಲಾಃ ।
ಕೋಟ್ಯಾಪರಾಂತಾಃ ಸಾಮುದ್ರಾ ರತ್ನಾನ್ಯಭಿಹರಂತು ತೇ ॥೮॥

ಉತ್ತರ ಪಶ್ಚಿಮ ದಕ್ಷಿಣ ದೇಶಗಳ ಸಾಮಂತರಾಜರೂ ಸಿಂಹಾಸನ ರಹಿತರಾದ ದ್ವೀಪವಾಸಿಗಳೂ ಸಮುದ್ರವ್ಯಾಪಾರಿಗಳೂ ಕೋಟಿ ಸಂಖ್ಯೆಯಲ್ಲಿ ರತ್ನಗಳನ್ನು ಕಪ್ಪವಾಗಿ ನೀಡಲಿ.

ತಚ್ಛ್ರುತ್ವಾ ಭರತೋ ವಾಕ್ಯಂ ಶೋಕೇನಾಭಿಪರಿಪ್ಲುತಃ ।
ಜಗಾಮ ಮನಸಾ ರಾಮಂ ಧರ್ಮಜ್ಞೋ ಧರ್ಮಕಾಂಕ್ಷಯಾ ॥೯॥

ವಸಿಷ್ಠರ ಈ ಮಾತನ್ನು ಕೇಳಿ ಭರತನು ಶೋಕದಲ್ಲಿ ಮುಳುಗಿದ. ಧರ್ಮಜ್ಞ-ನಾದ ಆತ ಧರ್ಮದ ಆಕಾಂಕ್ಷೆಯಿಂದ ಮನಸಿನಲ್ಲಿ ರಾಮನನ್ನು ಸ್ಮರಿಸಿದ.

ಸ ಬಾಷ್ಪಕಲಯಾ ವಾಚಾ ಕಲಹಂಸಸ್ವರೋ ಯುವಾ ।
ವಿಲಲಾಪ ಸಭಾಮಧ್ಯೇ ಜಗರ್ಹೇ ಚ ಪುರೋಹಿತಮ್ ॥೧೦॥

ಕಲಹಂಸದಂಥ ಸ್ವರಉಳ್ಳ ಕುಮಾರ ಭರತನು ಕಣ್ಣೀರಿಂದ ಗದ್ಗದಗೊಂಡು ಸಭಾಮಧ್ಯದಲ್ಲಿ ವಿಲಾಪಮಾಡಿದ. ಗುರು ವಸಿಷ್ಠರನ್ನೂ ಆಕ್ಷೇಪಿಸಿದ.

ಚರಿತಬ್ರಹ್ಮಚರ್ಯಸ್ಯ ವಿದ್ಯಾಸ್ನಾತಸ್ಯ ಧೀಮತಃ ।
ಧರ್ಮೇ ಪ್ರಯತಮಾನಸ್ಯ ಕೋ ರಾಜ್ಯಂ ಮದ್ವಿಧೋ ಹರೇತ್ ॥೧೧॥

ರಾಮ ಗುರುಕುಲದಲ್ಲಿ ಬ್ರಹ್ಮಚರ್ಯವನ್ನಾಚರಿಸಿ ವಿದ್ಯೆಗಳಲ್ಲಿ ಸ್ನಾತಕನಾಗಿ ಧೀಮಂತನಾಗಿ ಧರ್ಮವನ್ನು ಆಚರಿಸಲು ಪ್ರಯತ್ನ ಮಾಡುತ್ತಿರುವಾಗ ಅವನ ರಾಜ್ಯವನ್ನು ನನ್ನಂಥವನು ಯಾರು ತಾನೆ ಅಪಹರಿಸುತ್ತಾನೆ?

ಕಥಂ ದಶರಥಾಜ್ಜಾತೋ ಭವೇದ್ರಾಜ್ಯಾಪಹಾರಕಃ ।
ರಾಜ್ಯಂ ಚಾಹಂ ಚ ರಾಮಸ್ಯ ಧರ್ಮಂ ವಕ್ತುಮಿಹಾರ್ಹಸಿ ॥೧೨॥

ದಶರಥನ ಮಗನಾಗಿ ಹುಟ್ಟಿದವನು ಹೇಗೆ ರಾಜ್ಯಾಪಹಾರಕನಾಗುತ್ತಾನೆ? ರಾಜ್ಯವು ರಾಮನ ಸೊತ್ತು, ನಾನೂ ಅವನ ದಾಸ. ಗುರುಗಳು ತಾವು ಧರ್ಮವನ್ನು ಆದೇಶಿಸಬೇಕು, ಅಧರ್ಮವನ್ನಲ್ಲ.

ಜ್ಯೇಷ್ಠಃ ಶ್ರೇಷ್ಠಶ್ಚ ಧರ್ಮಾತ್ಮಾ ದಿಲೀಪನಹುಷೋಪಮಃ ।
ಲಬ್ಧುಮರ್ಹತಿ ಕಾಕುತ್ಸ್ಥೋ ರಾಜ್ಯಂ ದಶರಥೋ ಯಥಾ ॥೧೩॥

ರಾಮನು ಜ್ಯೇಷ್ಠ, ಶ್ರೇಷ್ಠ ಧರ್ಮಾತ್ಮ, ದಿಲೀಪ ನಹುಷರಂಥವನು, ದಶರಥನಂತೇ ರಾಮನು ರಾಜ್ಯವನ್ನು ಹೊಂದಲು ಅರ್ಹನಾಗಿರುವನು.

ಅನಾರ್ಯಜುಷ್ಟಮಸ್ವರ್ಗ್ಯಂ ಕುರ್ಯಾಂ ಪಾಪಮಹಂ ಯದಿ ।
ಇಕ್ಷ್ವಾಕೂಣಾಮಹಂ ಲೋಕೇ ಭವೇಯಂ ಕುಲಪಾಂಸನಃ ॥೧೪॥

ಋಷಿಮುನಿಗಳು ಯಾರೂ ಒಲ್ಲದ, ಸ್ವರ್ಗವನ್ನು ತಾರದ ಪಾಪವನ್ನು ನಾನೇನಾದರೂ ಮಾಡಿದೆನಾದರೆ ಲೋಕದಲ್ಲಿ ನಾನು ಇಕ್ಷ್ವಾಕು ಕುಲಕ್ಕೇ ಕಳಂಕನೆನಿಸುವೆನು.

ಯದ್ಧಿ ಮಾತ್ರಾ ಕೃತಂ ಪಾಪಂ ನಾಹಂ ತದಪಿ ರೋಚಯೇ ।
ಇಹಸ್ಥೋ ವನದುರ್ಗಸ್ಥಂ ನಮಸ್ಯಾಮಿ ಕೃತಾಂಜಲಿಃ ॥೧೫॥

ಇದು ತಾಯಿಮಾಡಿದ ಪಾಪ. ನನಗೆ ಅದು ಸಮ್ಮತವಲ್ಲ. ನಾನೀಗ ಇಲ್ಲಿ ಇದ್ದರೂ ಅಲ್ಲಿ ದುರ್ಗಮವಾದ ಅರಣ್ಯದಲ್ಲಿರುವ ರಾಮನಿಗೆ ಕೈಮುಗಿದು ಕ್ಷಮೆಯಾಚಿಸುತ್ತಿದ್ದೇನೆ.

ರಾಮಮೇವಾನುಗಚ್ಛಾಮಿ ಸ ರಾಜಾ ದ್ವಿಪದಾಂ ವರಃ ।
ತ್ರಯಾಣಾಮಪಿ ಲೋಕಾನಾಂ ರಾಜ್ಯಮರ್ಹತಿ ರಾಘವಃ ॥೧೬॥

ನಾನು ರಾಮನನ್ನೇ ಹಿಂಬಾಲಿಸಿ ಹೋಗುತ್ತೇನೆ. ಪುರುಷಶ್ರೇಷ್ಠನಾದ ಅವನೇ ರಾಜ. ಮೂಲೋಕಗಳಿಗೂ ರಾಜನಾಗಲು ಅವನು ಸಮರ್ಥ.

ತದಾಖ್ಯಂ ಧರ್ಮಸಂಯುಕ್ತಂ ಶ್ರುತ್ವಾ ಸರ್ವೇ ಸಭಾಸದಃ ।
ಹರ್ಷಾನ್ಮುಮುಚುರಶ್ರೂಣಿ ರಾಮೇ ನಿಹಿತಚೇತಸಃ ॥೧೭॥

ರಾಮನಲ್ಲೇ ಮನಸ್ಸಿಟ್ಟಿದ್ದ ಭರತನ ಧರ್ಮಸಂಮತವಾದ ಈ ಮಾತನ್ನು ಕೇಳಿದಾಗ ಸಭಾಸದರೆಲ್ಲರೂ ಹರ್ಷದಿಂದ ಕಣ್ಣೀರು ಸುರಿಸಿದರು.

ಯದಿ ತ್ವಾರ್ಯಂ ನ ಶಕ್ಷ್ಯಾಮಿ ವಿನಿವರ್ತಯಿತುಂ ವನಾತ್ ।
ವನೇ ತತ್ರೈವ ವತ್ಸ್ಯಾಮಿ ಯಥಾರ್ಯೋ ಲಕ್ಷ್ಮಣಸ್ತಥಾ ॥೧೮॥

ಭರತನು ಇನ್ನೂ ಹೇಳುತ್ತಾನೆ, ಆರ್ಯರಾಮನನ್ನು ಕಾಡಿನಿಂದ ಹಿಂದಿರುಗುವಂತೆ ಮಾಡುವಲ್ಲಿ ನಾನು ವಿಫಲನಾದರೆ ನಾನೂ ಕೂಡ ಆರ್ಯರಾಮನಂತೇ ಮತ್ತು ಲಕ್ಷ್ಮಣನಂತೇ ಕಾಡಿನಲ್ಲಿಯೇ ವಾಸಮಾಡುತ್ತೇನೆ.

ಸರ್ವೋಪಾಯಂ ಚ ವರ್ತಿಷ್ಯೇ ವಿನಿವರ್ತಯಿತುಂ ವನಾತ್ ।
ಸಮಕ್ಷಮಾರ್ಯಮಿಶ್ರಾಣಾಂ ಸಾಧೂನಾಂ ಗುಣವರ್ತಿನಾಮ್ ॥೧೯॥

ರಾಮನನ್ನು ಹಿಂದಿರುಗುವಂತೆ ಮಾಡಲು ಸಾಧ್ಯವಿರುವ ಎಲ್ಲ ಉಪಾಯಗಳನ್ನೂ ನಾನು ಗೌರವಾನ್ವಿತ ಋಷಿಮುನಿಗಳ ಮತ್ತು ಗುಣಪಕ್ಷಪಾತಿಗಳಾದ ಸಾಧುಗಳ ನಿಮ್ಮೆಲ್ಲರ ಸಮ್ಮುಖದಲ್ಲಿಯೇ ಮಾಡುವೆನು.

ವಿಷ್ಟಿಕರ್ಮಾಂತಿಕಾಃ ಸರ್ವೇ ಮಾರ್ಗಶೋಧಕದಕ್ಷಕಾಃ ।
ಪ್ರಸ್ಥಾಪಿತಾ ಮಯಾ ಪೂರ್ವಂ ಯಾತ್ರಾ ಚ ಮಮ ರೋಚತೇ ॥೨೦॥

ಮಾರ್ಗವನ್ನು ಸಜ್ಜುಗೊಳಿಸಲು ಸಮರ್ಥರಾದ, ಉಚಿತವಾಗಿ ಇಲ್ಲವೇ ಕೂಲಿ ಪಡೆದು ಕಾರ್ಯಮಾಡುವವರೆಲ್ಲರನ್ನೂ ಈ ಹಿಂದೆಯೆ ಕಳಿಸಿದ್ದೇನೆ. ಆ ಮಾರ್ಗದಿಂದ ರಾಮನ ಬಳಿಗೆ ಯಾತ್ರೆ ಹೋಗುವುದೇ ನನಗೆ ಇಷ್ಟವಾಗಿದೆ.

ಏವಮುಕ್ತ್ವಾ ತು ಧರ್ಮಾತ್ಮಾ ಭರತೋ ಭ್ರಾತೃವತ್ಸಲಃ ।
ಸಮೀಪಸ್ಥಮುವಾಚೇದಂ ಸುಮಂತ್ರಂ ಮಂತ್ರಕೋವಿದಮ್ ॥೨೧॥

ಹೀಗೆ ಸೋದರ ಪ್ರೇಮಿಯಾದ ಧರ್ಮಾತ್ಮ ಭರತನು ಸಮೀಪದಲ್ಲಿದ್ದ ಮಂತ್ರಾಲೋಚನೆಯಲ್ಲಿ ಕುಶಲನಾದ ಸುಮಂತ್ರನಿಗೆ ನುಡಿದ.

ತೂರ್ಣಮುತ್ಥಾಯ ಗಚ್ಛ ತ್ವಂ ಸುಮಂತ್ರ ಮಮ ಶಾಸನಾತ್ ।
ಯಾತ್ರಾಮಾಜ್ಞಾಪಯ ಕ್ಷಿಪ್ರಂ ಬಲಂ ಚೈವ ಸಮಾನಯ ॥೨೨॥

ಸುಮಂತ್ರ ನೀನು ಬೇಗನೆ ಎದ್ದು ಹೋಗು, ನನ್ನಾಜ್ಞೆಯಾಗಿದೆ ಎಂದು ಯಾತ್ರೆಗೆ ಹೊರಡಲು ಆದೇಶವನನು ನೀಡು, ಬೇಗನೆ ಸೈನ್ಯವನ್ನು ಯಾತ್ರೆಗೆ ಕರೆತಾ.

ಏವಮುಕ್ತಃ ಸುಮಂತ್ರಸ್ತು ಭರತೇನ ಮಹಾತ್ಮನಾ ।
ಪ್ರಹೃಷ್ಟಃ ಸೋಽದಿಶತ್ ಸರ್ವಂ ಯಥಾಸಂದಿಷ್ಟಮಿಷ್ಟವತ್ ॥೨೩॥

ಹೀಗೆ ಮಹಾತ್ಮ ಭರತ ಹೇಳಿದಾಗ ಭರತನಿಗಿಷ್ಟನಾದ ಸುಮಂತ್ರನು ಬಹಳ ಹರ್ಷಗೊಂಡು ಭರತನು ಆಜ್ಞೆ ಮಾಡಿದಂತೆಯೇ ಎಲ್ಲವನ್ನೂ ಆದೇಶಿಸಿದ.

ತಾಃ ಪ್ರಹೃಷ್ಟಾಃ ಪ್ರಕೃತಯೋ ಬಲಾಧ್ಯಕ್ಷಾ ಬಲಸ್ಯ ಚ ।
ಶ್ರುತ್ವಾ ಯಾತ್ರಾಂ ಸಮಾಜ್ಞಪ್ತಾಂ ರಾಘವಸ್ಯ ನಿರ್ವತನೇ ॥೨೪॥

ರಾಮನನ್ನು ವನದಿಂದ ಹಿಂತಿರುಗಿಸಲು ಹೋಗಬೇಕೆಂದು ಭರತ ಆಜ್ಞೆ ಮಾಡಿದ್ದನ್ನು ಕೇಳಿದಾಗ ಪ್ರಜೆಗಳೂ ಸೇನಾಧ್ಯಕ್ಷರೂ ಸೈನ್ಯಗಳೂ ಎಲ್ಲರು ಪರಮ ಸಂತುಷ್ಟರಾದರು.

ತತೋ ಯೋಧಾಂಗನಾಃ ಸರ್ವಾ ಭರ್ತೄನ್ ಸರ್ವಾನ್ ಗೃಹೇ ಗೃಹೇ ।
ಯಾತ್ರಾಗಮನಮಾಜ್ಞಾಯ ತ್ವರಯಂತಿ ಸ್ಮ ಹರ್ಷಿತಾಃ ॥೨೫॥

ಯೋಧರ ಪತ್ನಿಯರು ಕೂಡ ಎಲ್ಲರೂ ಮನೆ ಮನೆಗಳಲ್ಲಿ ಯಾತ್ರೆಗೆ ಹೋಗುವ ಕಾರ್ಯಕ್ರಮವನ್ನು ತಿಳಿದು ತಮ್ಮ ಪತಿಗಳನ್ನು ಉತ್ಸಾಹದಿಂದ ಬೇಗನೆ ಹೊರಡಲು ಅವಸರಪಡಿಸಿದರು.

ತೇ ಹಯೈರ್ಗೋರಥೈಃ ಶೀಘ್ರೈಃ ಸ್ಯಂದನೈಶ್ಚ ಮಹಾಜವೈಃ ।
ಸಹ ಯೋಧೈರ್ಬಲಾಧ್ಯಕ್ಷಾ ಬಲಂ ಸರ್ವಮಚೋದಯನ್ ॥೨೬॥

ವೇಗವಾಗಿ ಓಡುವ ಕುದುರೆಗಳ ಮೇಲೆ, ಎತ್ತಿನಗಾಡಿಗಳ ಮೇಲೆ, ರಥಗಳ ಮೇಲೆ ಕುಳಿತು ಸೇನಾಪ್ರಮುಖರು ಯೋಧರೊಂದಿಗೆ ಸಮಸ್ತ ಸೈನ್ಯವನ್ನು ಹೊರಡಿಸಿದರು.

ಸಜ್ಜಂ ತು ತದ್ಬಲಂ ದೃಷ್ಟ್ವಾ ಭರತೋ ಗುರುಸನ್ನಿಧೌ ।
ರಥಂ ಮೇ ತ್ವರಯಸ್ವೇತಿ ಸುಮಂತ್ರಂ ಪಾರ್ಶ್ವತೋಽಬ್ರವೀತ್ ॥೨೭॥

ಹೀಗೆ ಸೈನ್ಯವು ಪ್ರಯಾಣಕ್ಕೆ ಸಜ್ಜಾಗಿ ನಿಂತುದನ್ನು ಕಂಡು ಭರತನು ಗುರ್ವಜ್ಞೆಗಾಗಿ ಗುರು ವಸಿಷ್ಠರ ಸನ್ನಿಧಿಯಲ್ಲಿ ಪಾರ್ಶ್ವದಲ್ಲಿ ನಿಂತಿದ್ದ ಸುಮಂತ್ರನಿಗೆ 'ನನ್ನ ರಥವನ್ನು ಬೇಗನೆ ತಾ' ಎಂದು ಆದೇಶಿಸಿದನು.

'ಗುರುವಸಿಷ್ಠರ ಸನ್ನಿಧಿಯಲ್ಲಿ' ನಿಂತು ಭರತನು ವನಯಾತ್ರೆಯನ್ನು ಪ್ರಾರಂಭಿಸಿದ್ದು ಅವರ ಅನುಜ್ಞೆಗಾಗಿ. ಗುರುಗಣೇಶರನ್ನು ಪೂಜಿಸಿ ಅವರ ಸನ್ನಿಧಿಯಲ್ಲಿ ಕರ್ಮಮಾಡಿದರೇ ಅದು ಸಫಲವಾಗುವುದು ಎಂದು.

'ಜಗರ್ಹೇ ಚ ಪುರೋಹಿತಂ' ಪುರೋಹಿತರನ್ನು ಅವನು ಆಕ್ಷೇಪಿಸಿದ ನೆಂ'ದರೆ ಇದು ಮೇಲುನೋಟಕ್ಕೆ ಆಕ್ಷೇಪವಾದರೂ ನಿಜವಾಗಿ ಆಕ್ಷೇಪವಲ್ಲ. ಗುರುವೂ ಅಧರ್ಮವನ್ನು ಆದೇಶಿಸಲಿಲ್ಲ. ಪರೀಕ್ಷೆಗಾಗಿ 'ಅಭಿಷೇಕ ಮಾಡಿಸಿಕೊಳ್ಳು' ಎಂದಿದ್ದರು. ಅರ್ಜುನನು ಯುದ್ಧಸನ್ನದ್ಧನಾಗಿ ಕುರುಕ್ಷೇತ್ರಕ್ಕೆ ಬಂದಿದ್ದರೂ ಕೊನೆಗಳಿಗೆಯಲ್ಲಿ ಯುದ್ಧಸನ್ಯಾಸಕ್ಕೆ ತೊಡಗಿದ. ಹಾಗೇ ಭರತನೂ ರಾಮಾಭಿಷೇಕಕ್ಕೆ ಸನ್ನದ್ಧನಾಗಿ ಹೊರಟರೂ ಕೊನೆಗಳಿಗೆಯಲ್ಲಿ ಧರ್ಮಕ್ಕೆ ವಿರುದ್ಧವಾಗಿ ತಾನು ಅಭಿಷೇಕ ಮಾಡಿಸಿಕೊಳ್ಳಲು ಬಯಸಲೂಬಹುದು, ನೋಡೋಣ, ಎಂದು ವಸಿಷ್ಠರು ಅಭಿಷೇಕಕ್ಕೆ ಸಮ್ಮತಿ ಮಾತ್ರ ಕೊಟ್ಟಿದ್ದರು. ಆಜ್ಞೆ ಮಾಡಿರಲಿಲ್ಲ. ಏಕೆಂದರೆ ದಶರಥನು ರಾಜ್ಯವನ್ನು ಭರತನಿಗೆ ಕೊಟ್ಟಿರಲಿಲ್ಲ. ಅವನು ಸ್ವೀಕರಿಸಿದರೆ ನನ್ನ ಅಪರಕರ್ಮಕ್ಕೆ ಅವನು ಅಧಿಕಾರವನ್ನೇ ಕಳೆದುಕೊಳ್ಳುವನೆಂದು ಸ್ಪಷ್ಟ ಹೇಳಿ ಸತ್ತಿದ್ದ. ರಾಮನೂ ರಾಜ್ಯವನ್ನು ಭರತನಿಗೆ ಬಿಟ್ಟುಕೊಟ್ಟು ಕಾಡಿಗೆ ಹೋಗಿರಲಿಲ್ಲ. ಕೇವಲ ತಾತ್ಕಾಲಿಕವಾಗಿ ಪಿತೃವಾಕ್ಯ ಪರಿಪಾಲನೆಗಾಗಿ ಹೊರಟಿದ್ದ. 'ಮುಂದೆ ತಾನು ರಾಜ್ಯವಾಳುವೆನೆ'ಂದೂ ಮುಂದೆ ಹೇಳುತ್ತಾನೆ. ಅದರಿಂದ ಭರತನು ಪರಿವಿತ್ತಿ-ಯಾಗಿ ಅಭಿಷೇಕ ಮಾಡಿಸಿಕೊಂಡಿದ್ದರೆ ಅದು ಮಹಾ ಅಧರ್ಮವಾಗುತ್ತಿತ್ತು. ಮಾಡುವ ಗುರುವಸಿಷ್ಠರಿಗೇ ದೋಷ ಬರುತ್ತಿತ್ತು!

ಇದನ್ನು ಭರತ ಅಳುತ್ತಲೇ ದುಃಖದಿಂದ ಹೇಳಿಕೊಂಡು ಗುರುಗಳು ಮಾಡಿದ ಪರೀಕ್ಷೆಯಲ್ಲಿ ಬಹಳ ಯಶಸ್ವಿಯಾಗಿ ತೇರ್ಗಡೆ ಹೊಂದಿದ್ದಾನೆ. ಆ ಮೂಲಕ 'ಶಿಷ್ಯಾದಿಚ್ಛೇತ್ ಪರಾಜಯಂ' ಎಂಬಂತೆ ಪರಾಜಯವನ್ನೇ ಬಯಸಿದ್ದ ಗುರುಗಳಿಗೆ ಪೂಜೆ ಮಾಡಿಯೇ ವನಯಾತ್ರೆಗೆ ಹೊರಟಿದ್ದಾನೆ ಭರತ. ಮುಂದೆ ವಸಿಷ್ಠರು ರಾಮನನ್ನೂ ಬಹಳವಾಗಿ ಪರೀಕ್ಷೆ ಮಾಡುತ್ತಾರೆ. ಅದರಲ್ಲಿಯೂ ಗುರು ಸೋಲನ್ನು ಸಂತೋಷದಿಂದ ಒಪ್ಪಿಕೊಳ್ಳುತ್ತಾರೆ. 'ಭರತನಿಗೆ ನಿನ್ನ ಪಾದುಕೆಗಳನ್ನು ಕೊಡು' ಎನ್ನುತ್ತಾರೆ. ರಾಮನೂ ಮುಂದೆ ಭರತನಿಗೆ ಪರೀಕ್ಷೆಗಾಗಿಯೇ 'ಅಭಿಷೇಕ ಮಾಡಿಸಿಕೊಳ್ಳೆಂ'ದು ಸಮ್ಮತಿ ಮಾತ್ರ ನೀಡುತ್ತಾನೆ. ಆಜ್ಞೆ ಮಾಡುವುದಿಲ್ಲ. ಆಜ್ಞೆ ಮಾಡಿದ್ದರೆ ಭರತ ಹರಿಯಾಜ್ಞೆಯನ್ನು ಉಲ್ಲಂಘಿಸಿದಂತಾಗುತ್ತಿತ್ತು.

ಭರತಸ್ಯ ತು ತಸ್ಯಾಜ್ಞಾಂ ಪ್ರತಿಗೃಹ್ಯ ಪ್ರಹರ್ಷಿತಃ ।
ರಥಂ ಗೃಹೀತ್ವಾ ಪ್ರಯಯೌ ಯುಕ್ತಂ ಪರಮವಾಜಿಭಿಃ ॥೨೮॥

ಸುಮಂತ್ರನು ಭರತನ ಆಜ್ಞೆಯನ್ನು ಸ್ವೀಕರಿಸಿ ಬಹಳ ಉತ್ಸಾಹದಿಂದ ಒಳ್ಳೆಯ ಕುದುರೆಗಳಿಂದ ಯುಕ್ತವಾದ ರಥವನ್ನು ಹಿಡಿದುಕೊಂಡು ಭರತನ ಬಳಿಗೆ ಬಂದ.

ಸ ರಾಘವಃ ಸತ್ಯಧೃತಿಃ ಪ್ರತಾಪವಾನ್
ಬ್ರುವನ್ ಸುಯುಕ್ತಂ ದೃಢಸತ್ಯವಿಕ್ರಮಃ ।
ಗುರುಂ ಮಹಾರಣ್ಯಗತಂ ಯಶಸ್ವಿನಂ
ಪ್ರಸಾದಯಿಷ್ಯನ್ ಭರತೋಽಬ್ರವೀತ್ತದಾ ॥೨೯॥

ಸತ್ಯಧರ್ಮದಿಂದ ವಿಚಲಿತನಾಗದ ಪ್ರತಾಪಶಾಲಿಯಾದ ದೃಢವಾದ ಸತ್ಯ-ಪರಾಕ್ರಮಉಳ್ಳ ಭರತನು ಗುರು ವಸಿಷ್ಠರ ಮುಂದೆ ತಾನು ವನಯಾತ್ರೆಗೆ ಹೊರಡುತ್ತಿದ್ದೇನೆ ಎಂದು ಯುಕ್ತಿಯುಕ್ತವಾಗಿ ಹೇಳುತ್ತ ಅದಕ್ಕೆ ಅನುಜ್ಞೆಯನ್ನು ಬೇಡುತ್ತ ಮುಂದೆ ಮಹಾರಣ್ಯದಲ್ಲಿ ವಾಸಮಾಡುತ್ತಿದ್ದ ಗುರು ಶ್ರೀರಾಮನನ್ನು ಒಲಿಸಿಕೊಳ್ಳುವ ಉದ್ದೇಶದಿಂದ ಭರತನು ಸುಮಂತ್ರನಿಗೆ ನುಡಿದ.

ತೂರ್ಣಂ ಸಮುತ್ಥಾಯ ಸುಮಂತ್ರ ಗಚ್ಛ
ಬಲಸ್ಯ ಯೋಗಾಯ ಬಲಪ್ರಧಾನಾನ್ ।
ಆನೇತುಮಿಚ್ಛಾಮಿ ಹಿ ತಂ ವನಸ್ಥಂ
ಪ್ರಸಾದ್ಯ ರಾಮಂ ಜಗತೋ ಹಿತಾಯ ॥೩೦॥

'ಸುಮಂತ್ರ, ಸೈನ್ಯವನ್ನು ಸಜ್ಜುಗೊಳಿಸಿರೆಂದು ಸೇನಾಪ್ರಮುಖರನ್ನು ಆಜ್ಞಾಪಿಸಲು ನೀನು ಬೇಗನೆ ಎದ್ದು ಹೊರಡು. ನಾನು ವನದಲ್ಲಿರುವ ರಾಮನನ್ನು ಜಗತ್ತಿನ ಹಿತಕ್ಕಾಗಿ ಒಲಿಸಿಕೊಂಡು ಅಯೋಧ್ಯೆಗೆ ಕರೆತರಲು ಬಯಸುತ್ತೇನೆ' ಎಂದು.

ಸ ಸೂತಪುತ್ರೋ ಭರತೇನ ಸಮ್ಯ-
ಗಾಜ್ಞಾಪಿತಃ ಸಂಪರಿಪೂರ್ಣಕಾಮಃ ।
ಶಶಾಸ ಸರ್ವಾನ್ ಪ್ರಕೃತಿಪ್ರಧಾನಾನ್
ಬಲಸ್ಯ ಮುಖ್ಯಾಂಶ್ಚ ಸುಹೃಜ್ಜನಂ ಚ ॥೩೧॥

ಭರತನಿಂದ ಆಜ್ಞೆಯನ್ನು ಪಡೆದಾಗ ಸುಮಂತ್ರನಿಗೆ ತನ್ನ ಮನೋರಥ ಪೂರ್ತಿಯಾಗಿ ಕೈಗೂಡಿದಂತಾಯಿತು. ಅವನು ಜನಪ್ರತಿನಿಧಿಗಳಿಗೂ ಸೇನಾ ಪ್ರಮುಖರಿಗೂ ಬಂಧುಜನರಿಗೂ ಭರತನು ಮಾಡಿದ ಆಜ್ಞೆಯನ್ನು ತಿಳಿಸಿದನು.

ತತಃ ಸಮುತ್ಥಾಯ ಕುಲೇ ಕುಲೇ ತೇ
ರಾಜನ್ಯವೈಶ್ಯಾ ವೃಷಲಾಶ್ಚ ವಿಪ್ರಾಃ ।
ಅಯೂಯುಜನ್ನುಷ್ಟ್ರರಥಾನ್ ಖರಾಂಶ್ಚ
ನಾಗಾನ್ ಹಯಾಂಶ್ಚೈವ ಕುಲಪ್ರಸೂತಾನ್ ॥೩೨॥

ಆಗ ಮನೆಮನೆಗಳಲ್ಲಿ ಕ್ಷತ್ರಿಯರು ವೈಶ್ಯರು ಶೂದ್ರರು ಬ್ರಾಹ್ಮಣರು ಎಲ್ಲರೂ ಹೊರಟು ಉತ್ತಮಜಾತಿಯ ಒಂಟೆ ಕತ್ತೆ ಆನೆ ಕುದುರೆ ರಥಗಳನ್ನು ಪ್ರಯಾಣಕ್ಕೆ ಸಜ್ಜುಗೊಳಿಸಿದರು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಎಂಬತ್ತೆರಡನೇ ಸರ್ಗ ಮುಗಿಯಿತು.

❖

ತ್ರ್ಯಶೀತಿತಮಃ ಸರ್ಗಃ

ಸರ್ಗ – 83

ಭರತನು ಗಂಗಾತೀರವನ್ನು ಸೇರುವುದು

ತತಃ ಸಮುತ್ಥಿತಃ ಕಲ್ಯಮಾಸ್ಥಾಯ ಸ್ಯಂದನೋತ್ತಮಮ್ ।
ಪ್ರಯಯೌ ಭರತಃ ಶೀಘ್ರಂ ರಾಮದರ್ಶನಕಾಂಕ್ಷಯಾ ॥೧॥

ಬಳಿಕ ಮರುದಿನ ಬೆಳಿಗ್ಗೆ ಎದ್ದು ಪ್ರಾತರಾಹ್ನಿಕಗಳನ್ನು ಮುಗಿಸಿ ಭರತನು ರಾಮನ ದರ್ಶನದಾಸೆಯಿಂದ ಉತ್ತಮವಾದ ರಥವನ್ನೇರಿ ವೇಗವಾಗಿ ಹೊರಟ.

ಅಗ್ರತಃ ಪ್ರಯಯುಸ್ತಸ್ಯ ಸರ್ವೇ ಮಂತ್ರಿಪುರೋಧಸಃ ।
ಅಧಿರುಹ್ಯ ಹಯೈರ್ಯುಕ್ತಾನ್ ರಥಾನ್ ಸೂರ್ಯರಥೋಪಮಾನ್ ॥

ಅವನಿಗೆ ಮುಂದೆ ಮಂತ್ರಿಗಳು ಪುರೋಹಿತರೆಲ್ಲರೂ ಕುದುರೆಗಳಿಂದ ಯುಕ್ತವಾದ ಸೂರ್ಯರಥದಂಥ ರಥಗಳನ್ನೇರಿ ಹೊರಟರು.

ನವನಾಗಸಹಸ್ರಾಣಿ ಕಲ್ಪಿತಾನಿ ಯಥಾವಿಧಿ ।
ಅನ್ವಯುರ್ಭರತಂ ಯಾಂತಮಿಕ್ಷ್ವಾಕುಕುಲನಂದನಮ್ ॥೩॥

ಇಕ್ಷ್ವಾಕು ಕುಲನಂದನನಾದ ಭರತನು ಹೊರಟಾಗ ಯಥಾವಿಧಿ ಸಜ್ಜಾದ ಒಂಬತ್ತು ಸಾವಿರ ಆನೆಗಳು ಹಿಂಬಾಲಿಸಿದುವು.

ಷಷ್ಟೀ ರಥಸಹಸ್ರಾಣಿ ಧನ್ವಿನೋ ವಿವಿಧಾಯುಧಾಃ ।
ಅನ್ವಯುರ್ಭರತಂ ಯಾಂತಂ ರಾಜಪುತ್ರಂ ಯಶಸ್ವಿನಮ್ ॥೪॥

ಅರವತ್ತು ಸಾವಿರ ರಥಗಳೂ ಧನುರ್ಧಾರಿಗಳೂ ನಾನಾ ಆಯುಧ ಧರಿಸಿ ದವರೂ ಯಶಸ್ವಿಯಾದ ರಾಜಕುಮಾರ ಭರತನು ಹೊರಟಾಗ ಹಿಂಬಾಲಿಸಿದರು.

ಶತಂ ಸಹಸ್ರಾಣ್ಯಶ್ವಾನಾಂ ಸಮಾರೂಢಾನಿ ರಾಘವಮ್।
ಅನ್ವಯುರ್ಭರತಂ ಯಾಂತಂ ಸತ್ಯಸಂಧಂ ಜಿತೇಂದ್ರಿಯಮ್ ॥೫॥

ಒಂದು ಲಕ್ಷ ಅಶ್ವ ಸೈನಿಕರು ಸತ್ಯಸಂಧನಾದ ಜಿತೇಂದ್ರಿಯನಾದ ಭರತನು ಹೊರಟಾಗ ಹಿಂಬಾಲಿಸಿದರು.

ಕೈಕೇಯೀ ಚ ಸುಮಿತ್ರಾ ಚ ಕೌಸಲ್ಯಾ ಚ ಯಶಸ್ವಿನೀ ।
ರಾಮಾನಯನಸಂಹೃಷ್ಟಾ ಯಯುರ್ಯಾನೇನ ಭಾಸ್ವತಾ ॥೬॥

ಕೈಕೇಯಿಯೂ ಸುಮಿತ್ರೆಯೂ ಯಶಸ್ವಿಯಾದ ಕೌಸಲ್ಯೆಯೂ ರಾಮನನ್ನು ಕರೆತರುವ ಉತ್ಸಾಹದಿಂದ ಹೊಳೆಯುವ ವಾಹನವೇರಿ ಹೊರಟರು.

ಭರತನು ಮಾತಿನಿಂದ ಪುನಃಪುನಃ ಶಿಕ್ಷೆ ಕೊಟ್ಟಾಗ ಕೈಕೇಯಿಯಲ್ಲಿದ್ದ ಅಸುರಾವೇಶ ಕಳೆಯಿತು. ಪಶ್ಚಾತ್ತಾಪ ಮೂಡಿತು. ಮೂವರೂ ರಾಣಿಯರು 'ರಾಮಾನಯನ ಸಂಹೃಷ್ಟ'ರಾದರು. ಜೊತೆಗೆ ನಡೆದರು. 'ಕೌಸಲ್ಯಾ ಚ ಸುಮಿತ್ರಾ ಚ ಕೈಕೇಯಿ ಚ' ಎನ್ನದೆ, 'ಕೈಕೇಯಿ ಚ ಸುಮಿತ್ರಾ ಚ ಕೌಸಲ್ಯಾ ಚ' ಎಂದು ಕ್ರಮವೇ ವ್ಯತ್ಯಾಸ ಮಾಡಿದ್ದೂ ಇದನ್ನು ಸೂಚಿಸುತ್ತದೆ.

ಪ್ರಯಾತಾಶ್ಚಾರ್ಯಸಂಘಾತಾ ರಾಮಂ ದ್ರಷ್ಟುಂ ಸಲಕ್ಷ್ಮಣಮ್ ।
ತಸ್ಯೈವ ಚ ಕಥಾಶ್ಚಿತ್ರಾಃ ಕುರ್ವಾಣಾ ಹೃಷ್ಟಮಾನಸಾಃ ॥೭॥

ಋಷಿಗಳ ಸಮೂಹಗಳು ಕೂಡ ರಾಮಲಕ್ಷ್ಮಣರನ್ನು ಕಾಣಲು ಹೃಷ್ಟಮನಸಿನಿಂದ ಅವರ ಬಗ್ಗೆಯೆ ಸುಂದರವಾದ ಕಥೆಗಳನ್ನು ಹೇಳಿಕೊಳ್ಳುತ್ತ ಹೊರಟರು.

ಮೇಘಶ್ಯಾಮಂ ಮಹಾಬಾಹುಂ ಸ್ಥಿರಸತ್ತ್ವಂ ದೃಢವ್ರತಮ್ ।
ಕದಾ ದ್ರಕ್ಷ್ಯಾಮಹೇ ರಾಮಂ ಜಗತಃ ಶೋಕನಾಶನಮ್ ॥೮॥

ಮೇಘಶ್ಯಾಮ, ಮಹಾಬಾಹು, ಸ್ಥಿರವಾದ ಸತ್ವಉಳ್ಳವನು ದೃಢವಾದ ವ್ರತನಿಷ್ಠೆ ಉಳ್ಳವನು ಜಗತ್ತಿನ ಶೋಕವನ್ನು ಕಳೆವವನು ಇಂಥ ರಾಮನನ್ನು ನಾವು ಎಂದು ನೋಡುವೆವು!

ದೃಷ್ಟ ಏವ ಹಿ ನಃ ಶೋಕಮಪನೇಷ್ಯತಿ ರಾಘವಃ ।
ತಮಃ ಸರ್ವಸ್ಯ ಲೋಕಸ್ಯ ಸಮುದ್ಯನ್ನಿವ ಭಾಸ್ಕರಃ ॥೯॥

ದರ್ಶನ ಮಾತ್ರದಿಂದಲೇ, ಉದಿಸುತ್ತಲೇ ಸೂರ್ಯನು ಎಲ್ಲ ಲೋಕದ ಕತ್ತಲನ್ನು ಕಳೆಯುವಂತೆ ರಾಮನು ನಮ್ಮ ಶೋಕವನ್ನು ಕಳೆಯುತ್ತಾನೆ.

ಇತ್ಯೇವಂ ಕಥಯಂತಸ್ತೇ ಸಂಪ್ರಹೃಷ್ಟಾಃ ಕಥಾಃ ಶುಭಾಃ ।
ಪರಿಷ್ವಜಾನಾಶ್ಚಾನ್ಯೋನ್ಯಂ ಯಯುರ್ನಾಗರಿಕಾ ಜನಾಃ ॥೧೦॥

ಹೀಗೆ ನಗರವಾಸಿಗಳಾದ ಜನರು ಉತ್ಸಾಹಗೊಂಡು ಮಂಗಳಕರವಾದ ಕಥೆಗಳನ್ನು ಪರಸ್ಪರ ಹೇಳುತ್ತ ಆಲಿಂಗನ ಮಾಡುತ್ತ ಹೊರಟರು.

ಯೇ ಚ ತತ್ರಾಪರೇ ಸರ್ವೇ ಸಂಮತಾ ಯೇ ಚ ನೈಗಮಾಃ ।
ರಾಮಂ ಪ್ರತಿಯಯುರ್ಹೃಷ್ಟಾಃ ಸರ್ವಾಃ ಪ್ರಕೃತಯಸ್ತಥಾ ॥೧೧॥

ಪ್ರಸಿದ್ಧರಾದ ಪೌರರು ಮತ್ತು ಬೇರೆ ಎಲ್ಲ ಪ್ರಜೆಗಳು ಕೂಡ ಉತ್ಸಾಹದಿಂದ ರಾಮನನ್ನು ಕಾಣಲು ಹೊರಟರು.

ಮಣಿಕಾರಾಶ್ಚ ಯೇ ಕೇಚಿತ್ ಕುಂಭಕಾರಾಶ್ಚ ಶೋಭನಾಃ ।
ಸೂತ್ರಕರ್ಮಕೃತಶ್ಚೈವ ಯೇ ಚ ಶಸ್ತ್ರೋಪಜೀವಿನಃ ॥೧೨॥

ಮಾಯೂರಕಾಃ ಕ್ರಾಕಚಿಕಾ ರೋಚಕಾ ವೇಧಕಾಸ್ತಥಾ ।
ದಂತಕಾರಾಃ ಸುಧಾಕಾರಾಸ್ತಥಾ ಗಂಧೋಪಜೀವಿನಃ ॥೧೩॥

ಸುವರ್ಣಕಾರಾಃ ಪ್ರಖ್ಯಾತಾಸ್ತಥಾ ಕಂಬಲಕಾರಕಾಃ ।
ಸ್ನಾಪಕೋಚ್ಛಾದಕಾ ವೈದ್ಯಾ ಧೂಪಕಾಃ ಶೌಂಡಿಕಾಸ್ತಥಾ ॥೧೪॥

ರಜಕಾಸ್ತುನ್ನವಾಯಾಶ್ಚ ಗ್ರಾಮಘೋಷಮಹತ್ತರಾಃ ।
ಶೈಲೂಷಾಶ್ಚ ಸಹ ಸ್ತ್ರೀಭಿರ್ಯಯುಃ ಕೈವರ್ತಕಾಸ್ತಥಾ ॥೧೫॥

ಸಮಾಹಿತಾ ವೇದವಿದೋ ಬ್ರಾಹ್ಮಣೋ ವೃತ್ತಸಂಮತಾಃ ।
ಗೋರಥೈರ್ಭರತಂ ಯಾಂತಮನುಜಗ್ಮುಃ ಸಹಸ್ರಶಃ ॥೧೬॥

ರತ್ನಪರೀಕ್ಷಕರು, ಕುಂಬಾರರು, ನೇಕಾರರು, ಶಸ್ತ್ರಾಸ್ತ್ರನಿರ್ಮಾಪಕರು, ನವಿಲು ಗಿಳಿ ಮುಂತಾದುವನ್ನು ಹಿಡಿಯುವವರು, ಗರಗಸದಿಂದ ಮರವನ್ನು ಕೊಯ್ಯುವವರು, ಗಾಜು ಕಂಚು ಹಿತ್ತಾಳೆ ಮುಂತಾದುವನ್ನು ಮಾಡುವವರು, ಮಣಿಗಳಿಗೆ ರಂಧ್ರ ಕೊರೆಯುವವರು, ಆನೆದಂತದ ಕೆಲಸದವರು, ಗಾರೆ ಕೆಲಸದವರು, ಸುಗಂಧದ್ರವ್ಯ ಮಾರುವವರು, ಪ್ರಖ್ಯಾತ ಚಿನ್ನದ ಕೆಲಸದವರು, ಕಂಬಳಿ ನೇಯುವವರು, ಅಭ್ಯಂಜನ ಸ್ನಾನ ಮೈಮಾಲೀಸು ಮಾಡುವವರು, ವೈದ್ಯರು, ಧೂಪ ತಯಾರಕರು, ಮದ್ಯ ತಯಾರಕರು, ಅಗಸರು, ದರ್ಜಿಗಳು, ಗೋಪಾಲಕರು, ನಟನರ್ತಕರು, ಅವರ ಸ್ತ್ರೀಯರು, ಬೆಸ್ತರು, ಯೋಗಿಗಳು, ವೇದಜ್ಞರಾದ ಸದಾಚಾರಿಗಳಾದ ಬ್ರಾಹ್ಮಣರು, ಇವರೆಲ್ಲರೂ ಸಾವಿರಾರು ಸಂಖ್ಯೆಯಲ್ಲಿ ಎತ್ತಿನ ಗಾಡಿಗಳಲ್ಲಿ ಕುಳಿತು ಭರತನು ಹೋಗುವಾಗ ಹಿಂಬಾಲಿಸಿದರು.

ಸುವೇಷಾಃ ಶುದ್ಧವಸನಾಸ್ತಾಮ್ರಮೃಷ್ಟಾನುಲೇಪನಾಃ ।
ಸರ್ವೇ ತೇ ವಿವಿಧೈರ್ಯಾನೈಃ ಶನೈರ್ಭರತಮನ್ವಯುಃ ॥೧೭॥

ಎಲ್ಲರೂ ಒಳ್ಳೆಯ ವೇಷ ಶುದ್ಧ ವಸ್ತ್ರ ರಕ್ತಚಂದನಲೇಪಗಳನ್ನು ಧರಿಸಿ ನಾನಾ ಬಗೆಯ ವಾಹನಗಳಿಂದ ನಿಧಾನವಾಗಿ ಭರತನನ್ನು ಹಿಂಬಾಲಿಸಿ ಹೋದರು.

ಪ್ರಹೃಷ್ಟಮುದಿತಾ ಸೇನಾ ಸಾನ್ವಯಾತ್ ಕೈಕಯೀಸುತಮ್ ।
ಭ್ರಾತುರಾನಯನೇ ಯಾಂತಂ ಭರತಂ ಭ್ರಾತೃವತ್ಸಲಮ್ ॥೧೮॥

ಉತ್ಸಾಹ ಆನಂದಗಳಿಂದ ತುಂಬಿದ ಸೈನ್ಯವು ಸೋದರನನ್ನು ಕರೆತರಲು ಹೊರಟ ಸೋದರ ಪ್ರೇಮಿಯಾದ ಕೈಕಯೀಸುತ ಭರತನನ್ನು ಹಿಂಬಾಲಿಸಿ ಹೋಯಿತು.

ತೇ ಗತ್ವಾ ದೂರಮಧ್ವಾನಂ ರಥಯಾನಾಶ್ವಕುಂಜರೈಃ ।
ಸಮಾಸೇದುಸ್ತತೋ ಗಂಗಾಂ ಶೃಂಗಿವೇರಪುರಂ ಪ್ರತಿ ॥೧೯॥

ಅವರು ರಥ ವಾಹನ ಅಶ್ವಗಜಗಳಿಂದ ದೂರದ ದಾರಿಯನ್ನು ಕ್ರಮಿಸಿ ಶೃಂಗಿ-ವೇರಪುರದ ಬಳಿ ಗಂಗಾತೀರವನ್ನು ಸೇರಿದರು.

ಯತ್ರ ರಾಮಸಖೋ ವೀರೋ ಗುಹೋ ಜ್ಞಾತಿಗಣೈರ್ವೃತಃ ।
ನಿವಸತ್ಯಪ್ರಮಾದೇನ ದೇಶಂ ತಂ ಪರಿಪಾಲಯನ್ ॥೨೦॥

ಅಲ್ಲಿ ಆ ದೇಶವನ್ನು ಶ್ರೀರಾಮನ ಮಿತ್ರನಾದ ವೀರನಾದ ಗುಹನು ತನ್ನ ಬಾಂಧವರೊಂದಿಗೆ ಕೂಡಿ ಜಾಗರೂಕತೆಯಿಂದ ಆಳುತ್ತ ವಾಸಮಾಡುತ್ತಿದ್ದನು.

ಉಪೇತ್ಯ ತೀರಂ ಗಂಗಾಯಾಶ್ಚಕ್ರವಾಕೈರಲಂಕೃತಮ್ ।
ವ್ಯವಾತಿಷ್ಠತ ಸಾ ಸೇನಾ ಭರತಸ್ಯಾನುಯಾಯಿನೀ ॥೨೧॥

ಚಕ್ರವಾಕ ಪಕ್ಷಿಗಳಿಂದ ಅಲಂಕೃತವಾದ ಗಂಗಾತೀರವನ್ನು ಸೇರಿ ಅಲ್ಲಿ ಭರತನನ್ನು ಹಿಂಬಾಲಿಸಿ ಬಂದ ಸೇನೆ ನಿಂತಿತು.

ನಿರೀಕ್ಷ್ಯಾನುಗತಾಂ ಸೇನಾಂ ತಾಂ ಚ ಗಂಗಾಂ ಶಿವೋದಕಾಮ್ ।
ಭರತಃ ಸಚಿವಾನ್ ಸರ್ವಾನಬ್ರವೀದ್ವಾಕ್ಯಕೋವಿದಃ ॥೨೨॥

ಹಿಂಬಾಲಿಸಿ ಬಂದ ಆ ಸೈನ್ಯವನ್ನೂ ಮಂಗಳೋದಕೆಯಾದ ಗಂಗೆಯನ್ನೂ ನೋಡಿ ಮಾತುಬಲ್ಲ ಭರತನು ಎಲ್ಲ ಸಚಿವರಿಗೆ ಹೇಳಿದನು.

ನಿವೇಶಯತ ಮೇ ಸೈನ್ಯಮಭಿಪ್ರಾಯೇಣ ಸರ್ವತಃ ।
ವಿಶ್ರಾಂತಾಃ ಪ್ರತರಿಷ್ಯಾಮಃ ಶ್ವ ಇದಾನೀಮಿಮಾಂ ನದೀಮ್ ॥೨೩॥

ಸೈನ್ಯವನ್ನು ಇಚ್ಛಾನುಸಾರ ಎಲ್ಲಕಡೆ ಬೀಡುಬಿಡಲು ಹೇಳಿ. ಇಂದು ವಿಶ್ರಾಂತಿ ಪಡೆದು ನಾಳೆ ಈ ನದಿಯನ್ನು ದಾಟೋಣ.

ದಾತುಂ ಚ ತಾವದಿಚ್ಛಾಮಿ ಸ್ವರ್ಗತಸ್ಯ ಮಹೀಪತೇಃ ।
ಔರ್ಧ್ವದೇಹನಿಮಿತ್ತಾರ್ಥಮವತೀರ್ಯೋದಕಂ ನದೀಮ್ ॥೨೪॥

ಮತ್ತು ಈಗ ನಾನು ನದಿಯಲ್ಲಿ ಇಳಿದು ಸ್ವರ್ಗಸ್ಥನಾದ ರಾಜನಿಗೆ ಮುಂದೆ ಸ್ವರ್ಗದಲ್ಲಿ ಬರುವ ದೇಹದಲ್ಲಿ, ಸುಖವಾಗಲೆಂಬ ಉದ್ದೇಶದಿಂದ ಉದಕವನ್ನು ಕೊಡಲು ಬಯಸುತ್ತೇನೆ.

ತಸ್ಯೈವಂ ಬ್ರುವತೋಽಮಾತ್ಯಾಸ್ತಥೇತ್ಯುಕ್ತ್ವಾ ಸಮಾಹಿತಾಃ ।
ನ್ಯವೇಶಯಂಸ್ತಾಂಶ್ಛಂದೇನ ಸ್ವೇನ ಸ್ವೇನ ಪೃಥಕ್ ಪೃಥಕ್ ॥೨೫॥

ಭರತನು ಹೀಗೆ ಹೇಳಿದಾಗ ಅಮಾತ್ಯರೆಲ್ಲರೂ ಒಂದಾಗಿ ಹಾಗೇ ಆಗಲೆಂದು ಹೇಳಿ ಸೈನಿಕರನ್ನು ತಮ್ಮತಮ್ಮ ಇಚ್ಛಾನುಸಾರ ಬೇರೆಬೇರೆಯಾಗಿ ಬೀಡು ಬಿಡುವಂತೆ ಮಾಡಿದರು.

ನಿವೇಶ್ಯ ಗಂಗಾಮನು ತಾಂ ಮಹಾನದೀಂ
ಚಮೂಂ ವಿಧಾನೈಃ ಪರಿಬರ್ಹಶೋಭಿನೀಮ್ ।
ಉವಾಸ ರಾಮಸ್ಯ ತದಾ ಮಹಾತ್ಮನೋ
ವಿಚಿಂತಯಾನೋ ಭರತೋ ನಿವರ್ತನಮ್ ॥೨೬॥

ಧ್ವಜಪತಾಕೆ ಮುಂತಾದವುಗಳಿಂದ ಶೋಭಿಸಿದ ಆ ಸೈನ್ಯವನ್ನು ಗಂಗಾ ಮಹಾನದೀತೀರದಲ್ಲಿ ಯಥಾವಿಧಿಯಾಗಿ ನಿಲ್ಲಿಸಿ ಭರತನು ಮಹಾತ್ಮನಾದ ರಾಮನನ್ನು ವನದಿಂದ ಹಿಂತಿರುಗಿಸುವ ಬಗ್ಗೆ ಚಿಂತಿಸುತ್ತ ಅಲ್ಲಿ ವಾಸಮಾಡಿದನು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಎಂಭತ್ತಮೂರನೇ ಸರ್ಗ ಮುಗಿಯಿತು.

❖

ಚತುರಶೀತಿತಮಃ ಸರ್ಗಃ

ಸರ್ಗ – 84

ಗುಹನು ಭರತನನ್ನು ಸಂದರ್ಶಿಸುವುದು

ತತೋ ನಿವಿಷ್ಟಾಂ ಧ್ವಜಿನೀಂ ಗಂಗಾಮನ್ವಾಶ್ರಿತಾಂ ನದೀಮ್ ।
ನಿಷಾದರಾಜೋ ದೃಷ್ಟ್ವೈವ ಜ್ಞಾತೀನ್ ಸಂತ್ವರಿತೋಽಬ್ರವೀತ್ ॥೧॥

ಆಗ ಗಂಗಾತೀರದಲ್ಲಿ ಭರತನ ಸೈನ್ಯ ಬೀಡುಬಿಟ್ಟಿದ್ದನ್ನು ನೋಡಿದೊಡನೆ ನಿಷಾದರಾಜನಾದ ಗುಹನು ತನ್ನವರಿಗೆ ಹೇಳಿದನು.

ಮಹತೀಯಮಿತಃ ಸೇನಾ ಸಾಗರಾಭಾ ಪ್ರದೃಶ್ಯತೇ ।
ತಸ್ಯಾಂತಂ ನಾಧಿಗಚ್ಛಾಮಿ ಮನಸಾಪಿ ವಿಚಿಂತಯನ್ ॥೨॥

ಈ ಸೈನ್ಯ ಅಪಾರವಾಗಿದೆ, ಸಾಗರದಂತೆ ಕಾಣುತ್ತದೆ. ಇದರ ಪರಿಮಿತಿ ಎಷ್ಟೆಂದು ಮನಸಿನಿಂದ ಊಹಿಸಿಯೂ ತಿಳಿಯಲಾರೆ.

ಯಥಾ ತು ಖಲು ದುರ್ಬುದ್ಧಿರ್ಭರತಃ ಸ್ವಯಮಾಗತಃ ।
ಸ ಏಷ ಹಿ ಮಹಾಕಾಯಃ ಕೋವಿದಾರಧ್ವಜೋ ರಥೇ ॥೩॥

ದೊಡ್ಡಗಾತ್ರದ ಕೆಂಗಾಂಚಾಳಗಿಡಧ್ವಜವು ರಥದಲ್ಲಿ ಕಾಣುವುದರಿಂದ ಈತನು ದುರ್ಬುದ್ಧಿಯಾದ ಭರತನೇ ಸ್ವತಃ ಬಂದಿದ್ದಾನೆ.

ಬಂಧಯಿಷ್ಯತಿ ವಾ ದಾಶಾನಥವಾಸ್ಮಾನ್ ವಧಿಷ್ಯತಿ ।
ಅಥ ದಾಶರಥಿಂ ರಾಮಂ ಪಿತ್ರಾ ರಾಜ್ಯಾದ್ವಿವಾಸಿತಮ್ ॥೪॥

ಸಂಪನ್ನಾಂ ಶ್ರಿಯಮನ್ವಿಚ್ಛಂಸ್ತಸ್ಯ ರಾಜ್ಞಃ ಸುದುರ್ಲಭಾಮ್।
ಭರತಃ ಕೈಕೇಯೀಪುತ್ರೋ ಹಂತುಂ ತಮುಪಗಚ್ಛತಿ ॥೫॥

ಭರತನು ಬೆಸ್ತರಾದ ನಮ್ಮನ್ನು ಸೇರೆಹಿಡಿಯಬಹುದು ಅಥವಾ ಕೊಲ್ಲಬಹುದು ಅಥವಾ ದಶರಥನ ಸಮೃದ್ಧವಾದ ಬಲು ದುರ್ಲಭವಾದ ರಾಜ್ಯ ಸಂಪತ್ತನ್ನು ತಾನು ಶಾಶ್ವತವಾಗಿ ಅನುಭವಿಸುವ ಇಚ್ಛೆಯಿಂದ ಕೈಕಯೀಪುತ್ರನಾದ ಭರತನು, ತಂದೆ ರಾಜ್ಯದಿಂದ ಹೊರಗೆ ಅಟ್ಟಿದ್ದ ರಾಮನನ್ನು ಕೊಲ್ಲಲು ಅವನ ಬಳಿಗೆ ಹೋಗುತ್ತಿರ-ಬಹುದೆ?

ಭರ್ತಾ ಚೈವ ಸಖಾ ಚೈವ ರಾಮೋ ದಾಶರಥಿರ್ಮಮ ।
ತಸ್ಯಾರ್ಥಕಾಮಾಃ ಸಂನದ್ಧಾ ಗಂಗಾನೂಪೇಽತ್ರ ತಿಷ್ಠತ ॥೬॥

ನನಗೆ ದಾಶರಥಿ ರಾಮನು ಪ್ರಭುವೂ ಹೌದು, ಮಿತ್ರನೂ ಹೌದು. ಅವನ ರಕ್ಷಣೆಗಾಗಿ ಇಲ್ಲಿ ಗಂಗಾತೀರದಲ್ಲಿ ಸನ್ನದ್ಧರಾಗಿ ನಿಲ್ಲಿ.

ತಿಷ್ಠಂತು ಸರ್ವೇ ದಾಶಾಶ್ಚ ಗಂಗಾಮನ್ವಾಶ್ರಿತಾ ನದೀಮ್ ।
ಬಲಯುಕ್ತಾ ನದೀರಕ್ಷಾ ಮಾಂಸಮೂಲಫಲಾಶನಾಃ ॥೭॥

ಮಾಂಸ ಮೂಲ ಫಲಗಳನ್ನು ಉಂಡು ಬಲಿಷ್ಠರಾಗಿ ನದೀ ಕಾವಲುಗಾರರಾಗಿ ಎಲ್ಲ ಬೆಸ್ತರು ಗಂಗಾನದೀತೀರದಲ್ಲಿ ನಿಲ್ಲಲಿ.

ನಾವಾಂ ಶತಾನಾಂ ಪಂಚಾನಾಂ ಕೈವರ್ತಾನಾಂ ಶತಂ ಶತಮ್ ।
ಸಂನದ್ಧಾನಾಂ ತಥಾ ಯೂನಾಂ ತಿಷ್ಠಂತ್ವಿತ್ಯಭ್ಯಚೋದಯತ್ ॥೮॥

ಭರತನ ಸೈನ್ಯ ನದಿಯನ್ನು ದಾಟಿ ರಾಮನ ಬಳಿಗೆ ಹೋಗದಂತೆ ತೀರದಲ್ಲಿ ಐದುನೂರು ನೌಕೆಗಳಲ್ಲಿ ಪ್ರತಿಯೊಂದರಲ್ಲಿ ನೂರು ನೂರು ತರುಣರಾದ ಬೆಸ್ತರು ಆಯುಧ ಸನ್ನದ್ಧರಾಗಿ ನಿಲ್ಲಲಿ ಎಂದು ಗುಹನು ಆದೇಶಿಸಿದನು.

ಯದಾ ತುಷ್ಟಸ್ತು ಭರತೋ ರಾಮಸ್ಯೇಹ ಭವಿಷ್ಯತಿ ।
ಸೇಯಂ ಸ್ವಸ್ತಿಮತೀ ಸೇನಾ ಗಂಗಾಮದ್ಯ ತರಿಷ್ಯತಿ ॥೯॥

ಭರತನತು ರಾಮನ ವಿಷಯದಲ್ಲಿ ಒಳ್ಳೆಯ ಅಭಿಪ್ರಾಯದವನಾಗಿದ್ದರೆ ಈ ಸೈನ್ಯವು ಇಂದು ಕ್ಷೇಮವಾಗಿ ಗಂಗೆಯನ್ನು ದಾಟುತ್ತದೆ.

ಇತ್ಯುಕ್ತ್ವೋಪಾಯನಂ ಗೃಹ್ಯ ಮತ್ಸ್ಯಮಾಂಸಮಧೂನಿ ಚ ।
ಅಭಿಚಕ್ರಾಮ ಭರತಂ ನಿಷಾದಾಧಿಪತಿರ್ಗುಹಃ ॥೧೦॥

ಹೀಗೆ ಹೇಳಿ ನಿಷಾದರಾಜ ಗುಹನು ಕಪ್ಪಕಾಣಿಕೆಯನ್ನೂ ಮತ್ಸ್ಯಮಾಂಸ–ಜೇನುತುಪ್ಪಗಳನ್ನೂ ತೆಗೆಸಿಕೊಂಡು ಭರತನ ಕಡೆಗೆ ಹೊರಟನು.

ತಮಾಯಾಂತಂ ತು ಸಂಪ್ರೇಕ್ಷ್ಯ ಸೂತಪುತ್ರಃ ಪ್ರತಾಪವಾನ್ ।
ಭರತಾಯಾಚಚಕ್ಷೇಥ ವಿನಯಜ್ಞೋ ವಿನೀತವತ್ ॥೧೧॥

ಗುಹನು ಬರುವುದನ್ನು ನೋಡಿ ಪ್ರತಾಪಶಾಲಿಯಾದ ವಿನಯಜ್ಞನಾದ ಸುಮಂತ್ರನು ವಿನೀತನಾಗಿ ಭರತನಿಗೆ ಹೇಳಿದನು.

ಏಷ ಜ್ಞಾತಿಸಹಸ್ರೇಣ ಸ್ಥಪತಿಃ ಪರಿವಾರಿತಃ ।
ಕುಶಲೋ ದಂಡಕಾರಣ್ಯೇ ವೃದ್ಧೋ ಭ್ರಾತುಶ್ಚ ತೇ ಸಖಾ ॥೧೨॥

ಈ ರಾಜಾ ಗುಹನು ಸಾವಿರಾರು ಮಂದಿ ಬಾಂಧವರೊಂದಿಗೆ ಬಂದಿದ್ದಾನೆ. ಈತನು ದಂಡಕಾರಣ್ಯದಲ್ಲಿ ನಿಗ್ರಹ–ಅನುಗ್ರಹಗಳೆರಡಕ್ಕೂ ಸಮರ್ಥ, ವೃದ್ಧ, ನಿನ್ನ ಸೋದರನಿಗೆ ಮಿತ್ರ.

ತಸ್ಮಾತ್ ಪಶ್ಯತು ಕಾಕುತ್ಸ್ಥ ತ್ವಾಂ ನಿಷಾದಾಧಿಪೋ ಗುಹಃ ।
ಅಸಂಶಯಂ ವಿಜಾನೀತೇ ಯತ್ರ ತೌ ರಾಮಲಕ್ಷ್ಮಣೌ ॥೧೩॥

ಅದರಿಂದ ನಿಷಾದರಾಜ ಗುಹನು ನಿನ್ನ ಸಂದರ್ಶನ ಮಾಡಲಿ. ಭರತ! ಈತನು ನಿಃಸಂಶಯವಾಗಿ ರಾಮಲಕ್ಷ್ಮಣರು ಎಲ್ಲಿರುವರೆಂಬುದನ್ನು ತಿಳಿದಿರುತ್ತಾನೆ.

ಏತತ್ತು ವಚನಂ ಶ್ರುತ್ವಾ ಸುಮಂತ್ರಾದ್ಭರತಃ ಶುಭಮ್ ।
ಉವಾಚ ವಚನಂ ಶೀಘ್ರಂ ಗುಹಃ ಪಶ್ಯತು ಮಾಮಿತಿ ॥೧೪॥

ಸುಮಂತ್ರನ ಈ ಶುಭಕರವಾದ ಮಾತನ್ನು ಕೇಳಿ ಭರತನೆಂದ, 'ಗುಹನು ಬೇಗನೆ ನನ್ನ ಸಂದರ್ಶನ ಮಾಡಲಿ' ಎಂದು.

ಲಬ್ಧ್ವಾಭ್ಯನುಜ್ಞಾಂ ಸಂಹೃಷ್ಟೋ ಜ್ಞಾತಿಭಿಃ ಪರಿವಾರಿತಃ ।
ಆಗಮ್ಯ ಭರತಂ ಪ್ರಹ್ವೋ ಗುಹೋ ವಚನಮಬ್ರವೀತ್ ॥೧೫॥

ಭರತನ ಅನುಜ್ಞೆಯನ್ನು ಪಡೆದು ಸಂತುಷ್ಟನಾದ ಗುಹನು ಬಾಂಧವರೊಂದಿಗೆ ಬಂದು ವಿನೀತನಾಗಿ ನುಡಿದ.

ನಿಷ್ಕುಟಶ್ಚೈವ ದೇಶೋಽಯಂ ವಂಚಿತಾಶ್ಚಾಪಿ ತೇ ವಯಮ್ ।
ನಿವೇದಯಾಮಸ್ತೇ ಸರ್ವೇ ಸ್ವಕೇ ದಾಶಕುಲೇ ವಸ ॥೧೬॥

ಈ ದಂಡಕಾರಣ್ಯಪ್ರದೇಶವು ನಿಮಗೆ ನಿಮ್ಮ ಅರಮನೆಯ ಕೈದೋಟದಂತಿದೆ. ನಿಮ್ಮ ಆಗಮನವೃತ್ತಾಂತವನ್ನು ಮೊದಲೇ ತಿಳಿಯದಿದ್ದುದರಿಂದ ನಾವು ವಂಚಿತರಾದೆವು. ನಿಮಗೆ ನಾವೆಲ್ಲರೂ ನಿವೇದಿಸಿಕೊಳ್ಳುತ್ತೇವೆ—'ನಿಮ್ಮ ಈ ದಾಶಗೃಹದಲ್ಲಿ ನೀವು ತಂಗಿದ್ದು ವಿಶ್ರಮಿಸಿಕೊಳ್ಳಿ'.

ಅಸ್ತಿ ಮೂಲಂ ಫಲಂ ಚೈವ ನಿಷಾದ್ಯೈಃ ಸ್ವಯಮಾರ್ಜಿತಂ ।
ಆರ್ದ್ರಂ ಶುಷ್ಕಂ ಯಥಾ ಮಾಂಸಂ ವನ್ಯಂ ಚೋಚ್ಚಾವಚಂ ಮಹತ್ ॥

ಬೇಡರು ಸ್ವತಃ ಸಂಪಾದಿಸಿ ತಂದ ಅರಣ್ಯೋತ್ಪನ್ನವಾದ ಸಣ್ಣ–ದೊಡ್ಡ ಹಾಗೂ ಹಸಿಯಾದ ಒಣಗಿದ ಮೂಲ ಫಲಗಳು ಮಾಂಸ ಎಲ್ಲವೂ ಇವೆ.

ಆಶಂಸೇ ಸ್ವಾಶಿತಾ ಸೇನಾ ವತ್ಸ್ಯತೀಮಾಂ ವಿಭಾವರೀಮ್ ।
ಅರ್ಚಿತೋ ವಿವಿಧೈಃ ಕಾಮೈಃ ಶ್ವಃ ಸಸೈನ್ಯೋ ಗಮಿಷ್ಯಸಿ ॥೧೮॥

ನಿಮ್ಮ ಸೈನ್ಯವೂ ಚೆನ್ನಾಗಿ ಉಂಡು ಈ ರಾತ್ರಿ ಇಲ್ಲಿ ವಾಸಮಾಡಲೆಂದು ಕೇಳಿ–ಕೊಳ್ಳುತ್ತೇನೆ. ನಮ್ಮ ಸತ್ಕಾರವನ್ನು ಸ್ವೀಕರಿಸಿ ನಾಳೆ ಸೈನ್ಯ ಸಮೇತವಾಗಿ ನೀವು ಪ್ರಯಾಣ ಮಾಡಿರಿ.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಎಂಭತ್ತನಾಲ್ಕನೇ ಸರ್ಗ ಮುಗಿಯಿತು.

❖

ಪಂಚಾಶೀತಿತಮಃ ಸರ್ಗಃ

ಸರ್ಗ – 85

ಭರತನು ಗುಹನೊಡನೆ ತನ್ನ ದುಃಖವನ್ನು ಹೇಳಿಕೊಳ್ಳುವುದು.

ಏವಮುಕ್ತಸ್ತು ಭರತೋ ನಿಷಾದಾಧಿಪತಿಂ ಗುಹಮ್ ।
ಪ್ರತ್ಯುವಾಚ ಮಹಾಪ್ರಾಜ್ಞೋ ವಾಕ್ಯಂ ಹೇತ್ವರ್ಥಸಂಹಿತಮ್ ॥೧॥

ನಿಷಾದರಾಜ ಗುಹನು ಹೀಗೆ ಹೇಳಿದಾಗ ಮಹಾಪ್ರಾಜ್ಞನಾದ ಭರತನು ಯುಕ್ತಿ-ಯುಕ್ತವಾದ ಅರ್ಥಗರ್ಭಿತವಾದ ಮಾತನ್ನು ಆಡಿದನು.

ಊರ್ಜಿತಃ ಖಲು ತೇ ಕಾಮಃ ಕೃತೋ ಮಮ ಗುರೋಃ ಸಖೇ ।
ಯೋ ಮೇ ತ್ವಮೀದೃಶೀಂ ಸೇನಾಮೇಕೋಽಭ್ಯರ್ಚಿತುಮಿಚ್ಛಸಿ ॥೨॥

ನನ್ನ ಗುರುವಾದ ರಾಮನ ಮಿತ್ರನೆ, ನೀನು ಮಾಡಿದ ಕಾಮನೆ ಬಹು ಮಹತ್ತರವಾದುದು. ಏಕೆಂದರೆ ನಮ್ಮ ಈ ದೊಡ್ಡ ಸೈನ್ಯವನ್ನು ನೀನು ಒಬ್ಬನೇ ಸತ್ಕರಿಸಲು ಬಯಸಿರುವಿ.

ಇತ್ಯುಕ್ತ್ವಾ ತು ಮಹಾತೇಜಾ ಗುಹಂ ವಚನಮುತ್ತಮಮ್ ।
ಅಬ್ರವೀದ್ಭರತಃ ಶ್ರೀಮಾನ್ನಿಷಾದಾಧಿಪತಿಂ ಪುನಃ ॥೩॥

ಮಹಾತೇಜನಾದ ಶ್ರೀಮಾನ್ ಭರತನು ನಿಷಾದಾಧಿಪತಿ ಗುಹನಿಗೆ ಹೀಗೆ ಹೇಳಿ ಪುನಃ ಉತ್ತಮವಾದ ಈ ಮಾತನ್ನು ನುಡಿದ.

ಕತರೇಣ ಗಮಿಷ್ಯಾಮಿ ಭರದ್ವಾಜಾಶ್ರಮಂ ಗುಹ ।
ಗಹನೋಽಯಂ ಭೃಶಂ ದೇಶೋ ಗಂಗಾನೂಪೋ ದುರತ್ಯಯಃ ॥೪॥

ಗುಹನೆ, ಯಾವ ಮಾರ್ಗದಿಂದ ನಾನು ಭರದ್ವಾಜಾಶ್ರಮಕ್ಕೆ ಹೋಗಬಲ್ಲೆ? ಈ ಗಂಗಾತೀರದ ಪ್ರದೇಶ ಬಹಳ ಗನಹವಾಗಿದೆ, ದುರ್ಗಮವಾಗಿದೆ.

ತಸ್ಯ ತದ್ವಚನಂ ಶ್ರುತ್ವಾ ರಾಜಪುತ್ರಸ್ಯ ಧೀಮತಃ ।
ಅಬ್ರವೀತ್ ಪ್ರಾಂಜಲಿರ್ವಾಕ್ಯಂ ಗುಹೋ ಗಹನಗೋಚರಃ ॥೫॥

ಧೀಮಂತ ರಾಜಕುಮಾರ ಭರತನ ಈ ಮಾತನ್ನು ಕೇಳಿ ವನವಾಸಿಯಾದ ಗುಹನು ಕೈಮುಗಿದು ಹೇಳಿದ.

ದಾಶಾಸ್ತಾ ನುಗಮಿಷ್ಯಂತಿ ಧನ್ವಿನಃ ಸುಸಮಾಹಿತಾಃ ।
ಅಹಂ ತ್ವಾನುಗಮಿಷ್ಯಾಮಿ ರಾಜಪುತ್ರ ಮಹಾಯಶಃ ॥೬॥

ಧನುರ್ಧಾರಿಗಳಾದ ಬೆಸ್ತರೆ ಏಕಾಗ್ರತೆಯಿಂದ ನಿಮ್ಮನ್ನು ಹಿಂಬಾಲಿಸಿ ಬರುತ್ತಾರೆ. ಮಹಾಯಶಸ್ವಿಯಾದ ರಾಜಪುತ್ರನೆ, ನಾನೂ ಕೂಡ ನಿಮ್ಮನ್ನು ಹಿಂಬಾಲಿಸಿ ಬರುತ್ತೇನೆ.

ಕಚ್ಚಿನ್ನ ದುಷ್ಟೋ ವ್ರಜಸಿ ರಾಮಸ್ಯಾಕ್ಲಿಷ್ಟಕರ್ಮಣಃ ।
ಇಯಂ ತೇ ಮಹತೀ ಸೇನಾ ಶಂಕಾಂ ಜನಯತೀವ ಮೇ ॥೭॥

ಆದರೆ, ಕ್ಲೇಶವಿಲ್ಲದೆ ಎಲ್ಲ ಕಾರ್ಯವನ್ನು ಮಾಡುವ ರಾಮನ ಬಳಿಗೆ ಏನೂ ದುರ್ಭಾವನೆಯಿಂದ ನೀವು ಹೋಗುತ್ತಿಲ್ಲ ತಾನೆ? ಏಕೆಂದರೆ ನಿಮ್ಮ ಈ ದೊಡ್ಡ ಸೈನ್ಯ ನನಗೆ ಸಂದೇಹ ಉಂಟುಮಾಡುತ್ತಿದೆ.

ತಮೇವಮಭಿಭಾಷಂತಮಾಕಾಶ ಇವ ನಿರ್ಮಲಃ ।
ಭರತಃ ಶ್ಲಕ್ಷ್ಣಯಾ ವಾಚಾ ಗುಹಂ ವಚನಮಬ್ರವೀತ್ ॥೮॥

ಗುಹನು ಹೀಗೆ ಹೇಳಿದಾಗ ಆಕಾಶದಂತೆ ನಿರ್ಮಲನಾದ ಭರತನು ಗುಹನಿಗೆ ಮಧುರವಾದ ಮಾತಿನಿಂದ ಹೇಳಿದ—

ಮಾ ಭೂತ್ ಸ ಕಾಲೋ ಯತ್ಕಷ್ಟಂ ನ ಮಾಂ ಶಂಕಿತುಮರ್ಹಸಿ ।
ರಾಘವಃ ಸ ಹಿ ಮೇ ಭ್ರಾತಾ ಜ್ಯೇಷ್ಠಃ ಪಿತೃಸಮೋ ಮತಃ ॥೯॥

ನಾನು ರಾಮನಿಗೆ ಅಪಾಯ ಉಂಟುಮಾಡುವಂಥ ಒಂದು ಕಷ್ಟಕಾಲ ಎಂದೂ ಬಾರದಿರಲಿ. ಆ ರಾಮನು ನನಗೆ ಹಿರಿಯಣ್ಣ. ತಂದೆಗೆ ಸಮಾನ.

ತಂ ನಿವರ್ತಯಿತುಂ ಯಾಮಿ ಕಾಕುತ್ಸ್ಥಂ ವನವಾಸಿನಮ್ ।
ಬುದ್ಧಿರನ್ಯಾ ನ ತೇ ಕಾರ್ಯಾ ಗುಹ ಸತ್ಯಂ ಬ್ರವೀಮಿ ತೇ ॥೧೦॥

ವನದಲ್ಲಿರುವ ರಾಮನನ್ನು ಅಯೋಧ್ಯೆಗೆ ಹಿಂದಕ್ಕೆ ಕರೆದೊಯ್ಯಲು ಹೋಗುತ್ತಿದ್ದೇನೆ. ಗುಹ, ನೀನು ಬೇರೇನೂ ಯೋಚನೆ ಮಾಡಬೇಕಿಲ್ಲ. ಸತ್ಯವನ್ನೇ ಹೇಳುತ್ತಿದ್ದೇನೆ.

ಸ ತು ಸಂಹೃಷ್ಟವದನಃ ಶ್ರುತ್ವಾ ಭರತಭಾಷಿತಮ್ ।
ಪುನರೇವಾಬ್ರವೀದ್ವಾಕ್ಯಂ ಭರತಂ ಪ್ರತಿ ಹರ್ಷಿತಃ ॥೧೧॥

ಪಂಚಾಶೀತಿತಮಃ ಸರ್ಗಃ

ಸರ್ಗ – 85

ಭರತನು ಗುಹನೊಡನೆ ತನ್ನ ದುಃಖವನ್ನು ಹೇಳಿಕೊಳ್ಳುವುದು.

ಏವಮುಕ್ತಸ್ತು ಭರತೋ ನಿಷಾದಾಧಿಪತಿಂ ಗುಹಮ್ ।
ಪ್ರತ್ಯುವಾಚ ಮಹಾಪ್ರಾಜ್ಞೋ ವಾಕ್ಯಂ ಹೇತ್ವರ್ಥಸಂಹಿತಮ್ ॥೧॥

ನಿಷಾದರಾಜ ಗುಹನು ಹೀಗೆ ಹೇಳಿದಾಗ ಮಹಾಪ್ರಾಜ್ಞನಾದ ಭರತನು ಯುಕ್ತಿ-ಯುಕ್ತವಾದ ಅರ್ಥಗರ್ಭಿತವಾದ ಮಾತನ್ನು ಆಡಿದನು.

ಊರ್ಜಿತಃ ಖಲು ತೇ ಕಾಮಃ ಕೃತೋ ಮಮ ಗುರೋಃ ಸಖೇ ।
ಯೋ ಮೇ ತ್ವಮೀದೃಶೀಂ ಸೇನಾಮೇಕೋऽಭ್ಯರ್ಚಿತುಮಿಚ್ಛಸಿ ॥೨॥

ನನ್ನ ಗುರುವಾದ ರಾಮನ ಮಿತ್ರನೆ, ನೀನು ಮಾಡಿದ ಕಾಮನೆ ಬಹು ಮಹತ್ತರವಾದುದು. ಏಕೆಂದರೆ ನಮ್ಮ ಈ ದೊಡ್ಡ ಸೈನ್ಯವನ್ನು ನೀನು ಒಬ್ಬನೇ ಸತ್ಕರಿಸಲು ಬಯಸಿರುವಿ.

ಇತ್ಯುಕ್ತ್ವಾ ತು ಮಹಾತೇಜಾ ಗುಹಂ ವಚನಮುತ್ತಮಮ್ ।
ಅಬ್ರವೀದ್ಭರತಃ ಶ್ರೀಮಾನ್ನಿಷಾದಾಧಿಪತಿಂ ಪುನಃ ॥೩॥

ಮಹಾತೇಜನಾದ ಶ್ರೀಮಾನ್ ಭರತನು ನಿಷಾದಾಧಿಪತಿ ಗುಹನಿಗೆ ಹೀಗೆ ಹೇಳಿ ಪುನಃ ಉತ್ತಮವಾದ ಈ ಮಾತನ್ನು ನುಡಿದ.

ಕತರೇಣ ಗಮಿಷ್ಯಾಮಿ ಭರದ್ವಾಜಾಶ್ರಮಂ ಗುಹ ।
ಗಹನೋऽಯಂ ಭೃಶಂ ದೇಶೋ ಗಂಗಾನೂಪೋ ದುರತ್ಯಯಃ ॥೪॥

ಗುಹನೆ, ಯಾವ ಮಾರ್ಗದಿಂದ ನಾನು ಭರದ್ವಾಜಾಶ್ರಮಕ್ಕೆ ಹೋಗಬಲ್ಲೆ? ಈ ಗಂಗಾತೀರದ ಪ್ರದೇಶ ಬಹಳ ಗನಹವಾಗಿದೆ, ದುರ್ಗಮವಾಗಿದೆ.

ತಸ್ಯ ತದ್ವಚನಂ ಶ್ರುತ್ವಾ ರಾಜಪುತ್ರಸ್ಯ ಧೀಮತಃ ।
ಅಬ್ರವೀತ್ ಪ್ರಾಂಜಲಿರ್ವಾಕ್ಯಂ ಗುಹೋ ಗಹನಗೋಚರಃ ॥೫॥

ಧೀಮಂತ ರಾಜಕುಮಾರ ಭರತನ ಈ ಮಾತನ್ನು ಕೇಳಿ ವನವಾಸಿಯಾದ ಗುಹನು ಕೈಮುಗಿದು ಹೇಳಿದ.

ದಾಶಾಸ್ತಾ ನುಗಮಿಷ್ಯಂತಿ ಧನ್ವಿನಃ ಸುಸಮಾಹಿತಾಃ ।
ಅಹಂ ತ್ವಾನುಗಮಿಷ್ಯಾಮಿ ರಾಜಪುತ್ರ ಮಹಾಯಶಃ ॥೬॥

ಧನುರ್ಧಾರಿಗಳಾದ ಬೆಸ್ತರೆ ಏಕಾಗ್ರತೆಯಿಂದ ನಿಮ್ಮನ್ನು ಹಿಂಬಾಲಿಸಿ ಬರುತ್ತಾರೆ. ಮಹಾಯಶಸ್ವಿಯಾದ ರಾಜಪುತ್ರನೆ, ನಾನೂ ಕೂಡ ನಿಮ್ಮನ್ನು ಹಿಂಬಾಲಿಸಿ ಬರುತ್ತೇನೆ.

ಕಚ್ಚಿನ್ನ ದುಷ್ಟೋ ವ್ರಜಸಿ ರಾಮಸ್ಯಾಕ್ಲಿಷ್ಟಕರ್ಮಣಃ ।
ಇಯಂ ತೇ ಮಹತೀ ಸೇನಾ ಶಂಕಾಂ ಜನಯತೀವ ಮೇ ॥೭॥

ಆದರೆ, ಕ್ಲೇಶವಿಲ್ಲದೆ ಎಲ್ಲ ಕಾರ್ಯವನ್ನು ಮಾಡುವ ರಾಮನ ಬಳಿಗೆ ಏನೂ ದುರ್ಭಾವನೆಯಿಂದ ನೀವು ಹೋಗುತ್ತಿಲ್ಲ ತಾನೆ? ಏಕೆಂದರೆ ನಿಮ್ಮ ಈ ದೊಡ್ಡ ಸೈನ್ಯ ನನಗೆ ಸಂದೇಹ ಉಂಟುಮಾಡುತ್ತಿದೆ.

ತಮೇವಮಭಿಭಾಷಂತಮಾಕಾಶ ಇವ ನಿರ್ಮಲಃ ।
ಭರತಃ ಶ್ಲಕ್ಷ್ಣಯಾ ವಾಚಾ ಗುಹಂ ವಚನಮಬ್ರವೀತ್ ॥೮॥

ಗುಹನು ಹೀಗೆ ಹೇಳಿದಾಗ ಆಕಾಶದಂತೆ ನಿರ್ಮಲನಾದ ಭರತನು ಗುಹನಿಗೆ ಮಧುರವಾದ ಮಾತಿನಿಂದ ಹೇಳಿದ—

ಮಾ ಭೂತ್ ಸ ಕಾಲೋ ಯತ್ಕಷ್ಟಂ ನ ಮಾಂ ಶಂಕಿತುಮರ್ಹಸಿ ।
ರಾಘವಃ ಸ ಹಿ ಮೇ ಭ್ರಾತಾ ಜ್ಯೇಷ್ಠಃ ಪಿತೃಸಮೋ ಮತಃ ॥೯॥

ನಾನು ರಾಮನಿಗೆ ಅಪಾಯ ಉಂಟುಮಾಡುವಂಥ ಒಂದು ಕಷ್ಟಕಾಲ ಎಂದೂ ಬಾರದಿರಲಿ. ಆ ರಾಮನು ನನಗೆ ಹಿರಿಯಣ್ಣ. ತಂದೆಗೆ ಸಮಾನ.

ತಂ ನಿವರ್ತಯಿತುಂ ಯಾಮಿ ಕಾಕುತ್ಸ್ಥಂ ವನವಾಸಿನಮ್ ।
ಬುದ್ಧಿರನ್ಯಾ ನ ತೇ ಕಾರ್ಯಾ ಗುಹ ಸತ್ಯಂ ಬ್ರವೀಮಿ ತೇ ॥೧೦॥

ವನದಲ್ಲಿರುವ ರಾಮನನ್ನು ಅಯೋಧ್ಯೆಗೆ ಹಿಂದಕ್ಕೆ ಕರೆದೊಯ್ಯಲು ಹೋಗುತ್ತಿದ್ದೇನೆ. ಗುಹ, ನೀನು ಬೇರೇನೂ ಯೋಚನೆ ಮಾಡಬೇಕಿಲ್ಲ. ಸತ್ಯವನ್ನೇ ಹೇಳುತ್ತಿದ್ದೇನೆ.

ಸ ತು ಸಂಹೃಷ್ಟವದನಃ ಶ್ರುತ್ವಾ ಭರತಭಾಷಿತಮ್ ।
ಪುನರೇವಾಬ್ರವೀದ್ವಾಕ್ಯಂ ಭರತಂ ಪ್ರತಿ ಹರ್ಷಿತಃ ॥೧೧॥

ಭರತನು ಹೇಳಿದ್ದನ್ನು ಕೇಳಿ ಗುಹನ ಮುಖ ಅರಳಿತು. ಹರ್ಷಿತನಾಗಿ ಅವನು ಭರತನಿಗೆ ಪುನಃ ಹೇಳಿದ.

ಧನ್ಯಸ್ತ್ವಂ ನ ತ್ವಯಾ ತುಲ್ಯಂ ಪಶ್ಯಾಮಿ ಜಗತೀತಲೇ ।
ಅಯತ್ನಾದಾಗತಂ ರಾಜ್ಯಂ ಯಸ್ತ್ವಂ ತ್ಯಕ್ತುಮಿಹೇಚ್ಛಸಿ ॥೧೨॥

ನೀನು ಧನ್ಯ, ನಿನಗೆ ಸಮಾನನನ್ನು ಭೂತಲದಲ್ಲಿ ನಾ ಕಾಣೆ. ಅಪ್ರಯತ್ನವಾಗಿ ಕೈಗೆ ಬಂದ ರಾಜ್ಯವನ್ನು ತ್ಯಾಗಮಾಡಲು ಬಯಸುತ್ತಿರುವೆ.

ಶಾಶ್ವತೀ ಖಲು ತೇ ಕೀರ್ತಿರ್ಲೋಕಾನನುಚರಿಷ್ಯತಿ ।
ಯಸ್ತ್ವಂ ಕೃಚ್ಛ್ರಗತಂ ರಾಮಂ ಪ್ರತ್ಯಾನಯಿತುಮಿಚ್ಛಸಿ ॥೧೩॥

ನಿನ್ನ ಕೀರ್ತಿ ಶಾಶ್ವತವಾಗಿ ಎಲ್ಲ ಲೋಕಗಳಲ್ಲಿ ಹರಡುತ್ತದೆ. ಏಕೆಂದರೆ ಕಷ್ಟದಲ್ಲಿ-ರುವ ರಾಮನನ್ನು ಹಿಂದಕ್ಕೆ ಕರೆದೊಯ್ಯಲು ಬಯಸುವೆ.

ಏವಂ ಸಂಭಾಷಮಾಣಸ್ಯ ಗುಹಸ್ಯ ಭರತಂ ತದಾ ।
ಬಭೌ ನಷ್ಟಪ್ರಭಃ ಸೂರ್ಯೋ ರಜನೀ ಚಾಭ್ಯವರ್ತತ ॥೧೪॥

ಗುಹನು ಹೀಗೆ ಭರತನೊಂದಿಗೆ ಮಾತನಾಡುತ್ತಿದ್ದಂತೆ ಸೂರ್ಯನು ಶಾಂತ-ಕಿರಣನಾಗಿ ಕಂಗೊಳಿಸಿದ. ರಾತ್ರಿಯೂ ಬಂದಿತು.

ಸಂನಿವೇಶ್ಯ ಸ ತಾಂ ಸೇನಾಂ ಗುಹೇನ ಪರಿತೋಷಿತಃ ।
ಶತ್ರುಘ್ನೇನ ಸಹ ಶ್ರೀಮಾನ್ ಶಯನಂ ಪುನರಾಗಮತ್ ॥೧೫॥

ಗುಹನ ಸತ್ಕಾರದಿಂದ ಸಂತುಷ್ಟನಾದ ಶ್ರೀಮಾನ್ ಭರತನು ಸೈನ್ಯವನ್ನು ವ್ಯವಸ್ಥಿತವಾಗಿ ಸುಖವಾಗಿರಿಸಿ ಶತ್ರುಘ್ನನೊಂದಿಗೆ ತಾನೂ ಮಲಗಿದನು.

ರಾಮಚಿಂತಾಮಯಃ ಶೋಕೋ ಭರತಸ್ಯ ಮಹಾತ್ಮನಃ ।
ಉಪಸ್ಥಿತೋ ಹ್ಯನರ್ಹಸ್ಯ ಧರ್ಮಪ್ರೇಕ್ಷಸ್ಯ ತಾದೃಶಃ ॥೧೬॥

ಆದರೆ ಸದಾ ಧರ್ಮಬುದ್ಧಿಯವನಾದ ದುಃಖಕ್ಕೆ ಅನರ್ಹನಾದ ಮಹಾತ್ಮ ಭರತನಿಗೆ ರಾತ್ರಿಇಡಿ ರಾಮ ಚಿಂತಾಮಯವಾದ ಆ ಅನಿರ್ವಚನೀಯವಾದ ಅಪಾರ ಶೋಕವೇ ಬಂದಿತು, ಹೊರತು ನಿದ್ದೆ ಬರಲಿಲ್ಲ.

ಅಂತರ್ದಾಹೇನ ದಹನಃ ಸಂತಾಪಯತಿ ರಾಘವಮ್ ।
ವನದಾಹಾಭಿಸಂತಪ್ತಂ ಗೂಢೋಽಗ್ನಿರಿವ ಪಾದಪಮ್ ॥೧೭॥

ಕಾಳ್ಗಿಚ್ಚಿನಿಂದ ಬೆಂದ ಮರವು ಬುಡದಲ್ಲಿ ಕಾಣದ ಬೆಂಕಿಯಿಂದ ಬೇಯುತ್ತಲೇ ಇರುವಂತೆ ಭರತನಿಗೂ ಹೃದಯದೊಳಗೇ ಸುಡುವ ಶೋಕಾಗ್ನಿ ಸುಡುತ್ತಲೇ ಇತ್ತು.

ಪ್ರಸೃತಃ ಸರ್ವಗಾತ್ರೇಭ್ಯಃ ಸ್ವೇದಂ ಶೋಕಾಗ್ನಿಸಂಭವಮ್ ।
ಯಥಾ ಸೂರ್ಯಾಂಶುಸಂತಪ್ತೋ ಹಿಮವಾನ್ ಪ್ರಸೃತೋ ಹಿಮಮ್ ॥

ಸೂರ್ಯನ ಕಿರಣಗಳಿಂದ ತಾಪಗೊಂಡು ಹಿಮಾಲಯವು ಹಿಮವನ್ನು ಸ್ರವಿಸುವಂತೆ ಭರತನನೂ ಶೋಕಾಗ್ನಿಯಿಂದ ತಾಪಗೊಂಡು ಮೈಯಿಂದ ಬೆವರು ಸುರಿಸಿದ.

ಧ್ಯಾನನಿರ್ದರಶೈಲೇನ ವಿನಿಃಶ್ವಸಿತಧಾತುನಾ ।
ದೈನ್ಯಪಾದಪಸಂಘೇನ ಶೋಕಾಯಾಸಾಧಿಶೃಂಗಿಣಾ ॥೧೯॥

ಪ್ರಮೋಹಾನಂತಸತ್ವೇನ ಸಂತಾಪೌಷಧಿವೇಣುನಾ ।
ಆಕ್ರಾಂತೋ ದುಃಖಶೈಲೇನ ಮಹತಾ ಕೈಕಯೀಸುತಃ ॥೨೦॥

ರಾಮಧ್ಯಾನವೆ ಒಡೆಯದ ಶಿಲಾಸಮೂಹ. ವಿವಿಧವಾದ ನಿಟ್ಟುಸಿರೇ ಧಾತುಗಳು. ದೈನ್ಯವೆ ಮರಗಳ ಸಮೂಹ. ಶೋಕ ಆಯಾಸ ಆಧಿಗಳೇ ಶಿಖರಗಳು. ಆಗಾಗ ಪ್ರಜ್ಞೆತಪ್ಪುವುದೇ ಅನಂತ ಮಗೃಗಳು. ಸಂತಾಪಗಳೆ ಪೊದರುಗಳು ಬಿದಿರುಗಳು. ಇದು ರಾಮವಿರಹದುಃಖದ ದೊಡ್ಡ ಬೆಟ್ಟ, ಭರತನೆದೆಯನ್ನು ಆಕ್ರಮಿಸಿ ನಿಂತಿದೆ.

ವಿನಿಃಶ್ವಸನ್ ವೈ ಭೃಶದುರ್ಮನಾಸ್ತತಃ
ಪ್ರಮೂಢಸಂಜ್ಞಃ ಪರಮಾಪದಂ ಗತಃ ।
ಶಮಂ ನ ಲೇಭೇ ಹೃದಯಜ್ವರಾರ್ದಿತೋ
ನರರ್ಷಭೋ ಯೂಥಹತೋ ಯಥರ್ಷಭಃ ॥೨೧॥

ಬಹಳ ದುಃಖದಿಂದ ನಿಟ್ಟುಸಿರು ಬಿಡುತ್ತಾನೆ. ಪ್ರಜ್ಞೆತಪ್ಪಿ ಮಹಾ ಆಪತ್ತಿಗೆ ಈಡಾಗುತ್ತಾನೆ. ಮನಸ್ಸಿಗೆ ನೆಮ್ಮದಿ ಇಲ್ಲ. ಎದೆಯಲ್ಲಿ ಜ್ವರಪೀಡೆ. ಪುರುಷೋತ್ತಮನಾದ ಭರತ ಗುಂಪಿನಿಂದ ಬೇರಾದ ಗೂಳಿಯಂತಾದ.

ಗುಹೇನ ಸಾರ್ಧಂ ಭರತಃ ಸಮಾಗತೋ
ಮಹಾನುಭಾವಃ ಸಜನಃ ಸಮಾಹಿತಃ ।

ಸುದುರ್ಮನಾಸ್ತಂ ಭರತಂ ತದಾ ಪುನಃ
ಗುಹಃ ಸಮಾಶ್ವಾಸಯದಗ್ರಜಂ ಪ್ರತಿ ॥೨೨॥

ಅಣ್ಣ ರಾಮನ ವಿರಹದಿಂದ ಪೀಡಿತನಾದ ಭರತನನ್ನು ಗುಹನು ರಾಮನ ಕಥೆಯನ್ನು ಹೇಳಿ ಸಮಾಧಾನಪಡಿಸಿದ. ಗುಹನೊಂದಿಗೆ ಭರತ ಸಂಭಾಷಣ ಮಾಡಿದ. ಮತ್ತು ಪರಿವಾರ ಸಮೇತನಾಗಿಯೇ ಇದ್ದ ಭರತ. ಆದರೂ ಮಹಾನು-ಭಾವನಾದ ಆತ ಬಲು ದುಃಖಿತನಾಗಿ ಏಕಾಗ್ರತೆಯಿಂದ ರಾಮಧ್ಯಾನ ಪರನಾದ.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಎಂಭತ್ತೈದನೇ ಸರ್ಗ ಮುಗಿಯಿತು.

❖

ಷಡಶೀತಿತಮಃ ಸರ್ಗಃ

ಸರ್ಗ – 86

ಲಕ್ಷ್ಮಣನು ಆಡಿದ ಮಾತನ್ನು ಗುಹನು ಭರತನಿಗೆ ಹೇಳುವುದು.

ಆಚಚಕ್ಷೇಽಥ ಸದ್ಭಾವಂ ಲಕ್ಷ್ಮಣಸ್ಯ ಮಹಾತ್ಮನಃ ।
ಭರತಾಯಾಪ್ರಮೇಯಾಯ ಗುಹೋ ಗಹನಗೋಚರಃ ॥೧॥

ವನಚರನಾದ ಗುಹನು ಅಪ್ರಮೇಯನಾದ ಭರತನಿಗೆ, ಮಹಾತ್ಮನಾದ ಲಕ್ಷ್ಮಣನಿಗೆ ರಾಮನಲ್ಲಿದ್ದ ಸದ್‌ಭಾವನೆಯನ್ನು ವರ್ಣಿಸಿದನು.

ತಂ ಜಾಗ್ರತಂ ಗುಣೈರ್ಯುಕ್ತಂ ವರಚಾಪೇಷುಧಾರಿಣಮ್ ।
ಭ್ರಾತೃಗುಪ್ತ್ಯರ್ಥಮತ್ಯಂತಮಹಂ ಲಕ್ಷ್ಮಣಮಬ್ರವಮ್ ॥೨॥

ರಾಮಭಕ್ತ್ಯಾದಿಗುಣಯುಕ್ತನಾದ ಲಕ್ಷ್ಮಣನು ರಾತ್ರಿಯಲ್ಲಿ ರಾಮನ ರಕ್ಷಣೆಗಾಗಿ ಉತ್ತಮ ಧನುರ್ಬಾಣಗಳನ್ನು ಹಿಡಿದು ಅತ್ಯಂತ ಜಾಗರೂಕನಾಗಿದ್ದನು. ಅವನಿಗೆ ನಾನು ಹೇಳಿದೆ.

ಇಯಂ ತಾತ ಸುಖಾ ಶಯ್ಯಾ ತ್ವದರ್ಥಮುಪಕಲ್ಪಿತಾ ।
ಪ್ರತ್ಯಾಶ್ವಸಿಹಿ ಶೇಷ್ವಾಸ್ಯಾಂ ಸುಖಂ ರಾಘವನಂದನ ॥೩॥

ಅಪ್ಪ ಲಕ್ಷ್ಮಣ, ಇದು ನಿನಗಾಗಿ ಸಿದ್ಧಪಡಿಸಿದ ಹಾಸಿಗೆ ಸುಖಕರವಾಗಿದೆ. ಇದರ ಮೇಲೆ ಸುಖವಾಗಿ ವಿಶ್ರಮಿಸಿಕೊಳ್ಳು.

ಉಚಿತೋಽಯಂ ಜನಃ ಸರ್ವೋ ದುಃಖಾನಾಂ ತ್ವಂ ಸುಖೋಚಿತಃ ।
ಧರ್ಮಾತ್ಮಂಸ್ತಸ್ಯ ಗುಪ್ತ್ಯರ್ಥಂ ಜಾಗರಿಷ್ಯಾಮಹೇ ವಯಮ್ ॥೪॥

ಈ ನನ್ನ ಪರಿವಾರದವರು ಎಲ್ಲರೂ ಕ್ಲೇಶಕರವಾದ ಪಹರೆಗೆ ತಕ್ಕವರು. ನೀನು ಸುಖಕ್ಕೇ ತಕ್ಕವನು ಧರ್ಮಾತ್ಮನೆ! ರಾಮನ ರಕ್ಷಣೆಗೆ ನಾವು ರಾತ್ರಿ ಇಡೀ ಜಾಗರಣ ಮಾಡುವೆವು.

ನ ಹಿ ರಾಮಾತ್ ಪ್ರಿಯತರೋ ಮಮಾಸ್ತಿ ಭುವಿ ಕಶ್ಚನ ।
ಮೋತ್ಸುಕೋ ಭೂರ್ಬ್ರವೀಮ್ಯೇತದಥ ಸತ್ಯಂ ತವಾಗ್ರತಃ ॥೫॥

ನನಗೆ ರಾಮನಿಗಿಂತ ಹೆಚ್ಚು ಪ್ರಿಯನಾದವನು ಭೂಮಿಯಲ್ಲಿ ಯಾರೂ ಇಲ್ಲ. ಕಾತರನಾಗಬೇಡ ಇದು ಸತ್ಯ ಎಂದು ನಿನ್ನ ಮುಂದೆ ಹೇಳುತ್ತಿದ್ದೇನೆ.

ಅಸ್ಯ ಪ್ರಸಾದಾದಾಶಂಸೇ ಲೋಕೇಽಸ್ಮಿನ್ ಸುಮಹದ್ಯಶಃ ।
ಧರ್ಮಾವಾಪ್ತಿಂ ಚ ವಿಪುಲಾಮರ್ಥಾವಾಪ್ತಿಂ ಚ ಕೇವಲಾಮ್ ॥೬॥

ಈ ಲೋಕದಲ್ಲಿ ನನಗೆ ಮಹತ್ತರವಾದ ಯಶಸ್ಸಾಗಲಿ ವಿಪುಲವಾದ ಪುಣ್ಯ ಲಾಭವಾಗಲಿ ಉತ್ತಮ ಧನ ಲಾಭವಾಗಲಿ ಶ್ರೀರಾಮನ ಅನುಗ್ರಹಿಂದಲೇ ಬರುವುದೆಂದು ನಿರೀಕ್ಷಿಸುತ್ತೇನೆ.

ಸೋಽಹಂ ಪ್ರಿಯಸಖಂ ರಾಮಂ ಶಯಾನಂ ಸಹ ಸೀತಯಾ ।
ರಕ್ಷಿಷ್ಯಾಮಿ ಧನುಷ್ಪಾಣಿಃ ಸರ್ವೈಃ ಸ್ವೈರ್ಜ್ಞಾತಿಭಿಃ ಸಹ ॥೭॥

ಪ್ರಿಯಮಿತ್ರನಾದ ರಾಮ ಸೀತೆಯೊಡನೆ ಮಲಗಿರುವಾಗ ಅವನನ್ನು ನಾನು ಧನುರ್ಧಾರಿಯಾಗಿ ನನ್ನೆಲ್ಲ ಬಂಧುಗಳೊಂದಿಗೆ ರಕ್ಷಿಸುವೆನು.

ನ ಹಿ ಮೇಽವಿದಿತಂ ಕಿಂಚಿದ್ವನೇಽಸ್ಮಿಂಶ್ಚರತಃ ಸದಾ ।
ಚತುರಂಗಂ ಹ್ಯಪಿ ಬಲಂ ಪ್ರಸಹೇಮ ವಯಂ ಯುಧಿ ॥೮॥

ಈ ಅರಣ್ಯದಲ್ಲಿ ಸದಾ ಸಂಚರಿಸುವ ನನಗೆ ಇಲ್ಲಿ ತಿಳಿಯದೇ ಇರುವುದು ಏನಿಲ್ಲ. ಮಹತ್ತರವಾದ ಚತುರಂಗ ಸೈನ್ಯವೇ ಬಂದರೂ ನಾವು ಅದನ್ನು ಯುದ್ಧದಲ್ಲಿ ಇದಿರಿಸಬಲ್ಲೆವು.

ಏವಮಸ್ಮಾಭಿರುಕ್ತೇನ ಲಕ್ಷ್ಮಣೇನ ಮಹಾತ್ಮನಾ ।
ಅನುನೀತಾ ವಯಂ ಸರ್ವೇ ಧರ್ಮಮೇವಾನುಪಶ್ಯತಾ ॥೯॥

ಕಥಂ ದಾಶರಥೌ ಭೂಮೌ ಶಯಾನೇ ಸಹ ಸೀತಯಾ ।
ಶಕ್ಯಾ ನಿದ್ರಾ ಮಯಾ ಲಬ್ಧುಂ ಜೀವಿತಂ ವಾ ಸುಖಾನಿ ವಾ ॥೧೦॥

ಹೀಗೆ ನಾವು ಹೇಳಿದಾಗ ಮಹಾತ್ಮ ಲಕ್ಷ್ಮಣನು ನಮ್ಮೆಲ್ಲರನ್ನೂ ಸಮಾಧಾನ ಪಡಿಸಿದನು— 'ಧರ್ಮವನ್ನು ಆಲೋಚಿಸುವ ನನಗೆ ರಾಮನು ಸೀತೆಯೊಂದಿಗೆ ನೆಲದ ಮೇಲೆ ಮಲಗಿದ್ದರೆ ನಿದ್ದೆ ಹೇಗೆ ಬಂದೀತು? ಬದುಕನ್ನಾಗಲಿ ಸುಖವನ್ನಾಗಲಿ ನಾನು ಹೇಗೆ ಪಡೆಯಬಲ್ಲೆ?

ಯೋ ನ ದೇವಾಸುರೈಃ ಸರ್ವೈಃ ಶಕ್ಯಃ ಪ್ರಸಹಿತುಂ ಯುಧಿ ।
ತಂ ಪಶ್ಯ ಗುಹ ಸಂವಿಷ್ಟಂ ತೃಣೇಷು ಸಹ ಸೀತಯಾ ॥೧೧॥

ದೇವತೆಗಳು ಅಸುರರು ಎಲ್ಲರೂ ಬಂದರೂ ರಾಮನನ್ನು ಯುದ್ಧದಲ್ಲಿ ಇದಿರಿಸಲು ಶಕ್ತರಾಗಲಾರರು. ಅವನನ್ನು ನೋಡು. ಗುಹನೆ ! ಸೀತೆಯೊಂದಿಗೆ ಹುಲ್ಲಿನ ಮೇಲೆ ಅವನು ಮಲಗಿದ್ದಾನೆ.

ಮಹತಾ ತಪಸಾ ಲಬ್ಧೋ ವಿವಿಧೈಶ್ಚ ಪರಿಶ್ರಮೈಃ ।
ಏಕೋ ದಶರಥಸ್ಯೈಷ ಪುತ್ರಃ ಸದೃಶಲಕ್ಷಣಃ ॥೧೨॥

ದೊಡ್ಡ ತಪಸ್ಸಿನಿಂದಲೂ ನಾನಾ ಯಾಗಾದಿ ಪರಿಶ್ರಮಗಳಿಂದಲೂ ಲಬ್ಧನಾದ, ದಶರಥನಿಗೆ ಸದೃಶ ಲಕ್ಷಣಗಳಿಂದೊಪ್ಪುವ ಮುಖ್ಯ ಪುತ್ರನು ಈ ರಾಮ.

ಅಸ್ಮಿನ್ ಪ್ರವ್ರಾಜಿತೇ ರಾಜಾ ನ ಚಿರಂ ವರ್ತಯಿಷ್ಯತಿ ।
ವಿಧವಾ ಮೇದಿನೀ ನೂನಂ ಕ್ಷಿಪ್ರಮೇವ ಭವಿಷ್ಯತಿ ॥೧೩॥

ಅಂಥ ರಾಮನನ್ನು ಕಾಡಿಗೆ ಕಳಿಸಿದ ಮೇಲೆ ರಾಜ ಹೆಚ್ಚು ದಿನ ಬದುಕಿರುವುದಿಲ್ಲ. ನಿಶ್ಚಯವಾಗಿ ರಾಜ್ಯವು ಬೇಗನೆ ಅನಾಥವಾಗುವುದು.

ವಿನದ್ಯ ಸುಮಹಾನಾದಂ ಶ್ರಮೇಣೋಪರತಾಃ ಸ್ತ್ರಿಯಃ ।
ನಿಘ್ರೋಷೋಪರತಂ ನೂನಮದ್ಯ ರಾಜನಿವೇಶನಮ್ ॥೧೪॥

ಅಂತಃಪುರಸ್ತ್ರೀಯರು ದೊಡ್ಡಧ್ವನಿಯಿಂದ ಅತ್ತು ಆಯಾಸದಿಂದ ಸುಮ್ಮನಾಗಿರುತ್ತಾರೆ. ಅರಮನೆಯಲ್ಲಿ ಈಗ ಏನೂ ಗದ್ದಲವಿರುವುದಿಲ್ಲ ಎಂದು ನಾನು ಭಾವಿಸುತ್ತೇನೆ.

ಕೌಸಲ್ಯಾ ಚೈವ ರಾಜಾ ಚ ತಥೈವ ಜನನೀ ಮಮ ।
ನಾಶಂಸೇ ಯದಿ ಜೀವೇಯುಃ ಸರ್ವೇ ತೇ ಶರ್ವರೀಮಿಮಾಮ್ ॥೧೫॥

ಕೌಸಲ್ಯೆಯೂ ರಾಜನೂ ನನ್ನ ಮಾತೆಯೂ ಇವರೆಲ್ಲರೂ ಈ ರಾತ್ರಿಯಲ್ಲಿ ಬದುಕಿರುತ್ತಾರೆ ಎಂದು ನಾನು ನಿರೀಕ್ಷಿಸುವುದಿಲ್ಲ.

ಜೀವೇದಪಿ ಹಿ ಮೇ ಮಾತಾ ಶತ್ರುಘ್ನಸ್ಯಾನ್ವವೇಕ್ಷಯಾ ।
ದುಃಖಿತಾ ಯಾ ತು ಕೌಸಲ್ಯಾ ವೀರಸೂರ್ವಿನಶಿಷ್ಯತಿ ॥೧೬॥

ಒಂದುವೇಳೆ ನನ್ನ ಮಾತೆ ಶತ್ರುಘ್ನನನ್ನು ನೋಡುತ್ತ ಬದುಕಿದರೂ ವೀರರಾಮನ ಮಾತೆ ದುಃಖದಿಂದ ಪ್ರಾಣತ್ಯಾಗವನ್ನೇ ಮಾಡುವಳು.

ಅತಿಕ್ರಾಂತಮತಿಕ್ರಾಂತಮನವಾಪ್ಯ ಮನೋರಥಮ್ ।
ರಾಜ್ಯೇ ರಾಮಮನಿಕ್ಷಿಪ್ಯ ಪಿತಾ ಮೇ ವಿನಶಿಷ್ಯತಿ ॥೧೭॥

'ಹೋಯಿತು, ಎಲ್ಲವೂ ಹೋಯಿತು' ಎಂದು ರಾಮನಿಗೆ ಅಭಿಷೇಕ ಮಾಡುವ ಮನೋರಥವನ್ನು ಈಡೇರಿಸಿಕೊಳ್ಳಲಾಗದೆ ನನ್ನ ತಂದೆ ರಾಜ್ಯದಲ್ಲಿ ರಾಮನನ್ನು ಕೂಡಿಸದೆಯೇ ಮರಣ ಹೊಂದುವನು.

ಸಿದ್ಧಾರ್ಥಾಃ ಪಿತರಂ ವೃತ್ತಂ ತಸ್ಮಿನ್ ಕಾಲೇ ಹ್ಯುಪಸ್ಥಿತೇ ।
ಪ್ರೇತಕಾರ್ಯೇಷು ಸರ್ವೇಷು ಸಂಸ್ಕರಿಷ್ಯಂತಿ ಭೂಮಿಪಮ್ ॥೧೮॥

ಇದರಿಂದ ಅಭೀಷ್ಟಸಿದ್ಧಿಯನ್ನು ಪಡೆದವರು ಆ ಕಾಲದಲ್ಲಿ ಎಲ್ಲ ಉತ್ತರಕ್ರಿಯೆ-ಗಳಲ್ಲಿ ಪಾಲ್ಗೊಂಡು ಮೃತನಾದ ತಂದೆಯಾದ ರಾಜನಿಗೆ ಸಂಸ್ಕಾರ ಮಾಡುವರು. ನಮಗೆ ಆ ಅವಕಾಶವೂ ಲಭ್ಯವಾಗುವುದಿಲ್ಲ.

ರಮ್ಯಚತ್ವರಸಂಸ್ಥಾನಾಂ ಸುವಿಭಕ್ತಮಹಾಪಥಾಮ್ ।
ಹರ್ಮ್ಯಪ್ರಾಸಾದಸಂಪನ್ನಾಂ ಸರ್ವರತ್ನವಿಭೂಷಿತಾಮ್ ॥೧೯॥

ಗಜಾಶ್ವರಥಸಂಬಾಧಾಂ ತೂರ್ಯನಾದವಿನಾದಿತಾಮ್ ।
ಸರ್ವಕಲ್ಯಾಣಸಂಪೂರ್ಣಾಂ ಹೃಷ್ಟಪುಷ್ಟಜನಾಕುಲಾಮ್ ॥೨೦॥

ಆರಾಮೋದ್ಯಾನಸಂಪನ್ನಾಂ ಸಮಾಜೋತ್ಸವಶಾಲಿನೀಮ್ ।
ಸುಖಿತಾ ವಿಚರಿಷ್ಯಂತಿ ರಾಜಧಾನೀಂ ಪಿತುರ್ಮಮ ॥೨೧॥

ರಮ್ಯವಾದ ಚೌಕಗಳು ಸಮವಾದ ರಾಜಮಾರ್ಗಗಳು ಮಾಳಿಗೆ ಉಪ್ಪರಿಗೆ ಮನೆಗಳು ಎಲ್ಲ ಶ್ರೇಷ್ಠ ಪದಾರ್ಥಗಳು. ಇವುಗಳಿಂದ ಕೂಡಿದ,, ಆನೆ ಕುದುರೆ ರಥಗಳಿಂದ ತುಂಬಿದ ಮಂಗಳವಾದ್ಯ ಘೋಷಗಳು ಎಲ್ಲ ಮಂಗಳಕಾರ್ಯಗಳು ಸಂತುಷ್ಟಸಮೃದ್ಧ ಜನಗಳು ಉದ್ಯಾನ ಉಪವನಗಳು ಸಮಾಜೋತ್ಸವಗಳಿಂದ ಶೋಭಿಸುವ ನನ್ನ ತಂದೆಯ ರಾಜಧಾನಿ ಅಯೋಧ್ಯೆಯಲ್ಲಿ ಪ್ರಜೆಗಳು ಸಂಚರಿಸುತ್ತಾರೆ.

ಅಪಿ ಸತ್ಯಪ್ರತಿಜ್ಞೇನ ಸಾರ್ಧಂ ಕುಶಲಿನಾ ವಯಮ್ ।
ನಿವೃತ್ತೇ ಸಮಯೇ ಹ್ಯಸ್ಮಿನ್ ಸುಖಿತಾಃ ಪ್ರವಿಶೇಮಹಿ ॥೨೨॥

ಈ ವನವಾಸ ತೀರಿದಾಗ ಸತ್ಯಪ್ರಜ್ಞನಾದ ಕುಶಲಿಯಾದ ರಾಮನೊಂದಿಗೆ ಅಯೋಧ್ಯೆಯನ್ನು ನಾವು ಪ್ರವೇಶಿಸುವೆವೆ?

ಪರಿದೇವಯಮಾನಸ್ಯ ತಸ್ಯೈವಂ ಸುಮಹಾತ್ಮನಃ ।
ತಿಷ್ಠತೋ ರಾಜಪುತ್ರಸ್ಯ ಶರ್ವರೀ ಸಾತ್ಯವರ್ತತ ॥೨೩॥

ಹೀಗೆ ಮಹಾತ್ಮ ರಾಜಕುಮಾರ ಲಕ್ಷ್ಮಣನು ವಿಲಾಪ ಮಾಡುತ್ತಿದ್ದಂತೆಯೇ ಆ ರಾತ್ರಿ ಕಳೆಯಿತು.

ಇಲ್ಲಿ ಮೂರನೆ ಶ್ಲೋಕದಿಂದ ಇಪ್ಪತ್ತಮೂರನೆ ಶ್ಲೋಕದವರೆಗೂ ಎಲ್ಲವೂ 51ನೇ ಸರ್ಗದಲ್ಲಿ ಬಂದಿವೆ. ಅಲ್ಲಿ ಕವಿ ತಾನೇ ಇವನ್ನು ಹೇಳಿದ್ದಾನೆ. ಇಲ್ಲಿ ಗುಹನಿಂದ ಹೇಳಿಸಿದ್ದಾನೆ.

ಪ್ರಭಾತೇ ವಿಮಲೇ ಸೂರ್ಯೇ ಕಾರಯಿತ್ವಾ ಜಟಾ ಉಭೌ ।
ಅಸ್ಮಿನ್ ಭಾಗೀರಥೀತೀರೇ ಸುಖಂ ಸಂತಾರಿತೌ ಮಯಾ ॥೨೪॥

ಸೂರ್ಯನು ನಿರ್ಮಲವಾಗಿ ಹೊಳೆದಾಗ ರಾಮಲಕ್ಷ್ಮಣರಿಬ್ಬರಿಗೂ ಜಟಾಧಾರಣೆ ಮಾಡಿಸಿ ಇದೇ ಭಾಗೀರಥೀತೀರದಲ್ಲಿ ಇಬ್ಬರನ್ನೂ ನದಿ ದಾಟಿಸಿದೆನು.

ಜಟಾಧರೌ ತೌ ದ್ರುಮಚೀರವಾಸಸೌ
ಮಹಾಬಲೌ ಕುಂಜರಯೂಥಪೋಪಮೌ ।
ವರೇಷುಚಾಪಾಸಿಧರೌ ಪರಂತಪೌ
ವ್ಯವೇಕ್ಷಮಾಣೌ ಸಹ ಸೀತಯಾ ಗತೌ ॥೨೫॥

ಎರಡು ಮದ್ದಾನೆಗಳಂಥವರು ಮಹಾಬಲಿಶಾಲಿಗಾದ ಶತ್ರು ತಾಪಕರಾದ ರಾಮಲಕ್ಷ್ಮಣರು ಜಟೆಗಳನ್ನು ಧರಿಸಿ ನಾರುಡೆಗುಟ್ಟು ಉತ್ತಮಧನುರ್ಬಾಣ ಗಳನ್ನು ಧರಿಸಿ ನಮ್ಮನ್ನೆ ಪುನಃಪುನಃ ನೋಡುತ್ತ ಸೀತೆಯೊಂದಿಗೆ ಹೊರಟು ಹೋದರು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಎಂಭತ್ತಾರನೇ ಸರ್ಗ ಮುಗಿಯಿತು.

❖

ಸಪ್ತಾಶೀತಿತಮಃ ಸರ್ಗಃ

ಸರ್ಗ – 87

ಶ್ರೀರಾಮನ ವೃತ್ತಾಂತವನ್ನು ವಿವರವಾಗಿ ಕೇಳುವುದು.

ಗುಹಸ್ಯ ವಚನಂ ಶ್ರುತ್ವಾ ಭರತೋ ಭೃಶಮಪ್ರಿಯಮ್ ।
ಧ್ಯಾನಂ ಜಗಾಮ ತತ್ರೈವ ಯತ್ರ ತಚ್ಛ್ರುತಮಪ್ರಿಯಮ್ ॥೧॥

'ಶ್ರೀರಾಮ ಸೀತೆಯೊಂದಿಗೆ ಬರಿ ನೆಲದ ಮೇಲೆ ಮಲಗಿದ್ದನ್ನು ಕಂಡರೆ ನನಗೆ ಹೇಗೆ ನಿದ್ದೆ ಬರುತ್ತದೆ? ಅತ್ತ ರಾಮನ ವಿಯೋಗ ಶೋಕದಿಂದ ಬೇಯುವ ತಂದೆ ದಶರಥನು ಹೆಚ್ಚುದಿನ ಬದುಕಿರುವುದಿಲ್ಲ' ಎಂದು ಮುಂತಾಗಿ ಲಕ್ಷ್ಮಣನು ಆಡಿದ ಅಪ್ರಿಯವಾದ ಮಾತನ್ನು ಗುಹನು ಹೇಳಿದಾಗ ಅತ್ಯಂತ ಅಪ್ರಿಯವಾದ ಆ ಮಾತನ್ನು ಕೇಳಿದ ಆ ಕ್ಷಣದಲ್ಲಿಯೇ ಭರತನು ರಾಮನ ಧ್ಯಾನದಲ್ಲಿ ಮುಳುಗಿ-ಹೋದನು.

ಸುಕುಮಾರೋ ಮಹಾಸತ್ತ್ವಃ ಸಿಂಹಸ್ಕಂಧೋ ಮಹಾಭುಜಃ
ಪುಂಡರೀಕವಿಶಾಲಾಕ್ಷಸ್ತರುಣಃ ಪ್ರಿಯದರ್ಶನಃ ॥೨॥

ಭರತನು ಸುಕುಮಾರಸುಂದರ ಶರೀರಿ. ಮಹಾಸತ್ವ ಉಳ್ಳವನು. ಸಿಂಹದಂಥ ಹೆಗಲು ಮಹಾಭುಜ ಕಮಲದಂಥ ಉದ್ದಕಣ್ಣು ನೋಡಲು ಪ್ರಿಯನೆನಿಸುವ ತರುಣ.

ಪ್ರತ್ಯಾಶ್ವಸ್ಯ ಮುಹೂರ್ತಂ ತು ಕಾಲಂ ಪರಮದುರ್ಮನಾಃ ।
ಪಪಾತ ಸಹಸಾ ತೋತ್ತ್ರೈರ್ಹತ ಇದ್ಧ ಇವ ದ್ವಿಪಃ ॥೩॥

ಒಂದು ಮುಹೂರ್ತಕಾಲ ಪರಮ ಮನೋವೇದನೆಯನ್ನು ಅನುಭವಿಸಿ ಸಾವರಿಸಿಕೊಂಡರೂ ಒಡನೆ ಅಂಕುಶದಿಂದ ತಿವಿದ ಆನೆಯಂತೆ ಪುನಃ ಎದೆಯಲ್ಲಿ ಬಲವಾದ ದುಃಖವೇಗದಿಂದ ಮೈಮರೆತು ನೆಲದಲ್ಲಿ ಒರಗಿದ.

ತದವಸ್ಥಂ ತು ಭರತಂ ಶತ್ರುಘ್ನೋऽನಂತರಸ್ಥಿತಃ ।
ಪರಿಷ್ವಜ್ಯ ರುರೋದೋಚ್ಚೈರ್ವಿಸಂಜ್ಞಃ ಶೋಕಕರ್ಶಿತಃ ॥೪॥

ಬಳಿಯಲ್ಲಿಯೇ ಇದ್ದ ಶತ್ರುಘ್ನನು ಕೂಡ ಭರತನ ಆ ಅವಸ್ಥೆಯನ್ನು ಕಂಡು, ಅವನನ್ನು ತಬ್ಬಿಕೊಂಡು, ಶೋಕದಿಂದ ಸೊರಗಿ ಮೈಮರೆತು ಗಟ್ಟಿಯಾಗಿ ಅಳತೊಡಗಿದ.

ತತಃ ಸರ್ವಾಃ ಸಮಾಪೇತುರ್ಮಾತರೋ ಭರತಸ್ಯ ತಾಃ ।
ಉಪವಾಸಕೃಶಾ ದೀನಾ ಭರ್ತುರ್ವ್ಯಸನಕರ್ಶಿತಾಃ ॥೫॥

ತಾಶ್ಚ ತಂ ಪತಿತಂ ಭೂಮೌ ರುದಂತ್ಯಃ ಪರ್ಯವಾರಯನ್ ।
ಕೌಸಲ್ಯಾ ತ್ವನುಸೃತ್ಯೈನಂ ದುರ್ಮನಾಃ ಪರಿಷಸ್ವಜೇ ॥೬॥

ಒಡನೆ ಅಲ್ಲಿಗೆ ಭರತನ ಎಲ್ಲ ತಾಯಂದಿರೂ ಧಾವಿಸಿ ಬಂದರು. ಅವರು ಮೊದಲೇ ಪತಿವಿಯೋಗದಿಂದ ಸೊರಗಿ, ಉಪವಾಸದಿಂದಲೂ ಸೊರಗಿ ದುಃಖಿಸುತ್ತಿದ್ದವರು, ಭರತನು ನೆಲದಮೇಲೆ ಬಿದ್ದುದನ್ನು ಕಂಡಾಗ ಅಳುತ್ತ ಸುತ್ತಲೂ ನೆರೆದರು. ಕೌಸಲ್ಯೆಯು ಬಳಿಗೆ ಬಂದು ಹಿಡಿದೆತ್ತಿ ತಬ್ಬಿಕೊಂಡಳು.

ವತ್ಸಲಾ ಸ್ತಂ ಯಥಾ ವತ್ಸಮುಪಗೂಹ್ಯ ತಪಸ್ವಿನೀ ।
ಪರಿಪಪ್ರಚ್ಛ ಭರತಂ ರುದಂತೀ ಶೋಕಕರ್ಶಿತಾ ॥೭॥

ಪುತ್ರವತ್ಸಲೆಯಾದ ತಪಸ್ವಿನಿಯಾದ ಕೌಸಲ್ಯೆ ಪುತ್ರರಾಮನನ್ನು ಹೇಗೋ ಹಾಗೇ ಭರತನನ್ನು ತಬ್ಬಿಕೊಂಡು ಶೋಕಪರವಶತೆಯಿಂದ ಅಳುತ್ತ ಕೇಳಿದಳು.

ಪುತ್ರ ವ್ಯಾಧಿರ್ನ ತೇ ಕಚ್ಚಿಚ್ಛರೀರಂ ಪರಿಬಾಧತೇ ।
ಅದ್ಯ ರಾಜಕುಲಸ್ಯಾಸ್ಯ ತ್ವದಧೀನಂ ಹಿ ಜೀವಿತಮ್ ॥೮॥

ಮಗು, ವ್ಯಾಧಿ ಏನಾದರೂ ನಿನ್ನ ಶರೀರವನ್ನು ಬಾಧಿಸುತ್ತಿಲ್ಲ ತಾನೆ? ಈ ರಾಜಕುಲದ ಉಳಿವು ಈಗ ನಿನ್ನ ಅಧೀನವಿದೆ.

ತ್ವಾಂ ದೃಷ್ಟ್ವಾ ಪುತ್ರ ಜೀವಾಮಿ ರಾಮೇ ಸಭ್ರಾತೃಕೇ ಗತೇ ।
ವೃತ್ತೇ ದಶರಥೇ ರಾಜ್ಞಿ ನಾಥ ಏಕಸ್ತ್ವಮದ್ಯ ನಃ ॥೯॥

ರಾಮನು ಲಕ್ಷ್ಮಣಸಮೇತನಾಗಿ ಹೊರಟುಹೋದ ಬಳಿಕ, ಮಗು, ನಾನು ಈಗ ನಿನ್ನ ಮುಖವನ್ನೇ ಕಂಡು ಬದುಕಿದ್ದೇನೆ. ರಾಜಾ ದಶರಥ ದಿವಂಗತನಾದ ಬಳಿಕ ನಮಗೆ ಈಗ ನೀನೊಬ್ಬನೇ ರಕ್ಷಕನಾಗಿರುವೆ.

ಕಚ್ಚಿನ್ನು ಲಕ್ಷ್ಮಣೇ ಪುತ್ರ ಶ್ರುತಂ ತೇ ಕಿಂಚಿದಪ್ರಿಯಮ್ ।
ಪುತ್ರೇ ವಾ ಹ್ಯೇಕಪುತ್ರಾಯಾಃ ಸಹಭಾರ್ಯೇ ವನಂ ಗತೇ ॥೧೦॥

ಮಗು, ಲಕ್ಷ್ಮಣನ ಬಗ್ಗೆ ಏನಾದರೂ ಅಪ್ರಿಯವಾರ್ತೆಯನ್ನು ನೀನು ಕೇಳಲಿಲ್ಲ ತಾನೆ? ಏಕಪುತ್ರಳಾದ ನನ್ನ ಪುತ್ರನು ಭಾರ್ಯೆ ಸಮೇತನಾಗಿ ಅರಣ್ಯದಲ್ಲಿರುವಾಗ ಅವನ ಬಗ್ಗೆ ಏನಾದರೂ ಅಪ್ರಿಯವಾದ ವಾರ್ತೆ ನಿನ್ನ ಕಿವಿಗೆ ಬೀಳಲಿಲ್ಲ ತಾನೆ?

ಸ ಮುಹೂರ್ತಂ ಸಮಾಶ್ವಸ್ಯ ರುದನ್ನೇವ ಮಹಾಯಶಾಃ ।
ಕೌಸಲ್ಯಾಂ ಪರಿಸಾಂತ್ವೇದಂ ಗುಹಂ ವಚನಮಬ್ರವೀತ್ ॥೧೧॥

ಒಂದು ಮುಹೂರ್ತಕಾಲ ಮಹಾಯಶಸ್ವಿಯಾದ ಭರತನು ಮೈಮರೆತಿದ್ದು ಬಳಿಕ ಸಾವರಿಸಿಕೊಂಡು ಅಳುತ್ತಲೇ ಕೌಸಲ್ಯೆಯನ್ನು ಸಂತೈಸಿ ಗುಹನನ್ನು ಕೇಳಿದ.

ಭ್ರಾತಾ ಮೇ ಕ್ವಾವಸದ್ರಾತ್ರಿಂ ಕ್ವ ಸೀತಾ ಕ್ವ ಚ ಲಕ್ಷ್ಮಣಃ ।
ಅಸ್ವಪಚ್ಛಯನೇ ಕಸ್ಮಿನ್ ಕಿಂ ಭುಕ್ತ್ವಾ ಗುಹ ಶಂಸ ಮೇ ॥೧೨॥

ಗುಹನೆ, ನನ್ನ ಸೋದರ ರಾಮನು ರಾತ್ರಿಯಲ್ಲಿ ಎಲ್ಲಿ ಮಲಗಿದ? ಸೀತೆ ಎಲ್ಲಿ ಮಲಗಿದಳು? ಲಕ್ಷ್ಮಣನೆಲ್ಲಿ ಮಲಗಿದ? ಏನು ಉಂಡು ಯಾವ ಹಾಸಿಗೆಯಲ್ಲಿ ಅವರು ಮಲಗಿದರು? ಹೇಳು.

ಸೋಽಬ್ರವೀದ್ಭರತಂ ಹೃಷ್ಟೋ ನಿಷಾದಾಧಿಪತಿರ್ಗುಹಃ ।
ಯದ್ವಿಧಂ ಪ್ರತಿಪೇದೇ ಚ ರಾಮೇ ಪ್ರಿಯಹಿತೇಽತಿಥೌ ॥೧೩॥

ನಿಷಾದರಾಜ ಗುಹನು ಉತ್ಸಾಹದಿಂದ ತಾನು ಪ್ರಿಯನೂ ಹಿತಕರನೂ ಆದ ರಾಮ ಅತಿಥಿಯಾಗಿ ಬಂದಾಗ ಅವನಿಗೆ ಏನೇನು ಉಪಚಾರ ಮಾಡಿದನೆಂಬುದನ್ನು ಹೇಳಿದನು.

ಅನ್ನಮುಚ್ಚಾವಚಂ ಭಕ್ಷಾಃ ಫಲಾನಿ ವಿವಿಧಾನಿ ಚ ।
ರಾಮಾಯಾಭ್ಯವಹಾರಾರ್ಥಂ ಬಹು ಚೋಪಹೃತಂ ಮಯಾ ॥೧೪॥

ನಾನಾ ಬಗೆಯ ಅನ್ನ ಭಕ್ಷ್ಯಗಳನ್ನೂ ನಾನಾ ಬಗೆ ಹಣ್ಣುಗಳನ್ನೂ ನಾನು ರಾಮನಿಗೆ ಉಣಲು ಬಹುವಾಗಿ ತಂದುಕೊಟ್ಟೆ.

ತತ್ಸರ್ವಂ ಪ್ರತ್ಯನುಜ್ಞಾಸೀದ್ರಾಮಃ ಸತ್ಯಪರಾಕ್ರಮಃ ।
ನ ತು ತತ್ಪ್ರತ್ಯಗೃಹ್ಣಾತ್ ಸ ಕ್ಷತ್ರಧರ್ಮಮನುಸ್ಮರನ್ ॥೧೫॥

ಸತ್ಯಪರಾಕ್ರಮನಾದ ರಾಮನು ಅವೆಲ್ಲವನ್ನೂ ದೃಷ್ಟಿಯಿಂದ ಸ್ವೀಕರಿಸಿದ. ಆದರೆ ಕ್ಷಾತ್ರಧರ್ಮವನ್ನು ಆಲೋಚಿಸಿ, ಉಣಲಿಲ್ಲ.

ನ ಹ್ಯಸ್ಮಾಭಿಃ ಪ್ರತಿಗ್ರಾಹ್ಯಂ ಸಖೇ ದೇಯಂ ತು ಸರ್ವದಾ ।
ಇತಿ ತೇನ ವಯಂ ಸರ್ವೇ ಅನುನೀತಾ ಮಹಾತ್ಮನಾ ॥೧೬॥

'ಮಿತ್ರನೆ, ನಾವು ಕ್ಷತ್ರಿಯರು, ತಾವು ಉಣಬಾರದು, ಪರರನ್ನು ಸದಾ ಉಣಿಸಬೇಕು' ಮಹಾತ್ಮನಾದ ರಾಮ ನಮ್ಮನ್ನು ಎಲ್ಲರನ್ನೂ ಹೀಗೆ ಸಮಾಧಾನ ಗೊಳಿಸಿದ.

ಇಲ್ಲಿ ಪ್ರಶ್ನೆ ಬರುತ್ತದೆ— ರಾಮ ಭರದ್ವಾಜರ ಅನ್ನವನ್ನು ಹೇಗೆ ಉಂಡ? ಶಬರಿಕೊಟ್ಟ ಹಣ್ಣನ್ನು ಹೇಗೆ ತಿಂದ? ಕ್ಷತ್ರಿಯನು ಯಾರ ಅನ್ನವನ್ನೂ ಉಣ್ಣಬಾರದು ತಾನೆ? ನಿಜ. ಕ್ಷತ್ರಿಯನು ಬ್ರಾಹ್ಮಣರಂತೆ ಬೇಡಿ ಉಣಬಾರದೆಂದು ನಿಯಮ. ಭರದ್ವಾಜರಂತೆ ಶಬರಿಯಂತೆ ತಾವಾಗಿ ಇತರರು ಕೊಟ್ಟರೆ ಉಣಬಹುದು. ಅದರಿಂದಲೇ ರಾಜನು ಪ್ರಜೆಗಳು ನೀಡುವ ಷಡ್‌ಭಾಗವನ್ನು ಉಂಡೇ ಬದುಕುತ್ತಾನೆ. ಹಾಗಾದರೆ ಗುಹನನ್ನೂ ರಾಮ ಬೇಡಲಿಲ್ಲ. ಅವನು ತಾನಾಗಿ ತಂದುಕೊಟ್ಟ ಅನ್ನವನ್ನು ರಾಮನೇಕೆ ಉಣಲಿಲ್ಲ? ಎಂಬ ಪ್ರಶ್ನೆ ಹಾಗೇ ಉಳಿಯಿತು, ಎಂದರೆ ಭಕ್ತನು ಕೊಟ್ಟಿದ್ದನ್ನು ಭಗವಂತ ಸ್ವೀಕಾರ ಮಾಡದಿರುವುದಿಲ್ಲ. ಪ್ರಕೃತ ರಾಮ ಸ್ವೀಕಾರ ಮಾಡಿದ್ದಾನೆ, ದೃಷ್ಟಿಯಿಂದಲೇ ಸ್ವೀಕಾರ ಮಾಡಿದ್ದಾನೆ— 'ಪ್ರತ್ಯನುಜ್ಞಾಸೀತ್'

ಉಣದಿರಲು ಕಾರಣ, ಅವನ ಕ್ಷತ್ರ ಧರ್ಮ ಅಡ್ಡಬರುತ್ತಿದೆ ಎಂದು. 'ಮುನಿಗಳ ಅನ್ನ ಉಣುತ್ತಲೆ ತಾನು ವನವಾಸ ಮಾಡು'ವುದಾಗಿ ರಾಮ ಪ್ರತಿಜ್ಞೆ ಮಾಡಿದ್ದಾನೆ. 51ನೇ ಸರ್ಗದಲ್ಲಿ—

'ಕುಶಚೀರಾಜಿನಧರಂ ಫಲಮೂಲಾಶಿನಂ ಚ ಮಾಂ ವಿದ್ಧಿ'

ಎಂದು ರಾಮನೇ ಗುಹನಿಗೆ ಹೇಳಿದ್ದಾನೆ.

ಪ್ರತಿಜ್ಞಾಪಾಲನೆ ಕ್ಷತ್ರಿಯನ ವಿಶೇಷ ಧರ್ಮ. ಗುಹನು ನೀಡಿದ ಅನ್ನ ಉಂಡರೆ ಈ ಕ್ಷತ್ರಿಯಧರ್ಮದ ವಿರೋಧ ಬರುತ್ತದೆ.

'ಅನ್ನ ಉಣದಿದ್ದರೂ, ಹಣ್ಣಹಂಪಲು ಮುನ್ಯನ್ನ ತಾನೆ? ಅದನ್ನಾದರೂ ಉಣಬಹುದಿತ್ತು' ಎಂದರೆ, ರಾಮನೀಗ ಗಂಗಾತೀರಕ್ಕೆ ಬಂದು ತೀರ್ಥೋಪವಾಸ ವ್ರತನಿಷ್ಠನಾದ್ದರಿಂದ ಹಣ್ಣನ್ನು ತಿನ್ನಲಿಲ್ಲ. ಲಕ್ಷ್ಮಣನಿಂದ ನೀರನ್ನು ತರಿಸಿ ಕುಡಿಯುತ್ತಾನೆ ರಾಮ. ಭಾರದ್ವಾಜಶ್ರಮದಲ್ಲಿ ತೀರ್ಥೋಪ ವಾಸವಿಲ್ಲದ್ದರಿಂದ ಅನ್ನ ಉಂಡಿದ್ದಾನೆ ಎಂದು ಸಮಾಧಾನ. 'ನೀರು ಕುಡಿದರೆ ವ್ರತಭಂಗವಾಗುವುದಿಲ್ಲ' ಎಂದು ಪೀತ್ವಾವಾರಿ 'ಔಪವಾಸ್ಯಂ ತದಾಕಾರ್ಷೀತ್' ಎಂದು ಮುಂದಿನ ಶ್ಲೋಕದಲ್ಲಿಯೇ ಇದನ್ನು ಗುಹನು ಹೇಳುತ್ತಾನೆ.

ಅಥವಾ ಪ್ರಶ್ನೆಗೆ ಹೀಗೆ ಸಮಾಧಾನ— ಕ್ಷತ್ರಿಯನು ದಾನ ಮಾಡಬೇಕು ಹೊರತು ಪ್ರತಿಗ್ರಹ ಮಾಡಬಾರದೆಂದು ಸಾಮಾನ್ಯ ನಿಯಮವಿದೆ. ಅದಕ್ಕನುಸಾರವಾಗಿ ಗುಹನು ಕೊಟ್ಟ ಅನ್ನವನ್ನು ಉಣಲಾರೆ ಎನ್ನುತ್ತಿದ್ದಾನೆ ರಾಮ. ಆದರೂ ಬೇಡಿ ತಿನ್ನದಿರುವುದೇ ಅಪ್ರತಿಗ್ರಹ ನಿಯಮವೆಂದಮೇಲೆ ಗುಹನು ತಾನಾಗಿ ಕೊಟ್ಟ ಅನ್ನವನ್ನು ರಾಮನೇಕೆ ನಿರಾಕರಿಸಿದ? ಇದು ಅನುಚಿತ ತಾನೆ? ಎಂದರೆ, ನಿಜ ಅನುಚಿತವೆ. ಆದರೆ, ಪ್ರತಿಜ್ಞಾಪಾಲನಧರ್ಮ ದೃಷ್ಟಿಯಿಂದ ರಾಮ ಹೀಗೆ ಮಾಡಿದ ಎನ್ನುವ ನಿಜವಾದ ಕಾರಣವನ್ನು ಮರೆಮಾಚಿ, ಅನುನಯಕ್ಕಾಗಿ ಅಪ್ರತಿಗ್ರಹಧರ್ಮದೃಷ್ಟಿಯಿಂದ ಹೀಗೆ ಮಾಡಿದೆನೆನ್ನುತ್ತಾನೆ. ಅನುನಯಕ್ಕಾಗಿ ಹೇಳುವ ಸಮಾಧಾನ ಸರಿಯಾದ ಸಮಾಧಾನವಾಗಿರಬೇಕಿಲ್ಲ. ಅನುನಯಕ್ಕಾಗಿ ಹಾಗೆ ಹೇಳಿದರೆ ತಪ್ಪಾಗುವುದಿಲ್ಲ. ಮುಂದೆ ಅನುನಯಕ್ಕಾಗಿ ಜಾಬಾಲಿ ಮುನಿಗಳು ನಾಸ್ತಿಕ್ಯ ಉಪದೇಶ ನೀಡುವುದು ಮುಂದೆ ಇಲ್ಲಿಯೇ ಬರುತ್ತದೆ. ಈ ಅಂಶವನ್ನು ವಾಲ್ಮೀಕಿ 'ಸರ್ವೇ ಅನುನೀತಾಃ' ಎಂದು ವಿಸಂಧಿಮಾಡುವುದರ ಮೂಲಕ ಸೂಚಿಸುತ್ತಿದ್ದಾನೆ ಎಂದು ಸತ್ಯಧರ್ಮತೀರ್ಥರು ಇಲ್ಲಿ ಹೇಳಿದ್ದಾರೆ.

ಗೋವಿಂದರಾಜೀಯದಲ್ಲಿ 'ರಾಜನ್ನನುನೀತಾಃ' ಎಂದು ಪಾಠವಿದೆ. ಉಳಿದ ವ್ಯಾಖ್ಯಾನಗಳಲ್ಲಿ 'ಸರ್ವೇ ಅನುನೀತಾಃ' ಎಂದೇ ಪಾಠವಿದೆ.

ಲಕ್ಷ್ಮಣೇನ ಸಮಾನೀತಂ ಪೀತ್ವಾ ವಾರಿ ಮಹಾತ್ಮನಾ ।
ಔಪವಾಸ್ಯಂ ತದಾಕಾರ್ಷೀದ್ರಾಘವಃ ಸಹ ಸೀತಯಾ ॥೧೭॥

ನೀರು ಕುಡಿದರೆ ವ್ರತಭಂಗವಾಗದಿರುವುದರಿಂದ ಮಹಾತ್ಮರಾಮನು ಲಕ್ಷ್ಮಣನಿಂದ ನೀರು ತರಿಸಿ ಕುಡಿದು ಸೀತೆಯೊಂದಿಗೆ ಉಪವಾಸವ್ರತವನ್ನು ಆಚರಿಸಿದನು.

ತತಸ್ತು ಜಲಶೇಷೇಣ ಲಕ್ಷ್ಮಣೋಽಪ್ಯಕರೋತ್ತದಾ ।
ವಾಗ್ಯತಾಸ್ತೇ ತ್ರಯಃ ಸಂಧ್ಯಾಂ ಸಮುಪಾಸತ ಸಂಹಿತಾಃ ॥೧೮॥

ಬಳಿಕ ರಾಮಸೀತೆಯರು ಕುಡಿದುಳಿದ ನೀರನ್ನು ಕುಡಿದು ಲಕ್ಷ್ಮಣನೂ ಉಪವಾಸ ಮಾಡಿದ. ಮೂವರೂ ಒಂದೆಡೆ ಕುಳಿತು ಮೌನವಾಗಿ ಸಂಧ್ಯೋಪಾಸನೆ ಮಾಡಿದರು.

ಸಂಧ್ಯೋಪಾಸನೆ ಮುಗಿಸಿದ ಬಳಿಕ ಜಲಪಾನ ಮಾಡಬೇಕಾಗಿತ್ತು ಮೊದಲಿಗೇ ಜಲಪಾನ ಮಾಡಿದ್ದು ಸರಿಯೆ? ಹಿಂದೆ 51ನೇ ಸರ್ಗದಲ್ಲಿ—

ತತಶ್ಚೀರೋತ್ತರಾಸಂಗಃ ಸಂಧ್ಯಾಮನ್ವಾಸ್ಯ ಪಶ್ಚಿಮಾಂ ।
ಜಲಮೇವಾದದೇ ಭೋಜ್ಯಂ ಲಕ್ಷ್ಮಣೇನಾಹೃತಂ ಸ್ವಯಂ ॥

ಸಂಧ್ಯೋಪಾಸನೆ ಮಾಡಿದ ಬಳಿಕ ತೀರ್ಥಜಲ ಪಾನಮಾಡಿದರೆಂದು ಸ್ಪಷ್ಟವಾಗಿದೆ ನಿಜ. ಆದರೂ ಅಲ್ಲಿ ಹೇಳಿದ್ದೇ ಸರಿ. ಇಲ್ಲಿ ಗುಹನು ತಾನು ನೀಡಿದ 'ಅನ್ನವನ್ನು ರಾಮ ಉಣಲಿಲ್ಲ ಬರಿ ನೀರು ಕುಡಿದನೆ'ಂದು ಹೇಳುವ ಸಂದರ್ಭದಲ್ಲಿ ಮೊದಲಿಗೆ ಜಲಪಾನವನ್ನು ಹೇಳುತ್ತಿದ್ದಾನೆ. 'ಜಲಪಾನಾ ನಂತರ' ಸಂಧ್ಯೋಪಾಸನೆ ಮಾಡಿದನೆಂದು ಹೇಳುತ್ತಿಲ್ಲ.

ಸೌಮಿತ್ರಿಸ್ತು ತತಃ ಪಶ್ಚಾದಕರೋತ್ ಸ್ಪಾಸ್ತರಂ ಶುಭಮ್ ।
ಸ್ವಯಮಾನೀಯ ಬರ್ಹಿಂಷಿ ಕ್ಷಿಪ್ರಂ ರಾಘವಕಾರಣಾತ್ ॥೧೯॥

ಲಕ್ಷ್ಮಣನು ಬಳಿಕ ಸ್ವತಃ ಬೇಗನೆ ದರ್ಭೆ ಹುಲ್ಲುಗಳನ್ನು ತಂದು ರಾಮನಿಗಾಗಿ ಮಂಗಳಕರವಾದ ಒಳ್ಳೆಯ ಹಾಸಿಗೆಯನ್ನು ಸಿದ್ಧಪಡಿಸಿದನು.

ತಸ್ಮಿನ್ ಸಮಾವಿಶದ್ರಾಮಃ ಸ್ಪಾಸ್ತರೇ ಸಹ ಸೀತಯಾ ।
ಪ್ರಕ್ಷಾಲ್ಯ ಚ ತಯೋಃ ಪಾದಾವಪಚಕ್ರಾಮ ಲಕ್ಷ್ಮಣಃ ॥೨೦॥

ಆ ಒಳ್ಳೆಯ ಹಾಸಿಗೆಯಲ್ಲಿ ರಾಮನು ಸೀತೆಯೊಂದಿಗೆ ಮಲಗಿದನು. ಅವರ ಪಾದಪ್ರಕ್ಷಾಲನ ಮಾಡಿ ಲಕ್ಷ್ಮಣನು ದೂರಕ್ಕೆ ಸರಿದನು.

ಏತತ್ತದಿಂಗುದೀಮೂಲಮಿದಮೇವ ಚ ತತ್ತೃಣಮ್ ।
ಯಸ್ಮಿನ್ ರಾಮಶ್ಚ ಸೀತಾ ಚ ರಾತ್ರಿಂ ತಾಂ ಶಯಿತಾವುಭೌ ॥೨೧॥

ಇದೇ ಆ ಇಂಗಳದ ಮರ. ಇದೇ ಆ ದರ್ಭೆಯ ಹುಲ್ಲು. ಅದರಲ್ಲಿ ಸೀತಾ-ರಾಮರು ಇಬ್ಬರೂ ಆ ರಾತ್ರಿ ಮಲಗಿದ್ದರು.

ನಿಯಮ್ಯ ಪೃಷ್ಠೇ ತು ತಲಾಂಗುಲಿತ್ರವಾನ್
ಶರೈಃ ಸುಪೂರ್ಣಾವಿಷುಧೀ ಪರಂತಪಃ ।
ಮಹದ್ಧನುಃ ಸಜ್ಯಮುಪೋಹ್ಯ ಲಕ್ಷ್ಮಣೋ
ನಿಶಾಮತಿಷ್ಠತ್ ಪರಿತೋಽಸ್ಯ ಕೇವಲಮ್ ॥೨೨॥

ಬೆನ್ನಿಗೆ ಬಾಣಗಳಿಂದ ತುಂಬಿದ ಎರಡು ಬತ್ತಳಿಕೆಗಳನ್ನು ಕಟ್ಟಿಕೊಂಡು ಬೆರಳು-ಗಳಿಗೆ ಚರ್ಮದ ಮುಚ್ಚಳವನ್ನು ಧರಿಸಿ ಹೆದೆಯೇರಿಸಿದ ಮಹಾ ಧನುಸ್ಸನ್ನು ಹಿಡಿದು

ಶತ್ರು ತಾಪಕನಾದ ಲಕ್ಷ್ಮಣನು ರಾತ್ರಿ ಇಡೀ ಕೇವಲ ರಾಮನ ಸುತ್ತಲೂ ಸಂಚರಿಸಿದನು ಹೊರತು ನಿದ್ರೆ ಮಾಡಲೆ ಇಲ್ಲ.

ತತಸ್ತ್ವಹಂ ಚೋತ್ತಮಬಾಣಚಾಪಧೃತ್
ಸ್ಥಿತೋಽಭವಂ ತತ್ರ ಸ ಯತ್ರ ಲಕ್ಷ್ಮಣಃ ।
ಅತಂದ್ರಿಭಿರ್ಜ್ಞಾತಿಭಿರಾತ್ತಕಾರ್ಮುಕೈಃ
ಸಹೇಂದ್ರಕಲ್ಪಂ ಪರಿಪಾಲಯಂಸ್ತದಾ ॥೨೩॥

ಆಗ ನಾನೂ ಉತ್ತಮಧನುರ್ಬಾಣಗಳನ್ನು ಹಿಡಿದು, ಧನುರ್ಧಾರಿಗಳಾದ ಸದಾ ಎಚ್ಚರದಿಂದಿರುವ ಜ್ಞಾತಿಬಾಂಧವರೊಂದಿಗೆ, ಲಕ್ಷ್ಮಣನಿರುವಲ್ಲಿಯೇ ಮಹೇಂದ್ರ ಸಮಾನನಾದ ರಾಮನ ರಕ್ಷಣೆಗೆ ನಿಂತಿದ್ದೆ.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಎಂಭತ್ತೇಳನೇ ಸರ್ಗ ಮುಗಿಯಿತು.

❖

ಅಷ್ಟಾಶೀತಿತಮಃ ಸರ್ಗಃ

ಸರ್ಗ – 88

ಶ್ರೀರಾಮನು ಮಲಗಿದ್ದ ಸ್ಥಳವನ್ನು ನೋಡಿ ಭರತನ ದುಃಖ

ತಚ್ಛ್ರುತ್ವಾ ನಿಪುಣಂ ಸರ್ವಂ ಭರತಃ ಸಹ ಮಂತ್ರಿಭಿಃ ।
ಇಂಗುದೀಮೂಲಮಾಗಮ್ಯ ರಾಮಶಯ್ಯಾಮವೇಕ್ಷ್ಯ ತಾಮ್ ॥೧॥

ಅಬ್ರವೀಜ್ಜನನೀಃ ಸರ್ವಾ ಇಹ ತೇನ ಮಹಾತ್ಮನಾ ।
ಶರ್ವರೀ ಶಯಿತಾ ಭೂಮಾವಿದಮಸ್ಯ ವಿಮರ್ದಿತಮ್ ॥೨॥

ಅದೆಲ್ಲವನ್ನೂ ಮನಸಿಟ್ಟು ಕೇಳಿ ಭರತನು ಮಂತ್ರಿಗಳೊಂದಿಗೆ ಇಂಗಳದ ಮರದ ಬಳಿಗೆ ಹೋಗಿ ಶ್ರೀರಾಮನು ಮಲಗಿದ ಸ್ಥಳವನ್ನು ಕಂಡು ತನ್ನ ಎಲ್ಲ ತಾಯಂದಿರಿಗೆ ಹೇಳಿದ, 'ಇಲ್ಲಿ ನೆಲದಮೇಲೆ ಆ ಮಹಾತ್ಮ ರಾತ್ರಿ ಇಡೀ ಮಲಗಿದ. ಇದು ಅವನ ಮೈಯು ಒತ್ತಿದ ಸ್ಥಳ'.

ಮಹಾಭಾಗಕುಲೀನೇನ ಮಹಾಭಾಗೇನ ಧೀಮತಾ ।
ಜಾತೋ ದಶರಥೇನೋರ್ವ್ಯಾಂ ನ ರಾಮಃ ಸ್ವಪ್ತುಮರ್ಹತಿ ॥೩॥

ಮಹಾಭಾಗ್ಯವಂತರ ಕುಲದಲ್ಲಿ ಬಂದವನು, ಭಾಗ್ಯವಂತ ಧೀಮಂತ, ದಶರಥನಿಂದ ಜನಿಸಿದವನು ರಾಮನು ಇಂಥ ನೆಲದಮೇಲೆ ಮಲಗಬಾರದು.

ಅಜಿನೋತ್ತರಸಂಸ್ತೀರ್ಣೇ ವರಾಸ್ತರಣಸಂವೃತೇ ।
ಶಯಿತ್ವಾ ಪುರುಷವ್ಯಾಘ್ರಃ ಕಥಂ ಶೇತೇ ಮಹೀತಲೇ ॥೪॥

ಚರ್ಮವನ್ನು ಹಾಸಿ ಅದರಮೇಲೆ ರತ್ನಗಂಬಳಿ ಹಾಸಿದ ಮಂಚದ ಮೇಲೆ ಮಲಗುತ್ತಿದ್ದ ಪುರುಷೋತ್ತಮನು ಹೇಗೆ ನೆಲದಮೇಲೆ ಮಲಗುತ್ತಾನೆ?

ಪ್ರಾಸಾದಾಗ್ರವಿಮಾನೇಷು ವಲಭೀಷು ಚ ಸರ್ವದಾ ।
ಹೈಮರಾಜತಭೌಮೇಷು ವರಾಸ್ತರಣಶಾಲಿಷು ॥೫॥

ಪುಷ್ಪಸಂಚಯಚಿತ್ರೇಷು ಚಂದನಾಗರುಗಂಧಿಷು ।
ಪಾಂಡರಾಭ್ರಪ್ರಕಾಶೇಷು ಶುಕಸಂಘರುತೇಷು ಚ ॥೬॥

ಪ್ರಾಸಾದವರವರ್ಯೇಷು ಶೀತವತ್ಸು ಸುಗಂಧಿಷು ।
ಉಷಿತ್ವಾ ಮೇರುಕಲ್ಪೇಷು ಕೃತಕಾಂಚನಭಿತ್ತಿಷು ॥೭॥

ಗೀತವಾದಿತ್ರನಿರ್ಘೋಷೈರ್ವರಾಭರಣನಿಃಸ್ವನೈಃ ।
ಮೃದಂಗವರಶಬ್ದೈಶ್ಚ ಸತತಂ ಪ್ರತಿಬೋಧಿತಃ ॥೮॥

ವಿಮಾನ ತುಲ್ಯವಾದ ಅರಮನೆಯ ತುದಿಯಲ್ಲಿರುವ ಸುವರ್ಣ ರಜತ ಮಯವಾದ ನೆಲದಮೇಲೆ ಉತ್ತಮವಾದ ಹಾಸಿಗೆಗಳುಳ್ಳ ಹೂವಿನ ರಾಶಿಗಳಿಂದ ಅಲಂಕೃತವಾಗಿರುವ ಚಂದನ ಅಗುರುಗಳ ಸುಗಂಧ ಭರಿತವಾದ ಬಿಳಿಮೋಡದಂತೆ ಶೋಭಿಸುವ ಗಿಳಿಗಳ ಸಮೂಹಗಳು ಮಾತನಾಡುವ ಶೀತಲ ಸುಗಂಧಭರಿತವಾದ ಮೇರುವಿನಂತೆ ಉನ್ನತವಾಗಿದ್ದು ಸುವರ್ಣಮಯ ಗೋಡೆಗಳಿಂದ ಕೂಡಿದ್ದು ಉತ್ತಮವಾದ ಅರಮನೆಗಳಲ್ಲಿ ಮಲಗಿ ಗೀತವಾದ್ಯಘೋಷ ಉತ್ತಮ ಆಭರಣಗಳ ಧ್ವನಿ ಮೃದಂಗಗಳ ಮಧುರಧ್ವನಿಗಳಿಂದ ಸತತವಾಗಿ ಪ್ರತಿದಿನ ಎಚ್ಚರಗೊಳ್ಳು-ತ್ತಿದ್ದವನು ರಾಮ.

ವಂದಿಭಿರ್ವಂದಿತಃ ಕಾಲೇ ಬಹುಭಿಃ ಸೂತಮಾಗಧೈಃ ।
ಗಾಥಾಭಿರನುರೂಪಾಭಿಃ ಸ್ತುತಿಭಿಶ್ಚ ಪರಂತಪಃ ॥೯॥

ಬಹುಮಂದಿ ವಂದಿಮಾಗಧ ಸೂತರಿಂದ ಮುಂಜಾನೆ ಅನುರೂಪವಾಗಿ ಗೀತಸ್ತುತಿಗಳಿಂದ ಸ್ತುತಿಸಲ್ಪಡುತ್ತಿದ್ದವನು ಶತ್ರುತಾಪಕನಾದ ರಾಮ.

ಅಶ್ರದ್ಧೇಯಮಿದಂ ಲೋಕೇ ನ ಸತ್ಯಂ ಪ್ರತಿಭಾತಿ ಮಾಮ್ ।
ಮುಹ್ಯತೇ ಖಲು ಮೇ ಭಾವಃ ಸ್ವಪ್ನೋಽಯಮಿತಿ ಮೇ ಮತಿಃ ॥೧೦॥

ರಾಮ ನೆಲದ ಮೇಲೆ ಮಲಗುವುದನ್ನು ಲೋಕದಲ್ಲಿ ಯಾರೂ ನಂಬಲಾರರು. ಇದು ಸತ್ಯವೆಂದು ನನಗೆ ಕಾಣುವುದಿಲ್ಲ. ನನ್ನ ಬುದ್ಧಿಗೆ ಏನೂ ತೋಚುವುದಿಲ್ಲ. ಸ್ವಪ್ನವೆಂದೇ ನನಗೆ ಅನಿಸುತ್ತಿದೆ.

ನ ನೂನಂ ದೈವತಂ ಕಿಂಚಿತ್ ಕಾಲೇನ ಬಲವತ್ತರಮ್ ।
ಯತ್ರ ದಾಶರಥೀ ರಾಮೋ ಭೂಮಾವೇವಮಶೇತ ಸಃ ॥೧೧॥

ದೈವವು ಕೂಡ ಪ್ರಾಯಃ ಕಾಲಕ್ಕಿಂತ ಬಲವತ್ತರವಲ್ಲ. ಏಕೆಂದರೆ ದಾಶರಥಿ ರಾಮನು ಈ ಕಾಲದಲ್ಲಿ ನೆಲದಲ್ಲಿ ಮಲಗುತ್ತಾನೆ.

ವಿದೇಹರಾಜಸ್ಯ ಸುತಾ ಸೀತಾ ಚ ಪ್ರಿಯದರ್ಶನಾ ।
ದಯಿತಾ ಶಯಿತಾ ಭೂಮೌ ಸ್ನುಷಾ ದಶರಥಸ್ಯ ಚ ॥೧೨॥

ವಿದೇಹರಾಜನ ಮಗಳು, ಬಲು ಮುದ್ದಾಗಿ ಕಾಣುವವಳು ರಾಮನಿಗೆ ಪ್ರಿಯ-ಳಾದವಳು. ದಶರಥನಿಗೆ ಸೊಸೆಯಾದವಳು ಸೀತೆ ನೆಲದಲ್ಲಿ ಮಲಗುತ್ತಾಳೆ!

ಇಯಂ ಶಯ್ಯಾ ಮಮ ಭ್ರಾತುರಿದಂ ಹಿ ಪರಿವರ್ತಿತಮ್ ।
ಸ್ಥಂಡಿಲೇ ಕಠಿನೇ ಸರ್ವಂ ಗಾತ್ರಂ ವಿಮೃದಿತಂ ತೃಣೈಃ ॥೧೩॥

ಇದು ಸೋದರನು ಮಲಗಿದ ಸ್ಥಳ. ಇದು ಪಕ್ಕಕ್ಕೆ ಹೊರಳಿದ ಸ್ಥಳ. ಬಹಳ ಒರಟಾದ ನೆಲವಾದ್ದರಿಂದ ಹಾಸಿದ ದರ್ಭೆಹುಲ್ಲು ಮೈಗೆ ಒತ್ತಿರುವುದರಿಂದ ಅವನ ಮೈಯೇ ಪೂರ್ತಿ ಪುಡಿಯಾಗಿರುತ್ತದೆ.

ಮನ್ಯೇ ಸಾಭರಣಾ ಸುಪ್ತಾ ಸೀತಾಸ್ಮಿನ್ ಶಯನೇ ಶುಭಾ ।
ತತ್ರ ತತ್ರ ಹಿ ದೃಶ್ಯಂತೇ ಸಕ್ತಾಃ ಕನಕಬಿಂದವಃ ॥೧೪॥

ಆಭರಣ ತೊಟ್ಟೇ ಸೀತೆ ಮಲಗಿರುತ್ತಾಳೆ. ಏಕೆಂದರೆ ಅಲ್ಲಲ್ಲಿ ಚಿನ್ನದ ರೇಕುಗಳು ಬಿದ್ದಿರುವುದು ಕಾಣುತ್ತಿದೆ.

ಉತ್ತರೀಯಮಿಹಾಸಕ್ತಂ ಸುವ್ಯಕ್ತಂ ಸೀತಯಾ ತದಾ ।
ತಥಾ ಹ್ಯೇತೇ ಪ್ರಕಾಶಂತೇ ಸಕ್ತಾಃ ಕೌಶೇಯತಂತವಃ ॥೧೫॥

ಇಲ್ಲಿ ದರ್ಭೆಯ ತುದಿಯಲ್ಲಿ ಸಿಕ್ಕಿಕೊಂಡ ಉತ್ತರೀಯದ ದಾರಗಳು ಸೀತೆಯವೇ ಎನ್ನುವುದು ಸ್ಪಷ್ಟ. ಏಕೆಂದರೆ ರೇಶಿಮೆದಾರಗಳು ಇವು ದರ್ಭೆಗಳಲ್ಲಿ ಸಿಲುಕಿ ಶೋಭಿಸುತ್ತಿವೆ.

ಮನ್ಯೇ ಭರ್ತುಃ ಸುಖಾ ಶಯ್ಯಾ ಯೇನ ಬಾಲಾ ತಪಸ್ವಿನೀ ।
ಸುಕುಮಾರೀ ಸತೀ ದುಃಖಂ ನ ವಿಜಾನಾತಿ ಮೈಥಿಲೀ ॥೧೬॥

ಪತಿಯ ಹಾಸಿಗೆ ಹೇಗಿದ್ದರೂ ಸತಿಗೆ ಸುಖಕರವೆ. ಏಕೆಂದರೆ ಸುಕುಮಾರಿ ಬಾಲೆ ತಪಸ್ವಿನಿ ಸತಿಯಾದ ಸೀತೆ ರಾಮನ ಈ ಹಾಸಿಗೆಯಲ್ಲಿ ಏನೂ ದುಃಖವನ್ನೇ ಕಾಣುವುದಿಲ್ಲ.

ಹಾ ಹತೋಽಸ್ಮಿ ನೃಶಂಸೋಽಹಂ ಯತ್ ಸಭಾರ್ಯಃ ಕೃತೇ ಮಮ ।
ಈದೃಶೀಂ ರಾಘವಃ ಶಯ್ಯಾಮಧಿಶೇತೇ ಹ್ಯನಾಥವತ್ ॥೧೭॥

ಹಾ! ಅಯ್ಯೋ! ನಾನು ಕೆಟ್ಟೆ. ನಾನು ಬಹಳ ಕ್ರೂರಿ. ನನ್ನ ಸಲುವಾಗಿ ರಾಮನು ಪತ್ನೀ ಸಮೇತನಾಗಿ ಇಂಥ ಹಾಸಿಗೆ ಮೇಲೆ ಅನಾಥನಂತೆ ಮಲಗುತ್ತಾನೆ.

ಸಾರ್ವಭೌಮಕುಲೇ ಜಾತಃ ಸರ್ವಲೋಕಸುಖಾವಹಃ ।
ಸರ್ವಲೋಕಪ್ರಿಯಸ್ಯ್ಕತ್ವಾ ರಾಜ್ಯಂ ಸುಖಮನುತ್ತಮಮ್ ॥೧೮॥

ಕಥಮಿಂದೀವರಶ್ಯಾಮೋ ರಕ್ತಾಕ್ಷಃ ಪ್ರಿಯದರ್ಶನಃ ।
ಸುಖಭಾಗೀ ನ ದುಃಖಾರ್ಹಃ ಶಯಿತೋ ಭುವಿ ರಾಘವಃ ॥೧೯॥

ಸಾರ್ವಭೌಮರ ವಂಶದಲ್ಲಿ ಜನಿಸಿದವನು ಸರ್ವಲೋಕಗಳಿಗೆ ಸುಖಕರನು, ಸರ್ವಲೋಕಗಳಿಗೆ ಪ್ರಿಯ, ಕೆನ್ನೈದಿಲೆಯಂತೆ ಶ್ಯಾಮಲ ವರ್ಣದವನು ಕೆಂಪು ಕಡೆಗಣ್ಣಿನವನು, ನೋಡಲು ಪ್ರಿಯನಾಗಿರುವವನು ರಾಮ, ಸುಖಕ್ಕೇ ಅರ್ಹ, ದುಃಖಕ್ಕೆ ಯೋಗ್ಯನಲ್ಲ. ಅಂಥವನು ಸುಖಕರವಾದ ಉತ್ತಮವಾದ ರಾಜ್ಯವನ್ನು ತೊರೆದು ನೆಲದಲ್ಲಿ ಹೇಗೆ ಮಲಗುತ್ತಾನೆ?

ಧನ್ಯಃ ಖಲು ಮಹಾಭಾಗೋ ಲಕ್ಷ್ಮಣಃ ಶುಭಲಕ್ಷ್ಮಣಃ ।
ಭ್ರಾತರಂ ವಿಷಮೇ ಕಾಲೇ ಯೋ ರಾಮಮನುವರ್ತತೇ ॥೨೦॥

ಶುಭಲಕ್ಷಣಗಳುಳ್ಳ ಲಕ್ಷ್ಮಣನೆ ಧನ್ಯ, ಮಹಾಭಾಗ್ಯಶಾಲಿ, ಕಷ್ಟಕಾಲದಲ್ಲಿ ಸೋದರನಾದ ರಾಮನನ್ನು ಹಿಂಬಾಲಿಸುತ್ತಾನೆ.

ಸಿದ್ಧಾರ್ಥಾ ಖಲು ವೈದೇಹೀ ಪತಿಂ ಯಾನುಗತಾ ವನಮ್ ।
ವಯಂ ಸಂಶಯಿತಾಃ ಸರ್ವೇ ಹೀನಾಸ್ತೇನ ಮಹಾತ್ಮನಾ ॥೨೧॥

ಸೀತೆ ನಿಜವಾಗಿ ಧನ್ಯೆ. ಕಾಡಿಗೂ ಕೂಡ ಪತಿಯನ್ನು ಹಿಂಬಾಲಿಸಿ ಹೋಗುತ್ತಾಳೆ. ನಾವು ಎಲ್ಲರೂ ಧನ್ಯರೆನಿಸುವುದು ಕೇವಲ ಸಂಶಯಾಸ್ಪದವಾಗಿದೆ.

ಅಕರ್ಣಧಾರಾ ಪೃಥಿವೀ ಶೂನ್ಯೇವ ಪ್ರತಿಭಾತಿ ಮೇ ।
ಗತೇ ದಶರಥೇ ಸ್ವರ್ಗಂ ರಾಮೇ ಚಾರಣ್ಯಮಾಶ್ರಿತೇ ॥೨೨॥

ನಾವಿಕನಿಲ್ಲದ ದೋಣಿಯಂತೆ ಪೃಥಿವಿ ಶೂನ್ಯವಾಗಿ ನನಗೆ ಕಾಣುತ್ತದೆ. ದಶರಥನು ಸ್ವರ್ಗಕ್ಕೆ ಹೋಗಿದ್ದಾನೆ. ರಾಮನೂ ಕಾಡಿಗೆ ಹೋಗಿಬಿಟ್ಟಿದ್ದಾನೆ.

ನ ಚ ಪ್ರಾರ್ಥಯತೇ ಕಶ್ಚಿನ್ಮನಸಾಪಿ ವಸುಂಧರಾಮ್ ।
ವನೇऽಪಿ ವಸತಸ್ತಸ್ಯ ಬಾಹುವೀರ್ಯಾಭಿರಕ್ಷಿತಾಮ್ ॥೨೩॥

ರಾಮನು ಘೋರವಾದ ಅರಣ್ಯದಲ್ಲಿಯೂ ವಾಸಮಾಡುತ್ತಾನೆ ಎಂದರೆ ಅವನಿಂದ ರಕ್ಷಿತವಾಗುವ ಪೃಥಿವಿಯನ್ನು ನನ್ನಂಥವನು ಮನಸ್ಸಿನಲ್ಲಿಯೂ ಅಪೇಕ್ಷಿಸಲಾರ.

ಶೂನ್ಯಸಂವರಣಾರಕ್ಷಾಮಯಂತ್ರಿತ ಹಯದ್ವಿಪಾಮ್ ।
ಅಪಾವೃತಪುರದ್ವಾರಾಂ ರಾಜಧಾನೀಮರಕ್ಷಿತಾಮ್ ॥೨೪॥

ಅಪಹೃಷ್ಟಬಲಾಂ ನ್ಯೂನಾಂ ವಿಷಮಸ್ಥಾಮನಾವೃತಾಮ್ ।
ಶತ್ರವೋ ನಾಭಿಮನ್ಯಂತೇ ಭಕ್ಷ್ಯಾನ್ ವಿಷಕೃತಾನಿವ ॥೨೫॥

ಅಯೋಧ್ಯೆಯಲ್ಲಿ ರಾಮನಿಲ್ಲದೆ ಕೋಟೆಗಳಿಗೆ ರಕ್ಷಕರಿಲ್ಲದಂತಾಗಿ ಶೂನ್ಯವಾಗಿವೆ. ಅಶ್ವ ಗಜ ಸೈನ್ಯಗಳಿಗೆ ನಾಯಕನಿಲ್ಲವಾಗಿದೆ. ನಗರದ್ವಾರ ಸದಾ ತೆರೆದಿರುತ್ತದೆ. ರಾಜಧಾನಿಯನ್ನು ರಕ್ಷಿಸುವವರಿಲ್ಲವಾಗಿದೆ. ಸೈನ್ಯವು ಬಲಹೀನವಾಗಿದೆ. ಎಲ್ಲ ಸಂಪತ್ತಿನಿಂದ ಹೀನವಾಗಿ ವಿಷಮಪರಿಸ್ಥಿತಿಯಲ್ಲಿರುವ ರಕ್ಷಕರಿಲ್ಲದ ಈ ಅಯೋಧ್ಯೆಯನ್ನು ಶತ್ರುಗಳು ಕೂಡ ವಿಷಮಿಶ್ರಿತ ಭಕ್ಷ್ಯದಂತೆ ತಿಳಿದು ಆಕ್ರಮಿಸಲು ಮುಂದಾಗುವುದಿಲ್ಲ.

ಅದ್ಯ ಪ್ರಭೃತಿ ಭೂಮೌ ತು ಶಯಿಷ್ಯೇಽಹಂ ತೃಣೇಷು ವಾ ।
ಫಲಮೂಲಾಶನೋ ನಿತ್ಯಂ ಜಟಾಚೀರಾಣಿ ಧಾರಯನ್ ॥೨೬॥

ಇದಕ್ಕೆಲ್ಲ ಮೂಲಕಾರಣನಾದ ನಾನು ಇನ್ನು ಮುಂದೆ ಬರಿನೆಲದ ಮೇಲೆ ಅಥವಾ ದರ್ಭೆಹುಲ್ಲಿನ ಮೇಲೆ ಮಲಗುತ್ತೇನೆ. ನಿತ್ಯ ಹಣ್ಣು ಗಡ್ಡೆಗಳನ್ನೇ ತಿನ್ನುತ್ತೇನೆ. ಜಟೆ ನಾರುಡೆಗಳನ್ನು ಧರಿಸಿರುತ್ತೇನೆ.

ತಸ್ಯಾರ್ಥಮುತ್ತರಂ ಕಾಲಂ ನಿವತ್ಸ್ಯಾಮಿ ಸುಖಂ ವನೇ ।
ತಂ ಪ್ರತಿಶ್ರವಮಾಮುಚ್ಯ ನಾಸ್ಯ ಮಿಥ್ಯಾ ಭವಿಷ್ಯತಿ ॥೨೭॥

ರಾಮನು ಅರಣ್ಯದಲ್ಲಿ ವಾಸಮಾಡಿದ್ದು ಸಾಕು. ಮುಂದೆ ಅವನ ಪ್ರತಿಜ್ಞೆಯನ್ನು ನಾನು ಹೊತ್ತು ಅವನ ಪರವಾಗಿ ನಾನೇ ಸುಖವಾಗಿ ಅರಣ್ಯದಲ್ಲಿ ವಾಸ ಮಾಡುವೆನು. ಅವನ ಪ್ರತಿಜ್ಞೆ ಸುಳ್ಳಾಗುವುದಿಲ್ಲ.

ವಸಂತಂ ಭ್ರಾತುರರ್ಥಾಯ ಶತ್ರುಘ್ನೋ ಮಾನುವತ್ಸ್ಯತಿ ।
ಲಕ್ಷ್ಮಣೇನ ಸಹ ತ್ವಾರ್ಯೋ ಹ್ಯಯೋಧ್ಯಾಂ ಪಾಲಯಿಷ್ಯತಿ ॥೨೮॥

ರಾಮನ ಪರವಾಗಿ ನಾನು ವನವಾಸ ಮಾಡುವಾಗ ಲಕ್ಷ್ಮಣನ ಪರವಾಗಿ

ನನ್ನೊಂದಿಗೆ ಶತ್ರುಘ್ನ ವನವಾಸ ಮಾಡುತ್ತಾನೆ. ಲಕ್ಷ್ಮಣನೊಂದಿಗೆ ರಾಮ ಅಯೋಧ್ಯೆಯನ್ನಾಳುತ್ತಾನೆ.

ಅಭಿಷೇಕ್ಷ್ಯಂತಿ ಕಾಕುತ್ಸ್ಥಮಯೋಧ್ಯಾಯಾಂ ದ್ವಿಜಾತಯಃ ।
ಅಪಿ ಮೇ ದೇವತಾಃ ಕುರ್ಯುರಿಮಂ ಸತ್ಯಂ ಮನೋರಥಮ್ ॥೨೯॥

ದ್ವಿಜರು ಅಯೋಧ್ಯೆಯಲ್ಲಿ ರಾಮನಿಗೆ ಪಟ್ಟಾಭಿಷೇಕ ಮಾಡುತ್ತಾರೆ. ನನ್ನ ಈ ಮನೋರಥವನ್ನು ದೇವತೆಗಳು ಪೂರೈಸುವರೆ?

ಪ್ರಸಾದ್ಯಮಾನಃ ಶಿರಸಾ ಮಯಾ ಸ್ವಯಂ
ಬಹುಪ್ರಕಾರಂ ಯದಿ ನಾಭಿಪತ್ಸ್ಯತೇ ।
ತತೋऽನುವತ್ಸ್ಯಾಮಿ ಚಿರಾಯ ರಾಘವಂ
ವನೇಚರಂ ನಾರ್ಹತಿ ಮಾಮುಪೇಕ್ಷಿತುಮ್ ॥೩೦॥

ನಾನು ರಾಮನನ್ನು ಅಯೋಧ್ಯೆಗೆ ಹಿಂದಿರುಗುವಂತೆ ಕಾಲಿಗೆ ಬಿದ್ದು ಬಹು-ಪ್ರಕಾರವಾಗಿ ಬೇಡಿಕೊಳ್ಳುತ್ತೇನೆ. ಅವನು ಒಪ್ಪದಿದ್ದರೆ ಸದಾ ಅವನ ಸೇವೆ ಮಾಡುತ್ತ ಅವನೊಂದಿಗೆ ನಾನೂ ವನವಾಸ ಮಾಡುತ್ತೇನೆ. ನನ್ನ ಈ ಬಯಕೆಯನ್ನೂ ಅವನು ಉಪೇಕ್ಷಿಸುವಂತಿಲ್ಲ.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಎಂಭತ್ತೆಂಟನೇ ಸರ್ಗ ಮುಗಿಯಿತು.

❖

ಏಕೋನ ನವತಿತಮಃ ಸರ್ಗಃ

ಸರ್ಗ – 89

ಭರತನು ಗಂಗಾನದಿಯನ್ನು ದಾಟುವುದು.

ವ್ಯುಷ್ಯ ರಾತ್ರಿಂ ತು ತತ್ರೈವ ಗಂಗಾಕೂಲೇ ಸ ರಾಘವಃ ।
ಭರತಃ ಕಲ್ಯಮುತ್ಥಾಯ ಶತ್ರುಘ್ನಮಿದಮಬ್ರವೀತ್ ॥೧॥

ಭರತನು ಆ ರಾತ್ರಿ ಗಾಂಗಾತೀರದಲ್ಲಿಯೇ ವಾಸಮಾಡಿ ಬೆಳಿಗ್ಗೆ ಎದ್ದು ಶತ್ರುಘ್ನನಿಗೆ ಹೇಳಿದನು.

ಶತ್ರುಘ್ನೋತ್ತಿಷ್ಠ ಕಿಂ ಶೇಷೇ ನಿಷಾದಾಧಿಪತಿಂ ಗುಹಮ್ ।
ಶೀಘ್ರಮಾನಯ ಭದ್ರಂ ತೇ ತಾರಯಿಷ್ಯತಿ ವಾಹಿನೀಮ್ ॥೨॥

ಶತ್ರುಘ್ನ, ಏಕೆ ಇನ್ನೂ ಮಲಗಿರುವೆ. ನಿನಗೆ ಶುಭವಾಗಲಿ. ನಿಷಾದ ರಾಜ ಗುಹನನ್ನು ಬೇಗನೆ ಕರೆತಾ. ಅವನು ಸೈನ್ಯವನ್ನು ನದಿದಾಟಿಸುತ್ತಾನೆ.

ಜಾಗರ್ಮಿ ನಾಹಂ ಸ್ವಪಿಮಿ ತಮೇವಾರ್ಯಂ ವಿಚಿಂತಯನ್ ।
ಇತ್ಯೇವಮಬ್ರವೀದ್ಭ್ರಾತಾ ಶತ್ರುಘ್ನೋಽಪಿ ಪ್ರಚೋದಿತಃ ॥೩॥

ಭರತ ಹೀಗೆ ಹೇಳಿದಾಗ ಶತ್ರುಘ್ನನು, 'ನಾನು ರಾಮನನ್ನೇ ಆಲೋಚಿಸುತ್ತ ಜಾಗರಣ ಮಾಡುತ್ತಿದ್ದೇನೆ, ನಿದ್ದೆ ಮಾಡುತ್ತಿಲ್ಲ' ಎಂದ.

ಇತಿ ಸಂವದತೋರೇವಮನ್ಯೋನ್ಯಂ ನರಸಿಂಹಯೋಃ ।
ಆಗತ್ಯ ಪ್ರಾಂಜಲಿಃ ಕಾಲೇ ಗುಹೋ ಭರತಮಬ್ರವೀತ್ ॥೪॥

ಹೀಗೆ ಪುರುಷೋತ್ತಮರು ಇಬ್ಬರೂ ಪರಸ್ಪರ ಮಾತನಾಡುತ್ತಿರುವಾಗ ಸಕಾಲದಲ್ಲಿ ಗುಹನು ಬಂದು ಕೈಮುಗಿದು ನುಡಿದ.

ಕಚ್ಚಿತ್ ಸುಖಂ ನದೀತೀರೇಽವಾತ್ಸೀಃ ಕಾಕುತ್ಸ್ಥ ಶರ್ವರೀಮ್ ।
ಕಚ್ಚಿತ್ತೇ ಸಹಸೈನ್ಯಸ್ಯ ತಾವತ್ ಸರ್ವಮನಾಮಯಮ್ ॥೫॥

ಭರತ, ನದೀತೀರದಲ್ಲಿ ರಾತ್ರಿಯನ್ನು ಸುಖವಾಗಿ ಕಳೆದೆ ತಾನೆ? ನಿನಗೂ ನಿನ್ನ ಸೈನ್ಯಕ್ಕೂ ಎಲ್ಲವೂ ಕ್ಷೇಮವೆ ತಾನೆ?

ಗುಹಸ್ಯ ತತ್ತು ವಚನಂ ಶ್ರುತ್ವಾ ಸ್ನೇಹಾದುದೀರಿತಮ್ ।
ರಾಮಸ್ಯಾನುವಶೋ ವಾಕ್ಯಂ ಭರತೋಽಪೀದಮಬ್ರವೀತ್ ॥೬॥

ಗುಹನು ಸ್ನೇಹದಿಂದ ಹೇಳಿದ ಈ ಮಾತನ್ನು ಕೇಳಿ ರಾಮಸೇವಕನಾದ ಭರತನೂ ಕೂಡ ಸ್ನೇಹದಿಂದ ಹೀಗೆ ಹೇಳಿದನು.

ಸುಖಾ ನಃ ಶರ್ವರೀ ಧೀಮನ್ ಪೂಜಿತಾಶ್ಚಾಪಿ ತೇ ವಯಮ್ ।
ಗಂಗಾಂ ತು ನೌಭಿರ್ಬಹ್ವೀಭಿರ್ದಾಶಾಃ ಸಂತಾರಯಂತು ನಃ ॥೭॥

'ಧೀಮಂತನಾದ ಗುಹನೆ, ನಮಗೆ ರಾತ್ರಿ ಸುಖವಾಗಿ ಕಳೆಯಿತು. ನೀನು ನಮ್ಮನ್ನು ಸತ್ಕರಿಸಿರುವೆ. ಇನ್ನು ಬೆಸ್ತರು ಬಹಳ ನೌಕೆಗಳಿಂದ ನಮ್ಮನ್ನು ನದಿ ದಾಟಿಸಲಿ'.

ಗೋವಿಂದರಾಜೀಯ ಪ್ರಕಾರ 'ಧೀಮನ್' ಎಂಬಲ್ಲಿ 'ರಾಜನ್' ಎಂದು ಪಾಠ. ಗುಹನು ನಿಷಾದರಾಜನೇನೋ ಹೌದು. ಆದರೂ ಕ್ಷತ್ರಿಯನಲ್ಲ. ಆದರೂ ರಾಮಭಕ್ತನೆಂಬ ಅಭಿಪ್ರಾಯದಿಂದ ಭರತನು 'ರಾಜನ್' ಎಂದು ಸಂಬೋಧಿಸುತ್ತಾನೆ ಎನ್ನುತ್ತದೆ ಗೋವಿಂದರಾಜೀಯ.

ತತೋ ಗುಹಃ ಸಂತ್ವರಿತಂ ಶ್ರುತ್ವಾ ಭರತಶಾಸನಮ್ ।
ಪ್ರತಿಪ್ರವಿಶ್ಯ ನಗರಂ ತಂ ಜ್ಞಾತಿಜನಮಬ್ರವೀತ್ ॥೮॥

ಭರತನ ಆಜ್ಞೆಯನ್ನು ಕೇಳಿ ಗುಹನು ಬೇಗನೆ ತನ್ನ ನಗರಕ್ಕೆ ಹಿಂತಿರುಗಿ ಜ್ಞಾತಿಬಾಂಧವರಿಗೆ ಹೇಳಿದನು.

ಉತ್ತಿಷ್ಠತ ಪ್ರಬುಧ್ಯಧ್ವಂ ಭದ್ರಮಸ್ತು ಚ ವಃ ಸದಾ ।
ನಾವಃ ಸಮುಪಕರ್ಷಧ್ವಂ ತಾರಯಿಷ್ಯಾಮ ವಾಹಿನೀಮ್ ॥೯॥

ಎದ್ದೇಳಿರಿ, ಎಚ್ಚರಗೊಳ್ಳಿರಿ, ನಿಮಗೆ ಸದಾ ಒಳ್ಳೆಯದಾಗಲಿ. ನೌಕೆಗಳನ್ನು ಸೆಳೆದು ತನ್ನಿರಿ. ಸೈನ್ಯವನ್ನು ನದಿದಾಟಿಸೋಣ.

ತೇ ತಥೋಕ್ತಾಃ ಸಮುತ್ಥಾಯ ತ್ವರಿತಾ ರಾಜಶಾಸನಾತ್ ।
ಪಂಚ ನಾವಾಂ ಶತಾನ್ಯಾಶು ಸಮಾನಿನ್ಯುಃ ಸಮಂತತಃ ॥೧೦॥

ಗುಹನು ಹೀಗೆ ಹೇಳಿದಾಗ ಬೆಸ್ತರು ರಾಜಾಜ್ಞೆಯಂತೆ ಬೇಗನೆ ಐದುನೂರು ನೌಕೆಗಳನ್ನು ಎಲ್ಲ ಕಡೆಯಿಂದ ತಂದರು.

ಅನ್ಯಾಃ ಸ್ವಸ್ತಿಕವಿಜ್ಞೇಯಾ ಮಹಾಘಂಟಾಧರಾ ವರಾಃ ।
ಶೋಭಮಾನಾಃ ಪತಾಕಾಭಿರ್ಯುಕ್ತವಾತಾಃ ಸುಸಂಹತಾಃ ॥೧೧॥

ಬೇರೆ 'ಸ್ವಸ್ತಿಕ'ವೆಂದು ಪ್ರಸಿದ್ಧವಾದ ಮಹಾ ಗಂಟೆಗಳುಳ್ಳ ಪತಾಕೆಗಳಿಂದ ಕೂಡಿದ, ಗಾಳಿಯಿಂದ ಚಲಿಸುವ ದೃಢವಾದ ನೌಕೆಗಳನ್ನೂ ತಂದರು.

ತತಃ ಸ್ವಸ್ತಿಕವಿಜ್ಞೇಯಾಂ ಪಾಂಡುಕಂಬಲಸಂವೃತಾಮ್ ।
ಸನಂದಿಘೋಷಾಂ ಕಲ್ಯಾಣೀಂ ಗುಹೋ ನಾವಮುಪಾಹರತ್ ॥೧೨॥

ಬಿಳಿರತ್ನಕಂಬಳಿಹಾಸುಳ್ಳ ಮಂಗಳವಾದ್ಯ ಘೋಷಯುಕ್ತವಾದ ಮಂಗಳಕರವಾದ ಬೇರೊಂದು ವಿಶೇಷ ಸ್ವಸ್ತಿಕನೌಕೆಯನ್ನು ಭರತನಿಗಾಗಿ ಸ್ವತಃ ಗುಹನೇ ನಡೆಸಿಕೊಂಡು ಬಂದನು.

ತಾಮಾರುರೋಹ ಭರತಃ ಶತ್ರುಘ್ನಶ್ಚ ಮಹಾಯಶಾಃ ।
ಕೌಸಲ್ಯಾ ಚ ಸುಮಿತ್ರಾ ಚ ಯಾಶ್ಚಾನ್ಯಾ ರಾಜಯೋಷಿತಃ ॥೧೩॥

ಆ ಸ್ವಸ್ತಿಕ ನೌಕೆಯನ್ನು ಮಹಾಯಶಸ್ವಿ ಭರತನೂ ಶತ್ರುಘ್ನನೂ ಕೌಸಲ್ಯೆ ಸುಮಿತ್ರೆ ಮುಂತಾದ ರಾಣಿಯರೂ ಹತ್ತಿದರು.

ಪುರೋಹಿತಶ್ಚ ತತ್ಪೂರ್ವಂ ಗುರವೋ ಬ್ರಾಹ್ಮಣಾಶ್ಚ ಯೇ ।
ಅನಂತರಂ ರಾಜದಾರಾಸ್ತಥೈವ ಶಕಟಾಪಣಾಃ ॥೧೪॥

ಭರತ ಶತ್ರುಘ್ನರಿಗಿಂತ ಮೊದಲಿಗೆ ಪುರೋಹಿತ ವಸಿಷ್ಠರೂ ಗುರುಜನರೂ ಮುನಿಗಳೂ ಬೇರೆ ಸ್ವಸ್ತಿಕನೌಕೆಯನ್ನು ಹತ್ತಿದರು. ಬಳಿಕ ಭರತ ಶತ್ರುಘ್ನರು. ಅನಂತರ ಬೇರೆ ನೌಕೆಗಳಲ್ಲಿ ಅಯೋಧ್ಯೆಯಿಂದ ಬಂದ ವಾಹನಗಳು ಮತ್ತು ಸರಕುಗಳು.

ಆವಾಸಮಾದೀಪಯತಾಂ ತೀರ್ಥಂ ಚಾಪ್ಯವಗಾಹತಾಮ್ ।
ಭಾಂಡಾನಿ ಚಾದದಾನಾನಾಂ ಘೋಷಸ್ತ್ರಿದಿವಮಸ್ಪೃಶತ್ ॥೧೫॥

ನೌಕೆಗಳನ್ನು ಹತ್ತುವುದಕ್ಕೆ ಮುನ್ನ ತಮ್ಮ ಬಿಡಾರಗಳಲ್ಲಿ ದೀಪ ಹೊತ್ತಿಸುವ ತೀರ್ಥಸ್ನಾನ ಮಾಡುವ ಪಾತ್ರೆ ಪದಾರ್ಥಗಳನ್ನು ಸಂಗ್ರಹಿಸುವ ಜನರ ಶಬ್ದಗಳು ಮುಗಿಲು ಮುಟ್ಟಿದುವು.

ಪತಾಕಿನ್ಯಸ್ತು ತಾ ನಾವಃ ಸ್ವಯಂ ದಾಶೈರಧಿಷ್ಠಿತಾಃ ।
ವಹಂತ್ಯೋ ಜನಮಾರೂಢಂ ತದಾ ಸಂಪೇತುರಾಶುಗಾಃ ॥೧೬॥

ಪತಾಕೆಗಳಿಂದ ಯುಕ್ತವಾದ ಆ ನೌಕೆಗಳಲ್ಲಿ ಬೆಸ್ತರು ತಾವೂ ಹತ್ತಿದೊಡನೆ ಅವು ಪ್ರಯಾಣಿಕರನ್ನು ಹೊತ್ತು ವೇಗವಾಗಿ ಚಲಿಸಿದುವು.

ನಾರೀಣಾಮಭಿಪೂರ್ಣಾಸ್ತು ಕಾಶ್ಚಿತ್ ಕಾಶ್ಚಿಚ್ಚ ವಾಜಿನಾಮ್ ।
ಕಾಶ್ಚಿದತ್ರ ವಹಂತಿ ಸ್ಮ ಯಾನಯುಗ್ಯಂ ಮಹಾಧನಮ್ ॥೧೭॥

ಕೆಲವು ನೌಕೆಗಳು ನಾರಿಯರಿಂದ ತುಂಬಿದುವು. ಕೆಲವು ಕುದುರೆಗಳಿಂದ ತುಂಬಿದ್ದುವು. ಕೆಲವು ನೌಕೆಗಳು ರಥಗಳನ್ನೂ ಗಾಡಿಗಳನ್ನೂ ಕುದುರೆ ಎತ್ತುಗಳನ್ನೂ ಅಪಾರ ಧನಸಂಪತ್ತನ್ನೂ ಹೊತ್ತಿದ್ದುವು.

ತಾಃ ಸ್ಮ ಗತ್ವಾ ಪರಂ ತೀರಮವರೋಪ್ಯ ಚ ತಂ ಜನಮ್ ।
ನಿವೃತ್ತಾಃ ಕಾಂಡಚಿತ್ರಾಣಿ ಕ್ರಿಯಂತೇ ದಾಶಬಂಧುಭಿಃ ॥೧೮॥

ನೌಕೆಗಳು ಆಚೆ ತೀರಕ್ಕೆ ಹೋಗಿ ಜನರನ್ನು ಕೆಳಗೆ ಇಳಿಸಿ ಹಿಂತಿರುಗಿ ಬರುವಾಗ ದಾಶಬಂಧುಗಳು ನೀರಿನಲ್ಲಿ, ನೌಕೆಗಳ ವಿಚಿತ್ರ ಪಥಚಲನವನ್ನು ಪ್ರದರ್ಶಿಸಿದರು.

ಸವೈಜಯಂತಾಸ್ತು ಗಜಾ ಗಜಾರೋಹಪ್ರಚೋದಿತಾಃ ।
ತರಂತಃ ಸ್ಮ ಪ್ರಕಾಶಂತೇ ಸಪಕ್ಷಾ ಇವ ಪರ್ವತಾಃ ॥೧೯॥

ಪತಾಕೆಗಳಿಂದ ಯುಕ್ತವಾಗಿ ಮಾವಟಿಗರು ನಡೆಸುವ ಆನೆಗಳು ನೀರಿನಲ್ಲಿ ಈಜುವಾಗ ರೆಕ್ಕೆಗಳಿಂದ ಕೂಡಿದ ಪರ್ವತಗಳಂತೆ ಕಂಡವು.

ನಾವಶ್ಚಾರುರುಹುಶ್ಚಾನ್ಯೇ ಪ್ಲವೈಸ್ತೇರುಸ್ತಥಾಪರೇ ।
ಅನ್ಯೇ ಕುಂಭಘಟೈಸ್ತೇರುರನ್ಯೇ ತೇರುಶ್ಚ ಬಾಹುಭಿಃ ॥೨೦॥

ಸೈನಿಕರು ಕೆಲವರು ನೌಕೆಗಳನ್ನು ಹತ್ತಿದರು. ಕೆಲವರು ತೆಪ್ಪಗಳಿಂದ ನದಿ ದಾಟಿದರು. ಕೆಲವರು ಮಡಕೆಗಳ ಸಹಾಯದಿಂದ ನದಿ ದಾಟಿದರು. ಇನ್ನು ಕೆಲವರು ಈಜಿಯೇ ನದಿಯನ್ನು ದಾಟಿದರು.

ಸಾ ಪುಣ್ಯಾ ಧ್ವಜಿನೀ ಗಂಗಾ ದಾಶೈಃ ಸಂತಾರಿತಾ ಸ್ವಯಮ್ ।
ಮೈತ್ರೇ ಮುಹೂರ್ತೇ ಪ್ರಯಯೌ ಪ್ರಯಾಗವನಮುತ್ತಮಮ್ ॥೨೧॥

ಗಂಗಾಸ್ನಾನದಿಂದ ಪುನೀತವಾದ ಭರತನ ಸೈನ್ಯವನ್ನು ಬೆಸ್ತರು ನೌಕೆಗಳಿಂದ ಎರಡು ಮೂಹೂರ್ತಕಾಲದಲ್ಲಿ ನದಿ ದಾಟಿಸಿದರು. ಮೂರನೆಯದಾದ ಮೈತ್ರ ಎಂಬ ಮುಹೂರ್ತದಲ್ಲಿ ಸೈನ್ಯವು ಉತ್ತಮವಾದ ಪ್ರಯಾಗವನ್ನು ಹೋಗಿ ಸೇರಿತು.

'ರೌದ್ರಃ ಸಾರ್ಪಸ್ತಥಾ ಮೈತ್ರಃ' ಎಂಬಂತೆ ಸೂರ್ಯೋದಯದಿಂದಾರಂಭಿಸಿ ಕ್ರಮವಾಗಿ ರೌದ್ರ ಸಾರ್ಪ ಮೈತ್ರ ಮುಂತಾದ ಹದಿನೈದು ಮುಹೂರ್ತಗಳು ಬರುತ್ತವೆ. 24 ನಿಮಿಷಗಳು 1 ಗಳಿಗೆ, 2 ಗಳಿಗೆಗಳು 1 ಮುಹೂರ್ತ. ಅದರಿಂದ 2 ಮುಹೂರ್ತಗಳೆಂದರೆ 1 ಗಂಟೆ 36 ನಿಮಿಷಗಳಲ್ಲಿ ಭರತನ ಮಹಾಸೈನ್ಯವನ್ನು ಗುಹನು ನದಿದಾಟಿಸಿದನು. ಸೈನ್ಯದಲ್ಲಿ ಹಿಂದೆ ಹೇಳಿದಂತೆ ಒಂಬತ್ತು ಸಾವಿರ ಆನೆಗಳು ಆರು ಸಾವಿರ ರಥಗಳು ಒಂದು ಲಕ್ಷ ಅಶ್ವಸೈನ್ಯ ಲಕ್ಷೋಪಲಕ್ಷ ಕಾಲಾಳು-ಗಳು ಲೆಕ್ಕವಿಲ್ಲದಷ್ಟು ನಾಗರಿಕರು ಎಲ್ಲರೂ ಇದ್ದರು. ಇದರಿಂದ ಗುಹನ ನೌಕಾಪಡೆ ಎಷ್ಟು ವ್ಯವಸ್ಥಿತವಾಗಿತ್ತೆಂದು ಊಹಿಸಲೂ ಸಾಧ್ಯವಿಲ್ಲ. 'ಮೈತ್ರ' ಮುಹೂರ್ತದಲ್ಲಿ ಸೈನ್ಯವು ಭರದ್ವಾಜಾಶ್ರಮವನ್ನು ಹೋಗಿ ಸೇರಿದ್ದರಿಂದ ಇಡೀ ಸೈನ್ಯಕ್ಕೆ ಪುಷ್ಕಳವಾದ ಊಟೋಪಚಾರ ಲಭ್ಯವಾಯಿತೆಂದು ಗೋವಿಂದರಾಜೀಯ ಹೇಳಿದೆ.

ಅಶ್ವಾಸಯಿತ್ವಾ ಚ ಚಮೂಂ ಮಹಾತ್ಮಾ
ನಿವೇಶಯಿತ್ವಾ ಚ ಯಥೋಪಜೋಷಮ್ ।
ದ್ರಷ್ಟುಂ ಭರದ್ವಾಜಮೃಷಿಪ್ರವರ್ಯಂ
ಋತ್ವಿಗ್ವೃತಃ ಸನ್ ಭರತಃ ಪ್ರತಸ್ಥೇ ॥೨೨॥

ಪ್ರಯಾಗವನದಲ್ಲಿ ಮಹಾತ್ಮ ಭರತನು ಸೈನ್ಯವನ್ನು ಹುರಿದುಂಬಿಸಿ ಆಯಾ ಸುಖಕರವಾದ ಸ್ಥಳದಲ್ಲಿ ಬೀಡುಬಿಡುವಂತೆ ಮಾಡಿ, ವಸಿಷ್ಠರು ಮುಂತಾದ ಋತ್ವಿಜರೊಂದಿಗೆ ಭರದ್ವಾಜಮುನಿಗಳ ದರ್ಶನಕ್ಕೆ ಹೊರಟನು.

ಸ ಬ್ರಾಹ್ಮಣಸ್ಯಾಶ್ರಮಮಭ್ಯುಪೇತ್ಯ
ಮಹಾತ್ಮನೋ ದೇವಪುರೋಹಿತಸ್ಯ ।
ದದರ್ಶ ರಮ್ಯೋಟಜವೃಕ್ಷಷಂಡಂ
ಮಹದ್ವನಂ ವಿಪ್ರವರಸ್ಯ ರಮ್ಯಮ್ ॥೨೩॥

ವೇದಪಾರಂಗತರಾದ ದೇವಪುರೋಹಿತರಾದ ಮಹಾತ್ಮ ಭರದ್ವಾಜರ ಆಶ್ರಮಕ್ಕೆ ಬಂದು ಭರತನು ರಮ್ಯವಾದ ಪರ್ಣಶಾಲೆ ಮತ್ತು ವೃಕ್ಷಸಮೂಹ ಯುಕ್ತವಾದ ರಮ್ಯವಾದ ಆ ಬ್ರಾಹ್ಮಣೋತ್ತಮನ ಮಹಾ ತಪೋವನವನ್ನು ಸಂದರ್ಶಿಸಿದನು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ಎಂಭತ್ತೊಂಬತ್ತನೇ ಸರ್ಗ ಮುಗಿಯಿತು.

❖

ನವತಿತಮಃ ಸರ್ಗಃ

ಸರ್ಗ – 90

ಭರದ್ವಾಜರ ದರ್ಶನ, ಆಶ್ರಮದಲ್ಲಿ ವಾಸ

ಭರದ್ವಾಜಾಶ್ರಮಂ ದೃಷ್ಟ್ವಾ ಕ್ರೋಶಾದೇವ ನರರ್ಷಭಃ ।
ಬಲಂ ಸರ್ವಮವಸ್ಥಾಪ್ಯ ಜಗಾಮ ಸಹ ಮಂತ್ರಿಭಿಃ ॥೧॥

ಭರತನು ಭರದ್ವಾಜಾಶ್ರಮವನ್ನು ನೋಡಿ ಒಂದು ಕ್ರೋಶ ದೂರದಲ್ಲಿಯೇ ಇಡಿ ಸೈನ್ಯವನ್ನು ನಿಲ್ಲಿಸಿ ಮಂತ್ರಿಗಳೊಂದಿಗೆ ನಡೆದನು.

ಪದ್ಭ್ಯಾಮೇವ ಹಿ ಧರ್ಮಜ್ಞೋ ನ್ಯಸ್ತಶಸ್ತ್ರಪರಿಚ್ಛದಃ ।
ವಸಾನೋ ವಾಸಸೀ ಕ್ಷೌಮೇ ಪುರೋಧಾಯ ಪುರೋಧಸಮ್ ॥೨॥

ಭರತನು ಧರ್ಮಜ್ಞ, ಶಸ್ತ್ರಾಸ್ತ್ರಗಳನ್ನೂ ಆಭರಣಗಳನ್ನು ಕಳಚಿ ರೇಶಿಮೆ ಮಡಿಗಳನ್ನುಟ್ಟು ಪುರೋಹಿತ ವಸಿಷ್ಠರನ್ನು ಮುಂದೆ ಮಾಡಿಕೊಂಡು ನಡೆದನು.

ತತಃ ಸಂದರ್ಶನೇ ತಸ್ಯ ಭರದ್ವಾಜಸ್ಯ ರಾಘವಃ ।
ಮಂತ್ರಿಣಸ್ತಾನವಸ್ಥಾಪ್ಯ ಜಗಾಮಾನುಪುರೋಹಿತಮ್ ॥೩॥

ಭರದ್ವಾಜರ ದರ್ಶನ ಮಾಡುವಾಗ ಮಂತ್ರಿಗಳನ್ನು ಹಿಂದೆ ನಿಲ್ಲಿಸಿ ಪುರೋಹಿತ-ರನ್ನು ಮುಂದೆ ಮಾಡಿಕೊಂಡು ನಡೆದನು.

ವಸಿಷ್ಠಮಥ ದೃಷ್ಟ್ವೈವ ಭರದ್ವಾಜೋ ಮಹಾತಪಾಃ ।
ಸಂಚಚಾಲಾಸನಾತ್ತೂರ್ಣಂ ಶಿಷ್ಯಾನರ್ಘ್ಯಮಿತಿ ಬ್ರುವನ್ ॥೪॥

ಸಮಾಗಮ್ಯ ವಸಿಷ್ಠೇನ ಭರತೇನಾಭಿವಾದಿತಃ ।
ಅಬುಧ್ಯತ ಮಹಾತೇಜಾಃ ಸುತಂ ದಶರಥಸ್ಯ ತಮ್ ॥೫॥

ವಸಿಷ್ಠರನ್ನು ನೋಡಿದೊಡನೆ ಮಹಾತಪಸ್ವಿ ಭರದ್ವಾಜರು ಆಸನದಿಂದ ಬೇಗನೆ ಎದ್ದು ಶಿಷ್ಯರಿಗೆ ಅರ್ಘ್ಯಗಳನ್ನು ತನ್ನಿರಿ ಎಂದು ಹೇಳಿ ವಸಿಷ್ಠರನ್ನು ನಮಸ್ಕರಿಸಿ ಆಲಿಂಗಿಸಿ, ಭರತನಿಂದ ಅಭಿವಾದನವನ್ನು ಸ್ವೀಕರಿಸಿದರು. ಮಹಾತೇಜರಾದ ಮುನಿ ಭರತನನ್ನು ದಶರಥನ ಪುತ್ರನೆಂದು ತಿಳಿದರು.

ತಾಭ್ಯಾಮರ್ಘ್ಯಂ ಚ ಪಾದ್ಯಂ ಚ ದತ್ತ್ವಾ ಪಶ್ಚಾತ್ ಫಲಾನಿ ಚ ।
ಆನೂಪೂರ್ವ್ಯಾಚ್ಚ ಧರ್ಮಜ್ಞಃ ಪಪ್ರಚ್ಛ ಕುಶಲಂ ಕುಲೇ ॥೬॥

ಧರ್ಮಜ್ಞರಾದ ಭರದ್ವಾಜರು ವಸಿಷ್ಠ ಭರತರಿಬ್ಬರಿಗೂ ಅರ್ಘ್ಯಪಾದ್ಯಗಳನ್ನಿತ್ತು ಬಳಿಕ ಫಲಗಳನ್ನೂ ನೀಡಿ ಕ್ರಮವಾಗಿ ದಶರಥನ ಕುಲದ ಯೋಗಕ್ಷೇಮವನ್ನು ವಿಚಾರಿಸಿದರು.

ಅಯೋಧ್ಯಾಯಾಂ ಬಲೇ ಕೋಶೇ ಮಿತ್ರೇಷ್ವಪಿ ಚ ಮಂತ್ರಿಷು ।
ಜಾನನ್ ದಶರಥಂ ವೃತ್ತಂ ನ ರಾಜಾನಮುದಾಹರತ್ ॥೭॥

ಅಯೋಧ್ಯೆಯಲ್ಲಿ ಸೈನ್ಯ ಕೋಶ ಮಿತ್ರರು ಬಂಧುಗಳು ಮಂತ್ರಿಗಳು ಎಲ್ಲರ ಬಗ್ಗೆ ಕ್ರಮವಾಗಿ ವಿಚಾರಿಸಿದರು. ದಶರಥನು ಸ್ವರ್ಗಸ್ಥನಾದುದನ್ನು ತಿಳಿದಿದ್ದರಿಂದ ಭರದ್ವಾಜರು ಅವನ ಬಗ್ಗೆ ಪ್ರಸ್ತಾವ ಮಾಡಲಿಲ್ಲ.

ವಸಿಷ್ಠೋ ಭರತಶ್ಚೈನಂ ಪಪ್ರಚ್ಛತುರನಾಮಯಮ್ ।
ಶರೀರೇಽಗ್ನಿಷು ವೃಕ್ಷೇಷು ಶಿಷ್ಯೇಷು ಮೃಗಪಕ್ಷಿಷು ॥೮॥

ವಸಿಷ್ಠರೂ ಭರತನೂ ಭರದ್ವಾಜರಲ್ಲಿ ಅವರ ಶರೀರ ಅಗ್ನಿಗಳು ವೃಕ್ಷಗಳು ಶಿಷ್ಯರು ಮೃಗಪಕ್ಷಿಗಳು ಇವುಗಳ ಕ್ಷೇಮವನ್ನು ವಿಚಾರಿಸಿದರು.

ತಥೇತಿ ತತ್‌ಪ್ರತಿಜ್ಞಾಯ ಭರದ್ವಾಜೋ ಮಹಾತಪಾಃ ।
ಭರತಂ ಪ್ರತ್ಯುವಾಚೇದಂ ರಾಘವಸ್ನೇಹಬಂಧನಾತ್ ॥೯॥

'ತಥಾ' ಹಾಗೇ, ಕುಶಲಿಗಳು ಎಂದು ಹೇಳಿ ಮಹಾತಪಸ್ವಿಗಳಾದ ಭರದ್ವಾಜರು ರಾಮನ ಮೇಲಿನ ಸ್ನೇಹಬಂಧನದಿಂದ ಭರತನನ್ನು ಕೇಳಿದರು.

ಕಿಮಿಹಾಗಮನೇ ಕಾರ್ಯಂ ತವ ರಾಜ್ಯಂ ಪ್ರಶಾಸತಃ ।
ಏತದಾಚ್ಚಕ್ಷ್ವ ಮೇ ಸರ್ವಂ ನ ಹಿ ಮೇ ಶುಧ್ಯತೇ ಮನಃ ॥೧೦॥

ರಾಜ್ಯವಾಳುತ್ತಿರುವವನು ನೀನು ಇಲ್ಲಿಗೆ ಬಂದ ಕಾರಣವೇನು? ಇದೆಲ್ಲವನ್ನೂ ನನಗೆ ಹೇಳು. ನನ್ನ ಮನಸ್ಸು ಇದನ್ನು ತಿಳಿಯದೆ ಸಮಾಧಾನ ಹೊಂದುವುದಿಲ್ಲ.

ಸುಷುವೇ ಯಮಮಿತ್ರಘ್ನಂ ಕೌಸಲ್ಯಾನಂದವರ್ಧನಮ್ ।
ಭ್ರಾತ್ರಾ ಸಹ ಸಭಾರ್ಯೋ ಯಶ್ಚಿರಂ ಪ್ರವ್ರಾಜಿತೋ ವನಮ್ ॥೧೧॥

ಕೌಸಲ್ಯೆಯು ಜಗತ್ತಿಗೆ ಆನಂದವರ್ಧಕನಾದ ಶತ್ರುನಾಶಕನಾದ ಯಾವ ರಾಮನನ್ನು ಹಡೆದಳೋ ಆ ರಾಮನನ್ನು ಸೋದರನೊಂದಿಗೆ ಪತ್ನಿಯೊಂದಿಗೆ ಬಹುಕಾಲ ಕಾಡಿನಲ್ಲಿರಲು ಆದೇಶಿಸಿದ್ದಾನೆ ದಶರಥ.

ನಿಯುಕ್ತಃ ಸ್ತ್ರೀನಿಯುಕ್ತೇನ ಪಿತ್ರಾ ಯೋಽಸೌ ಮಹಾಯಶಾಃ ।
ವನವಾಸೀ ಭವೇತೀಹ ಸಮಾಃ ಕಿಲ ಚತುರ್ದಶ ॥೧೨॥

ಹದಿನಾಲ್ಕು ವರ್ಷಕಾಲ ವನವಾಸ ಮಾಡೆಂದು, ಹೆಂಡತಿ ಹೇಳಿದಂತೆ, ತಂದೆ ದಶರಥನು ಮಹಾಯಶಸ್ವಿಯಾದ ರಾಮನಿಗೆ ಆದೇಶ ನೀಡಿದನು ಎಂದು ಕೇಳಿದ್ದೇನೆ.

ಕಚ್ಚಿನ್ನ ತಸ್ಯಾಪಾಪಸ್ಯ ಪಾಪಂ ಕರ್ತುಮಿಹೇಚ್ಛಸಿ ।
ಅಕಂಟಕಂ ಭೋಕ್ತುಮನಾ ರಾಜ್ಯಂ ತಸ್ಯಾನುಜಸ್ಯ ಚ ॥೧೩॥

ನಿಷ್ಕಂಟಕವಾಗಿ ರಾಜ್ಯವನ್ನು ಅನುಭವಿಸಲು ಬಯಸಿ ಅಪಾಪನಾದ ರಾಮನಿಗೂ ತಮ್ಮ ಲಕ್ಷ್ಮಣನಿಗೂ ದ್ರೋಹ ಮಾಡಲು ನೀನು ಬಯಸುತ್ತಿಲ್ಲ ತಾನೆ?

ಏವಮುಕ್ತೋ ಭರದ್ವಾಜಂ ಭರತಃ ಪ್ರತ್ಯುವಾಚ ಹ ।
ಪರ್ಯಶ್ರುನಯನೋ ದುಃಖಾದ್ವಾಚಾ ಸಂಸಜ್ಜಮಾನಯಾ ॥೧೪॥

ಭರದ್ವಾಜರು ಹೀಗೆ ಕೇಳಿದಾಗ ಭರತನು ಕಣ್ಣೀರು ಸುರಿಸುತ್ತ ದುಃಖದಿಂದ ಗದ್ಗದ ಕಂಠದಿಂದ ತಡವರಿಸುತ್ತ ನುಡಿದನು.

ಹತೋಽಸ್ಮಿ ಯದಿ ಮಾಮೇವಂ ಭಗವಾನಪಿ ಮನ್ಯತೇ ।
ಮತ್ತೋ ನ ದೋಷಮಾಶಂಕೇ ನೈವ ಮಾಮನುಶಾಧಿ ಹಿ ॥೧೫॥

ಪೂಜ್ಯರು ತಾವು ನನ್ನ ಬಗ್ಗೆ ಹೀಗೆ ತಿಳಿದಿರುವಿರಾದರೆ ನಾನು ಕೆಟ್ಟೆ. ನಿಜವಾಗಿ ನನ್ನ ಆತ್ಮಸಾಕ್ಷಿಯಾಗಿ ಹೇಳುತ್ತೇನೆ. ನನ್ನಿಂದ ರಾಮನಿಗೇನು ಅಪಾಯವಾಗು-ವುದಿಲ್ಲ. ನೀವು ನನ್ನನ್ನು ಹೀಗೆ ಶಿಕ್ಷಿಸಬೇಡಿರಿ'.

ನ ಚೈತದಿಷ್ಟಂ ಮಾತಾ ಮೇ ಯದವೋಚನ್ಮದಂತರೇ ।
ನಾಹಮೇತೇನ ತುಷ್ಟಶ್ಚ ನ ತದ್ವಚನಮಾದದೇ ॥೧೬॥

ನಾನಿಲ್ಲದಿದ್ದಾಗ ನನ್ನ ತಾಯಿ ಏನು ಹೇಳಿದಳೋ ಅದು ನನಗೆ ಸಮ್ಮತ-ವಾದುದಲ್ಲ. ಅವಳ ಈ ಅಕೃತ್ಯದಿಂದ ನಾನು ತುಷ್ಟನಾಗಿಲ್ಲ. ಅವಳ ಮಾತನ್ನು ನಾನು ಅನುಮೋದಿಸುವುದಿಲ್ಲ.

ಅಹಂ ತು ತಂ ನರವ್ಯಾಘ್ರಮುಪಯಾತಃ ಪ್ರಸಾದಕಃ ।
ಪ್ರತಿನೇತುಮಯೋಧ್ಯಾಂ ಚ ಪಾದೌ ತಸ್ಯಾಭಿವಂದಿತುಮ್ ॥೧೭॥

ನಾನು ಆ ಪುರುಷೋತ್ತಮನಲ್ಲಿ ಕ್ಷಮೆ ಕೇಳಲು, ಅವನನ್ನು ಅಯೋಧ್ಯೆಗೆ ಹಿಂತಿರುಗಿಸಲು, ಅವನ ಪಾದಗಳಿಗೆ ಬೀಳಲು ಬಂದಿದ್ದೇನೆ.

ತಂ ಮಾಮೇವಂಗತಂ ಮತ್ವಾ ಪ್ರಸಾದಂ ಕರ್ತುಮರ್ಹಸಿ ।
ಶಂಸ ಮೇ ಭಗವನ್ ರಾಮಃ ಕ್ವ ಸಂಪ್ರತಿ ಮಹೀಪತಿಃ ॥೧೮॥

ನಾನು ಈ ಉದ್ದೇಶದಿಂದ ಬಂದಿರುವೆನೆಂದು ತಾವು ತಿಳಿದು ಪ್ರಸನ್ನರಾಗ ಬೇಕು. ಪೂಜ್ಯರೆ, ರಾಜಾ ರಾಮನು ಈಗ ಎಲ್ಲಿರುವನು ಹೇಳಿರಿ.

ವಸಿಷ್ಠಾದಿಭಿರ್ಋತ್ವಿಗ್ಭಿರ್ಯಾಚಿತೋ ಭಗವಾಂಸ್ತತಃ ।
ಉವಾಚ ತಂ ಭರದ್ವಾಜಃ ಪ್ರಸಾದಾದ್ಭರತಂ ವಚಃ ॥೧೯॥

ವಸಿಷ್ಠಾದಿ ಋತ್ವಿಜರೂ ಕೂಡ ಹಾಗೇ ಕೇಳಿಕೊಂಡಾಗ ಪೂಜ್ಯ ಭರದ್ವಾಜರು ಪ್ರಸನ್ನರಾಗಿ ಭರತನಿಗೆ ಹೇಳಿದರು.

ತ್ವಯ್ಯೇತತ್ ಪುರುಷವ್ಯಾಘ್ರ ಯುಕ್ತಂ ರಾಘವವಂಶಜೇ ।
ಗುರುವೃತ್ತಿರ್ದಮಶ್ಚೈವ ಸಾಧೂನಾಂ ಚಾನುಯಾಯಿತಾ ॥೨೦॥

ಪುರುಷೋತ್ತಮ, ರಘುವಂಶಜನಾಗಿರುವ ನೀನು ಇಂದ್ರಿಯನಿಗ್ರಹ ಮಾಡಿ-ಕೊಂಡು ಗುರುಹಿರಿಯರಲ್ಲಿ ಸಾಧುಸಜ್ಜನರಲ್ಲಿ ಹೀಗೆ ಪ್ರೀತ್ಯಾದರಗಳನ್ನಿಟ್ಟು ಕೊಂಡಿರುವುದು ಉಚಿತವೇ ಆಗಿದೆ.

ಜಾನೇ ಚೈತನ್ಮನಃಸ್ಥಂ ತೇ ದೃಢೀಕರಣಮಸ್ತ್ವಿತಿ ।
ಅಪೃಚ್ಛಂ ತ್ವಾಂ ತಥಾತ್ಯರ್ಥಂ ಕೀರ್ತಿಂ ಸಮಭಿವರ್ಧಯನ್ ॥೨೧॥

ನನಗೆ ಗೊತ್ತಿದೆ, ನಿನ್ನ ಮನದಲ್ಲಿ ಏನಿದೆ ಎಂದು. ಆದರೂ ಅದನ್ನು ದೃಢೀ-ಕರಿಸಿಕೊಳ್ಳಲು ನಾನು ಪರೀಕ್ಷೆಗಾಗಿ ಹಾಗೆ ನಿನ್ನನ್ನು ಪ್ರಶ್ನಿಸಿದೆ. ಮತ್ತು ನಿನ್ನ ಕೀರ್ತಿಯನ್ನು ಬಹಳವಾಗಿ ಹೆಚ್ಚಿಸುವುದಕ್ಕಾಗಿಯೂ ಹಾಗೆ ಪ್ರಶ್ನಿಸಿದ್ದೇನೆ.

ಜಾನೇ ಚ ರಾಮಂ ಧರ್ಮಜ್ಞಂ ಸಸೀತಂ ಸಹಲಕ್ಷ್ಮಣಮ್ ।
ಅಸೌ ವಸತಿ ತೇ ಭ್ರಾತಾ ಚಿತ್ರಕೂಟೇ ಮಹಾಗಿರೌ ॥೨೨॥

ಧರ್ಮಜ್ಞನಾದ ರಾಮನು ಸೀತಾಲಕ್ಷ್ಮಣ ಸಮೇತನಾಗಿ ಎಲ್ಲಿ ಇರುವೆನೆಂಬುದೂ

ನನಗೆ ಗೊತ್ತಿದೆ. ನಿಮ್ಮ ಈ ಅಣ್ಣನು ಈಗ ಚಿತ್ರಕೂಟ ಮಹಾಪರ್ವತದಲ್ಲಿ ವಾಸಮಾಡುತ್ತಿದ್ದಾನೆ.

ಶ್ವಸ್ತು ಗಂತಾಸಿ ತಂ ದೇಶಂ ವಸಾದ್ಯ ಸಹ ಮಂತ್ರಿಭಿಃ ।
ಏತಂ ಮೇ ಕುರು ಸುಪ್ರಾಜ್ಞ ಕಾಮಂ ಕಾಮಾರ್ಥಕೋವಿದ ॥೨೩॥

ಆದರೆ ನೀನು ನಾಳೆ ಆ ಪ್ರದೇಶಕ್ಕೆ ಹೋಗುವಿಯಂತೆ. ಈ ಒಂದುದಿನ ಮಂತ್ರಿ-ಗಳೊಂದಿಗೆ ಇಲ್ಲಿಯೇ ವಾಸಮಾಡು. ಒಳ್ಳೆಯ ಪ್ರಾಜ್ಞನಾದ ಕಾಮ ಅರ್ಥಗಳೆಂಬ ಮಹಾಪುರುಷಾರ್ಥಗಳಲ್ಲಿ ನಿಷ್ಣಾತನಾದ ಭರತನೆ, ಈ ನನ್ನ ಒಂದು ಬಯಕೆ ಯನ್ನು ಈಡೇರಿಸಿಕೊಡು.

ತತಸ್ತಥೇತ್ಯೇವಮುದಾರದರ್ಶನಂ
ಪ್ರತೀತರೂಪೋ ಭರತೋಽಬ್ರವೀದ್ವಚಃ ।
ಚಕಾರ ಬುದ್ಧಿಂ ಚ ತದಾ ತದಾಶ್ರಮೇ
ನಿಶಾನಿವಾಸಾಯ ನರಾಧಿಪಾತ್ಮಜಃ ॥೨೪॥

ಮಹಾಜ್ಞಾನಿ ಮತ್ತು ಪ್ರಸಿದ್ಧಕೀರ್ತಿಶಾಲಿಯಾದ ರಾಜಕುಮಾರ ಭರತನು 'ಹಾಗೇ ಆಗಲಿ' ಎಂದನು. ಭರದ್ವಾಜರ ಆಶ್ರಮದಲ್ಲಿ ಆ ರಾತ್ರಿಯನ್ನು ಕಳೆಯಲು ಮನಸು ಮಾಡಿದನು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ತೊಂಬತ್ತನೇ ಸರ್ಗ ಮುಗಿಯಿತು.

❖

ಏಕನವತಿತಮಃ ಸರ್ಗಃ

ಸರ್ಗ – 91

ಭರತನ ಸೈನ್ಯಕ್ಕೆ ಭರದ್ವಾಜ ಮುನಿಗಳ ಔತಣ.

ಕೃತಬುದ್ಧಿಂ ನಿವಾಸಾಯ ತತ್ರೈವ ಸ ಮುನಿಸ್ತದಾ ।
ಭರತಂ ಕೈಕಯೀಪುತ್ರಮಾತಿಥ್ಯೇನ ನ್ಯಮಂತ್ರಯತ್ ॥೧॥

ಆ ರಾತ್ರಿ ಅಲ್ಲಿಯೇ ವಾಸಮಾಡಲು ನಿಶ್ಚಯಿಸಿದ ಕೈಕಯೀ ಪುತ್ರನಾದ ಭರತನಿಗೆ ಭರದ್ವಾಜ ಮುನಿಗಳು ಅತಿಥಿ ಸತ್ಕಾರಕ್ಕಾಗಿ ಆಮಂತ್ರಣ ನೀಡಿದರು.

ಅಬ್ರವೀದ್ಭರತಸ್ತ್ವೇನಂ ನನ್ವಿದಂ ಭವತಾ ಕೃತಮ್ ।
ಪಾದ್ಯಮರ್ಘ್ಯಂ ತಥಾತಿಥ್ಯಂ ವನೇ ಯದುಪಪದ್ಯತೇ ॥೨॥

ಭರತನು ಮುನಿಗಳ ಮುಂದೆ ಹೇಳಿದನು. ತಾವು ಈಗಾಗಲೇ ಪಾದ್ಯ ಅರ್ಘ್ಯಗಳನ್ನು ಅರಣ್ಯದಲ್ಲಿ ಏನು ಲಭ್ಯವಿದೆಯೋ ಅಂಥ ಫಲಮೂಲಗಳನ್ನು ಅತಿಥಿಸತ್ಕಾರವಾಗಿ ನೀಡಿರುವಿರಿ ತಾನೆ?

ಅಥೋವಾಚ ಭರದ್ವಾಜೋ ಭರತಂ ಪ್ರಹಸನ್ನಿವ ।
ಜಾನೇ ತ್ವಾಂ ಪ್ರೀತಿಸಂಯುಕ್ತಂ ತುಷ್ಟೇಸ್ತ್ವಂ ಯೇನ ಕೇನಚಿತ್ ॥೩॥

ಭರದ್ವಾಜರು ನಗುತ್ತ ಹೇಳಿದರು, ನನಗೆ ಗೊತ್ತು, ನೀನು ನನ್ನಲ್ಲಿ ಪ್ರೀತ್ಯಾದರ-ಗಳುಳ್ಳವನು ಎಂದು. ನಾನು ಏನು ಕೊಟ್ಟರೂ ಅಷ್ಟರಿಂದಲೇ ನೀನು ಸಂತುಷ್ಟನಾಗುವಿ.

ಸೇನಾಯಾಸ್ತು ತವೈತಸ್ಯಾಃ ಕರ್ತುಮಿಚ್ಛಾಮಿ ಭೋಜನಮ್ ।
ಮಮ ಪ್ರೀತಿರ್ಯಥಾರೂಪಾ ತ್ವಮರ್ಹೋ ಮನುಜಾಧಿಪ ॥೪॥

ಆದರೂ ನಿನ್ನ ಈ ಸೈನ್ಯಕ್ಕೆ ಭೋಜನ ನೀಡಲು ನಾನು ಬಯಸುತ್ತೇನೆ. ರಾಜನೆ, ನಾನು ನಿನ್ನಲ್ಲಿ ಇಟ್ಟಿರುವ ಪ್ರೀತಿಗೆ ಅನುಗುಣವಾಗಿ ನೀನು ನನ್ನ ಈ ಆಮಂತ್ರಣ-ವನ್ನು ಅಂಗೀಕರಿಸಬೇಕು.

ಕಿಮರ್ಥಂ ಚಾಪಿ ನಿಕ್ಷಿಪ್ಯ ದೂರೇ ಬಲಮಿಹಾಗತಃ ।
ಕಸ್ಮಾನ್ನೇಹೋಪಯಾತೋಽಸಿ ಸಬಲಃ ಪುರುಷರ್ಷಭ ॥೫॥

ಮತ್ತು ನೀನು ನಿನ್ನ ಸೈನ್ಯವನ್ನು ದೂರದಲ್ಲಿ ನಿಲ್ಲಿಸಿ ಏಕೆ ಇಲ್ಲಿಗೆ ಬಂದಿರುವೆ? ಪುರುಷೋತ್ತಮನೆ, ಸೈನ್ಯದೊಂದಿಗೆ ನೀನೇಕೆ ಇಲ್ಲಿಗೆ ಬರಲಿಲ್ಲ?

ಭರತಃ ಪ್ರತ್ಯುವಾಚೇದಂ ಪ್ರಾಂಜಲಿಸ್ತಂ ತಪೋಧನಮ್ ।
ಸಸೈನ್ಯೋ ನೋಪಯಾತೋಽಸ್ಮಿ ಭಗವನ್ ಭಗವದ್ಭಯಾತ್ ॥೬॥

ಭರತನು ಕೈಮುಗಿದು ತಪೋಧನನಿಗೆ ಹೇಳಿದನು— 'ಪೂಜ್ಯರೆ, ಪೂಜ್ಯರಿಗೆ ತೊಂದರೆಯಾದೀತೆಂಬ ಭಯದಿಂದ ಸೈನ್ಯ ಸಮೇತನಾಗಿ ನಾನು ಬರಲಿಲ್ಲ.

ರಾಜ್ಞಾ ಚ ಭಗವನ್ನಿತ್ಯಂ ರಾಜಪುತ್ರೇಣ ವಾ ಸದಾ ।
ಯತ್ನತಃ ಪರಿಹರ್ತವ್ಯಾ ವಿಷಯೇಷು ತಪಸ್ವಿನಾಮ್ ॥೭॥

'ಪೂಜ್ಯರೆ, ರಾಜನಾಗಲಿ ರಾಜಪುತ್ರನಾಗಲಿ, ತಪಸ್ವಿಗಳಿರುವ ಪ್ರದೇಶಗಳಲ್ಲಿ ತಮ್ಮ ವೈಭವ ಪ್ರದರ್ಶನ ಮುಂತಾದುವನ್ನು ಯತ್ನಪೂರ್ವಕವಾಗಿ ದೂರವಿರಿಸ ಬೇಕು.

ವಾಜಿಮುಖ್ಯಾ ಮನುಷ್ಯಾಶ್ಚ ಮತ್ತಾಶ್ಚ ವರವಾರಣಾಃ ।
ಪ್ರಚ್ಛಾದ್ಯ ಭಗವನ್ ಭೂಮಿಂ ಮಹತೀಮನುಯಾಂತಿ ಮಾಮ್ ॥೮॥

'ಅಶ್ವಸೈನ್ಯ ಪದಾತಿ ಗಜ ಸೈನ್ಯಗಳು, ಪೂಜ್ಯರೆ, ವಿಶಾಲವಾದ ಭೂಮಿಯನ್ನು ಆವರಿಸಿ ನನ್ನನ್ನು ಹಿಂಬಾಲಿಸುತ್ತಿವೆ'.

ತೇ ವೃಕ್ಷಾನುದಕಂ ಭೂಮಿಮಾಶ್ರಮೇಷೂಟಜಾಂಸ್ತಥಾ ।
ನ ಹಿಂಸ್ಯುರಿತಿ ತೇನಾಹಮೇಕ ಏವ ಸಮಾಗತಃ ॥೯॥

'ಅವರು ಆಶ್ರಮಗಳಲ್ಲಿ ಮರಗಳನ್ನು ನೀರನ್ನು ಭೂಮಿಯನ್ನು ಪರ್ಣಶಾಲೆ ಗಳನ್ನು ಹಾಳುಮಾಡಬಾರದೆನ್ನುವುದಕ್ಕಾಗಿ ನಾನು ಏಕಾಂಗಿಯಾಗಿ ಬಂದಿದ್ದೇನೆ' ಎಂದು.

ಆನೀಯತಾಮಿತಃ ಸೇನೇತ್ಯಾಜ್ಞಪ್ತಃ ಪರಮರ್ಷಿಣಾ ।
ತತಸ್ತು ಚಕ್ರೇ ಭರತಃ ಸೇನಾಯಾಃ ಸಮುಪಾಗಮಮ್ ॥೧೦॥

ಮಹರ್ಷಿ ಭರದ್ವಾಜರು 'ಸೈನ್ಯವನ್ನು ಇಲ್ಲಿಗೇ ಕರೆದುಕೊಂಡು ಬಾ' ಎಂದು ಆಜ್ಞೆ ಮಾಡಿದರು. ಆಗ ಭರತನು ಸೇನೆಯನ್ನು ಅಲ್ಲಿಗೆ ತರಿಸಿದನು.

ಅಗ್ನಿಶಾಲಾಂ ಪ್ರವಿಶ್ಯಾಥ ಪೀತ್ವಾಪಃ ಪರಿಮೃಜ್ಯ ಚ ।
ಆತಿಥ್ಯಸ್ಯ ಕ್ರಿಯಾಹೇತೋರ್ವಿಶ್ವಕರ್ಮಾಣಮಾಹ್ವಯತ್ ॥೧೧॥

ಮಹರ್ಷಿಗಳು ಅಗ್ನಿಶಾಲೆಯನ್ನು ಪ್ರವೇಶಿಸಿ ಶುದ್ಧಾಚಮನ ಮಾಡಿ ಪ್ರೋಕ್ಷಿಸಿ-ಕೊಂಡು ಅತಿಥಿ ಸತ್ಕಾರಮಾಡುವ ಸಲುವಾಗಿ ಮಂತ್ರದಿಂದ ವಿಶ್ವಕರ್ಮನನ್ನು ಆಹ್ವಾನಿಸಿದರು.

ಆಹ್ವಯೇ ವಿಶ್ವಕರ್ಮಾಣಮಹಂ ತ್ವಷ್ಟಾರಮೇವ ಚ ।
ಆತಿಥ್ಯಂ ಕರ್ತುಮಿಚ್ಛಾಮಿ ತತ್ರ ಮೇ ಸಂವಿಧೀಯತಾಮ್ ॥೧೨॥

'ಗೃಹಾದಿ ನಿರ್ಮಾಪಕನಾದ ದೇವಶಿಲ್ಪಿ ವಿಶ್ವಕರ್ಮನನ್ನು ಆಹ್ವಾನಿಸುತ್ತೇನೆ, ಭರತನಿಗೂ ಅವನ ಸೈನ್ಯಕ್ಕೂ ಆತಿಥ್ಯವನ್ನು ನೀಡಲು ಬಯಸಿದ್ದೇನೆ. ಅದಕ್ಕೆ ನನಗೆ ವ್ಯವಸ್ಥೆ ಮಾಡಿಕೊಡು', ಎಂದು.

ಆಹ್ವಯೇ ಲೋಕಪಾಲಾಂಸ್ತ್ರೀನ್ ದೇವಾನ್ ಶಕ್ರಮುಖಾಂಸ್ತಥಾ ।
ಆತಿಥ್ಯಂ ಕರ್ತುಮಿಚ್ಛಾಮಿ ತತ್ರ ಮೇ ಸಂವಿಧೀಯತಾಮ್ ॥೧೩॥

'ಇಂದ್ರಾದಿ ದೇವತೆಗಳನ್ನೂ ಯಮ ವರುಣ ಕುಬೇರ ಈ ಮೂವರು ಲೋಕ-ಪಾಲಕರನ್ನೂ ಆಹ್ವಾನಿಸುತ್ತೇನೆ. ಭರತನಿಗೂ ಅವನ ಸೈನ್ಯಕ್ಕೂ ಆತಿಥ್ಯ ನೀಡಲು ಬಯಸಿದ್ದೇನೆ. ಅದಕ್ಕೆ ವ್ಯವಸ್ಥೆ ಮಾಡಿಕೊಡಿರಿ' ಎಂದು.

ಪ್ರಾಕ್ಸ್ರೋತಸಶ್ಚ ಯಾ ನದ್ಯಃ ಪ್ರತ್ಯಕ್ಸ್ರೋತಸ ಏವ ಚ ।
ಪೃಥಿವ್ಯಾಮಂತರಿಕ್ಷೇ ಚ ಸಮಾಯಾಂತ್ವದ್ಯ ಸರ್ವಶಃ ॥೧೪॥

'ಪೃಥಿವಿ ಅಂತರಿಕ್ಷಗಳಲ್ಲಿ ಪೂರ್ವದಿಕ್ಕಿಗೆ ಹರಿಯುವ, ಪಶ್ಚಿಮದಿಕ್ಕಿಗೆ ಹರಿಯುವ ಎಲ್ಲ ನದಿ ಅಭಿಮಾನಿ ದೇವತೆಗಳೂ ಈಗಲೆ ಬರಲಿ.

ಅನ್ಯಾಃ ಸ್ರವಂತು ಮೈರೇಯಂ ಸುರಾಮನ್ಯಾಃ ಸುನಿಷ್ಠಿತಾಮ್ ।
ಅಪರಾಶ್ಚೋದಕಂ ಶೀತಮಿಕ್ಷುಕಾಂಡರಸೋಪಮಮ್ ॥೧೫॥

'ಕೆಲವು ನದಿಗಳು ಪರಿಶೋಧಿಸಿದ ಮೈರೇಯವನ್ನೂ ಕೆಲವು ನದಿಗಳು ಸುರೆ-ಯನ್ನೂ ಹರಿಸಲಿ. ಬೇರೆ ನದಿಗಳು ತಂಪಾದ ಕಬ್ಬಿನ ಹಾಲಿನಂಥ ನೀರನ್ನು ಹರಿಸಲಿ.

ಪಾನಸಂ ದ್ರಾಕ್ಷಂ ಮಾಧೂಕಂ ಖಾರ್ಜೂರಂ ತಾಲಂ ಐಕ್ಷವಂ ।
ಮಧೂತ್ಥಂ ಸೈರಂ ಆರಿಷ್ಟಂ ಮೈರೇಯಂ ನಾಲಿಕೇರಜಂ ॥

ಸಮಾನಾನಿ ವಿಜಾನೀಯಾನ್ಮದ್ಯಾನ್ಯೇಕಾದಶೈವ ತು ।
ದ್ವಾದಶಂ ತು ಸುರಾಮದ್ಯಂ ಸರ್ವೇಷಾಮಧಮಂ ಸ್ಮೃತಂ ॥

ಪಾನಸ, ದ್ರಾಕ್ಷ, ಮಾಧೂಕ, ಖಾರ್ಜೂರ, ತಾಲ, ಐಕ್ಷವ, ಮಧೂತ್ಥ, ಸೈರ, ಆರಿಷ್ಟ, ಮೈರೇಯ, ನಾಲಿಕೇರಜ—ಹೀಗೆ ಹನ್ನೊಂದು ಬಗೆಯ ಮದ್ಯವು ಸಮಾನ. ಹನ್ನೆರಡನೆಯ 'ಸುರಾ' ಎಂಬ ಮದ್ಯ, ಎಲ್ಲಕ್ಕಿಂತ ಅಧಮ ಎಂದು ಪುಲಸ್ತ್ಯ ಸ್ಮೃತಿ ಇದೆ. ಹಲಸಿನಿಂದ 'ಪಾನಸ', ದ್ರಾಕ್ಷಿಯಿಂದ 'ದ್ರಾಕ್ಷ' ಮಧೂಕ (ಹಿಪ್ಪೆ) ಪುಷ್ಪದಿಂದ 'ಮಾಧೂಕ' ಖರ್ಜೂರದಿಂದ 'ಖಾರ್ಜೂರ', ತಾಳೆಹಣ್ಣಿನಿಂದ 'ತಾಲ', ಕಬ್ಬಿನಹಾಲಿನಿಂದ 'ಐಕ್ಷವ', ಜೇನಿನಿಂದ 'ಮಧೂತ್ಥ' ಅತ್ತಿಯಿಂದ 'ಸೈರ' ಮೊಸರಿನಿಂದ 'ಆರಿಷ್ಟ' ಮಿರಿಕಾ ಗಿಡದಿಂದ 'ಮೈರೇಯ' ತೆಂಗಿನಕಾಯಿಯಿಂದ 'ನಾಲಿಕೇರಜ' ಹೀಗೆ ಹನ್ನೊಂದು ಬಗೆಯ ಹೆಂಡಗಳು ಗ್ರಾಹ್ಯವೆಂದೂ 'ಸುರಾ' ಎಂದರೆ ಅನ್ನದಿಂದ ಮಾಡಿದ ಪೈಷ್ಟೀ ಸುರೆ, ಹೆಂಡ, ಇದು ಹನ್ನೆರಡನೆಯದು. ಮೂರು ವರ್ಣದವರಿಗೂ ಪಾನಕ್ಕೆ ನಿಷಿದ್ಧ. ಎಂದು ಹೇಳಿದೆ. ಸೌತ್ರಾಮಣಿಯಾಗದಲ್ಲಿ ಸುರೆಯನ್ನು ಉಪಯೋಗಿಸುವಾಗಿ ಮೂರು ವರ್ಣದವರೂ ಯಜ್ಞಶೇಷವನ್ನು ಕೇವಲ ವಾಸನೆ ನೋಡಿ ಬಿಟ್ಟುಬಿಡಬೇಕು. ಘ್ರಾಣಭಕ್ಷ ಮಾತ್ರ ಮಾಡಬೇಕೆಂದೂ ವಿಧಿ ಇದೆ.

ಸುರಾಪಾನಂ ಸಕೃತ್‌ಕೃತ್ವಾ ಯೋऽಗ್ನಿವರ್ಣಾಂ ಸುರಾಂ ಪಿಬೇತ್ ।
ಸ ಪಾವಯತ್ಯಥಾತ್ಮಾನಂ ಇಹಲೋಕೇ ಪರತ್ರ ಚ (ಶಾಂತಿ 35.16)

'ಬ್ರಾಹ್ಮಣನಾಗಿದ್ದೂ ಸುರಾಪಾನ ಮಾಡಿದರೆ ಪ್ರಾಯಶ್ಚಿತ್ತವಾಗಿ ಕಾದು ಕುದಿವ ಸುರೆಯನ್ನು ಕುಡಿದು ದೇಹತ್ಯಾಗ ಮಾಡಬೇಕು. ಅದರಿಂದ ಶುದ್ಧನಾಗುತ್ತಾನೆ' ಎಂದು ಮಹಾಭಾರತದಲ್ಲಿದೆ. ಅದಕ್ಕೇ ಘ್ರಾಣಭಕ್ಷವನ್ನು ವಿಧಿಸಿದ್ದಾರೆ.

'ಗೌಡೀ ಪೈಷ್ಟೀ ಚ ಮಾಧ್ವೀ ಚ ವಿಜ್ಞೇಯಾ ತ್ರಿವಿಧಾ ಸುರಾ'

'ಬೆಲ್ಲದಿಂದ ಅನ್ನದಿಂದ ಜೇನುತುಪ್ಪದಿಂದ ಮಾಡಿದ್ದೆಂದು ಮೂರು ಬಗೆಯ ಸುರೆಗಳಿವೆ'.

ಸೀಧುರಿಕ್ಷುರಸೈಃ ಪಕ್ವೈಃ ಅಪಕ್ವೈರಾಸವೋ ಭವೇತ್।
ಮೈರೇಯಂ ಧಾತಕೀಪುಷ್ಪ ಗುಡ ಧಾನಾಮ್ಲ ಸಂಹಿತಂ ॥

ಕುದಿದ ಕಬ್ಬಿನ ಹಾಲಿನಿಂದ 'ಸೀಧು' ಕುದಿಸದ ಕಬ್ಬಿನ ಹಾಲಿನಿಂದ 'ಆಸವ', ಅರೆಹೂವು ಬೆಲ್ಲ ಪುರಿ ಅಮ್ಲಗಳ ಮಿಶ್ರಣದಿಂದ 'ಮೈರೇಯ' ಎಂದು ಮಾಧವ ನಿದಾನದಲ್ಲಿದೆ.

ಆಹ್ವಯೇ ದೇವಗಂಧರ್ವಾನ್ ವಿಶ್ವಾವಸುಹಹಾಹುಹೂನ್ ।
ತಥೈವಾಪ್ಸರಸೋ ದೇವೀರ್ಗಂಧರ್ವೀಶ್ಚಾಪಿ ಸರ್ವಶಃ ॥೧೬॥

ವಿಶ್ವಾವಸು ಹಹಾ ಹುಹೂ ಎಂದು ಮುಂತಾದ ಅಸಂಖ್ಯ ದೇವಗಂಧರ್ವರನ್ನೂ ಅಪ್ಸರೆಯರನ್ನೂ ದೇವಗಂಧರ್ವ ಪತ್ನಿಯರನ್ನೂ ಎಲ್ಲರನ್ನೂ ಆಹ್ವಾನಿಸುತ್ತೇನೆ.

ಗಂಧರ್ವರಲ್ಲಿ ದೇವಗಂಧರ್ವ ದೇವಗಂಧರ್ವಿಯರು ಸಾಕ್ಷಾತ್ ಬ್ರಹ್ಮಾದಿ ದೇವತೆಗಳ ಸೇವೆ ಮಾಡುತ್ತಾರೆ. ಅವರ ಅಧೀನದಲ್ಲಿ ಮನುಷ್ಯಗಂಧರ್ವರು ದೇವತೆಗಳ ಸೇವೆ ಮಾಡುತ್ತಾರೆ. ಮತ್ತು ವಿಶ್ವಾವಸು ಚಿತ್ರರಥ ಮುಂತಾದವರು ಯೋಧರಾಗಿ ಅಸುರರೊಡನೆ ಯುದ್ಧಮಾಡುವ ದೇವಸೇವಕರು. ಹಹಾ ಹುಹೂ ತುಂಬುರು ಮುಂತಾದವರು ಗಾನ ಮಾಡುವವರು, ಅಪ್ಸರೆ ಯರು ನಾಟ್ಯ ವಾಡುವವರು. ಈ ಗಂಧರ್ವಾಪ್ಸರೆಯರು ಇಲ್ಲಿ ಭರತನ ಸೈನಿಕರಿಗೆ ಮನರಂಜನೆ ಮಾಡುತ್ತಾರೆ.

ಘೃತಾಚೀಮಥ ವಿಶ್ವಾಚೀಂ ಮಿಶ್ರಕೇಶೀಮಲಂಬುಸಾಮ್ ।
ನಾಗದಂತಾಂ ಚ ಹೇಮಾಂ ಚ ಹಿಮಾಮದ್ರಿಕೃತಸ್ಥಲಾಮ್ ॥೧೭॥

ಶಕ್ರಂ ಯಾಶ್ಚೋಪತಿಷ್ಠಂತಿ ಬ್ರಹ್ಮಾಣಂ ಯಾಶ್ಚ ಯೋಷಿತಃ ।
ಸರ್ವಾಸ್ತುಂಬುರುಣಾ ಸಾರ್ಧಮಾಹ್ವಯೇ ಸಪರಿಚ್ಛದಾಃ ॥೧೮॥

ಘೃತಾಚೀ ವಿಶ್ವಾಚೀ ಮಿಶ್ರಕೇಶೀ ಅಲಂಬುಸಾ ನಾಗದಂತಾ ಹೇಮಾ ಹಿಮಾ ಅದ್ರಿಕೃತಸ್ಥಲಾ ಮುಂತಾದ ಇಂದ್ರಾದಿಲೋಕಪಾಲಕರಿಗೆ ಮತ್ತು ಚತುರ್ಮುಖ ಬ್ರಹ್ಮನಿಗೆ ಸೇವೆ ಮಾಡುವ ಅಪ್ಸರಸ್ತ್ರೀಯರನ್ನು ಗಂಧರ್ವರಾಜ ತುಂಬುರುವಿ-ನೊಂದಿಗೆ ವೀಣಾಮೃದಂಗ ಮುಂತಾದ ಉಪಕರಣಗಳೊಂದಿಗೆ ಆಹ್ವಾನಿಸುತ್ತೇನೆ.

ವನಂ ಕುರುಷು ಯದ್ದಿವ್ಯಂ ವಾಸೋಭೂಷಣಪತ್ರವತ್ ।
ದಿವ್ಯನಾರೀಫಲಂ ಶಶ್ವತ್ತತ್ ಕೌಬೇರಮಿಹೈತು ಚ ॥೧೯॥

ಉತ್ತರಕುರುಕ್ಷೇತ್ರದಲ್ಲಿರುವ ಚೈತ್ರರಥವೆಂಬ ಕುಬೇರನ ದಿವ್ಯವಾದ ಉದ್ಯಾನದ ಅಧಿದೇವತೆಯೂ ಇಲ್ಲಿಗೆ ಬರಲಿ. ಚೈತ್ರರಥೋದ್ಯಾನದ ಮರಗಳಲ್ಲಿ ವಸ್ತ್ರಾಭರಣ-ಗಳೇ ಎಲೆಗಳ ರೂಪದಿಂದ ದಿವ್ಯನಾರಿಯರೇ ಫಲಗಳ ರೂಪದಿಂದ ದೇವತೆಗಳಿಗೆ ಸೇವೆ ಮಾಡುತ್ತಾರೆ. ಭರದ್ವಾಜಾಶ್ರಮದಲ್ಲಿಯೂ ಅವರು ಹಾಗೇ ಭರತನ ಸೈನಿಕರಿಗೆ ಸೇವೆ ಮಾಡಲಿ.

ಭರತನು ಸಾಕ್ಷಾತ್ ವಿಷ್ಣುಚಕ್ರ ಸ್ವರೂಪ, ಶತ್ರುಘ್ನನು ಪಾಂಚಜನ್ಯ ಶಂಖ-ಸ್ವರೂಪ. ಇಬ್ಬರೂ ಪ್ರದ್ಯುಮ್ನ ಮತ್ತು ಅನಿರುದ್ಧರೆಂಬ ದೇವಾಂಶ ಸಂಭೂತರು. ಅವರು ಹೋದಲ್ಲೆಲ್ಲ ಘೋರ ಅರಣ್ಯಗಳು ಕೂಡ ಚೈತ್ರರಥೋದ್ಯಾನ ರೂಪದಿಂದ ಅವರಿಗೆ ಸೇವೆ ಮಾಡುತ್ತವೆ ಎಂದು ಹೇಳಿದಂತಾಯಿತು.

ಸೈನಿಕರಿಗೆ ದೇವತೆಗಳು ಹೀಗೆ ಸೇವೆ ಮಾಡುವುದು ಎಲ್ಲ ಕಾಲದಲ್ಲಿಯೂ ಅದೃಶ್ಯವಾಗಿ ಇತ್ತು. ಉದಾ: ಭರತನು ಸ್ಕಂದನ ಅವತಾರ. ಗುಹನೂ ಹಾಗೇ ಸ್ಕಂದನ ಅವತಾರ. ಅದರಿಂದ ಭರತನ ಅಪಾರವಾದ ಸೈನ್ಯವನ್ನು ಒಂದು ರಾತ್ರಿ ಊಟೋಪಚಾರಗಳಿಂದ ತೃಪ್ತಿಪಡಿಸಿ ಮರುದಿನ ಬೆಳಿಗ್ಗೆ ಕೇವಲ ಎರಡು ಮುಹೂರ್ತಗಳಲ್ಲಿ ಗುಹನು ನದಿ ದಾಟಿಸಿದ. ಭರದ್ವಾಜರು ತಪಃ ಸಾಮರ್ಥ್ಯ-ದಿಂದ, ದೇವತೆಗಳು ದೇವತೆಗಳಿಗೆ ಅದೃಶ್ಯವಾಗಿ ನಿತ್ಯಮಾಡುವ ಸೇವೆಯನ್ನೇ ದೃಶ್ಯವಾಗಿ ಮಾಡಿ ತೋರಿಸಿದ್ದಾರೆ.

ಇಹ ಮೇ ಭಗವಾನ್ ಸೋಮೋ ವಿಧತ್ತಾಮನ್ನಮುತ್ತಮಮ್ ।
ಭಕ್ಷ್ಯಂ ಭೋಜ್ಯಂ ಚ ಚೋಷ್ಯಂ ಚ ಲೇಹ್ಯಂ ಚ ವಿವಿಧಂ ಬಹು ॥

ವಿಚಿತ್ರಾಣಿ ಚ ಮಾಲ್ಯಾನಿ ಪಾದಪಪ್ರಚ್ಯುತಾನಿ ಚ ।
ಸುರಾದೀನಿ ಚ ಪೇಯಾನಿ ಮಾಂಸಾನಿ ವಿವಿಧಾನಿ ಚ ॥೨೧॥

ಅನ್ನಾಭಿಮಾನಿಯಾದ ಸೋಮನು ಸೈನಿಕರಿಗೆ ಉತ್ತಮವಾದ ಭಕ್ಷ್ಯಭೋಜ್ಯ ಚೋಷ್ಯ ಲೇಹ್ಯರೂಪದ ನಾನಾ ಬಗೆಯ ಬಹು ಅನ್ನವನ್ನು ವಿಚಿತ್ರವಾದ ಮರದಿಂದ ಉದುರಿ ಬೀಳುವ ಮಾಲೆಗಳನ್ನು ಸುರಾ ಮೈರೇಯ ಮುಂತಾದ ಪಾನೀಯಗಳನ್ನೂ ನಾನಾ ಬಗೆಯ ಮಾಂಸಗಳನ್ನೂ ಸಿದ್ಧಪಡಿಸಲಿ.

ಅಗಿದು ಉಣ್ಣುವುದು ಭಕ್ಷ್ಯ, ಸುರಿದು ಉಣ್ಣುವುದು ಭೋಜ್ಯ, ಕುಡಿಯು-ವುದು ಪೇಯ, ರಸಹೀರುವುದು ಚೋಷ್ಯ.

ಏವಂ ಸಮಾಧಿನಾ ಯುಕ್ತಸ್ತೇಜಸಾಪ್ರತಿಮೇನ ಚ ।
ಶೀಕ್ಷಾಸ್ವರಸಮಾಯುಕ್ತಂ ತಪಸಾ ಚಾಬ್ರವೀನ್ಮುನಿಃ ॥೨೨॥

ಹೀಗೆ ಧ್ಯಾನಸಮಾಧಿಯಿಂದ ಏಕಾಗ್ರಚಿತ್ತನಾಗಿ ಅಪ್ರತಿಮ ಬ್ರಹ್ಮವರ್ಚಸ್ಸಿ ನಿಂದಲೂ ಕೂಡಿದವನಾಗಿ ಭರದ್ವಾಜಮುನಿಗಳು ಶಿಕ್ಷಾವ್ಯಾಕರಣಾನುಸಾರವಾಗಿ ಮಂತ್ರೋಚ್ಚಾರಣ ಮಾಡುತ್ತ ತಪಸ್ಸಿನಿಂದ ದೇವತೆಗಳಿಗೆ ಪ್ರಾರ್ಥನೆ ಮಾಡಿದರು.

ಮನಸಾ ಧ್ಯಾಯತಸ್ತಸ್ಯ ಪ್ರಾಙ್ಮುಖಸ್ಯ ಕೃತಾಂಜಲೇಃ ।
ಆಜಗ್ಮುಸ್ತಾನಿ ಸರ್ವಾಣಿ ದೈವತಾನಿ ಪೃಥಕ್ ಪೃಥಕ್ ॥೨೩॥

ಪೂರ್ವಾಭಿಮುಖವಾಗಿ ಕುಳಿತು ಕೈಮುಗಿದು ಮನಸಿನಿಂದ ಅವರು ಧ್ಯಾನ-ಮಾಡಿದಾಗ ಎಲ್ಲ ದೇವತೆಗಳೂ ಪ್ರತ್ಯೇಕವಾಗಿ ಬಂದು ಮೈದೋರಿದರು.

ಮಲಯಂ ದರ್ದುರಂ ಚೈವ ತತಃ ಸ್ವೇದನುದೋಽನಿಲಃ ।
ಉಪಸ್ಪೃಶ್ಯ ವವೌ ಯುಕ್ತಾ ಸುಪ್ರಿಯಾತ್ಮಾ ಸುಖಃ ಶಿವಃ ॥೨೪॥

ಮಲಯ ದರ್ದುರ ಪರ್ವತಗಳ ಮೇಲಿಂದ ಬಂದು ಬೆವರನ್ನು ಹೋಗಲಾಡಿಸಿ ಸುಖನೀಡುವ ಮಂಗಳಕರವಾದ ವಾಯುದೇವನು ಆಶ್ರಮವನ್ನು ಸ್ಪರ್ಶಿಸಿ ಬೀಸಿದ.

ತತೋಽಭ್ಯವರ್ಷಂತ ಘನಾ ದಿವ್ಯಾಃ ಕುಸುಮವೃಷ್ಟಯಃ ।
ದಿವ್ಯದುಂದುಭಿಘೋಷಶ್ಚ ದಿಕ್ಷುಃ ಸರ್ವಾಸು ಶುಶ್ರುವೇ ॥೨೫॥

ಪ್ರವವುಶ್ಚೋತ್ತಮಾ ವಾತಾ ನನೃತುಶ್ಚಾಪ್ಸರೋಗಣಾಃ ।
ಪ್ರಜಗುರ್ದೇವಗಂಧರ್ವಾ ವೀಣಾಃ ಪ್ರಮುಮುಚುಃ ಸ್ವರಾನ್ ॥೨೬॥

ಮೋಡಗಳು ದಿವ್ಯ ಪುಷ್ಪವೃಷ್ಟಿಯನ್ನು ಸುರಿಸಿದುವು. ದುಂದುಭಿ ಘೋಷ ಎಲ್ಲ ದಿಕ್ಕುಗಳಿಂದಲೂ ಕೇಳಿಸಿತು. ದೇವಗಂಧರ್ವರು ಹಾಡಿದರು. ವೀಣಾಭಿಮಾನಿಗಳು ತಾವೇ ಸಂಗೀತಸ್ವರಗಳನ್ನು ನುಡಿದರು. ಅಪ್ಸರೆಯರು ನಾಟ್ಯ ವಾಡಿದರು. ಒಳ್ಳೆಯ ಗಾಳಿ ಬೀಸಿತು.

ಸ ಶಬ್ದೋ ದ್ಯಾಂ ಚ ಭೂಮಿಂ ಚ ಪ್ರಾಣಿನಾಂ ಶ್ರವಣಾನಿ ಚ ।
ಏವೇಶೋಚ್ಚಾವಚಃ ಶ್ಲಕ್ಷ್ಣಃ ಸಮೋ ಲಯಗುಣಾನ್ವಿತಃ ॥೨೭॥

ಶ್ರುತಿಲಯಯುಕ್ತವಾಗಿ ಮಧುರವಾಗಿ ಹೊರಟ ನಾನಾವಿಧವಾದ ಆ ಸಂಗೀತ ಧ್ವನಿಯು ಪೃಥಿವಿ ಅಂತರಿಕ್ಷಗಳನ್ನು ತುಂಬಿ ಪ್ರಾಣಿಗಳ ಕಿವಿಯೊಳಗೆ ಪ್ರವೇಶಿಸಿತು.

ತಸ್ಮಿನ್ನುಪರತೇ ಶಬ್ದೇ ದಿವ್ಯೇ ಶ್ರೋತ್ರಸುಖೇ ನೃಣಾಮ್ ।
ದದರ್ಶ ಭಾರತಂ ಸೈನ್ಯಂ ವಿಧಾನಂ ವಿಶ್ವಕರ್ಮಣಃ ॥೨೮॥

ಜನರಿಗೆ ಕರ್ಣಾನಂದಕರವಾದ ಆ ದಿವ್ಯ ಶಬ್ದ ನಿಂತಾಗ ಭರತನ ಸೈನಿಕರು ವಿಶ್ವಕರ್ಮ ನಿರ್ಮಾಣವನ್ನು ಕಂಡರು.

ಬಭೂವ ಹಿ ಸಮಾ ಭೂಮಿಃ ಸಮಂತಾತ್ ಪಂಚಯೋಜನಮ್ ।
ಶಾದ್ವಲೈರ್ಬಹುಭಿಶ್ಛನ್ನಾ ನೀಲವೈದೂರ್ಯಸಂನಿಭೈಃ ॥೨೯॥

ಐದು ಯೋಜನವಿಸ್ತಾರದ ಭೂಪ್ರದೇಶವೆಲ್ಲವೂ ಸಮತಲವಾಯಿತು. ನೀಲ ವೈಡೂರ್ಯಗಳಂತೆ ಕಂಗೊಳಿಸುವ ಹುಲ್ಲುಗಾವಲು ಎಲ್ಲೆಡೆ ಆವರಿಸಿತು.

ತಸ್ಮಿನ್ ಬಿಲ್ವಾಃ ಕಪಿತ್ಥಾಶ್ಚ ಪನಸಾ ಬೀಜಪೂರಕಾಃ ।
ಆಮಲಕ್ಯೋ ಬಭೂವುಶ್ಚ ಚೂತಾಶ್ಚ ಫಲಭೂಷಣಾಃ ॥೩೦॥

ಬಿಲ್ವ ಬೇಲ ಹಲಸು ಮಾದಳ ನೆಲ್ಲಿ ಮಾವು ಮುಂತಾದ ಉತ್ತಮ ಫಲವೃಕ್ಷಗಳು ಮೈದೋರಿದುವು.

ಉತ್ತರೇಭ್ಯಃ ಕುರುಭ್ಯಶ್ಚ ವನಂ ದಿವ್ಯೋಪಭೋಗವತ್ ।
ಆಜಗಾಮ ನದೀ ದಿವ್ಯಾ ತೀರಜೈರ್ಬಹುಭಿರ್ವೃತಾ ॥೩೧॥

ಉತ್ತರಕುರುಕ್ಷೇತ್ರದ ದಿವ್ಯ ಚೈತ್ರರಥ ಉದ್ಯಾನವೇ ದೇವತೆಗಳ ಉಪಭೋಗಕ್ಕಾಗಿ ಬಂದಿತು. ತೀರಗಳಲ್ಲಿ ಬೆಳೆದುನಿಂತ ವೃಕ್ಷಗಳೊಂದಿಗೇ ನದಿಯೂ ಆವಿರ್ಭವಿಸಿತು.

ಚತುಶ್ಶಾಲಾನಿ ಶುಭ್ರಾಣಿ ಸಾಲಶ್ಚ ಗಜವಾಜಿನಾಮ್ ।
ಹಮ್ಯಪ್ರಾಸಾದಸಂಬಾಧಾಸ್ತೋರಣಾನಿ ಶುಭಾನಿ ಚ ॥೩೨॥

ಶುಭ್ರವಾದ ನಾಲ್ಕು ಮನೆಗಳ ಸಂಕೀರ್ಣಗಳು ಆನೆ ಕುದುರೆಗಳ ಲಾಯಗಳು ಧನಿಕರ ಮಾಳಿಗೆ ಮನೆ ಅರಮನೆಗಳಿಗೆ ಕಟ್ಟಿದ ಶುಭಕರವಾದ ಬಾವುಟಗಳು ಆವಿರ್ಭವಿಸಿದುವು.

ಸಿತಮೇಘನಿಭಂ ಚಾಪಿ ರಾಜವೇಶ್ಮ ಸುತೋರಣಮ್ ।
ದಿವ್ಯಮಾಲ್ಯಕೃತಾಕಾರಂ ದಿವ್ಯಗಂಧಸಮುಕ್ಷಿತಮ್ ॥೩೩॥

ಒಳ್ಳೆಯ ಬಾವುಟ ಉಳ್ಳ ಬಿಳಿಮೋಡಗಳಂಥ ಅರಮನೆ ದಿವ್ಯಮಾಲೆಗಳಿಂದ ಅಲಂಕೃತವಾಗಿದೆ. ದಿವ್ಯ ಗಂಧಜಲದಿಂದ ಸಿಕ್ತವಾಗಿದೆ.

ಚತುರಶ್ರಮಸಂಬಾಧಂ ಶಯನಾಸನಯಾನವತ್ ।
ದಿವ್ಯೈಃ ಸರ್ವರಸೈರ್ಯುಕ್ತಂ ದಿವ್ಯಭೋಜನವಸ್ತ್ರವತ್ ॥೩೪॥

ಚೌಕಾಕಾರದ ವಿಶಾಲವಾದ ಭವನಗಳಲ್ಲಿ ಮಂಚ ಸಿಂಹಾಸನ ವಾಹನಗಳು ಮತ್ತು ದಿವ್ಯ ಷಡ್ರಸಯುಕ್ತ ದಿವ್ಯಭೋಜನ, ವಸ್ತ್ರಗಳು.

ಉಪಕಲ್ಪಿತಸರ್ವಾನ್ನಂ ಧೌತನಿರ್ಮಲಭಾಜನಮ್ ।
ಕ್ಲೃಪ್ತಸರ್ವಾಸನಂ ಶ್ರೀಮತ್ ಸ್ಪಾಸ್ತೀರ್ಣಶಯನೋತ್ತಮಮ್ ॥೩೫॥

ಎಲ್ಲ ಅನ್ನಗಳು ಸಿದ್ಧವಾಗಿವೆ. ತೊಳೆದ ನಿರ್ಮಲವಾದ ತಟ್ಟೆಗಳಿವೆ. ಎಲ್ಲ ಆಸನ-ಗಳು ಸಿದ್ಧವಾಗಿವೆ. ಸುಂದರವಾದ ಒಳ್ಳೆಯ ಹಾಸಿನ ಉತ್ತಮವಾದ ಮಂಚವಿದೆ.

ಪ್ರವಿವೇಶ ಮಹಾಬಾಹುರನುಜ್ಞಾತೋ ಮಹರ್ಷಿಣಾ ।
ವೇಶ್ಮ ತದ್ರತ್ನಸಂಪೂರ್ಣಂ ಭರತಃ ಕೈಕಯೀಸುತಃ ॥೩೬॥

ರತ್ನಗಳಿಂದ ತುಂಬಿದ ಆ ಅರಮನೆಯನ್ನು ಮಹರ್ಷಿಯ ಅನುಜ್ಞೆಯಿಂದ ಕೈಕಯೀಸುತನಾದ ಭರತನು ಪ್ರವೇಶಿಸಿದನು.

ಅನುಜಗ್ಮುಶ್ಚ ತಂ ಸರ್ವೇ ಮಂತ್ರಿಣಃ ಸಪುರೋಹಿತಾಃ ।
ಬಭೂವುಶ್ಚ ಮುದಾ ಯುಕ್ತಾ ದೃಷ್ಟ್ವಾ ತಂ ವೇಶ್ಮಸಂವಿಧಿಮ್ ॥೩೭॥

ಬಳಿಕ ಪುರೋಹಿತರೊಂದಿಗೆ ಎಲ್ಲ ಮಂತ್ರಿಗಳೂ ಆ ಅರಮನೆಯನ್ನು ಪ್ರವೇಶಿಸಿದರು. ವಿಶ್ವಕರ್ಮನ ಆ ಗೃಹನಿರ್ಮಾಣವನ್ನು ಕಂಡು ಆನಂದಿಸಿದರು.

ತತ್ರ ರಾಜಾಸನಂ ದಿವ್ಯಂ ವ್ಯಜನಂ ಛತ್ರಮೇವ ಚ ।
ಭರತೋ ಮಂತ್ರಿಭಿಃ ಸಾರ್ಧಮಭ್ಯವರ್ತತ ರಾಜವತ್ ॥೩೮॥

ಅಲ್ಲಿ ಛತ್ರಚಾಮರಗಳಿಂದ ಯುಕ್ತವಾದ ರಾಜನಿಗೆ ಯೋಗ್ಯವಾದ ದಿವ್ಯರಾಜ ಸಿಂಹಾಸನವನ್ನು ಭರತನು ಮಂತ್ರಿಗಳೊಂದಿಗೆ ಪ್ರದಕ್ಷಿಣೆ ಮಾಡಿದನು.

ಆಸನಂ ಪೂಜಯಾಮಾಸ ರಾಮಾಯಾಭಿಪ್ರಣಮ್ಯ ಚ ।
ವಾಲವ್ಯಜನಮಾದಾಯ ನ್ಯಷೀದತ್ ಸಚಿವಾಸನೇ ॥೩೯॥

ಭರತನು ಸಿಂಹಾಸನವನ್ನು ಪೂಜಿಸಿದ. ಅದರಲ್ಲಿ ರಾಮನಿರುವನೆಂದು ಅನುಸಂಧಾನ ಮಾಡಿ ಪ್ರಣಾಮಗೈದು ಚಾಮರ ವ್ಯಜನಸೇವೆ ಸಲ್ಲಿಸಿ ಮಂತ್ರಿಗಳು ಕುಳಿತುಕೊಳ್ಳುವ ಆಸನದಲ್ಲಿ ಕುಳಿತನು.

ಆನುಪೂರ್ವ್ಯಾನ್ನಿಷೇದುಶ್ಚ ಸರ್ವೇ ಮಂತ್ರಿಪುರೋಹಿತಾಃ ।
ತತಃ ಸೇನಾಪತಿಃ ಪಶ್ಚಾತ್ ಪ್ರಶಾಸ್ತಾ ಚ ನಿಷೇದತುಃ ॥೪೦॥

ಬಳಿಕ ಕ್ರಮವಾಗಿ ಎಲ್ಲ ಮಂತ್ರಿಗಳೂ ಪುರೋಹಿತರೂ ಬಳಿಕ ಸೇನಾಪತಿಯೂ ಬಳಿಕ ಗೃಹರಕ್ಷಕನೂ ಕುಳಿತರು.

ತತಸ್ತತ್ರ ಮುಹೂರ್ತೇನ ನದ್ಯಃ ಪಾಯಸಕರ್ದಮಾಃ ।
ಉಪಾತಿಷ್ಠಂತ ಭರತಂ ಭರದ್ವಾಜಸ್ಯ ಶಾಸನಾತ್ ॥೪೧॥

ಬಳಿಕ ಒಂದು ಮುಹೂರ್ತಕಾಲ ಕಳೆಯುವುದರೊಳಗೆ ಗಟ್ಟಿ ಪಾಯಸದ ನದಿಗಳು ಭರದ್ವಾಜನ ಆದೇಶದಿಂದ ಭರತನ ಬಳಿಗೆ ಹರಿದುಬಂದುವು.

ತಾಸಾಮುಭಯತಃಕೂಲಂ ಪಾಂಡುಮೃತ್ತಿಕಲೇಪನಾಃ ।
ರಮ್ಯಾಶ್ಚಾವಸಥಾ ದಿವ್ಯಾ ಬ್ರಾಹ್ಮಣಸ್ಯ ಪ್ರಸಾದಜಾಃ ॥೪೨॥

ಆ ನದಿಗಳ ಎರಡು ತೀರಗಳಲ್ಲಿ ಬಿಳಿ ಮಣ್ಣಿನ ಲೇಪಉಳ್ಳ ದಿವ್ಯಗೃಹಗಳು ಮುನಿಯ ಅನುಗ್ರಹದಿಂದ ಆವಿರ್ಭವಿಸಿದುವು.

ತೇನೈವ ಚ ಮುಹೂರ್ತೇನ ದಿವ್ಯಾಭರಣಭೂಷಿತಾಃ ।
ಆಗುರ್ವಿಂಶತಿಸಾಹಸ್ರಾ ಬ್ರಹ್ಮಣಾ ಪ್ರಹಿತಾಃ ಸ್ತ್ರಿಯಃ ॥೪೩॥

ಅದೇ ಮುಹೂರ್ತದಲ್ಲಿ ಚತುರ್ಮುಖ ಬ್ರಹ್ಮನು ಕಳಿಸಿದ ದಿವ್ಯಾಭರಣ ಭೂಷಿತೆಯರಾದ ಇಪ್ಪತ್ತುಸಾವಿರ ಅಪ್ಸರಾಸ್ತ್ರೀಯರು ಆಗಮಿಸಿದರು.

ಸುವರ್ಣಮಣಿಮುಕ್ತಾಭಿಃ ಪ್ರವಾಲೇನ ಚ ಶೋಭಿತಾಃ ।
ಆಗುರ್ವಿಂಶತಿಸಾಹಸ್ರಾಃ ಕುಬೇರಪ್ರಹಿತಾಃ ಸ್ತ್ರಿಯಃ ॥೪೪॥

ಹಾಗೇ ಕುಬೇರನು ಕಳಿಸಿದ ಬಂಗಾರ ಮಣಿ ಮತ್ತು ಹವಳಗಳಿಂದ ಶೋಭಿತೆ-ಯರಾದ ಇಪ್ಪತ್ತು ಸಾವಿರ ಅಪ್ಸರೆಯರೂ ಆಗಮಿಸಿದರು.

ಯಾಭಿರ್ಗೃಹೀತಃ ಪುರುಷಃ ಸೋನ್ಮಾದ ಇವ ಲಕ್ಷ್ಯತೇ ।
ಆಗುರ್ವಿಂಶತಿಸಾಹಸ್ರಾ ನಂದನಾದಪ್ಸರೋಗಣಾಃ ॥೪೫॥

ಯಾರು ಆಲಿಂಗಿಸಿದರೆ ಪುರುಷನು ಉನ್ಮತ್ತನಂತಾಗಿ ಕಂಡು ಬರುವನೋ ಅಂಥ ಇಪ್ಪತ್ತುಸಾವಿರ ಅಪ್ಸರೆಯರು ನಂದನವನದಿಂದ ಇಂದ್ರನಾದೇಶದಂತೆ ಆಗಮಿಸಿದರು.

ನಾರದಸ್ತುಂಬುರುರ್ಗೋಪಃ ಪ್ರಭಯಾ ಸೂರ್ಯವರ್ಚಸಃ ।
ಏತೇ ಗಂಧರ್ವರಾಜಾನೋ ಭರತಸ್ಯಾಗ್ರತೋ ಜಗುಃ ॥೪೬॥

ಸೂರ್ಯನಂಥ ತೇಜಸ್ಸಿನಿಂದ ಹೊಳೆಯುವ ನಾರದ ತುಂಬುರು ಗೋಪ ಎಂಬ ಗಂಧರ್ವರಾಜರು ಭರದ್ವಾಜರಾದೇಶದಂತೆ ಭರತನ ಮುಂದೆ ಹಾಡಿದರು.

ಅಲಂಬುಸಾ ಮಿಶ್ರಕೇಶೀ ಪುಂಡರೀಕಾಥ ವಾಮನಾ ।
ಉಪಾನೃತ್ಯಂಸ್ತು ಭರತಂ ಭರದ್ವಾಜಸ್ಯ ಶಾಸನಾತ್ ॥೪೭॥

ಅಲಂಬುಸಾ ಮಿಶ್ರಕೇಶಿ ಪುಂಡರೀಕಾ ವಾಮನಾ ಎಂಬ ಅಪ್ಸರೆಯರು ಭರದ್ವಾಜರ ಆದೇಶದಂತೆ ಭರತನ ಮುಂದೆ ನರ್ತಿಸಿದರು.

ಯಾನಿ ಮಾಲ್ಯಾನಿ ದೇವೇಷು ಯಾನಿ ಚೈತ್ರರಥೇ ವನೇ ।
ಪ್ರಯಾಗೇ ತಾನ್ಯದೃಶ್ಯಂತ ಭರದ್ವಾಜಸ್ಯ ತೇಜಸಾ ॥೪೮॥

ಯಾವ ಮಾಲೆಗಳು ದೇವತೆಗಳ ಮೈಯಲ್ಲಿ ಚೈತ್ರರಥ ವನದಲ್ಲಿ ಕಂಗೊಳಿಸುವವೋ ಆ ಮಾಲೆಗಳು ಭರದ್ವಾಜರ ತಪಸ್ಸಿನ ತೇಜಸ್ಸಿನಿಂದ ಪ್ರಯಾಗದಲ್ಲಿಯೂ ಕಂಡುಬಂದುವು.

ಬಿಲ್ವಾ ಮಾರ್ದಂಗಿಕಾ ಆಸನ್ ಕಾಂಸ್ಯಗ್ರಾಹಾ ವಿಭೀತಕಾಃ ।
ಅಶ್ವತ್ಥಾ ನರ್ತಕಾಶ್ಚಾಸನ್ ಭರದ್ವಾಜಸ್ಯ ಶಾಸನಾತ್ ॥೪೯॥

ಭರದ್ವಾಜರ ಆದೇಶದಂತೆ ಭರತನ ಮುಂದೆ ಬಿಲ್ವವೃಕ್ಷಗಳು ಮೃದಂಗ ಬಾರಿಸಿದುವು. ವಿಭೀತಕ ವೃಕ್ಷಗಳು ತಾಳಹಾಕಿದುವು. ಅಶ್ವತ್ಥವೃಕ್ಷಗಳು ನರ್ತನ ಮಾಡಿದುವು.

ಈ ವೃಕ್ಷಲತೆ ಮುಂತಾದವು ಸ್ಥಾವರಗಳಾದರೂ ಕರ್ಮಜದೇವತೆ ಗಳಾದ್ದರಿಂದ ಗಂಧರ್ವಾಪ್ಸರೆಯರಂತೆ ಗಾನನಾಟ್ಯಗಳನ್ನು ನಡೆಸಿದುವು. ಮುಂದೆ ರಾಮನು ಪರಂಧಾಮಕ್ಕೆ ಹೋಗುವಾಗ ಅವನನ್ನು ಸ್ಥಾವರ ಜಂಗಮವೆಲ್ಲವೂ ಹಿಂಬಾಲಿಸಿದುವು ಎಂದು ವಾಲ್ಮೀಕಿ ಹೇಳುತ್ತಾನೆ—

ಯಾನಿ ಪಶ್ಯಂತಿ ಕಾಕುತ್ಸ್ಥಂ ಸ್ಥಾವರಾಣಿ ಚರಾಣಿ ಚ ।
ಸರ್ವಾಣಿ ರಾಮಗಮನೇ ಅನುಜಗ್ಮುರ್ಹಿತಾನ್ಯಪಿ ॥ (ಉತ್ತರ. 109.21)

ತತಃ ಸರಲತಾಲಾಶ್ಚ ತಿಲಕಾ ಸತಮಾಲಕಾಃ ।
ಪ್ರಹೃಷ್ಟಾಸ್ತತ್ರ ಸಂಪೇತುಃ ಕುಬ್ಜಾ ಭೂತ್ವಾಥ ವಾಮನಾಃ ॥೫೦॥

ದೇವದಾರು ತಾಲ ತಿಲಕ ತಮಾಲ ವೃಕ್ಷಗಳು ಗೂನುಬೆನ್ನಿನ ಕುಳ್ಳ ಆಕಾರದ ಪರಿಚಾರಿಕೆಯರಾಗಿ ಉತ್ಸಾಹದಿಂದ ಸೈನಿಕರ ಉಪಚಾರ ಮಾಡಿದುವು.

ಶಿಂಶಪಾऽऽಮಲಕೀಜಂಬ್ವೋ ಯಾಶ್ಚಾನ್ಯಾಃ ಕಾನನೇ ಲತಾಃ ।
ಪ್ರಮದಾವಿಗ್ರಹಂ ಕೃತ್ವಾ ಭರದ್ವಾಜಾಶ್ರಮೇऽವಸನ್ ॥೫೧॥

ಶಿಂಶಪ ನೆಲ್ಲಿ ನೇರಳೆ ಮುಂತಾದ ವೃಕ್ಷಗಳೂ ಬೇರೆ ಬಳ್ಳಿಗಳೂ ಅತಿಥಿ ಸತ್ಕಾರ-ಕ್ಕಾಗಿ ಸುಂದರ ಸ್ತ್ರೀರೂಪದಿಂದ ಭರದ್ವಾಜಾಶ್ರಮದಲ್ಲಿ ವಾಸ ಮಾಡಿದುವು.

ಸುರಾಃ ಸುರಾಪಾಃ ಪಿಬತ ಪಾಯಸಂ ಚ ಬುಭುಕ್ಷಿತಾಃ ।
ಮಾಂಸಾನಿ ಚ ಸುಮೇಧ್ಯಾನಿ ಭಕ್ಷ್ಯಂತಾಂ ಯಾವದಿಚ್ಛಥ ॥೫೨॥

'ಸುರಾಪಾನ ಮಾಡುವವರು ಪಾನ ಮಾಡಿರಿ, ಹಸಿದವರು ಪಾಯಸ ಉಣ್ಣಿರಿ. ಪವಿತ್ರವಾದ ಮಾಂಸವನ್ನು ಯಥೇಚ್ಛ ಭಕ್ಷಿಸಿರಿ' ಎಂದ ಆ ಸ್ತ್ರೀಯರು ಉಪಚರಿಸಿದರು.

ಉಚ್ಛಾದ್ಯ ಸ್ನಾಪಯಂತಿ ಸ್ಮ ನದೀತೀರೇಷು ವಲ್ಗುಷು ।
ಅಪ್ಯೇಕಮೇಕಂ ಪುರುಷಂ ಪ್ರಮದಾಃ ಸಪ್ತ ಚಾಷ್ಟ ಚ ॥೫೩॥

ಸುಂದರ ನದೀತೀರ ಪ್ರದೇಶಗಳಲ್ಲಿ ಸುಗಂಧತೈಲವನ್ನು ಮೈಗೆ ಪೂಸಿ ಒಬ್ಬೊಬ್ಬ ಸೈನಿಕನನ್ನೂ ಏಳೆಂಟು ಮಂದಿ ಸ್ತ್ರೀಯರು ಸ್ನಾನ ಮಾಡಿಸಿದರು.

ಸಂವಾಹಂತ್ಯಃ ಸಮಾಪೇತುರ್ಯಾಯೋ೯ ರುಚಿರಲೋಚನಾಃ ।
ಪರಿಮೃಜ್ಯ ತಥಾನ್ಯೋನ್ಯಂ ಪಾಯಯಂತಿ ವರಾಂಗನಾಃ ॥೫೪॥

ಸುಂದರಕಣ್ಣಿನ ಶ್ರೇಷ್ಠ ನಾರಿಯರು ಬಂದು ಯೋಧರ ಮೈಒತ್ತಿದರು. ಸ್ನಾನ ಮಾಡಿಸಿದರು. ಪರಸ್ಪರ ಪಾನಮಾಡಿಸಿದರು.

ಹಯಾನ್ ಗಜಾನ್ ಖರಾನುಷ್ಟ್ರಾಂಸ್ತಥೈವ ಸುರಭೇಃ ಸುತಾನ್ ।
ಅಭೋಜಯನ್ ವಾಹನಪಾಸ್ತೇಷಾಂ ಭೋಜ್ಯಂ ಯಥಾವಿಧಿ ॥೫೫॥

ಕುದುರೆ ಆನೆ ಕತ್ತೆ ಒಂಟೆ ಎತ್ತುಗಳಿಗೆ ವಾಹನರಕ್ಷಕರು ಯಥಾಯೋಗ್ಯವಾಗಿ ಅವುಗಳಿಗೆ ಇಷ್ಟವಾಗುವ ಮೇವನ್ನು ತಿನ್ನಿಸಿದರು.

ಇಕ್ಷೂಂಶ್ಚ ಮಧು ಲಾಜಾಂಶ್ಚ ಭೋಜಯಂತಿ ಸ್ಮ ವಾಹನಾನ್ ।
ಇಕ್ಷ್ವಾಕುವರಯೋಧಾನಾಂ ಚೋದಯಂತೋ ಮಹಾಬಲಾಃ ॥೫೬॥

ಮಹಾಬಲರಾದ ವಾಹನಪಾಲಕರು ಭರತನ ಯೋಧರು ಆನೆ ಕುದುರೆ ಮುಂತಾದ ವಾಹನಗಳಿಗೆ ಬೆನ್ನುಚಪ್ಪರಿಸಿ ರಮಿಸಿ ಕಬ್ಬು ಜೇನು ಅರಳು ಮುಂತಾದುವನ್ನು ತಿನಿಸಿದರು.

ನಾಶ್ವಬಂಧೋಽಶ್ವಮಾಜಾನಾನ್ನ ಗಜಂ ಕುಂಜರಗ್ರಹಃ ।
ಮತ್ತಪ್ರಮತ್ತಮುದಿತಾ ಚಮೂಃ ಸಾ ತತ್ರ ಸಂಬಭೌ ॥೫೭॥

ಮಿಷ್ಟಾನ್ನಉಂಡ ಮದ, ಮದ್ಯಪಾನದ ಮತ್ತು, ಮತ್ತು ಸ್ತ್ರೀಯರುಗೈದ ಉಪಚಾರಗಳಿಂದಾದ ಮಹಾಆನಂದ ಇವುಗಳಿಂದ ಭರತನ ಸೈನ್ಯ ಮೈಮರೆತು ಹೋಯಿತು. ಅಶ್ವಸವಾರನಿಗೆ ತನ್ನ ಅಶ್ವ ಯಾವುದೆಂದು ತಿಳಿಯದಂತಾಯಿತು. ಗಜಯೋಧನಿಗೆ ತನ್ನ ಆನೆ ಯಾವುದೆಂದು ತಿಳಿಯದಂತಾಯಿತು. ಹೀಗೆ ಸೈನ್ಯ ಕಂಗೊಳಿಸಿತು.

ತರ್ಪಿತಾಃ ಸರ್ವಕಾಮೈಸ್ತೇ ರಕ್ತಚಂದನರೂಷಿತಾಃ ।
ಅಪ್ಸರೋಗಣಸಂಯುಕ್ತಾಃ ಸೈನ್ಯಾ ವಾಚಮುದೈರಯನ್ ॥೫೮॥

ಎಲ್ಲ ಭೋಗ್ಯಪದಾರ್ಥಗಳಿಂದ ತೃಪ್ತರಾಗಿ ಕೆಂಪುಗಂಧ ಪೂಸಿಕೊಂಡು ಅಪ್ಸರೆಯರ ಸಮೂಹದ ಒಡನಾಡಿಗಳಾಗಿ ಸೈನಿಕರು ಹೇಳಲು ತೊಡಗಿದರು.

ನೈವಾಯೋಧ್ಯಾಂ ಗಮಿಷ್ಯಾಮೋ ನ ಗಮಿಷ್ಯಾಮ ದಂಡಕಾನ್ ।
ಕುಶಲಂ ಭರತಸ್ಯಾಸ್ತು ರಾಮಾಯಾಸ್ತು ತಥಾ ಸುಖಮ್ ॥೫೯॥

'ನಾವು ಇತ್ತ ಅಯೋಧ್ಯೆಗೆ ಹಿಂತಿರುಗಬೇಕಿಲ್ಲ. ಅತ್ತ ದಂಡಕಾರಣ್ಯಕ್ಕೆ ಹೋಗುವುದೂ ಬೇಕಾಗಿಲ್ಲ. ಇತ್ತ ಭರತ ಕ್ಷೇಮದಿಂದಿರಲಿ, ಅತ್ತ ರಾಮನೂ ಸುಖವಾಗಿರಲಿ.

ಇತಿ ಪಾದಾತಯೋಧಾಶ್ಚ ಹಸ್ತ್ಯಶ್ವಾರೋಹಬಂಧಕಾಃ ।
ಅನಾಥಾಸ್ತಂ ವಿಧಿಂ ಲಬ್ಧ್ವಾ ವಾಚಮೇತಾಮುದೈರಯನ್ ॥೬೦॥

ಇಷ್ಟರವರೆಗೆ ಇಂಥ ಸುಖಭೋಗವನ್ನು ಕಾಣದಿದ್ದ ಪಾಪ ಸೈನಿಕರು ಇದೀಗ ಅದನ್ನು ಹೊಂದಿ ಪಾನಮತ್ತರಾಗಿ ತಮಗೆ ತಾವೇ ಅನಾಥರಾದೆವೆಂದುಕೊಂಡು ಈ ರೀತಿ ಮಾತನಾಡಿಕೊಂಡರು. ಅಷ್ಟು ವೈಭವಪೂರ್ಣವಾಗಿತ್ತು ಉಪಚಾರ.

ಸಂಪ್ರಹೃಷ್ಟಾ ಏನೇದುಸ್ತೇ ನರಾಸ್ತತ್ರ ಸಹಸ್ರಶಃ ।
ಭರತಸ್ಯಾನುಯಾತಾರಃ ಸ್ವರ್ಗೋಽಯಮಿತಿ ಚಾಬ್ರುವನ್ ॥೬೧॥

ಭರತನ ಭೃತ್ಯರಾದ ಜನರು ಸಾವಿರಾರು ಮಂದಿ ಬಲು ಆನಂದದಿಂದ 'ಸ್ವರ್ಗವೆಂದರೆ ಇದೇ' ಎಂದು ಗಟ್ಟಿಯಾಗಿ ಪ್ರಶಂಸೆ ಮಾಡಿದರು.

ನೃತ್ಯಂತಿ ಸ್ಮ ಹಸಂತಿ ಸ್ಮ ಗಾಯಂತಿ ಸ್ಮ ಚ ಸೈನಿಕಾಃ ।
ಸಮಂತಾತ್ಪರಿಧಾವಂತಿ ಮಾಲ್ಯೋಪೇತಾಃ ಸಹಸ್ರಶಃ ॥೬೨॥

ಸೈನಿಕರು ಸಾವಿರಾರು ಮಂದಿ ಮಾಲೆಗಳನ್ನು ಧರಿಸಿ ಎಲ್ಲೆಡೆ ಓಡಾಡಿದರು ಕುಣಿದರು ನಕ್ಕರು, ಹಾಡಿದರು.

ತತೋ ಭುಕ್ತವತಾಂ ತೇಷಾಂ ತದನ್ನಮಮೃತೋಪಮಮ್ ।
ದಿವ್ಯಾನುದ್ವೀಕ್ಷ್ಯ ಭಕ್ಷ್ಯಾಂಸ್ತಾನಭವದ್ಭಕ್ಷಣೇ ಮತಿಃ ॥೬೩॥

ಭಕ್ಷ್ಯಗಳು ಎಷ್ಟು ಸ್ವಾದಿಷ್ಠವಾಗಿತ್ತೆಂದರೆ, ಅಮೃತದಂಥ ಅನ್ನವನ್ನು ಉಂಡ-ವರೂ ಕೂಡ ಆ ಭಕ್ಷ್ಯಗಳನ್ನು ನೋಡಿದಾಗ ತಿರುಗಿ ಅವುಗಳನ್ನು ತಿನ್ನಲು ಅವರಿಗೆ ಆಸೆ ಉಂಟಾಯಿತು.

ಪ್ರೇಷ್ಯಾಶ್ಚೇಟ್ಯಶ್ಚ ವಧ್ವಶ್ಚ ಬಲಸ್ಥಾಶ್ಚ ಸಹಸ್ರಶಃ ।
ಬಭೂವುಸ್ತೇ ಭೃಶಂ ತೃಪ್ತಾಃ ಸರ್ವೇ ಚಾಹತವಾಸಸಃ ॥೬೪॥

ನೂತನ ವಸ್ತ್ರಗಳನ್ನು ಧರಿಸಿ, ಸೈನ್ಯದಲ್ಲಿದ್ದ ಸಾವಿರಾರು ಮಂದಿ ದಾಸದಾಸಿ ಯರೂ ಯೋಧಾಂಗನೆಯರೂ ಕೂಡ ಎಲ್ಲರೂ ಮಹರ್ಷಿಯ ಅನುಗ್ರಹದಿಂದ ಬಹಳ ತೃಪ್ತರಾದರು.

ಕುಂಜರಾಶ್ಚ ಖರೋಷ್ಟ್ರಾಶ್ಚ ಗೋಽಶ್ವಾಶ್ಚ ಮೃಗಪಕ್ಷಿಣಃ ।
ಬಭೂವುಃ ಸುಭೃತಾಸ್ತತ್ರ ನಾತೋ ಹ್ಯನ್ಯಮಕಲ್ಪಯನ್ ॥೬೫॥

ಆನೆ ಹೇಸರಕತ್ತೆ ಒಂಟೆ ಎತ್ತು ಕುದುರೆಗಳೂ ಕ್ರೀಡಾಮೃಗ ಪಕ್ಷಿಗಳೂ ಕೂಡ ಮಹರ್ಷಿ ನೀಡಿದ ಸತ್ಕಾರದಿಂದಲೇ ಪುಷ್ಟವಾದುವು. ಅದಕ್ಕಿಂತ ಬೇರೇನೂ ಅವುಗಳಿಗೆ ಬೇಕಾಗಿರಲಿಲ್ಲ.

ನಾಶುಕ್ಲವಾಸಾಸ್ತತ್ರಾಸೀತ್ ಕ್ಷುಧಿತೋ ಮಲಿನೋಽಪಿ ವಾ ।
ರಜಸಾ ಧ್ವಸ್ತಕೇಶೋ ವಾ ನರಃ ಕಶ್ಚಿದದೃಶ್ಯತ ॥೬೬॥

ಶುದ್ಧವಸ್ತ್ರಧರಿಸದವನು ಹಸಿದವನು ಕೊಳೆಮೈಯವನು ದೂಳಿನಿಂದ ಹಾಳಾದ ಕೂದಲಿನವನೂ ಅಲ್ಲಿ ಯಾರೊಬ್ಬನೂ ಕಂಡುಬರಲಿಲ್ಲ.

ಆಜೈಶ್ಚಾಪಿ ಚ ವಾರಾಹೈರ್ನಿಷ್ಠಾನವರಸಂಚಯೈಃ ।
ಫಲನಿರ್ಯೂಹಸಂಸಿದ್ಧೈಃ ಸೂಪೈರ್ಗಂಧರಸಾನ್ವಿತೈಃ ॥೬೭॥

ಪುಷ್ಪಧ್ವಜವತೀಃ ಪೂರ್ಣಾಃ ಶುಕ್ಲಸ್ಯಾನ್ನಸ್ಯ ಚಾಭಿತಃ ।
ದದೃಶುರ್ವಿಸ್ಮಿತಾಸ್ತತ್ರ ನರಾ ಲೌಹೀಃ ಸಹಸ್ರಶಃ ॥೬೮॥

ಆಡು ಹಂದಿ ಮಾಂಸಗಳಿಂದಲೂ ಉತ್ತಮವಾದ ಮಜ್ಜಿಗೆಹುಳಿ ಚಟ್ನಿರಾಶಿ-ಗಳಿಂದಲೂ ಹಣ್ಣಿನ ಸೀಕರಣೆಗಳಿಂದಲೂ ಘಮ್ಮನೆ ವಾಸನೆ ಬರುವ ತೊವ್ವೆ ಸಾರು ಹುಳಿಗಳಿಂದಲೂ ಶುದ್ಧವಾದ ಅನ್ನದಿಂದಲೂ ತುಂಬಿದ, ಅಲಂಕಾರದ ಪುಷ್ಪ ನಿರ್ಮಿತ ಧ್ವಜಗಳಿಂದ ಕೂಡಿದ ಸಾವಿರಾರು ಚಿನ್ನ ಬೆಳ್ಳಿ ಪಾತ್ರಗಳನ್ನು ಕಂಡು ಜನರು ಆವಿಸ್ಮಿತರಾದರು.

ಬಭೂವುರ್ವನಪಾರ್ಶ್ವೇಷು ಕೂಪಾಃ ಪಾಯಸಕರ್ದಮಾಃ ।
ತಾಶ್ಚ ಕಾಮದುಘಾ ಗಾವೋ ದ್ರುಮಾಶ್ಚಾಸನ್ ಮಧುಚ್ಯುತಃ ॥೬೯॥

ಆಶ್ರಮದ ಪಕ್ಕದಲ್ಲಿದ್ದ ಬಾವಿಗಳು ಗಟ್ಟಿಪಾಯಸದಿಂದ ತುಂಬಿದ್ದವು. ಹಸು ಗಳು ಬಯಸಿದುದನ್ನೆಲ್ಲ ಕೊಡುತ್ತಿದ್ದವು. ಮರಗಳು ಜೇನನ್ನು ಸುರಿಯುತ್ತಿದ್ದುವು.

ವಾಪ್ಯೋ ಮೈರೇಯಪೂರ್ಣಾಶ್ಚ ಮೃಷ್ಟಮಾಂಸಚಯೈರ್ವೃತಾಃ ।
ಪ್ರತಪ್ತಪಿಠರೈಶ್ಚಾಪಿ ಮಾರ್ಗಮಾಯೂರಕೌಕ್ಕುಟೈಃ ॥೭೦॥

ಆಶ್ರಮದ ಪಕ್ಕದ ಕೊಳಗಳು ಮೈರೇಯ ಮದ್ಯದಿಂದ ತುಂಬಿದ್ದವು. ಮತ್ತು ಶುದ್ಧವಾದ ಜಿಂಕೆ ನವಿಲು ಕೋಳಿ ಮಾಂಸಗಳಿಂದ ತುಂಬಿದ ಸುಟ್ಟ ಮಡಕೆಗಳಿಂದ ಕೂಡಿದ್ದುವು.

ಪಾತ್ರೀಣಾಂ ಚ ಸಹಸ್ರಾಣಿ ಸ್ಥಾಲೀನಾಂ ನಿಯುತಾನಿ ಚ
ನ್ಯರ್ಬುದಾನಿ ಚ ಪಾತ್ರಾಣಿ ಶಾತಕುಂಭಮಯಾನಿ ಚ ॥೭೧॥

ಸಣ್ಣ ಪಾತ್ರೆಗಳು ಸಾವಿರಾರು, ದೊಡ್ಡ ಮಡಕೆಗಳು ಹತ್ತು ಲಕ್ಷ, ಚಿನ್ನದ ದೊಡ್ಡ ಪಾತ್ರೆ ಹತ್ತು ಕೋಟಿ ಇದ್ದುವು.

ಸ್ಥಾಲ್ಯಃ ಕುಂಭ್ಯಃ ಕರಂಭ್ಯಶ್ಚ ದಧಿಪೂರ್ಣಾಃ ಸುಸಂಸ್ಕೃತಾಃ ।
ಯೌವನಸ್ಥಸ್ಯ ಗೌರಸ್ಯ ಕಪಿತ್ಥಸ್ಯ ಸುಗಂಧಿನಃ ॥೭೨॥

ಹ್ರದಾಃ ಪೂರ್ಣಾ ರಸಾಲಸ್ಯ ದಧ್ನಃ ಶ್ವೇತಸ್ಯ ಚಾಪರೇ ।
ಬಭೂವುಃ ಪಾಯಸಸ್ಯಾನ್ಯೇ ಶರ್ಕರಾಣಾಂ ಚ ಸಂಚಯಾಃ ॥೭೩॥

ಮಡಕೆ ಸಣ್ಣಪಾತ್ರೆ ದೊಡ್ಡಪಾತ್ರೆಗಳು ಸಂಸ್ಕರಿಸಿದ ಮೊಸರಿಂದ ತುಂಬಿದ್ದುವು. ಬೇಲದಹಣ್ಣಿನ ಸುವಾಸನೆಯುಳ್ಳ, ಹೊಸದೂ ಅಲ್ಲದ ಹಳೆಯದೂ ಅಲ್ಲದ ಬಿಳಿಯಾದ ಮಜ್ಜಿಗೆ ತುಂಬಿದ ಕೊಳಗಳಿದ್ದವು. ರಸಾಲವೆಂಬ ಒಂದು ಬಗೆಯ ಮಜ್ಜಿಗೆ, ಬಿಳಿಯಾದ ಮೊಸರು ಪಾಯಸ ಸಕ್ಕರೆ ರಾಶಿಗಳಿಗೆ ಬೇರೆಬೇರೆ ಕೊಳಗಳಿದ್ದವು.

ಕಲ್ಕಾಂಶ್ಚೂರ್ಣಕಷಾಯಾಂಶ್ಚ ಸ್ನಾನಾನಿ ವಿವಿಧಾನಿ ಚ ।
ದದೃಶುರ್ಭಾಜನಸ್ಥಾನಿ ತೀರ್ಥೇಷು ಸರಿತಾಂ ನರಾಃ ॥೭೪॥

ನದೀತೀರಗಳಲ್ಲಿ ಸ್ನಾನಕ್ಕೆ ನಾನಾ ಬಗೆಯ ಕಲ್ಕ ಚೂರ್ಣ ಕಷಾಯಗಳ ಪಾತ್ರಗಳು ಜನರಿಗೆ ಕಂಡುಬಂದುವು.

ಶುಕ್ಲಾನಂಶುಮತಶ್ಚಾಪಿ ದಂತಧಾವನಸಂಚಯಾನ್ ।
ಶುಕ್ಲಾಂಶ್ಚಂದನಕಲ್ಕಾಂಶ್ಚ ಸಮುದ್ಗೇಷ್ವವತಿಷ್ಠತಃ ॥೭೫॥

ಹಲ್ಲುಜ್ಜಲು ಬೇಕಾಗುವ ತುದಿಯಲ್ಲಿ ಕುಚ್ಚುಳ್ಳ ಬೇರು ಉತ್ತರಣೆ ಕಡ್ಡಿಗಳ ಚಂದನದ ಪುಡಿಗಳ ಸಂಪುಟಗಳಿದ್ದುವು.

ದರ್ಪಣಾನ್ ಪರಿಮೃಷ್ಟಾಂಶ್ಚ ವಾಸಸಾಂ ಚಾಪಿ ಸಂಚಯಾನ್ ।
ಪಾದುಕೋಪಾನಹಾಂ ಚೈವ ಯುಗ್ಮಾನ್ಯತ್ರ ಸಹಸ್ರಶಃ ॥೭೬॥

ಸ್ವಚ್ಛ ನಿಲುಗನ್ನಡಿಗಳು ಶುಭ್ರವಸ್ತ್ರಗಳ ರಾಶಿಗಳು ಜೋಡು ಪಾದರಕ್ಷೆಗಳು ಸಾವಿರಾರು ಸಿದ್ಧವಾಗಿದ್ದುವು.

ಆಂಜನೀಃ ಕಂಕತಾನ್ ಕೂರ್ಚಾನ್ ಶಸ್ತ್ರಾಣಿ ಚ ಧನೂಂಷಿ ಚ ।
ಮರ್ಮತ್ರಾಣಾನಿ ಚಿತ್ರಾಣಿ ಶಯನಾನ್ಯಾಸನಾನಿ ಚ ॥೭೭॥

ಕಾಡಿಗೆ ಬಾಚಣಿಗೆ ಗಡ್ಡಮೀಸೆಗಳನ್ನು ತೀಡುವ ಬ್ರಶ್‌ಗಳು ಶಸ್ತ್ರಗಳು ಬಿಲ್ಲು ಕವಚಗಳು ಸುಂದರವಾದ ಪೀಠೋಪಕರಣಗಳು ಸಿದ್ಧವಾಗಿದ್ದುವು.

ಪ್ರತಿಪಾನಹ್ರದಾನ್ ಪೂರ್ಣಾನ್ ಖರೋಷ್ಟ್ರಗಜವಾಜಿನಾಮ್ ।
ಅವಗಾಹ್ಯ ಸುತೀರ್ಥಾಂಶ್ಚ ಹ್ರದಾನ್ ಸೋತ್ಪಲಪುಷ್ಕರಾನ್ ॥೭೮॥

ಆಕಾಶವರ್ಣಪ್ರತಿಮಾನ್ ಸ್ವಚ್ಛತೋಯಾನ್ ಸುಖಾಪ್ಲವಾನ್ ।
ನೀಲವೈದೂರ್ಯವರ್ಣಾಂಶ್ಚ ಮೃದೂನ್ ಯವಸಸಂಚಯಾನ್ ।
ನಿರ್ವಾಪಾರ್ಥಾನ್ ಪಶೂನಾಂ ತೇ ದದೃಶುಸ್ತತ್ರ ಸರ್ವಶಃ ॥ ೭೯॥

ಕತ್ತೆ ಒಂಟೆ ಆನೆ ಕುದುರೆಗಳಿಗೆ ನೀರು ಕುಡಿಯಲು ತುಂಬಿದ ಜಲಾಶಯ-ಗಳಿದ್ದುವು. ಜನರು ಇಳಿದು ಸ್ನಾನ ಮಾಡಲು ಯೋಗ್ಯವಾದ ಒಳ್ಳೆಯ ಮೆಟ್ಟಿಲುಳ್ಳ ನೈದಿಲೆಕಮಲಯುಕ್ತವಾದ ಕೊಳಗಳಿದ್ದುವು. ಆಕಾಶವರ್ಣದಂತೆ ಸ್ವಚ್ಛವಾದ ನೀರಿನ, ಸುಖವಾಗಿ ಈಜುವ ಕೊಳಗಳಿದ್ದುವು. ಎಲ್ಲೆಡೆ ವೈಡೂರ್ಯ ವರ್ಣದ ಮೃದುವಾದ ಪಶುಗಳಿಗೆ ಮೇಯಲು ಯೋಗ್ಯವಾದ ಹುಲ್ಲುಗಾವಲುಗಳಿದ್ದವು. ಭರತನ ಸೈನಿಕರು ಎಲ್ಲವನ್ನೂ ಕಂಡರು.

ವ್ಯಸ್ಮಯಂತ ಮನುಷ್ಯಾಸ್ತೇ ಸ್ವಪ್ನಕಲ್ಪಂ ತದದ್ಭುತಮ್ ।
ದೃಷ್ಟ್ವಾತಿಥ್ಯಂ ಕೃತಂ ತಾದೃಗ್ಭರತಸ್ಯ ಮಹರ್ಷಿಣಾ ॥೮೦॥

ಭರದ್ವಾಜಮಹರ್ಷಿಗಳು ಭರತನಿಗೆ ಮಾಡಿದ ಅದ್ಭುತವಾದ ಸ್ವಪ್ನದಂತಿದ್ದ ಆ ಅತಿಥಿ ಸತ್ಕಾರವನ್ನು ನೋಡಿ ಜನರು ವಿಸ್ಮಿತರಾದರು.

ಇತ್ಯೇವಂ ರಮಮಾಣಾನಾಂ ದೇವಾನಾಮಿವ ನಂದನೇ ।
ಭರದ್ವಾಜಾಶ್ರಮೇ ರಮ್ಯೇ ಸಾ ರಾತ್ರಿರ್ವ್ಯತ್ಯವರ್ತತ ॥೮೧॥

ಹೀಗೆ ದೇವತೆಗಳ ನಂದನವದಂತಿದ್ದ ರಮ್ಯವಾದ ಭರದ್ವಾಜಾಶ್ರಮದಲ್ಲಿ ಭರತನ ಸೈನಿಕರು ವಿಹಾರ ಮಾಡುತ್ತಿದ್ದಂತೇ ಆ ರಾತ್ರಿ ಕಳೆಯಿತು.

ಪ್ರತಿಜಗ್ಮುಶ್ಚ ತಾ ನದ್ಯೋ ಗಂಧರ್ವಾಶ್ಚ ಯಥಾಗತಮ್ ।
ಭರದ್ವಾಜಮನುಜ್ಞಾಪ್ಯ ತಾಶ್ಚ ಸರ್ವಾ ವರಾಂಗನಾಃ ॥೮೨॥

ಆ ನದೀ ದೇವತೆಗಳೂ ಗಂಧರ್ವರೂ ಎಲ್ಲ ಅಪ್ಸರೆಯರೂ ಭರದ್ವಾಜರ ಅನುಜ್ಞೆಪಡೆದು ತಮ್ಮ ಸ್ಥಾನಗಳಿಗೆ ಹಿಂದಿರುಗಿದರು.

ತಥೈವ ಮತ್ತಾ ಮದಿರೋತ್ಕಟಾ ನರಾ
ಸ್ತಥೈವ ದಿವ್ಯಾಗರುಚಂದನೋಕ್ಷಿತಾಃ ।
ತಥೈವ ದಿವ್ಯಾ ವಿವಿಧಾಃ ಸ್ರಗುತ್ತಮಾಃ
ಪೃಥಕ್ಪ್ರಕೀರ್ಣಾ ಮನುಜೈಃ ಪ್ರಮರ್ದಿತಾಃ ॥೮೩॥

ದಿವ್ಯ ಅಗರು ಚಂದನ ಪೂಸಿಕೊಂಡು ಮದ್ಯಪಾನದಿಂದ ಮತ್ತರಾದ ಸೈನಿಕರು ಹಾಗೇ ಇದ್ದರು. ಅವರು ಧರಿಸಿದ ನಾನಾ ಬಗೆಯ ದಿವ್ಯಮಾಲೆಗಳೂ ಹಾಗೇ ಇದ್ದುವು. ನೆಲದಮೇಲೆ ಅಲ್ಲಲ್ಲಿ ಬಿದ್ದು ಪುಡಿಯಾದ ಉತ್ತಮವಾದ ಹೂಮಾಲೆಗಳೂ ಹಾಗೇ ಇದ್ದುವು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ತೊಂಬತ್ತೊಂದನೇ ಸರ್ಗ ಮುಗಿಯಿತು.

ದ್ವಿನವತಿತಮಃ ಸರ್ಗಃ

ಸರ್ಗ – 92

ಭರದ್ವಾಜರ ಅನುಜ್ಞೆ ಪಡೆದು ಚಿತ್ರಕೂಟಕ್ಕೆ ಭರತನ ಪ್ರಯಾಣ.

ತತಸ್ತಾಂ ರಜನೀಂ ವ್ಯುಷ್ಯ ಭರತಃ ಸಪರಿಚ್ಛದಃ ।
ಕೃತಾತಿಥ್ಯೋ ಭರದ್ವಾಜಂ ಕಾಮಾದಭಿಜಗಾಮ ಹ ॥೧॥

ಭರತನು ಪರಿವಾರ ಸಮೇತನಾಗಿ ಭರದ್ವಾಜರಿಂದ ಸತ್‌ಕೃತನಾಗಿ ಆ ರಾತ್ರಿಯನ್ನು ಕಳೆದ ಬಳಿಕ ರಾಮನನ್ನು ಕಾಣುವ ಬಯಕೆಯಿಂದ ಭರದ್ವಾಜರ ಅನುಜ್ಞೆ ಕೊಳ್ಳಲು ಹೋದನು.

ತಮೃಷಿಃ ಪುರುಷವ್ಯಾಘ್ರಂ ಪ್ರೇಕ್ಷ್ಯ ಪ್ರಾಂಜಲಿಮಾಗತಮ್ ।
ಹುತಾಗ್ನಿಹೋತ್ರೋ ಭರತಂ ಭರದ್ವಾಜೋಽಭ್ಯಭಾಷತ ॥೨॥

ಬಂದು ಕೈಮುಗಿದು ನಿಂತ ಪುರುಷೋತ್ತಮನಾದ ಭರತನನ್ನು ಕಂಡು, ಅಗ್ನಿಹೋತ್ರ ಹೋಮ ಮಾಡಿ ಹೊರಗೆ ಬಂದಿದ್ದ ಭರದ್ವಾಜರು ನುಡಿದರು.

ಕಚ್ಚಿದತ್ರ ಸುಖಾ ರಾತ್ರಿಸ್ತವಾಸ್ಮದ್ವಿಷಯೇ ಗತಾ ।
ಸಮಗ್ರಸ್ತೇ ಜನಃ ಕಚ್ಚಿದಾತಿಥ್ಯೇ ಶಂಸ ಮೇಽನಘ ॥೩॥

ಪಾಪರಹಿತನಾದ ಭರತನೆ, ಇಲ್ಲಿ ನಮ್ಮಾಶ್ರಮದಲ್ಲಿ ರಾತ್ರಿಯನ್ನು ಸುಖವಾಗಿ ಕಳೆದೆ ತಾನೆ? ನಿನ್ನ ಪರಿವಾರದವರು ನಮ್ಮಾತಿಥ್ಯದಲ್ಲಿ ತೃಪ್ತರಾಗಿದ್ದಾರೆ ತಾನೆ?

ತಮುವಾಚಾಂಜಲಿಂ ಕೃತ್ವಾ ಭರತೋಽಭಿಪ್ರಣಮ್ಯ ಚ ।
ಆಶ್ರಮಾದಭಿನಿಷ್ಕ್ರಾಂತಮೃಷಿಮುತ್ತಮತೇಜಸಮ್ ॥೪॥

ಆಶ್ರಮದಿಂದ ಹೊರಗೆ ಬಂದಿದ್ದ ಉತ್ತಮ ತೇಜಸ್ವಿಯಾದ ಋಷಿಗೆ ಭರತನು ಕೈಮುಗಿದು ನಮಸ್ಕರಿಸಿ ನುಡಿದನು.

ಸುಖೋಷಿತೋಽಸ್ಮಿ ಭಗವನ್ ಸಮಗ್ರಬಲವಾಹನಃ ।
ತರ್ಪಿತಃ ಸರ್ವಕಾಮೈಶ್ಚ ಸಾಮಾತ್ಯೋ ಭಗವಂಸ್ತ್ವಯಾ ॥೫॥

ಪೂಜ್ಯರೆ, ನಾನು ರಾತ್ರಿಯಲ್ಲಿ ಸುಖವಾಗಿ ವಾಸಮಾಡಿದ್ದೇನೆ. ನಾನೂ ನನ್ನ ಅಮಾತ್ಯರೂ ಎಲ್ಲ ಸೈನ್ಯವಾಹನಗಳೂ ನಿಮ್ಮ ಆತಿಥ್ಯದಲ್ಲಿ ಎಲ್ಲ ಭೋಗಪದಾರ್ಥ-ಗಳಿಂದ ತೃಪ್ತರಾಗಿರುವೆವು.

ಅಪೇತಕ್ಲಮಸಂತಾಪಾಃ ಸುಭಿಕ್ಷಾಃ ಸುಪ್ರತಿಶ್ರಯಾಃ ।
ಅಪಿ ಪ್ರೇಷ್ಯಾನುಪಾದಾಯ ಸರ್ವೇ ಸ್ಮ ಸುಸುಖೋಷಿತಾಃ ॥೬॥

ಭೃತ್ಯರಿಂದ ತೊಡಗಿ ನಾವೆಲ್ಲರೂ ಸುಖವಾಗಿ ವಾಸ ಮಾಡಿದೆವು. ಒಳ್ಳೆಯ ಊಟಉಪಚಾರ ಒಳ್ಳೆಯ ವಸತಿ ಸೌಕರ್ಯಗಳಿಂದ ನಮ್ಮ ದೇಹಾಯಾಸ ಮನಸಿನ ಸಂತಾಪಗಳು ಕಳೆದಿವೆ.

ಆಮಂತ್ರಯೇಽಹಂ ಭಗವನ್ ಕಾಮಂ ತ್ವಾಂ ಋಷಿಸತ್ತಮ ।
ಸಮೀಪಂ ಪ್ರಸ್ಥಿತಂ ಭ್ರಾತುರ್ಮೈತ್ರೇಣೇಕ್ಷಸ್ವ ಚಕ್ಷುಷಾ ॥೭॥

ಪೂಜ್ಯರೆ, ನಿಮ್ಮ ಅನುಜ್ಞೆಯನ್ನು ಕೇಳುತ್ತೇನೆ. ಉತ್ತಮಋಷಿಯೆ, ನಾನು ನನ್ನಿಚ್ಛೆಯಂತೆ ರಾಮನ ಬಳಿಗೆ ಹೊರಟಿದ್ದೇನೆ. ತಾವು ನನ್ನನ್ನು ಅನುಗ್ರಹ ದೃಷ್ಟಿಯಿಂದ ಈಕ್ಷಿಸಿರಿ.

ಆಶ್ರಮಂ ತಸ್ಯ ಧರ್ಮಜ್ಞ ಧಾರ್ಮಿಕಸ್ಯ ಮಹಾತ್ಮನಃ ।
ಆಚಕ್ಷ್ವ ಕತಮೋ ಮಾರ್ಗಃ ಕಿಯಾನಿತಿ ಚ ಶಂಸ ಮೇ ॥೮॥

ಧರ್ಮಜ್ಞನೆ, ಮಹಾತ್ಮನಾದ ಧಾರ್ಮಿಕನಾದ ರಾಮನ ಆಶ್ರಮ ಎಲ್ಲಿದೆ, ಅಲ್ಲಿಗೆ ಯಾವುದು ಮಾರ್ಗ, ಎಷ್ಟು ದೂರವೆಂದು ಹೇಳಿರಿ.

ಇತಿ ಪೃಷ್ಟಸ್ತು ಭರತಂ ಭ್ರಾತೃದರ್ಶನಲಾಲಸಮ್ ।
ಪ್ರತ್ಯುವಾಚ ಮಹಾತೇಜಾ ಭರದ್ವಾಜೋ ಮಹಾತಪಾಃ ॥೯॥

ಸೋದರನ ದರ್ಶನವನ್ನು ಬಯಸಿ ಭರತನು ಹೀಗೆ ಕೇಳಿದಾಗ ಮಹಾತಪಸ್ವಿ ಮಹಾತೇಜಸ್ವಿಯಾದ ಭರದ್ವಾಜರು ಹೇಳಿದರು.

ಭರತಾರ್ಧತೃತೀಯೇಷು ಯೋಜನೇಷ್ವಜನೇ ವನೇ ।
ಚಿತ್ರಕೂಟೋ ಗಿರಿಸ್ತತ್ರ ರಮ್ಯನಿರ್ದರಕಾನನಃ ॥೧೦॥

ಭರತನೆ, ಎರಡುವರೆ ಯೋಜನ ದೂರದಲ್ಲಿ ನಿರ್ಜನ ಅರಣ್ಯದಲ್ಲಿ ರಮ್ಯವಾದ ನೀರಿನ ಝರಿ ಉಳ್ಳ ಅರಣ್ಯದಿಂದ ಕೂಡಿದ ಚಿತ್ರಕೂಟಪರ್ವತವಿದೆ.

ಉತ್ತರಂ ಪಾರ್ಶ್ವಮಾಸಾದ್ಯ ತಸ್ಯ ಮಂದಾಕಿನೀ ನದೀ ।
ಪುಷ್ಪಿತದ್ರುಮಸಂಛನ್ನಾ ರಮ್ಯಪುಷ್ಪಿತಕಾನನಾ ॥೧೧॥

ಚಿತ್ರಕೂಟಪರ್ವತದ ಉತ್ತರಪಾರ್ಶ್ವದಲ್ಲಿ ಮಂದಾಕಿನೀನದಿ ಹರಿಯುತ್ತದೆ. ಅದರ ಎರಡೂ ತೀರದಲ್ಲಿ ಪುಷ್ಪಭರಿತವಾದ ವೃಕ್ಷಗಳಿವೆ. ರಮ್ಯವಾದ ಪುಷ್ಪಭರಿತ-ವಾದ ಅರಣ್ಯಪ್ರದೇಶದಲ್ಲಿ ನದಿ ಹರಿಯುತ್ತದೆ.

ಅನಂತರಂ ತತ್ಸರಿತಶ್ಚಿತ್ರಕೂಟಶ್ಚ ಪರ್ವತಃ ।
ತಯೋಃ ಪರ್ಣಕುಟೀ ತಾತ ತತ್ರ ತೌ ವಸತೋ ಧ್ರುವಮ್ ॥೧೨॥

ಆ ನದಿಯ ಸಮೀಪದಲ್ಲಿ ಚಿತ್ರಕೂಟಪರ್ವತವಿದೆ. ನದಿ ಮತ್ತು ಬೆಟ್ಟಗಳ ನಡುವೆ ಪರ್ಣಶಾಲೆ. ಅಲ್ಲಿ, ಮಗು, ರಾಮಲಕ್ಷ್ಮಣರು ನಿಶ್ಚಿತವಾಗಿ ವಾಸ ಮಾಡಿದ್ದಾರೆ.

ದಕ್ಷಿಣೇನೈವ ಮಾರ್ಗೇಣ ಸವ್ಯದಕ್ಷಿಣಮೇವ ವಾ ।
ಗಜವಾಜಿರಥಾಕೀರ್ಣಾಂ ವಾಹಿನೀಂ ವಾಹಿನೀಪತೇ
ವಾಹಯಸ್ವ ಮಹಾಭಾಗ ತತೋ ದ್ರಕ್ಷ್ಯಸಿ ರಾಘವಮ್ ॥೧೩॥

ನಮ್ಮ ಆಶ್ರಮದಿಂದ ದಕ್ಷಿಣಕ್ಕೆ ಹೋಗಿ ಬಳಿಕ ನೈಋತ್ಯ ಮಾರ್ಗದಿಂದ ಗಜ ಅಶ್ವ ರಥ ಸೈನ್ಯಗಳಿಂದ ಕೂಡಿದ ನಿನ್ನ ಸೇನೆಯನ್ನು ಕರೆದುಕೊಂಡು ಹೋಗು. ಸೇನಾಧಿಪತಿಯಾದ ಮಹಾಭಾಗ್ಯಶಾಲಿ ಭರತನೆ, ಅಲ್ಲಿ ನೀನು ರಾಮನನ್ನು ಕಾಣುವೆ.

ಪ್ರಯಾಣಮಿತಿ ತಚ್ಛ್ರುತ್ವಾ ರಾಜರಾಜಸ್ಯ ಯೋಷಿತಃ ।
ಹಿತ್ವಾ ಯಾನಾನಿ ಯಾನಾರ್ಹಾ ಬ್ರಾಹ್ಮಣಂ ಪರ್ಯವಾರಯನ್ ॥೧೪॥

ಪ್ರಯಾಣಕ್ಕೆ ಹೊರಟಿದ್ದೇವೆ ಎಂದು ಕೇಳಿದ ದಶರಥನ ರಾಣಿಯರು ತಾವು ಪಲ್ಲಕ್ಕಿಯಲ್ಲಿಯೆ ಕುಳಿತಿರಬೇಕಾದವರಾದರೂ ಕೆಳಗಿಳಿದು ಮುನಿಯನ್ನು ಸುತ್ತು-ವರಿದರು.

ವೇಪಮಾನಾ ಕೃಶಾ ದೀನಾ ಸಹ ದೇವ್ಯಾ ಸುಮಿತ್ರಯಾ ।
ಕೌಸಲ್ಯಾ ತತ್ರ ಜಗ್ರಾಹ ಕರಾಭ್ಯಾಂ ಚರಣೌ ಮುನೇಃ ॥೧೫॥

ದುಃಖದಿಂದ ಸೊರಗಿ ನಡುಗುತ್ತಿದ್ದ ಕೌಸಲ್ಯೆ ದೇವಿಸುಮಿತ್ರೆಯೊಂದಿಗೆ ಬಂದು ಮುನಿಯ ಪಾದಗಳನ್ನು ಹಿಡಿದಳು.

ಅಸಮೃದ್ಧೇನ ಕಾಮೇನ ಸರ್ವಲೋಕಸ್ಯ ಗರ್ಹಿತಾ ।
ಕೈಕೇಯೀ ತಸ್ಯ ಜಗ್ರಾಹ ಚರಣೌ ಸವ್ಯಪತ್ರಪಾ ॥೧೬॥

ತನ್ನ ಅಭೀಷ್ಟವನ್ನು ನೆರವೇರಿಸಿಕೊಳ್ಳಲಾರದೆ ಎಲ್ಲ ಜನರ ನಿಂದೆಗೂ ಪಾತ್ರಳಾದ ಕೈಕೇಯಿ ಲಜ್ಜೆಯಿಂದ ಮುನಿಯ ಪಾದಗಳನ್ನು ಹಿಡಿದಳು.

ತಂ ಪ್ರದಕ್ಷಿಣಮಾಗಮ್ಯ ಭಗವಂತಂ ಮಹಾಮುನಿಮ್ ।
ಅದೂರಾದ್ಭರತಸ್ಯೈವ ತಸ್ಥೌ ದೀನಮನಾಸ್ತದಾ ॥೧೭॥

ಕೈಕೇಯಿ ಪೂಜ್ಯನಾದ ಮಹಾಮುನಿಗೆ ಪ್ರದಕ್ಷಿಣೆ ಬಂದು ದೀನಮನಸ್ಕಳಾಗಿ ಭರತನ ಸಮೀಪದಲ್ಲಿಯೇ ನಿಂತಳು.

ತತಃ ಪಪ್ರಚ್ಛ ಭರತಂ ಭರದ್ವಾಜೋ ದೃಢವ್ರತಃ ।
ವಿಶೇಷಂ ಜ್ಞಾತುಮಿಚ್ಛಾಮಿ ಮಾತೄಣಾಂ ತವ ರಾಘವ ॥೧೮॥

ವ್ರತನಿಷ್ಠರಾದ ಭರದ್ವಾಜರು ಭರತನನ್ನು ಕೇಳಿದರು—'ಭರತ, ನಿನ್ನ ತಾಯಂದಿರ ಹೆಚ್ಚಿನ ಪರಿಚಯವನ್ನು ತಿಳಿಯಲು ಬಯಸುತ್ತೇನೆ'.

ಏವಮುಕ್ತಸ್ತು ಭರತೋ ಭರದ್ವಾಜೇನ ಧಾರ್ಮಿಕಃ ।
ಉವಾಚ ಪ್ರಾಂಜಲಿರ್ಭೂತ್ವಾ ವಾಕ್ಯಂ ವಚನಕೋವಿದಃ ॥೧೯॥

ಭರದ್ವಾಜ ಮುನಿಯು ಹೀಗೆ ಕೇಳಿದಾಗ, ಧಾರ್ಮಿಕನಾದ, ಮಾತನಾಡುವು-ದನ್ನು ಚೆನ್ನಾಗಿಬಲ್ಲ ಭರತನು ಕೈಮುಗಿದು ನುಡಿದನು.

ಯಾಮಿಮಾಂ ಭಗವನ್ ದೀನಾಂ ಶೋಕಾನಶನಕರ್ಶಿತಾಮ್ ।
ಪಿತುರ್ಹಿ ಮಹಿಷೀಂ ದೇವೀಂ ದೇವತಾಮಿವ ಪಶ್ಯಸಿ ॥೨೦॥

ಪೂಜ್ಯರೆ, ಇವಳು ದುಃಖಿತೆ, ಶೋಕದಿಂದಲೂ ಉಪವಾಸದಿಂದಲೂ ಸೊರಗಿ-ದ್ದಾಳೆ. ಪಿತನ ಮಹಿಷಿ ದೇವಿ, ದೇವತೆಯಂತಿದ್ದಾಳೆ. ಅವಳನ್ನು ಪೂಜ್ಯರು ನೀವು ನೋಡಿರಿ.

ಏಷಾ ತಂ ಪುರುಷವ್ಯಾಘ್ರಂ ಸಿಂಹವಿಕ್ರಾಂತಗಾಮಿನಮ್ ।
ಕೌಸಲ್ಯಾ ಸುಷುವೇ ರಾಮಂ ಧಾತಾರಮದಿತಿರ್ಯಥಾ ॥೨೧॥

ಅದಿತಿಯು ಧಾತಾರನಾದ ಉಪೇಂದ್ರನನ್ನು ಹಡೆದಂತೆ, ಪುರುಷೋತ್ತಮನಾದ ಸಿಂಹದ ನಡೆಯಂತೆ ನಡೆಯುವ ಆ ರಾಮನನ್ನು ಹಡೆದ ತಾಯಿ ಕೌಸಲ್ಯೆ ಈಕೆ.

ಅಸ್ಯಾ ವಾಮಭುಜಂ ಶ್ಲಿಷ್ಟಾ ಯೈಷಾ ತಿಷ್ಠತಿ ದುರ್ಮನಾಃ ।
ಇಯಂ ಸುಮಿತ್ರಾ ದುಃಖಾರ್ತಾ ದೇವೀ ರಾಜ್ಞಶ್ಚ ಮಧ್ಯಮಾ ।

ಕರ್ಣಿಕಾರಸ್ಯ ಶಾಖೇವ ಶೀರ್ಣಪುಷ್ಪಾ ವನಾಂತರೇ ॥೨೨॥

ಕೌಸಲ್ಯೆಯ ಎಡತೋಳನ್ನು ಹಿಡಿದು ನಿಂತಿರುವವಳು ಈಕೆ ಸುಮಿತ್ರೆ, ದುಃಖಾರ್ತಳಾದ ದೇವಿ, ರಾಜನ ನಡುವಿನ ರಾಣಿ. ಕಾಡಿನಲ್ಲಿ ಹೂ ಉದುರಿಸಿ ಕೊಂಡ ಕರ್ಣಿಕಾರದ ರೆಂಬೆಯೆತಿದ್ದಾಳೆ.

ಏತಸ್ಯಾಸ್ತೌ ಸುತೌ ದೇವ್ಯಾಃ ಕುಮಾರೌ ದೇವವರ್ಣಿನೌ
ಉಭೌ ಲಕ್ಷ್ಮಣಶತ್ರುಘ್ನೌ ವೀರೌ ಸತ್ಯಪರಾಕ್ರಮೌ ॥೨೩॥

ಅಶ್ವಿನೀ ದೇವತೆಗಳಂತಿರುವ ಸತ್ಯಪರಾಕ್ರಮಿಗಳಾದ ಇಬ್ಬರು ವೀರ ಕುಮಾರರು ಲಕ್ಷ್ಮಣಶತ್ರುಘ್ನರು ಇವಳ ಮಕ್ಕಳು.

ಯಸ್ಯಾಃ ಕೃತೇ ನರವ್ಯಾಘ್ರೌ ಜೀವನಾಶಮಿತೋ ಗತೌ ॥೨೪॥

ರಾಜಾ ಪುತ್ರವಿಹೀನಶ್ಚ ಸ್ವರ್ಗಂ ದಶರಥೋ ಗತಃ ॥೨೫॥

ಕ್ರೋಧನಾಮಕೃತಪ್ರಜ್ಞಾಂ ದೃಪ್ತಾಂ ಸುಭಗಮಾನಿನೀಮ್ ।
ಐಶ್ವರ್ಯಕಾಮಾಂ ಕೈಕೇಯೀಮನಾರ್ಯಾಮಾರ್ಯರೂಪಿಣೀಮ್ ॥೨೬॥

ಮಮೈತಾಂ ಮಾತರಂ ವಿದ್ಧಿ ನೃಶಂಸಾಂ ಪಾಪನಿಶ್ಚಯಾಮ್ ।
ಯತೋಮೂಲಂ ಹಿ ಪಶ್ಯಾಮಿ ವ್ಯಸನಂ ಮಹದಾತ್ಮನಃ ॥೨೭॥

ಯಾರ ಸಲುವಾಗಿ ಪುರುಷೋತ್ತಮರಾದ ರಾಮಲಕ್ಷ್ಮಣರು ಬದುಕಿನ ನಾಶ ತುಲ್ಯವಾದ ವನವಾಸವನ್ನು ಪಡೆದರೋ ರಾಜಾ ದಶರಥನೂ ಪುತ್ರವಿಯೋಗವನ್ನು ಹೊಂದಿ ಸ್ವರ್ಗಸ್ಥನಾದನೋ ಅವಳೇ ಇವಳು ಕೈಕೇಯಿ. ಕೋಪ ಮಾಡುವವಳು ಸ್ಥಿರಬುದ್ಧಿ ಇಲ್ಲದವಳು. ದರ್ಪದಿಂದ ಬೀಗುವವಳು. ತಾನೆ ಸುಭಗಳೆಂದು ಕೊಂಡವಳು. ಐಶ್ವರ್ಯವನ್ನು ಬಯಸುವವಳು. ಸಜ್ಜನಿಕೆ ಇಲ್ಲದವಳು. ಸಜ್ಜನಳಂತೆ ಕಾಣುವವಳು. ಕ್ರೂರಳು. ಪಾಪಕರ್ಮ ಮಾಡು ವವಳು. ಇವಳೇ ನನ್ನ ತಾಯಿ ಎಂದು ತಿಳಿಯಿರಿ. ನನ್ನ ಮಹತ್ತಾದ ಈ ದುಃಖಕ್ಕೆ ಮೂಲಕಾರಣಳು ಇವಳೆ ಎಂದು ನಾನು ತಿಳಿದಿದ್ದೇನೆ.

ಇತ್ಯುಕ್ತ್ವಾ ನರಶಾರ್ದೂಲೋ ಬಾಷ್ಪಗದ್ಗದಯಾ ಗಿರಾ ।
ಸ ನಿಶಶ್ವಾಸ ತಾಮ್ರಾಕ್ಷೋ ನಾಗಃ ಕ್ರುದ್ಧ ಇವ ಶ್ವಸನ್ ॥೨೮॥

ಬಾಷ್ಪಗದ್ಗದ ಕಂಠದಿಂದ ಹೀಗೆ ಹೇಳಿ ಪುರುಷೋತ್ತಮ ಭರತನು ಕ್ರುದ್ಧನಾದ ಸರ್ಪದಂತೆ ಬುಸುಗುಟ್ಟುತ್ತ ಕಣ್ಣು ಕೆಂಪಗೆ ಮಾಡಿಕೊಂಡು ನಿಟ್ಟುಸಿರುಬಿಟ್ಟನು.

ಭರದ್ವಾಜೋ ಮಹರ್ಷಿಸ್ತಂ ಬ್ರುವಂತಂ ಭರತಂ ತಥಾ ।
ಪ್ರತ್ಯುವಾಚ ಮಹಾಬುದ್ಧಿರಿದಂ ವಚನಮರ್ಥವತ್ ॥೨೯॥

ಭರತನು ಹೀಗೆ ಹೇಳಿದಾಗ ಸರ್ವಜ್ಞರಾದ ಭರದ್ವಾಜ ಮಹರ್ಷಿಗಳು ಅರ್ಥವತ್ತಾದ ಈ ಮಾತನನ್ನು ಹೇಳಿದರು.

ನ ದೋಷೇಣಾವಗಂತವ್ಯಾ ಕೈಕೇಯೀ ಭರತ ತ್ವಯಾ ।
ರಾಮಪ್ರವ್ರಾಜನಂ ಹ್ಯೇತತ್ ಸುಖೋದರ್ಕಂ ಭವಿಷ್ಯತಿ ॥೩೦॥

'ಭರತನೆ, ಕೈಕೇಯಿ ಸ್ವತಃ ಈ ದುಷ್ಟಕಾರ್ಯ ಮಾಡಿದಳೆಂದು ತಿಳಿಯಬೇಡ. ಮತ್ತು ಈ ರಾಮನ ವನವಾಸವು ಈಗ ನಮಗೆ ದುಃಖಕರವಾದರೂ ಮುಂದೆ ಅದು ಸುಖದಲ್ಲಿ ಪರ್ಯವಸಾನವಾಗುತ್ತದೆ.

ದೇವಾನಾಂ ದಾನವಾನಾಂ ಚ ಋಷಿಣಾಂ ಭಾವಿತಾತ್ಮನಾಮ್ ।
ಹಿತಮೇವ ಭವಿಷ್ಯದ್ಧಿ ರಾಮಪ್ರವ್ರಾಜನಾದಿಹ ॥೩೧॥

'ಪರಮಾತ್ಮನನ್ನು ಉಪಾಸನ ಮಾಡುವ ದೇವ ದಾನವ ಋಷಿಗಳಿಗೆ ರಾಮನ ವನವಾಸದಿಂದ ಒಳ್ಳೆಯದೇ ಆಗುವುದು' ಎಂದು.

ಇಲ್ಲಿ 'ದಾನವ'ರೆಂದರೆ ಶಾಪಾದಿಪ್ರಯುಕ್ತವಾಗಿ ದಾನವ ಕುಲದಲ್ಲಿ ಹುಟ್ಟಿದವರು ಪರಮಾತ್ಮನನ್ನು ಉಪಾಸನೆ ಮಾಡುವವರು. ಅವರಿಗೆ ರಾವಣಾದಿ ವಧದಿಂದ ಹಿತವಾಗುವುದು.

'ಕೈಕೇಯಿ ಮಾಡಿದ್ದು ದುಷ್ಟಕಾರ್ಯವಲ್ಲ' ಎಂದೂ ತಿಳಿಯಬಾರದು. ಅದು ಅತ್ಯಂತ ದುಷ್ಟವೆ. ಆದರೆ ಮಂಥರೆಯ ಉಪದೇಶದಿಂದ ಅವಳು ತತ್ಕಾಲದಲ್ಲಿ ದುಷ್ಟಳಾಗಿ ದುಷ್ಟಕಾರ್ಯ ಮಾಡಿದ್ದಾಳೆ. ಅವಳು ನಿಮಿತ್ತಮಾತ್ರ. ಮಂಥರೆ ಮುಖ್ಯಕಾರಣ. ಮಂಥರೆ ಸ್ವಭಾವದಿಂದ ದುಷ್ಟೆ. ಅವಳನ್ನು ದೂಷಿಸಬೇಕು. ನಿಮಿತ್ತಮಾತ್ರಳಾದ ಕೈಕೇಯಿಯನ್ನು ದೂಷಿಸಬಾರದು, ಪಶ್ಚಾತ್ತಾಪ ಪಡಬೇಕು. ಬುದ್ಧಿವಾದ ಹೇಳಬೇಕು. ಹೀಗೆ ಸಂಗ್ರಹ ರಾಮಾಯಣದಲ್ಲಿ ಹೇಳಿದ್ದಾರೆ.

ವ್ಯಾಖ್ಯಾನಕಾರರು 'ದೇವಪ್ರೇರಣೆಯಿಂದ ಆದುದರಿಂದ ಇದು ದುಷ್ಟಕೃತ್ಯ-ವಲ್ಲ' ಎನ್ನುತ್ತಾರೆ. ಆದರೆ, ಸತ್ಕರ್ಮ ದುಷ್ಕರ್ಮಗಳೆರಡೂ ತತ್ತ್ವ ದೇವಪ್ರೇರಣೆ-ಯಿಂದಲೇ ಆಗುವುದರಿಂದ ಇದೇಕೆ ದುಷ್ಕರ್ಮವಲ್ಲ?

ನಿಮಿತ್ತಮಾತ್ರಳೆಂಬ ಈ ಅಭಿಪ್ರಾಯದಿಂದಲೇ ರಾಮನೂ ಲಕ್ಷ್ಮಣನಿಗೆ ಕೈಕೇಯಿಯನ್ನು ದೂಷಿಸಬೇಡ ಎಂದು ಮತ್ತೆಮತ್ತೆ ಉಪದೇಶಿಸುತ್ತಾನೆ. ಲಕ್ಷ್ಮಣ-ಭರತರೂ ಕೂಡ ಇದನ್ನು ತಿಳಿಯದವರಲ್ಲ, ದುಃಖದಿಂದ ಅವರು ತಾಯಿಯನ್ನು ದೂಷಿಸುತ್ತಿದ್ದಾರೆ.

ಅಭಿವಾದ್ಯ ತು ಸಂಸಿದ್ಧಃ ಕೃತ್ವಾ ಚೈನಂ ಪ್ರದಕ್ಷಿಣಮ್ ।
ಆಮಂತ್ರ್ಯ ಭರತಃ ಸೈನ್ಯಂ ಯುಜ್ಯತಾಮಿತ್ಯಚೋದಯತ್ ॥೩೨॥

ಭರದ್ವಾಜರ ಈ ಮಾತನ್ನು ಕೇಳಿದ ಬಳಿಕ ರಾಮನಿರುವ ಜಾಗವನ್ನು ತಿಳಿದು ಅಲ್ಲಿಗೆ ಹೋಗಲು ಮುನಿಯ ಅನುಜ್ಞೆಯು ದೊರಕಿದ್ದರಿಂದ ಕೃತಕೃತ್ಯನಾದ ಭರತನು ಮುನಿಗೆ ಪ್ರದಕ್ಷಿಣೆ ಮಾಡಿ ಅನುಜ್ಞೆಪಡೆದು ಸೈನ್ಯವನ್ನು ಪ್ರಯಾಣಕ್ಕೆ ಸಜ್ಜಾಗಲು ಆಜ್ಞೆಮಾಡಿದ.

ತತೋ ವಾಜಿರಥಾನ್ ಯುಕ್ತ್ವಾ ದಿವ್ಯಾನ್ ಹೇಮಪರಿಷ್ಕೃತಾನ್ ।
ಅಧ್ಯಾರೋಹತ್ ಪ್ರಯಾಣಾರ್ಥೀ ಬಹೂನ್ ಬಹುವಿಧೋ ಜನಃ ॥

ಬಂಗಾರದಿಂದ ಅಲಂಕೃತವಾದ ದಿವ್ಯವಾದ ಬಹುರಥಗಳಿಗೆ ಕುದುರೆಗಳನ್ನು ಹೂಡಿ ಬಹು ಬಗೆಯ ಜನರು ಪ್ರಯಾಣಾರ್ಥಿಗಳಾಗಿ ರಥಗಳನ್ನೇರಿದರು.

ಗಜಕನ್ಯಾ ಗಜಾಶ್ಚೈವ ಹೇಮಕಕ್ಷ್ಯಾಃ ಪತಾಕಿನಃ ।
ಜೀಮೂತಾ ಇವ ಘರ್ಮಾಂತೇ ಸಘೋಷಾಃ ಸಂಪ್ರತಸ್ಥಿರೇ ॥೩೪॥

ಗ್ರೀಷ್ಮಋತು ಕಳೆದಾಗ ಮೋಡಗಳು ಗುಡುಗುವಂತೆ ಬಂಗಾರದ ನಡುಗಟ್ಟು ಮತ್ತು ಪತಾಕೆಗಳಿಂದ ಅಲಂಕೃತವಾದ ಹೆಣ್ಣಾನೆ ಗಂಡಾನೆಗಳು ಘೀಳಿಡುತ್ತ ಹೊರಟವು.

ವಿವಿಧಾನ್ಯಪಿ ಯಾನಾನಿ ಮಹಾಂತಿ ಚ ಲಘೂನಿ ಚ ।
ಪ್ರಯಯುಃ ಸುಮಹಾರ್ಹಾಣಿ ಪಾದೈರೇವ ಪದಾತಯಃ ॥೩೫॥

ಬಹುಮೂಲ್ಯವಾದ ಸಣ್ಣದೊಡ್ಡ ನಾನಾಬಗೆಯ ವಾಹನಗಳೂ ಹೊರಟವು. ಪದಾತಿಗಳು ಕಾಲ್ನಡೆಯಿಂದಲೇ ಹೊರಟರು.

ಅಥ ಯಾನಪ್ರವೇಕೈಸ್ತು ಕೌಸಲ್ಯಾಪ್ರಮುಖಾಃ ಸ್ತ್ರಿಯಃ ।
ರಾಮದರ್ಶನಕಾಂಕ್ಷಿಣ್ಯಃ ಪ್ರಯಯುರ್ಮುದಿತಾಸ್ತದಾ ॥೩೬॥

ಬಳಿಕ ರಾಮದರ್ಶನದಾಸೆಯಿಂದ ಕೌಸಲ್ಯೆ ಮುಂತಾದ ರಾಣಿಯರು ಆನಂದದಿಂದ ಶ್ರೇಷ್ಠವಾದ ವಾಹನಗಳನ್ನೇರಿ ಹೊರಟರು.

ಚಂದ್ರಾರ್ಕತರುಣಾಭಾಸಾಂ ನಿಯುಕ್ತಾಂ ಶಿಬಿಕಾಂ ಶುಭಾಮ್ ।
ಆಸ್ಥಾಯ ಪ್ರಯಯೌ ಶ್ರೀಮಾನ್ ಭರತಃ ಸಪರಿಚ್ಛದಃ ॥೩೭॥

ಆಗತಾನೆ ಉದಿಸಿದ ಚಂದ್ರಸೂರ್ಯರಂತೆ ಹೊಳೆವ, ರಾಜಭಟರು ಹೊರುವ ಮೇನೆಯಲ್ಲಿ ಕುಳಿತು ಶ್ರೀಮಾನ್ ಭರತನು ಪರಿವಾರದೊಂದಿಗೆ ಹೊರಟನು.

ಸಾ ಪ್ರಯಾತಾ ಮಹಾಸೇನಾ ಗಜವಾಜಿರಥಾಕುಲಾ ।
ದಕ್ಷಿಣಾಂ ದಿಶಮಾವೃತ್ಯ ಮಹಾಮೇಘ ಇವೋತ್ಥಿತಃ ॥೩೮॥

ಆನೆ ಕುದುರೆ ರಥಗಳಿಂದ ತುಂಬಿದ ಆ ಮಹಾಸೈನ್ಯವು ಹೊರಟು ದಕ್ಷಿಣದಿಕ್ಕಿನಲ್ಲಿ ಚಲಿಸುತ್ತ, ದಕ್ಷಿಣದಿಕ್ಕನ್ನು ಆವರಿಸಿ ಕಾಣಿಸಿಕೊಂಡ ಮಹಾಮೇಘದಂತೆ ಕಂಗೊಳಿಸಿತು.

ವನಾನಿ ತು ವ್ಯತಿಕ್ರಮ್ಯ ಜುಷ್ಟಾನಿ ಮೃಗಪಕ್ಷಿಭಿಃ ।
ಗಂಗಾಯಾಃ ಪರವೇಲಾಯಾಂ ಗಿರಿಷ್ವಪಿ ನದೀಷು ಚ ॥೩೯॥

ಸಾ ಸಂಪ್ರಹೃಷ್ಟದ್ವಿಪವಾಜಿಯೋಧಾ
ವಿತ್ರಾಸಯಂತೀ ಮೃಗಪಕ್ಷಿಸಂಘಾನ್ ।
ಮಹದ್ವನಂ ತತ್ಪ್ರತಿಗಾಹಮಾನಾ
ರರಾಜ ಸೇನಾ ಭರತಸ್ಯ ತತ್ರ ॥೪೦॥

ಉತ್ಸಾಹದಿಂದ ಹೊರಟ ಆನೆ ಕುದುರೆ ಪದಾತಿಯುಕ್ತವಾದ ಭರತನ ಆ ಮಹಾಸೈನ್ಯವು ಗಂಗೆಯ ಪಶ್ಚಿಮ ತೀರದಲ್ಲಿ ಬೆಟ್ಟಗಳಲ್ಲಿ ನದಿಗಳಲ್ಲಿ ಮೃಗಪಕ್ಷಿ-ಗಳಿಂದ ತುಂಬಿಕೊಂಡ ಅರಣ್ಯಗಳನ್ನು ದಾಟಿ, ಮೃಗಪಕ್ಷಿ ಸಮೂಹಗಳನ್ನು ಭಯಪಡಿಸುತ್ತ ಮಹಾಅರಣ್ಯದೊಳಗೆ ಪ್ರವೇಶಿಸಿ ಅಲ್ಲಿ ರಾರಾಜಿಸಿತು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ತೊಂಬತ್ತೆರಡನೇ ಸರ್ಗ ಮುಗಿಯಿತು.

❖

ತ್ರಿನವತಿತಮಃ ಸರ್ಗಃ

ಸರ್ಗ – 93

ಚಿತ್ರಕೂಟದಲ್ಲಿ ರಾಮಾಶ್ರಮದ ಅನ್ವೇಷಣೆ.

ತಯಾ ಮಹತ್ಯಾ ಯಾಯಿನ್ಯಾ ಧ್ವಜಿನ್ಯಾ ವನವಾಸಿನಃ ।
ಅರ್ದಿತಾ ಯೂಥಪಾ ಮತ್ತಾಃ ಸಯೂಥಾ ಸಂಪ್ರದುದ್ರುವುಃ ॥೧॥

ಭರತನ ಆ ದೊಡ್ಡಸೈನ್ಯ ಪ್ರಯಾಣಮಾಡುವಾಗ ಕಾಡಿನಲ್ಲಿ ವಾಸ ಮಾಡುವ ಮದಿಸಿದ ಸಲಗಗಳು ಭಯದಿಂದ ಹಿಂಡಿನೊಡನೆ ಪಲಾಯನ ಮಾಡಿದುವು.

ಋಕ್ಷಾಃ ಪೃಷತಸಂಘಾಶ್ಚ ರುರವಶ್ಚ ಸಮಂತತಃ ।
ದೃಶ್ಯಂತೇ ವನರಾಜೀಷು ಗಿರಿಷ್ವಪಿ ನದೀಷು ಚ ॥೨॥

ಕರಡಿಗಳು ಚುಕ್ಕೆಗಳಿರುವ ಇಲ್ಲದಿರುವ ಜಿಂಕೆಗಳು ಕಾಡುಗಳಲ್ಲಿ ಬೆಟ್ಟಗಳಲ್ಲಿ ನದೀತೀರಗಳಲ್ಲಿ ಕಾಣಿಸಿಕೊಂಡು ಬಿಟ್ಟಕಣ್ಣುಗಳಿಂದ ನೋಡುತ್ತ ನಿಂತವು.

ಸ ಸಂಪ್ರತಸ್ಥೇ ಧರ್ಮಾತ್ಮಾ ಪ್ರೀತೋ ದಶರಥಾತ್ಮಜಃ ।
ವೃತೋ ಮಹತ್ಯಾ ನಾದಿನ್ಯಾ ಸೇನಯಾ ಚತುರಂಗಯಾ ॥೩॥

ಧರ್ಮಾತ್ಮನಾದ ಭರತನು ಅವುಗಳನ್ನು ನೋಡುತ್ತ ಸಂತುಷ್ಟನಾಗಿ ಶಬ್ದಮಾಡುವ ಮಹತ್ತಾದ ಚತುರಂಗ ಸೈನ್ಯದೊಂದಿಗೆ ಪ್ರಯಾಣ ಮಾಡಿದನು.

ಸಾಗರೌಘನಿಭಾ ಸೇನಾ ಭರತಸ್ಯ ಮಹಾತ್ಮನಃ ।
ಮಹೀಂ ಸಂಛಾದಯಾಮಾಸ ಪ್ರಾವೃಷಿ ದ್ಯಾಮಿವಾಂಬುದಃ ॥೪॥

ಸಾಗರಸಮೂಹದಂಥ ಮಹಾತ್ಮ ಭರತನ ಸೈನ್ಯವು ಭೂಮಿಯನ್ನೆಲ್ಲ ಆವರಿಸಿತು. ಮಳೆಗಾಲದಲ್ಲಿ ಮೋಡವು ಆಕಾಶವನ್ನು ಮುಚ್ಚುವಂತೆ.

ತುರಂಗೌಘೈರವತಾ ವಾರಣೈಶ್ಚ ಮಹಾಬಲೈಃ ।
ಅನಾಲಕ್ಷ್ಯಾ ಚಿರಂ ಕಾಲಂ ತಸ್ಮಿನ್ ಕಾಲೇ ಬಭೂವ ಭೂಃ ॥೫॥

ಮಹಾಬಲಶಾಲಿಗಳಾದ ಅಶ್ವಸೈನ್ಯ ಗಜಸೈನ್ಯಗಳಿಂದ ವ್ಯಾಪ್ತವಾಗಿ ಭೂಮಿ ಆಗ ಬಹುಕಾಲ ನೋಡಲು ಸಿಗದಂತಾಯಿತು.

ಸ ಗತ್ವಾ ದೂರಮಧ್ವಾನಂ ಸುಪರಿಶ್ರಾಂತವಾಹನಃ ।
ಉವಾಚ ಭರತಃ ಶ್ರೀಮಾನ್ ವಸಿಷ್ಠಂ ಮಂತ್ರಿಣಾಂ ವರಮ್ ॥೬॥

ಶ್ರೀಮಾನ್ ಭರತನ ವಾಹನಗಳು ದೂರಪ್ರಯಾಣದಿಂದ ಬಹಳ ಆಯಾಸ-ಗೊಂಡಾಗ ಅವನು ಮಂತ್ರಿಗಳಲ್ಲಿ ಮುಖ್ಯರಾದ ವಸಿಷ್ಠರನ್ನು ಕುರಿತು ನುಡಿದ.

ಯಾದೃಶಂ ಲಕ್ಷ್ಯತೇ ರೂಪಂ ಯಥಾ ಚೈವ ಶ್ರುತಂ ಮಯಾ ।
ವ್ಯಕ್ತಂ ಪ್ರಾಪ್ತಾಃ ಸ್ಮ ತಂ ದೇಶಂ ಭರದ್ವಾಜೋ ಯಮಬ್ರವೀತ್ ॥೭॥

ನಾನು ಹಿಂದೆ ಕೇಳಿದ್ದ, ಈಗ ನೋಡುತ್ತಿರುವ ಗುರುತುಗಳಿಂದ, ಭರದ್ವಾಜರು ಹೇಳಿದ ಪ್ರದೇಶಕ್ಕೇ ನಾವು ಈಗ ಬಂದಿದ್ದೇವೆ ಎನ್ನುವುದು ಸ್ಪಷ್ಟವಿದೆ.

ಅಯಂ ಗಿರಿಶ್ಚಿತ್ರಕೂಟ ಇಯಂ ಮಂದಾಕಿನೀ ನದೀ ।
ಏತತ್ ಪ್ರಕಾಶತೇ ದೂರಾನ್ನೀಲಮೇಘನಿಭಂ ವನಮ್ ॥೮॥

ಇದು ಚಿತ್ರಕೂಟ ಪರ್ವತ, ಇದು ಮಂದಾಕಿನೀನದಿ. ಇದು ದೂರದಿಂದ ಕಾರ್ಮೋಡದಂತೆ ಕಂಗೊಳಿಸುವ ಅರಣ್ಯ.

ಗಿರೇಃ ಸಾನೂನಿ ರಮ್ಯಾಣಿ ಚಿತ್ರಕೂಟಸ್ಯ ಸಂಪ್ರತಿ ।
ವಾರಣೈರವಮೃದ್ಯಂತೇ ಮಾಮಕೈಃ ಪರ್ವತೋಪಮೈಃ ॥೯॥

ಚಿತ್ರಕೂಟ ಪರ್ವತದ ರಮ್ಯವಾದ ತಪ್ಪಲುಪ್ರದೇಶವನ್ನೇ ಪರ್ವತದಂಥ ನನ್ನ ಆನೆಗಳು ತುಳಿಯುತ್ತಿವೆ.

ಮುಂಚಂತಿ ಕುಸುಮಾನ್ಯೇತೇ ನಗಾಃ ಪರ್ವತಸಾನುಷು ।
ನೀಲಾ ಇವಾತಪಾಪಾಯೇ ತೋಯಂ ತೋಯಧರಾ ಘನಾಃ ॥೧೦॥

ಪರ್ವತದ ತಪ್ಪಲುಗಳಲ್ಲಿ, ಮಳೆಗಾಲದಲ್ಲಿ ನೀರು ತುಂಬಿದ ಕಪ್ಪಾದ ಮೋಡಗಳು ನೀರು ಸುರಿಸುವಂತೆ, ಈ ಮರಗಳು ಹೂಗಳನ್ನು ಉದುರಿಸುತ್ತಿವೆ.

ಕಿನ್ನರಾಚರಿತಂ ದೇಶಂ ಪಶ್ಯ ಶತ್ರುಘ್ನ ಪರ್ವತಮ್ ।
ಮೃಗೈಃ ಸಮಂತಾದಾಕೀರ್ಣಂ ಮಕರೈರಿವ ಸಾಗರಮ್ ॥೧೧॥

ಶತ್ರುಘ್ನ, ಕಿನ್ನರರು ಓಡಾಡುವ ಪ್ರದೇಶವಾದ ಈ ಪರ್ವತವನ್ನು ನೋಡು. ಮೊಸಳೆಗಳಿಂದ ಸಾಗರದಂತೆ, ಮೃಗಗಳಿಂದ ಈಪರ್ವತ ಎಲ್ಲೆಡೆ ತುಂಬಿದೆ.

ಏತೇ ಮೃಗಗಣಾ ಭಾಂತಿ ಶೀಘ್ರವೇಗಾಃ ಪ್ರಚೋದಿತಾಃ ।
ವಾಯುಪ್ರವಿದ್ಧಾ ಶರದಿ ಮೇಘರಾಜಿರಿವಾಂಬರೇ ॥೧೨॥

ಶರತ್ಕಾಲದಲ್ಲಿ ಆಕಾಶದಲ್ಲಿ ಗಾಳಿಯಿಂದ ಹೊಡೆಸಿಕೊಂಡ ಮೋಡ ಸಮೂಹ-ದಂತೆ ಈ ಮೃಗ ಸಮೂಹಗಳು ಸೈನ್ಯದ ಭಯದಿಂದ ಪ್ರಚೋದಿತವಾಗಿ ಶೀಘ್ರ-ವೇಗದಿಂದ ಓಡುತ್ತ ಕಂಗೊಳಿಸುತ್ತಿವೆ.

ಕುರ್ವಂತಿ ಕುಸುಮಾಪೀಡಾನ್ ಶಿರಸ್ಸು ಸುರಭೀನಮೀ ।
ಮೇಘಪ್ರಕಾಶೈಃ ಫಲಕೈರ್ದಾಕ್ಷಿಣಾತ್ಯಾ ಯಥಾ ನರಾಃ ॥೧೩॥

ಈ ನನ್ನ ಪದಾತಿ ಯೋಧರು ತಲೆಯ ಮೇಲೆ ಮೋಡದಂತೆ ಕಪ್ಪಾದ ಗುರಾಣಿ-ಗಳನ್ನು ಇಟ್ಟುಕೊಂಡು ಸಂಚರಿಸುವಾಗ ಮೇಲಿಂದ ಉದುರುವ ಪರಿಮಳ ಪುಷ್ಪಗಳನ್ನು ಹೊತ್ತು ದಾಕ್ಷಿಣಾತ್ಯ ಜನರಂತೆ ಹೂವಿನ ಅಲಂಕಾರ ಮಾಡಿಕೊಳ್ಳುತ್ತಾರೆ.

ನಿಷ್ಕೂಜಮಿವ ಭೂತ್ವೇದಂ ವನಂ ಘೋರಪ್ರದರ್ಶನಮ್ ।
ಅಯೋಧ್ಯೇವ ಜನಾಕೀರ್ಣಾ ಸಂಪ್ರತಿ ಪ್ರತಿಭಾತಿ ಮೇ ॥೧೪॥

ಜನರ ಶಬ್ದವಿಲ್ಲದೆ ಘೋರವಾಗಿ ಕಾಣುತ್ತಿದ್ದ ಅರಣ್ಯ ಜನರಿಂದ ತುಂಬಿ ಈಗ ಅಯೋಧ್ಯೆಯಂತೆ ನನಗೆ ಕಾಣುತ್ತಿದೆ.

ಖುರೈರುದೀರಿತೋ ರೇಣುರ್ದಿವಂ ಪ್ರಚ್ಛಾದ್ಯ ತಿಷ್ಠತಿ ।
ತಂ ವಹತ್ಯನಿಲಃ ಶೀಘ್ರಂ ಕುರ್ವನ್ನಿವ ಮಮ ಪ್ರಿಯಮ್ ॥೧೫॥

ಗೊರಸುಗಳಿಂದ ಎದ್ದ ದೂಳು ಅಂತರಿಕ್ಷವನ್ನು ಆವರಿಸುತ್ತಿದೆ. ಆದರೆ ಗಾಳಿ ನನಗೆ ಪ್ರಿಯ ಉಂಟು ಮಾಡಲೆಂಬಂತೆ ಆ ದೂಳನ್ನು ಬೇಗನೆ ದೂರಕ್ಕೆ ಒಯ್ಯುತ್ತಿದೆ.

ಸ್ಯಂದನಾಂಸ್ತುರಗೋಪೇತಾನ್ ಸೂತಮುಖ್ಯೈರಧಿಷ್ಠಿತಾನ್ ।
ಏತಾನ್ ಸಂಪತತಃ ಶೀಘ್ರಂ ಪಶ್ಯ ಶತ್ರುಘ್ನ ಕಾನನೇ ॥೧೬॥

ಕುದುರೆಗಳು ಎಳೆಯುತ್ತಿರುವ ಶ್ರೇಷ್ಠ ಸಾರಥಿಗಳು ಓಡಿಸುತ್ತಿರುವ ಈ ನಮ್ಮ ರಥಗಳನ್ನು ನೋಡು, ಶತ್ರುಘ್ನ, ರಾಮನ ದರ್ಶನಕ್ಕಾಗಿ ವೇಗವಾಗಿ ಚಲಿಸುತ್ತಿವೆ.

ಏತಾನ್ ವಿತ್ರಾಸಿತಾನ್ ಪಶ್ಯ ಬರ್ಹಿಣಃ ಪ್ರಿಯದರ್ಶನಾನ್ ।
ಏವಮಾಪತತಃ ಶೈಲಮಧಿವಾಸಂ ಪತತ್ರಿಣಾಮ್ ॥೧೭॥

ಈ ಸುಂದರವಾದ ನವಿಲುಗಳು ಭಯಪಡುತ್ತಿರುವುದನ್ನು ನೋಡು, ಹಕ್ಕಿಗಳು ಬೆಟ್ಟದ ಗೂಡುಗಳಿಗೆ ಹಾರುತ್ತಿರುವುದನ್ನು ನೋಡು.

ಅತಿಮಾತ್ರಮಯಂ ದೇಶೋ ಮನೋಜ್ಞಃ ಪ್ರತಿಭಾತಿ ಮೇ ।
ತಾಪಸಾನಾಂ ನಿವಾಸೋಽಯಂ ವ್ಯಕ್ತಂ ಸ್ವರ್ಗಪಥೋ ಯಥಾ ॥೧೮॥

ಈ ಪ್ರದೇಶವು ರಾಮನ ಸನ್ನಿಧಾನದಿಂದ ಅತ್ಯಂತ ರಮಣೀಯವಾಗಿದೆ ಎಂದು ನನಗೆ ಅನಿಸುತ್ತಿದೆ. ತಪಸ್ವಿಗಳ ಆವಾಸ ಸ್ಥಾನವಿದು ನಿಶ್ಚಯವಾಗಿ ಸ್ವರ್ಗಸಮಾನ.

ಮೃಗಾ ಮೃಗೀಭಿಃ ಸಹಿತಾ ಬಹವಃ ಪೃಷತಾ ವನೇ ।
ಮನೋಜ್ಞರೂಪಾ ಲಕ್ಷ್ಯಂತೇ ಕುಸುಮೈರಿವ ಚಿತ್ರಿತಾಃ ॥೧೯॥

ಕುಸುಮದಂಥ ಚುಕ್ಕಿಗಳಿರುವ ಹೆಣ್ಣು ಜಿಂಕೆಗಳೊಡನೆ ಕೂಡಿರುವ ಬಹುಸಂಖ್ಯೆ-ಯಲ್ಲಿರುವ ಗಂಡುಜಿಂಕೆಗಳು ಕುಸುಮಗಳಿಂದ ಚಿತ್ರಿತವಾದಂತೆ ಮನೋಹರವಾಗಿ ಕಾಣುತ್ತಿವೆ.

ಸಾಧು ಸೈನ್ಯಾಃ ಪ್ರತಿಷ್ಠಂತಾಂ ವಿಚಿನ್ವಂತು ಚ ಕಾನನಮ್ ।
ಯಥಾ ತೌ ಪುರುಷವ್ಯಾಘ್ರೌ ದೃಶ್ಯೇತೇ ರಾಮಲಕ್ಷ್ಮಣೌ ॥೨೦॥

ಯೋಗ್ಯರಾದ ಕೆಲವು ಸೈನಿಕರು ಕಾಡಿನಲ್ಲಿ ಎಲ್ಲೆಡೆ ಸಂಚರಿಸಲಿ, ಪುರುಷೋತ್ತಮ-ರಾದ ರಾಮಲಕ್ಷ್ಮಣರು ಕಾಣುವರೋ ಎಂದು ಹುಡುಕಲಿ.

ಭರತಸ್ಯ ವಚಃ ಶ್ರುತ್ವಾ ಪುರುಷಾಃ ಶಸ್ತ್ರಪಾಣಯಃ ।
ವಿವಿಶುಸ್ತದ್ವನಂ ಶೂರಾ ಧೂಮಾಗ್ರಂ ದದೃಶುಸ್ತತಃ ॥೨೧॥

ಭರತನ ಮಾತನ್ನು ಕೇಳಿ ಕೆಲವು ಶಸ್ತ್ರಪಾಣಿಗಳಾದ ಶೂರಪುರುಷರು ಕಾಡಿನೊಳಗೆ ಪ್ರವೇಶಿಸಿದರು. ಆಗ ಒಂದುಕಡೆ ಹೊಗೆಯಾಡುತ್ತಿರುವುದನ್ನು ಕಂಡರು.

ತೇ ಸಮಾಲೋಕ್ಯ ಧೂಮಾಗ್ರಮೂಚುರ್ಭರತಮಾಗತಾಃ ।
ನಾಮನುಷ್ಯೇ ಭವತ್ಯಗ್ನಿರ್ವ್ಯಕ್ತಮತ್ರೈವ ರಾಘವೌ ॥೨೨॥

ಹೊಗೆಯಾಡುವುದನ್ನು ಕಂಡು ಬಂದವರು ಹೇಳಿದರು, 'ಮನುಷ್ಯರಿಲ್ಲ ದಿರುವ ಕಡೆ ಬೆಂಕಿ ಇರುವ ಸಾಧ್ಯತೆ ಇಲ್ಲ. ಅದರಿಂದ ಇಲ್ಲಿ ಹೊಗೆಯಾಡುತ್ತಿದೆ ಎಂದರೆ ರಾಮಲಕ್ಷ್ಮಣರು ಇರುವುದು ನಿಶ್ಚಿತ.

ಅಥ ನಾತ್ರ ನರವ್ಯಾಘ್ರೌ ರಾಜಪುತ್ರೌ ಪರಂತಪೌ ।
ಅನ್ಯೇ ರಾಮೋಪಮಾಃ ಸಂತಿ ವ್ಯಕ್ತಮತ್ರ ತಪಸ್ವಿನಃ ॥೨೩॥

ಒಂದುವೇಳೆ ಶತ್ರುತಾಪಕರಾದ ಪುರುಷೋತ್ತಮರಾದ ರಾಜಕುಮಾರರು ಇಲ್ಲಿ ಇಲ್ಲದಿರುವುದಾದರೆ, ರಾಮನಂಥ ಬೇರೆ ತಪಸ್ವಿಗಳಾದರೂ ಇರುವುದು ನಿಶ್ಚಿತ' ಎಂದು.

ತಚ್ಛ್ರುತ್ವಾ ಭರತಸ್ತೇಷಾಂ ವಚನಂ ಸಾಧುಸಂಮತಮ್ ।
ಸೈನ್ಯಾನುವಾಚ ಸರ್ವಾಂಸ್ತಾನಮಿತ್ರಬಲಮರ್ದನಃ ॥೨೪॥

ಶತ್ರುಸೈನ್ಯ ನಾಶಕನಾದ ಭರತನು ಅವರ ಸಾಧುಸಮ್ಮತವಾದ ಮಾತನ್ನು ಕೇಳಿ ಎಲ್ಲ ಸೈನಿಕರುಗಳಿಗೂ ಆದೇಶಿಸಿದನು.

ಯತ್ತಾ ಭವಂತಸ್ತಿಷ್ಠಂತು ನೇತೋ ಗಂತವ್ಯಮಗ್ರತಃ ।
ಅಹಮೇವ ಗಮಿಷ್ಯಾಮಿ ಸುಮಂತ್ರೋ ಧೃತಿರೇವ ಚ ॥೨೫॥

ನೀವೆಲ್ಲರೂ ಸಾವಧಾನತೆಯಿಂದ ಇಲ್ಲಿ ಇರಿ. ಮುಂದೆ ಬರಬೇಡಿ. ನಾನೇ ಹೋಗುತ್ತೇನೆ, ಸುಮಂತ್ರನೂ ಅಶೋಕನೂ ನನ್ನೊಂದಿಗೆ ಬರುತ್ತಾರೆ.

'ಸುಮಂತ್ರೋ ಧೃತಿರೇವ ಚ' ಎಂಬಲ್ಲಿ ಧೃತಿ ಎಂದರೆ ಅಶೋಕನೆಂದು ಕೆಲವರು. ಸುಮಂತ್ರನದೇ ಅದು ಇನ್ನೊಂದು ಹೆಸರೆಂದು ಕೆಲವರು. 'ಗುರುರೇವ ಚ' ಎಂದು ಪಾಠವಿಟ್ಟುಕೊಂಡು ವಸಿಷ್ಠರೆಂದೂ ಹೇಳುತ್ತಾರೆ. ಪ್ರಾಯಃ 'ಧೃಷ್ಟಿರೇವ ಚ' ಎಂದು ಪಾಠವಿರಬಹುದು. ಬಾಲಕಾಂಡ (7.3)ದಲ್ಲಿ 'ಧೃಷ್ಟಿರ್ಜಯಂತೋ ವಿಜಯಃ' ಎಂದು ಮುಂತಾಗಿ ಮಂತ್ರಿಗಳ ಹೆಸರುಗಳು ಬರುತ್ತವೆ.

ಏವಮುಕ್ತಾಸ್ತತ ಸೈನ್ಯಾಸ್ತತ್ರ ತಸ್ಥುಃ ಸಮಂತತಃ ।
ಭರತೋ ಯತ್ರ ಧೂಮಾಗ್ರಂ ತತ್ರ ದೃಷ್ಟಿಂ ಸಮಾದಧೇ ॥೨೬॥

ಭರತನು ಹೀಗೆ ಹೇಳಿದಾಗ ಸೈನಿಕರೆಲ್ಲರೂ ಅಲ್ಲಿಯೇ ನಿಂತರು. ಭರತನು ಹೊಗೆಯಾಡುತ್ತಿದ್ದ ಕಡೆಗೆ ದೃಷ್ಟಿಯನ್ನು ಕೇಂದ್ರೀಕರಿಸಿದನು.

ವ್ಯವಸ್ಥಿತಾ ಯಾ ಭರತೇನ ಸಾ ಚಮೂ-
ರ್ನಿರೀಕ್ಷಮಾಣಾಪಿ ಚ ಧೂಮಮಗ್ರತಃ ।
ಬಭೂವ ಹೃಷ್ಟಾ ನ ಚಿರೇಣ ಜಾನಕೀ-
ಪ್ರಿಯಸ್ಯ ರಾಮಸ್ಯ ಸಮಾಗಮಂ ತದಾ ॥೨೭॥

ಈ ಸುಂದರವಾದ ನವಿಲುಗಳು ಭಯಪಡುತ್ತಿರುವುದನ್ನು ನೋಡು, ಹಕ್ಕಿಗಳು ಬೆಟ್ಟದ ಗೂಡುಗಳಿಗೆ ಹಾರುತ್ತಿರುವುದನ್ನು ನೋಡು.

ಅತಿಮಾತ್ರಮಯಂ ದೇಶೋ ಮನೋಜ್ಞಃ ಪ್ರತಿಭಾತಿ ಮೇ ।
ತಾಪಸಾನಾಂ ನಿವಾಸೋಽಯಂ ವ್ಯಕ್ತಂ ಸ್ವರ್ಗಪಥೋ ಯಥಾ ॥೧೮॥

ಈ ಪ್ರದೇಶವು ರಾಮನ ಸನ್ನಿಧಾನದಿಂದ ಅತ್ಯಂತ ರಮಣೀಯವಾಗಿದೆ ಎಂದು ನನಗೆ ಅನಿಸುತ್ತಿದೆ. ತಪಸ್ವಿಗಳ ಆವಾಸ ಸ್ಥಾನವಿದು ನಿಶ್ಚಯವಾಗಿ ಸ್ವರ್ಗಸಮಾನ.

ಮೃಗಾ ಮೃಗೀಭಿಃ ಸಹಿತಾ ಬಹವಃ ಪೃಷತಾ ವನೇ ।
ಮನೋಜ್ಞರೂಪಾ ಲಕ್ಷ್ಯಂತೇ ಕುಸುಮೈರಿವ ಚಿತ್ರಿತಾಃ ॥೧೯॥

ಕುಸುಮದಂಥ ಚುಕ್ಕಿಗಳಿರುವ ಹೆಣ್ಣು ಜಿಂಕೆಗಳೊಡನೆ ಕೂಡಿರುವ ಬಹುಸಂಖ್ಯೆ-ಯಲ್ಲಿರುವ ಗಂಡುಜಿಂಕೆಗಳು ಕುಸುಮಗಳಿಂದ ಚಿತ್ರಿತವಾದಂತೆ ಮನೋಹರವಾಗಿ ಕಾಣುತ್ತಿವೆ.

ಸಾಧು ಸೈನ್ಯಾಃ ಪ್ರತಿಷ್ಠಂತಾಂ ವಿಚಿನ್ವಂತು ಚ ಕಾನನಮ್ ।
ಯಥಾ ತೌ ಪುರುಷವ್ಯಾಘ್ರೌ ದೃಶ್ಯೇತೇ ರಾಮಲಕ್ಷ್ಮಣೌ ॥೨೦॥

ಯೋಗ್ಯರಾದ ಕೆಲವು ಸೈನಿಕರು ಕಾಡಿನಲ್ಲಿ ಎಲ್ಲೆಡೆ ಸಂಚರಿಸಲಿ, ಪುರುಷೋತ್ತಮ-ರಾದ ರಾಮಲಕ್ಷ್ಮಣರು ಕಾಣುವರೋ ಎಂದು ಹುಡುಕಲಿ.

ಭರತಸ್ಯ ವಚಃ ಶ್ರುತ್ವಾ ಪುರುಷಾಃ ಶಸ್ತ್ರಪಾಣಯಃ ।
ವಿವಿಶುಸ್ತದ್ವನಂ ಶೂರಾ ಧೂಮಾಗ್ರಂ ದದೃಶುಸ್ತತಃ ॥೨೧॥

ಭರತನ ಮಾತನ್ನು ಕೇಳಿ ಕೆಲವು ಶಸ್ತ್ರಪಾಣಿಗಳಾದ ಶೂರಪುರುಷರು ಕಾಡಿನೊಳಗೆ ಪ್ರವೇಶಿಸಿದರು. ಆಗ ಒಂದುಕಡೆ ಹೊಗೆಯಾಡುತ್ತಿರುವುದನ್ನು ಕಂಡರು.

ತೇ ಸಮಾಲೋಕ್ಯ ಧೂಮಾಗ್ರಮೂಚುರ್ಭರತಮಾಗತಾಃ ।
ನಾಮನುಷ್ಯೇ ಭವತ್ಯಗ್ನಿರ್ವ್ಯಕ್ತಮತ್ರೈವ ರಾಘವೌ ॥೨೨॥

ಹೊಗೆಯಾಡುವುದನ್ನು ಕಂಡು ಬಂದವರು ಹೇಳಿದರು, 'ಮನುಷ್ಯರಿಲ್ಲದಿರುವ ಕಡೆ ಬೆಂಕಿ ಇರುವ ಸಾಧ್ಯತೆ ಇಲ್ಲ. ಅದರಿಂದ ಇಲ್ಲಿ ಹೊಗೆಯಾಡುತ್ತಿದೆ ಎಂದರೆ ರಾಮಲಕ್ಷ್ಮಣರು ಇರುವುದು ನಿಶ್ಚಿತ.

ಅಥ ನಾತ್ರ ನರವ್ಯಾಘ್ರೌ ರಾಜಪುತ್ರೌ ಪರಂತಪೌ ।
ಅನ್ಯೇ ರಾಮೋಪಮಾಃ ಸಂತಿ ವ್ಯಕ್ತಮತ್ರ ತಪಸ್ವಿನಃ ॥೨೩॥

ಒಂದುವೇಳೆ ಶತ್ರುತಾಪಕರಾದ ಪುರುಷೋತ್ತಮರಾದ ರಾಜಕುಮಾರರು ಇಲ್ಲಿ ಇಲ್ಲದಿರುವುದಾದರೆ, ರಾಮನಂಥ ಬೇರೆ ತಪಸ್ವಿಗಳಾದರೂ ಇರುವುದು ನಿಶ್ಚಿತ' ಎಂದು.

ತಚ್ಛ್ರುತ್ವಾ ಭರತಸ್ತೇಷಾಂ ವಚನಂ ಸಾಧುಸಂಮತಮ್ ।
ಸೈನ್ಯಾನುವಾಚ ಸರ್ವಾಂಸ್ತಾನಮಿತ್ರಬಲಮರ್ದನಃ ॥೨೪॥

ಶತ್ರುಸೈನ್ಯ ನಾಶಕನಾದ ಭರತನು ಅವರ ಸಾಧುಸಮ್ಮತವಾದ ಮಾತನ್ನು ಕೇಳಿ ಎಲ್ಲ ಸೈನಿಕರುಗಳಿಗೂ ಆದೇಶಿಸಿದನು.

ಯತ್ತಾ ಭವಂತಸ್ತಿಷ್ಠಂತು ನೇತೋ ಗಂತವ್ಯಮಗ್ರತಃ ।
ಅಹಮೇವ ಗಮಿಷ್ಯಾಮಿ ಸುಮಂತ್ರೋ ಧೃತಿರೇವ ಚ ॥೨೫॥

ನೀವೆಲ್ಲರೂ ಸಾವಧಾನತೆಯಿಂದ ಇಲ್ಲಿ ಇರಿ. ಮುಂದೆ ಬರಬೇಡಿ. ನಾನೇ ಹೋಗುತ್ತೇನೆ, ಸುಮಂತ್ರನೂ ಅಶೋಕನೂ ನನ್ನೊಂದಿಗೆ ಬರುತ್ತಾರೆ.

'ಸುಮಂತ್ರೋ ಧೃತಿರೇವ ಚ' ಎಂಬಲ್ಲಿ ಧೃತಿ ಎಂದರೆ ಅಶೋಕನೆಂದು ಕೆಲವರು. ಸುಮಂತ್ರನದೇ ಅದು ಇನ್ನೊಂದು ಹೆಸರೆಂದು ಕೆಲವರು. 'ಗುರುರೇವ ಚ' ಎಂದು ಪಾಠವಿಟ್ಟುಕೊಂಡು ವಸಿಷ್ಠರೆಂದೂ ಹೇಳುತ್ತಾರೆ. ಪ್ರಾಯಃ 'ಧೃಷ್ಟಿರೇವ ಚ' ಎಂದು ಪಾಠವಿರಬಹುದು. ಬಾಲಕಾಂಡ (7.3)ದಲ್ಲಿ 'ಧೃಷ್ಟಿರ್ಜಯಂತೋ ವಿಜಯಃ' ಎಂದು ಮುಂತಾಗಿ ಮಂತ್ರಿಗಳ ಹೆಸರುಗಳು ಬರುತ್ತವೆ.

ಏವಮುಕ್ತಾಸ್ತತ ಸೈನ್ಯಾಸ್ತತ್ರ ತಸ್ಥುಃ ಸಮಂತತಃ ।
ಭರತೋ ಯತ್ರ ಧೂಮಾಗ್ರಂ ತತ್ರ ದೃಷ್ಟಿಂ ಸಮಾದಧೇ ॥೨೬॥

ಭರತನು ಹೀಗೆ ಹೇಳಿದಾಗ ಸೈನಿಕರೆಲ್ಲರೂ ಅಲ್ಲಿಯೇ ನಿಂತರು. ಭರತನು ಹೊಗೆಯಾಡುತ್ತಿದ್ದ ಕಡೆಗೆ ದೃಷ್ಟಿಯನ್ನು ಕೇಂದ್ರೀಕರಿಸಿದನು.

ವ್ಯವಸ್ಥಿತಾ ಯಾ ಭರತೇನ ಸಾ ಚಮೂ-
ರ್ನಿರೀಕ್ಷಮಾಣಾಪಿ ಚ ಧೂಮಮಗ್ರತಃ ।
ಬಭೂವ ಹೃಷ್ಟಾ ನ ಚಿರೇಣ ಜಾನಕೀ-
ಪ್ರಿಯಸ್ಯ ರಾಮಸ್ಯ ಸಮಾಗಮಂ ತದಾ ॥೨೭॥

ಭರತನು ಅಲ್ಲಿಯೇ ನಿಲ್ಲಿಸಿದ್ದರೂ ಆ ಸೈನ್ಯವು ಹೊಗೆಯನ್ನು ಮುಂದೆ ಅಗ್ರ ಭಾಗದಲ್ಲಿ ದಿಟ್ಟಿಸುತ್ತ ಅಲ್ಪಕಾಲದಲ್ಲಿಯೇ ನಮಗೆ ರಾಮನ ಸಮಾಗಮವಾಗಲಿದೆ ಎಂದು ನಿಶ್ಚಯ ಮಾಡಿಕೊಂಡು ಸಂತಸಗೊಂಡಿತು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ತೊಂಬತ್ತಮೂರನೇ ಸರ್ಗ ಮುಗಿಯಿತು.

ಚತುರ್ನವತಿತಮಃ ಸರ್ಗಃ

ಸರ್ಗ – 94

ಶ್ರೀರಾಮನು ಸೀತೆಗೆ ಚಿತ್ರಕೂಟವನ್ನು ತೋರಿಸಿ ವರ್ಣಿಸುವುದು.

ದೀರ್ಘಕಾಲೋಷಿತಸ್ತಸ್ಮಿನ್ ಗಿರೌ ಗಿರಿವನಪ್ರಿಯಃ ।
ವೈದೇಹ್ಯಾಃ ಪ್ರಿಯಮಾಕಾಂಕ್ಷನ್ ಸ್ವಂ ಚ ಚಿತ್ತಂ ವಿಲೋಭಯನ್ ॥೧॥

ಅಥ ದಾಶರಥಿಶ್ಚಿತ್ರಂ ಚಿತ್ರಕೂಟಮದರ್ಶಯತ್ ।
ಭಾರ್ಯಾಮಮರಸಂಕಾಶಃ ಶಚೀಮಿವ ಪುರಂದರಃ ॥೨॥

ಗುಡ್ಡಗಾಡುಗಳನ್ನು ಮೆಚ್ಚುವ ದೇವಸದೃಶನಾದ ಶ್ರೀರಾಮನು ಅತ್ತ ಚಿತ್ರಕೂಟ-ದಲ್ಲಿ ದೀರ್ಘಕಾಲ ವಾಸಿಸುತ್ತಿದ್ದಾಗ ಸೀತೆಗೆ ಆಹ್ಲಾದಪಡಿಸುವ ತನ್ನ ಮನಸಿಗೂ ಉಲ್ಲಾಸ ಉಂಟುಮಾಡುವ ಉದ್ದೇಶದಿಂದ ಸೀತೆಗೆ ಚಿತ್ರಕೂಟವನ್ನು ತೋರಿಸುತ್ತ ಶಚೀದೇವಿಗೆ ಇಂದ್ರನು ನಂದನವನವನ್ನು ಬಣ್ಣಿಸಿ ಹೇಳುವಂತೆ ಸೀತೆಗೆ ಚಿತ್ರಕೂಟದ ಸೊಬಗನ್ನು ವರ್ಣಿಸಿ ಹೇಳಿದನು.

ನ ರಾಜ್ಯಾದ್ಭ್ರಂಶನಂ ಭದ್ರೇ ನ ಸುಹೃದ್ಭಿರ್ವಿನಾಭವಃ ।
ಮನೋ ಮೇ ಬಾಧತೇ ದೃಷ್ಟ್ವಾ ರಮಣೀಯಮಿಮಂ ಗಿರಿಮ್ ॥೩॥

ಮಂಗಳೆಯೆ, ರಮಣೀಯವಾದ ಈ ಬೆಟ್ಟವನ್ನು ಕಂಡಮೇಲೆ, ನನ್ನ ಮನವನ್ನು ರಾಜ್ಯವಿಲ್ಲದಂತಾದುದಾಗಲಿ ಬಂಧುವಿಯೋಗವಾದುದಾಗಲಿ ಪೀಡಿಸುತ್ತಿಲ್ಲ.

ಪಶ್ಯೇಮಮಚಲಂ ಭದ್ರೇ ನಾನಾದ್ವಿಜಗಣಾಯುತಮ್ ।
ಶಿಖರೈಃ ಖಮಿವೋದ್ವಿದ್ಧೈರ್ಧಾತುಮದ್ಭಿರ್ವಿಭೂಷಿತಮ್ ॥೪॥

ಮಂಗಳೆಯೆ, ನಾನಾ ಪಕ್ಷಿಸಮೂಹಗಳಿಂದ ಯುಕ್ತವಾದ ಈ ಬೆಟ್ಟವನ್ನು ನೋಡು. ಗಗನವನ್ನು ಚುಂಬಿಸುವಂತಿರುವ ಧಾತುಗಳಿಂದ ತುಂಬಿದ ಶಿಖರಗಳಿಂದ ಅಲಂಕೃತವಾಗಿದೆ.

ಕೇಚಿದ್ರಜತಸಂಕಾಶಾಃ ಕೇಚಿತ್ ಕ್ಷತಜಸನ್ನಿಭಾಃ ।
ಪೀತಮಾಂಜಿಷ್ಠವರ್ಣಾಶ್ಚ ಕೇಚಿನ್ಮಣಿವರಪ್ರಭಾಃ ॥೫॥

ಪುಷ್ಯಾರ್ಕಕೇತಕಾಭಾಶ್ಚ ಕೇಚಿಜ್ಜ್ಯೋತೀರಸಪ್ರಭಾಃ ।
ವಿರಾಜಂತೇऽಚಲೇಂದ್ರಸ್ಯ ದೇಶಾ ಧಾತುವಿಭೂಷಿತಾಃ ॥೬॥

ಈ ದೊಡ್ಡಬೆಟ್ಟದ ಪ್ರದೇಶಗಳು ಧಾತುಗಳಿಂದ ಅಲಂಕೃತವಾಗಿರುವುದರಿಂದ ಕೆಲವು ಪ್ರದೇಶಗಳು ಬೆಳ್ಳಿಯಂತೆ ಹೊಳೆಯುತ್ತವೆ. ಕೆಲವು ರಕ್ತವರ್ಣವಾಗಿವೆ. ಕೆಲವು ಹಳದಿಗೆಂಪು ಬಣ್ಣದವು. ಕೆಲವು ಇಂದ್ರನೀಲ ಮಣಿಯಂತೆ ಹೊಳೆಯುವುವು. ಕೆಲವು ಪುಷ್ಯರಾಗ ಸ್ಫಟಿಕ ಕೇದಗೆಗಳಂತೆ ಕೆಲವು ನಕ್ಷತ್ರಗಳಂತೆ ಪಾದರಸದಂತೆ ಹೊಳೆಯುತ್ತವೆ.

ನಾನಾಮೃಗಗಣೈರ್ದ್ವೀಪಿತರಕ್ಷ್ವಲ್ಲಕ್ಷಗಣೈರ್ವೃತಃ ।
ಅದುಷ್ಪ್ರಭರ್ತ್ಯಯಂ ಶೈಲೋ ಬಹುಪಕ್ಷಿಸಮಾಕುಲಃ ॥೭॥

ದುಷ್ಪವಲ್ಲದ ನಾನಾ ಜಿಂಕೆಗಳು ಮತ್ತು ಹುಲಿ ಚಿಂಕೆ ಕರಡಿಗಳ ಸಮೂಹಗಳಿಂದ ಈ ಬೆಟ್ಟ ಶೋಭಿಸುತ್ತಿದೆ. ಬಹುಪಕ್ಷಿಗಳಿಂದಲೂ ತುಂಬಿದೆ.

ಆಮ್ರಜಂಬ್ವಸನೈಲೋರ್ಧ್ರೈಃ ಪ್ರಿಯಾಲೈಃ ಪನಸೈರ್ಧವೈಃ ।
ಅಂಕೋಲೈರ್ಭವ್ಯತಿನಿಶೈರ್ಬಿಲ್ವತಿಂದುಕವೇಣುಭಿಃ ॥೮॥

ಕಾಶ್ಮರ್ಯರಿಷ್ಟವರಣೈರ್ಮಧೂಕೈಸ್ತಿಲಕೈಸ್ತಥಾ ।
ಬದರ್ಯಾಮಲಕೈರ್ನೀಪೈರ್ವೇತ್ರಧನ್ವನಬೀಜಕೈಃ ॥೯॥

ಪುಷ್ಪವದ್ಭಿಃ ಫಲೋಪೇತೈಶ್ಛಾಯಾವದ್ಭಿರ್ಮನೋರಮೈಃ ।
ಏವಮಾದಿಭಿರಾಕೀರ್ಣಃ ಶ್ರಿಯಂ ಪುಷ್ಯತ್ಯಯಂ ಗಿರಿಃ ॥೧೦॥

ಮಾವು ನೇರಳೆ ಹೊನ್ನೆ ಲೋಧ್ರ ಪ್ರಿಯಾಲ ಹಲಸು ಧವ ಅಂಕೋಲ ಭವ್ಯ ತಿನಿಶ ಬಿಲ್ವ ತಿಂದುಕ ಬಿದಿರು ಕಾಶ್ಮರಿ ಅರಿಷ್ಟ ವರಣ ಮಧೂಕ ತಿಲಕ ಬದರಿ ಆಮಲಕ ನೀಪ ವೇತ್ರ ಧನ್ವನ ಬೀಜಕ ಮುಂತಾಗಿ ಪುಷ್ಪಫಲ ಛಾಯೆಗಳಿಂದ ಕೂಡಿದ ಮನೋಹರವಾದ ವೃಕ್ಷಗಳಿಂದ ಈ ಪರ್ವತವು ಶೋಭೆಯನ್ನು ಹೆಚ್ಚಿಸಿಕೊಳ್ಳುತ್ತಿದೆ.

ಶೈಲಪ್ರಸ್ಥೇಷು ರಮ್ಯೇಷು ಪಶ್ಯೇಮಾನ್ ರೋಮಹರ್ಷಣಾನ್ ।
ಕಿಂನರಾನ್ ದ್ವಂದ್ವಶೋ ಭದ್ರೇ ರಮಮಾಣಾನ್ ಮನಸ್ವಿನಃ ॥೧೧॥

ಮಂಗಳೆಯೆ, ಪರ್ವತ ತಪ್ಪಲು ಪ್ರದೇಶಗಳಲ್ಲಿ ರೋಮಾಂಚಕರವಾಗಿ ಯಥೇಚ್ಛವಿಹಾರ ಮಾಡುವ ಈ ಕಿನ್ನರ ಜೋಡಿಗಳನ್ನು ನೋಡು.

ಶಾಖಾವಸಕ್ತಾನ್ ಖಡ್ಗಾಂಶ್ಚ ಪ್ರವರಾಣ್ಯಂಬರಾಣಿ ಚ ।
ಪಶ್ಯ ವಿದ್ಯಾಧರಸ್ತ್ರೀಣಾಂ ಕ್ರೀಡೋದ್ದೇಶಾನ್ ಮನೋರಮಾನ್ ॥೧೨॥

ವಿದ್ಯಾಧರಸ್ತ್ರೀಯರ ಈ ವಿಹಾರ ಪ್ರದೇಶಗಳು ಮನೋಹರವಾಗಿವೆ. ಅವರು ಖಡ್ಗಗಳನ್ನೂ ಉತ್ತಮ ವಸ್ತ್ರಗಳನ್ನೂ ಮರದ ಕೊಂಬೆಗಳಲ್ಲಿರಿಸಿದ್ದಾರೆ.

ಜಲಪ್ರಪಾತೈರುದ್ಭೇದೈರ್ನಿಷ್ಯಂದೈಶ್ಚ ಕ್ವಚಿತ್ ಕ್ವಚಿತ್ ।
ಸ್ರವದ್ಭಿರ್ಭಾತ್ಯಯಂ ಶೈಲಃ ಸ್ರವನ್ಮದ ಇವ ದ್ವಿಪಃ ॥೧೩॥

ಜಲಪಾತಗಳು ಝರಿಗಳು ನೀರಿನ ಬುಗ್ಗೆಗಳು ಅಲ್ಲಲ್ಲಿ ಅಲ್ಲಲ್ಲಿ ಹರಿಯುವುದರಿಂದ ಈ ಬೆಟ್ಟವು ಮದಜಲವನ್ನು ಸುರಿಸುವ ಆನೆಯಂತೆ ಕಂಗೊಳಿಸುತ್ತಿದೆ.

ಗುಹಾಸಮೀರಣೋ ಗಂಧಾನ್ನಾನಾಪುಷ್ಪಭವಾನ್ ವಹನ್ ।
ಘ್ರಾಣತರ್ಪಣಮಭ್ಯೇತ್ಯ ಕಂ ನರಂ ನ ಪ್ರಹರ್ಷಯೇತ್ ॥೧೪॥

ಗುಹಾಪ್ರದೇಶದಲ್ಲಿ ಬೀಸುವ ಗಾಳಿ ನಾನಾ ಪುಷ್ಪಗಳ ಸುವಾಸನೆಯನ್ನು ಹೊತ್ತು ಮೂಗಿಗೆ ಆನಂದಕರವಾಗಿ ಬೀಸಿ ಯಾವ ಮನುಷ್ಯನಿಗೆ ಉಲ್ಲಾಸ ಉಂಟುಮಾಡುವುದಿಲ್ಲ?

ಯದೀಹ ಶರದೋಽನೇಕಾಸ್ತ್ವಯಾ ಸಾರ್ಧಮನಿಂದಿತೇ ।
ಲಕ್ಷ್ಮಣೇನ ಚ ವತ್ಸ್ಯಾಮಿ ನ ಮಾಂ ಶೋಕಃ ಪ್ರಧಕ್ಷ್ಯತಿ ॥೧೫॥

ಇಲ್ಲಿ ಅನೇಕ ವರ್ಷಕಾಲ ನಿನ್ನೊಂದಿಗೆ ಮತ್ತು ಲಕ್ಷ್ಮಣನೊಂದಿಗೆ ವಾಸ ಮಾಡಿದರೂ ನನ್ನನ್ನು ಶೋಕವು ಸುಡಲಾರದು.

ಬಹುಪುಷ್ಪಫಲೇ ರಮ್ಯೇ ನಾನಾದ್ವಿಜಗಣಾಯುತೇ ।
ವಿಚಿತ್ರಶಿಖರೇ ಹ್ಯಸ್ಮಿನ್ ರತವಾನಸ್ಮಿ ಭಾಮಿನಿ ॥೧೬॥

ಸೀತೇ, ಬಹುಪುಷ್ಪಫಲಭರಿತವಾದ ನಾನಾ ಹಕ್ಕಿಗಳ ಸಮೂಹದಿಂದ ಕೂಡಿದ ವಿಚಿತ್ರ ಶಿಖರ ಯುಕ್ತವಾದ ರಮ್ಯವಾದ ಈ ಚಿತ್ರಕೂಟಪರ್ವತದಲ್ಲಿ ನನ್ನ ಮನಸ್ಸು ಮಗ್ನವಾಗಿದೆ.

ಅನೇನ ವನವಾಸೇನ ಮಯಾ ಪ್ರಾಪ್ತಂ ಫಲದ್ವಯಮ್ ।
ಪಿತುಶ್ಚಾನೃಣತಾ ಧರ್ಮೇ ಭರತಸ್ಯ ಪ್ರಿಯಂ ತಥಾ ॥೧೭॥

ಈ ವನವಾಸದಿಂದ ನನಗೆ ಎರಡು ಪ್ರಯೋಜನಗಳಾಗಿವೆ. ಧರ್ಮವಿಷಯದಲ್ಲಿ ತಂದೆಯ ಋಣ ಪರಿಹಾರ ಮತ್ತು ಭರತನಿಗೆ ಸಂತೋಷ ಎಂದು.

ವೈದೇಹಿ ರಮಸೇ ಕಚ್ಚಿಚ್ಚಿತ್ರಕೂಟೇ ಮಯಾ ಸಹ ।
ಪಶ್ಯಂತಿ ವಿವಿಧಾನ್ ಭಾವಾನ್ ಮನೋವಾಕ್ಕಾಯಸಂಮತಾನ್ ॥೧೮॥

ಸೀತೆ, ಚಿತ್ರಕೂಟದಲ್ಲಿ ನನ್ನೊಂದಿಗೆ ಮನಸು ಮಾತು ಶರೀರಗಳಿಗೆ ಆಪ್ಯಾಯ ಮಾನವಾಗುವ ನಾನಾಬಗೆಯ ಪದಾರ್ಥಗಳನ್ನು ನೋಡಿ ಆನಂದಿಸುವೆ ತಾನೆ?

ಇದಮೇವಾಮೃತಂ ಪ್ರಾಹೂ ರಾಜ್ಞೆ ರಾಜರ್ಷಯಃ ಪರೇ ।
ವನವಾಸಂ ಭವಾರ್ಥಾಯ ಪ್ರೇತ್ಯ ಮೇ ಪ್ರಪಿತಾಮಹಾಃ ॥೧೯॥

ರಾಣಿ, ವನವಾಸರೂಪವಾದ ಈ ಮೋಕ್ಷಸಾಧನಧರ್ಮವನ್ನು ನನ್ನ ಮುತ್ತಾತಂದಿರಾದ ಪೂರ್ವದ ರಾಜರ್ಷಿಗಳು ಮರಣಾನಂತರದ ಸಂಸಾರ ಬಂಧನ ನಿವೃತ್ತಿಗೆ ಕಾರಣವಾಗುವಂಥದ್ದೆಂದು ಹೇಳಿದ್ದಾರೆ.

ಶಿಲಾಃ ಶೈಲಸ್ಯ ಶೋಭಂತೇ ವಿಶಾಲಾಃ ಶತಶೋಽಭಿತಃ ।
ಬಹುಲಾ ಬಹುಲೈರ್ವರ್ಣೈರ್ನೀಲಪೀತಸಿತಾರುಣೈಃ ॥೨೦॥

ನೀಲ ಹಳದಿ ಬಿಳಿ ಕೆಂಪು ಎಂದು ಬಹುವರ್ಣಗಳಿಂದ ಶೋಭಿಸುವ ವಿಶಾಲ-ವಾದ ಬಹು ಶಿಲೆಗಳು ಬೆಟ್ಟದ ಸುತ್ತಲೂ ನೂರಾರು ಸಂಖ್ಯೆಯಲ್ಲಿ ಶೋಭಿಸುತ್ತಿವೆ.

ನಿಶಿ ಭಾಂತ್ಯಚಲೇಂದ್ರಸ್ಯ ಹುತಾಶನಶಿಖಾ ಇವ ।
ಓಷಧ್ಯಃ ಸ್ವಪ್ರಭಾಲಕ್ಷ್ಯಾ ಭ್ರಾಜಮಾನಾಃ ಸಹಸ್ರಶಃ ॥೨೧॥

ಈ ದೊಡ್ಡ ಬೆಟ್ಟದ ಸಾವಿರಾರು ಓಷಧಿಲತೆಗಳು ತಮ್ಮ ಕಾಂತಿಯ ಸಂಪತ್ತನಿಂದ ಬೆಳಗುತ್ತ ಅಗ್ನಿಯ ಜ್ವಾಲೆಯಂತೆ ರಾತ್ರಿಯಲ್ಲಿ ಕಂಗೊಳಿಸುವುವು.

ಕೇಚಿತ್ ಕ್ಷಯನಿಭಾ ದೇಶಾಃ ಕೇಚಿದುದ್ಯಾನಸಂನಿಭಾಃ ।
ಕೇಚಿದೇಕಶಿಲಾ ಭಾಂತಿ ಪರ್ವತಸ್ಯಾಸ್ಯ ಭಾಮಿನಿ ॥೨೨॥

ಸೀತೆ, ಈ ಬೆಟ್ಟದ ಕೆಲವು ಪ್ರದೇಶಗಳು ಮನೆಯಂತೆ ಕೆಲವು ಉದ್ಯಾನಗಳಂತೆ ಕೆಲವು ಕೇವಲ ಶಿಲಾಮಯವಾಗಿ ಶೋಭಿಸುತ್ತವೆ.

ಭಿತ್ತ್ವೇವ ವಸುಧಾಂ ಭಾತಿ ಚಿತ್ರಕೂಟಃ ಸಮುತ್ಥಿತಃ ।
ಚಿತ್ರಕೂಟಸ್ಯ ಕೂಟೋಽಯಂ ದೃಶ್ಯತೇ ಸರ್ವತಃ ಶುಭಃ ॥೨೩॥

ಚಿತ್ರಕೂಟದ ಮಂಗಳಕರವಾದ ಈ ಶಿಖರವು ಎಲ್ಲ ಕಡೆಯಿಂದಲೂ ದೃಷ್ಟಿ

ಗೋಚರವಾಗುತ್ತದೆ. ಅದರಿಂದ ಭೂಮಿಯನ್ನು ಸೀಳಿ ಹೊರಗೆ ಬಂದಿರುವಂತೆ ಈ ಬೆಟ್ಟ ಕಾಣುತ್ತದೆ.

ಕುಷ್ಮಪುನ್ನಾಗಸ್ಥಗರಭೂರ್ಜಪತ್ರೋತ್ತರಚ್ಛದಾನ್ ।
ಕಾಮಿನಾಂ ಸ್ವಾಸ್ತರಾನ್ ಪಶ್ಯ ಕುಶೇಶಯದಲಾಯುತಾನ್ ॥೨೪॥

ಚಂಗಲಕೋಷ್ಮ ಸುರಹೊನ್ನೆ ನಂದಿಬಟ್ಟಲು ಭೂರ್ಜದೆಲೆಗಳ ಮೇಲು ಹಾಸುಗಳಿಂದ ಕೂಡಿದ ಕಮಲದಳಗಳಿಂದ ಯುಕ್ತವಾದ ಪ್ರಣಯಿಗಳ ಒಳ್ಳೆಯ ಹಾಸಿಗೆಗಳನ್ನು ನೋಡು.

ಮೃದಿತಾಶ್ಚಾಪವಿದ್ಧಾಶ್ಚ ದೃಶ್ಯಂತೇ ಕಮಲಸ್ರಜಃ ।
ಕಾಮಿಭಿರ್ವನಿತೇ ಪಶ್ಯ ಫಲಾನಿ ವಿವಿಧಾನಿ ಚ ॥೨೫॥

ಸೀತೆ, ನೋಡು, ಕಮಲ ಮಾಲೆಗಳು ಮತ್ತು ನಾನಾವಿಧದ ಹಣ್ಣುಗಳು ಪ್ರಣಯಿಗಳಿಂದ ಹಿಸುಕಿ ಪುಡಿಮಾಡಿ ಎಸೆಯಲ್ಪಟ್ಟಿವೆ.

ವಸ್ವೋಕಸಾರಾಂ ನಲಿನೀಮತ್ಯೇತೀವೋತ್ತರಾನ್ ಕುರೂನ್ ।
ಪರ್ವತಶ್ಚಿತ್ರಕೂಟೋಽಸೌ ಬಹುಮೂಲಫಲೋದಕಃ ॥೨೬॥

ಕುಬೇರನ ಅಲಕೆಯನ್ನೂ ಇಂದ್ರನ ಅಮರಾವತಿಯನ್ನೂ, ಉತ್ತರ ಕುರುದೇಶ-ವನ್ನೂ, ಬಹುವಾಗಿ ಗೆಡ್ಡೆಗೆಣಸು ಹಣ್ಣುಹಂಪಲು ಶುದ್ಧಜಲಗಳನ್ನು ಹೊಂದಿ- ರುವ ಈ ಚಿತ್ರಕೂಟಪರ್ವತವು ಮೀರಿಸುವಂತೆ ಕಾಣುತ್ತದೆ.

ಇಮಂ ತು ಕಾಲಂ ವನಿತೇ ವಿಜಹ್ರಿವಾನ್
ತ್ವಯಾ ಚ ಸೀತೇ ಸಹ ಲಕ್ಷ್ಮಣೇನ ।
ರತಿಂ ಪ್ರಪತ್ಸ್ಯೇ ಕುಲಧರ್ಮವರ್ಧಿನೀಂ
ಸತಾಂ ಪಥಿ ಸ್ವೈರ್ನಿಯಮೈಃ ಪರೈಃ ಸ್ಥಿತಃ ॥೨೭॥

ಸೀತೆ, ಒಳ್ಳೆಯ ನಿಯಮದಿಂದಿದ್ದು ಸಜ್ಜನರ ಮಾರ್ಗದಲ್ಲಿ ನಡೆಯುವ ನಾನು ಈ ಹದಿನಾಲ್ಕು ವರ್ಷಕಾಲ ಹೀಗೆ ವಿಹಾರ ಮಾಡಿದರೆ ಮುಂದೆ ರಾಜ್ಯಪಾಲನ ರೂಪ ಕುಲಧರ್ಮಕ್ಕೆ ಪೋಷಕವಾದ ಸೌಖ್ಯವನ್ನು ಪಡೆಯುತ್ತೇನೆ.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ತೊಂಬತ್ತನಾಲ್ಕನೇ ಸರ್ಗ ಮುಗಿಯಿತು.

ಪಂಚನವತಿತಮಃ ಸರ್ಗಃ

ಸರ್ಗ – 95

ಶ್ರೀರಾಮನು ಸೀತೆಗೆ ಮಂದಾಕಿನೀ ನದಿಯನ್ನು ತೋರಿಸಿ ವರ್ಣಿಸುವುದು.

ಅಥ ಶೈಲಾದ್ವಿನಿಷ್ಕ್ರಮ್ಯ ಮೈಥಿಲೀಂ ಕೋಸಲೇಶ್ವರಃ ।
ಅದರ್ಶಯಚ್ಛುಭಜಲಾಂ ರಮ್ಯಾಂ ಮಂದಾಕಿನೀಂ ನದೀಮ್ ॥೧॥

ಬಳಿಕ ಚಿತ್ರಕೂಟಪರ್ವತದಿಂದ ಇಳಿದು ಶ್ರೀರಾಮನು ಮಂಗಳಜಲಉಳ್ಳ ರಮ್ಯವಾದ ಮಂದಾಕಿನೀನದಿಯನ್ನು ಸೀತೆಗೆ ತೋರಿಸಿದನು.

ಅಬ್ರವೀಚ್ಚ ವರಾರೋಹಾಂ ಚಾರುಚಂದ್ರನಿಭಾನನಾಮ್ ।
ವಿದೇಹರಾಜಸ್ಯ ಸುತಾಂ ರಾಮೋ ರಾಜೀವಲೋಚನಃ ॥೨॥

ಕಮಲದಂಥ ಕಣ್ಣುಳ್ಳ ಶ್ರೀರಾಮನು ಸುಂದರ ಚಂದ್ರಮುಖಿಯಾದ ಉತ್ತಮ-ಸ್ತ್ರೀಯಾದ ವಿದೇಹರಾಜಕುಮಾರಿ ಸೀತೆಗೆ ನುಡಿದನು.

ವಿಚಿತ್ರಪುಲಿನಾಂ ರಮ್ಯಾಂ ಹಂಸಸಾರಸಸೇವಿತಾಮ್ ।
ಕಮಲೈರುಪಸಂಪನ್ನಾಂ ಪಶ್ಯ ಮಂದಾಕಿನೀಂ ನದೀಮ್ ॥೩॥

ವಿಚಿತ್ರ ಮಳಲಿನಿಂದ ಕೂಡಿದ ಹಂಸ ಸಾರಸ ಪಕ್ಷಿಗಳಿಂದ ತುಂಬಿದ ಕಮಲ-ಗಳಿಂದ ಯುಕ್ತವಾದ ರಮ್ಯವಾದ ಮಂದಾಕಿನೀ ನದಿಯನ್ನು ನೋಡು.

ನಾನಾವಿಧೈಸ್ತೀರರುಹೈರ್ವೃತಾಂ ಪುಷ್ಪಫಲದ್ರುಮೈಃ ।
ರಾಜಂತೀಂ ರಾಜರಾಜಸ್ಯ ನಲಿನೀಮಿವ ಸರ್ವತಃ ॥೪॥

ತೀರದಲ್ಲಿ ಬೆಳೆದ ನಾನಾವಿಧವಾದ ಹೂಹಣ್ಣು ಗಿಡಗಳಿಂದ ಎಲ್ಲೆಡೆ ರಾಜರಾಜ ಕುಬೇರನ ಸೌಗಂಧಿಕ ವನದಂತೆಯೇ ಶೋಭಿಸುತ್ತದೆ.

ಮೃಗಯೂಥನಿಪೀತಾನಿ ಕಲುಷಾಂಭಾಂಸಿ ಸಾಂಪ್ರತಮ್ ।
ತೀರ್ಥಾನಿ ರಮಣೀಯಾನಿ ರತಿಂ ಸಂಜನಯಂತಿ ಮೇ ॥೫॥

ಮೃಗಗಳ ಹಿಂಡು ನೀರು ಕುಡಿದು ಕದಡಿರುವುದರಿಂದ ಈಗ ರಾಡಿಯಾಗಿದ್ದರೂ ರಮಣೀಯವಾದ ಸೋಪಾನಮಾರ್ಗಗಳು ನನಗೆ ಆಸಕ್ತಿಯನ್ನು ಉಂಟುಮಾಡುತ್ತಿವೆ.

ಜಟಾಜಿನಧರಾಃ ಕಾಲೇ ವಲ್ಕಲೋತ್ತರವಾಸಸಃ ।
ಋಷಯಸ್ತ್ವವಗಾಹಂತೇ ನದೀಂ ಮಂದಾಕಿನೀಂ ಪ್ರಿಯೇ ॥೬॥

ಪ್ರಿಯೆ, ಜಟೆ ಅಜಿನಗಳನ್ನು ಧರಿಸಿ ನಾರುಡೆಯ ಉತ್ತರೀಯವನ್ನು ಹೊದ್ದು-ಕೊಂಡಿರುವ ಋಷಿಗಳು ಆಯಾಕಾಲಗಳಲ್ಲಿ ಈ ಮಂದಾಕಿನೀ ನದಿಯಲ್ಲಿ ಮುಳುಗಿ ಸ್ನಾನ ಮಾಡುತ್ತಾರೆ.

ಆದಿತ್ಯಮುಪತಿಷ್ಠಂತೇ ನಿಯಮಾದೂರ್ಧ್ವಬಾಹವಃ ।
ಏತೇ ಪರೇ ವಿಶಾಲಾಕ್ಷಿ ಮುನಯಃ ಸಂಶಿತವ್ರತಾಃ ॥೭॥

ವಿಶಾಲಾಕ್ಷಿಯೆ, ಈ ಮುನಿಗಳು ವ್ರತನಿಷ್ಠೆ ಉಳ್ಳವರು ಇಲ್ಲಿ ನಿಯಮಾನು ಷ್ಠಾನ ಮಾಡುತ್ತ ತೋಳುಗಳನ್ನು ಮೇಲೆತ್ತಿ ಸೂರ್ಯನ ಉಪಸ್ಥಾನ ಮಾಡುತ್ತಾರೆ.

ಮಾರುತೋದ್ಧೂತಶಿಖರೈಃ ಪ್ರನೃತ್ತ ಇವ ಪರ್ವತಃ ।
ಪಾದಪೈಃ ಪತ್ರಪುಷ್ಪಾಣಿ ಸೃಜದ್ಭಿರಭಿತೋ ನದೀಮ್ ॥೮॥

ಗಾಳಿಗೆ ತುದಿ ಅಳ್ಳಾಡಿದಾಗ ಮರಗಳಿಂದ ಪತ್ರಪುಷ್ಪಗಳು ಉದುರಿ ಬೀಳುವುದರಿಂದ ಪರ್ವತವು ನದಿಯ ಮುಂದೆ ಪುಷ್ಪಾಂಜಲಿ ನೀಡಿ ನರ್ತಿಸುವಂತೆ ಕಾಣುತ್ತದೆ.

ಕ್ವಚಿನ್ಮಣಿನಿಕಾಶೋದಾಂ ಕ್ವಚಿತ್ ಪುಲಿನಶಾಲಿನೀಮ್ ।
ಕ್ವಚಿತ್ ಸಿದ್ಧಜನಾಕೀರ್ಣಾಂ ಪಶ್ಯ ಮಂದಾಕಿನೀಂ ನದೀಮ್ ॥೯॥

ಕೆಲವೆಡೆ ನೀರು ಮಣಿಯಂತೆ ಸ್ವಚ್ಛ, ಕೆಲವೆಡೆ ಬಹಳ ಮಳಲಿನಿಂದ ಕೂಡಿದೆ. ಕೆಲವೆಡೆ ಸಿದ್ಧಜನರು ಇಳಿದು ಸ್ನಾನ ಮಾಡುತ್ತಾರೆ. ಅಂಥ ನದಿ ಇದು ಮಂದಾಕಿನಿ, ನೋಡು.

ನಿರ್ಧೂತಾನ್ ವಾಯುನಾ ಪಶ್ಯ ವಿತತಾನ್ ಪುಷ್ಪಸಂಚಯಾನ್ ।
ಪೋಪ್ಲೂಯಮಾನಾನಪರಾನ್ ಪಶ್ಯ ತ್ವಂ ಜಲಮಧ್ಯಗಾನ್ ॥೧೦॥

ಗಾಳಿಯಿಂದ ಕೆಲವು ಪುಷ್ಪಸಮೂಹಗಳು ಉದುರಿ ತೀರದಲ್ಲಿ ಹರಡಿವೆ. ನೀರಿನ ಮಧ್ಯದಲ್ಲಿ ಬೇರೆ ಪುಷ್ಪಸಮೂಹಗಳು ತೇಲಿಹೋಗುತ್ತಿವೆ.

ಪಶ್ಯೈತಾನ್ ವಲ್ಗುವಚಸೋ ರಥಾಂಗಾಹ್ವಯನಾ ದ್ವಿಜಾಃ ।
ಅಧಿರೋಹಂತಿ ಕಲ್ಯಾಣಿ ನಿಷ್ಕೂಜಂತಃ ಶುಭಾ ಗಿರಃ ॥೧೧॥

ಮಂಗಳೆ, ಮಧುರವಾಗಿ ನುಡಿವ ಈ ಚಕ್ರವಾಕ ಪಕ್ಷಿಗಳನ್ನು ನೋಡು. ಮಂಗಳಕರವಾದ ಮಾತುಗಳನ್ನು ನುಡಿಯುತ್ತ ಮಳಲಿನ ನದಿ ದಂಡೆಗಳನ್ನು ಏರುತ್ತಿವೆ.

ದರ್ಶನಂ ಚಿತ್ರಕೂಟಸ್ಯ ಮಂದಾಕಿನ್ಯಾಶ್ಚ ಶೋಭನೇ ।
ಅಧಿಕಂ ಪುರವಾಸಾಚ್ಚ ಮನ್ಯೇ ತವ ಚ ದರ್ಶನಾತ್ ॥೧೨॥

ಮಂಗಳೆಯೆ, ನಿನ್ನ ದರ್ಶನದಿಂದಲೇ ನನಗೆ ಈ ಚಿತ್ರಕೂಟ ಮತ್ತು ಮಂದಾಕಿನಿ-ಯರ ದರ್ಶನವು ಅಯೋಧ್ಯಾಪುರವಾಸಕ್ಕಿಂತ ಅಧಿಕ ಉಲ್ಲಾಸಕಾರಿಯಾಗಿದೆ.

ವಿಧೂತಕಲುಷೈಃ ಸಿದ್ಧೈಸ್ತಪೋದಮಶಮಾನ್ವಿತೈಃ ।
ನಿತ್ಯವಿಕ್ಷೋಭಿತಜಲಾಂ ವಿಗಾಹಸ್ವ ಮಯಾ ಸಹ ॥೧೩॥

ತಪಸ್ಸು ದಮ ಶಮಗಳಿಂದ ಕೂಡಿದ್ದು ಪಾಪಗಳನ್ನು ಕಳೆದುಕೊಂಡಿರುವ ಸಿದ್ಧಪುರುಷರಿಂದ ಮಂದಾಕಿನೀ ನದಿ ನಿತ್ಯವೂ ಅಲ್ಲೋಲಕಲ್ಲೋಲವಾಗುತ್ತದೆ. ನೀನೂ ಕೂಡ ಈ ನದಿಯಲ್ಲಿ ನನ್ನೊಂದಿಗೆ ಅವಗಾಹನ ಮಾಡು.

ಸಖೀವಚ್ಚ ವಿಗಾಹಸ್ವ ಸೀತೇ ಮಂದಾಕಿನೀಂ ನದೀಮ್ ।
ಕಮಲಾನ್ಯವಮಜ್ಜಂತೀ ಪುಷ್ಕರಾಣಿ ಚ ಭಾಮಿನಿ ॥೧೪॥

ಸಖಿಯಂತಿರುವ ಮಂದಾಕಿನಿ ನದಿಯಲ್ಲಿ ಅವಗಾಹನ ಮಾಡು, ಸೀತೆ. ನಿನ್ನ ಮುಖ ಕಮಲ ಕಾಂತಿಯ ಮುಂದೆ ಸೋಲುವ ಕೆಂದಾವರೆ ಬಿಳಿ ತಾವರೆಗಳು ಲಜ್ಜೆಯಿಂದ ನೀರಲ್ಲಿ ಮುಳುಗುವಂತೆ ಮಾಡು.

ತ್ವಂ ಪೌರಜನವದ್ವ್ಯಾಲಾನಯೋಧ್ಯಾಮಿವ ಪರ್ವತಮ್ ।
ಮನ್ಯಸ್ವ ವನಿತೇ ನಿತ್ಯಂ ಸರಯೂವದಿಮಾಂ ನದೀಮ್ ॥೧೫॥

ಪೌರಜನರಂತೆ ಈ ಮೃಗಗಳು ಅಯೋಧ್ಯೆಯಂತೆ ಈ ಪರ್ವತ ಸರಯೂ ನದಿಯಂತೆ ಈ ಮಂದಾಕಿನೀನದಿ ಎಂದು ಭಾವಿಸು.

ಲಕ್ಷ್ಮಣಶ್ಚಾಪಿ ಧರ್ಮಾತ್ಮಾ ಮನ್ನಿದೇಶೇ ವ್ಯವಸ್ಥಿತಃ ।
ತ್ವಂ ಚಾನುಕೂಲಾ ವೈದೇಹಿ ಪ್ರೀತಿಂ ಜನಯತೋ ಮಮ ॥೧೬॥

ಧರ್ಮಾತ್ಮನಾದ ಲಕ್ಷ್ಮಣ ನನಗೆ ವಿಧೇಯ. ನೀನೂ ನನಗೆ ಅನುಕೂಲೆಳಾದ ಪತ್ನಿಯಾಗಿರುವಿ. ನೀವಿಬ್ಬರೂ ನನಗೆ ಸಂತೋಷವನ್ನುಂಟು ಮಾಡುವಿರಿ.

ಉಪಸ್ಪೃಶಂಸ್ತ್ರಿಷವಣಂ ಮಧುಮೂಲಫಲಾಶನಃ ।
ನಾಯೋಧ್ಯಾಯೈ ನ ರಾಜ್ಯಾಯ ಸ್ಪೃಹಯೇಽದ್ಯ ತ್ವಯಾ ಸಹ ॥೧೭॥

ಈ ನದಿಯಲ್ಲಿ ಮೂರು ಹೊತ್ತು ಸ್ನಾನ ಮಾಡುತ್ತೇನೆ. ಜೇನುತುಪ್ಪ ಕಂದ ಮೂಲಗಳನ್ನು ಉಣ್ಣುತ್ತೇನೆ. ನನಗೆ ಅಯೋಧ್ಯೆ ಬೇಡ ರಾಜ್ಯಭೋಗವೂ ಬೇಡ. ನಿನ್ನ ಜೊತೆಯಲ್ಲಿದ್ದರೆ ಅಷ್ಟೇ ಸಾಕು.

ಇಮಾಂ ಹಿ ರಮ್ಯಾಂ ಗಜಯೂಥಲೋಲಿತಾಂ
ನಿಪೀತತೋಯಾಂ ಗಜಸಿಂಹವಾನರೈಃ ।
ಸುಪುಷ್ಪಿತೈಃ ಪುಷ್ಪಧರೈರಲಂಕೃತಾಂ
ನ ಸೋಽಸ್ತಿ ಯಃ ಸ್ನಾನ್ನ ಗತಕ್ಲಮಃ ಸುಖೀ ॥೧೮॥

ಈ ಮಂದಾಕಿನೀನದಿ ರಮ್ಯವಾಗಿದೆ. ಆನೆಗಳ ಹಿಂಡು ಇದನ್ನು ಅಲ್ಲೋಲ-ಕಲ್ಲೋಲ ಮಾಡುತ್ತದೆ. ಆನೆ ಸಿಂಹ ಕಪಿಗಳು ಇಲ್ಲಿ ನೀರು ಕುಡಿಯುತ್ತವೆ. ಒಳ್ಳೆ ಹೂಬಿಟ್ಟ ಹೂವಿನ ಮರಗಳಿಂದ ಈ ನದಿ ಅಲಂಕೃತವಾಗಿದೆ. ಇದರಲ್ಲಿ ಅವಗಾಹನೆ ಮಾಡಿ ಆಯಾಸ ಪರಿಹರಿಸಿಕೊಂಡು ಸುಖಿಯಾಗದವನು ಯಾರೂ ಇಲ್ಲ.

ಇತೀವ ರಾಮೋ ಬಹು ಸಂಗತಂ ವಚಃ
ಪ್ರಿಯಾಸಹಾಯಃ ಸರಿತಂ ಪ್ರತಿ ಬ್ರುವನ್ ।
ಚಚಾರ ರಮ್ಯಂ ನಯನಾಂಜನಪ್ರಭಂ
ಸ ಚಿತ್ರಕೂಟಂ ರಘುವಂಶವರ್ಧನಃ ॥೧೯॥

ರಘುವಂಶ ವರ್ಧನನಾದ ಶ್ರೀರಾಮನು ಮಂದಾಕಿನಿನದಿಯನ್ನು ಕುರಿತಾಗಿ ಬಹಳ ವರ್ಣನೆಮಾಡಿ ಪ್ರಿಯೆ ಸೀತೆಯೊಂದಿಗೆ ಕಣ್ಣಿಗೆ ಕಾಡಿಗೆಯಂತೆ ಕಪ್ಪಾದ ರಮ್ಯವಾದ ಚಿತ್ರಕೂಟದಲ್ಲಿ ವಿಹಾರ ಮಾಡಿದನು.

ಇಲ್ಲಿಂದ ಮುಂದೆ ಕಾಕಾಸುರನ ಕಥೆಯನ್ನು ಹೇಳುವ ಅರವತ್ತೊಂದು ಶ್ಲೋಕಗಳ ಒಂದು ಸರ್ಗ ಬರುತ್ತದೆ. ಅದು ಪ್ರಕ್ಷಿಪ್ತಸರ್ಗವೆಂದು ಪ್ರಸಿದ್ಧವಾಗಿದೆ. ಇದಕ್ಕೆ ಯಾರೊಬ್ಬರೂ ವ್ಯಾಖ್ಯಾನ ಮಾಡಿಲ್ಲ. ಆದರೂ ಪಾರಾಯಣ ಮಾಡುವ ರೂಢಿ ಇದೆ. ಇದರ ಕಥೆ ಸುಂದರಕಾಂಡದಲ್ಲಿ ಸಂಕ್ಷೇಪವಾಗಿ ಬರುತ್ತದೆ. ಮತ್ತು ಪದ್ಮಪುರಾಣ ಉತ್ತರಕಾಂಡದಲ್ಲಿಯೂ ಈ ಕಥೆ ಬರುವುದರಿಂದ ಪ್ರಾಮಾಣಿಕವೆ. ಪ್ರಕ್ಷಿಪ್ತವೆನ್ನಲು ಕಾರಣವಿಲ್ಲ.

ಆದರೆ ಸಂಗ್ರಹರಾಮಾಯಣದಲ್ಲಿ ಪಾದುಕಾಪಟ್ಟಾಭಿಷೇಕದ ಅನಂತರ ಈ ಕಥಾಭಾಗವಿದೆ. ಅದರಿಂದ ವಾಲ್ಮೀಕಿರಾಮಾಯಣದಲ್ಲಿ 116ನೇ ಸರ್ಗದಲ್ಲಿಯೇ ಅದರಲ್ಲಿ ಮೊದಲನೆ ಭಾಗವಾಗಿ ಸೇರುವುದು ಉಚಿತವೆಂದು ಬಗೆದು ನಾವು ಅಲ್ಲಿಯೇ ಸೇರಿಸಿದ್ದೇವೆ. ಹೀಗೆ ಮಾಡದಿದ್ದರೆ ಇಲ್ಲಿ ಈ ಕಾಕಾಸುರನ ಕಥೆಗೆ ಹಿಂದಿನ ಮತ್ತು ಮುಂದಿನ ಸರ್ಗಗಳ ಕಥಾ ಸಂದರ್ಭಕ್ಕೆ ಹೊಂದಿಕೆಯೂ ಆಗುವುದಿಲ್ಲ.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ತೊಂಬತ್ತಐದನೇ ಸರ್ಗ ಮುಗಿಯಿತು.

ಷಣ್ಣವತಿತಮಃ ಸರ್ಗಃ

ಸರ್ಗ – 96

ಭರತನ ಸೈನ್ಯವನ್ನು ಕಂಡು ಲಕ್ಷ್ಮಣನ ಕ್ರೋಧ.

ತಾಂ ತಥಾ ದರ್ಶಯಿತ್ವಾ ತು ಮೈಥಿಲೀಂ ಗಿರಿನಿಮ್ನಗಾಮ್ ।
ನಿಷಸಾದ ಗಿರಿಪ್ರಸ್ಥೇ ಸೀತಾಂ ಮಾಂಸೇನ ಛಂದಯನ್ ॥೧॥

ಸೀತೆಗೆ ಮಂದಾಕಿನೀ ನದಿಯನ್ನು ಹೀಗೆ ತೋರಿಸಿ ಅವಳಿಗೆ ಮಾಂಸದಿಂದ ತೃಪ್ತಿಪಡಿಸುತ್ತ ರಾಮನು ಬೆಟ್ಟದ ತಪ್ಪಲಿನಲ್ಲಿ ಕುಳಿತನು.

ಇದಂ ಮೇಧ್ಯಮಿದಂ ಸ್ವಾದು ನಿಷ್ಟಪ್ತಮಿದಮಗ್ನಿನಾ ।
ಏವಮಾಸ್ತೇ ಸ ಧರ್ಮಾತ್ಮಾ ಸೀತಯಾ ಸಹ ರಾಘವಃ ॥೨॥

ಈ ಮಾಂಸವು ಶುದ್ಧವಾಗಿದೆ ರುಚಿಕರವಾಗಿದೆ ಅಗ್ನಿಯಲ್ಲಿ ಪಕ್ವವಾಗಿದೆ ಎಂದು ಹೇಳುತ್ತ ಧರ್ಮಾತ್ಮನಾದ ರಾಮನು ಸೀತೆಯೊಂದಿಗೆ ಕುಳಿತನು.

ತಥಾ ತತ್ರಾಸತಸ್ತಸ್ಯ ಭರತಸ್ಯೋಪಯಾಯಿನಃ ।
ಸೈನ್ಯರೇಣುಶ್ಚ ಶಬ್ದಶ್ಚ ಪ್ರಾದುರಾಸ್ತಾಂ ನಭಸ್ಪೃಶೌ ॥೩॥

ಶ್ರೀರಾಮ ಹೀಗೆ ಕುಳಿತಿದ್ದಾಗ ಭರತನ ಆಗಮನದಿಂದ ಸೈನ್ಯದಿಂದ ಎದ್ದ ದೂಳು ಮತ್ತು ಶಬ್ದಗಳು ಗಗನವನ್ನು ಮುಟ್ಟಿದುವು.

ಏತಸ್ಮಿನ್ನಂತರೇ ತ್ರಸ್ತಾಃ ಶಬ್ದೇನ ಮಹತಾ ತತಃ ।
ಅರ್ದಿತಾ ಯೂಥಪಾ ಮತ್ತಾಃ ಸಯೂಥಾ ದುದ್ರುವುರ್ದಿಶಃ ॥೪॥

ಈ ಸಮಯದಲ್ಲಿ ದೊಡ್ಡಶಬ್ದದಿಂದ ಮದಿಸಿದ ಆನೆಗಳು ಭಯಭೀತವಾಗಿ ತಮ್ಮ ಗುಂಪುಗಳೊಂದಿಗೆ ದಿಕ್ಕಾಪಾಲಾಗಿ ಓಡಿದುವು.

ಸ ತಂ ಸೈನ್ಯಸಮುದ್ಭೂತಂ ಶಬ್ದಂ ಶುಶ್ರಾವ ರಾಘವಃ ।
ತಾಂಶ್ಚ ವಿಪ್ರದ್ರುತಾನ್ ಸರ್ವಾನ್ ಯೂಥಪಾನನ್ವವೈಕ್ಷತ ॥೫॥

ಶ್ರೀರಾಮನು ಸೈನ್ಯದಿಂದ ಎದ್ದ ಶಬ್ದವನ್ನು ಆಲಿಸಿದನು. ಎಲ್ಲ ಸಲಗಗಳು ಓಡುವುದನ್ನೂ ನೋಡಿದನು.

ತಾಂಶ್ಚ ವಿದ್ರವತೋ ದೃಷ್ಟ್ವಾ ತಂ ಚ ಶ್ರುತ್ವಾ ಮಹಾಸ್ವನಮ್ ।
ಉವಾಚ ರಾಮಃ ಸೌಮಿತ್ರಿಂ ಲಕ್ಷ್ಮಣಂ ದೀಪ್ತತೇಜಸಮ್ ॥೬॥

ಆ ಆನೆಗಳು ಓಡುವುದನ್ನು ಕಂಡು ಆ ಮಹಾಶಬ್ದವನ್ನು ಕೇಳಿ ರಾಮನು ದೀಪ್ತತೇಜಸ್ಸುಳ್ಳ ಸುಮಿತ್ರಾತನಯನಾದ ಲಕ್ಷ್ಮಣನಿಗೆ ಹೇಳಿದನು.

ಹಂತ ಲಕ್ಷ್ಮಣ ಪಶ್ಯೇಹ ಸುಮಿತ್ರಾ ಸುಪ್ರಜಾಸ್ತ್ವಯಾ ।
ಭೀಮಸ್ತನಿತಗಂಭೀರಸ್ತುಮುಲಃ ಶ್ರೂಯತೇ ಸ್ವನಃ ॥೭॥

ಲಕ್ಷ್ಮಣ, ನಿನ್ನಿಂದ ಸುಮಿತ್ರೆ ಸುಪುತ್ರವತಿ ಎನಿಸಿದ್ದಾಳೆ. ನಿನಗೆ ಶುಭವಾಗಲಿ. ಇಲ್ಲಿ ನೋಡು ಭೀಕರವಾದ ಗುಡುಗಿನಂಥ ಗಂಭೀರವಾದ ದೊಡ್ಡ ಧ್ವನಿಯು ಕೇಳಿಬರುತ್ತಿದೆ.

ಗಜಯೂಥಾನಿ ವಾರಣ್ಯೇ ಮಹಿಷಾ ವಾ ಮಹಾವನೇ ।
ವಿತ್ರಾಸಿತಾ ಮೃಗಗಣಾಃ ಸಿಂಹೈಃ ಸಹಸಾ ಪ್ರದ್ರುತಾ ದಿಶಃ ॥೮॥

ಮೃಗಗಳು ದಿಕ್ಕಾಪಾಲಾಗಿ ಅನಿರೀಕ್ಷಿತವಾಗಿ ಓಡುತ್ತಿವೆ. ಇದಕ್ಕೆ ಏನುಕಾರಣ? ಅರಣ್ಯದಲ್ಲಿ ಸಿಂಹಗಳಿಂದ ಭಯಗೊಂಡ ಆನೆಗಳ ಸಮೂಹಗಳೆ? ಅಥವಾ ಮಹಾಅರಣ್ಯದಲ್ಲಿ ಸಿಂಹಗಳಿಂದ ಭಯಗೊಂಡ ಕಾಡುಕೋಣಗಳೆ?

ರಾಜಾ ವಾ ರಾಜಪುತ್ರೋ ವಾ ಮೃಗಯಾಮಟತೇ ವನೇ ।
ಅನ್ಯದ್ವಾ ಶ್ವಾಪದಂ ಕಿಂಚಿತ್ ಸೌಮಿತ್ರೇ ಜ್ಞಾತುಮರ್ಹಸಿ ॥೯॥

ರಾಜನಾಗಲಿ ರಾಜಕುಮಾರನಾಗಲಿ ಯಾರಾದರೂ ಅರಣ್ಯದಲ್ಲಿ ಬೇಟೆ-ಯಾಡುತ್ತಿರುವನೆ? ಅಥವಾ ಬೇರೆ ಏನಾದರೂ ದುಷ್ಟಮೃಗವು ದಾಂಧಲೆ ಮಾಡುತ್ತಿದೆಯೆ? ಲಕ್ಷ್ಮಣ, ನೋಡು.

ಸುದುಶ್ಚರೋ ಗಿರಿಶ್ಚಾಯಂ ಪಕ್ಷಿಣಾಮಪಿ ಲಕ್ಷ್ಮಣ ।
ಸರ್ವಮೇತದ್ಯಥಾತತ್ತ್ವಮಚಿರಾಜ್ಜ್ಞಾತುಮರ್ಹಸಿ ॥೧೦॥

ಲಕ್ಷ್ಮಣ, ಈ ಬೆಟ್ಟವು ಪಕ್ಷಿಗಳಿಗೂ ದುರ್ಗಮವಾಗಿದೆ. ಇದೆಲ್ಲವನ್ನೂ ಯಥಾ-ವತ್ತಾಗಿ ಬೇಗನೆ ತಿಳಿದುಕೊಳ್ಳು.

ಸ ಲಕ್ಷ್ಮಣಃ ಸಂತ್ವರಿತಃ ಸಾಲಮಾರುಹ್ಯ ಪುಷ್ಪಿತಮ್ ।
ಪ್ರೇಕ್ಷಮಾಣೋ ದಿಶಃ ಸರ್ವಾಃ ಪೂರ್ವಾಂ ದಿಶಮವೈಕ್ಷತ ॥೧೧॥

ಲಕ್ಷ್ಮಣನು ತ್ವರೆಯಿಂದ ಹೂಬಿಟ್ಟ ಸಾಲವೃಕ್ಷವನ್ನೇರಿ ಎಲ್ಲ ದಿಕ್ಕುಗಳನ್ನು ನೋಡುತ್ತ ಮೊದಲಿಗೆ ಪೂರ್ವದಿಕ್ಕನ್ನು ನೋಡಿದನು.

ಉದಙ್ಮುಖಃ ಪ್ರೇಕ್ಷಮಾಣೋ ದದರ್ಶ ಮಹತೀಂ ಚಮೂಮ್ ।
ಗಜಾಶ್ವರಥಸಂಬಾಧಾಂ ಯತ್ತೈರ್ಯುಕ್ತಾಂ ಪದಾತಿಭಿಃ ॥೧೨॥

ಬಳಿಕ ಉತ್ತರದಿಕ್ಕಿಗೆ ತಿರುಗಿ ನೋಡಿದಾಗ ದೊಡ್ಡ ಸೈನ್ಯವನ್ನು ನೋಡಿದನು. ಆ ಸೇನೆ ಗಜ ಅಶ್ವ ರಥಗಳಿಂದ ತುಂಬಿತ್ತು. ಮತ್ತು ಸಜ್ಜಾದ ಪದಾತಿಗಳಿಂದ ಕೂಡಿತ್ತು.

ತಾಮಶ್ವಗಜಸಂಪೂರ್ಣಾಂ ರಥಧ್ವಜವಿಭೂಷಿತಾಮ್ ।
ಶಂಶಸ ಸೇನಾಂ ರಾಮಾಯ ವಚನಂ ಚೇದಮಬ್ರವೀತ್ ॥೧೩॥

ಆ ಸೇನೆಯು ಅಶ್ವಗಜಗಳಿಂದ ತುಂಬಿದೆ. ರಥಧ್ವಜಗಳಿಂದ ಅಲಂಕೃತವಾಗಿದೆ ಎಂದು ರಾಮನಿಗೆ ಹೇಳಿ ಈ ಮಾತನ್ನೂ ಹೇಳಿದನು.

ಅಗ್ನಿಂ ಸಂಶಮಯತ್ವಾರ್ಯಃ ಸೀತಾ ಚ ಭಜತಾಂ ಗುಹಾಮ್ ।
ಸಜ್ಯಂ ಕುರುಷ್ವ ಚಾಪಂ ಚ ಶರಾಂಶ್ಚ ಕವಚಂ ತಥಾ ॥೧೪॥

ಪೂಜ್ಯನು ನೀನು ಅಗ್ನಿಯನ್ನು ಆರಿಸು, ಸೀತೆಯು ಗುಹೆಯೊಳಗೆ ಹೋಗಲಿ. ನೀನು ಬಿಲ್ಲಿಗೆ ಹೆದೆಏರಿಸು. ಬಾಣಗಳನ್ನು ಎತ್ತಿಕೊಳ್ಳು. ಕವಚಧಾರಣಮಾಡು.

ತಂ ರಾಮಃ ಪುರುಷವ್ಯಾಘ್ರೋ ಲಕ್ಷ್ಮಣಂ ಪ್ರತ್ಯುವಾಚ ಹ ।
ಅಂಗಾವೇಕ್ಷ್ವ ಸೌಮಿತ್ರೇ ಕಸ್ಯೇಮಾಂ ಮನ್ಯಸೇ ಚಮೂಮ್ ॥೧೫॥

ಪುರುಷೋತ್ತಮ ಶ್ರೀರಾಮನು ಲಕ್ಷ್ಮಣನಿಗೆ ಹೇಳಿದನು. ಲಕ್ಷ್ಮಣ, ನೋಡು, ಈ ಸೈನ್ಯ ಯಾರದೆಂದು ತಿಳಿದೆಯಾ?

ಏವಮುಕ್ತಸ್ತು ರಾಮೇಣ ಲಕ್ಷ್ಮಣೋ ವಾಕ್ಯಮಬ್ರವೀತ್ ।
ದಿಧಕ್ಷನ್ನಿವ ತಾಂ ಸೇನಾಂ ರುಷಿತಃ ಪಾವಕೋ ಯಥಾ ॥೧೬॥

ರಾಮನು ಹೀಗೆ ಹೇಳಿದಾಗ ಲಕ್ಷ್ಮಣನು ಕೋಪಗೊಂಡು ಆ ಸೇನೆಯನ್ನು ಬೆಂಕಿಯಂತೆ ಸುಡಲು ಹೊರಟು ನುಡಿದನು.

ಸಂಪನ್ನಂ ರಾಜ್ಯಮಿಚ್ಛಂಸ್ತು ವ್ಯಕ್ತಂ ಪ್ರಾಪ್ಯಾಭಿಷೇಚನಮ್ ।
ಆವಾಂ ಹಂತುಂ ಸಮಭ್ಯೇತಿ ಭರತಃ ಕೈಕಯೀಸುತಃ ॥೧೭॥

ಅಭಿಷೇಕ ಮಾಡಿಸಿಕೊಂಡು, ರಾಜ್ಯವನ್ನು ನಿಷ್ಕಂಟಕವಾಗಿ ಮಾಡಿಕೊಳ್ಳಲು ಬಯಸಿ ನಮ್ಮನ್ನು ವಧಿಸಲು ನಿಶ್ಚಯವಾಗಿ ಕೈಕಯೀಪುತ್ರ ಭರತನು ಬರುತ್ತಿದ್ದಾನೆ.

ಏಷ ವೈ ಸುಮಾಹಾನ್ ಶ್ರೀಮಾನ್ ವಿಟಪೀ ಸಂಪ್ರಕಾಶತೇ ।
ವಿರಾಜತ್ಯುದ್ಗತಸ್ಕಂಧಃ ಕೋವಿದಾರಧ್ವಜೋ ರಥೇ ॥೧೮॥

ಇದೊಂದು ದೊಡ್ಡದಾದ ಸುಂದರವಾದ ವೃಕ್ಷ ಕಾಣಿಸುತ್ತಿದೆ. ಅದರ ಬಳಿಯ-ಲ್ಲಿಯೇ ರಥದಲ್ಲಿ ಉನ್ನತವಾದ ಕೊಂಬೆಉಳ್ಳ ಕೋವಿದಾರ (ಕಂಚಿನಾಳದ ಮರ) ಧ್ವಜವು ಶೋಭಿಸುತ್ತಿದೆ. ಈ ಧ್ವಜವು ನಮ್ಮ ಕುಲದ ಚಿಹ್ನೆ. ಅದರಿಂದ ಈತ ಭರತನೆ.

ಭಜಂತ್ಯೇತೇ ಯಥಾಕಾಮಮಶ್ವಾನಾರುಹ್ಯ ಶೀಘ್ರಗಾನ್ ।
ಏತೇ ಭ್ರಾಜಂತಿ ಸಂಹೃಷ್ಟಾ ಗಜಾನಾರುಹ್ಯ ಸಾದಿನಃ ॥೧೯॥

ಶೀಘ್ರವಾಗಿ ಓಡುವ ಕುದುರೆಯನ್ನೇರಿ ಅಶ್ವಸೈನಿಕರು ಯಥೇಚ್ಛವಾಗಿ ಭರತ-ನನ್ನು ಸೇವಿಸುತ್ತಿದ್ದಾರೆ. ಗಜಾರೋಹಿಗಳೂ ಆನೆಗಳ ಮೇಲೆ ಕುಳಿತು ಉತ್ಸಾಹದಿಂದ ಮೆರೆಯುತ್ತಾರೆ.

ಗೃಹೀತಧನುಷೌ ಚಾವಾಂ ಗಿರಿಂ ವೀರ ಶ್ರಯಾವಹೇ ।
ಅಥವೇಹೈವ ತಿಷ್ಠಾವಃ ಸಂನದ್ಧಾವುದ್ಯತಾಯುಧೌ ॥೨೦॥

ವೀರ ರಾಮನೆ, ನಾವು ಬಿಲ್ಲನ್ನು ಹಿಡಿದು ಬೆಟ್ಟದ ಮೇಲೆ ನಿಲ್ಲೋಣ ಅಥವಾ ಇಲ್ಲಿಯೇ ಆಯುಧವನ್ನು ಹಿಡಿದು ಸನ್ನದ್ಧರಾಗಿ ನಿಲ್ಲೋಣ.

ಅಪಿ ನೌ ವಶಮಾಗಚ್ಛೇತ್ ಕೋವಿದಾರಧ್ವಜೋ ರಣೇ ।
ಅಪಿ ದ್ರಕ್ಷ್ಯಾಮಿ ಭರತಂ ಯತ್ಕೃತೇ ವ್ಯಸನಂ ಮಹತ್ ।
ತ್ವಯಾ ರಾಘವ ಸಂಪ್ರಾಪ್ತಂ ಸೀತಯಾ ಚ ಮಯಾ ತಥಾ ॥೨೧॥

ನಮ್ಮ ಕುಲ ಚಿಹ್ನೆಯಾದ ಕೋವಿದಾರ ಧ್ವಜವನ್ನು ಮೆರೆಸುತ್ತಿರುವ ಭರತನು ಯುದ್ಧದಲ್ಲಿ ನಮಗೆ ವಶನಾಗುವನೆ? ರಾಮ, ಯಾರ ಕಾರಣದಿಂದ ನೀನು ಸೀತೆ ಮತ್ತು ನಾನು ಮೂವರೂ ಮಹಾಸಂಕಷ್ಟದಲ್ಲಿ ಬಿದ್ದಿರುವೆವೋ ಆ ಭರತನನ್ನು ನಾನು ಕಾಣುವೆನೆ? ಎಂದು ಸೇಡುತೀರಿಸಿಕೊಳ್ಳಲು ಕಾತರದಿಂದ ನಿರೀಕ್ಷಿಸುತ್ತಿದ್ದೇನೆ.

ಯನ್ನಿಮಿತ್ತಂ ಭವಾನ್ ರಾಜ್ಯಾಚ್ಚ್ಯುತೋ ರಾಘವ ಶಾಶ್ವತಾತ್ ।
ಸಂಪ್ರಾಪ್ತೋಽಯಮರಿರ್ವೀರ ಭರತೋ ವಧ್ಯ ಏವ ಮೇ ॥೨೨॥

ಇವನ ಕಾರಣದಿಂದಲೆ, ರಾಮ, ನೀನು ಶಾಶ್ವತವಾದ ರಾಜ್ಯದಿಂದ ಚ್ಯುತ-ನಾಗಿರುವೆ. ವೀರನೆ, ಶತ್ರುವಾದ ಈ ಭರತನು ಈಗ ಬಂದಿದ್ದಾನೆ. ನಾನು ಅವನನ್ನು ವಧಿಸಲೇಬೇಕು.

ಭರತಸ್ಯ ವಧೇ ದೋಷಂ ನಾಹಂ ಪಶ್ಯಾಮಿ ರಾಘವ ।
ಪೂರ್ವಾಪಕಾರಿಣಂ ಹತ್ವಾ ನ ಹ್ಯಧರ್ಮೇಣ ಯುಜ್ಯತೇ ॥೨೩॥

ಭರತನನ್ನು ಕೊಂದರೆ ತಪ್ಪಿಲ್ಲವೆಂದು ನಾನು ಭಾವಿಸುತ್ತೇನೆ. ಏಕೆಂದರೆ, ರಾಮ, ಹಿಂದಿನಿಂದಲೂ ಅಪರಾಧ ಮಾಡುತ್ತಿದ್ದವನನ್ನು ಕೊಂದರೆ ಪಾಪ ಬರುವುದಿಲ್ಲ.

ಪೂರ್ವಾಪಕಾರೀ ಭರತಸ್ತ್ಯಕ್ತಧರ್ಮಶ್ಚ ರಾಘವ ।
ಏತಸ್ಮಿನ್ನಿಹತೇ ಕೃತ್ಸ್ನಮನುಶಾಧಿ ವಸುಂಧರಾಮ್ ॥೨೪॥

ಭರತನು ಹಿಂದಿನಿಂದಲೂ ಕೈಕೇಯಿಯೊಂದಿಗೆ ಸೇರಿ ರಾಜ್ಯಾಪಹಾರಕ್ಕೆ ಸಂಚು ಮಾಡಿ ಅಪರಾಧಿಯಾಗಿದ್ದಾನೆ. ಧರ್ಮವನ್ನು ತ್ಯಜಿಸಿದ್ದಾನೆ. ಇವನನ್ನು ಕೊಂದು ನೀನು ಸಮಸ್ತ ಭೂಮಂಡಲಕ್ಕೆ ರಾಜನಾಗು.

ಅದ್ಯ ಪುತ್ರಂ ಹತಂ ಸಂಖ್ಯೇ ಕೈಕೇಯೀ ರಾಜ್ಯಕಾಮುಕಾ ।
ಮಯಾ ಪಶ್ಯೇತ್ ಸುದುಃಖಾರ್ತಾ ಹಸ್ತಿಭಗ್ನಮಿವ ದ್ರುಮಮ್ ॥೨೫॥

ಇಂದು, ಆನೆಯು ಮರವನ್ನು ಮುರಿಯುವಂತೆ, ನಾನು ಯುದ್ಧದಲ್ಲಿ ಕೈಕೇಯಿಯ ಮಗನನ್ನು ಕೊಲ್ಲುತ್ತೇನೆ. ರಾಜ್ಯಕ್ಕಾಗಿ ಆಸೆಪಡುವ ತಾಯಿ ಕೈಕೇಯಿ ಬಹಳ ದುಃಖಾರ್ತಳಾಗಿ ಇದನ್ನು ಕಣ್ಣಾರೆ ನೋಡಬೇಕು.

ಕೈಕೇಯೀಂ ಚ ವಧಿಷ್ಯಾಮಿ ಸಾನುಬಂಧಾಂ ಸಭಾಂಧವಾಮ್ ।
ಕಲುಷೇಣಾದ್ಯ ಮಹತಾ ಮೇದಿನೀ ಪರಿಮುಚ್ಯತಾಮ್ ॥೨೬॥

ನಾನು ಕೈಕೇಯಿಯನ್ನೂ ಕೊಲ್ಲುತ್ತೇನೆ. ಅವಳ ಕಡೆಯವರನ್ನೂ ಬಂಧುಗಳನ್ನೂ ಕೊಲ್ಲುತ್ತೇನೆ, ಇಂದಿಗೆ ಭೂಮಿ ಈ ಮಹಾ ಕಳಂಕದಿಂದ ಮುಕ್ತವಾಗಲಿ.

ಅದ್ಯೇಮಂ ಸಂಯತಂ ಕ್ರೋಧಮಸತ್ಕಾರಂ ಚ ಮಾನದ ।
ಮೋಕ್ಷ್ಯಾಮಿ ಶತ್ರುಸೈನ್ಯೇಷು ಕಕ್ಷೇಷ್ವಿವ ಹುತಾಶನಮ್ ॥೨೭॥

ತನ್ನ ಪ್ರೇಮದ ಪುತ್ಥಳಿಗಳಾದ ಶ್ರೀರಾಮಸೀತೆಯರ ವನವಾಸವನ್ನು ಪ್ರತ್ಯಕ್ಷ ಕಾಣುತ್ತ ದುಃಖ ತಡೆಯಲಾರದೆ ಲಕ್ಷ್ಮಣನು ಪ್ರಲಾಪ ಮಾಡುತ್ತಿದ್ದಾನೆ. ಅಣ್ಣ ಭರತನನ್ನೂ, ತಾಯಿ ಕೈಕೇಯಿಯನ್ನೂ ಕೊಲ್ಲುವೆನ್ನುತ್ತಾನೆ.

ರಾಮ, ನಾನು ಇಂದಿನವರೆಗೆ ತಡೆದುಕೊಂಡಿರುವ ಕ್ರೋಧವನ್ನೂ ಸೇಡನ್ನೂ ಶತ್ರುಸೈನ್ಯದ ಮೇಲೆ ಹರಿಸಿ, ಕಿಚ್ಚು ಕಾಡನ್ನು ಸುಡುವಂತೆ, ಅದನ್ನು ನಾನು ಸುಡುತ್ತೇನೆ.

ಅದ್ಯೈತಚ್ಚಿತ್ರಕೂಟಸ್ಯ ಕಾನನಂ ನಿಶಿತೈಃ ಶರೈಃ ।
ಭಿಂದನ್ ಶತ್ರುಶರೀರಾಣಿ ಕರಿಷ್ಯೇ ಶೋಣಿತೋಕ್ಷಿತಮ್ ॥೨೮॥

ನಾನಿಂದು ಶತ್ರುಗಳ ಶರೀರಗಳನ್ನು ಹರಿತವಾದ ಬಾಣಗಳಿಂದ ಸೀಳಿ ಚಿತ್ರಕೂಟದ ಈ ಅರಣ್ಯವನ್ನು ರಕ್ತಸಿಕ್ತವಾಗಿ ಮಾಡುತ್ತೇನೆ.

ಶರೈರ್ನಿರ್ಭಿನ್ನಹೃದಯಾನ್ ಕುಂಜರಾಂಸ್ತುರಗಾಂಸ್ತಥಾ ।
ಶ್ವಾಪದಾಃ ಪರಿಕರ್ಷಂತು ನರಾಂಶ್ಚ ನಿಹತಾನ್ ಮಯಾ ॥೨೯॥

ನಾನು ಆನೆ ಕುದುರೆ ಪದಾತಿ ಸೈನಿಕರ ಎದೆಯನ್ನು ಬಾಣಗಳಿಂದ ಸೀಳಿ ಕೊಲ್ಲುತ್ತೇನೆ. ಕಾಡಿನ ಮೃಗಗಳು ಅವರನ್ನು ಸೆಳೆದೊಯ್ಯಲಿ.

ಶರಾಣಾಂ ಧನುಷಶ್ಚಾಹಮನೃಣೋಽಸ್ಮಿನ್ ಮಹಾಮೃಧೇ ।
ಸಸೈನ್ಯಂ ಭರತಂ ಹತ್ವಾ ಭವಿಷ್ಯಾಮಿ ನ ಸಂಶಯಃ ॥೩೦॥

ಈ ಮಹಾಯುದ್ಧದಲ್ಲಿ ನಾನು ಭರತನನ್ನು ಸೈನ್ಯಸಮೇತ ಕೊಂದು ನನ್ನ ಧನುರ್ಬಾಣಗಳ ಋಣ ಪರಿಹಾರ ಮಾಡಿಕೊಳ್ಳುವೆನು ಸಂಶಯವಿಲ್ಲ.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ತೊಂಬತ್ತಾರನೇ ಸರ್ಗ ಮುಗಿಯಿತು.

❖

ಸಪ್ತನವತಿತಮಃ ಸರ್ಗಃ

ಸರ್ಗ – 97

ಶ್ರೀರಾಮನು ಭರತನ ಗುಣವನ್ನು ಕೊಂಡಾಡುವುದು.

ಸುಸಂರಬ್ಧಂ ತು ಸೌಮಿತ್ರಿಂ ಲಕ್ಷ್ಮಣಂ ಕ್ರೋಧಮೂರ್ಛಿತಮ್ ।
ರಾಮಸ್ತು ಪರಿಸಾಂತ್ವ್ಯಾಥ ವಚನಂ ಚೇದಮಬ್ರವೀತ್ ॥೧॥

ಸುಮಿತ್ರಾತನಯನಾದ ಲಕ್ಷ್ಮಣನು ಹೀಗೆ ಕ್ರೋಧದಿಂದ ಮೈಮರೆತು ಚಡಪಡಿಸುತ್ತಿರುವುದನ್ನು ಕಂಡು ಶ್ರೀರಾಮನು ಅವನನ್ನು ಸಂತೈಸುತ್ತ ನುಡಿದನು.

ಕಿಮತ್ರ ಧನುಷಾ ಕಾರ್ಯಮಸಿನಾ ವಾ ಸಚರ್ಮಣಾ ।
ಮಹೇಷ್ವಾಸೇ ಮಹಾಪ್ರಾಜ್ಞೇ ಭರತೇ ಸ್ವಯಮಾಗತೇ ॥೨॥

ನಾವು ಯುದ್ಧಸಾರಿದಾಗ ಭರತನು ಸೈನ್ಯ ಸಮೇತ ಬಂದಿದ್ದರೆ ಅದು ಯುದ್ಧಕ್ಕಾಗಿ ಎಂದು ತಿಳಿಯಬಹುದಿತ್ತು. ಆದರೆ ನಾವು ಯುದ್ಧವನ್ನು ಸಾರಿಲ್ಲ, ಅವನೇ ಸ್ವಯಂ ಬಂದನೆಂದರೆ ಅದು ಯುದ್ಧಕ್ಕಾಗಿ ಅಲ್ಲ. ಹೀಗಾಗಿ ಮಹಾಧನುರ್ಧರನೂ ಮಹಾಪ್ರಾಜ್ಞನೂ ಆದ ಭರತನು ಸ್ವಯಂ ಬಂದಿರುವಾಗ ನಮಗೆ ಧನುರ್ಬಾಣಗಳಿಂದಾಗಲಿ ಖಡ್ಗಚರ್ಮಗಳಿಂದಾಗಲಿ ಸಾಧಿಸಬೇಕಾಗಿರುವ ಕಾರ್ಯವೇನಿದೆ?

ಪಿತುಃ ಸತ್ಯಂ ಪ್ರತಿಶ್ರುತ್ಯ ಹತ್ವಾ ಭರತಮಾಗತಮ್ ।
ಕಿಂ ಕರಿಷ್ಯಾಮಿ ರಾಜ್ಯೇನ ಸಾಪವಾದೇನ ಲಕ್ಷ್ಮಣ ॥೩॥

ಮತ್ತು ತಂದೆಯ ಮುಂದೆ ಅವನಾಡಿದ ಮಾತನ್ನು ಸತ್ಯವಾಗಿ ಮಾಡುವ ಪ್ರತಿಜ್ಞೆ ಮಾಡಿ ಕಾಡಿಗೆ ಬಂದವನು ನಾನೀಗ ತಾನಾಗಿ ಬಂದ ಭರತನನ್ನು ಕೊಂದರೆ ಅದು ರಾಜ್ಯಲೋಭದಿಂದಲೇ ಎಂದು ಅಪವಾದ ಬಂದೀತು. ಅಂಥ ಅಪವಾದಕ್ಕೊಳಗಾದ ರಾಜ್ಯದಿಂದ ನಾನೇನು ಕಾರ್ಯಸಾಧನೆ ಮಾಡಬಲ್ಲೆ?

ಯದ್ದ್ರವ್ಯಂ ಬಾಂಧವಾನಾಂ ವಾ ಮಿತ್ರಾಣಾಂ ವಾ ಕ್ಷಯೇ ಭವೇತ್ ।
ನಾಹಂ ತತ್ ಪ್ರತಿಗೃಹ್ಣೀಯಾಂ ಭಕ್ಷಾನ್ ವಿಷಕೃತಾನಿವ ॥೪॥

ಬಂಧು ಜನರ ಅಥವಾ ಮಿತ್ರರ ನಾಶದಿಂದ ಸಿಗುವ ಸಂಪತ್ತೇನಿದ್ದರೂ ಅದು ನನಗೆ ವಿಷಯುಕ್ತವಾದ ಭಕ್ಷ್ಯದಂತೆ. ಅದನ್ನು ನಾನು ಸ್ವೀಕರಿಸಲಾರೆ.

ಧರ್ಮಮರ್ಥಂ ಚ ಕಾಮಂ ಚ ಪೃಥಿವೀಂ ಚಾಪಿ ಲಕ್ಷ್ಮಣ ।
ಇಚ್ಛಾಮಿ ಭವತಾಮರ್ಥೇ ಏತತ್ ಪ್ರತಿಶೃಣೋಮಿ ತೇ ॥೫॥

ಲಕ್ಷ್ಮಣ, ನಾನು ಧರ್ಮ ಅರ್ಥ ಕಾಮಗಳನ್ನೂ ಸಮಸ್ತ ಪೃಥಿವಿಯನ್ನೂ ನಿಮ್ಮ ಪೋಷಣೆ ಮಾಡುವ ಸಲುವಾಗಿಯೇ ಅಪೇಕ್ಷಿಸುತ್ತೇನೆ. ನಾನು ನಿನಗೆ ಇದನ್ನು ಶಪಥಪೂರ್ವಕವಾಗಿ ಹೇಳುತ್ತಿದ್ದೇನೆ.

ಭ್ರಾತೄಣಾಂ ಸಂಗ್ರಹಾರ್ಥಂ ಚ ಸುಖಾರ್ಥಂ ಚಾಪಿ ಲಕ್ಷ್ಮಣ ।
ರಾಜ್ಯಮಪ್ಯಹಮಿಚ್ಛಾಮಿ ಸತ್ಯೇನಾಯುಧಮಾಲಭೇ ॥೬॥

ಸೋದರರ ಪ್ರೀತಿಸಂಪಾದನೆಗಾಗಿ ಮತ್ತು ಅವರ ಸಂತೋಷಕ್ಕಾಗಿಯೇ, ನನಗೆ ಬೇಡವಾಗಿರುವ ರಾಜ್ಯವನ್ನೂ ಕೂಡ ನಾನು ಬಯಸುತ್ತೇನೆ. ಹೀಗೆ ಆಯುಧದ ಮೇಲೆ ಆಣೆಇಟ್ಟು ಹೇಳುತ್ತೇನೆ.

ನೇಯಂ ಮಮ ಮಹೀ ಸೌಮ್ಯ ದುರ್ಲಭಾ ಸಾಗರಾಂಬರಾ ।
ನ ಹೀಚ್ಛೇಯಮಧರ್ಮೇಣ ಶಕ್ರತ್ವಮಪಿ ಲಕ್ಷ್ಮಣ ॥೭॥

ಲಕ್ಷ್ಮಣ, ನನಗೆ ರಾಜ್ಯ ಬೇಕೆನಿಸಿದರೆ, ಸಾಗರ ಪರ್ಯಂತವಾದ ಈ ಭೂಮಿಯೂ ನನಗೆ ಅಲಭ್ಯವೇನಲ್ಲ. ಆದರೆ ಅಧರ್ಮದಿಂದ ಇಂದ್ರಪದವಿಯನ್ನು ಕೂಡ ಪಡೆಯಲು ನಾನು ಆಶಿಸಲಾರೆ.

ಯದ್ವಿನಾ ಭರತಂ ತ್ವಾಂ ಚ ಶತ್ರುಘ್ನಂ ಚಾಪಿ ಮಾನದ ।
ಭವೇನ್ಮಮ ಸುಖಂ ಕಿಂಚಿದ್ಭಸ್ಮ ತತ್ ಕುರುತಾಂ ಶಿಖೀ ॥೮॥

ಭರತನಿಲ್ಲದ ನೀನಿಲ್ಲದ ಶತ್ರುಘ್ನನೂ ಇಲ್ಲದ ಏನೇ ಸುಖ ಬಂದರೂ ಅದು ನನಗೆ ಬೇಡ, ಅದನ್ನು ಬೆಂಕಿ ಸುಡಲಿ.

ಮನ್ಯೇऽಹಮಾಗತೋऽಯೋಧ್ಯಾಂ ಭರತೋ ಭ್ರಾತೃವತ್ಸಲಃ ।
ಮಮ ಪ್ರಾಣಾತ್ ಪ್ರಿಯತರಃ ಕುಲಧರ್ಮಮನುಸ್ಮರನ್ ॥೯॥

ಶ್ರುತ್ವಾ ಪ್ರವ್ರಾಜಿತಂ ಮಾಂ ಹಿ ಜಟಾವಲ್ಕಲಧಾರಿಣಮ್ ।
ಜಾನಕ್ಯಾ ಸಹಿತಂ ವೀರ ತ್ವಯಾ ಚ ಪುರುಷರ್ಷಭ ॥೧೦॥

ಸ್ನೇಹೇನಾಕ್ರಾಂತಹೃದಯಃ ಶೋಕೇನಾಕುಲಿತೇಂದ್ರಿಯಃ ।
ದ್ರಷ್ಟುಮಭ್ಯಾಗತೋ ಹ್ಯೇಷ ಭರತೋ ನಾನ್ಯಥಾಗತಃ ॥೧೧॥

ವೀರ ಪುರುಷೋತ್ತಮ ಲಕ್ಷ್ಮಣ, ನಾನು ಹೀಗೆ ಊಹಿಸುತ್ತೇನೆ. 'ಸೋದರ ಪ್ರೇಮಿಯಾದ ಭರತನು ಅಯೋಧ್ಯೆಗೆ ಬಂದಾಗ ನಾನು ಜಟಾ ವಲ್ಕಲ ಧಾರಣ ಮಾಡಿ ಸೀತೆಯೊಂದಿಗೂ ನಿನ್ನೊಂದಿಗೂ ಕಾಡಿಗೆ ಹೊರಟು ಹೋದುದನ್ನು ಕೇಳಿ, ಹಿರಿಯನಿಗೇ ಪಟ್ಟ ಎನ್ನುವ ಕುಲಾಚಾರವನ್ನು ಆಲೋಚಿಸಿ, ಪ್ರೀತಿ ತುಂಬಿದ ಹೃದಯದಿಂದ ಶೋಕದಿಂದ ಮನೋವ್ಯಥೆಗೀಡಾಗಿ ನನ್ನನ್ನು ನೋಡಲೆಂದೇ ಬಂದಿದ್ದಾನೆ, ನನಗೆ ಪ್ರಾಣಕ್ಕಿಂತ ಹೆಚ್ಚು ಪ್ರಿಯನಾದ ಈ ಭರತ. ಹೊರತು, ಬೇರೆ ಉದ್ದೇಶದಿಂದಲ್ಲ' ಎಂದು.

ಅಂಬಾಂ ಚ ಕೈಕಯೀಂ ರುಷ್ಯ ಪರುಷಂ ಚಾಪ್ರಿಯಂ ವದನ್ ।
ಪ್ರಸಾದ್ಯ ಪಿತರಂ ಶ್ರೀಮಾನ್ ರಾಜ್ಯಂ ಮೇ ದಾತುಮಾಗತಃ ॥೧೨॥

ತಾಯಿ ಕೈಕೇಯಿಯಲ್ಲಿ ಕೋಪಗೊಂಡು ಕಠಿನವಾದ ಅನಿಷ್ಟವಾದ ಮಾತನ್ನು ಅವಳಿಗೆ ಹೇಳಿ ತಂದೆಯನ್ನು ಮನಒಲಿಸಿ ಗುಣಸಂಪತ್ತಿನಿಂದ ಶ್ರೀಮಂತನಾದ ಭರತನು ನನಗೆ ರಾಜ್ಯವನ್ನು ವಹಿಸಿಕೊಡಲು ಬಂದಿದ್ದಾನೆ ಎಂದೂ ಊಹಿಸುತ್ತೇನೆ.

ಪ್ರಾಪ್ತಕಾಲಂ ಯದೇಷೋಽಸ್ಮಾನ್ ಭರತೋ ದ್ರಷ್ಟುಮಿಚ್ಛತಿ ।
ಅಸ್ಮಾಸು ಮನಸಾಪ್ಯೇಷ ನಾಹಿತಂ ಕಿಂಚಿದಾಚರೇತ್ ॥೧೩॥

ಕಾಲೋಚಿತವಾಗಿ ಈ ಭರತನು ನಮ್ಮನ್ನು ನೋಡಲು ಬಯಸಿದ್ದಾನೆ. ನಮ್ಮಲ್ಲಿ ಅವನು ಮನಸಿನಿಂದಲೂ ಕೂಡ ಏನೂ ಅಹಿತವನ್ನು ಮಾಡಲಾರ.

ವಿಪ್ರಿಯಂ ಕೃತಪೂರ್ವಂ ತೇ ಭರತೇನ ಕದಾ ನು ಕಿಮ್ ।
ಈದೃಶಂ ವಾ ಭಯಂ ತೇಽದ್ಯ ಭರತಂ ಯದ್ವಿಶಂಕಸೇ ॥೧೪॥

ಭರತನು ನಿನಗಾದರೂ ಹಿಂದೆ ಯಾವಾಗ ಏನು ತಪ್ಪುಮಾಡಿದ್ದಾನೆ? ಅವನ ವಿಷಯದಲ್ಲಿ ನೀನು ಸಂದೇಹಪಡುತ್ತಿರುವೆ! ಅವನಿಂದ ಇಂಥ ಭಯ ನಿನಗೇಕೆ?

ನ ಹಿ ತೇ ನಿಷ್ಠುರಂ ವಾಚ್ಯೋ ಭರತೋ ನಾಪ್ರಿಯಂ ವಚಃ ।
ಅಹಂ ಹ್ಯಪ್ರಿಯಮುಕ್ತಃ ಸ್ಯಾಂ ಭರತಸ್ಯಾಪ್ರಿಯೇ ಕೃತೇ ॥೧೫॥

ನೀನು ಭರತನಿಗೆ ನಿಷ್ಠುರವಾದ ಅಪ್ರಿಯವಾದ ಮಾತನ್ನು ಆಡಬಾರದು. ಭರತನಿಗೆ ಮಾತಿನಿಂದ ಅಪ್ರಿಯವನ್ನುಂಟು ಮಾಡಿದರೆ ಅದು ನನ್ನನ್ನೇ ಅಪ್ರಿಯ ಮಾತಿನಿಂದ ಹಳಿದಂತಾಗುತ್ತದೆ.

ಭಕ್ತಿಯು ದ್ವೇಷ ರಹಿತವಾಗಿ ನಿರ್ಮಲವಾಗಿರಬೇಕು. 'ತದ್‌ಭಕ್ತದ್ವೇಷ ಏವ ಚ' ಎಂಬಂತೆ ಭಕ್ತನಲ್ಲಿ ಮಾಡುವ ದ್ವೇಷವು ಭಗವಂತನ ದ್ವೇಷವೇ ಆಗುತ್ತದೆ. ಅದನ್ನು ಅವನು ಸಹಿಸುವುದಿಲ್ಲ. ತನ್ನಲ್ಲಿ ದ್ವೇಷ ಮಾಡಿದರೂ ಅದನ್ನು ಸಹಿಸಬಲ್ಲ. ಅದರಿಂದ ಲಕ್ಷ್ಮಣನಿಗೆ ನಿರ್ಮಲಭಕ್ತಿಯನ್ನು ಅನುಗ್ರಹಿಸಿದ್ದಾನೆ ಭಗವಂತ.

ಲಕ್ಷ್ಮಣನಿಗೆ ಈ ವಿವೇಕವಿರಲಿಲ್ಲ ಎಂದು ತಿಳಿಯಬಾರದು. ಭರತನಲ್ಲಿ ಅವನಿಗೆ ಪ್ರೀತಿ ಇರಲಿಲ್ಲ ಎಂದೂ ತಿಳಿಯಬಾರದು. ತತ್ಕಾಲದಲ್ಲಿ ರಾಮನನ್ನು ಮನುಷ್ಯನೆಂದು ಬಗೆದು ಅವನಿಗೆ ಭರತನಿಂದ ಏನಾದರೂ ಅಪಾಯವಾದೀತೆಂದು ಭಯದಿಂದಲೇ ಭರತನನ್ನು ಕೊಂದು ಬಿಡುವ ಆಲೋಚನೆ ಮಾಡಿದ್ದಾನೆ. ರಾಮನು ಸಕಾಲದಲ್ಲಿ ಅವನಿಗೆ ವಿವೇಕವನ್ನು ಬೋಧಿಸಿದ್ದಾನೆ.

ಕಥಂ ನು ಪುತ್ರಾಃ ಪಿತರಂ ಹನ್ಯುಃ ಕಸ್ಯಾಂಚಿದಾಪದಿ ।
ಭ್ರಾತಾ ವಾ ಭ್ರಾತರಂ ಹನ್ಯಾತ್ ಸೌಮಿತ್ರೇ ಪ್ರಾಣಮಾತ್ಮನಃ ॥೧೬॥

ಎಂಥ ಆಪತ್ತು ಬಂದರೂ ಮಕ್ಕಳು ತಮಗೆ ಪ್ರಾಣಸಮಾನನಾದ ತಂದೆಯನ್ನು ಹೇಗೆ ಕೊಲ್ಲುವರು? ಸೋದರನು ತನಗೆ ಪ್ರಾಣಕ್ಕೆ ಸಮಾನನಾದ ಸೋದರನನ್ನು ಹೇಗೆ ಕೊಲ್ಲುವನು? ಅದರಿಂದ ಭರತನು ತನಗೆ ಪ್ರಾಣಕ್ಕೆ ಸಮಾನನಾದ ನನ್ನನ್ನು ಕೊಲ್ಲಬಹುದೆಂದು ಭಯ ನಿನಗೆ ಬೇಡ.

ಯದಿ ರಾಜ್ಯಸ್ಯ ಹೇತೋಸ್ತ್ವಮಿಮಾಂ ವಾಚಂ ಪ್ರಭಾಷಸೇ ।
ವಕ್ಷ್ಯಾಮಿ ಭರತಂ ದೃಷ್ಟ್ವಾ ರಾಜ್ಯಮಸ್ಮೈ ಪ್ರದೀಯತಾಮ್ ॥೧೭॥

ಒಂದುವೇಳೆ ನೀನೇ ರಾಜ್ಯವನ್ನು ಪಡೆದುಕೊಳ್ಳುವ ಆಕಾಂಕ್ಷೆಯಿಂದ, ಭರತನಿಂದ ಅಪಾಯ ಸಂಭವವನ್ನು ನೆಪಮಾಡಿಕೊಂಡು, ನೀನು ಈ ಮಾತುಗಳನ್ನು ಆಡುತ್ತಿರುವೆಯಾದರೆ, ಹಾಗೇ ಹೇಳು, ನಾನು ಭರತನನ್ನು ಕಂಡು 'ರಾಜ್ಯವನ್ನು ಲಕ್ಷ್ಮಣನಿಗೆ ಬಿಟ್ಟುಕೊಡು' ಎನ್ನುವೆನು.

ಉಚ್ಯಮಾನೋಽಪಿ ಭರತೋ ಮಯಾ ಲಕ್ಷ್ಮಣ ತದ್ವಚಃ ।
ರಾಜ್ಯಮಸ್ಮೈ ಪ್ರಯಚ್ಛೇತಿ ಬಾಢಮಿತ್ಯೇವ ವಕ್ಷ್ಯತಿ ॥೧೮॥

ಲಕ್ಷ್ಮಣ, 'ರಾಜ್ಯವನ್ನು ಲಕ್ಷ್ಮಣನಿಗೆ ಬಿಟ್ಟು ಕೊಡೆಂ'ದು ಒಂದು ಮಾತನ್ನು ನಾನು ಹೇಳಿದರೂ ಸಾಕು ಭರತನು 'ಆಗಲಿ' ಎಂದೇ ಹೇಳುತ್ತಾನೆ.

ತಥೋಕ್ತೋ ಧರ್ಮಶೀಲೇನ ಭ್ರಾತ್ರಾ ತಸ್ಯ ಹಿತೇ ರತಃ ।
ಲಕ್ಷ್ಮಣಃ ಪ್ರವಿವೇಶೇವ ಸ್ವಾನಿ ಗಾತ್ರಾಣಿ ಲಜ್ಜಯಾ ॥೧೯॥

ಧರ್ಮಶೀಲನಾದ ಸೋದರ ಶ್ರೀರಾಮನು ಹೀಗೆ ಹೇಳಿದಾಗ ಅವನ ಹಿತ ಒಂದರಲ್ಲಿಯೇ ಆಸಕ್ತನಾದ ಲಕ್ಷ್ಮಣನು ನಾಚಿಕೆಯಿಂದ ತನ್ನೊಳಗೇ ತಾನು ಅಡಗಿದಂತೆ ಕಂಡುಬಂದನು.

ತದಾಖ್ಯಂ ಲಕ್ಷ್ಮಣಃ ಶ್ರುತ್ವಾ ವ್ರೀಡಿತಃ ಪ್ರತ್ಯುವಾಚ ಹ ।
ತ್ವಾಂ ಮನ್ಯೇ ದ್ರಷ್ಟುಮಾಯಾತಃ ಪಿತಾ ದಶರಥಃ ಸ್ವಯಮ್ ॥೨೦॥

ಶ್ರೀರಾಮನಾಡಿದ ಈ ಮಾತನ್ನು ಲಕ್ಷ್ಮಣನು ಕೇಳಿ ನಾಚಿ ಪ್ರಸಂಗವನ್ನು ಬದಲಿಸಿ ನುಡಿದನು. 'ನೀನೇನು ಹೇಳುವೆಯೋ ಎಂದು ತಿಳಿಯುವುದಕ್ಕಾಗಿ ನಾನು ಹೀಗೆ ಹೇಳಿದೆನಷ್ಟೆ. ವಸ್ತುತಃ ನಿನ್ನನ್ನು ನೋಡಲೆಂದು ತಂದೆ ದಶರಥನೆ ಸ್ವತಃ ಬಂದಿರಬೇಕೆಂದು ನಾನು ಭಾವಿಸುತ್ತೇನೆ'.

ವ್ರೀಡಿತಂ ಲಕ್ಷ್ಮಣಂ ದೃಷ್ಟ್ವಾ ರಾಘವಃ ಪ್ರತ್ಯುವಾಚ ಹ ।
ಏಷ ಮನ್ಯೇ ಮಹಾಬಾಹುರಿಹಾಸ್ಮಾನ್ ದ್ರಷ್ಟುಮಾಗತಃ ॥೨೧॥

ನಾಚಿಕೆಯಿಂದ ಲಕ್ಷ್ಮಣನು ಪ್ರಸಂಗವನ್ನು ಮರೆಮಾಡುತ್ತಿದ್ದಾನೆ ಎಂದು ತಿಳಿದ ಶ್ರೀರಾಮನು ಅವನ ಲಜ್ಜೆಯನ್ನು ಹೋಗಲಾಡಿಸಲು ನುಡಿದನು— ಅದು ಸರಿ. ನಾನೂ ಮಹಾಬಾಹು ದಶರಥನು ನನ್ನನ್ನು ಕಾಣಲೆಂದು ಬಂದಿರುವನೆಂದು ಭಾವಿಸುತ್ತೇನೆ.

ಅಥವಾ ನೌ ಧ್ರುವಂ ಮನ್ಯೇ ಮನ್ಯಮಾನಃ ಸುಖೋಚಿತೌ ।
ವನವಾಸಮನುಧ್ಯಾಯ ಗೃಹಾಯ ಪ್ರತಿನೇಷ್ಯತಿ ॥೨೨॥

ಅಥವಾ ನಮ್ಮನ್ನು ಸುಖಪಡಲು ಯೋಗ್ಯರೆಂದು ಆಲೋಚಿಸಿ ವನವಾಸವು ನಮಗೆ ಕಷ್ಟಕರವಾಗುವುದೆಂದು ಬಗೆದು ಮನೆಗೆ ಕರೆದೊಯ್ಯುವನೆಂದೇ ನಿಶ್ಚಿತವಾಗಿ ತಿಳಿಯುತ್ತೇನೆ.

ಇಮಾಂ ವಾಪ್ಯೇಷ ವೈದೇಹೀಮತ್ಯಂತಸುಖಸೇವಿನೀಮ್ ।
ಪಿತಾ ಮೇ ರಾಘವಃ ಶ್ರೀಮಾನ್ ವನಾದಾದಾಯ ಯಾಸ್ಯತಿ ॥೨೩॥

ಅಥವಾ ಅತ್ಯಂತ ಸುಖಾನುಭವಕ್ಕೇ ಯೋಗ್ಯಳಾದ ಸೀತೆಯನ್ನಾದರೂ ನನ್ನ ತಂದೆ ಶ್ರೀಮಾನ್ ದಶರಥನು ಕಾಡಿನಿಂದ ಕರೆದುಕೊಂಡು ಹೋಗುವನು.

ಏತೌ ತೌ ಸಂಪ್ರಕಾಶೇತೇ ಗೋತ್ರವಂತೌ ಮನೋರಮೌ ।
ವಾಯುವೇಗಸಮೌ ವೀರ ಜವನೌ ತುರಗೋತ್ತಮೌ ॥೨೪॥

ವೀರನೆ, ಒಳ್ಳೆಯ ಜಾತಿಯ ವಾಯುವೇಗದಿಂದ ಓಡುವ ಸುಂದರವಾಗಿರುವ ದಶರಥನ ಎರಡು ವೇಗದ ಶ್ರೇಷ್ಠ ಕುದುರೆಗಳು ಇವು ಕಂಗೊಳಿಸುತ್ತಿವೆ.

ಸ ಏಷ ಸುಮಾಹಾಕಾಯಃ ಕಂಪತೇ ವಾಹಿನೀಮುಖೇ ।
ನಾಗಃ ಶತ್ರುಂಜಯೋ ನಾಮ ವೃದ್ಧಸ್ತಾತಸ್ಯ ಧೀಮತಃ ॥೨೫॥

ಸೈನ್ಯದ ಮುಂಭಾಗದಲ್ಲಿ ಮಹಾಕಾಯದ ವಯಸ್ಸಾದ ಶತ್ರುಂಜಯವೆಂಬ ಧೀಮಂತ ದಶರಥನ ಆನೆ, ನಾನು ಸುಯಜ್ಞನಿಗೆ ನೀಡಿದ ಆನೆಗಿಂತ ಬೇರೆಯಾದ ಇನ್ನೊಂದು ಆನೆ, ಇದು ಮುಂದೆ ಬರುತ್ತಿದೆ.

ನ ತು ಪಶ್ಯಾಮಿ ತಚ್ಛತ್ರಂ ಪಾಂಡರಂ ಲೋಕಸತ್ಕೃತಮ್ ।
ಪಿತುರ್ದಿವ್ಯಂ ಮಹಾಬಾಹೋ ಸಂಶಯೋ ಭವತೀಹ ಮೇ ॥೨೬॥

ಆದರೆ ಮಹಾಬಾಹು ಲಕ್ಷ್ಮಣ, ಸರ್ವಲೋಕಪೂಜಿತವಾದ ದಿವ್ಯವಾದ ಪಿತನ ಶ್ವೇತಚ್ಛತ್ರವು ಮಾತ್ರ ಕಾಣಿಸುತ್ತಿಲ್ಲ. ಅದರಿಂದ ಇವನು ದಶರಥನೇ ಎನ್ನುವಲ್ಲಿ ಸಂಶಯ ಬರುತ್ತಿದೆ.

ವೃಕ್ಷಾಗ್ರಾದವರೋಹ ತ್ವಂ ಕುರು ಲಕ್ಷ್ಮಣ ಮದ್ವಚಃ ।
ಇತೀವ ರಾಮೋ ಧರ್ಮಾತ್ಮಾ ಸೌಮಿತ್ರಿಂ ತಮುವಾಚ ಹ ॥೨೭॥

'ಲಕ್ಷ್ಮಣ, ನೀನು ಮರದ ತುದಿಯಿಂದ ಕೆಳಗೆ ಇಳಿ. ನಾನು ಹೇಳುವಂತೆ ಮಾಡು'. ಹೀಗೆ ಧರ್ಮಾತ್ಮನಾದ ರಾಮನು ಲಕ್ಷ್ಮಣನಿಗೆ ಹೇಳಿದನು.

ಅವತೀರ್ಯ ತು ಸಾಲಾಗ್ರಾತ್ತಸ್ಮಾತ್ ಸ ಸಮಿತಿಂಜಯಃ ।
ಲಕ್ಷ್ಮಣಃ ಪ್ರಾಂಜಲಿರ್ಭೂತ್ವಾ ತಸ್ಥೌ ರಾಮಸ್ಯ ಪಾರ್ಶ್ವತಃ ॥೨೮॥

ಯುದ್ಧದಲ್ಲಿ ಜಯಶಾಲಿಯಾಗುವ ಲಕ್ಷ್ಮಣನು ಆ ಸಾಲವೃಕ್ಷದ ತುದಿಯಿಂದ ಕೆಳಗಿಳಿದು ಕೈಮುಗಿದು ರಾಮನ ಪಾರ್ಶ್ವದಲ್ಲಿ ನಿಂತನು.

ಭರತೇನಾಥ ಸಂದಿಷ್ಟಾ ಸಂಮರ್ದೋ ನ ಭವೇದಿತಿ ।
ಸಮಂತಾತ್ತಸ್ಯ ಶೈಲಸ್ಯ ಸೇನಾ ವಾಸಮಕಲ್ಪಯತ್ ॥೨೯॥

ಅತ್ತ ಭರತನು ರಾಮಾಶ್ರಮದಲ್ಲಿ ಜನರ ದಟ್ಟಣೆಯಾಗಬಾರದೆಂದು ಆದೇಶಮಾಡಿದ್ದರಿಂದ ಬೆಟ್ಟದ ಸುತ್ತಲೂ ಸೈನ್ಯವು ಬಿಡಾರ ಮಾಡಿಕೊಂಡಿತು.

ಅಧ್ಯರ್ಧಮಿಕ್ಷ್ವಾಕುಚಮೂರ್ಯೋಜನಂ ಪರ್ವತಸ್ಯ ಸಾ ।
ಪಾರ್ಶ್ವೇ ನ್ಯವಿಶದಾವೃತ್ಯ ಗಜವಾಜಿರಥಾಕುಲಾ ॥೩೦॥

ಗಜ ಅಶ್ವ ರಥ ಸೈನ್ಯಗಳಿಂದ ಕೂಡಿದ ಭರತನ ಆ ಸೇನೆಯು ಬೆಟ್ಟದ ಪಾರ್ಶ್ವದಲ್ಲಿ ಒಂದುವರೆ ಯೋಜನದಷ್ಟು ಭೂಮಿಯನ್ನು ಆವರಿಸಿ ಬೀಡುಬಿಟ್ಟಿತು.

ಸಾ ಚಿತ್ರಕೂಟೇ ಭರತೇನ ಸೇನಾ
ಧರ್ಮಂ ಪುರಸ್ಕೃತ್ಯ ವಿಧೂಯ ದರ್ಪಮ್ ।
ಪ್ರಸಾದನಾರ್ಥಂ ರಘುನಂದನಸ್ಯ
ವಿರಾಜತೇ ನೀತಿಮತಾ ಪ್ರಣೀತಾ ॥೩೧॥

ನೀತಿಜ್ಞನಾದ ಭರತನು ನಡೆಸಿದ ಆ ಸೇನೆಯು ಚಿತ್ರಕೂಟದಲ್ಲಿ ರಾಮನನ್ನು ಒಲಿಸಿಕೊಳ್ಳುವುದಕ್ಕಾಗಿ ಧರ್ಮವನ್ನು ಪುರಸ್ಕರಿಸಿ ದರ್ಪವನ್ನು ತೊರೆದು ರಾರಾಜಿಸಿತು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ತೊಂಬತ್ತೇಳನೇ ಸರ್ಗ ಮುಗಿಯಿತು.

❖

ಅಷ್ಟನವತಿತಮಃ ಸರ್ಗಃ

ಸರ್ಗ – 98

ಶ್ರೀರಾಮನನ್ನು ಹುಡುಕುತ್ತ ಭರತನು ಆಶ್ರಮದ ಕಡೆಗೆ ಬರುವುದು.

ನಿವೇಶ್ಯ ಸೇನಾಂ ತು ವಿಭುಃ ಪದ್ಭ್ಯಾಂ ಪಾದವತಾಂ ವರಃ ।
ಅಭಿಗಂತುಂ ಸ ಕಾಕುತ್ಸ್ಥಮಿಯೇಷ ಗುರುವರ್ತಕಮ್ ॥೧॥

ನರಶ್ರೇಷ್ಠನಾದ ವಿಭುವಾದ ಭರತನು ಸೇನೆಯನ್ನು ಬೆಟ್ಟದ ಕೆಳಗೆ ನಿಲ್ಲಿಸಿ ಪಿತೃವಾಕ್ಯಪರಿಪಾಲಕನಾದ ಶ್ರೀರಾಮನನ್ನು ಕಾಲ್ನಡಿಗೆಯಿಂದ ನಡೆದು ಬಳಿ ಸೇರಲು ಬಯಸಿದ.

ನಿವಿಷ್ಟಮಾತ್ರೇ ಸೈನ್ಯೇ ತು ಯಥೋದ್ದೇಶಂ ವಿನೀತವತ್ ।
ಭರತೋ ಭ್ರಾತರಂ ವಾಕ್ಯಂ ಶತ್ರುಘ್ನಮಿದಮಬ್ರವೀತ್ ॥೨॥

ಸೈನ್ಯವು ಆಯಾ ಪ್ರದೇಶಗಳಲ್ಲಿ ಬೀಡುಬಿಟ್ಟೊಡನೆ ವಿನೀತನಾದ ಸೋದರ ಶತ್ರುಘ್ನನಿಗೆ ಭರತನು ನುಡಿದನು.

ಕ್ಷಿಪ್ರಂ ವನಮಿದಂ ಸೌಮ್ಯ ನರಸಂಘೈಃ ಸಮಂತತಃ ।
ಲುಬ್ಧೈಶ್ಚ ಸಹಿತೈರೇಭಿಸ್ತ್ವಮನ್ವೇಷಿತುಮರ್ಹಸಿ ॥೩॥

ಸೌಮ್ಯನೆ, ನೀನು ಬೇಡರೊಂದಿಗೆ ಮತ್ತು ಬೇರೆ ಮನುಷ್ಯರೊಂದಿಗೆ ಈ ಅರಣ್ಯವನ್ನು ಎಲ್ಲೆಡೆ ಬೇಗನೆ ಶೋಧನೆ ಮಾಡು.

ಗುಹೋ ಜ್ಞಾತಿಸಹಸ್ರೇಣ ಶರಚಾಪಾಸಿಧಾರಿಣಾ ।
ಸಮನ್ವೇಷತು ಕಾಕುತ್ಸ್ಥಮಸ್ಮಿನ್ ಪರಿವೃತಃ ಸ್ವಯಮ್ ॥೪॥

ಗುಹನೂ ಧನುರ್ಬಾಣ ಖಡ್ಗಗಳನ್ನು ಹಿಡಿದಿರುವ ತನ್ನ ಜ್ಞಾತಿಗಳಿಂದ ಪರಿವೃತನಾಗಿ ಈ ಅರಣ್ಯದಲ್ಲಿ ಸ್ವತಃ ರಾಮಲಕ್ಷ್ಮಣರನ್ನು ಹುಡುಕಲಿ.

ಅಮಾತ್ಯೈಃ ಸಹ ಪೌರೈಶ್ಚ ಗುರುಭಿಶ್ಚ ದ್ವಿಜಾತಿಭಿಃ ।
ವನಂ ಸರ್ವಂ ಚರಿಷ್ಯಾಮಿ ಪದ್ಭ್ಯಾಂ ಪರಿವೃತಃ ಸ್ವಯಮ್ ॥೫॥

ಅಮಾತ್ಯರಿಂದ ಪೌರರಿಂದ ಗುರುಗಳಿಂದ ದ್ವಿಜರಿಂದ ಕೂಡಿಕೊಂಡು ನಾನೂ ಸ್ವತಃ ಕಾಲ್ನಡಿಗೆಯಿಂದ ಇಡೀ ಅರಣ್ಯವನ್ನು ಸಂಚರಿಸುತ್ತೇನೆ.

ಯಾವನ್ನ ರಾಮಂ ದ್ರಕ್ಷ್ಯಾಮಿ ಲಕ್ಷ್ಮಣಂ ವಾ ಮಹಾಬಲಮ್ ।
ವೈದೇಹೀಂ ವಾ ಮಹಾಭಾಗಾಂ ನ ಮೇ ಶಾಂತಿರ್ಭವಿಷ್ಯತಿ ॥೬॥

ರಾಮನನ್ನಾಗಲಿ ಮಹಾಬಲಿಯಾದ ಲಕ್ಷ್ಮಣನನ್ನಾಗಲಿ ಮಹಾಭಾಗ್ಯವತಿ ಸೀತೆಯನ್ನಾಗಲಿ ನೋಡದೆ ನನಗೆ ಮನಃಶಾಂತಿ ಉಂಟಾಗಲಾರದು.

ಯಾವನ್ನ ಚಂದ್ರಸಂಕಾಶಂ ದ್ರಕ್ಷ್ಯಾಮಿ ಶುಭಮಾನನಮ್ ।
ಭ್ರಾತುಃ ಪದ್ಮಪಲಾಶಾಕ್ಷಂ ನ ಮೇ ಶಾಂತಿರ್ಭವಿಷ್ಯತಿ ॥೭॥

ಕಮಲದಳ ನಯನವಾದ ಚಂದ್ರನಂಥ ಶುಭಕರವಾದ ಸೋದರ ರಾಮನ ಮುಖವನ್ನು ಕಾಣದೆ ನನಗೆ ಮನಃಶಾಂತಿ ಉಂಟಾಗಲಾರದು.

ಯಾವನ್ನ ಚರಣೌ ಭ್ರಾತುಃ ಪಾರ್ಥಿವವ್ಯಂಜನಾನ್ವಿತೌ ।
ಪ್ರಗ್ರಹೀಷ್ಯಾಮಿ ಶಿರಸಾ ನ ಮೇ ಶಾಂತಿರ್ಭವಿಷ್ಯತಿ ॥೮॥

ರಾಜಲಕ್ಷಣಗಳಿಂದೊಪ್ಪುವ ಸೋದರ ರಾಮನ ಪಾದಗಳನ್ನು ಶಿರಸಾ ನಮಿಸದೆ ನನಗೆ ಮನಃಶಾಂತಿ ಉಂಟಾಗಲಾರದು.

ಯಾವನ್ನ ರಾಜ್ಯೇ ರಾಜ್ಯಾರ್ಹಃ ಪಿತೃಪೈತಾಮಹೇ ಸ್ಥಿತಃ ।
ಅಭಿಷೇಕಜಲಕ್ಲಿನ್ನೋ ನ ಮೇ ಶಾಂತಿರ್ಭವಿಷ್ಯತಿ ॥೯॥

ಎಂದಿನವರೆಗೆ ರಾಜ್ಯಾರ್ಹನಾದ ರಾಮನು ಪಿತೃಪಿತಾಮಹರು ಆಳಿದ ರಾಜಸಿಂಹಾಸನದಲ್ಲಿ ಕುಳಿತು ಅಭಿಷೇಕಜಲದಿಂದ ಒದ್ದೆಯಾಗುವುದಿಲ್ಲವೋ ಅಂದಿನವರೆಗೆ ನನಗೆ ಮನಃಶಾಂತಿ ಉಂಟಾಗಲಾರದು..

ಸಿದ್ಧಾರ್ಥಃ ಖಲು ಸೌಮಿತ್ರಿರ್ಯಶ್ಚಂದ್ರವಿಮಲೋಪಮಮ್ ।
ಮುಖಂ ಪಶ್ಯತಿ ರಾಮಸ್ಯ ರಾಜೀವಾಕ್ಷಂ ಮಹಾದ್ಯುತಿ ॥೧೦॥

ಕಳಂಕವಿಲ್ಲದ ಚಂದ್ರನಂಥ ಮುಖಉಳ್ಳ ಕಮಲನಯನವಾದ ಮಹಾಕಾಂತಿ ಉಳ್ಳ ರಾಮನ ಮುಖವನ್ನು ಲಕ್ಷ್ಮಣ ಕಾಣುತ್ತಾನೆ. ಅವನೇ ಧನ್ಯ.

ಕೃತಕೃತ್ಯಾ ಮಹಾಭಾಗಾ ವೈದೇಹೀ ಜನಕಾತ್ಮಜಾ ।
ಭರ್ತಾರಂ ಸಾಗರಾಂತಾಯಾಃ ಪೃಥಿವ್ಯಾ ಯಾನುಗಚ್ಛತಿ ॥೧೧॥

ಸಾಗರಪರ್ಯಂತ ಪೃಥಿವಿಗೆ ಅಧಿಪತಿಯಾದ ರಾಮನ ಹಿಂದೆ ಹಿಂದೇ ನಡೆಯುವ ಜನಕಕುಮಾರಿ ಸೀತೆಯೇ ಮಹಾಭಾಗ್ಯವತಿ ಕೃತಕೃತ್ಯೆ.

ಸುಭಗಶ್ಚಿತ್ರಕೂಟೋಽಸೌ ಗಿರಿರಾಜೋಪಮೋ ಗಿರಿಃ ।
ಯಸ್ಮಿನ್ ವಸತಿ ಕಾಕುತ್ಸ್ಥಃ ಕುಬೇರ ಇವ ನಂದನೇ ॥೧೨॥

ಗಿರಿರಾಜ ಹಿಮಾಲಯನಂತಿರುವ ಚಿತ್ರಕೂಟ ಪರ್ವತವು ಭಾಗ್ಯಶಾಲಿ. ಏಕೆಂದರೆ ನಂದನದಲ್ಲಿ ಕುಬೇರನು ವಿಹರಿಸುವಂತೆ ರಾಮನು ಚಿತ್ರಕೂಟದಲ್ಲಿ ವಿಹರಿಸುತ್ತಾನೆ.

ಕೃತಕಾರ್ಯಮಿದಂ ದುರ್ಗಂ ವನಂ ವ್ಯಾಲನಿಷೇವಿತಮ್ ।
ಯದಧ್ಯಾಸ್ತೇ ಮಹಾತೇಜಾ ರಾಮಃ ಶಸ್ತ್ರಭೃತಾಂ ವರಃ ॥೧೩॥

ಹಿಂಸ್ರಮೃಗಗಳಿಂದ ತುಂಬಿದ ಈ ದುರ್ಗಮವಾದ ಅರಣ್ಯವು ಕೃತಕೃತ್ಯವಾಗಿದೆ. ಏಕೆಂದರೆ ಇಲ್ಲಿ ಶಸ್ತ್ರಧಾರಿಗಳಲ್ಲಿ ಶ್ರೇಷ್ಠನಾದ ಮಹಾತೇಜನಾದ ರಾಮನು ವಾಸ-ಮಾಡುತ್ತಿದ್ದಾನೆ.

ಏವಮುಕ್ತ್ವಾ ಮಹಾತೇಜಾ ಭರತಃ ಪುರುಷರ್ಷಭಃ ।
ಪದ್ಭ್ಯಾಮೇವ ಮಹಾಬಾಹುಃ ಪ್ರವಿವೇಶ ಮಹದ್ವನಮ್ ॥೧೪॥

ಹೀಗೆ ಹೇಳಿ ಮಹಾತೇಜಮಹಾಬಾಹು ಪುರುಷೋತ್ತಮನಾದ ಭರತನು ಕಾಲ್ನಡಿಗೆಯಿಂದಲೇ ಮಹಾಅರಣ್ಯವನ್ನು ಪ್ರವೇಶಿಸಿದನು.

ಸ ತಾನಿ ದ್ರುಮಜಾಲಾನಿ ಜಾತಾನಿ ಗಿರಿಸಾನುಷು ।
ಪುಷ್ಪಿತಾಗ್ರಾಣಿ ಮಧ್ಯೇನ ಜಗಾಮ ವದತಾಂ ವರಃ ॥೧೫॥

ಮಾತುಗಾರರಲ್ಲಿ ಶ್ರೇಷ್ಠನಾದ ಭರತನು ಬೆಟ್ಟದ ತಪ್ಪಲುಗಳಲ್ಲಿ ಬೆಳೆದ, ತುದಿಯಲ್ಲಿ ಹೂಬಿಟ್ಟಿರುವ ಮರದ ಸಮೂಹಗಳ ನಡುವೆ ನಡೆದನು.

ಸ ಗೀರೇಶ್ಚಿತ್ರಕೂಟಸ್ಯ ಸಾಲಮಾಸಾದ್ಯ ಪುಷ್ಪಿತಮ್ ।
ರಾಮಾಶ್ರಮಗತಸ್ಯಾಗ್ನೇರ್ದದರ್ಶ ಧ್ವಜಮುಚ್ಛ್ರಿತಮ್ ॥೧೬॥

ಭರತನು ಚಿತ್ರಕೂಟ ಪರ್ವತದಲ್ಲಿ ಹೂಬಿಟ್ಟ ಸಾಲವೃಕ್ಷದ ಬಳಿಗೆ ಹೋಗಿ ರಾಮಾಶ್ರಮದಲ್ಲಿದ್ದ ಅಗ್ನಿಯಿಂದ ಉನ್ನತವಾದ ಧೂಮ ಹೊರಡುವುದನ್ನು ಕಂಡನು.

ಹಿಂದೆ (93.26) ಭರತೋ ಯತ್ರ ಧೂಮಾಗ್ರಂ ತತ್ರ ದೃಷ್ಟಿಂ ಸಮಾದಧೇ' ಎಂದು ಹೇಳಿದ್ದು ದೂರದಿಂದ ಧೂಮಾಗ್ರವನ್ನು ಭರತ ನೋಡಿದನೆಂದು. ಇಲ್ಲಿ ಹೇಳುತ್ತಿರುವುದು 'ದದರ್ಶ ಧ್ವಜಮುಚ್ಛ್ರಿತಂ' ಹತ್ತಿರದಿಂದ ಎತ್ತರಕ್ಕೆ ಏರುತ್ತಿರುವ ಧೂಮವನ್ನು ನೋಡಿದನೆಂದು. ಅದರಿಂದಲೇ ಇಲ್ಲಿ ಮುಂದಿನ ಶ್ಲೋಕದಲ್ಲಿ 'ಸಮುದ್ರದ ಆಚೆದಡವನ್ನು ಸೇರಿದಂತೆ ಆನಂದಿಸಿದ' ಎಂದಿದೆ. ಯದ್ಯಪಿ ಇಲ್ಲಿ ಇನ್ನೂ ಆಶ್ರಮವನ್ನು ಕಂಡಿಲ್ಲ. ಮುಂದೆ (99.4) ಒಂದು ಆಶ್ರಮವನ್ನು ಕಂಡು ಅದುವೆ ರಾಮಾಶ್ರಮವಿರಬಹುದೆಂದು ಊಹಿಸುತ್ತಾನೆ.

ತಂ ದೃಷ್ಟ್ವಾ ಭರತಃ ಶ್ರೀಮಾನ್ ಮುಮೋದ ಸಹಬಾಂಧವಃ ।
ಅತ್ರ ರಾಮ ಇತಿ ಜ್ಞಾತ್ವಾ ಗತಃ ಪಾರಮಿವಾಂಭಸಃ ॥೧೭॥

ಎತ್ತರಕ್ಕೆ ಏರುತ್ತಿದ್ದ ಹೊಗೆಯನ್ನು ಕಂಡು ಬಾಂಧವರೊಂದಿಗೆ ಶ್ರೀಮಾನ್ ಭರತನು 'ಇಲ್ಲಿ ರಾಮನಿರಬಹುದು' ಎಂದು ಊಹಿಸಿ ಆನಂದಭರಿತನಾದನು.

ಸ ಚಿತ್ರಕೂಟೇ ತು ಗಿರೌ ನಿಶಮ್ಯ
ರಾಮಾಶ್ರಮಂ ಪುಣ್ಯಜನೋಪಪನ್ನಮ್ ।
ಗುಹೇನ ಸಾರ್ಧಂ ತ್ವರಿತೋ ಜಗಾಮ
ಪುನರ್ನಿವೇಶ್ಯೈವ ಚಮೂಂ ಮಹಾತ್ಮಾ ॥೧೮॥

ತಪಸ್ವಿಜನರಿಂದ ಯುಕ್ತವಾದ ರಾಮಾಶ್ರಮವನ್ನು ಚಿತ್ರಕೂಟಪರ್ವತದಲ್ಲಿ ಇಲ್ಲಿಯೇ ಇದೆ ಎಂದು ಊಹಿಸಿ ಮಹಾತ್ಮ ಭರತನು ಬೇಡರ ಸೈನ್ಯವನ್ನು ಹಿಂದೆ ನಿಲ್ಲಿಸಿ ಪುನಃ ಗುಹನೊಂದಿಗೆ ಬೇಗನೆ ಮುಂದೆ ನಡೆದನು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ತೊಂಬತ್ತೆಂಟನೇ ಸರ್ಗ ಮುಗಿಯಿತು.

❖

ಏಕೋನಶತತಮಃ ಸರ್ಗಃ

ಸರ್ಗ – 99

ಭರತನು ಶ್ರೀರಾಮನ ದರ್ಶನ ಮಾಡುವುದು.

ನಿವಿಷ್ಟಾಯಾಂ ತು ಸೇನಾಯಾಮುತ್ಸುಕೋ ಭರತಸ್ತತಃ ।
ಜಗಾಮ ಭ್ರಾತರಂ ದ್ರಷ್ಟುಂ ಶತ್ರುಘ್ನಮನುದರ್ಶಯನ್ ॥೧॥

ಬೇಡರ ಸೈನ್ಯವು ಬೀಡುಬಿಟ್ಟ ಬಳಿಕ ಉತ್ಸುಕನಾದ ಭರತನು ಶತ್ರುಘ್ನನಿಗೆ ರಾಮಾಶ್ರಮ ಇನ್ನು ಸಮೀಪದಲ್ಲಿಯೇ ಇದೆ ಎನ್ನುವುದರ ಚಿಹ್ನೆಗಳನ್ನು ತೋರಿಸುತ್ತ ನಡೆದನು.

ಋಷಿಂ ವಸಿಷ್ಠಂ ಸಂದಿಶ್ಯ ಮಾತ್ಸ್ಯಾಮೇ ಶೀಘ್ರಮಾನಯ ।
ಇತಿ ತ್ವರಿತಮಗ್ರೇ ಸ ಜಗಾಮ ಗುರುವತ್ಸಲಃ ॥೨॥

ಮಹಾಸೈನ್ಯ ಬೀಡುಬಿಟ್ಟಿರುವಲ್ಲಿ ನಿಂತ ಮಾತೆಯರನ್ನು ಬೇಗನೆ ಕರೆತರಲು ವಸಿಷ್ಠ ಮುನಿಗಳಿಗೆ ಹೇಳಿ ಸೋದರ ವತ್ಸಲನಾದ ಭರತನು ತ್ವರೆಯಿಂದ ಮುಂದೆ ನಡೆದನು.

ಸುಮಂತ್ರಸ್ತ್ವಪಿ ಶತ್ರುಘ್ನಮದೂರಾದನ್ವಪದ್ಯತ ।
ರಾಮದರ್ಶನಜಸ್ತರ್ಷೋ ಭರತಸ್ಯೇವ ತಸ್ಯ ಚ ॥೩॥

ಸುಮಂತ್ರನೂ ಕೂಡ ಶತ್ರುಘ್ನನಿಗೆ ಸಮೀಪದಲ್ಲಿ ನಡೆದುಬಂದನು. ರಾಮ-ದರ್ಶನದ ತೀವ್ರ ಅಭಿಲಾಷೆ ಭರತನಂತೇ ಸುಮಂತ್ರನಿಗೂ ಇತ್ತು.

ಗಚ್ಛನ್ನೇವ ಮಹಾಬಾಹುರ್ದ್ಯುತಿಮಾನ್ ಭರತಸ್ತದಾ ।
ಶತ್ರುಘ್ನಂ ಚಾಬ್ರವೀದ್ಧೃಷ್ಟಸ್ತಾನಮಾತ್ಯಾಂಶ್ಚ ಸರ್ವಶಃ ॥೪॥

ಮಹಾಬಾಹು ಕಾಂತಿಮಂತನಾದ ಭರತನು ಮುಂದೆ ನಡೆಯುತ್ತಲೇ ಶತ್ರುಘ್ನ-ನಿಗೂ ಆ ಅಮಾತ್ಯರಿಗೂ ಉತ್ಸಾಹದಿಂದ ಎಲ್ಲರಿಗೂ ಹೀಗೆ ಹೇಳಿದನು.

ಮನ್ಯೇ ಪ್ರಾಪ್ತಾಃ ಸ್ಮ ತಂ ದೇಶಂ ಭರದ್ವಾಜೋ ಯಮಬ್ರವೀತ್ ।
ನಾತಿದೂರೇ ಹಿ ಮನ್ಯೇಽಹಂ ನದೀಂ ಮಂದಾಕಿನೀಮಿತಃ ॥೫॥

ಭರದ್ವಾಜರು ಹೇಳಿದ ಪ್ರದೇಶಕ್ಕೇ ನಾವು ಬಂದಿರುವಂತೆ ಕಾಣುತ್ತದೆ. ಏಕೆಂದರೆ ಇಲ್ಲಿಗೆ ಸಮೀಪದಲ್ಲಿ ಕಾಣುವ ನದಿಯು ಮಂದಾಕಿನಿಯೆ ಇರಬೇಕು.

ಗಚ್ಛನ್ನೇವಾಥ ಭರತಸ್ತಾಪಸಾಲಯಸಂಶ್ರಿತಾಮ್ ।
ಭ್ರಾತುಃ ಪರ್ಣಕುಟೀಂ ಶ್ರೀಮಾನುಟಜಂ ಚ ದದರ್ಶ ಹ ॥೬॥

ಬಳಿಕ ಶ್ರೀಮಾನ್ ಭರತನು ಮುಂದೆ ಹೋಗುತ್ತಲೇ ತಪಸ್ವಿಗಳ ಆಶ್ರಮಗಳ ನಡುವೆ ಸೋದರ ರಾಮನ ಪರ್ಣಶಾಲೆಯನ್ನೂ ಗುಡಿಸಲನ್ನೂ ದೂರದಿಂದ ಕಂಡನು.

ಶಾಲಾಯಾಸ್ತ್ವಗ್ರತಸ್ತಸ್ಯಾ ದದರ್ಶ ಭರತಸ್ತದಾ ।
ಕಾಷ್ಠಾನಿ ಚಾವಭಗ್ನಾನಿ ಪುಷ್ಪಾಣ್ಯಪಚಿತಾನಿ ಚ ॥೭॥

ಪರ್ಣಶಾಲೆಯ ಮುಂಭಾಗದಲ್ಲಿ ಸೀಳಿದ ಕಟ್ಟಿಗೆಗಳನ್ನೂ ಕೊಯ್ದಿರಿಸಿದ ಹೂಗಳನ್ನು ಕಂಡನು.

ಸಲಕ್ಷ್ಮಣಸ್ಯ ರಾಮಸ್ಯ ದದರ್ಶಾಶ್ರಮಮೀಯುಷಃ ।
ಕೃತಂ ವೃಕ್ಷೇಷ್ವಭಿಜ್ಞಾನಂ ಕುಶಚೀರೈಃ ಕ್ವಚಿತ್ ಕ್ವಚಿತ್ ॥೮॥

ರಾಮಲಕ್ಷ್ಮಣರು ತಮ್ಮ ಆಶ್ರಮಕ್ಕೆ ಹೋಗಲು ಗುರುತಿಗಾಗಿ ಮರದ ಬುಡ-ಗಳಲ್ಲಿ ಅಲ್ಲಲ್ಲಿ ದರ್ಭೆಗಳನ್ನೂ ನಾರುಮಡಿಗಳನ್ನೂ ಇರಿಸಿದ್ದರು.

ದದರ್ಶ ಚ ವನೇ ತಸ್ಮಿನ್ ಮಹತಃ ಸಂಚಯಾನ್ ಕೃತಾನ್ ।
ಮೃಗಾಣಾಂ ಮಹಿಷಾಣಾಂ ಚ ಕರಿಷ್ಯೈಃ ಶೀತಕಾರಣಾತ್ ॥೯॥

ಶೀತಪರಿಹಾರಕ್ಕಾಗಿ ಮೃಗ ಎಮ್ಮೆಗಳ ಸಗಣಿಯ ಬೆರಣಿಗಳನ್ನು ದೊಡ್ಡರಾಶಿ-ಗಳನ್ನಾಗಿ ಮಾಡಿರಿಸಿದ್ದನ್ನು ಭರತನು ಆ ಅರಣ್ಯದಲ್ಲಿ ಕಂಡನು.

ಉಚ್ಚೈರ್ಬದ್ಧಾನಿ ಚೀರಾಣಿ ಲಕ್ಷ್ಮಣೇನ ಭವೇದಯಮ್ ।
ಅಭಿಜ್ಞಾನಕೃತಃ ಪಂಥಾ ವಿಕಾಲೇ ಗಂತುಮಿಚ್ಛತಾ ॥೧೦॥

ಅಕಾಲದಲ್ಲಿ ಆಶ್ರಮದಿಂದ ಹೊರಗೆ ಹೋಗಬೇಕಾಗಿ ಬಂದಾಗ, ಮರದ ಬುಡಗಳಲ್ಲಿ ಇರಿಸಿದ್ದ ಗುರುತುಗಳು ಕಾಣದಿರುವ ಕಾಲದಲ್ಲಿಯೂ ಕಾಣುವಂತೆ, ಮರಗಳ ಮೇಲ್ಗಡೆ ನಾರುಮಡಿಗಳನ್ನು ಲಕ್ಷ್ಮಣನೇ ಇರಿಸಿರುವುದರಿಂದ, ಈ ಗುರುತುಗಳಿಂದ ತಿಳಿದುಬರುವ ಆಶ್ರಮದ ದಾರಿ ಇದೇ ಇರಬೇಕು.

ಇದಂ ಚೋದಾತ್ತದಂತಾನಾಂ ಕುಂಜರಾಣಾಂ ತರಸ್ವಿನಾಮ್ ।
ಶೈಲಪಾರ್ಶ್ವೇ ಪರಿಕ್ರಾಂತಮನ್ಯೋನ್ಯಮಭಿಗರ್ಜತಾಮ್ ॥೧೧॥

ಉತ್ತಮ ದಂತಗಳುಳ್ಳ ವೇಗವಾಗಿ ಸಂಚರಿಸುವ ಆನೆಗಳು ಪರಸ್ಪರವಾಗಿ ಇದಿರಿಸಿ ಘೀಳಿಡುತ್ತ ಓಡಾಡಿದ ಸ್ಥಳಗಳು ಇವು.

ಯಮೇವಾಧಾತುಮಿಚ್ಛಂತಿ ತಾಪಸಾಃ ಸತತಂ ವನೇ ।
ತಸ್ಯಾಸೌ ದೃಶ್ಯತೇ ಧೂಮಃ ಸಂಕುಲಃ ಕೃಷ್ಣವರ್ತ್ಮನಃ ॥೧೨॥

ತಪಸ್ವಿಗಳು ಅರಣ್ಯದಲ್ಲಿ ಸತತವಾಗಿ ಸಾಯಂ ಪ್ರಾತರೌಪಾಸನ ಹೋಮಕ್ಕಾಗಿ ನಿತ್ಯಾಗ್ನಿಯನ್ನು ಆಧಾನ ಮಾಡಲು ಬಯಸುವರು. ಆ ಅಗ್ನಿಯ ದಟ್ಟವಾದ ಧೂಮ ಇಲ್ಲಿ ಕಂಡುಬರುತ್ತಿದೆ.

ಅತ್ರಾಹಂ ಪುರುಷವ್ಯಾಘ್ರಂ ಗುರುಸತ್ಕಾರಕಾರಿಣಮ್ ।
ಆರ್ಯಂ ದ್ರಕ್ಷ್ಯಾಮಿ ಸಂಹೃಷ್ಟೋ ಮಹರ್ಷಿಮಿವ ರಾಘವಮ್ ॥೧೩॥

ಪುರುಷೋತ್ತಮನಾದ, ಗುರುಹಿರಿಯರಿಗೆ ಸತ್ಕಾರ ಮಾಡುವ ಆರ್ಯನಾದ, ಮಹರ್ಷಿಯಂತಿರುವ ರಾಮನನ್ನು ಹರ್ಷಚಿತ್ತನಾಗಿ ನಾನು ಇಲ್ಲಿ ಸಂದರ್ಶಿಸುವೆನು.

ಅಥ ಗತ್ವಾ ಮುಹೂರ್ತಂ ತು ಚಿತ್ರಕೂಟಂ ಸ ರಾಘವಃ ।
ಮಂದಾಕಿನೀಮನುಪ್ರಾಪ್ತಸ್ತಂ ಜನಂ ಚೇದಮಬ್ರವೀತ್ ॥೧೪॥

ಬಳಿಕ ಒಂದು ಮುಹೂರ್ತಕಾಲ ನಡೆದು ಭರತನು ಮಂದಾಕಿನಿಯ ಬಳಿ ಚಿತ್ರಕೂಟಕ್ಕೆ ಹೋಗಿ ತನ್ನ ಅಮಾತ್ಯಾದಿ ಜನರಿಗೆ ಹೇಳಿದನು.

ಜಗತ್ಯಾಂ ಪುರುಷವ್ಯಾಘ್ರ ಆಸ್ತೇ ವೀರಾಸನೇ ರತಃ ।
ಜನೇಂದ್ರೋ ನಿರ್ಜನಂ ಪ್ರಾಪ್ಯ ಧಿಙ್ಮೇ ಜನ್ಮ ಸಜೀವಿತಮ್ ॥೧೫॥

ಪುರುಷೋತ್ತಮನಾದ ರಾಜಾರಾಮನು ನಿರ್ಜನವಾದ ಅರಣ್ಯವನ್ನು ಸೇರಿ ನೆಲದ ಮೇಲೆ ವೀರಾಸನದಲ್ಲಿ ಕುಳಿತಿರುತ್ತಾನೆ. ನನ್ನ ಜನ್ಮಕ್ಕೆ ಧಿಕ್ಕಾರ. ನನ್ನ ಬಾಳಿಗೆ ಧಿಕ್ಕಾರ.

ಮತ್ಕೃತೇ ವ್ಯಸನಂ ಪ್ರಾಪ್ತೋ ಲೋಕನಾಥೋ ಮಹಾದ್ಯುತಿಃ ।
ಸರ್ವಾನ್ ಕಾಮಾನ್ ಪರಿತ್ಯಜ್ಯ ವನೇ ವಸತಿ ರಾಘವಃ ॥೧೬॥

ಮಹಾಕಾಂತಿಯುಳ್ಳ ಲೋಕನಾಥನಾದ ರಾಮನು ನನ್ನ ಕಾರಣದಿಂದ ಸಂಕಷ್ಟವನ್ನು ಹೊಂದಿ ಎಲ್ಲ ಕಾಮನೆಗಳನ್ನೂ ಪರಿತ್ಯಜಿಸಿ ವನದಲ್ಲಿ ವಾಸ-ಮಾಡುವಂತಾಯಿತು.

ಇತಿ ಲೋಕಸಮಾಕ್ರುಷ್ಟಃ ಪಾದೇಷ್ವದ್ಯ ಪ್ರಸಾದಯನ್ ।
ರಾಮಸ್ಯ ನಿಪತಿಷ್ಯಾಮಿ ಸೀತಾಯಾ ಲಕ್ಷ್ಮಣಸ್ಯ ಚ ॥೧೭॥

ಹೀಗೆ ಲೋಕದ ನಿಂದನೆಗೆ ಪಾತ್ರನಾಗಿರುವ ನಾನು ಕ್ಷಮೆ ಬೇಡಿ ರಾಮನ ಸೀತೆಯ ಮತ್ತು ಲಕ್ಷ್ಮಣನ ಪಾದಗಳಿಗೆ ಎರಗುವೆನು.

ಏವಂ ಸ ವಿಲಪಂಸ್ತಸ್ಮಿನ್ ವನೇ ದಶರಥಾತ್ಮಜಃ ।
ದದರ್ಶ ಮಹತೀಂ ಪುಣ್ಯಾಂ ಪರ್ಣಶಾಲಾಂ ಮನೋರಮಾಮ್ ॥೧೮

ಹೀಗೆ ಭರತನು ವಿಲಾಪ ಮಾಡುತ್ತ ಆ ಅರಣ್ಯದಲ್ಲಿ ಮುಂದೆ ಹೋಗಿ ಮನೋಹರವಾದ ಪುಣ್ಯದಾಯಕವಾದ ದೊಡ್ಡ ಪರ್ಣಶಾಲೆಯನ್ನು ಕಂಡನು.

ಸಾಲತಾಲಾಶ್ವಕರ್ಣಾನಾಂ ಪರ್ಣೈರ್ಬಹುಭಿರಾವೃತಾಮ್ ।
ವಿಶಾಲಾಂ ಮೃದುವಿಸ್ತೀರ್ಣಾಂ ಕುಶೈರ್ವೇದಿಮಿವಾಧ್ವರೇ ॥೧೯॥

ಯಜ್ಞವೇದಿಯು ದರ್ಭೆಗಳಿಂದ ಆವೃತವಾಗಿರುವಂತೆ ರಾಮನ ಪರ್ಣಶಾಲೆ ಸಾಲ ತಾಲ ಅಶ್ವಕರ್ಣ ಮುಂತಾದ ಮರಗಳ ಬಹು ಎಲೆಗಳಿಂದ ಆವೃತವಾಗಿದೆ. ವಿಶಾಲ ಮೃದು ಹಾಗೂ ವಿಸ್ತೀರ್ಣವಾಗಿದೆ.

ಶಕ್ರಾಯುಧನಿಕಾಶೈಶ್ಚ ಕಾರ್ಮುಕೈರ್ಭಾರಸಾಧನೈಃ ।
ರುಕ್ಮಪೃಷ್ಠೈರ್ಮಹಾಸಾರೈಃ ಶೋಭಿತಾಂ ಶತ್ರುಬಾಧಕೈಃ ॥೨೦॥

ಇಂದ್ರನ ವಜ್ರಾಯುಧದಂತೆ ಶತ್ರುನಾಶಕವಾಗಿರುವ ಮಹತ್ಕಾರ್ಯಸಾಧಕವಾದ ಬಂಗಾರದ ಹೊದ್ದಿಕೆಯುಳ್ಳ ಬಲಿಷ್ಠವಾದ ಧನುಸ್ಸುಗಳಿಂದ ಪರ್ಣಶಾಲೆ ಅಲಂಕೃತವಾಗಿದೆ.

ಅರ್ಕರಶ್ಮಿಪ್ರತೀಕಾಶೈಘೋರೈಸ್ತೂಣೀಗತೈಃ ಶರೈಃ ।
ಶೋಭಿತಾಂ ದೀಪ್ತವದನೈಃ ಸರ್ಪೈರ್ಭೋಗವತೀಮಿವ ॥೨೧॥

ಪಾತಾಳದ ಭೋಗವತೀನಗರದಂತೆ ಪರ್ಣಶಾಲೆ ಏಕೆಂದರೆ ಇಲ್ಲಿ ಸೂರ್ಯರಶ್ಮಿ-ಯಂತೆ ಪ್ರಕಾಶಿಸುವ, ಮುಖದಲ್ಲಿ ಬೆಂಕಿಯನ್ನುಗುಳುವಂಥ ಘೋರವಾದ, ಸರ್ಪಗಳಂಥ ಬಾಣಗಳು ಬತ್ತಳಿಕೆಗಳಲ್ಲಿ ತುಂಬಿವೆ.

ಮಹಾರಜತವಾಸೋಭ್ಯಾಮಸಿಭ್ಯಾಂ ಚ ವಿರಾಜಿತಾಮ್ ।
ರುಕ್ಮಬಿಂದುವಿಚಿತ್ರಾಭ್ಯಾಂ ಚರ್ಮಭ್ಯಾಂ ಚಾಪಿ ಶೋಭಿತಾಮ್ ॥೨೨॥

ಬಂಗಾರದ ಒರೆಗಳಲ್ಲಿರುವ ಖಡ್ಗಗಳಿಂದ ಶೋಭಿಸುತ್ತಿದೆ. ಮತ್ತು ಬಂಗಾರದ ಬಿಂದುಗಳಿಂದ ಬಹಳ ಸುಂದರವಾಗಿರುವ ಗುರಾಣಿಗಳಿಂದ ಶೋಭಿಸುತ್ತಿದೆ ಈ ಪರ್ಣಶಾಲೆ.

ಗೋಧಾಂಗುಲಿತ್ರೈರಾಸಕ್ತೈಶ್ಚಿತ್ರೈಃ ಕಾಂಚನಭೂಷಿತೈಃ ।
ಅರಿಸಂಘೈರನಾಧೃಷ್ಯಾಂ ಮೃಗೈಃ ಸಿಂಹಗುಹಾಮಿವ ॥೨೩॥

ಮೃಗಗಳಿಗೆ ಅಭೇದ್ಯವಾದ ಸಿಂಹದ ಗುಹೆಯಂತಿದೆ ಪರ್ಣಶಾಲೆ. ಏಕೆಂದರೆ ಶತ್ರುಗಳಿಗೆ ಇದು ಅಭೇದ್ಯವಾಗಿದೆ. ಸುಂದರವಾದ ಬಂಗಾರದಿಂದ ಅಲಂಕೃತವಾದ ಗೋಧಾ (ಬಿಲ್ಲುಗಾರನು ಹೆದೆಯಏಟು ತಗುಲದಿರಲು ಮುಂಗೈಗೆ ಕಟ್ಟಿಕೊಳ್ಳುವ ಚರ್ಮದ ಕವಚ) ಮತ್ತು ಬೆರಳಿಗೆ ಹಾಕುವ ಚರ್ಮದ ಮುಚ್ಚಳಗಳಿಂದ ಶೋಭಿಸುತ್ತಿದೆ.

ಪ್ರಾಗುದಕ್ಪ್ರವಣಾಂ ವೇದಿಂ ವಿಶಾಲಾಂ ದೀಪ್ತಪಾವಕಾಮ್ ।
ದದರ್ಶ ಭರತಸ್ತತ್ರ ಪುಣ್ಯಾಂ ರಾಮನಿವೇಶನೇ ॥೨೪॥

ರಾಮನ ಇಂಥ ಪರ್ಣಶಾಲೆಯಲ್ಲಿ ಈಶಾನ್ಯದಿಕ್ಕಿನಲ್ಲಿ ತಗ್ಗಾಗಿದ್ದು ಜ್ವಲಿಸುವ ಹೋಮಾಗ್ನಿಯಿಂದ ಕೂಡಿದ ವಿಶಾಲವಾದ ಪುಣ್ಯಕರವಾದ ವೇದಿಯನ್ನು ಭರತನು ಕಂಡನು.

ನಿರೀಕ್ಷ್ಯ ಸ ಮುಹೂರ್ತಂ ತು ದದರ್ಶ ಭರತೋ ಗುರುಮ್ ।
ಉಟಜೇ ರಾಮಮಾಸೀನಂ ಜಟಾಮಂಡಲಧಾರಿಣಮ್ ॥೨೫॥

ಭರತನು ಮುಹೂರ್ತಕಾಲ ಅಗ್ನಿಯನ್ನು ನೋಡುತ್ತ ಜಟಾಜೂಟವನ್ನು ಧರಿಸಿ ಪರ್ಣಶಾಲೆಯಲ್ಲಿ ಕುಳಿತಿದ್ದ ಗುರು ರಾಮನನ್ನು ಕಂಡನು.

ಕೃಷ್ಣಾಜಿನಧರಂ ತಂ ತು ಚೀರವಲ್ಕಲವಾಸಸಮ್ ।
ದದರ್ಶ ರಾಮಮಾಸೀನಮಭಿತಃ ಪಾವಕೋಪಮಮ್ ॥೨೬॥

ನಾರುಡೆಯನ್ನು ಉಟ್ಟು ಕೃಷ್ಣಾಜಿನವನ್ನು ಉತ್ತರೀಯವಾಗಿ ಹೊದ್ದುಕೊಂಡಿರುವ ಅಗ್ನಿಯಂತೆ ಜ್ವಲಿಸುತ್ತ ಅಗ್ನಿಯ ಮುಂದೆ ಕುಳಿತಿದ್ದ ರಾಮನನ್ನು ಭರತನು ಸಮೀಪದಿಂದ ಕಂಡನು.

ಸಿಂಹಸ್ಕಂಧಂ ಮಹಾಬಾಹುಂ ಪುಂಡರೀಕನಿಭೇಕ್ಷಣಮ್ ।
ಪೃಥಿವ್ಯಾಃ ಸಾಗರಾಂತಾಯಾ ಭರ್ತಾರಂ ಧರ್ಮಚಾರಿಣಮ್ ॥೨೭॥

ಉಪವಿಷ್ಟಂ ಮಹಾಬಾಹುಂ ಬ್ರಹ್ಮಾಣಮಿವ ಶಾಶ್ವತಮ್ ।
ಸ್ಥಂಡಿಲೇ ದರ್ಭಸಂಸ್ತೀರ್ಣೇ ಸೀತಯಾ ಲಕ್ಷ್ಮಣೇನ ಚ ॥೨೮॥

ಸಿಂಹದಂತೆ ಹೆಗಲುಳ್ಳವನು ಮಹಾಬಾಹು ಕಮಲದಂತೆ ಕಣ್ಣುಳ್ಳವನು ಇಂಥ ರಾಮನು ಸಾಗರಪರ್ಯಂತವಾದ ಪೃಥಿವಿಗೆ ಶಾಶ್ವತ ಅಧಿಪತಿಯಾಗಿದ್ದೂ ಪಿತೃವಾಕ್ಯಪರಿಪಾಲನರೂಪ ಧರ್ಮಾಚರಣೆ ಮಾಡುತ್ತ ಮಹಾಬಾಹುವಾದ ಚತುರ್ಮುಖ ಬ್ರಹ್ಮನಂತೆ ದರ್ಭೆಹಾಸಿದ ನೆಲದ ಮೇಲೆ ಸೀತೆಯೊಂದಿಗೆ ಮತ್ತು ಲಕ್ಷ್ಮಣನೊಂದಿಗೆ ಕುಳಿತಿರುವುದನ್ನು ಭರತನು ಕಂಡನು.

ತಂ ದೃಷ್ಟ್ವಾ ಭರತಃ ಶ್ರೀಮಾನ್ ದುಃಖಮೋಹಪರಿಪ್ಲುತಃ ।
ಅಭ್ಯಧಾವತ ಧರ್ಮಾತ್ಮಾ ಭರತಃ ಕೈಕಯೀಸುತಃ ॥೨೯॥

ದೃಷ್ಟ್ವೈವ ವಿಲಲಾಪಾರ್ತೋ ಬಾಷ್ಪಸಂದಿಗ್ಧಯಾ ಗಿರಾ ।
ಅಶಕ್ನುವನ್ ಧಾರಯಿತುಂ ಧೈರ್ಯಾದ್ವಚನಮಬ್ರವೀತ್ ॥೩೦॥

ರಾಮನನ್ನು ಕಂಡು ಶ್ರೀಮಾನ್ ಭರತನು ದುಃಖಶೋಕಗಳಲ್ಲಿ ಮುಳುಗಿ ದನು. ಧರ್ಮಾತ್ಮನಾದ ಕೈಕಯೀಸುತ ಭರತನು ರಾಮನನ್ನು ಕಂಡೊಡನೆ ಅವನಿಗೆ ಇದಿರಾಗಿ ಧಾವಿಸಿಬಂದನು. ಆರ್ತವಾಗಿ ಧೈರ್ಯದಿಂದ ಸಾವರಿಸಿಕೊಳ್ಳಲಾಗದೆ ಏನೂ ಮಾತನಾಡದೆ ಬಾಷ್ಪಗದ್ಗದವಾದ ಮಾತಿನಿಂದ ವಿಲಾಪಗೈದನು.

ಯಃ ಸಂಸದಿ ಪ್ರಕೃತಿಭಿರ್ಭವೇದ್ಯುಕ್ತ ಉಪಾಸಿತುಮ್ ।
ವನ್ಯೈ ರ್ಮೃಗೈರುಪಾಸೀನಃ ಸೋಽಯಮಾಸ್ತೇ ಮಮಾಗ್ರಜಃ ॥೩೧॥

ಯಾರು ಆಸ್ಥಾನದಲ್ಲಿ ಪ್ರಜೆಗಳಿಂದ ಸೇವಿತನಾಗಬೇಕಿದ್ದನೋ ಆ ನನ್ನ ಅಣ್ಣ ರಾಮನು ವನ್ಯಮೃಗಗಳಿಂದ ಸೇವಿತನಾಗಿ ಇಲ್ಲಿ ಕುಳಿತಿದ್ದಾನೆ.

ವಾಸೋಭಿರ್ಬಹುಸಾಹಸ್ರೈರ್ಯೋ ಮಹಾತ್ಮಾ ಪುರೋಚಿತಃ ।
ಮೃಗಾಜಿನೇ ಸೋಽಯಮಿಹ ಪ್ರವಸ್ತೇ ಧರ್ಮಮಾಚರನ್ ॥೩೨॥

ಬಹುಸಹಸ್ರ ಬೆಲೆಬಾಳುವ ಬಟ್ಟೆಗಳನ್ನೇ ಹಿಂದೆ ಉಡುತ್ತಿದ್ದವನು ಆ ಮಹಾತ್ಮ ರಾಮನು ಇಲ್ಲಿ ವಾನಪ್ರಸ್ಥಧರ್ಮವನ್ನು ಆಚರಿಸುತ್ತ ನಾರುಡೆ ಕೃಷ್ಣಾಜಿನಗಳನ್ನು ಧರಿಸುತ್ತಾನೆ.

ಅಧಾರಯದ್ಯೋ ವಿವಿಧಾಶ್ಚಿತ್ರಾಃ ಸುಮನಸಸ್ತದಾ ।
ಸೋಽಯಂ ಜಟಾಭಾರಮಿಮಂ ವಹತೇ ರಾಘವಃ ಕಥಮ್ ॥೩೩॥

ಯಾವ ರಾಮನು ಹಿಂದೆ ನಾನಾ ಬಗೆಯ ಸುಂದರ ಪುಷ್ಪಗಳನ್ನು ಮುಡಿಯಲ್ಲಿ ಧರಿಸುತ್ತಿದ್ದನೋ ಅವನು ಈ ಜಟಾಜೂಟವನ್ನು ಧರಿಸುತ್ತಾನೆ. ಇದು ಹೇಗೆ?

ಯಸ್ಯ ಯಜ್ಞೈರ್ಯಥೋದ್ದಿಷ್ಟೈರ್ಯುಕ್ತೋ ಧರ್ಮಸ್ಯ ಸಂಚಯಃ ।
ಶರೀರಕ್ಲೇಶಸಂಭೂತಂ ಸ ಧರ್ಮಂ ಪರಿಮಾರ್ಗತೇ ॥೩೪॥

ಯಾರು ಪಟ್ಟಾಭಿಷಿಕ್ತ ರಾಜನಾಗಿ ಋತ್ವಿಜರ ಸಹಾಯದಿಂದ ರಾಜಸೂಯಾದಿ ಯಾಗಗಳಿಂದ ಧರ್ಮಸಂಗ್ರಹ ಮಾಡಲು ಯೋಗ್ಯನೋ ಅಂಥ ರಾಮನು ಸ್ವತಃ ತನ್ನ ಶರೀರ ಕ್ಲೇಶದಿಂದ ಔಪಾಸನಾದಿ ಕರ್ಮಗಳಿಂದಲೆ ಧರ್ಮಸಂಗ್ರಹ ಮಾಡುವ ಮಾರ್ಗವನ್ನು ಸ್ವೀಕರಿಸಿದ್ದಾನೆ.

ಚಂದನೇನ ಮಹಾರ್ಹೇಣ ಯಸ್ಯಾಂಗಮುಪಸೇವಿತಮ್ ।
ಮಲೇನ ತಸ್ಯಾಂಗಮಿದಂ ಕಥಮಾರ್ಯಸ್ಯ ಸೇವ್ಯತೇ ॥೩೫॥

ಬಹುಅಮೂಲ್ಯವಾದ ಚಂದನವನ್ನು ಪೂಸಿಕೊಳ್ಳಲು ಯೋಗ್ಯವಾದ ಆರ್ಯ ರಾಮನ ಈ ಮೈಯು ದೂಳಿನಿಂದ ಲೇಪಿತವಾಗುತ್ತಿದೆ. ಇದು ಹೇಗೆ?

ಮನ್ನಿಮಿತ್ತಮಿದಂ ದುಃಖಂ ಪ್ರಾಪ್ತೋ ರಾಮಃ ಸುಖೋಚಿತಃ ।
ಧಿಗ್ಜೀವಿತಂ ನೃಶಂಸಸ್ಯ ಮಮ ಲೋಕವಿಗರ್ಹಿತಮ್ ॥೩೬॥

ಸುಖಾನುಭವಕ್ಕೇ ತಕ್ಕವನಾದ ರಾಮನು ನನ್ನ ಸಲುವಾಗಿ ಈ ವನವಾಸ ದುಃಖವನ್ನು ಅನುಭವಿಸುವಂತಾಯಿತು. ಕ್ರೂರಿಯಾದ ನನ್ನ ಲೋಕನಿಂದನೆಗೆ ಯೋಗ್ಯವಾದ ಬಾಳಿಗೆ ಧಿಕ್ಕಾರ!

ಇತ್ಯೇವಂ ವಿಲಪನ್ ದೀನಂ ಪ್ರಸ್ವಿನ್ನಮುಖಪಂಕಜಃ ।
ಪಾದಾವಪ್ರಾಪ್ಯ ರಾಮಸ್ಯ ಪಪಾತ ಭರತೋ ರುದನ್ ॥೩೭॥

ಹೀಗೆ ದೈನ್ಯದಿಂದ ವಿಲಾಪ ಮಾಡುತ್ತ ಮುಖಕಮಲದಲ್ಲಿ ಬೆವರಿಕೊಂಡು ರಾಮನ ಪಾದಗಳಿಗೆ ಎರಗಲು ಬಂದಿದ್ದ ಭರತನು ಪಾದಗಳನ್ನು ಮುಟ್ಟುವುದ-ರೊಳಗೇ ನೆಲದಲ್ಲಿ ಬಿದ್ದನು.

ದುಃಖಾಭಿತಪ್ತೋ ಭರತೋ ರಾಜಪುತ್ರೋ ಮಹಾಬಲಃ ।
ಉಕ್ತ್ವಾರ್ಯೇತಿ ಸಕೃದ್ದೀನಂ ಪುನರ್ನೋವಾಚ ಕಿಂಚನ ॥೩೮॥

ಮಹಾಬಲಿ ರಾಜಕುಮಾರ ಭರತನು ದುಃಖದಿಂದ ಬೆಂದು ದೈನ್ಯದಿಂದ 'ಆರ್ಯ!' ಎಂದು ಒಂದು ಬಾರಿ ಹೇಳಿ, ಮತ್ತೇನೂ ಹೇಳಲಾರದವನಾದ.

ಬಾಷ್ಪಾಪಿಹಿತಕಂಠಶ್ಚ ಪ್ರೇಕ್ಷ್ಯ ರಾಮಂ ಯಶಸ್ವಿನಮ್ ।
ಆರ್ಯೇತ್ಯೇವಾಭಿಸಂಕ್ರುಷ್ಯ ವ್ಯಾಹರ್ತುಂ ನಾಶಕತ್ತತಃ ॥೩೯॥

ಯಶಸ್ವಿಯಾದ ರಾಮನನ್ನು ನೋಡಿ ಬಾಷ್ಪದಿಂದ ಗಂಟಲು ಕಟ್ಟಿದ್ದರಿಂದ 'ಆರ್ಯ!' ಎಂದು ಮಾತ್ರ ಹೇಳಿ ಮುಂದೆ ಮಾತನಾಡಲು ಅಶಕ್ತನಾದನು ಭರತ.

ಶತ್ರುಘ್ನಶ್ಚಾಪಿ ರಾಮಸ್ಯ ವವಂದೇ ಚರಣೌ ರುದನ್ ।
ತಾವುಭೌ ಸ ಸಮಾಲಿಂಗ್ಯ ರಾಮೋಽಪ್ಯಶ್ರೂಣ್ಯವರ್ತಯತ್ ॥೪೦॥

ಶತ್ರುಘ್ನನೂ ಕೂಡ ಅಳುತ್ತ ರಾಮನ ಚರಣಗಳನ್ನು ವಂದಿಸಿದನು. ಅವರಿಬ್ಬರನ್ನೂ ಆಲಿಂಗಿಸಿ ರಾಮನೂ ಕಣ್ಣೀರು ಸುರಿಸಿದನು.

ತತಃ ಸುಮಂತ್ರೇಣ ಗುಹೇನ ಚೈವ ಸಮೀಯತೂ ರಾಜಸುತಾವರಣ್ಯೇ।
ದಿವಾಕರಶ್ಚೈವ ನಿಶಾಕರಶ್ಚ ಯಥಾಂಬರೇ ಶುಕ್ರಬೃಹಸ್ಪತಿಭ್ಯಾಂ ॥೪೧॥

ಸೂರ್ಯಚಂದ್ರರು ಆಕಾಶದಲ್ಲಿ ಶುಕ್ರ ಬೃಹಸ್ಪತಿಗಳನ್ನು ಭೆಟ್ಟಿಮಾಡುವಂತೆ ರಾಮಲಕ್ಷ್ಮಣರು ಸುಮಂತ್ರಗುಹರನ್ನು ಸಂಧಿಸಿದರು.

ತಾನ್ ಪಾರ್ಥಿವಾನ್ ವಾರಣಯೂಥಪಾಹ್ವಾನ್
ಸಮಾಗತಾಂಸ್ತತ್ರ ಮಹತ್ಯರಣ್ಯೇ ।
ವನೌಕಸಸ್ತೇಽಪಿ ಸಮೀಕ್ಷ್ಯ ಸರ್ವೇ-
ಪ್ಯಶ್ರೂಣ್ಯಮುಂಚನ್ ಪ್ರವಿಹಾಯ ಹರ್ಷಮ್ ॥೪೨॥

ರಾಮಲಕ್ಷ್ಮಣ ಭರತಶತ್ರುಘ್ನರು ಆ ಮಹಾಅರಣ್ಯದಲ್ಲಿ ನಾಲ್ಕು ಸಲಗಗಳಂತೆ ಜೊತೆ ಸೇರಿದ್ದನ್ನು ಕಂಡು, ವನವಾಸಿಗಳಾದ ಋಷಿಗಳು ಎಲ್ಲರೂ ಅವರ ದರ್ಶನಕ್ಕೆ ಆನಂದಪಡುವುದನ್ನು ಬಿಟ್ಟು, ಅವರ ಕಷ್ಟಕ್ಕೆ ಕಣ್ಣೀರು ಸುರಿಸಿದರು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ತೊಂಬತ್ತೊಂಬತ್ತನೇ ಸರ್ಗ ಮುಗಿಯಿತು.

ಶತತಮಃ ಸರ್ಗಃ

ಸರ್ಗ – 100

ಭರತನ ಕುಶಲವನ್ನು ವಿಚಾರಿಸುತ್ತ ಶ್ರೀರಾಮನು ರಾಜನೀತಿಯನ್ನು ಉಪದೇಶಿಸುವುದು.

ಜಟಿಲಂ ಚೀರವಸನಂ ಪ್ರಾಂಜಲಿಂ ಪತಿತಂ ಭುವಿ ।
ದದರ್ಶ ರಾಮೋ ದುರ್ದರ್ಶಂ ಯುಗಾಂತೇ ಭಾಸ್ಕರಂ ಯಥಾ ॥೧॥

ಜಟಾಧಾರಿ ನಾರುಮಡಿಯುಟ್ಟವನು ಭರತ ನೆಲದಲ್ಲಿ ಬಿದ್ದು ಕೈಮುಗಿದಿದ್ದಾನೆ. ಲಯಕಾಲದ ಸೂರ್ಯನಂತೆ ನೋಡಲು ಅಶಕ್ಯನಾದ ಆತನನ್ನು ಶ್ರೀರಾಮ ನೋಡುತ್ತಾನೆ.

ಸಾಮುದ್ರಂ ದೈಹಿಕಂ ಭೌಮಂ ರಸಂ ಸಾಂವರ್ತಕೋ ರವಿಃ ।
ರಶ್ಮಿಭಿಃ ಪಿಬತೇ ಘೋರೈಃ ಸರ್ವಂ ನೈವ ವಿಮುಂಚತಿ ॥ (ಭಾಗ.12.4.8)

'ಸಾಂವರ್ತಕ' ಎಂದರೆ ಪ್ರಳಯಕಾಲದ ಸೂರ್ಯನು ಸಮುದ್ರದ ಜಲರೂಪರಸವನ್ನೂ ಪ್ರಾಣಿಶರೀರದ ವೀರ್ಯರೂಪರಸವನ್ನು ಭೂಮಿಯ ಮಧುರಾದಿ ಷಡ್ರಸವನ್ನೂ ಘೋರವಾದ ರಶ್ಮಿಯಿಂದ ಅಂದರೆ ಭೀಕರವಾದ ಬಿಸಿಲಿನಿಂದ ಪೂರ್ತಿ ಒಣಗಿಸುತ್ತಾನೆ. ಸ್ವಲ್ಪವೂ ಉಳಿಸುವುದಿಲ್ಲ. ಮತ್ತೆ ಮೋಡಗಳ ಮೂಲಕ ನೀರನ್ನು ಸುರಿಸುವುದಿಲ್ಲ' ಎಂದು ಭಾಗವತವು ಹೇಳುವಂತೆ ಪ್ರಳಯ-ಕಾಲದ ಸೂರ್ಯನು ಘೋರವಾದ ರಶ್ಮಿಯಿಂದ 'ದುರ್ದರ್ಶ' ನೋಡಲು ಅಶಕ್ಯ-ನಾಗಿರುತ್ತಾನೆ. ಅವನಂತೆ ಭರತನೂ ದುರ್ದರ್ಶನೆ. ಭರತನು ವಿಷ್ಣುಚಕ್ರರೂಪನು. ಕೋಟಿ ಸೂರ್ಯ ಸಮಪ್ರಭ. ಅವನನ್ನು ಶ್ರೀರಾಮನು ನೋಡಿದ.

ಹೀಗೆ ಹೇಳಿದಾಗ ಮುಂದಿನ ಶ್ಲೋಕದಲ್ಲಿ 'ವಿವರ್ಣವದನಂ' ಕಳೆಗುಂದಿದ-ನೆಂದು ಹೇಳಿದ್ದು ಕೂಡಲಾರದು'. 'ಪತಿತಂ' ನೆಲದಲ್ಲಿ ಬಿದ್ದನೆಂದು ಈ ಶ್ಲೋಕದಲ್ಲಿ ಹೇಳಿದ್ದೂ ಕೂಡಲಾರದು. 'ಯುಗಾಂತ ಸೂರ್ಯನಂತೆ ಕಳೆಗುಂದುವುದು' ಅಸಂಗತ. ಭೂಮಿಯ ಮೇಲೆ ಸೂರ್ಯನು ಬೀಳುವುದೂ ಕಂಡಿಲ್ಲ ಎಂದು ಮುಂತಾಗಿ ಆಕ್ಷೇಪ ಮಾಡಬಾರದು. ಮತ್ತು ಇದು ಕೇವಲ ಕವಿಯ ಉತ್ಪ್ರೇಕ್ಷೆ-ಯೆಂದು ಸಮಾಧಾನ ಮಾಡುವುದೂ ಕವಿಗೆ ಅಪಚಾರವಾಗುವುದು.

ಕೋಟಿಸೂರ್ಯ ಸಮಪ್ರಭವಾದ ವಿಷ್ಣುಚಕ್ರವು ಕೂಡ ನೋಡುವವರ ಶಕ್ತ್ಯನುಸಾರವಾಗಿಯೆ ಪ್ರಭೆಯನ್ನು ತೋರಿಸುತ್ತದೆ. ಹಾಗೇ ಭರತನೂ ವಸ್ತುತಃ

ದುರ್ದರ್ಶನೆ ಆದರೂ ನೋಡುವವರಿಗೆ ದಿವ್ಯವಾದ ಸೌಮ್ಯಕಾಂತಿಯನ್ನು ತೋರಿಸುತ್ತಾನೆ. ಈಗ ಮಾತ್ರ 'ವಿವರ್ಣವದನ'ನಾಗಿದ್ದಾನೆ. ಕಳೆಗುಂದಿದಂತೆ ಕಾಣುತ್ತಾನೆ. 'ವಿವರ್ಣ ವದನ'ನೆಂಬಲ್ಲಿ ಸೂರ್ಯನು ದೃಷ್ಟಾಂತವಲ್ಲ. 'ಪತಿತಂ ಭುವಿ' ಎನ್ನುವಲ್ಲಿಯೂ ಸೂರ್ಯನು ದೃಷ್ಟಾಂತವಲ್ಲ. ದುರ್ದರ್ಶಂ ಎಂಬಲ್ಲಿ ಮಾತ್ರ ಇದು ದೃಷ್ಟಾಂತ.

ಗಂಗಾತೀರದಲ್ಲಿ ಗುಹನ ಮುಂದೆ 'ಅದ್ಯಪ್ರಭೃತಿ' ಇಂದಿನಿಂದ ನಾನು ಜಟಾವಲ್ಕಲಗಳನ್ನು ಧರಿಸುವೆನೆಂದು ಭರತನು ಪ್ರತಿಜ್ಞೆ ಮಾಡಿ ಮುಂದೆ ಭಾರದ್ವಾಜಾಶ್ರಮದಲ್ಲಿ 'ವಸಾನೋ ವಾಸಸೀ ಕ್ಷೌಮೇ' ಎರಡು ರೇಶಿಮೆ ಬಟ್ಟೆಗಳನ್ನು ಉಟ್ಟಿದ್ದಾನೆ. ಇಲ್ಲಿ ಪುನಃ 'ಜಟಿಲಂ ಚೀರವಸನಂ' ಜಾಟಾವಲ್ಕಲಧಾರಿ. ಇದು ಹೇಗೆ? ಎಂದರೆ, ಮಹರ್ಷಿಯ ಮುಂದೆ, ಸೈನ್ಯ ಸಮೇತನಾಗಿ ಬಂದವನು ಋಷಿವೇಷವನ್ನು ಧರಿಸುವುದು ಅಣಕವಾದೀತೆಂದು ಭಯ ಪಟ್ಟಿದ್ದಾನೆ. ರಾಮನ ಮುಂದೆ ಮುನಿವೇಷವನ್ನು ತೊಟ್ಟರೆ ಅವನು ಕೃಪೆ ಮಾಡಬಹುದೆಂದು ಕೊಂಡಿದ್ದಾನೆ.

ಕಥಂಚಿದಭಿವಿಜ್ಞಾಯ ವಿವರ್ಣವದನಂ ಕೃಶಮ್ ।
ಭ್ರಾತರಂ ಭರತಂ ರಾಮಃ ಪರಿಜಗ್ರಾಹ ಬಾಹುನಾ ॥೨॥

ಭರತನು ಶೋಕದಿಂದ ಸೊರಗಿ ಕಳೆಗುಂದಿ ಮುನಿವೇಷವನ್ನೂ ಧರಿಸಿದ್ದರಿಂದ ಅವನನ್ನು ಶ್ರೀರಾಮನು ಕಷ್ಟದಿಂದ ತನ್ನ ತಮ್ಮನೇ ಎಂದು ತಿಳಿದು ಹಿಡಿದೆತ್ತಿದನು.

ಆಘ್ರಾಯ ರಾಮಸ್ತಂ ಮೂರ್ಧ್ನಿ ಪರಿಷ್ವಜ್ಯ ಚ ರಾಘವಃ ।
ಅಂಕೇ ಭರತಮಾರೋಪ್ಯ ಪರ್ಯಪೃಚ್ಛತ್ ಸಮಾಹಿತಃ ॥೩॥

ರಾಮನು ಭರತನನ್ನು ನೆತ್ತಿಯಲ್ಲಿ ಆಘ್ರಾಣಿಸಿ ಆಲಿಂಗಿಸಿ ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಆದರಿಂದ ಕುಶಲಪ್ರಶ್ನೆ ಮಾಡಿದನು.

ಕ್ವ ನು ತೇऽಭೂತ್ ಪಿತಾ ತಾತ ಯದರಣ್ಯಂ ತ್ವಮಾಗತಃ ।
ನ ಹಿ ತ್ವಂ ಜೀವತಸ್ತಸ್ಯ ವನಮಾಗಂತುಮರ್ಹಸಿ ॥೪॥

ಮಗು, ನಿನ್ನ ತಂದೆ ಎಲ್ಲಿಗೆ ಹೋಗಿದ್ದಾನೆ? ಏಕೆಂದರೆ, ಅವನ ಸೇವೆಯನ್ನು ಬಿಟ್ಟು ಕಾಡಿಗೆ ಬಂದಿರುವೆ. ಅವನು ಬದುಕಿದ್ದರೆ ನೀನು ಕಾಡಿಗೆ ಬರುತ್ತಿರಲಿಲ್ಲ. ಅವನ ಸೇವೆ ನಿತ್ಯ ಮಾಡಬೇಕಾದುದು ತಾನೆ?

ಚಿರಸ್ಯ ಬತ ಪಶ್ಯಾಮಿ ದೂರಾದ್ಭರತಮಾಗತಮ್ ।
ದುಷ್ಪ್ರತೀಕಮರಣ್ಯೇಽಸ್ಮಿನ್ ಕಿಂ ತಾತ ವನಮಾಗತಃ ॥೫॥

ಬಹುಕಾಲವಾದ ಮೇಲೆ ದೂರದ ಕೇಕಯದೇಶದಿಂದ ಬಂದ ಭರತನನ್ನು ಕಾಣುತ್ತಿದ್ದೇನೆ. ಮಗು, ಈ ಅರಣ್ಯದಲ್ಲಿ ದುರ್ಗಮವಾದ ಈ ಕಾಡಿಗೆ ಏಕೆ ಬಂದಿರುವೆ?

ಕಚ್ಚಿನ್ನು ಧರತೇ ತಾತ ರಾಜಾ ಯತ್ತ್ವಮಿಹಾಗತಃ ।
ಕಚ್ಚಿನ್ನ ದೀನಃ ಸಹಸಾ ರಾಜಾ ಲೋಕಾಂತರಂ ಗತಃ ॥೬॥

ಮಗು, ರಾಜಾ ದಶರಥನು 'ಕಚ್ಚಿತ್‌ಧಾರಯತೆ?' ಬದುಕ್ಕಿದ್ದಾನೆ ತಾನೆ? ನೀನೇಕೆ ಇಲ್ಲಿಗೆ ಬಂದಿರುವೆ? ದುಃಖದಿಂದ ರಾಜನು ಅಕಸ್ಮಾತ್ ಪರಲೋಕಕ್ಕೆ ಹೋಗಿಲ್ಲ ತಾನೆ?

ಕಚ್ಚಿತ್ಸೌಮ್ಯ ನ ತೇ ರಾಜ್ಯಂ ಭ್ರಷ್ಟಂ ಬಾಲಸ್ಯ ಶಾಶ್ವತಮ್ ।
ಕಚ್ಚಿತ್ ಶೂಶ್ರೂಷಸೇ ತಾತ ಪಿತರಂ ಸತ್ಯವಿಕ್ರಮಮ್ ॥೭॥

ಸೌಮ್ಯನೆ, ನೀನು ಬಾಲಕನೆಂದು ಶಾಶ್ವತವಾದ ರಾಜ್ಯವು ನಿನಗೆ ತಪ್ಪಿಹೋಗಿಲ್ಲ ತಾನೆ? ಮಗು, ಸತ್ಯಪರಾಕ್ರಮನಾದ ತಂದೆಯ ಸೇವೆ ಮಾಡುತ್ತಿರುವೆ ತಾನೆ?

ಕಚ್ಚಿದ್ದಶರಥೋ ರಾಜಾ ಕುಶಲೀ ಸತ್ಯಸಂಗರಃ ।
ರಾಜಸೂಯಾಶ್ವಮೇಧಾನಾಮಾಹರ್ತಾ ಧರ್ಮನಿಶ್ಚಿತಃ ॥೮॥

ಸತ್ಯ ಪ್ರತಿಜ್ಞನಾದ ರಾಜಾ ದಶರಥನು, ರಾಜಸೂಯ ಅಶ್ವಮೇಧಗಳನ್ನು ನಡೆಸುವ ಧರ್ಮನಿಷ್ಠನು ಕುಶಲಿಯಾಗಿರುವನು ತಾನೆ?

ಸ ಕಚ್ಚಿದ್ಬ್ರಾಹ್ಮಣೋ ವಿದ್ವಾನ್ ಧರ್ಮನಿತ್ಯೋ ಮಹಾದ್ಯುತಿಃ ।
ಇಕ್ಷ್ವಾಕೂಣಾಮುಪಾಧ್ಯಾಯೋ ಯಥಾವತ್ತಾತ ಪೂಜ್ಯತೇ ॥೯॥

ವಿದ್ವಾನ್ ಧರ್ಮನಿಷ್ಠ ಮಹಾತೇಜಸ್ವಿ ಇಕ್ಷ್ವಾಕುಕುಲದವರಿಗೆ ಆಚಾರ್ಯ ಬ್ರಾಹ್ಮಣ ವಸಿಷ್ಠಮುನಿ ಯಥಾವತ್ತಾಗಿ ಸಮ್ಮಾನಿತರಾಗಿದ್ದಾರೆ ತಾನೆ?

ಸಾ ತಾತ ಕಚ್ಚಿತ್ ಕೌಸಲ್ಯಾ ಸುಮಿತ್ರಾ ಚ ಪ್ರಜಾವತೀ ।
ಸುಖಿನೀ ಕಚ್ಚಿದಾರ್ಯಾ ಚ ದೇವೀ ನಂದತಿ ಕೈಕಯೀ ॥೧೦॥

ಮಗು, ಆ ಕೌಸಲ್ಯೆ, ಸುಪುತ್ರವತಿ ಸುಮಿತ್ರೆ ಮತ್ತು ಪೂಜ್ಯಳಾದ ದೇವಿ ಕೈಕೇಯಿ ಸುಖವಾಗಿ ಆನಂದಿಸುತ್ತಿರುವರು ತಾನೆ?

ಕಚ್ಚಿದ್ವಿನಯಸಂಪನ್ನಃ ಕುಲಪುತ್ರೋ ಬಹುಶ್ರುತಃ ।
ಅನಸೂಯುರನುದ್ರಷ್ಟಾ ಸತ್ಕೃತಸ್ತೇ ಪುರೋಹಿತಃ ॥೧೧॥

ವಿನ್ನಯಸಂಪನ್ನ, ಸತ್ಕುಲಪ್ರಸೂತ, ಬಹಳ ಅಧ್ಯಯನ ಮಾಡಿದವನು ಅಸೂಯೆ ಇಲ್ಲದವನು ನಿನ್ನ ಹಿತವನ್ನು ಸದಾ ನೋಡಿಕೊಳ್ಳುವವನು ಪುರೋಹಿತ ಸುಯಜ್ಞನು ಸತ್ಕೃತನಾಗಿರುವನು ತಾನೆ?

ಕಚ್ಚಿದಗ್ನಿಷು ತೇ ಯುಕ್ತೋ ವಿಧಿಜ್ಞೋ ಮತಿಮಾನೃಜುಃ ।
ಹುತಂ ಚ ಹೋಷ್ಯಮಾಣಂ ಚ ಕಾಲೇ ವೇದಯತೇ ಸದಾ ॥೧೨॥

ಯಜ್ಞವಿಧಿಗಳನ್ನು ಬಲ್ಲವನು, ಮತಿ ಉಳ್ಳವನು ಸರಳಸ್ವಭಾವದವನು, ನಡೆದ ನಡೆಯಲಿರುವ ಎಲ್ಲ ಹೋಮಗಳ ಅಗ್ನಿಗಳನ್ನು ಆಯಾಕಾಲದಲ್ಲಿ ತಿಳಿಸುವವನು ಇಂಥ ಪುರೋಹಿತನನ್ನು ಅಗ್ನಿಕಾರ್ಯಗಳಲ್ಲಿ ನೀನು ಆಶ್ರಯಿಸಿರುವಿ ತಾನೆ?

ಕಚ್ಚಿದ್ದೇವಾನ್ ಪಿತೄನ್ ಭೃತ್ಯಾನ್ ಗುರೂನ್ ಪಿತೃಸಮಾನಪಿ ।
ವೃದ್ಧಾಂಶ್ಚ ತಾತ ವೈದ್ಯಾಂಶ್ಚ ಬ್ರಾಹ್ಮಣಾಂಶ್ಚಾಭಿಮನ್ಯಸೇ ॥೧೩॥

ದೇವ–ಪಿತೃ–ಭೃತ್ಯ–ಗುರುಗಳು ಪಿತೃಸಮಾನರು ವೃದ್ಧರು ವೈದ್ಯರು ಬ್ರಾಹ್ಮಣರು ಎಲ್ಲರನ್ನೂ ಆದರಿಸುವೆ ತಾನೆ?

ಇಷ್ವಸ್ತ್ರವರಸಂಪನ್ನಮರ್ಥಶಾಸ್ತ್ರವಿಶಾರದಮ್ ।
ಸುಧನ್ವಾನಮುಪಾಧ್ಯಾಯಂ ಕಚ್ಚಿತ್ ತ್ವಂ ತಾತ ಮನ್ಯಸೇ ॥೧೪॥

ಮಂತ್ರರಹಿತ ಮತ್ತು ಮಂತ್ರಸಹಿತ ಅಸ್ತ್ರಜ್ಞಾನಉಳ್ಳ ಅರ್ಥಶಾಸ್ತ್ರ ವಿಶಾರದನಾದ ಧನುರ್ವಿದ್ಯಾಚಾರ್ಯನಾದ ಸುಧನ್ವನನ್ನು ಆದರಿಸುವೆ ತಾನೆ?

ಕಚ್ಚಿದಾತ್ಮಸಮಾಃ ಶೂರಾಃ ಶ್ರುತವಂತೋ ಜಿತೇಂದ್ರಿಯಾಃ ।
ಕುಲೀನಾಶ್ಚೇಂಗಿತಜ್ಞಾಶ್ಚ ಕೃತಾಸ್ತೇ ತಾತ ಮಂತ್ರಿಣಃ ॥೧೫॥

ವಿಶ್ವಾಸಪಾತ್ರರಾದ ಶೂರರಾದ ಅಧ್ಯಯನ ಸಂಪನ್ನರಾದ ಜಿತೇಂದ್ರಿಯರಾದ ಕುಲೀನರೂ ಇಂಗಿತಜ್ಞರೂ ಆದವರನ್ನೇ ಮಂತ್ರಿಗಳಾಗಿ ಮಾಡಿಕೊಂಡಿರುವೆ ತಾನೆ?

ಮಂತ್ರೋ ವಿಜಯಮೂಲಂ ಹಿ ರಾಜ್ಞಾಂ ಭವತಿ ರಾಘವ ।
ಸುಸಂವೃತೋ ಮಂತ್ರಧರೈರಮಾತ್ಯೈಃ ಶಾಸ್ತ್ರಕೋವಿದೈಃ ॥೧೬॥

ಏಕೆಂದರೆ ರಾಜರಿಗೆ ಮಂತ್ರಾಲೋಚನೆ ವಿಜಯಕ್ಕೆ ಮುಖ್ಯಕಾರಣವಾಗುತ್ತದೆ. ನೀತಿಶಾಸ್ತ್ರ ವಿಶಾರದರಾದ ಮಂತ್ರಧಾರಕರಾದ ಅಮಾತ್ಯರು ಮಂತ್ರಾಲೋಚನೆ-ಯನ್ನು ರಹಸ್ಯವಾಗಿ ಕಾಪಾಡುತ್ತಿರಬೇಕು.

ಕಚ್ಚಿನ್ನಿದ್ರಾವಶಂ ನೈಷೀಃ ಕಚ್ಚಿತ್ ಕಾಲೇ ಪ್ರಬುಧ್ಯಸೇ ।
ಕಚ್ಚಿಚ್ಚಾಪರರಾತ್ರೇಷು ಚಿಂತಯಸ್ಯರ್ಥನೈಪುಣಮ್ ॥೧೭॥

ನೀನು ಅಕಾಲದಲ್ಲಿ ನಿದ್ದೆಗೆ ವಶನಾಗುವುದಿಲ್ಲ ತಾನೆ? ಸಕಾಲದಲ್ಲಿ ಎಚ್ಚೆತ್ತು-ಕೊಳ್ಳುವೆ ತಾನೆ? ಬೆಳಗಿನ ಜಾವದಲ್ಲಿ ಅರ್ಥಪ್ರಾಪ್ತಿಯ ಉಪಾಯವನ್ನು ಚಿಂತಿಸುವೆ ತಾನೆ?

ಕಚ್ಚಿನ್ಮಂತ್ರಯಸೇ ನೈಕಃ ಕಚ್ಚಿನ್ನ ಬಹುಭಿಃ ಸಹ ।
ಕಚ್ಚಿತ್ತೇ ಮಂತ್ರಿತೋ ಮಂತ್ರೋ ರಾಷ್ಟ್ರಂ ನ ಪರಿಧಾವತಿ ॥೧೮॥

ಒಬ್ಬನೇ ಕುಳಿತು ನೀನು ಮಂತ್ರಾಲೋಚನೆ ಮಾಡುವುದಿಲ್ಲ ತಾನೆ? ಬಹುಜನ-ರೊಂದಿಗೆ ಕೂಡ ಮಂತ್ರಾಲೋಚನೆ ಮಾಡುವುದಿಲ್ಲ ತಾನೆ? ನೀನು ರಹಸ್ಯವಾಗಿ ಮಾಡಿದ ಮಂತ್ರಾಲೋಚನೆ ಹೊರಗಿನವರಿಗೆ ತಿಳಿಯುವುದಿಲ್ಲ ತಾನೆ?

ಕಚ್ಚಿದರ್ಥಂ ವಿನಿಶ್ಚಿತ್ಯ ಲಘುಮೂಲಂ ಮಹೋದಯಮ್ ।
ಕ್ಷಿಪ್ರಮಾರಭಸೇ ಕರ್ತುಂ ನ ದೀರ್ಘಯಸಿ ರಾಘವ ॥೧೯॥

ಶ್ರಮ ಕಡಿಮೆ ಲಾಭ ಹೆಚ್ಚಾಗಿರುವ ಒಂದು ಕಾರ್ಯವನ್ನು ನಿಶ್ಚಯಿಸಿದ ಬಳಿಕ ಬೇಗನೆ ಪ್ರಾರಂಭಿಸುವೆ ತಾನೆ? ವಿಲಂಬ ಮಾಡುವುದಿಲ್ಲ ತಾನೆ?

ಕಚ್ಚಿತ್ತೇ ಸುಕೃತಾನ್ಯೇವ ಕೃತರೂಪಾಣಿ ವಾ ಪುನಃ ।
ವಿದುಸ್ತೇ ಸರ್ವಕಾರ್ಯಾಣಿ ನ ಕರ್ತವ್ಯಾನಿ ಪಾರ್ಥಿವಾಃ ॥೨೦॥

ಮಾಡಿ ಮುಗಿದಿರುವ ಅಥವಾ ಮುಗಿಯುತ್ತ ಬಂದಿರುವ ನಿನ್ನ ಕಾರ್ಯಗಳನ್ನು ಮಾತ್ರ ಹೊರಗಿನವರು ತಿಳಿಯುತ್ತಾರೆ ತಾನೆ? ಇನ್ನೂ ಮಾಡ ಬೇಕಾಗಿರುವುದನ್ನು ಮೊದಲೇ ತಿಳಿಯುವುದಿಲ್ಲ ತಾನೆ?

ಕಚ್ಚಿನ್ನ ತರ್ಕೈರ್ಯುಕ್ತ್ಯಾ ವಾ ಯೇ ಚಾಪ್ಯಪರಿಕೀರ್ತಿತಾಃ ।
ತ್ವಯಾ ವಾ ತವ ವಾಮಾತ್ಯೈ ರ್ಬುದ್ಧ್ಯತೇ ತಾತ ಮಂತ್ರಿತಮ್ ॥೨೧॥

ನೀನಾಗಲಿ ನಿನ್ನ ಮಂತ್ರಿಗಳಾಗಲಿ ಹೇಳದೆಯೇ, ಕೇವಲ ಊಹೆಯಿಂದಾಗಲಿ ದೃಢವಾದ ಯುಕ್ತಿಗಳಿಂದಾಗಲಿ ನಿನ್ನ ಮಂತ್ರಾಲೋಚನೆ ಹೊರಗಿನವರಿಗೆ ತಿಳಿಯುವುದಿಲ್ಲ ತಾನೆ?

ಕಚ್ಚಿತ್ ಸಹಸ್ರಾನ್ಮೂರ್ಖಾಣಾಮೇಕಮಿಚ್ಛಸಿ ಪಂಡಿತಮ್ ।
ಪಂಡಿತೋ ಹ್ಯರ್ಥಕೃಚ್ಛ್ರೇಷು ಕುರ್ಯಾನ್ನಿಃಶ್ರೇಯಸಂ ಮಹತ್ ॥೨೨॥

ಕಾರ್ಯಸಾಧನೆಗೆ ಸಾವಿರಮೂರ್ಖರ ಬದಲಾಗಿ ಒಬ್ಬ ಬುದ್ಧಿವಂತನನ್ನು ನೀನು ಬಯಸುವೆ ತಾನೆ? ಬುದ್ಧಿವಂತನು ಒಬ್ಬನೇ ಇದ್ದರೂ ಆರ್ಥಿಕ ಮುಗ್ಗಟ್ಟು ಗಳಲ್ಲಿ ಅವನೇ ಚೆನ್ನಾಗಿ ನಿಭಾಯಿಸಬಲ್ಲನು. ತಾರತಮ್ಯ ಮಾಡಕೂಡದೆಂದು ಅಸಮರ್ಥ–ರನ್ನು ಕಾರ್ಯದಲ್ಲಿ ನಿಯೋಜಿಸಬಾರದು.

ಸಹಸ್ರಾಣ್ಯಪಿ ಮೂರ್ಖಾಣಾಂ ಯದ್ಯುಪಾಸ್ತೇ ಮಹೀಪತಿಃ ।
ಅಥವಾಪ್ಯಯುತಾನ್ಯೇವ ನಾಸ್ತಿ ತೇಷು ಸಹಾಯತಾ ॥೨೩॥

ಸಾವಿರ ಅಥವಾ ಹತ್ತು ಸಾವಿರ ಮೂರ್ಖರನ್ನು ಬಳಿಯಲ್ಲಿ ಇಟ್ಟುಕೊಂಡರೂ ಅವರಿಂದೇನೂ ಸಹಾಯವಾಗುವುದಿಲ್ಲ.

ಏಕೋಽಪ್ಯಮಾತ್ಯೋ ಮೇಧಾವೀ ಶೂರೋ ದಕ್ಷೋ ವಿಚಕ್ಷಣಃ ।
ರಾಜಾನಂ ರಾಜಮಾತ್ರಂ ವಾ ಪ್ರಾಪಯೇನ್ಮಹತೀಂ ಶ್ರಿಯಮ್ ॥೨೪॥

ಮೇಧಾವಿ ಶೂರ ದಕ್ಷ ವಿಚಕ್ಷಣನಾಗಿರುವ ಒಬ್ಬನೇ ಮಂತ್ರಿ ರಾಜನನ್ನಾಗಲಿ ರಾಜಕುಮಾರನನ್ನಾಗಲಿ ಮಹಾ ಐಶ್ವರ್ಯಕ್ಕೆ ಭಾಗಿಯಾಗಿ ಮಾಡಬಲ್ಲನು.

ಕಚ್ಚಿನ್ಮುಖ್ಯಾ ಮಹತ್ಸ್ವೇವ ಮಧ್ಯಮೇಷು ಚ ಮಧ್ಯಮಾಃ ।
ಜಘನ್ಯಾಸ್ತು ಜಘನ್ಯೇಷು ಭೃತ್ಯಾಃ ಕರ್ಮಸು ಯೋಜಿತಾಃ ॥೨೫॥

ಉತ್ತಮದರ್ಜೆಯ ಭೃತ್ಯರನ್ನು ಉತ್ತಮ ಕಾರ್ಯಗಳಲ್ಲಿಯೇ, ಮಧ್ಯಮರನ್ನು ಮಧ್ಯಮಕಾರ್ಯಗಳಲ್ಲಿಯೇ, ಕೆಳಗಿನವರನ್ನು ಕೆಳಗಿನ ಕಾರ್ಯಗಳಲ್ಲಿಯೇ ನೇಮಿಸುವೆ ತಾನೆ?

ಅಮಾತ್ಯಾನುಪಧಾತೀತಾನ್ ಪಿತೃಪೈತಾಮಹಾನ್ ಶುಚೀನ್ ।
ಶ್ರೇಷ್ಠಾನ್ ಶ್ರೇಷ್ಠೇಷು ಕಚ್ಚಿತ್ತ್ವಂ ನಿಯೋಜಯಸಿ ಕರ್ಮಸು ॥೨೬॥

ಆಸೆ ಆಮಿಷಗಳಿಗೊಳಗಾಗಿ ರಾಜ ಕಾರ್ಯದಲ್ಲಿ ವಂಚನೆ ಮಾಡದಿರುವ ರಾಜನಿಷ್ಠರ ಪರಂಪರೆಯಲ್ಲಿಯೇ ಬಂದಿರುವ ತ್ರಿಕರಣಶುದ್ಧಿ ಉಳ್ಳ ಶ್ರೇಷ್ಠ ಅಮಾತ್ಯರನ್ನು ಶ್ರೇಷ್ಠಕಾರ್ಯಗಳಲ್ಲಿ ನಿಯೋಜಿಸುವೆ ತಾನೆ?

ಕಚ್ಚಿನ್ನೋಗ್ರೇಣ ದಂಡೇನ ಭೃಶಮುದ್ವೇಜಿತಪ್ರಜಮ್ ।
ರಾಷ್ಟ್ರಂ ತವಾನುಜಾನಂತಿ ಮಂತ್ರಿಣಃ ಕೈಕಯೀಸುತ ॥೨೭॥

ರಾಷ್ಟ್ರದಲ್ಲಿ ಪ್ರಜೆಗಳು ನೀನು ಕೊಡುವ ಅತಿಯಾದ ಉಗ್ರಶಿಕ್ಷೆಯಿಂದ ಬಹಳ ಉದ್ವೇಗಗೊಳ್ಳುವುದನ್ನು ನಿನ್ನ ಅಮಾತ್ಯರು ಸಮ್ಮತಿಸುವುದಿಲ್ಲ ತಾನೆ? ಉಗ್ರದಂಡನೆ-ಯನ್ನು ತಡೆಯುತ್ತಾರೆ ತಾನೆ?

ಕಚ್ಚಿತ್ತಾ ತ್ವಂ ನಾವಜಾನಂತಿ ಯಾಜಕಾಃ ಪತಿತಂ ಯಥಾ ।
ಉಗ್ರಪ್ರತಿಗ್ರಹೀತಾರಂ ಕಾಮಯಾನಮಿವ ಸ್ತ್ರಿಯಃ ॥೨೮॥

ಕುಲಟೆಯರಾದ ಸ್ತ್ರೀಯರು ತಮ್ಮನ್ನು ಪ್ರೀತಿಸುವ ಪತಿಯನ್ನು ತಿರಸ್ಕರಿಸುತ್ತಾರೆ. ಹಾಗೇ ಉಗ್ರವಾಗಿ ಪ್ರಜೆಗಳಿಂದ ತೆರಿಗೆಯನ್ನು ಸಂಗ್ರಹಿಸುತ್ತ ರಾಜನು ಯಜ್ಞ ಮಾಡಲು ಬಯಸಿದರೆ ಯಾಜ್ಞಿಕರು ಅಂಥ ರಾಜನನ್ನು ಪತಿತನಂತೆ ಕಂಡು ತಿರಸ್ಕರಿಸುತ್ತಾರೆ. ಹಾಗೆ ನಿನ್ನನ್ನು ಯಾಜ್ಞಿಕರು ತಿರಸ್ಕರಿಸುತ್ತಿಲ್ಲ ತಾನೆ?

ಉಪಾಯಕುಶಲಂ ವೈದ್ಯಂ ಭೃತ್ಯಂ ಸಂದೂಷಣೇ ರತಮ್ ।
ಶೂರಮೈಶ್ವರ್ಯಕಾಮಂ ಚ ಯೋ ನ ಹಂತಿ ಸ ವಧ್ಯತೇ ॥೨೯॥

ರಾಜನೀತಿಯನ್ನು ಚೆನ್ನಾಗಿ ಬಲ್ಲ ದುಷ್ಟವೈದ್ಯನನ್ನೂ ಪ್ರಾಮಾಣಿಕ ವ್ಯಕ್ತಿಗಳ ಬಗ್ಗೆ ಚಾಡಿ ಹೇಳುವ ಭೃತ್ಯನನ್ನೂ, ರಾಜ್ಯೈಶ್ವರ್ಯ ಲೋಭಿಯಾದ ಶೂರ ಯೋಧ-ನನ್ನೂ ರಾಜನು ಕೊಲ್ಲದೆ ಬಿಟ್ಟರೆ ಅವರೇ ರಾಜನನ್ನು ಕೊಲ್ಲುತ್ತಾರೆ.

ಕಚ್ಚಿದ್ದೃಷ್ಟಶ್ಚ ಶೂರಶ್ಚ ಮತಿಮಾನ್ ಧೃತಿಮಾನ್ ಶುಚಿಃ ।
ಕುಲೀನಶ್ಚಾನುರಕ್ತಶ್ಚ ದಕ್ಷಃ ಸೇನಾಪತಿಃ ಕೃತಃ ॥೩೦॥

ವ್ಯವಹಾರದಲ್ಲಿ ಗಟ್ಟಿಗ, ಶೂರ, ಬುದ್ಧಿವಂತ, ಧೈರ್ಯಶಾಲಿ, ತ್ರಿಕರಣಶುದ್ಧ, ಕುಲೀನ ಹಾಗೂ ಅನುರಕ್ತನಾದ ಒಬ್ಬ ದಕ್ಷಸೇನಾಪತಿಯನ್ನು ನಿಯೋಜಿಸುವೆ ತಾನೆ?

ಬಲವಂತಶ್ಚ ಕಚ್ಚಿತ್ತೇ ಮುಖ್ಯಾ ಯುದ್ಧವಿಶಾರದಾಃ ।
ದೃಷ್ಟಾಪದಾನಾ ಏಕ್ರಾಂತಾಸ್ತ್ವಯಾ ಸತ್ಕೃತ್ಯ ಮಾನಿತಾಃ ॥೩೧॥

ಬಲಿಷ್ಠರು, ಸೇನೆಯಲ್ಲಿ ಮುಖ್ಯರಾಗಿರುವವರು, ಯುದ್ಧವಿಶಾರದರು, ಹಿಂದೆ ಯುದ್ಧಗಳಲ್ಲಿ ಸಾಹಸವನ್ನು ತೋರಿದವರು, ಪರಾಕ್ರಮಿಗಳು ಇಂಥವರನ್ನು ಸತ್ಕರಿಸಿ ಗೌರವಿಸುವಿ ತಾನೆ?

ಕಚ್ಚಿದ್ಬಲಸ್ಯ ಭಕ್ತಂ ಚ ವೇತನಂ ಚ ಯಥೋಚಿತಮ್ ।
ಸಂಪ್ರಾಪ್ತಕಾಲಂ ದಾತವ್ಯಂ ದದಾಸಿ ನ ವಿಲಂಬಸೇ ॥೩೨॥

ಸೈನ್ಯಕ್ಕೆ ಯಥೋಚಿತವಾಗಿ ಆಯಾ ಕಾಲದಲ್ಲಿ ಕೊಡಬೇಕಾಗಿರುವ ಭತ್ಯವನ್ನು ವೇತನವನ್ನೂ ಕೊಡುವೆ ತಾನೆ? ವಿಲಂಬ ಮಾಡುವುದಿಲ್ಲ ತಾನೆ?

ಕಾಲಾತಿಕ್ರಮಣಾಚ್ಚೈವ ಭಕ್ತವೇತನಯೋರ್ಭೃತಾಃ ।
ಭರ್ತುಃ ಕುಪ್ಯಂತಿ ದುಷ್ಯಂತಿ ಸೋಽನರ್ಥಃ ಸುಮಹಾನ್ ಸ್ಮೃತಃ ॥೩೩॥

ಭತ್ಯವೇತನಗಳಿಂದ ಜೀವಿಸುವವರು ರಾಜನು ಅವುಗಳನ್ನು ಕೊಡುವಲ್ಲಿ ಕಾಲಾತಿಕ್ರಮಣ ಮಾಡಿದರೆ ರಾಜನಲ್ಲಿ ಕುಪಿತರಾಗುತ್ತಾರೆ. ದುಷ್ಟರಾಗುತ್ತಾರೆ ಇದು ಮಹಾ ಅನರ್ಥಕರ.

ಕಚ್ಚಿತ್ ಸರ್ವೇಽನುರಕ್ತಾಸ್ತಾ ತ್ವಂ ಕುಲಪುತ್ರಾಃ ಪ್ರಧಾನತಃ ।
ಕಚ್ಚಿತ್ ಪ್ರಾಣಾಂಸ್ತವಾರ್ಥೇಷು ಸಂತ್ಯಜಂತಿ ಸಮಾಹಿತಾಃ ॥೩೪॥

ನಿನ್ನ ವಿಷಯದಲ್ಲಿ ಎಲ್ಲ ಪ್ರಧಾನ ಜ್ಞಾತಿಬಾಂಧವರು ಅನುರಕ್ತರಾಗಿರುವರು ತಾನೆ? ನಿನ್ನ ಕಾರ್ಯಸಾಧನೆಗಾಗಿ ಅವರು ಜೊತೆಗೆ ಸೇರಿ ಪ್ರಾಣವನ್ನಾದರೂ ಕೊಡಲು ಸಿದ್ಧರಾಗಿರುವರು ತಾನೆ?

ಕಚ್ಚಿಜ್ಜಾನಪದೋ ವಿದ್ವಾನ್ ದಕ್ಷಿಣಃ ಪ್ರತಿಭಾನವಾನ್ ।
ಯಥೋಕ್ತವಾದೀ ದೂತಸ್ತೇ ಕೃತೋ ಭರತ ಪಂಡಿತಃ ॥೩೫॥

ಸ್ವದೇಶದವನು ವಿದ್ವಾಂಸನು ಕಾರ್ಯದಕ್ಷ ಪ್ರತಿಭಾಶಾಲಿ ಉಭಯ ಪಕ್ಷದವರು ನೀಡುವ ಸಂದೇಶ ಪ್ರತಿಸಂದೇಶಗಳನ್ನು ಯಥಾವತ್ತಾಗಿ ಹೇಳಬಲ್ಲವನು ಮತ್ತು ಪಂಡಿತನು —ಇಂಥವನನ್ನು ನೀನು ರಾಯಭಾರಿಯಾಗಿ ಮಾಡುವೆ ತಾನೆ?

ಕಚ್ಚಿದಷ್ಟಾದಶಾನ್ಯೇಷು ಸ್ವಪಕ್ಷೇ ದಶ ಪಂಚ ಚ ।
ತ್ರಿಭಿಸ್ತ್ರಿಭಿರವಿಜ್ಞಾತೈರ್ವೇತ್ಸಿ ತೀರ್ಥಾನಿ ಚಾರಣೈಃ ॥೩೬॥

ಶತ್ರುಪಕ್ಷದ ಹದಿನೆಂಟು 'ತೀರ್ಥ'ಗಳ ಅಧಿಕಾರಿಗಳ ಮೇಲೂ ಸ್ವಪಕ್ಷದ ಹದಿನೈದು ಅಧಿಕಾರಿಗಳ ಮೇಲೂ ಮೂರು ಮೂರು ಮಂದಿ ಗುಪ್ತಚಾರರನ್ನಿಟ್ಟು ಅವರ ಮೂಲಕ ಆ ಅಧಿಕಾರಿಗಳ ಇಂಗಿತವನ್ನು ಅರಿಯುತ್ತಿರುವೆ ತಾನೆ?

ಮಂತ್ರಿ, ಪುರೋಹಿತ, ಯುವರಾಜ, ಸೇನಾಧಿಪತಿ, ಅಂತಃಪುರ ದ್ವಾರಪಾಲಕ, ಅಂತಃಪುರ ಕಾರ್ಯನಿರ್ವಾಹಕ, ಬಂಧಿಖಾನೆಗಳ ಅಧಿಕಾರಿ, ಕೋಶಾಧಿಕಾರಿ, ರಾಜಾಜ್ಞೆಯನ್ನು ಘೋಷಣೆ ಮಾಡುವವನು, ರಾಜನ ಕಡೆಯ ವಕೀಲ, ಸೈನ್ಯಕ್ಕೆ ವೇತನಾಧ್ಯಕ್ಷ, ನಗರಾಧ್ಯಕ್ಷ, ಬೇರೆ ಅಧಿಕಾರಿಗಳಿಗೆ ವೇತನಾಧ್ಯಕ್ಷ, ರಾಜಸಭಾ-ನಿದೇಶಕ, ಮುಖ್ಯ ನ್ಯಾಯಾಧ್ಯಕ್ಷ, ದಂಡಪಾಲ, ಗಿರಿವನಜಲಾದಿ ದುರ್ಗಪಾಲ, ಗಡೀರಕ್ಷಣಾಧಿಕಾರಿ—ಹೀಗೆ ಶತ್ರುಪಕ್ಷದ ಹದಿನೆಂಟು ಅಧಿಕಾರಿಗಳ ಮೇಲೆ ಬೇಹುಗಾರರನ್ನಿಡಬೇಕು. ಸ್ವಪಕ್ಷದಲ್ಲಿ ಮಂತ್ರಿ ಪುರೋಹಿತ ಯುವರಾಜ ಈ ಮೂರು ಮಂದಿಗಳನ್ನು ಬಿಟ್ಟು ಉಳಿದ ಹದಿನೈದು ಅಧಿಕಾರಿಗಳ ಮೇಲೆ ಗುಪ್ತಚರರನ್ನಿಡಬೇಕು. 'ಚಾರಾಶ್ಚಕ್ಷೂಂಷಿ ರಾಜ್ಞಾಂ' ಗೂಢಚಾರರು ರಾಜನಿಗೆ ಕಣ್ಣಿನಂತೆ.

ಕಚ್ಚಿದ್ವ್ಯಪಾಸ್ತಾನಹಿತಾನ್ ಪ್ರತಿಯಾತಾಂಶ್ಚ ಸರ್ವದಾ ।
ದುರ್ಬಲಾನನವಜ್ಞಾಯ ವರ್ತಸೇ ರಿಪುಸೂದನ ॥೩೭॥

ರಾಜದ್ರೋಹಿಗಳು ಗಡಿಪಾರಾದರೂ ಹೇಗೋ ಹಿಂತಿರುಗಿ ಬಂದಾಗ ಅವರನ್ನು ದುರ್ಬಲರೆಂದು ಉಪೇಕ್ಷಿಸುತ್ತಿಲ್ಲ ತಾನೆ? ಅವರಿಗೆ ಯಾರದೋ ಬೆಂಬಲವಿರ-ಬಹುದಾದ್ದರಿಂದ ಅಪಾಯ ಮಾಡಬಹುದು.

ಕಚ್ಚಿನ್ನ ಲೌಕಾಯತಿಕಾನ್ ಬ್ರಾಹ್ಮಣಾಂಸ್ತಾತ ಸೇವಸೇ ।
ಅನರ್ಥಕುಶಲಾ ಹ್ಯೇತೇ ಬಾಲಾಃ ಪಂಡಿತಮಾನಿನಃ ॥೩೮॥

ಸ್ವತಃ ಅಜ್ಞರಾಗಿದ್ದು ತಮ್ಮನ್ನು ತಾವೇ ಬುದ್ಧಿಜೀವಿಗಳೆಂದುಕೊಂಡಿರುವ ನಾಸ್ತಿಕ-ರಾದ ಬ್ರಾಹ್ಮಣರು ಎಲ್ಲೆಡೆ ನಾಸ್ತಿಕ್ಯವನ್ನು ಪ್ರಸಾರಮಾಡಿ ಅನರ್ಥ ಉಂಟು-ಮಾಡುವಲ್ಲಿ ನಿಪುಣರು. ಅವರನ್ನು ನೀನು ಆದರಿಸುವುದಿಲ್ಲ ತಾನೆ?

ಧರ್ಮಶಾಸ್ತ್ರೇಷು ಮುಖ್ಯೇಷು ವಿದ್ಯಮಾನೇಷು ದುರ್ಬುಧಾಃ ।
ಬುದ್ಧಿಮಾನ್ವೀಕ್ಷಿಕೀಂ ಪ್ರಾಪ್ಯ ನಿರರ್ಥಂ ಪ್ರವದಂತಿ ತೇ ॥೩೯॥

ಈ ನಾಸ್ತಿಕರು ಶ್ರೇಷ್ಠವಾದ ಧರ್ಮಶಾಸ್ತ್ರಗಳಿರುವಾಗಲೇ ತದ್ವಿರುದ್ಧ ಬುದ್ಧಿ

ಉಳ್ಳವರು, ಶುಷ್ಕತರ್ಕಬುದ್ಧಿಯನ್ನು ಆಶ್ರಯಿಸಿ ನಿರರ್ಥಕವಾಗಿ ವಾದ ಮಾಡುತ್ತಾರೆ.

ವೀರೈರಧ್ಯುಷಿತಾಂ ಪೂರ್ವಮಸ್ಮಾಕಂ ತಾತ ಪೂರ್ವಕೈಃ ।
ಸತ್ಯನಾಮಾಂ ದೃಢದ್ವಾರಾಂ ಹಸ್ತ್ಯಶ್ವರಥಸಂಕುಲಾಮ್ ॥೪೦॥

ವೀರರಾದ ನಮ್ಮ ಪೂರ್ವಜರು ಹಿಂದೆ ಇದ್ದ ಅಯೋಧ್ಯಾನಗರವು 'ಅ–ಯೋಧ್ಯಾ' 'ಶತ್ರುಗಳಿಗೆ ಅಭೇದ್ಯ' ಎಂಬ ಅನ್ವರ್ಥಕನಾಮ ಉಳ್ಳದ್ದು. ದೃಢವಾದ ದ್ವಾರ ಉಳ್ಳದ್ದು ಗಜ ತುರಗ ರಥ ಸೈನ್ಯಗಳಿಂದ ತುಂಬಿದುದು ಅದನ್ನು ರಕ್ಷಿಸುತ್ತಿರುವೆ ತಾನೆ?

ಬ್ರಾಹ್ಮಣೈಃ ಕ್ಷತ್ರಿಯೈರ್ವೈಶ್ಯೈಃ ಸ್ವಕರ್ಮನಿರತೈಃ ಸದಾ ।
ಜಿತೇಂದ್ರಿಯೈರ್ಮಹೋತ್ಸಾಹೈರ್ವೃತಾಮಾರ್ಯೈಃ ಸಹಸ್ರಶಃ ॥೪೧॥

ಬ್ರಾಹ್ಮಣರು ಕ್ಷತ್ರಿಯರು ವೈಶ್ಯರು ಸದಾ ಸ್ವಕರ್ಮ ನಿರತರು, ಜಿತೇಂದ್ರಿ–ಯರು, ಮಹಾಉತ್ಸಾಹಭರಿತರು ಸಜ್ಜನರು ಸಾವಿರಾರು ಮಂದಿ ಇಲ್ಲಿ ಇರುವರು.

ಪ್ರಾಸಾದೈರ್ವಿವಿಧಾಕಾರೈರ್ವೃತಾಂ ವೈದ್ಯಜನಾಕುಲಾಮ್ ।
ಕಚ್ಚಿತ್ ಸಮುದಿತಾಂ ಸ್ಫೀತಾಮಯೋಧ್ಯಾಂ ಪರಿರಕ್ಷಸಿ ॥೪೨॥

ನಾನಾ ಆಕಾರದ ಭವ್ಯಸೌಧಗಳಿಂದ ವೈದ್ಯಜನರಿಂದ ವಿದ್ವಾಂಸರಿಂದ ತುಂಬಿದ್ದು ಸಂತುಷ್ಟರಾಗಿ ಜನರು ವಾಸಮಾಡುವ ಸಮೃದ್ಧವಾದ ನಗರ ಇದು ಅಯೋಧ್ಯೆ. ಅದನ್ನು ರಕ್ಷಿಸುತ್ತಿರುವೆ ತಾನೆ?

ಕಚ್ಚಿಚ್ಚೈತ್ಯಶತೈರ್ಜುಷ್ಟಃ ಸುನಿವಿಷ್ಟಜನಾಕುಲಃ ।
ದೇವಸ್ಥಾನೈಃ ಪ್ರಪಾಭಿಶ್ಚ ತಟಾಕೈಶ್ಚೋಪಶೋಭಿತಃ ॥೪೩॥

ಶ್ಯೇನಚಿತಿ ಮುಂತಾದ ಚಿತಿಗಳಲ್ಲಿ ನಡೆಸುವ ಅನೇಕ ಯಾಗಗಳುಳ್ಳ, ಸ್ಥಿರವಾಗಿ ನೆಮ್ಮದಿಯಿಂದ ನೆಲೆಸುವ ಜನರಿಂದ ತುಂಬಿದ, ದೇವಸ್ಥಾನ ಅರವಟ್ಟಿಗೆ ಸರೋವರ–ಗಳಿಂದ ಶೋಭಿಸುವ ನಮ್ಮ ಕೋಸಲದೇಶವು ಸಮೃದ್ಧವಾಗಿದೆ ತಾನೆ?

ಪ್ರಹೃಷ್ಟನರನಾರೀಕಃ ಸಮಾಜೋತ್ಸವಶೋಭಿತಃ ।
ಸುಕೃಷ್ಟಸೀಮಾ ಪಶುಮಾನ್ ಹಿಂಸಾಭಿರಭಿವರ್ಜಿತಃ ॥೪೪॥

ಕೋಸಲದೇಶದಲ್ಲಿ ನರನಾರಿಯರು ಸಂತೋಷದಿಂದ ಸಮಾಜೋತ್ಸವಗಳನ್ನು ನಡೆಸುತ್ತಾರೆ. ಒಳ್ಳೆಯ ಕೃಷಿಯಾಗುವ ಭೂಮಿ, ಪಶುಸಮೃದ್ಧಿ ಉಳ್ಳದ್ದು. ಎಲ್ಲಿಯೂ ಹಿಂಸಾಚಾರಗಳಿಲ್ಲ.

ಅದೇವಮಾತೃಕೋ ರಮ್ಯಃ ಶ್ವಾಪದೈಃ ಪರಿವರ್ಜಿತಃ ।
ಪರಿತ್ಯಕ್ತೋ ಭಯೈಃ ಸರ್ವೈಃ ಖನಿಭಿಶ್ಚೋಪಶೋಭಿತಃ ॥೪೫॥

ಕೋಸಲ ದೇಶದಲ್ಲಿ ಕೃಷಿಕರು ಮಳೆಯನ್ನೇ ಅವಲಂಬಿಸಿ ಕೃಷಿ ಮಾಡುವುದಿಲ್ಲ. ದೇಶವು ರಮ್ಯವಾಗಿದೆ. ಕ್ರೂರಮೃಗಗಳಿಲ್ಲ. ಜನಗಳಿಗೆ ಯಾವುದೇ ಭಯವಿಲ್ಲ. ಖನಿಗಳಿಂದ ದೇಶವು ಶೋಭಿಸುತ್ತದೆ.

ವಿವರ್ಜಿತೋ ನರೈಃ ಪಾಪೈರ್ಮಮ ಪೂರ್ವೈಃ ಸುರಕ್ಷಿತಃ ।
ಕಚ್ಚಿಜ್ಜನಪದಃ ಸ್ಫೀತಃ ಸುಖಂ ವಸತಿ ರಾಘವ ॥೪೬॥

ಕೋಸಲದೇಶದಲ್ಲಿ ದುರಾಚಾರಿ ಜನರಿಲ್ಲ. ಹಾಗೆ ನಮ್ಮ ಪೂರ್ವಜರಿಂದ ದೇಶವು ರಕ್ಷಿತವಾಗಿದೆ. ಇಂಥ ಸಮೃದ್ಧವಾದ ನಮ್ಮ ದೇಶ ನಿನ್ನ ಆಳ್ವಿಕೆಯಲ್ಲಿ ಸಮೃದ್ಧವಾಗಿ ಸುಖವಾಗಿದೆ ತಾನೆ?

ಕಚ್ಚಿತ್ತೇ ದಯಿತಾಃ ಸರ್ವೇ ಕೃಷಿಗೋರಕ್ಷಜೀವಿನಃ ।
ವಾರ್ತಾಯಾಂ ಸಂಶ್ರಿತಾಸ್ತಾತ ಲೋಕೋ ಹಿ ಸುಖಮೇಧತೇ ॥೪೭॥

ಕೃಷಿ ಪಶುಪಾಲನೆಗಳಿಂದ ಜೀವಿಸುವ ಜನರೆಲ್ಲರೂ ನಿನಗೆ ಪ್ರಿಯರಾಗಿರುವರು ತಾನೆ? ಏಕೆಂದರೆ ವಾಣಿಜ್ಯವನ್ನು ಅವಲಂಬಿಸುವ ಜನರೇ ಸುಖ ಸಮೃದ್ಧಿಯನ್ನು ಹೊಂದುತ್ತಾರೆ.

ತೇಷಾಂ ಗುಪ್ತಿಪರೀಹಾರೈಃ ಕಚ್ಚಿತ್ತೇ ಭರಣಂ ಕೃತಮ್ ।
ರಕ್ಷ್ಯಾ ಹಿ ರಾಜ್ಞಾ ಧರ್ಮೇಣ ಸರ್ವೇ ವಿಷಯವಾಸಿನಃ ॥೪೮॥

ಕೃಷಿ ಗೋರಕ್ಷಣೆ ವಾಣಿಜ್ಯಗಳನ್ನು ನಡೆಸುವವರಿಗೆ ಸರಿಯಾದ ರಕ್ಷಣೆ ನೀಡುತ್ತಾ ಆಪತ್ತುಗಳನ್ನು ಪರಿಹರಿಸುತ್ತ ಅವರ ಪೋಷಣೆಯನ್ನು ಮಾಡುತ್ತಿರುವೆ ತಾನೆ? ರಾಜನು ದೇಶವಾಸಿಗಳೆಲ್ಲರನ್ನೂ ಧರ್ಮದಿಂದ ಕಾಪಾಡಬೇಕು.

ಕಚ್ಚಿತ್ ಸ್ತ್ರಿಯಃ ಸಾಂತ್ವಯಸಿ ಕಚ್ಚಿತ್ತಾಶ್ಚ ಸುರಕ್ಷಿತಾಃ ।
ಕಚ್ಚಿನ್ನ ಶ್ರದ್ದಧಾಸ್ಯಾಸಾಂ ಕಚ್ಚಿದ್ಗುಹ್ಯಂ ನ ಭಾಷಸೇ ॥೪೯॥

ಸ್ತ್ರೀಯರನ್ನು ಸಂತೈಸುವೆ ತಾನೆ? ಅವರು ಸುರಕ್ಷಿತರಾಗಿರುವರು ತಾನೆ? ಅವರಲ್ಲಿ ನೀನು ನಂಬಿಕೆ ಇಡುತ್ತಿಲ್ಲ ತಾನೆ? ರಹಸ್ಯವನ್ನು ಅವರಿಗೆ ಹೇಳ್ತುತಿಲ್ಲ ತಾನೆ?

ಕಚ್ಚಿನ್ನಾಗವನಂ ಗುಪ್ತಂ ಕಚ್ಚಿತ್ತೇ ಸಂತಿ ಧೇನುಕಾಃ ।
ಕಚ್ಚಿನ್ನ ಗಣಿಕಾಶ್ವಾನಾಂ ಕುಂಜರಾಣಾಂ ಚ ತೃಪ್ಯಸಿ ॥೫೦॥

ಆನೆಗಳ ಲಾಯಗಳನ್ನು ರಕ್ಷಿಸುವೆ ತಾನೆ? ಕಾಮಧೇನುಗಳು ಹೆಣ್ಣಾನೆ ಕುದುರೆ–ಗಳು ನಿನ್ನಲ್ಲಿ ಇವೆ ತಾನೆ? ಹೆಣ್ಣಾನೆ ಕುದುರೆ ಆನೆಗಳಿಂದ ನೀನು ತೃಪ್ತನಾಗಿಲ್ಲ ತಾನೆ?

ಕಚ್ಚಿದ್ದರ್ಶಯಸೇ ನಿತ್ಯಂ ಮನುಷ್ಯಾಣಾಂ ವಿಭೂಷಿತಮ್ ।
ಉತ್ಥಾಯೋತ್ಥಾಯ ಪೂರ್ವಾಹ್ಣೇ ರಾಜಪುತ್ರ ಮಹಾಪಥೇ ॥೫೧॥

ರಾಜಕುಮಾರನೆ, ಪ್ರತಿದಿನ ಬೆಳಿಗ್ಗೆ ಎದ್ದು ಸಭೆಯಲ್ಲಿ ಮತ್ತು ರಾಜಮಾರ್ಗದಲ್ಲಿ ನೀನು ಅಲಂಕೃತನಾಗಿ ಪ್ರಜೆಗಳಿಗೆ ದರ್ಶನ ನೀಡುವೆ ತಾನೆ?

ಕಚ್ಚಿನ್ನ ಸರ್ವೇ ಕರ್ಮಾಂತಾಃ ಪ್ರತ್ಯಕ್ಷಾಸ್ತೇऽವಿಶಂಕಯಾ ।
ಸರ್ವೇ ವಾ ಪುನರುತ್ಸೃಷ್ಟಾ ಮಧ್ಯಮೇವಾತ್ರ ಕಾರಣಮ್ ॥೫೨॥

ಸೇವಕರು ಎಲ್ಲರೂ ನಿರ್ಭಯವಾಗಿ ನಿನಗೆ ಪ್ರತ್ಯಕ್ಷ ಕಾಣಿಸಿಕೊಳ್ಳುತ್ತಿಲ್ಲ ತಾನೆ? ಭಯದಿಂದ ಮರೆಯಾಗಿರುವುದಿಲ್ಲ ತಾನೆ? ನಿರ್ಭಯರಾಗಿಯೂ ಅಲ್ಲದೆ, ಭೀತರಾಗಿಯೂ ಅಲ್ಲದೆ, ಮಧ್ಯಮಮಾರ್ಗವನ್ನೇ ಸೇವಕರು ಅನುಸರಿಸಿದರೆ ಕಾರ್ಯಸಿದ್ಧಿಯಾಗುವುದು.

ಕಚ್ಚಿತ್ ಸರ್ವಾಣಿ ದುರ್ಗಾಣಿ ಧನಧಾನ್ಯಾಯುಧೋದಕೈಃ ।
ಯಂತ್ರೈಶ್ಚ ಪರಿಪೂರ್ಣಾನಿ ತಥಾ ಶಿಲ್ಪಿಧನುರ್ಧರೈಃ ॥೫೩॥

ಎಲ್ಲ ದುರ್ಗಗಳೂ ದೇಶರಕ್ಷಣೆಗಾಗಿ ಧನ ಧಾನ್ಯ ಆಯುಧ ಉದಕಗಳಿಂದ, ಆಯುಧಗಳನ್ನು ಎಸೆಯುವ ಯಂತ್ರಗಳಿಂದ ಮತ್ತು ಶಿಲ್ಪಿ ಹಾಗೂ ಧನುರ್ಧಾರಿ ವೀರಯೋಧರಿಂದ ಕೂಡಿವೆ ತಾನೆ?

ಆಯಸ್ತೇ ವಿಪುಲಃ ಕಚ್ಚಿತ್ ಕಚ್ಚಿದಲ್ಪತರೋ ವ್ಯಯಃ ।
ಅಪಾತ್ರೇಷು ನ ತೇ ಕಚ್ಚಿತ್ ಕೋಶೋ ಗಚ್ಛತಿ ರಾಘವ ॥೫೪॥

ಆದಾಯವು ವಿಪುಲ ತಾನೆ? ವ್ಯಯವು ಕಡಿಮೆ ತಾನೆ? ಅಪಾತ್ರರಿಗೆ ನಿನ್ನ ಕೋಶವು ಸೋರಿಹೋಗುವುದಿಲ್ಲ ತಾನೆ?

ದೇವತಾರ್ಥೇ ಚ ಪಿತ್ರರ್ಥೇ ಬ್ರಾಹ್ಮಣಾಭ್ಯಾಗತೇಷು ಚ ।
ಯೋಧೇಷು ಮಿತ್ರವರ್ಗೇಷು ಕಚ್ಚಿದ್ಗಚ್ಛತಿ ತೇ ವ್ಯಯಃ ॥೫೫॥

ದೇವಕಾರ್ಯಕ್ಕೆ ಪಿತೃಕಾರ್ಯಕ್ಕೆ ಬ್ರಾಹ್ಮಣ ಅತಿಥಿ ಸತ್ಕಾರಗಳಿಗೆ ಯೋಧರಿಗೆ ಮಿತ್ರವರ್ಗದವರಿಗೆ ಆಯಕ್ಕಿಂತ ಕಡಿಮೆ ವ್ಯಯವಾಗುತ್ತಿದೆ ತಾನೆ?

ಕಚ್ಚಿದಾರ್ಯೋ ವಿಶುದ್ಧಾತ್ಮಾSSಕ್ಷಾರಿತಶ್ಚಾಪಕರ್ಮಣಾ ।
ಅದೃಷ್ಟಃ ಶಾಸ್ತ್ರಕುಶಲೈರ್ನ ಲೋಪಾದ್ವಧ್ಯತೇ ಶುಚಿಃ ॥೫೬॥

ಶುಚಿಯಾದ ಶುದ್ಧ ಅಂತಃಕರಣವುಳ್ಳ ಸಜ್ಜನನು ಕಳ್ಳತನದ ಮಿಥ್ಯಾಪವಾದಕ್ಕೆ ಗುರಿಯಾದಾಗ ಅವನನ್ನು ಶಾಸ್ತ್ರಕುಶಲರಿಂದ ವಿಚಾರಣೆಗೊಳಪಡಿಸದೆ ಲೋಭದಿಂದ ಅವನನ್ನು ಬಂಧಿಸುತಿಲ್ಲ ತಾನೆ?

ಗೃಹೀತಶ್ಚೈವ ಪೃಷ್ಟಶ್ಚ ಕಾಲೇ ದೃಷ್ಟಃ ಸಕಾರಣಃ ।
ಕಚ್ಚಿನ್ನ ಮುಚ್ಯತೇ ಚೋರೋ ಧನಲೋಭಾನ್ನರರ್ಷಭ ॥೫೭॥

ಚೋರನು ಸಕಾರಣವಾಗಿ ಕಣ್ಣಿಗೆ ಸಿಕ್ಕಿಬಿದ್ದಾಗ ನ್ಯಾಯಾಲಯದಲ್ಲಿ ವಿಚಾರಣೆ ಮಾಡಿ ಚೋರನೆಂದು ನಿರ್ಣಯವಾದ ಅನಂತರವೂ ಅವನು ಲಂಚವಾಗಿ ಕೊಡುವ ಧನದ ಲೋಭದಿಂದ ನ್ಯಾಯಧಿಕಾರಿಗಳು ಅವನನ್ನು ಮುಕ್ತಗೊಳಿಸು ತ್ತಿಲ್ಲ ತಾನೆ?

ವ್ಯಸನೇ ಕಚ್ಚಿದಾಢ್ಯಸ್ಯ ದುರ್ಗತಸ್ಯ ಚ ರಾಘವ ।
ಅರ್ಥಂ ವಿರಾಗಾಃ ಪಶ್ಯಂತಿ ತವಾಮಾತ್ಯಾ ಬಹುಶ್ರುತಾಃ ॥೫೮॥

ಧನಿಕನಿಗೆ ಕಷ್ಟಬಂದಾಗಲೂ ಬಡವನಿಗೆ ಕಷ್ಟಬಂದಾಗಲೂ ಬಹಳ ಅಧ್ಯಯನ ಮಾಡಿರುವ ನಿನ್ನ ಅಮಾತ್ಯರು ನ್ಯಾಯ ತೀರ್ಪು ಕೊಡುವಲ್ಲಿ ಲಂಚದ ವಿಷಯದಲ್ಲಿ ವಿರಕ್ತರಾಗಿ ವರ್ತಿಸುತ್ತಾರೆ ತಾನೆ?

ಯಾನಿ ಮಿಥ್ಯಾಭಿಶಸ್ತಾನಾಂ ಪತಂತ್ಯಸ್ತ್ರಾಣಿ ರಾಘವ ।
ತಾನಿ ಪುತ್ರಪಶೂನ್ ಘ್ನಂತಿ ಪ್ರೀತ್ಯರ್ಥಮನುಶಾಸತಃ ॥೫೯॥

ಸುಳ್ಳು ತೀರ್ಪಿನಿಂದ ಅಪರಾಧಿಗಳೆನಿಸುವವರು ಅತ್ತು ಸುರಿಸುವ ಕಂಬನಿಗಳು ಪಕ್ಷಪಾತ ಮಾಡಿದ ಅಧಿಕಾರಿಯ ಪುತ್ರಪಶುಸಂಪತ್ತುಗಳನ್ನು ನಾಶಮಾಡುತ್ತವೆ.

ಕಚ್ಚಿದ್ವೃದ್ಧಾಂಶ್ಚ ಬಾಲಾಂಶ್ಚ ವೈದ್ಯಮುಖ್ಯಾಂಶ್ಚ ರಾಘವ ।
ದಾನೇನ ಮನಸಾ ವಾಚಾ ತ್ರಿಭಿರೇತೈರ್ಬುಭೂಷಸೇ ॥೬೦॥

ವೃದ್ಧರನ್ನು ಬಾಲಕರನ್ನು ಮುಖ್ಯವೈದ್ಯರನ್ನು ಅಭೀಷ್ಟದಾನ ಪ್ರೀತಿ ಮತ್ತು ಒಳ್ಳೆಯ ಮಾತುಗಳಿಂದ ಮೂರರಿಂದ ಒಲಿಸಿಕೊಳ್ಳುವೆ ತಾನೆ?

ಕಚ್ಚಿದ್ಗುರೂಂಶ್ಚ ವೃದ್ಧಾಂಶ್ಚ ತಾಪಸಾನ್ ದೇವತಾತಿಥೀನ್।
ಚೈತ್ಯಾಂಶ್ಚ ಸರ್ವಾನ್ ಸಿದ್ಧಾರ್ಥಾನ್ ಬ್ರಾಹ್ಮಣಾಂಶ್ಚ ನಮಸ್ಯಸಿ ॥೬೧॥

ಗುರು–ವೃದ್ಧ–ತಪಸ್ವಿ–ದೇವ–ಅತಿಥಿ–ವೃಕ್ಷಗಳನ್ನೂ ವಿದ್ಯೆ ಆಚಾರ ತಪಸ್ಸುಗಳಿಂದ ಕೃತಾರ್ಥರಾದ ಬ್ರಾಹ್ಮಣರನ್ನೂ ನಮಿಸುವೆ ತಾನೆ?

ಕಚ್ಚಿದರ್ಥೇನ ವಾ ಧರ್ಮಮರ್ಥಂ ಧರ್ಮೇಣ ವಾ ಪುನಃ ।
ಉಭೌ ವಾ ಪ್ರೀತಿಲೋಭೇನ ಕಾಮೇನ ಚ ನ ಬಾಧಸೇ ॥೬೨॥

ಅರ್ಥದಿಂದ ಧರ್ಮಕ್ಕೆ ಧರ್ಮದಿಂದ ಅರ್ಥಕ್ಕೆ ಅಥವಾ ಪ್ರೀತಿ ಲೋಭ ಹಾಗೂ ಕಾಮದಿಂದ ಧರ್ಮ ಅರ್ಥಗಳೆರಡಕ್ಕೆ ಬಾಧೆಪಡಿಸುತ್ತಿಲ್ಲ ತಾನೆ?

ಕಚ್ಚಿದರ್ಥಂ ಚ ಧರ್ಮಂ ಚ ಕಾಮಂ ಚ ಜಯತಾಂ ವರ ।
ವಿಭಜ್ಯ ಕಾಲೇ ಕಾಲಜ್ಞ ಸರ್ವಾನ್ ವರದ ಸೇವಸೇ ॥೬೩॥

ಅರ್ಥ ಧರ್ಮ ಕಾಮ ಮೂರು ಪುರುಷಾರ್ಥಗಳನ್ನು ಮೂರು ಕಾಲಗಳಲ್ಲಿ ಪ್ರತ್ಯೇಕವಾಗಿ ವಿಭಾಗಮಾಡಿ ಎಲ್ಲ ಮೂರನ್ನೂ ಸೇವಿಸುವೆ ತಾನೆ?

ಬೆಳಿಗ್ಗೆ ದಾನಾದಿ ಧರ್ಮಾಚರಣೆ, ಮಧ್ಯಾಹ್ನ ರಾಜ್ಯವ್ಯವಹಾರದಿಂದ ಅರ್ಥ ಸಂಪಾದನೆ, ರಾತ್ರಿ ಸ್ರಕ್‌ಚಂದನ ವನಿತಾದಿ ಸೇವನ ರೂಪ ಕಾಮೋಪಭೋಗ ಹೀಗೆ ಮೂರು ಪುರುಷಾರ್ಥಗಳಿಗೆ ಮೂರು ಕಾಲಗಳು.

ಕಚ್ಚಿತ್ತೇ ಬ್ರಾಹ್ಮಣಾಃ ಶರ್ಮ ಸರ್ವಶಾಸ್ತ್ರಾರ್ಥಕೋವಿದಾಃ ।
ಆಶಂಸಂತೇ ಮಹಾಪ್ರಾಜ್ಞ ಪೌರಜಾನಪದೈಃ ಸಹ ॥೬೪॥

ಸರ್ವಶಾಸ್ತ್ರಾರ್ಥ ಕೋವಿದರಾದ ಬ್ರಾಹ್ಮಣರೂ ಪೌರರೂ ದೇಶವಾಸಿಗಳೂ ನಿನಗೆ ಸುಖವಾಗಲೆಂದು ಹಾರೈಸುತ್ತಾರೆ ತಾನೆ?

ನಾಸ್ತಿಕ್ಯಮನೃತಂ ಕ್ರೋಧಂ ಪ್ರಮಾದಂ ದೀರ್ಘಸೂತ್ರತಾಮ್ ।
ಅದರ್ಶನಂ ಜ್ಞಾನವತಾಮಾಲಸ್ಯಂ ಪಂಚವೃತ್ತಿತಾಮ್ ॥೬೫॥

ಏಕಚಿಂತನಮರ್ಥಾನಾಮನರ್ಥಜ್ಞೈಶ್ಚ ಮಂತ್ರಣಮ್ ।
ನಿಶ್ಚಿತಾನಾಮನಾರಂಭಂ ಮಂತ್ರಸ್ಯಾಪರಿರಕ್ಷಣಮ್ ॥೬೬॥

ಮಂಗಲಸ್ಯಾಪ್ರಯೋಗಂ ಚ ಪ್ರತ್ಯುತ್ಥಾನಂ ಚ ಸರ್ವತಃ ।
ಕಚ್ಚಿತ್ತ್ವಂ ವರ್ಜಯಸ್ಯೇತಾನ್ ರಾಜದೋಷಾಂಶ್ಚತುರ್ದಶ ॥೬೭॥

ನಾಸ್ತಿಕ್ಯ, ಸುಳ್ಳು, ಕೋಪ, ಕರ್ತವ್ಯಲೋಪ, ಕಾರ್ಯದಲ್ಲಿ ವಿಲಂಬ, ಜ್ಞಾನಿಗಳನ್ನು ದರ್ಶನ ಮಾಡದಿರುವುದು, ಸೋಮಾರಿತನ, ಪಂಚೇಂದ್ರಿಯ ನಿಗ್ರಹವಿಲ್ಲದಿರುವುದು, ಒಬ್ಬನೇ ಕುಳಿತು ಮಂತ್ರಾಲೋಚನೆ ಮಾಡುವುದು, ರಾಜನೀತಿಯನ್ನು ಅರಿಯದವರೊಡನೆ ಮಂತ್ರಾಲೋಚನೆ ಮಾಡುವುದು, ನಿಶ್ಚಿತವಾದ ಕಾರ್ಯವನ್ನು ಆರಂಭಿಸದಿರುವುದು, ಮಂತ್ರಾಲೋಚನೆಯ ರಹಸ್ಯವನ್ನು ಕಾಪಾಡದಿರುವುದು, ಮಂಗಳಾಚಾರವನ್ನು ಮಾಡದಿರುವುದು, ಯೋಗ್ಯತೆಯನ್ನು ನೋಡದೆ ಎಲ್ಲರಿಗೂ ಒಂದೇರೀತಿ ಎದ್ದು ನಿಲ್ಲುವುದು ಮುಂತಾದ ಸತ್ಕಾರ ಮಾಡುವುದು—ರಾಜರಲ್ಲಿ ಇರಬಾರದ ಈ ಹದಿನಾಲ್ಕು ದೋಷಗಳನ್ನು ನೀನು ವರ್ಜಿಸಿರುವೆ ತಾನೆ?

ದಶ ಪಂಚ ಚತುರ್ವರ್ಗಾನ್ ಸಪ್ತವರ್ಗಂ ಚ ತತ್ತ್ವತಃ ।
ಅಷ್ಟವರ್ಗಂ ತ್ರಿವರ್ಗಂ ಚ ವಿದ್ಯಾಸ್ತಿಸ್ರಶ್ಚ ರಾಘವ ॥೬೮॥

ಇಂದ್ರಿಯಾಣಾಂ ಜಯಂ ಬುದ್ಧ್ವಾ ಷಾಡ್ಗುಣ್ಯಂ ದೈವಮಾನುಷಮ್ ।
ಕೃತ್ಯಂ ವಿಂಶತಿವರ್ಗಂ ಚ ತಥಾ ಪ್ರಕೃತಿಮಂಡಲಮ್ ॥೬೯॥

ಯಾತ್ರಾದಂಡವಿಧಾನಂ ಚ ದ್ವಿಯೋನೀ ಸಂಧಿವಿಗ್ರಹೌ ।
ಕಚ್ಚಿದೇತಾನ್ ಮಹಾಪ್ರಾಜ್ಞ ಯಥಾವದನುಮನ್ಯಸೇ ॥೭೦॥

ದಶವರ್ಗ, ಪಂಚವರ್ಗ, ಚತುರ್ವರ್ಗ, ಸಪ್ತವರ್ಗ, ಅಷ್ಟವರ್ಗ, ತ್ರಿವರ್ಗ, ಮೂರು ವಿದ್ಯೆಗಳು, ಇಂದ್ರಿಯ ಜಯ, ಷಾಡ್ಗುಣ್ಯ, ದೈವವ್ಯಸನಗಳು, ಮಾನುಷ್ಯವ್ಯಸನಗಳು, ಕೃತ್ಯವರ್ಗ, ವಿಂಶತಿವರ್ಗ, ಪ್ರಕೃತಿಗಳು, ಮಂಡಲಗಳು, ಯಾತ್ರೆಗಳು, ದಂಡ ವಿಧಾನಗಳು, ಶತ್ರುನಾಶಮಾಡುವ ವಿಧಾನಗಳಾದ ಸಂಧಿವಿಗ್ರಹ ರೂಪವಾದ ದ್ವಿಯೋನಿಗಳು—ಇವುಗಳನ್ನು ಸರಿಯಾಗಿ ತಿಳಿದು ಯಥಾವತ್ತಾಗಿ ಅನುಸರಿಸುವೆ ತಾನೆ? ಅಂದರೆ, ತ್ಯಾಜ್ಯವಾದುದನ್ನು ತ್ಯಜಿಸಿ ಗ್ರಾಹ್ಯವಾದುದನ್ನು ಪರಿಗ್ರಹಿಸುವೆ ತಾನೆ?

ದಶವರ್ಗ— ಬೇಟೆ, ಜೂಜು, ಹಗಲಿನಲ್ಲಿ ನಿದ್ದೆ, ಪರನಿಂದೆ, ಸ್ತ್ರೀಸಂಗ, ಮದ್ಯಪಾನ, ತೌರ್ಯತ್ರಿಕ (ನೃತ್ಯ ಗೀತ ವಾದ್ಯಗಳೆಂದು ಮೂರು) ಮತ್ತು

ವ್ಯರ್ಥವಾಗಿ ಅಲೆಯುವುದು—ಇವುಗಳನ್ನು ರಾಜರು ವಿಹಿತವಾದ ರೀತಿಯಲ್ಲಿ ಮಾತ್ರ ಸೇವಿಸಬಹುದು.

ಅಥವಾ– ಲೋಭ ಕ್ರೌರ್ಯ ಸೋಮಾರಿತನ ಸುಳ್ಳು ಕರ್ತವ್ಯಲೋಪ ಹೇಡಿತನ ಅಸ್ಥಿರತೆ ಮೂರ್ಖತನ ಅನೀತಿ ಎಲ್ಲರನ್ನು ಅವಮಾನಿಸುವ ಸ್ವಭಾವ– ಇವು ಹತ್ತು ಶತ್ರುಗಳಲ್ಲಿ ಇದ್ದರೆ ಅವರನ್ನು ಸುಖವಾಗಿ ನಾಶಪಡಿಸಬಹುದು.

ಪಂಚವರ್ಗ— ಜಲದುರ್ಗ, ಗಿರಿದುರ್ಗ, ವನದುರ್ಗ, ಐರಿಣದುರ್ಗ (ಜೌಗುಭೂಮಿ) ಮತ್ತು ಧನ್ವದುರ್ಗ(ಮರುಭೂಮಿ) ಎಂದು ಪಂಚ ದುರ್ಗಗಳು.

ಅಥವಾ ಪಂಚವೈರ–ರಾಜ್ಯದ ಒಡೆತನ ಸಂಬಂಧದಲ್ಲಿ ಉಂಟಾಗುವ ವೈರ, ಒಂದು ವಸ್ತು ಸಂಬಂಧವಾಗಿ ವೈರ. ಸ್ತ್ರೀನಿಮಿತ್ತ ವೈರ, ಮಾತಿನಿಂದಾದ ವೈರ, ಅಪರಾಧದಿಂದಾದ ವೈರ.

ಚತುರ್ವರ್ಗ— ಸಾಮ ದಾನ ಭೇದ ದಂಡಗಳೆಂಬ ನಾಲ್ಕು ಉಪಾಯಗಳು ಅಥವಾ—ಸಂಪತ್ತನ್ನು ಗಳಿಸುವುದು, ರಕ್ಷಿಸಿಕೊಳ್ಳುವುದು, ವೃದ್ಧಿ ಗೊಳಿಸುವುದು, ಸತ್ಪಾತ್ರದಲ್ಲಿ ವಿನಿಯೋಗಿಸುವುದು.

ಸಪ್ತವರ್ಗ— ರಾಜ ಮಂತ್ರಿ ರಾಷ್ಟ್ರ ದುರ್ಗ ಕೋಶ ಸೈನ್ಯ ಮಿತ್ರರು ಎಂದು ಏಳು ರಾಜ್ಯಾಂಗಗಳು.

ಅಥವಾ—ತನ್ನ ಸಂಬಂಧಿ, ಸ್ನೇಹಿತ, ಆಶ್ರಿತ, ನೆಂಟನಮಗ, ಕೆಲಸ ಕೇಳಿ ಬಂದವನು, ಸೇವಕ, ಉಪಕಾರದಿಂದ ವಶನಾದವನು–ಈ ಏಳು ವ್ಯಕ್ತಿಗಳು ವಿಶ್ವಾಸಾರ್ಹರು.

ಅಥವಾ—ಶ್ಯೇನ ಸೂಚಿ ವಜ್ರ ಶಕಟ ಮಕರ ದಂಡ ಪದ್ಮ ಎಂದು ರಣರಂಗದಲ್ಲಿ ಸೈನ್ಯವನ್ನು ನಿಲ್ಲಿಸುವ ವ್ಯೂಹಗಳು ಏಳು.

ಅಷ್ಟವರ್ಗ— ಕೃಷಿ, ವಾಣಿಜ್ಯ, ಕೋಟ , ಸೇತುವೆ, ಆನೆ ಖೆಡ್ಡಾ, ಗಣಿ, ಸುಂಕ, ಸೇನಾ ಶಿಬಿರ—ಈ ಎಂಟು ಗ್ರಾಹ್ಯ.

ಅಥವಾ ಚಾಡಿ ದುಡುಕು ದ್ರೋಹ ಹೊಟ್ಟೆಕಿಚ್ಚು ದೋಷಾರೋಪ, ಹಣದ ದುರ್ವಿನಿಯೋಗ ಕಟುನುಡಿ ಉಗ್ರದಂಡನೆ—ಈ ಎಂಟು ತ್ಯಾಜ್ಯ.

ತ್ರಿವರ್ಗ— ಧರ್ಮ ಅರ್ಥ ಕಾಮಗಳು ಅಥವಾ ಉತ್ಸಾಹಶಕ್ತಿ ಪ್ರಭು ಶಕ್ತಿ ಮಂತ್ರಶಕ್ತಿಗಳು ಅಥವಾ ಧನ ಕ್ಷಯವಾಗುವುದು ಇದ್ದಂತೆ ಇರುವುದು ವೃದ್ಧಿ ಹೊಂದುವುದು ಅಥವಾ— ಅಶಕ್ಯವಿಷಯದಲ್ಲಿ ಯತ್ನಿಸುವುದು ಶಕ್ಯ ವಿಷಯದಲ್ಲಿ ಯತ್ನಿಸದಿರುವುದು ಶಕ್ಯವಿಷಯದಲ್ಲಿ ಅಕಾಲದಲ್ಲಿ ಯತ್ನಿಸುವುದು.

ಮೂರು ವಿದ್ಯೆಗಳು—'ತ್ರಯೀ' ಮೂರು ವೇದಗಳು, 'ವಾರ್ತಾ' ಕೃಷಿ ವಾಣಿಜ್ಯ ಗೋರಕ್ಷಣೆಗಳು, ಮತ್ತು 'ದಂಡನೀತಿ' ರಾಜನೀತಿಶಾಸ್ತ್ರ.

ಷಾಡ್ಗುಣ್ಯ—'ಸಂಧಿ' ಒಪ್ಪಂದ 'ವಿಗ್ರಹ' ಯುದ್ಧ, 'ಯಾನ' ದಂಡಯಾತ್ರೆ, 'ಆಸನ' ಯೋಗ್ಯಕಾಲಕ್ಕಾಗಿ ಕಾದು ಕುಳಿತಿರುವುದು, 'ದ್ವೈಧ' ಇಬ್ಬರು ಶತ್ರುಗಳಿಗೂ ಆಶ್ರಿತನಂತಿರುವುದು, 'ಸಮಾಶ್ರಯ' ಪ್ರಬಲನನ್ನು ಆಶ್ರಯಿಸುವುದು.

ದೈವವ್ಯಸನ— ಬೆಂಕಿ ನೀರು ರೋಗ ಬರಗಾಲ ಮರಣಗಳು.

ಮಾನುಷವ್ಯಸನ— ಅಧಿಕಾರಿಗಳು ಕಳ್ಳರು ಶತ್ರುಗಳು ರಾಜನ ಕಡೆಯವರು ಮತ್ತು ರಾಜನ ದುರಾಸೆ–ಇವುಗಳಿಂದಾಗುವ ವ್ಯಸನಗಳು.

ಕೃತ್ಯವರ್ಗ— ಭೇದೋಪಾಯಕ್ಕೆ ಯೋಗ್ಯರಾದವರು ಶತ್ರುಗಳ ಕಡೆಯಲ್ಲಿ ನಾಲ್ಕು ಬಗೆಯವರು, ವೇತನ ಸಿಗದೆ ಅಸಮಾಧಾನಗೊಂಡವರು, ಶತ್ರುವಿನಿಂದ ಅಪಮಾನಿತನಾದ ಅಭಿಮಾನಿ. ನಿಷ್ಕಾರಣವಾಗಿ ಶತ್ರುವಿನಿಂದ ಕೋಪಗೊಳಿಸಲ್ಪಟ್ಟವನು, ಮತ್ತು ಹೆದರಿಸಲ್ಪಟ್ಟವನು.

ವಿಂಶತಿ ವರ್ಗ—ಸ್ನೇಹಕ್ಕೆ ಯೋಗ್ಯರಲ್ಲದವರು ಇಪ್ಪತ್ತು ಬಗೆ. ಬಾಲಕ, ಮುದುಕ, ದೀರ್ಘರೋಗಿ, ಜ್ಞಾತಿಗಳಿಂದ ಬಹಿಷ್ಕೃತ, ಹೇಡಿ, ಹೇಡಿಗಳೇ ಪರಿವಾರವಾಗಿ ಉಳ್ಳವನು, ಲೋಭಿ, ಲೋಭಿಗಳು ಪರಿವಾರವಾಗಿ ಉಳ್ಳವನು. ಜನರಿಂದ ಪ್ರೀತಿಸಲ್ಪಡದವನು, ವಿಷಯಸುಖದಲ್ಲಿ ಅತ್ಯಾಸಕ್ತನು. ಒಂದೇ ಮನಸ್ಸಾಗಲಿ ಒಂದೇ ಮಂತ್ರಾಲೋಚನೆಯಾಗಲಿ ಇಲ್ಲದವನು. ದೇವರನ್ನೂ ಬ್ರಾಹ್ಮಣರನ್ನೂ ನಿಂದಿಸುವವನು, ಶಾಪಗ್ರಸ್ತನು, ದೈವವನ್ನೇ ನಂಬುವವನು, ದುರ್ಭಿಕ್ಷವ್ಯಸನದಲ್ಲಿರುವವನು ಸೈನ್ಯದೊಳಗೆ ಜಗಳ ಮುಂತಾದ ವ್ಯಸನ ಉಳ್ಳವನು, ಸ್ವದೇಶದಲ್ಲಿಲ್ಲದವನು, ಬಹಳ ಶತ್ರುಗಳುಳ್ಳವನು, ದುರ್ದೆಸೆಯಲ್ಲಿರುವವನು, ಸತ್ಯಧರ್ಮ ರಹಿತನು—ಈ ಇಪ್ಪತ್ತು ಬಗೆಯವರು ರಾಜನಿಗೆ ಸ್ನೇಹಕ್ಕೆ ಯೋಗ್ಯರಲ್ಲ.

ಅಥವಾ— ರಾಜ್ಯ, ಸ್ತ್ರೀ, ಸ್ಥಾನ, ದೇಶ, ಜ್ಞಾತಿ, ಧನ ಈ ಆರನ್ನು ಅಪಹರಿಸುವುದು, ಮದ ಮಾನ, ವೈಷಯಿಕಪೀಡೆ, ಜ್ಞಾನ ಅರ್ಥ ಶಕ್ತಿ ಧರ್ಮಗಳ ನಾಶ, ದೈವ, ಮಿತ್ರ–ಅರ್ಥಗಳ ಅವಮಾನ ಮಾಡುವುದು, ಬಂಧುಗಳನ್ನು ನಾಶಮಾಡುವುದು, ಪ್ರಜೆಗಳಲ್ಲಿ ಅನುಗ್ರಹಬುದ್ಧಿ ಇಲ್ಲದಿರುವುದು, ರಾಜಮಂತ್ರಿ ಸೇನಾಧಿಪತಿಗಳಲ್ಲಿ ಭೇದ ಮಾಡುವುದು, ಏಕಾರ್ಥಾಭಿನಿವೇಶ—ಇವೆಲ್ಲವೂ ಯುದ್ಧಕ್ಕೆ ಕಾರಣಗಳು.

ಪ್ರಕೃತಿಗಳು—ಮಂತ್ರಿ ರಾಷ್ಟ್ರ ದುರ್ಗ ಕೋಶ ಮತ್ತು ಸೈನ್ಯ ಇವು ಪಂಚಪ್ರಕೃತಿಗಳು.

ಮಂಡಲಗಳು—ಮಧ್ಯದಲ್ಲಿ ರಾಜನೊಬ್ಬ. ಆ ವಿಜಿಗೀಷುವಾದ ರಾಜನಿಗೆ ಮುಂಭಾಗದಲ್ಲಿ ಶತ್ರು, ಮಿತ್ರ, ಶತ್ರುಮಿತ್ರ, ಮಿತ್ರಮಿತ್ರ, ಶತ್ರುಮಿತ್ರಮಿತ್ರ– ಎಂದು ಐವರು ರಾಜರು. ಹಿಂಭಾಗದಲ್ಲಿ ಪಾರ್ಷ್ಣಿಗ್ರಾಹ ಆಕ್ರಂದ ಪಾರ್ಷ್ಣಿ-ಗ್ರಾಹಾಸಾರ ಆಕ್ರಂದಾಸಾರ ಎಂದು ನಾಲ್ವರು ರಾಜರು. ಪಾರ್ಶ್ವದಲ್ಲಿರುವ ಬಲಿಷ್ಠನಾದ ರಾಜನು ಮಧ್ಯಮ, ಮಂಡಲದಿಂದ ಹೊರಗಿರುವವನು ಬಲಿಷ್ಠರಾಜನು ಉದಾಸೀನ ಎಂದು ರಾಜಮಂಡಲದಲ್ಲಿ ಹನ್ನೆರಡು ಬಗೆಯ ರಾಜರು 'ಮಧ್ಯಮ' 'ಉದಾಸೀನ' ಎಂದರೆ ಜೊತೆಗೆ ಸೇರಿದರೆ ಉಪಕಾರ ಮಾಡುತ್ತಾನೆ, ಬೇರೆಯಾದರೆ ನಾಶವನ್ನು ಮಾಡುತ್ತಾನೆ ಎಂದರ್ಥ

ಯಾತ್ರೆಗಳು— ಯುದ್ಧಕ್ಕೆ ಹೋಗುವುದು, ಐದು ಬಗೆ. 'ವಿಗೃಹ್ಯ' ಬಲಿಷ್ಠನಾದ್ದರಿಂದ ಪಾರ್ಷ್ಣಿಗ್ರಾಹಾದಿಗಳೊಡನೆ ವಿರೋಧಮಾಡಿ ಬೇರೆ ಶತ್ರುವಿನ ಮೇಲೆ ಏರಿ ಹೋಗುವುದು 'ಸಂಧಾಯ' ಪಾರ್ಷ್ಣಿಗ್ರಾಹಾದಿ ಗಳೊಡನೆ ಸಂಧಿ ಮಾಡಿಕೊಂಡು ಶತ್ರುವಿನ ಮೇಲೆ ಯುದ್ಧ ಸಾರುವುದು 'ಸಂಭೂಯ' ಸಾಮಂತ-ರೊಂದಿಗೆ ಸೇರಿ ಶತ್ರುವಿನ ಮೇಲೆ ಆಕ್ರಮಣ ಮಾಡುವುದು 'ಪ್ರಸಂಗತಃ' ಒಬ್ಬನ ಮೇಲೆ ಯುದ್ಧಸಾರಿ ಇನ್ನೊಬ್ಬನ ಮೇಲೇರಿ ಹೋಗುವುದು. 'ಉಪೇಕ್ಷ್ಯ' ಶತ್ರುವಿನ ಮೇಲೆ ಯುದ್ಧಸಾರಿ ಬಲಿಷ್ಠನಾದ್ದರಿಂದ ಅವನನ್ನು ಉಪೇಕ್ಷಿಸಿ ಅವನ ಮಿತ್ರನ ಮೇಲೆ ಆಕ್ರಮಣ ಮಾಡುವುದು, ಶತ್ರುವಿನ ಮೇಲೆ ಆಕ್ರಮಿಸಲು ಹೋಗುವಾಗ ಪಾರ್ಶ್ವದಲ್ಲಿದ್ದು ಆಕ್ರಮಿಸುವವನು ಪಾರ್ಷ್ಣಿಗ್ರಾಹ. ಅವನನ್ನು ಅನುಸರಿಸುವವನು ಆಕ್ರಂದ, ಇವರ ಮಿತ್ರನು ಆಸಾರ.

ದ್ವಿಯೋನಿ—ಸಂಧಿ–ವಿಗ್ರಹ, ಯಾನ–ಆಸನ, ದ್ವೈಧೀಭಾವ–ಸಮಾಶ್ರಯ ಇವು ಶತ್ರುನಿರಾಸ ಮಾಡುವ ಪ್ರಕಾರಗಳು. ಇವುಗಳಲ್ಲಿ ಸಂಧಿ ವಿಗ್ರಹಗಳು ಎರಡು ಅತಿಮುಖ್ಯ. ಅವು ಉಳಿದ ನಾಲ್ಕಕ್ಕೆ 'ಯೋನಿ'ಗಳು ಆಶ್ರಯಗಳು. ದ್ವೈಧೀಭಾವ ಸಮಾಶ್ರಯಗಳು ಸಂಧಿಯೋನಿಕವಾಗಿವೆ. ಯಾನ ಆಸನಗಳು ವಿಗ್ರಹ ಯೋನಿಕವಾಗಿವೆ ಎಂದು.

ಮಂತ್ರಿಭಿಸ್ತ್ವಂ ಯಥೋದ್ದಿಷ್ಟೈಶ್ಚತುರ್ಭಿಸ್ತ್ರಿಭಿರೇವ ವಾ ।
ಕಶ್ಚಿತ್ ಸಮಸ್ತೈರ್ವ್ಯಸ್ತೈರ್ವಾ ಮಂತ್ರಂ ಮಂತ್ರಯಸೇ ಮಿಥಃ ॥೭೧॥

ಶಾಸ್ತ್ರೋಕ್ತವಾದ ಮಂತ್ರಲಕ್ಷಣಗಳಿಂದ ಯುಕ್ತರಾದ ಮೂರು ಅಥವಾ ನಾಲ್ಕು ಮಂತ್ರಿಗಳೊಂದಿಗೆ, ಮೊದಲಿಗೆ ಅವರವರ ಅಭಿಪ್ರಾಯವನ್ನು ತಿಳಿಯುವುದಕ್ಕಾಗಿ 'ವ್ಯಸ್ತೈಃ' ಬೇರೆ ಬೇರೆಯಾಗಿ, ಬಳಿಕ ಕಾರ್ಯನಿಶ್ಚಯಕ್ಕಾಗಿ 'ಸಮಸ್ತೈಃ' ಒಟ್ಟಾಗಿ ಕುಳಿತು ಪರಸ್ಪರ ಮಂತ್ರಾಲೋಚನೆ ಮಾಡುತ್ತಿರುವೆ ತಾನೆ?

ಕಚ್ಚಿತ್ತೇ ಸಫಲಾ ವೇದಾಃ ಕಚ್ಚಿತ್ತೇ ಸಫಲಾಃ ಕ್ರಿಯಾಃ ।
ಕಚ್ಚಿತ್ತೇ ಸಫಲಾ ದಾರಾಃ ಕಚ್ಚಿತ್ತೇ ಸಫಲಂ ಶ್ರುತಮ್ ॥೭೨॥

ನೀನು ಮಾಡಿರುವ ವೇದಾಧ್ಯಯನವು ಅಗ್ನಿಹೋತ್ರಾದಿ ವೇದೋಕ್ತ ಕರ್ಮ-ಗಳಿಂದ ಸಫಲವಾಗಿದೆ ತಾನೆ? ಧನಸಂಪಾದನ ಕ್ರಿಯೆಗಳು ದಾನಭೋಗಗಳಿಂದ ಸಫಲವಾಗಿವೆ ತಾನೆ? ವೈವಾಹಿಕಜೀವನವು ರತಿ ಸಂತತಿಗಳ ಮೂಲಕ ಸಫಲವಾಗಿವೆ ತಾನೆ? ಶಾಸ್ತ್ರಾಭ್ಯಾಸವು ಒಳ್ಳೆಯ ಸ್ವಭಾವ ನಡತೆಗಳಿಂದ ಸಪಲವಾಗಿದೆ ತಾನೆ?

ಕಚ್ಚಿದೇಷೈವ ತೇ ಬುದ್ಧಿರ್ಯಥೋಕ್ತಾ ಮಮ ರಾಘವ ।
ಆಯುಷ್ಯಾ ಚ ಯಶಸ್ಯಾ ಚ ಧರ್ಮಕಾಮಾರ್ಥಸಂಹಿತಾ ॥೭೩॥

ನಾನು ಇಷ್ಟರವರೆಗೆ ಹೇಳಿದಂತೆಯೇ ನಿನ್ನ ಬುದ್ಧಿ ಇದೆತಾನೆ? ಅಂಥ ಬುದ್ಧಿಯೇ ಆಯುಸ್ಸು ಯಶಸ್ಸು ಧರ್ಮಕಾಮ ಅರ್ಥಗಳನ್ನು ಕೊಡುವುದು.

ಯಾಂ ವೃತ್ತಿಂ ವರ್ತತೇ ತಾತೋ ಯಾಂ ಚ ನಃ ಪ್ರಪಿತಾಮಹಾಃ ।
ತಾಂ ವೃತ್ತಿಂ ವರ್ತಸೇ ಕಚ್ಚಿದ್ಯಾ ಚ ಸತ್ಪಥಗಾ ಶುಭಾ ॥೭೪॥

ತಂದೆಯಾಗಲಿ ತಾತಮುತ್ತಾತರಾಗಲಿ ಯಾವರೀತಿ ವರ್ತಿಸಿದ್ದರೋ ಯಾವ ವರ್ತನೆಯು ಸನ್ಮಾರ್ಗದಲ್ಲಿದ್ದು ಶುಭಕರವಾಗಿತ್ತೋ ಆ ವರ್ತನೆಯನ್ನೇ ನೀನೂ ಅನುಸರಿಸುತ್ತಿರುವೆ ತಾನೆ?

ಕಚ್ಚಿತ್ ಸ್ವಾದುಕೃತಂ ಭೋಜ್ಯಮೇಕೋ ನಾಶ್ನಾಸಿ ರಾಘವ ।
ಕಚ್ಚಿದಾಶಂಸಮಾನೇಭ್ಯೋ ಮಿತ್ರೇಭ್ಯಃ ಸಂಪ್ರಯಚ್ಛಸಿ ॥೭೫॥

ಬಲು ರುಚಿಕರವಾಗಿ ತಯಾರಿಸಿದ ಭಕ್ಷ್ಯಭೋಜ್ಯಗಳನ್ನು 'ನೀನೊಬ್ಬನೇ ಕುಳಿತು ತಿನ್ನುವುದಿಲ್ಲ ತಾನೆ? ಕೇಳುವ ಮಿತ್ರರಿಗೆ ಉದಾರವಾಗಿ ಕೊಡುವೆ ತಾನೆ?

ರಾಜಾ ತು ಧರ್ಮೇಣ ಹಿ ಪಾಲಯಿತ್ವಾ
ಮಹಾಮತಿರ್ದಂಡಧರಃ ಪ್ರಜಾನಾಮ್ ।

ಅವಾಪ್ಯ ಕೃತ್ಸ್ನಾಂ ವಸುಧಾಂ ಯಥಾವತ್
ಇತಶ್ಚ್ಯುತಃ ಸ್ವರ್ಗಮುಪೈತಿ ವಿದ್ವಾನ್ ॥೭೬॥

ರಾಜನೀತಿಯನ್ನು ಬಲ್ಲ, ಮಹಾಬುದ್ಧಿಶಾಲಿಯಾದ, ಪ್ರಜೆಗಳಿಗೆ ಯೋಗ್ಯರೀತಿ-ಯಿಂದ ಶಾಸನ ಮಾಡುವ ರಾಜನು ಇಡಿ ಭೂಮಂಡಲವನ್ನು ಗೆದ್ದು ಯಥಾವತ್ತಾಗಿ ಧರ್ಮದಿಂದ ರಾಜ್ಯಪಾಲನ ಮಾಡಿ ಕೊನೆಯಲ್ಲಿ ಸ್ವರ್ಗವನ್ನು ಹೊಂದುತ್ತಾನೆ.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ನೂರನೇ ಸರ್ಗ ಮುಗಿಯಿತು.

❖

ಏಕಾಧಿಕಶತತಮಃ ಸರ್ಗಃ

ಸರ್ಗ – 101

ಭರತನು ಶ್ರೀರಾಮನಿಗೆ ತಂದೆಯ ಮರಣವಾರ್ತೆಯನ್ನು ತಿಳಿಸುವುದು.

ರಾಮಸ್ಯ ವಚನಂ ಶ್ರುತ್ವಾ ಭರತಃ ಪ್ರತ್ಯುವಾಚ ಹ ।
ಕಿಂ ಮೇ ಧರ್ಮಾದ್ವಿಹೀನಸ್ಯ ರಾಜಧರ್ಮಃ ಕರಿಷ್ಯತಿ ॥೧॥

ರಾಮನ ಮಾತನ್ನು ಕೇಳಿ ಭರತನು ಪ್ರತಿಯಾಗಿ ಹೀಗೆ ಹೇಳಿದನು— 'ರಾಜ್ಯಾಭಿಷೇಕ ರೂಪವಾದ ಧರ್ಮವಿಲ್ಲದ ನನಗೆ ರಾಜ್ಯಭಾರ ರೂಪವಾದ ಧಮವು ಏನು ಉಪಕಾರಮಾಡೀತು? ಉಪನಯನವಾಗದಿದ್ದವನಿಗೆ ಅಧ್ಯಯನ ದಿಂದೇನು ಫಲ? ಹಾಗೇ ಇದು.

ಶಾಶ್ವತೋಽಯಂ ಸದಾ ಧರ್ಮಃ ಸ್ಥಿತೋಽಸ್ಮಾಸು ನರರ್ಷಭ ।
ಜ್ಯೇಷ್ಠೇ ಪುತ್ರೇ ಸ್ಥಿತೇ ರಾಜನ್ ಕನೀಯಾನ್ ನ ಭವೇನ್ನೃಪಃ ॥೨॥

ಅಭಿಷೇಕವನ್ನು ನಾನು ಏಕೆ ಮಾಡಿಸಿಕೊಳ್ಳಲಿಲ್ಲ ಎಂದರೆ, ಪುರುಷೋತ್ತಮನೆ, 'ಜ್ಯೇಷ್ಠಪುತ್ರನು ರಾಜನಾಗದಿದ್ದಾಗ ಕನಿಷ್ಠನು ರಾಜನಾಗಬಾರದು' ಎಂದು ಇದೊಂದು ಸನಾತನ ಧರ್ಮವು ನಮ್ಮ ಕುಲದಲ್ಲಿ ಸದಾ ಇದೆ.

ಸ ಸಮೃದ್ಧಾಂ ಮಯಾ ಸಾರ್ಧಮಯೋಧ್ಯಾಂ ಗಚ್ಛ ರಾಘವ ।
ಅಭಿಷೇಚಯ ಚಾತ್ಮಾನಂ ಕುಲಸ್ಯಾಸ್ಯ ಭವಾಯ ನಃ ॥೩॥

ಅದರಿಂದ ರಾಮ, ನಮ್ಮ ಕುಲದ ಒಳಿತಿಗಾಗಿ ನೀನು ನನ್ನೊಂದಿಗೆ ಸಮೃದ್ಧವಾದ ಅಯೋಧ್ಯೆಗೆ ಬಾ, ಅಭಿಷೇಕ ಮಾಡಿಸಿಕೊಳ್ಳು.

ರಾಜಾನಂ ಮಾನುಷಂ ಪ್ರಾಹುರ್ದೇವತ್ವೇ ಸಂಮತೋ ಮಮ ।
ಯಸ್ಯ ಧರ್ಮಾರ್ಥಸಹಿತಂ ವೃತ್ತಮಾಹುರಮಾನುಷಮ್ ॥೪॥

ಅಭಿಷೇಕವು ಸುಲಭವಾಗಿ ದೊರಕುವುದಿಲ್ಲ. ಅಭಿಷಿಕ್ತನಾದ ರಾಜನನ್ನು ಮನುಷ್ಯ ಮಾತ್ರ ಎನ್ನುತ್ತಾರೆ. ಅದು ಸರಿಯಲ್ಲ. ರಾಜನೆಂದರೆ ನನ್ನ ಅಭಿಪ್ರಾಯ-ದಲ್ಲಿ ದೇವನೆ. ಏಕೆಂದರೆ ಅವನ ಧರ್ಮ ಅರ್ಥಗಳಿಗೆ ಅನುಕೂಲವಾದ ಆಚರಣೆ ಮನುಷ್ಯಮಾತ್ರರಿಗೆ ಶಕ್ಯವಲ್ಲ.

ಕೇಕಯಸ್ಥೇ ಚ ಮಯಿ ತು ತ್ವಯಿ ಚಾರಣ್ಯಮಾಶ್ರಿತೇ ।
ದಿವಮಾಯೋ ಗತೋ ರಾಜಾ ಯಾಯಜೂಕಃ ಸತಾಂ ಮತಃ ॥೫॥

ನಾನು ಅರಣ್ಯಕ್ಕೆ ಏಕೆ ಬಂದೆನೆಂದರೆ ನಾನು ಕೇಕಯದೇಶದಲ್ಲಿದ್ದಾಗ ನೀನೂ ಅರಣ್ಯಕ್ಕೆ ನಡೆದಾಗ ಅತ್ತ ಸಜ್ಜನರಿಂದ ಆದೃತನಾದ ಯಜ್ಞಶೀಲನಾದ ತಂದೆ ರಾಜಾ ದಶರಥನು ದಿವಂಗತನಾದನು.

ನಿಷ್ಕ್ರಾಂತಮಾತ್ರೇ ಭವತಿ ಸಹಸೀತೇ ಸಲಕ್ಷ್ಮಣೇ ।
ದುಃಖಶೋಕಾಭಿಭೂತಸ್ತು ರಾಜಾ ತ್ರಿದಿವಮಭ್ಯಗಾತ್ ॥೬॥

ನೀನು ಸೀತೆಯೊಂದಿಗೆ ಮತ್ತು ಲಕ್ಷ್ಮಣನೊಂದಿಗೆ ಅಯೋಧ್ಯೆಯಿಂದ ಹೊರಟು ಹೋದೊಡನೆ ರಾಜನು ದುಃಖಶೋಕಗಳಿಂದ ಪರವಶನಾಗಿ ಸ್ವರ್ಗವನ್ನೇರಿದನು.

ಉತ್ತಿಷ್ಠ ಪುರುಷವ್ಯಾಘ್ರ ಕ್ರಿಯತಾಮುದಕಂ ಪಿತುಃ ।
ಅಹಂ ಚಾಯಂ ಚ ಶತ್ರುಘ್ನಃ ಪೂರ್ವಮೇವ ಕೃತೋದಕೌ ॥೭॥

ಪುರುಷೋತ್ತಮ, ನೀನು ಏಳು. ತಂದೆಗೆ ಉದಕಕ್ರಿಯೆಗಳನ್ನು ಮಾಡು. ನಾನೂ ಈ ಶತ್ರುಘ್ನನೂ ಈ ಮೊದಲೇ ಉದಕಕ್ರಿಯೆಗಳನ್ನು ಮಾಡಿದ್ದೇವೆ.

ಪ್ರಿಯೇಣ ಖಲು ದತ್ತಂ ಹಿ ಪಿತೃಲೋಕೇಷು ರಾಘವ ।
ಅಕ್ಷಯ್ಯಂ ಭವತೀತ್ಯಾಹುರ್ಭವಾಂಶ್ಚೈವ ಪಿತುಃ ಪ್ರಿಯಃ ॥೮॥

ರಾಮ, ಪ್ರಿಯನು ಕೊಟ್ಟರೇ ಪಿತೃತರ್ಪಣವು ಪಿತೃಲೋಕದಲ್ಲಿ ಅಕ್ಷಯ-ವಾಗುವುದೆಂದು ಹೇಳುತ್ತಾರೆ. ನೀನು ಪಿತನಿಗೆ ಪ್ರಿಯನಾಗಿರುವೆ.

ತ್ವಾಮೇವ ಶೋಚಂಸ್ತವ ದರ್ಶನೇಪ್ಸುಃ
ತ್ವಯ್ಯೇವ ಸಕ್ತಾಮನಿವರ್ತ್ಯ ಬುದ್ಧಿಮ್ ।
ತ್ವಯಾ ವಿಹೀನಸ್ತವ ಶೋಕರುಗ್ಣ
ಸ್ತ್ವಾಂ ಸಂಸ್ಮರನ್ನಸ್ತಮಿತಃ ಪಿತಾ ತೇ ॥೯॥

ನಿನ್ನ ತಂದೆ ನಿನ್ನ ದರ್ಶನ ಒಂದನ್ನೇ ಬಯಸುತ್ತ ನಿನ್ನ ಬಗ್ಗೆಯೇ ಶೋಕಿಸುತ್ತ ನಿನ್ನಲ್ಲಿಯೇ ನೆಟ್ಟಿರುವ ಮನಸ್ಸನ್ನು ಈಚೆಗೆ ತರಲಾಗದೆ ನಿನ್ನ ಅಗಲಿಕೆಯಿಂದ ಶೋಕಮಗ್ನನಾಗಿ ನಿನ್ನನ್ನೇ ಸ್ಮರಿಸುತ್ತ ಅಸ್ತಂಗತನಾಗಿದ್ದಾನೆ.

ಇಲ್ಲಿಗೆ ಶ್ರೀವಾಲ್ಮೀಕಿರಾಮಾಯಣ ಅಯೋಧ್ಯಾಕಾಂಡದಲ್ಲಿ ನೂರೊಂದನೇ ಸರ್ಗ ಮುಗಿಯಿತು.

ದ್ವ್ಯಧಿಕಶತತಮಃ ಸರ್ಗಃ

ಸರ್ಗ – 102

ಶ್ರೀರಾಮನು ತಂದೆಗೆ ತರ್ಪಣವನ್ನು ಕೊಡುವುದು.

ತಾಂ ಶ್ರುತ್ವಾ ಕರುಣಾಂ ವಾಚಂ ಪಿತುರ್ಮರಣಸಂಹಿತಾಮ್ ।
ರಾಘವೋ ಭರತೇನೋಕ್ತಾಂ ಬಭೂವ ಗತಚೇತನಃ ॥೧॥

ಪಿತನ ಮರಣದ ವಿಷಯದಲ್ಲಿ ಭರತನು ಆಡಿದ ಕರುಣಾಜನಕವಾದ ಆ ಮಾತನ್ನು ಕೇಳಿ ಶ್ರೀರಾಮ ಮೈ ಮರೆತನು.

ತಂ ತು ವಜ್ರಮಿವೋತ್ಸೃಷ್ಟಮಾಹವೇ ದಾನವಾರಿಣಾ ।
ವಾಗ್ವಜ್ರಂ ಭರತೇನೋಕ್ತಮಮನೋಜ್ಞಂ ಪರಂತಪಃ ॥೨॥

ಪ್ರಗೃಹ್ಯ ಬಾಹೂ ರಾಮೋ ವೈ ಪುಷ್ಪಿತಾಗ್ರೋ ಯಥಾ ದ್ರುಮಃ ।
ವನೇ ಪರಶುನಾ ಕೃತ್ತಸ್ತಥಾ ಭುವಿ ಪಪಾತ ಹ ॥೩॥

ಯುದ್ಧದಲ್ಲಿ ದಾನವ ವೈರಿಯಾದ ಮಹೇಂದ್ರನು ಎಸೆದ ವಜ್ರಾಯುಧದಂಥ, ಮನಸ್ಸಿಗೆ ಖೇದಉಂಟುಮಾಡುವ, ಭರತನಾಡಿದ ವಾಗ್‌ವಜ್ರವನ್ನು ಕೇಳಿ ಶತ್ರುನಾಶಕನಾದ ರಾಮನು ಕೈಗಳನ್ನು ಮೇಲೆತ್ತಿಹಿಡಿದು, ತುದಿಯಲ್ಲಿ ಹೂಬಿಟ್ಟಿರುವ ಮರವನ್ನು ಕೊಡಲಿಯಿಂದ ಕಡಿದಾಗ ಬೀಳುವಂತೆ ನೆಲದ ಮೇಲೆ ಬಿದ್ದನು.

ತಥಾ ನಿಪತಿತಂ ರಾಮಂ ಜಗತ್ಯಾಂ ಜಗತೀಪತಿಮ್ ।
ಕೂಲಘಾತಪರಿಶ್ರಾಂತಂ ಪ್ರಸುಪ್ತಮಿವ ಕುಂಜರಮ್ ॥೪॥

ಭ್ರಾತರಸ್ತೇ ಮಹೇಷ್ವಾಸಂ ಸರ್ವತಃ ಶೋಕಕರ್ಶಿತಾಃ ।
ರುದಂತಃ ಸಹ ವೈದೇಹ್ಯಾ ಸಿಷಿಚುಃ ಸಲಿಲೇನ ವೈ ॥೫॥

ಮಹಾಬಿಲ್ಲುಗಾರ ಭೂಪತಿ ರಾಮನು ಹೀಗೆ ಭೂಮಿಯಲ್ಲಿ ಬಿದ್ದು, ನದೀ-ದಂಡೆಯನ್ನು ದಂತಗಳಿಂದ ಅಗೆದು ಸೋತು ಮಲಗಿದ ಆನೆಯಂತೆ ಕಾಣುತ್ತಿದ್ದಾಗ, ಸೋದರರೆಲ್ಲರೂ ಸೀತೆಯೂ ಶೋಕಪೀಡಿತರಾಗಿ ಅತ್ತು ನೀರು ತಟ್ಟಿ ಉಪಚರಿಸಿದರು.

ಸ ತು ಸಂಜ್ಞಾಂ ಪುನರ್ಲಬ್ಧ್ವಾ ನೇತ್ರಾಭ್ಯಾಮಸ್ರಮುತ್ಸೃಜನ್ ।
ಉಪಾಕ್ರಮತ ಕಾಕುತ್ಸ್ಥಃ ಕೃಪಣಂ ಬಹು ಭಾಷಿತುಮ್ ॥೬॥

ಶ್ರೀರಾಮನು ಎಚ್ಚರಗೊಂಡು ಪುನಃ ಕಣ್ಣುಗಳಿಂದ ನೀರುಸುರಿಸುತ್ತ ಕರುಣಾ-ಜನಕವಾಗಿ ಬಹು ವಿಲಾಪ ಮಾಡಲು ತೊಡಗಿದನು.

ಸ ರಾಮಃ ಸ್ವರ್ಗತಂ ಶ್ರುತ್ವಾ ಪಿತರಂ ಪೃಥಿವೀಪತಿಮ್ ।
ಉವಾಚ ಭರತಂ ವಾಕ್ಯಂ ಧರ್ಮಾತ್ಮಾ ಧರ್ಮಸಂಹಿತಮ್ ॥೭॥

ಧರ್ಮಾತ್ಮನಾದ ರಾಮನು ರಾಜನಾದ ತಂದೆ ಸ್ವರ್ಗಸ್ಥನಾದುದನ್ನು ಕೇಳಿ ಭರತನಿಗೆ ಧರ್ಮಸಮ್ಮತವಾದ ಮಾತನ್ನಾಡಿದನು.

ಕಿಂ ಕರಿಷ್ಯಾಮ್ಯಯೋಧ್ಯಾಯಾಂ ತಾತೇ ದಿಷ್ಟಾಂ ಗತಿಂ ಗತೇ ।
ಕಸ್ತಾಂ ರಾಜವರಾದ್ಧೀನಾಮಯೋಧ್ಯಾಂ ಪಾಲಯಿಷ್ಯತಿ ॥೮॥

ತಂದೆಯು ದಿವಂಗತನಾದ ಬಳಿಕ ನಾನು ಅಯೋಧ್ಯೆಯಲ್ಲಿ ಏನು ಮಾಡ-ಬೇಕಾಗಿದೆ? ರಾಜಶ್ರೇಷ್ಠನಾದ ತಂದೆ ಇಲ್ಲದ ಅಯೋಧ್ಯೆಯನ್ನು ಯಾರು ಪಾಲಿಸಬೇಕು?

ಕಿಂ ನು ತಸ್ಯ ಮಯಾ ಕಾರ್ಯಂ ದುರ್ಜಾತೇನ ಮಹಾತ್ಮನಃ ।
ಯೋ ಮೃತೋ ಮಮ ಶೋಕೇನ ಮಯಾ ಚಾಪಿ ನ ಸಂಸ್ಕೃತಃ ॥೯॥

ತಂದೆ ನನ್ನ ಶೋಕದಿಂದ ಮಡಿದಿದ್ದಾನೆ, ನಾನು ಸಂಸ್ಕಾರ ಮಾಡಲಿಲ್ಲ. ಅವನಿಂದ ಪಡೆದ ಜನ್ಮವನ್ನು ನಾನು ಹಾಳುಮಾಡಿಕೊಂಡೆ. ಅವನಿಗೆ ನನ್ನಿಂದೇನು ಪ್ರಯೋಜನವಾಯಿತು?

ಅಹೋ ಭರತ ಸಿದ್ಧಾರ್ಥೋ ಯೇನ ರಾಜಾ ತ್ವಯಾನಘ ।
ಶತ್ರುಘ್ನೇನ ಚ ಸರ್ವೇಷು ಪ್ರೇತಕೃತ್ಯೇಷು ಸತ್ಕೃತಃ ॥೧೦॥

ನಿಷ್ಪಾಪನಾದ ಭರತನೆ, ನೀನು ಕೃತಕೃತ್ಯನಾಗಿರುವೆ. ನೀನೂ ಶತ್ರುಘ್ನನೂ ತಂದೆಗೆ ಎಲ್ಲ ಉತ್ತರಕ್ರಿಯೆಗಳಲ್ಲಿಯೂ ಸತ್ಕರಿಸಿದಿರಿ.

ನಿಷ್ಪ್ರಧಾನಾಮನೇಕಾಗ್ರಾಂ ನರೇಂದ್ರೇಣ ವಿನಾಕೃತಾಮ್ ।
ನಿವೃತ್ತವನವಾಸೋಽಪಿ ನಾಯೋಧ್ಯಾಂ ಗಂತುಮುತ್ಸಹೇ ॥೧೧॥

ರಾಜನಿಲ್ಲದೆ ನಾಯಕನಿಲ್ಲದಂತಾಗಿ ವ್ಯಾಕುಲಗೊಂಡಿರುವ ಅಯೋಧ್ಯೆಗೆ ವನವಾಸ ಮುಗಿದಮೇಲೂ ಕೂಡ ನಾನು ಹೋಗಲು ಬಯಸಲಾರೆ.

ಸಮಾಪ್ತವನವಾಸಂ ಮಾಮಯೋಧ್ಯಾಯಾಂ ಪರಂತಪ ।
ಕೋ ನು ಶಾಸಿಷ್ಯತಿ ಪುನಸ್ತಾತೇ ಲೋಕಾಂತರಂ ಗತೇ ॥೧೨॥

ಶತ್ರುನಾಶಕನೆ, ವನವಾಸ ಮುಗಿದ ಮೇಲೆ ಅಯೋಧ್ಯೆಯಲ್ಲಿ ಕರ್ತವ್ಯ ಅಕರ್ತವ್ಯವಿಷಯಗಳಲ್ಲಿ ಸರಿಯಾಗಿ ಪ್ರೇರಿಸುವವನು, ತಂದೆ ಪರಲೋಕಕ್ಕೆ ಹೋದ ಬಳಿಕ, ಇನ್ನು ಯಾರಿದ್ದಾರೆ?

ಪುರಾ ಪ್ರೇಕ್ಷ್ಯ ಸುವೃತ್ತಂ ಮಾಂ ಪಿತಾ ಯಾನ್ಯಾಹ ಸಾಂತ್ವಯನ್ ।
ವಾಕ್ಯಾನಿ ತಾನಿ ಶ್ರೋಷ್ಯಾಮಿ ಕುತಃ ಕರ್ಣಸುಖಾನ್ಯಹಮ್ ॥೧೩॥

ಹಿಂದೆ ನನ್ನ ಸದಾಚಾರವನ್ನು ಕಂಡು ತಂದೆ ಉತ್ಸಾಹ ತುಂಬಿಸುತ್ತ ಏನು ಸವಿನುಡಿ ನುಡಿಯುತ್ತಿದ್ದನೋ ಅದನ್ನು ನಾನು ಮುಂದೆ ಯಾರಿಂದ ಕೇಳಲಿ?

ಏವಮುಕ್ತ್ವಾ ಸ ಭರತಂ ಭಾರ್ಯಾಮಭ್ಯೇತ್ಯ ರಾಘವಃ ।
ಉವಾಚ ಶೋಕಸಂತಪ್ತಃ ಪೂರ್ಣಚಂದ್ರನಿಭಾನನಾಮ್ ॥೧೪॥

ಶ್ರೀರಾಮ ಭರತನಿಗೆ ಹೀಗೆ ಹೇಳಿ ಸೀತೆಯ ಮುಂದೆ ನಿಂತು ಪೂರ್ಣಚಂದ್ರನಂಥ ಮುಖವುಳ್ಳ ಅವಳಿಗೆ ಶೋಕಸಂತಪ್ತನಾಗಿ ನುಡಿದನು.

ಸೀತೇ ಮೃತಸ್ತೇ ಶ್ವಶುರಃ ಪಿತ್ರಾ ಹೀನೋಽಸಿ ಲಕ್ಷ್ಮಣ ।
ಭರತೋ ದುಃಖಮಾಚಷ್ಟೇ ಸ್ವರ್ಗತಂ ಪೃಥಿವೀಪತಿಮ್ ॥೧೫॥

'ಸೀತೆ, ನಿನ್ನ ಮಾವ ತೀರಿಕೊಂಡನು'. ಲಕ್ಷ್ಮಣನ ಕಡೆಗೆ ತಿರುಗಿ ಹೇಳಿದನು— ಲಕ್ಷ್ಮಣ, ನೀನೂ ಪಿತೃಹೀನನಾದೆ. ರಾಜನು ಸ್ವರ್ಗಸ್ಥನಾದ ದುಃಖವಾರ್ತೆಯನ್ನು ಭರತನು ಹೇಳುತ್ತಿದ್ದಾನೆ'.

ತತೋ ಬಹುಗುಣಂ ತೇಷಾಂ ಬಾಷ್ಪೋ ನೇತ್ರೇಷ್ವಜಾಯತ ।
ತಥಾ ಬ್ರುವತಿ ಕಾಕುತ್ಸ್ಥೇ ಕುಮಾರಾಣಾಂ ಯಶಸ್ವಿನಾಮ್ ॥೧೬॥

ಶ್ರೀರಾಮ ಹೀಗೆ ಹೇಳುತ್ತಿದ್ದಂತೆ ಯಶಸ್ವಿಗಳಾದ ಆ ಕುಮಾರರ ಕಣ್ಣುಗಳಲ್ಲಿ ಬಹಳವಾಗಿ ಬಾಷ್ಪ ಸುರಿಯಿತು.

ತತಸ್ತೇ ಭ್ರಾತರಃ ಸರ್ವೇ ಭೃಶಮಾಶ್ವಾಸ್ಯ ರಾಘವಮ್ ।
ಅಬ್ರುವನ್ ಜಗತೀಭರ್ತುಃ ಕ್ರಿಯತಾಮುದಕಂ ಪಿತುಃ ॥೧೭॥

ಬಳಿಕ ಎಲ್ಲ ಸೋದರರೂ ಶ್ರೀರಾಮನನ್ನು ಸಂತೈಸಿ ನುಡಿದರು, 'ತಂದೆಯಾದ ರಾಜನಿಗೆ ಉದಕಕ್ರಿಯೆ ಮಾಡು'.

ಸಾ ಸೀತಾ ಶ್ವಶುರಂ ಶ್ರುತ್ವಾ ಸ್ವರ್ಗಲೋಕಗತಂ ನೃಪಮ್ ।
ನೇತ್ರಾಭ್ಯಾಮಶ್ರುಪೂರ್ಣಾಭ್ಯಾಂ ನ ಶಶಾಕೇಕ್ಷಿತುಂ ಪತಿಮ್ ॥೧೮॥

ಮಾವನಾದ ರಾಜನು ಸ್ವರ್ಗಸ್ಥನಾದುದನ್ನು ಕೇಳಿ ಸೀತೆ ನೀರು ತುಂಬಿದ ಕಣ್ಣುಗಳಿಂದ ಪತಿಯನ್ನು ನೋಡಲು ಶಕ್ತಳಾಗಲಿಲ್ಲ.

ಸಾಂತ್ವಯಿತ್ವಾ ತು ತಾಂ ರಾಮೋ ರುದಂತೀಂ ಜನಕಾತ್ಮಜಾಮ್ ।
ಉವಾಚ ಲಕ್ಷ್ಮಣಂ ತತ್ರ ದುಃಖಿತೋ ದುಃಖಿತಂ ವಚಃ ॥೧೯॥

ಅಳುತ್ತಿದ್ದ ಸೀತೆಯನ್ನು ಸಂತೈಸಿ, ಅಳುತ್ತಿದ್ದ ಲಕ್ಷ್ಮಣನಿಗೆ ಅಳುತ್ತ ನುಡಿದನು ಶ್ರೀರಾಮ.

ಆನಯೇಂಗುದಿಪಿಣ್ಯಾಕಂ ಚೀರಮಾಹರ ಚೋತ್ತರಮ್ ।
ಜಲಕ್ರಿಯಾರ್ಥಂ ತಾತಸ್ಯ ಗಮಿಷ್ಯಾಮಿ ಮಹಾತ್ಮನಃ ॥೨೦॥

ಲಕ್ಷ್ಮಣ, ಹಿಪ್ಪೆಯ ಹಿಟ್ಟನ್ನೂ ನೂತನವಾದ ಉತ್ತಮ ನಾರುಡೆಯನ್ನೂ ತಾ. ಮಹಾತ್ಮನಾದ ತಂದೆಯ ಜಲಕ್ರಿಯೆಗಾಗಿ ಹೋಗುವೆನು.

ಸೀತಾ ಪುರಸ್ತಾದ್ವ್ರಜತು ತ್ವಮೇನಾಮಭಿತೋ ವ್ರಜ ।
ಅಹಂ ಪಶ್ಚಾದ್ಗಮಿಷ್ಯಾಮಿ ಗತಿರ್ಹ್ಯೇಷಾ ಸುದಾರುಣಾ ॥೨೧॥

ಸೀತೆ ಮುಂದೆ ನಡೆಯಲಿ ಅವಳ ಹಿಂದೆ ನೀನು ನಡೆ ನಿಮ್ಮ ಹಿಂದೆ ನಾನು ನಡೆಯುತ್ತೇನೆ. ಬಲು ದುಃಸಹವಾದ ಈ ನಡೆ ಉತ್ತರಕ್ರಿಯೆಯಲ್ಲಿ ವಿಹಿತವಾಗಿದೆ.

ವಾನಪ್ರಸ್ಥರಿಗೆ ಪಿತೃಕಾರ್ಯಕ್ಕೆ ವಿಹಿತವಾದುದು ಹಿಪ್ಪೆಕಾಯಿಯ ಹಿಟ್ಟು. ರಾಮಲಕ್ಷ್ಮಣರು ಈಗ ವಾನಪ್ರಸ್ಥಧರ್ಮವನ್ನು ಆಚರಿಸುತ್ತಿದ್ದಾರೆ. ಜಲಕ್ರಿಯೆಗೆ ಹೋಗುವಾಗ ಕಿರಿಯರು ಮುಂದೆ, ಹಿರಿಯರು ಹಿಂದೆ ನಡೆಯಬೇಕು. ಸ್ತ್ರೀಯರು ಎಲ್ಲರಿಗಿಂತ ಮುಂದೆ ನಡೆಯಬೇಕು ಎಂದು ವಿಧಿ ಇದೆ—'ಸರ್ವೇ ಕನಿಷ್ಠ ಪ್ರಥಮಾಃ, ಅನುಪೂರ್ವೇ ಇತರೇ, ಸ್ತ್ರೀಯೋಽಗ್ರೇ ।' ಎಂದು ಸೂತ್ರವಿದೆ.

ತತೋ ನಿತ್ಯಾನುಗಸ್ತೇಷಾಂ ವಿದಿತಾತ್ಮಾ ಮಹಾಮತಿಃ ।
ಮೃದುರ್ದಾಂತಶ್ಚ ಶಾಂತಶ್ಚ ರಾಮೇ ಚ ದೃಢಭಕ್ತಿಮಾನ್ ॥೨೨॥

ಸುಮಂತ್ರಸ್ಯೈರ್ನೃಪಸುತೈಃ ಸಾರ್ಧಮಾಶ್ವಾಸ್ಯ ರಾಘವಮ್ ।
ಅವಾತಾರಯದಾಲಂಬ್ಯ ನದೀಂ ಮಂದಾಕಿನೀಂ ಶಿವಾಮ್ ॥೨೩॥

ಅವರಿಗೆ ನಿತ್ಯ ಅನುಚರ ಆತ್ಮಜ್ಞಾನಿ ಮಹಾಮತಿ ಮೃದು ದಾಂತಶಾಂತ ಮತ್ತು ಶ್ರೀರಾಮನಲ್ಲಿ ದೃಢಭಕ್ತಿಉಳ್ಳವನು ಸುಮಂತ್ರ ಆ ರಾಜಕುಮಾರರೊಂದಿಗೆ ರಾಮನನ್ನು ಸಂತೈಸಿ ಮಂಗಳಕರವಾದ ಮಂದಾಕಿನೀ ನದಿಗೆ ಕರೆದೊಯ್ದು ನದಿಗೆ ಇಳಿಸಿದನು.

ತೇ ಸುತೀರ್ಥಾಂ ತತಃ ಕೃಚ್ಛ್ರಾದುಪಾಗಮ್ಯ ಯಶಸ್ವಿನಃ ।
ನದೀಂ ಮಂದಾಕಿನೀಂ ರಮ್ಯಾಂ ಸದಾ ಪುಷ್ಪಿತಕಾನನಾಮ್ ॥೨೪॥

ಶೀಘ್ರಸ್ರೋತಸಮಾಸಾದ್ಯ ತೀರ್ಥಂ ಶಿವಮಕರ್ದಮಮ್ ।
ಸಿಷಿಚುಸ್ತೋದಕಂ ರಾಜ್ಞೇ ತತ ಏತದ್ ಭವತ್ವಿತಿ ॥೨೫॥

ಯಶಸ್ವಿಗಳಾದ ಆ ಕುಮಾರರು ದಡದಲ್ಲಿ ಸದಾ ಹೂಬಿಟ್ಟ ಮರಗಳಿಂದ ಕೂಡಿದ ರಮ್ಯವಾದ ಪ್ರಶಸ್ತ ಜಲಉಳ್ಳ ವೇಗದ ಪ್ರವಾಹಉಳ್ಳ ಮಂದಾಕಿನೀ ನದಿಯನ್ನು ಕಷ್ಟದಿಂದ ಸೇರಿ ಕೆಸರಿಲ್ಲದ ಮಂಗಳಕರವಾದ ಇಳಿಯುವ ಮಾರ್ಗದಲ್ಲಿ ಇಳಿದು, 'ಹೇ'ತತ' ತಾತSSS ಏತದ್ ಭವತು' 'ತಂದೆಯೆ! ಈ ಜಲವು ನಿನಗೆ ಅರ್ಪಿತ-ವಾಗಲಿ' ಎಂದು ರಾಜನಿಗೆ ಜಲತರ್ಪಣ ನೀಡಿದರು.

'ತತSSSಏತದ್ ಭವತು' ಎಂಬಲ್ಲಿ ಪ್ಲುತವಿರುವುದರಿಂದ ಸಂಧಿಯಾಗಿಲ್ಲ.
'ತತ್ಪೈತತ್ತೇ ಭವತು' ಎಂದೂ ಪಾಠವಿದೆ.

ಪ್ರಗೃಹ್ಯ ಚ ಮಹೀಪಾಲೋ ಜಲಪೂರಿತಮಂಜಲಿಮ್ ।
ದಿಶಂ ಯಾಮ್ಯಾಮಭಿಮುಖೋ ರುದನ್ ವಚನಮಬ್ರವೀತ್ ॥೨೬॥

ರಾಜಾರಾಮನು ದಕ್ಷಿಣದಿಕ್ಕಿಗೆ ಅಭಿಮುಖವಾಗಿ ಕಣ್ಣೀರು ಸುರಿಸುತ್ತ ಜಲಪೂರ್ಣವಾದ ಅಂಜಲಿಯನ್ನು ಹಿಡಿದುಕೊಂಡು ನುಡಿದನು.

ಏತತ್ತೇ ರಾಜಶಾರ್ದೂಲ ವಿಮಲಂ ತೋಯಮಕ್ಷಯಮ್ ।
ಪಿತೃಲೋಕಗತಸ್ಯಾದ್ಯ ಮದ್ದತ್ತಮುಪತಿಷ್ಠತು ॥೨೭॥

'ಹೇ ರಾಜೇಂದ್ರ, ಪಿತೃಲೋಕಗತನಾದ ನಿನಗೆ ನಾನು ಕೊಡುತ್ತಿರುವ ಈ ನಿರ್ಮಲವಾದ ಜಲವು ಅಕ್ಷಯವಾಗಿ ನಿನಗೆ ಸಿಗಲಿ' ಎಂದು.

ತತೋ ಮಂದಾಕಿನೀತೀರಾತ್ ಪ್ರತ್ಯುತ್ತೀರ್ಯ ಸ ರಾಘವಃ ।
ಪಿತುಶ್ಚಕಾರ ತೇಜಸ್ವೀ ನಿವಾಪಂ ಭ್ರಾತೃಭಿಃ ಸಹ ॥೨೮॥

ಬಳಿಕ ಮಂದಾಕಿನೀತೀರದಿಂದ ಮೇಲೆ ಬಂದು ತೇಜಸ್ವಿಯಾದ ಶ್ರೀರಾಮನು ಸೋದರರೊಂದಿಗೆ ತಂದೆಗೆ ಪಿಂಡಪ್ರದಾನವನ್ನು ಮಾಡಿದನು.

ಐಂಗುದಂ ಬದರೀಮಿಶ್ರಂ ಪಿಣ್ಯಾಕಂ ದರ್ಭಸಂಸ್ತರೇ ।
ನ್ಯಸ್ಯ ರಾಮಃ ಸುದುಃಖಾರ್ತೋ ರುದನ್ ವನಚಮಬ್ರವೀತ್ ॥೨೯॥

ಹಿಪ್ಪೆ ಯಲಚೀಕಾಯಿ ಹಿಟ್ಟುಗಳ ಮಿಶ್ರಣವನ್ನು 'ಪಿಣ್ಯಾಕ' ಪಿಂಡಕಟ್ಟಿ ಹಾಸಿದ ದರ್ಭೆಯ ಮೇಲಿಟ್ಟು ಶ್ರೀರಾಮನು ದುಃಖಾರ್ತನಾಗಿ ಕಣ್ಣೀರು ಸುರಿಸುತ್ತ ನುಡಿದನು.

ಇದಂ ಭುಂಕ್ಷ್ವ ಮಹಾರಾಜ ಪ್ರೀತೋ ಯದಶನಾ ವಯಮ್ ।
ಯದನ್ನಃ ಪುರುಷೋ ಭವತಿ ತದನ್ನಾಸ್ತಸ್ಯ ದೇವತಾಃ ॥೩೦॥

ಮಹಾರಾಜ! ನಾವು ಉಣ್ಣುವ ಅನ್ನವನ್ನು ನೀನೂ ಪ್ರೀತಿಯಿಂದ ಉಣ್ಣು. 'ಮಾನವನು ಅನಿಷಿದ್ಧವಾದ ಯಾವ ಅನ್ನವನ್ನು ಉಣ್ಣುವನೋ ಅದನ್ನು ದೇವತೆ-ಗಳೂ ಉಣ್ಣುತ್ತಾರೆ' ಎಂದು ಶ್ರುತಿ ಇದೆ.

ಕ್ಷತ್ರಿಯರು ಮಾಂಸ ಉಣ್ಣುವುದರಿಂದ ಅವರಿಗೆ ಅನಿಷಿದ್ಧವಾದ್ದರಿಂದ ಅದನ್ನು ಅವರು ಉಪಾಸನೆ ಮಾಡುವ ದೇವತೆಗಳೂ ಉಣ್ಣುತ್ತಾರೆ. ಪ್ರಕೃತ ಶ್ರೀರಾಮನು ಕ್ಷತ್ರಿಯನಾದರೂ ವಾನಪ್ರಸ್ಥ ಧರ್ಮಾಚರಣ ಮಾಡುತ್ತಿರುವುದರಿಂದ ವಾನಪ್ರಸ್ಥ-ರಿಗೆ ಅನಿಷಿದ್ಧವಾದ ಹಿಪ್ಪೆಹಿಟ್ಟನ್ನು ಪಿಂಡಮಾಡಿ ಪಿತ್ರುದ್ದೇಶದಿಂದ ಅರ್ಪಿಸು-ತ್ತಿದ್ದಾನೆ. ಯದ್ಯಪಿ ಶ್ರಾದ್ಧದಲ್ಲಿ ಪಿಂಡವನ್ನು ಪಿತೃಗಳಿಗೆ ನೈವೇದ್ಯವಾಗಿ ಅರ್ಪಿಸು-ವುದಿಲ್ಲ. ಶರೀರವಾಗಿ ಅರ್ಪಿಸುತ್ತೇವೆ. ಆದರೂ ಅನ್ನವನ್ನು ಪಿಂಡಮಾಡಿ ಶರೀರವಾಗಿಯೂ, ಮತ್ತು ಪ್ರತ್ಯೇಕ ಬಲಿಯರೂಪದಿಂದ ನೈವೇದ್ಯವಾಗಿಯೂ ಅರ್ಪಿಸುತ್ತೇವೆ. ಎರಡನ್ನೂ ಪಿತೃಗಳು 'ಉಣ್ಣುತ್ತಾರೆ' ಅಂದರೆ ಅನುಭವಿಸುತ್ತಾರೆ.

ತತಸ್ತೇನೈವ ಮಾರ್ಗೇಣ ಪ್ರತ್ಯುತ್ತೀರ್ಯ ನದೀತಟಾತ್ ।
ಆರುರೋಹ ನರವ್ಯಾಘ್ರೋ ರಮ್ಯಸಾನುಂ ಮಹೀಧರಮ್ ॥೩೧॥

ಬಳಿಕ ನದೀತೀರಕ್ಕೆ ಹೋಗಿದ್ದ ಮಾರ್ಗದಿಂದಲೇ ಹಿಂದಿರುಗಿ ಪುರುಷೋತ್ತಮ ಶ್ರೀರಾಮನು ರಮ್ಯವಾದ ಚಿತ್ರಕೂಟಪರ್ವತವನ್ನು ಏರಿದನು.

ತತಃ ಪರ್ಣಕುಟೀದ್ವಾರಮಾಸಾದ್ಯ ಜಗತೀಪತಿಃ ।
ಪರಿಜಗ್ರಾಹ ಬಾಹುಭ್ಯಾಮುಭೌ ಭರತಲಕ್ಷ್ಮಣೌ ॥೩೨॥

ಬಳಿಕ ಪರ್ಣಶಾಲೆಯ ದ್ವಾರಕ್ಕೆ ಬಂದು ಜಗತ್ಪತಿ ಶ್ರೀರಾಮನು ಬಾಹುಗಳಿಂದ ಭರತಲಕ್ಷ್ಮಣರನ್ನು ಆಲಿಂಗಿಸಿದನು.

ತೇಷಾಂ ತು ರುದತಾಂ ಶಬ್ದಾತ್ ಪ್ರತಿಶಬ್ದೋಽಭವದ್ಗಿರೌ ।
ಭ್ರಾತೄಣಾಂ ಸಹ ವೈದೇಹ್ಯಾ ಸಿಂಹಾನಾಮಿವ ನರ್ದತಾಮ್ ॥೩೩॥

ಆ ಸಹೋದರರೂ ಸೀತೆಯೂ ಅಳುವ ಶಬ್ದವು ಸಿಂಹನಾದದಂತೆ ಬೆಟ್ಟದಲ್ಲಿ ಪ್ರತಿಧ್ವನಿಸಿತು.

ಮಹಾಬಲಾನಾಂ ರುದತಾಂ ಕುರ್ವತಾಮುದಕಂ ಪಿತುಃ ।
ವಿಜ್ಞಾಯ ತುಮುಲಂ ಶಬ್ದಂ ತ್ರಸ್ತಾ ಭರತಸೈನಿಕಾಃ ॥೩೪॥

ಮಹಾಬಲಿಷ್ಠರಾದ ಆ ನಾಲ್ವರು ಸೋದರರು ಪಿತನಿಗೆ ಜಲಾಂಜಲಿ ನೀಡುತ್ತ ಅಳುತ್ತಿದ್ದ ದೊಡ್ಡ ಶಬ್ದವನ್ನು ಕೇಳಿ ಭರತನ ಸೈನಿಕರು ಭೀತರಾದರು.

ಅಬ್ರುವಂಶ್ಚಾಪಿ ರಾಮೇಣ ಭರತಃ ಸಂಗತೋ ಧ್ರುವಮ್ ।
ತೇಷಾಮೇವ ಮಹಾನ್ ಶಬ್ದಃ ಶೋಚತಾಂ ಪಿತರಂ ಮೃತಮ್ ॥೩೫॥

'ರಾಮನನ್ನು ಭರತನು ನಿಶ್ಚಯವಾಗಿ ಸೇರಿದ್ದಾನೆ. ಈ ದೊಡ್ಡ ಧ್ವನಿಯು ಅವರ ಪಿತನ ಮರಣಕ್ಕೆ ಶೋಕಿಸುವ ಧ್ವನಿಯೇ' ಎಂದು ಪರಸ್ಪರ ಹೇಳಿಕೊಂಡರು.

ಅಥ ವಾಸಾನ್ ಪರಿತ್ಯಜ್ಯ ತಂ ಸರ್ವೇಭಿಮುಖಾಃ ಸ್ವನಮ್ ।
ಅಪ್ಯೇಕಮನಸೋ ಜಗ್ಮುರ್ಯಥಾಸ್ಥಾನಂ ಪ್ರಧಾವಿತಾಃ ॥೩೬॥

ಬಳಿಕ ಸೈನಿಕರು ಎಲ್ಲರೂ ತಮ್ಮ ಶಿಬಿರಗಳನ್ನು ಬಿಟ್ಟು ಏಕಚಿತ್ತರಾಗಿ ಶಬ್ದ ಬರುತ್ತಿದ್ದ ಕಡೆಗೇ ಅಭಿಮುಖರಾಗಿ ಧಾವಿಸಿದರು.

ಹಯೈರನ್ಯೇ ಗಜೈರನ್ಯೇ ರಥೈರನ್ಯೇ ಸ್ವಲಂಕೃತೈಃ ।
ಸುಕುಮಾರಾಸ್ತಥೈವಾನ್ಯೇ ಪದ್ಭಿರೇವ ನರಾ ಯಯುಃ ॥೩೭॥

ಕೆಲವರು ಕುದುರೆಗಳಿಂದ, ಕೆಲವರು ಆನೆಗಳಿಂದ, ಕೆಲವರು ಅಲಂಕೃತವಾದ

ರಥಗಳಿಂದ, ಹೀಗೆ ಯೋಧರು ವಾಹನಗಳಿಂದ ಧಾವಿಸಿದರು. ಸಶಕ್ತರಾದ ಪ್ರಜೆಗಳು ಪ್ರಭುವಿನ ದರ್ಶನಕ್ಕಾಗಿ ಭಕ್ತಿಯಿಂದ ಕಾಲ್ನಡೆಯಿಂದಲೇ ಹೋದರು.

ಅಚಿರಪ್ರೋಷಿತಂ ರಾಮಂ ಚಿರವಿಪ್ರೋಷಿತಂ ಯಥಾ ।
ದ್ರಷ್ಟುಕಾಮೋ ಜನಃ ಸರ್ವೋ ಜಗಾಮ ಸಹಸಾಶ್ರಮಮ್ ॥೩೮॥

ರಾಮನು ಕಾಡಿಗೆ ಹೋಗಿ ಬಹಳ ದಿನಗಳಾಗದಿದ್ದರೂ ಬಹುಕಾಲವಾದಂತೆಯೇ ಎಲ್ಲ ಜನರೂ ದರ್ಶನೇಚ್ಛೆಯಿಂದ ವೇಗವಾಗಿ ಆಶ್ರಮಕ್ಕೆ ಧಾವಿಸಿದರು.

ಭ್ರಾತೄಣಾಂ ತ್ವರಿತಾಸ್ತತ್ರ ದ್ರಷ್ಟುಕಾಮಾಃ ಸಮಾಗಮಮ್ ।
ಯಯುರ್ಬಹುವಿಧೈರ್ಯಾನೈಃ ಖುರನೇಮಿಸ್ವನಾಕುಲೈಃ ॥೩೯॥

ಸೋದರ ಸಮಾಗಮವನ್ನು ನೋಡುವ ಆತುರದಿಂದ ಗೊರಸಿನ ರಥಚಕ್ರದ ಧ್ವನಿಗಳನ್ನು ಮಾಡುತ್ತ ನಾನಾ ವಾಹನಗಳಿಂದ ಜನರು ಬೇಗನೆ ಹೋದರು.

ಸಾ ಭೂಮಿರ್ಬಹುಭಿರ್ಯಾನೈಃ ಖುರನೇಮಿಸಮಾಹತಾ ।
ಮುಮೋಚ ತುಮುಲಂ ಶಬ್ದಂ ದ್ಯೌರಿವಾಭ್ರಸಮಾಗಮೇ ॥೪೦॥

ಆಕಾಶದಲ್ಲಿ ಮೋಡಗಳು ಸೇರಿದಾಗ ಗುಡುಗು ಉಂಟಾಗುವಂತೆ ಆ ಭೂಮಿ-ಯಲ್ಲಿ ಬಹುವಾಹನಗಳ ಗೊರಸು ಚಕ್ರಗಳ ಘರ್ಷಣೆಯಿಂದ ದೊಡ್ಡ ಶಬ್ದ ಉಂಟಾಯಿತು.

ತೇನ ವಿತ್ರಾಸಿತಾ ನಾಗಾಃ ಕರೇಣುಪರಿವಾರಿತಾಃ ।
ಆವಾಸಯಂತೋ ಗಂಧೇನ ಜಗ್ಮುರನ್ಯದ್ವನಂ ತತಃ ॥೪೧॥

ಆ ಶಬ್ದದಿಂದ, ಹೆಣ್ಣಾನೆಗಳಿಂದ ಕೂಡಿದ ಗಂಡಾನೆಗಳು ಭಯಗೊಂಡು ಮದಜಲಗಂಧದಿಂದ ಗಾಳಿಯನ್ನು ಸುಗಂಧಿತಗೊಳಿಸುತ್ತ ಬೇರೆ ಕಾಡುಗಳಿಗೆ ಹೋದುವು.

ವರಾಹವ್ಯಕಸಿಂಹಾಶ್ಚ ಮಹಿಷಾಃ ಸರ್ಪವಾನರಾಃ ।
ವ್ಯಾಘ್ರಗೋಕರ್ಣಗವಯಾ ವಿತ್ರೇಸುಃ ಪೃಷತೈಃ ಸಹ ॥೪೨॥

ಕಾಡುಹಂದಿ ತೋಳ ಸಿಂಹ ಕಾಡೆಮ್ಮೆ ಸರ್ಪ ಕೋತಿ ಹುಲಿ ಗೋಕರ್ಣ ಗವಯ ಜಿಂಕೆ ಮುಂತಾದ ಮೃಗಗಳೂ ಭಯಗೊಂಡವು.

ತತಃ ಪರ್ಣಕುಟೀದ್ವಾರಮಾಸಾದ್ಯ ಜಗತೀಪತಿಃ ।
ಪರಿಜಗ್ರಾಹ ಬಾಹುಭ್ಯಾಮುಭೌ ಭರತಲಕ್ಷ್ಮಣೌ ॥೩೨॥

ಬಳಿಕ ಪರ್ಣಶಾಲೆಯ ದ್ವಾರಕ್ಕೆ ಬಂದು ಜಗತ್ಪತಿ ಶ್ರೀರಾಮನು ಬಾಹುಗಳಿಂದ ಭರತಲಕ್ಷ್ಮಣರನ್ನು ಆಲಿಂಗಿಸಿದನು.

ತೇಷಾಂ ತು ರುದತಾಂ ಶಬ್ದಾತ್ ಪ್ರತಿಶಬ್ದೋಽಭವದ್ಗಿರೌ ।
ಭ್ರಾತೄಣಾಂ ಸಹ ವೈದೇಹ್ಯಾ ಸಿಂಹಾನಾಮಿವ ನರ್ದತಾಮ್ ॥೩೩॥

ಆ ಸಹೋದರರೂ ಸೀತೆಯೂ ಅಳುವ ಶಬ್ದವು ಸಿಂಹನಾದದಂತೆ ಬೆಟ್ಟದಲ್ಲಿ ಪ್ರತಿಧ್ವನಿಸಿತು.

ಮಹಾಬಲಾನಾಂ ರುದತಾಂ ಕುರ್ವತಾಮುದಕಂ ಪಿತುಃ ।
ವಿಜ್ಞಾಯ ತುಮುಲಂ ಶಬ್ದಂ ತ್ರಸ್ತಾ ಭರತಸೈನಿಕಾಃ ॥೩೪॥

ಮಹಾಬಲಿಷ್ಠರಾದ ಆ ನಾಲ್ವರು ಸೋದರರು ಪಿತನಿಗೆ ಜಲಾಂಜಲಿ ನೀಡುತ್ತ ಅಳುತ್ತಿದ್ದ ದೊಡ್ಡ ಶಬ್ದವನ್ನು ಕೇಳಿ ಭರತನ ಸೈನಿಕರು ಭೀತರಾದರು.

ಅಬ್ರುವಂಶ್ಚಾಪಿ ರಾಮೇಣ ಭರತಃ ಸಂಗತೋ ಧ್ರುವಮ್ ।
ತೇಷಾಮೇವ ಮಹಾನ್ ಶಬ್ದಃ ಶೋಚತಾಂ ಪಿತರಂ ಮೃತಮ್ ॥೩೫॥

'ರಾಮನನ್ನು ಭರತನು ನಿಶ್ಚಯವಾಗಿ ಸೇರಿದ್ದಾನೆ. ಈ ದೊಡ್ಡ ಧ್ವನಿಯು ಅವರ ಪಿತನ ಮರಣಕ್ಕೆ ಶೋಕಿಸುವ ಧ್ವನಿಯೇ' ಎಂದು ಪರಸ್ಪರ ಹೇಳಿಕೊಂಡರು.

ಅಥ ವಾಸಾನ್ ಪರಿತ್ಯಜ್ಯ ತಂ ಸರ್ವೇಭಿಮುಖಾಃ ಸ್ವನಮ್ ।
ಅಪ್ಯೇಕಮನಸೋ ಜಗ್ಮುರ್ಯಥಾಸ್ಥಾನಂ ಪ್ರಧಾವಿತಾಃ ॥೩೬॥

ಬಳಿಕ ಸೈನಿಕರು ಎಲ್ಲರೂ ತಮ್ಮ ಶಿಬಿರಗಳನ್ನು ಬಿಟ್ಟು ಏಕಚಿತ್ತರಾಗಿ ಶಬ್ದ ಬರುತ್ತಿದ್ದ ಕಡೆಗೇ ಅಭಿಮುಖರಾಗಿ ಧಾವಿಸಿದರು.

ಹಯೈರನ್ಯೇ ಗಜೈರನ್ಯೇ ರಥೈರನ್ಯೇ ಸ್ವಲಂಕೃತೈಃ ।
ಸುಕುಮಾರಾಸ್ತಥೈವಾನ್ಯೇ ಪದ್ಭಿರೇವ ನರಾ ಯಯುಃ ॥೩೭॥

ಕೆಲವರು ಕುದುರೆಗಳಿಂದ, ಕೆಲವರು ಆನೆಗಳಿಂದ, ಕೆಲವರು ಅಲಂಕೃತವಾದ

ರಥಗಳಿಂದ, ಹೀಗೆ ಯೋಧರು ವಾಹನಗಳಿಂದ ಧಾವಿಸಿದರು. ಸಶಕ್ತರಾದ ಪ್ರಜೆಗಳು ಪ್ರಭುವಿನ ದರ್ಶನಕ್ಕಾಗಿ ಭಕ್ತಿಯಿಂದ ಕಾಲ್ನಡೆಯಿಂದಲೇ ಹೋದರು.

ಅಚಿರಪ್ರೋಷಿತಂ ರಾಮಂ ಚಿರವಿಪ್ರೋಷಿತಂ ಯಥಾ ।
ದ್ರಷ್ಟುಕಾಮೋ ಜನಃ ಸರ್ವೋ ಜಗಾಮ ಸಹಸಾಶ್ರಮಮ್ ॥೩೮॥

ರಾಮನು ಕಾಡಿಗೆ ಹೋಗಿ ಬಹಳ ದಿನಗಳಾಗದಿದ್ದರೂ ಬಹುಕಾಲವಾದಂತೆಯೇ ಎಲ್ಲ ಜನರೂ ದರ್ಶನೇಚ್ಛೆಯಿಂದ ವೇಗವಾಗಿ ಆಶ್ರಮಕ್ಕೆ ಧಾವಿಸಿದರು.

ಭ್ರಾತೄಣಾಂ ತ್ವರಿತಾಸ್ತತ್ರ ದ್ರಷ್ಟುಕಾಮಾಃ ಸಮಾಗಮಮ್ ।
ಯಯುರ್ಬಹುವಿಧೈರ್ಯಾನೈಃ ಖುರನೇಮಿಸ್ವನಾಕುಲೈಃ ॥೩೯॥

ಸೋದರ ಸಮಾಗಮವನ್ನು ನೋಡುವ ಆತುರದಿಂದ ಗೊರಸಿನ ರಥಚಕ್ರದ ಧ್ವನಿಗಳನ್ನು ಮಾಡುತ್ತ ನಾನಾ ವಾಹನಗಳಿಂದ ಜನರು ಬೇಗನೆ ಹೋದರು.

ಸಾ ಭೂಮಿರ್ಬಹುಭಿರ್ಯಾನೈಃ ಖುರನೇಮಿಸಮಾಹತಾ ।
ಮುಮೋಚ ತುಮುಲಂ ಶಬ್ದಂ ದ್ಯೌರಿವಾಭ್ರಸಮಾಗಮೇ ॥೪೦॥

ಆಕಾಶದಲ್ಲಿ ಮೋಡಗಳು ಸೇರಿದಾಗ ಗುಡುಗು ಉಂಟಾಗುವಂತೆ ಆ ಭೂಮಿ-ಯಲ್ಲಿ ಬಹುವಾಹನಗಳ ಗೊರಸು ಚಕ್ರಗಳ ಘರ್ಷಣೆಯಿಂದ ದೊಡ್ಡ ಶಬ್ದ ಉಂಟಾಯಿತು.

ತೇನ ವಿತ್ರಾಸಿತಾ ನಾಗಾಃ ಕರೇಣುಪರಿವಾರಿತಾಃ ।
ಆವಾಸಯಂತೋ ಗಂಧೇನ ಜಗ್ಮುರನ್ಯದ್ವನಂ ತತಃ ॥೪೧॥

ಆ ಶಬ್ದದಿಂದ, ಹೆಣ್ಣಾನೆಗಳಿಂದ ಕೂಡಿದ ಗಂಡಾನೆಗಳು ಭಯಗೊಂಡು ಮದಜಲಗಂಧದಿಂದ ಗಾಳಿಯನ್ನು ಸುಗಂಧಿತಗೊಳಿಸುತ್ತ ಬೇರೆ ಕಾಡುಗಳಿಗೆ ಹೋದುವು.

ವರಾಹವೃಕಸಿಂಹಾಶ್ಚ ಮಹಿಷಾಃ ಸರ್ಪವಾನರಾಃ ।
ವ್ಯಾಘ್ರಗೋಕರ್ಣಗವಯಾ ವಿತ್ರೇಸುಃ ಪೃಷತೈಃ ಸಹ ॥೪೨॥

ಕಾಡುಹಂದಿ ತೋಳ ಸಿಂಹ ಕಾಡೆಮ್ಮೆ ಸರ್ಪ ಕೋತಿ ಹುಲಿ ಗೋಕರ್ಣ ಗವಯ ಜಿಂಕೆ ಮುಂತಾದ ಮೃಗಗಳೂ ಭಯಗೊಂಡವು.

ರಥಾಂಗಸಾಹ್ವಾ ನತ್ಯೂಹಾ ಹಂಸಾಃ ಕಾರಂಡವಾಃ ಪ್ಲವಾಃ ।
ತಥಾ ಪುಂಸ್ಕೋಕಿಲಾಃ ಕ್ರೌಂಚಾ ವಿಸಂಜ್ಞಾ ಭೇಜಿರೇ ದಿಶಃ ॥೪೩॥

ಚಕ್ರವಾಕ ಹಂಸ ನೀರುಕೋಳಿ ಬಕ ಕಾರಂಡವ ಕೋಗಿಲೆ ಕ್ರೌಂಚ ಮುಂತಾದ ಪಕ್ಷಿಗಳೂ ಆ ಧ್ವನಿಯನ್ನು ಕೇಳಿ ಭಯಗೊಂಡು ದಿಕ್ಕುದಿಕ್ಕುಗಳಿಗೆ ಹಾರಿದುವು.

ತೇನ ಶಬ್ದೇನ ವಿತ್ರಸ್ತೈರಾಕಾಶಂ ಪಕ್ಷಿಭಿರ್ವೃತಮ್ ।
ಮನುಷ್ಯೈರಾವೃತಾ ಭೂಮಿರುಭಯಂ ಪ್ರಬಭೌ ತದಾ ॥೪೪॥

ಆ ಶಬ್ದದಿಂದ ಭಯಗೊಂಡು ಪಕ್ಷಿಗಳು ಆಕಾಶವನ್ನು ಆವರಿಸಿದುವು. ಮನುಷ್ಯರೂ ಆ ನೆಲವನ್ನು ಆವರಿಸಿದರು. ಹೀಗಾಗಿ ಭೂಮಿ ಅಂತರಿಕ್ಷಗಳೆರಡೂ ಶೋಭಿಸಿದುವು.

ತತಸ್ತಂ ಪುರುಷವ್ಯಾಘ್ರಂ ಯಶಸ್ವಿನಮಕಲ್ಮಷಮ್ ।
ಆಸೀನಂ ಸ್ಥಂಡಿಲೇ ರಾಮಂ ದದರ್ಶ ಸಹಸಾ ಜನಃ ॥೪೫॥

ಯಶಸ್ವಿ ಕಲ್ಮಷರಹಿತ, ಪುರುಷೋತ್ತಮನಾದ ರಾಮನು ಆಶ್ರಮದಲ್ಲಿ ನೆಲದ ಮೇಲೆ ಕುಳಿತಿದ್ದುದನ್ನು ಜನರು ಬೇಗನೆ ದರ್ಶನ ಮಾಡಿದರು.

ವಿಗರ್ಹಮಾಣಃ ಕೈಕೇಯೀಂ ಸಹಿತೋ ಮಂಥರಾಮಪಿ ।
ಅಭಿಗಮ್ಯ ಜನೋ ರಾಮಂ ಬಾಷ್ಪಪೂರ್ಣಮುಖೋಽಭವತ್ ॥೪೬॥

ಜನರೆಲ್ಲರೂ ಸೇರಿ ಕೈಕೇಯಿಯನ್ನೂ ಮಂಥರೆಯನ್ನೂ ದೂಷಿಸುತ್ತ ರಾಮನನ್ನು ಸಂದರ್ಶಿಸಿ ಕಣ್ಣೀರು ಸುರಿಸಿದರು.

ತಾನ್ನರಾನ್ ಬಾಷ್ಪಪೂರ್ಣಾಕ್ಷಾನ್ ಸಮೀಕ್ಷ್ಯಾಥ ಸುದುಃಖಿತಾನ್ ।
ಪರ್ಯಷ್ವಜತ ಧರ್ಮಜ್ಞಃ ಪಿತೃವನ್ಮಾತೃವಚ್ಚ ಸಃ ॥೪೭॥

ಬಹಳ ದುಃಖಿತರಾಗಿ ಕಣ್ಣೀರು ಸುರಿಸುತ್ತಿದ್ದ ಆ ಜನರನ್ನು ಧರ್ಮಜ್ಞನಾದ ರಾಮನು ತಂದೆಯಂತೆ ತಾಯಿಯಂತೆ ಆಲಿಂಗಿಸಿದನು.

ಸ ತತ್ರ ಕಾಂಶ್ಚಿತ್ ಪರಿಷಸ್ವಜೇ ನರಾನ್
ನರಾಶ್ಚ ಕೇಚಿತ್ತು ತಮಭ್ಯವಾದಯನ್ ।
ಚಕಾರ ಸರ್ವಾನ್ ಸವಯಸ್ಯಬಾಂಧವಾನ್
ಯಥಾರ್ಹಮಾಸಾದ್ಯ ತದಾ ನೃಪಾತ್ಮಜಃ ॥೪೮॥

ಶ್ರೀರಾಮನು ಅಲ್ಲಿ ಕೆಲವು ಜನರನ್ನು ಆಲಿಂಗಿಸಿದನು. ಕೆಲವು ಜನರು ಅವನನ್ನು ಅಭಿವಂದಿಸಿದರು. ರಾಜಕುಮಾರ ರಾಮನು ಎಲ್ಲ ಬಂಧುಮಿತ್ರರನ್ನೂ ಯಥಾ-ಯೋಗ್ಯವಾಗಿ ಸತ್ಕರಿಸಿದನು.

ಸ ತತ್ರ ತೇಷಾಂ ರುದತಾಂ ಮಹಾತ್ಮನಾಂ
ಭುವಂ ಚ ಖಂ ಚಾನುನಿನಾದಯನ್ ಸ್ವನಃ ।
ಗುಹಾ ಗಿರೀಣಾಂ ಚ ದಿಶಶ್ಚ ಸಂತತಂ
ಮೃದಂಗಘೋಷಪ್ರತಿಮಃ ಪ್ರಶುಶ್ರುವೇ ॥೪೯॥

ಅಳುತ್ತಿದ್ದ ಮಹಾತ್ಮರಾದ ಆ ಜನರ ಧ್ವನಿಯು ಭೂಮಿ ಅಂತರಿಕ್ಷಗಳಲ್ಲಿ ಗಿರಿ ಗುಹೆಗಳಲ್ಲಿ ದಿಕ್ಕುಗಳಲ್ಲಿಯೂ ಎಡೆಬಿಡದೆ ಮೃದಂಗಧ್ವನಿಯಂತೆ ಪ್ರತಿಧ್ವನಿಸಿತು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ನೂರಎರಡನೇ ಸರ್ಗ ಮುಗಿಯಿತು.

❖

ತ್ರ್ಯಧಿಕಶತತಮಃ ಸರ್ಗಃ

ಸರ್ಗ – 103

ಕೌಸಲ್ಯೆ ಮೊದಲಾದವರು ಶ್ರೀರಾಮನನ್ನು ಕಂಡು ಶೋಕಿಸುವುದು.

ವಸಿಷ್ಠಃ ಪುರತಃ ಕೃತ್ವಾ ದಾರಾನ್ ದಶರಥಸ್ಯ ಚ ।
ಅಭಿಚಕ್ರಾಮ ತಂ ದೇಶಂ ರಾಮದರ್ಶನತರ್ಷಿತಃ ॥೧॥

ವಸಿಷ್ಠಮುನಿಯು ದಶರಥನ ರಾಣಿಯರನ್ನು ಮುಂದೆ ಮಾಡಿಕೊಂಡು ರಾಮದರ್ಶನದ ಅಭಿಲಾಷೆಯಿಂದ ರಾಮಾಶ್ರಮಪ್ರದೇಶಕ್ಕೆ ಹೋದರು.

ರಾಜಪತ್ನ್ಯಶ್ಚ ಗಚ್ಛಂತ್ಯೋ ಮಂದಂ ಮಂದಾಕಿನೀಂ ಪ್ರತಿ ।
ದದೃಶುಸ್ತತ್ರ ತತ್ತೀರ್ಥಂ ರಾಮಲಕ್ಷ್ಮಣಸೇವಿತಮ್ ॥೨॥

ರಾಣಿಯರು ಮೆಲ್ಲನೆ ಮಂದಾಕಿನಿಯ ಕಡೆಗೆ ನಡೆದು ಅಲ್ಲಿ ರಾಮಲಕ್ಷ್ಮಣರು ಸೇವಿಸುತ್ತಿದ್ದ ಆ ನದೀಘಟ್ಟವನ್ನು ನೋಡಿದರು.

ಕೌಸಲ್ಯಾ ಬಾಷ್ಪಪೂರ್ಣೇನ ಮುಖೇನ ಪರಿಶುಷ್ಯತಾ ।
ಸುಮಿತ್ರಾಮಬ್ರವೀದ್ದೀನಾ ಯಾಶ್ಚಾನ್ಯಾ ರಾಜಯೋಷಿತಃ ॥೩॥

ದೀನಳಾದ ಕೌಸಲ್ಯೆಯು ಬಾಷ್ಪಪೂರ್ಣವಾದ ಬಾಡಿದ ಮುಖದಿಂದ ಸುಮಿತ್ರೆಗೂ ಬೇರೆ ರಾಜಪತ್ನಿಯರಿಗೂ ಹೇಳಿದಳು.

ಇದಂ ತೇಷಾಮನಾಥಾನಾಂ ಕ್ಲಿಷ್ಟಮಕ್ಲಿಷ್ಟಕರ್ಮಣಾಮ್ ।
ವನೇ ಪ್ರಾಕ್ಕಲನಂ ತೀರ್ಥಂ ಯೇ ತೇ ನಿರ್ವಿಷಯೀಕೃತಾಃ ॥೪॥

ಕ್ಲೇಶವಿಲ್ಲದೆ ಕರ್ಮಮಾಡುವ ನನ್ನ ಮಕ್ಕಳು ಈಗ ದೇಶಭ್ರಷ್ಟರಾಗಿ ಅನಾಥರಂತೆ ಕ್ಲೇಶಪಡುತ್ತಿದ್ದಾರೆ. ನದಿಗೆ ಹೋಗಿಬರಲು ಅವರು ಆಶ್ರಯಿಸಿರುವ ಕಡಿದಾದ ಕ್ಲೇಶಕರವಾದ ಮಾರ್ಗ ಇದು.

ಇತಃ ಸುಮಿತ್ರೇ ಪುತ್ರಸ್ತೇ ಸದಾ ಜಲಮತಂದ್ರಿತಃ ।
ಸ್ವಯಂ ಹರತಿ ಸೌಮಿತ್ರಿರ್ಮಮ ಪುತ್ರಸ್ಯ ಕಾರಣಾತ್ ॥೫॥

ಸುಮಿತ್ರೆ, ನಿನ್ನ ಪುತ್ರ ಸೌಮಿತ್ರಿಯು ಅಂದರೆ ಲಕ್ಷ್ಮಣನು ಸದಾ ಆಲಸ್ಯವಿಲ್ಲದೆ ನನ್ನ ಮಗನಿಗಾಗಿ ಇಲ್ಲಿಂದಲೇ ನೀರನ್ನು ಸ್ವಯಂ ತರುತ್ತಾನೆ.

ಜಘನ್ಯಮಪಿ ತೇ ಪುತ್ರಃ ಕೃತವಾನ್ನ ತು ಗರ್ಹಿತಃ ।
ಭ್ರಾತುರ್ಯದರ್ಥಸಹಿತಂ ಸರ್ವಂ ತದ್ವಿಹಿತಂ ಗುಣೈಃ ॥೬॥

ಕೀಳಾದ ಕೆಲಸವನ್ನು ನಿನ್ನ ಪುತ್ರನು ಮಾಡುತ್ತಿದ್ದರೂ ಅವನು ಕೀಳೆನಿಸುವುದಿಲ್ಲ. ಏಕೆಂದರೆ ಗುಣಶಾಲಿಯಾದ ಹಿರಿಯಣ್ಣನಿಗೆ ಉಪಯೋಗವಾಗುವಂಥ ಕೆಲಸವಿದು ಎಂದೂ ಕೀಳಲ್ಲ. ಅದು ಎಲ್ಲವೂ ವಿಹಿತವೆ.

ಅದ್ಯಾಯಮಪಿ ತೇ ಪುತ್ರಃ ಕ್ಲೇಶಾನಾಮತಥೋಚಿತಃ ।
ನೀಚಾನರ್ಥಸಮಾಚಾರಂ ಸಜ್ಜಂ ಕರ್ಮ ಪ್ರಮುಂಚತು ॥೭॥

ಇಂದಿಗೇ ತಾನು ಪಡುತ್ತಿರುವ ಕ್ಲೇಶಕ್ಕೆ ತಕ್ಕವನಲ್ಲದ ನಿನ್ನ ಮಗನೂ ಕೂಡ ಕೀಳಾದ ದುಃಖಕರವಾದ ಈ ಬಗೆಯ ಕರ್ಮವನ್ನು ಬಿಟ್ಟುಬಿಡುವಂತಾಗಲಿ. ಭರತನ ಪ್ರಯತ್ನದ ಪರಿಣಾಮವಾಗಿ ಈ ವನವಾಸ ಇಂದಿಗೇ ಮುಕ್ತಾಯವಾಗಲಿ.

ದಕ್ಷಿಣಾಗ್ರೇಷು ದರ್ಭೇಷು ಸಾ ದದರ್ಶ ಮಹೀತಲೇ ।
ಪಿತುರಿಂಗುದಿಪಿಣ್ಯಾಕಂ ನ್ಯಸ್ತಮಾಯತಲೋಚನಾ ॥೮॥

ನೆಲದ ಮೇಲೆ ದಕ್ಷಿಣಕ್ಕೆ ತುದಿಭಾಗ ಬರುವಂತೆ ಹಾಸಿದ ದರ್ಭೆಗಳ ಮೇಲೆ ರಾಮನು ತಂದೆಗೆ ಇಟ್ಟಿದ್ದ ಹಿಪ್ಪೆಹಿಟ್ಟಿನ ಪಿಂಡವನ್ನು ಉದ್ದಕಣ್ಣಿನವಳು ಕೌಸಲ್ಯೆ ಕಂಡಳು.

ತಂ ಭೂಮೌ ಪಿತುರಾರ್ತೇನ ನ್ಯಸ್ತಂ ರಾಮೇಣ ವೀಕ್ಷ್ಯ ಸಾ ।
ಉವಾಚ ದೇವೀ ಕೌಸಲ್ಯಾ ಸರ್ವಾ ದಶರಥಸ್ತ್ರಿಯಃ ॥೯॥

ಶೋಕಾರ್ತನಾದ ರಾಮನು ತಂದೆಗೆ ನೆಲದಮೇಲೆ ಪಿಂಡ ಇಟ್ಟಿದ್ದನ್ನು ಕಂಡು ದೇವಿ ಕೌಸಲ್ಯೆ ಎಲ್ಲ ದಶರಥ ಪತ್ನಿಯರಿಗೆ ನುಡಿದಳು.

ಇದಮಿಕ್ಷ್ವಾಕುನಾಥಸ್ಯ ರಾಘವಸ್ಯ ಮಹಾತ್ಮನಃ ।
ರಾಘವೇಣ ಪಿತುರ್ದತ್ತಂ ಪಶ್ಯತೈತದ್ಯಥಾವಿಧಿ ॥೧೦॥

ಇದು ತಂದೆಯಾದ ಇಕ್ಷ್ವಾಕುನಾಥ ಮಹಾತ್ಮ ದಶರಥನಿಗೆ ರಾಮನು ವಿಧ್ಯುಕ್ತ–ವಾಗಿ ನೀಡಿದ ಪಿಂಡ. ಇದನ್ನು ನೋಡಿರಿ.

ತಸ್ಯ ದೇವಸಮಾನಸ್ಯ ಪಾರ್ಥಿವಸ್ಯ ಮಹಾತ್ಮನಃ ।
ನೈತದೌಪಯಿಕಂ ಮನ್ಯೇ ಭುಕ್ತಭೋಗಸ್ಯ ಭೋಜನಮ್ ॥೧೧॥

ಎಲ್ಲ ಸುಖಭೋಗವನ್ನು ಉಂಡಿರುವ ದೇವಸಮಾನನಾದ ಮಹಾತ್ಮನಾದ ರಾಜಾ ದಶರಥನಿಗೆ ಈ ಪಿಂಡವು ಭೋಜನಯೋಗ್ಯವಲ್ಲವೆಂದು ನಾನು ಭಾವಿಸುತ್ತೇನೆ.

ಚತುರಂತಾಂ ಮಹೀಂ ಭುಕ್ತ್ವಾ ಮಹೇಂದ್ರಸದೃಶೋ ಭುವಿ ।
ಕಥಮಿಂಗುದಿಪಿಣ್ಯಾಕಂ ಸ ಭುಂಕ್ತೇ ವಸುಧಾಧಿಪಃ ॥೧೨॥

ಮಹೇಂದ್ರ ಸಮಾನನಾಗಿ ಭೂಮಿಯಲ್ಲಿ ಚತುಃಸಾಗರಪರ್ಯಂತ ಭೂಮಿಯನ್ನು ಭೋಗಿಸಿ ರಾಜಾ ದಶರಥನು ಈಗ ಹಿಪ್ಪೆಹಿಟ್ಟಿನ ಪಿಂಡವನ್ನು ಹೇಗೆತಾನೆ ಉಣ್ಣುವನು?

'ಭವಾಂತರ ಗತಾನಪಿ ಪ್ರಾಣಿನಃ
ಪ್ರೀಣಯಂತ್ಯೇತೇ ತದಾಹಾರತ್ವಮಾಗತಾಃ ।'

ಪಿತೃಗಳು ಯಾವುದೇ ಜನ್ಮಾಂತರವನ್ನು ಪಡೆದರೂ ಅವರಿಗೆ ಶ್ರಾದ್ಧದಲ್ಲಿ ನಾವು ನೀಡಿದ ಅನ್ನವು ಆಯಾ ಜನ್ಮದಲ್ಲಿ ಉಣಲು ಯೋಗ್ಯವಾಗುವ ಆಹಾರ ರೂಪದಿಂದ ಅವರಿಗೇ ತಲುಪುತ್ತದೆ ಎಂದು ಮತ್ಸ್ಯಪುರಾಣ ವಚನವು ಸ್ಮೃತಿ ಮುಕ್ತಾವಳಿಯಲ್ಲಿ ಉಕ್ತವಾಗಿದೆ. ಮತ್ತು 'ದೇವೋ ಯದಪಿ ಜಾತೋಽಯಂ ಮನುಷ್ಯಃ ಕರ್ಮಯೋಗತಃ । ತಸ್ಯಾನ್ನಮಮೃತಂ ಭೂತ್ವಾ ದೇವತ್ವೇಽಪ್ಯನುಯಾತಿ ಚ । ಗಾಂಧರ್ವ್ಯೇ ಭೋಗರೂಪೇಣ ಪಶುತ್ವೇ ಚ ತೃಣಂ ಭವೇತ್' । ಮನುಷ್ಯತ್ವೇಽನ್ನಪಾನಾದಿ' ಎಂದು ಮನ್ವಾದಿಗಳು ಹೇಳಿದಂತೆ ಪಿತೃಗಳಿಗೆ ನಾವು ಕೊಟ್ಟ ಅನ್ನವು ಅವರಿಗೆ ಯೋಗ್ಯವಾದ ಆಹಾರರೂಪದಿಂದ ದೊರಕುತ್ತದೆ.

ವಸುರುದ್ರಾದಿತಿಸುತಾಃ ಪಿತರಃ ಶ್ರಾದ್ಧದೇವತಾಃ ।
ಪ್ರೀಣಯಂತಿ ಮನುಷ್ಯಾಣಾಂ ಪಿತೄನ್ ಶ್ರಾದ್ಧೇನ ತರ್ಪಿತಾಃ ॥

ಎಂದು ಯಜ್ಞವಲ್ಕ್ಯಸ್ಮೃತಿಯು ಹೇಳುವಂತೆ ವಸು ರುದ್ರ ಆದಿತ್ಯರು ತಾವು ತೃಪ್ತರಾಗಿ ಪಿತೃಗಳಿಗೆ ತೃಪ್ತಿ ನೀಡುತ್ತಾರೆ. ಹೀಗಾಗಿ ನಾವು ನೀಡಿದ ಅನ್ನವು ನೇರವಾಗಿ ಪಿತೃಗಳಿಗೆ ಉಣಲು ಸಿಗುವುದಿಲ್ಲ ಎಂದಮೇಲೆ 'ಚಕ್ರವರ್ತಿಗೆ ಹಿಪ್ಪೆಹಿಟ್ಟಿನ ಪಿಂಡವನ್ನು ಶ್ರಾದ್ಧದಲ್ಲಿ ನೀಡುವುದು ಎಷ್ಟು ಉಚಿತ?' ಎಂದು ಪ್ರಶ್ನೆ ಮಾಡಲು ಅವಕಾಶವಿಲ್ಲ. ಪಿತೃಗಳಿಗೆ ಶ್ರಾದ್ಧದಲ್ಲಿ ಪ್ರಶಸ್ತವಾದ ಉತ್ತಮ ಅನ್ನ ನೀಡಬೇಕು. ಹಿಪ್ಪೆಹಿಟ್ಟಿನಂಥ ನಿಕೃಷ್ಟ ಅನ್ನವನ್ನಲ್ಲ, ರಾಮನು ಈಗ ಅಂಥ

ನಿಕೃಷ್ಟಾನ್ನವನ್ನು ನೀಡುತ್ತಾನೆ ಎಂದು ಕೌಸಲ್ಯೆಗೆ ಆತಂಕ. ಇದು ದುಃಖದಿಂದ ಹೇಳುವ ಮಾತು. ಅವಳೇ ಮುಂದೆ 'ಯದನ್ನಃ ಪುರುಷಃ ತದನ್ನಾಸ್ತಸ್ಯದೇವತಾಃ' ಎಂಬ ಶ್ರುತಿಯನ್ನು ಹೇಳುತ್ತಿದ್ದಾಳೆ. ಅದರಿಂದ 'ರಾಮನು ತಾನು ಹಿಪ್ಪೆಹಿಟ್ಟಿನ ಅನ್ನ ಉಣಬೇಕಾಗಿದೆ' ಎಂದೇ ಅವಳಿಗೆ ದುಃಖವೆಂದು ವಾಲ್ಮೀಕಿ ಹೇಳುತ್ತಿದ್ದಾನೆ.

ಅತೋ ದುಃಖತರಂ ಲೋಕೇ ನ ಕಿಂಚಿತ್ ಪ್ರತಿಭಾತಿ ಮೇ ।
ಯತ್ರ ರಾಮಃ ಪಿತುರ್ದದ್ಯಾದಿಂಗುದೀಕ್ಪೋದಮೃದ್ಧಿಮಾನ್ ॥೧೩॥

ಸಕಲ ಸಂಪತ್ತಿನ ಅಧಿಕಾರಿಯಾದ ರಾಮನು ಈಗ ತಾನು ಹಿಪ್ಪೆಹಿಟ್ಟಿನ ಅನ್ನ ಉಣ್ಣುವಂತಾದ್ದರಿಂದ, ಅದನ್ನೇ ಅವನು ಪಿತನಿಗೆ ಶ್ರಾದ್ಧದಲ್ಲಿ ಪಿಂಡವಾಗಿ ನೀಡುತ್ತಿದ್ದಾನೆ. ಇದಕ್ಕಿಂತ ಹೆಚ್ಚಿನ ದುಃಖವು ಲೋಕದಲ್ಲಿ ಏನಿಲ್ಲ ಎಂದು ನನಗೆ ಅನಿಸುತ್ತಿದೆ.

ತಿಲಂ ಅನ್ನಂ ಚ ಪಾನೀಯಂ ಗುಡಂ ದಧಿ ಪಯಸ್ತಥಾ ।
ಮಧು ಸರ್ಪಿಃ ಸಮಾಯುಕ್ತಂ ಅಷ್ಟಾಂಗಂ ಪಿಂಡ ಲಕ್ಷಣಂ ॥

ಎಂದು ಪರಾಶರಸ್ಮೃತಿ ಹೇಳುವಂತೆ ಎಳ್ಳು ಅನ್ನ ಕಲಶೋದಕ ಬೆಲ್ಲ ಮೊಸರು ಹಾಲು ಜೇನುತುಪ್ಪ ತುಪ್ಪ ಹೀಗೆ ಎಂಟು ದ್ರವ್ಯಗಳನ್ನು ಸೇರಿಸಿಯೇ ಪಿಂಡ ಕಟ್ಟಬೇಕು. ಅವುಗಳಲ್ಲಿ ಎಳ್ಳು ಮತ್ತು ಅನ್ನಗಳಿಂದ ತಲೆ, ಮೊಸರಿನಿಂದ ಮೂಗು, ತುಪ್ಪದಿಂದ ಕಿವಿ, ಬೆಲ್ಲದಿಂದ ತೋಳು, ಹಾಲಿನಿಂದ ಎದೆ, ಜೇನುತುಪ್ಪದಿಂದ ರೋಮಗಳು, ಕಲಶೋದಕದಿಂದ ಕಾಲು ಮುಂತಾದ ಅಂಗಗಳು ಉಂಟಾಗುವುದರಿಂದ, ಪಿತೃಗಳು ಆ ಶರೀರಧಾರಿಗಳಾಗಿ ನಮ್ಮ ಮುಂದೆ ಬರುತ್ತಾರೆ. ಅವರಿಗೆ ವಿಷ್ಣುವಿಗೆ ಅರ್ಪಿತವಾದ ತುಲಸೀದಳ ಸಹಿತವಾದ ಅನ್ನ ಭಕ್ಷ್ಯ ಪಾಯಸ ಹಾಲು ತುಪ್ಪ ಮೊಸರು ಜೇನುತುಪ್ಪ ಮುಂತಾದುವನ್ನು ಅರ್ಪಿಸಬೇಕು. ಏಕೆಂದರೆ ಈ ದ್ರವ್ಯಗಳನ್ನೇ ಗೃಹಸ್ಥನು ಉಣ್ಣುತ್ತಾನೆ. ವಾನಪ್ರಸ್ಥನು ಮಾತ್ರ ಹಿಪ್ಪೆಹಿಟ್ಟಿನ ಪಿಂಡವನ್ನು ಉಣ್ಣುವುದರಿಂದ ಅದನ್ನು ಪಿಂಡಕ್ಕೆ ಉಪಯೋಗಿಸಬೇಕಾಗುತ್ತದೆ. ಶ್ರೀರಾಮನು ಈಗ ಅದನ್ನೇ ಉಣ್ಣುವಂತಾಯಿತೆಂದು ಕೌಸಲ್ಯೆಗೆ ದುಃಖ.

ರಾಮೇಣೇಂಗುದಿಪಿಣ್ಯಾಕಂ ಪಿತುರ್ದತ್ತಂ ಸಮೀಕ್ಷ್ಯ ಮೇ ।
ಕಥಂ ದುಃಖೇನ ಹೃದಯಂ ನ ಸ್ಫೋಟತಿ ಸಹಸ್ರಧಾ ॥೧೪॥

ರಾಮನು ಹಿಪ್ಪೆಪಿಂಡವನ್ನು ತಂದೆಗೆ ಕೊಟ್ಟಿದ್ದನ್ನು ನೋಡಿಯೂ ನನ್ನ ಹೃದಯವು ದುಃಖದಿಂದ ಸಾವಿರ ಹೋಳಾಗದೇ ಉಳಿದಿದೆ ಹೇಗೆ?

ಶ್ರುತಿಸ್ತು ಖಲ್ವಿಯಂ ಸತ್ಯಾ ಲೌಕಿಕೀ ಪ್ರತಿಭಾತಿ ಮಾ ।
ಯದನ್ನಃ ಪುರುಷೋ ಭವತಿ ತದನ್ನಾಸ್ತಸ್ಯ ದೇವತಾಃ ॥೧೫॥

'ಮಾನವನು ಅನಿಷಿದ್ಧವಾದ ಯಾವ ಅನ್ನವನ್ನು ಉಣ್ಣುವನೋ ಅದನ್ನು ಅವನು ಉಪಾಸನ ಮಾಡುವ ದೇವತೆಗಳೂ ಉಣ್ಣುತ್ತಾರೆ' ಎನ್ನುವ ಶ್ರುತಿಯು ಸತ್ಯವಾಗಿದೆ. ಲೋಕ ಸಮ್ಮತವಾಗಿದೆ ಎಂದು ನನಗೆ ಅನಿಸುತ್ತದೆ.

ಹಿಪ್ಪೆ ಪಿಂಡವು ದಶರಥನಿಗೆ ಯೋಗ್ಯವಲ್ಲದಿದ್ದರೂ, ಈ ಶ್ರುತಿಯು ಹೇಳು-ವಂತೆ, ರಾಮನಿಗೆ ಈಗ ಉಣ್ಣಲು ಯೋಗ್ಯವಾಗಿರುವ ಈ ಪಿಂಡವನ್ನು ದಶರಥನು ಕೂಡ ನಿರಾಕರಿಸುವುದಿಲ್ಲ. ಅದು ಸ್ವರ್ಗದಲ್ಲಿರುವ ಅವನಿಗೆ ಯೋಗ್ಯ ಆಹಾರವಾದ ಅಮೃತದ ರೂಪದಿಂದಲೇ ಅವನಿಗೆ ಲಭಿಸುತ್ತದೆ. ರಾಮನಿಗೆ ಈ ಪರಿಸ್ಥಿತಿ ಬಂದುದು ಮಾತ್ರ ಶೋಚನೀಯ.

ಏವಮಾರ್ತಾಂ ಸಪತ್ನ್ಯಸ್ತಾ ಜಗ್ಮುರಾಶ್ವಾಸ್ಯ ತಾಂ ತದಾ ।
ದದೃಶುಶ್ಚಾಶ್ರಮೇ ರಾಮಂ ಸ್ವರ್ಗಚ್ಯುತಮಿವಾಮರಮ್ ॥೧೬॥

ಹೀಗೆ ದುಃಖಾರ್ತಳಾಗಿ ನುಡಿಯುತ್ತಿದ್ದ ಕೌಸಲ್ಯೆಯನ್ನು ರಾಜಪತ್ನಿಯರು ಸಂತೈಸುತ್ತ ಮುಂದೆ ನಡೆದರು. ಆಶ್ರಮದಲ್ಲಿ ಅವರಿಗೆ ರಾಮನು ಸ್ವರ್ಗದಿಂದ ಚ್ಯುತನಾದ ದೇವಪುರುಷನಂತೆ ಕಂಡುಬಂದನು.

ಸರ್ವಭೋಗೈಃ ಪರಿತ್ಯಕ್ತಂ ರಾಮಂ ಸಂಪ್ರೇಕ್ಷ್ಯ ಮಾತರಃ ।
ಆರ್ತಾ ಮುಮುಚುರಶ್ರೂಣಿ ಸಸ್ವರಂ ಶೋಕಕರ್ಶಿತಾಃ ॥೧೭॥

ಎಲ್ಲ ರಾಜಭೋಗಗಳಿಂದ ರಹಿತನಾದ ರಾಮನನ್ನು ಕಂಡು ಮಾತೆಯರು ಶೋಕದಿಂದ ಸೊರಗಿ ಪೀಡಿತರಾಗಿ ದೊಡ್ಡ ಧ್ವನಿಯಿಂದ ಅತ್ತು ಕಣ್ಣೀರುಗರೆದರು.

ತಾಸಾಂ ರಾಮಃ ಸಮುತ್ಥಾಯ ಜಗ್ರಾಹ ಚರಣಾನ್ ಶುಭಾನ್ ।
ಮಾತೄಣಾಂ ಮನುಜವ್ಯಾಘ್ರಃ ಸರ್ವಾಸಾಂ ಸತ್ಯಸಂಗರಃ ॥೧೮॥

ಪುರುಷೋತ್ತಮನಾದ ಸತ್ಯಪ್ರತಿಜ್ಞನಾದ ರಾಮನು ಎದ್ದು ಆ ಮಾತೆಯರ ಶುಭಕರವಾದ ಚರಣಗಳನ್ನು ಹಿಡಿದುಕೊಂಡನು.

ತಾಃ ಪಾಣಿಭಿಃ ಸುಖಸ್ಪರ್ಶೈರ್ಮೃದ್ವಂಗುಲಿತಲೈಃ ಶುಭೈಃ ।
ಪ್ರಮಮಾರ್ಜೂ ರಜಃ ಪೃಷ್ಠಾದ್ರಾಮಸ್ಯಾಯತಲೋಚನಾಃ ॥೧೯॥

ಉದ್ದಕಣ್ಣಿನವರಾದ ಆ ಮಾತೆಯರು ಸ್ಪರ್ಶದಿಂದ ಸುಖಕರವಾದ ಶುಭಕರವಾದ ಕೋಮಲವಾದ ಬೆರಳುಗಳಿಂದ ರಾಮನ ಬೆನ್ನು ಸವರಿ ದೂಳನ್ನು ಒರೆಸಿದರು.

ಸೌಮಿತ್ರಿರಪಿ ತಾಃ ಸರ್ವಾ ಮಾತ್ಫ್ಃ ಸಂಪ್ರೇಕ್ಷ್ಯ ದುಃಖಿತಃ ।
ಅಭ್ಯವಾದಯತಾಸಕ್ತಂ ಶನೈ ರಾಮಾದನಂತರಮ್ ॥೨೦॥

ಲಕ್ಷ್ಮಣನೂ ಕೂಡ ದುಃಖದಿಂದ ಆ ಎಲ್ಲ ಮಾತೆಯರನ್ನು ನೋಡಿ ರಾಮನ ಅನಂತರ ಅವರಿಗೆ ಭಕ್ತಿಯಿಂದ ನಿಧಾನವಾಗಿ ಪಾದವಂದನೆ ಮಾಡಿದನು.

ಯಥಾ ರಾಮೇ ತಥಾ ತಸ್ಮಿನ್ ಸರ್ವಾ ವವೃತಿರೇ ಸ್ತ್ರಿಯಃ ।
ವೃತ್ತಿಂ ದಶರಥಾಜ್ಜಾತೇ ಲಕ್ಷ್ಮಣೇ ಶುಭಲಕ್ಷಣೇ ॥೨೧॥

ದಶರಥನಿಂದ ಜನಿಸಿದ ಶುಭ ಲಕ್ಷಣಉಳ್ಳ ಲಕ್ಷ್ಮಣನಲ್ಲಿ ಎಲ್ಲ ಮಾತೆಯರೂ ರಾಮನಲ್ಲಿ ಹೇಗೋ ಹಾಗೇ ವಾತ್ಸಲ್ಯದಿಂದ ವರ್ತಿಸಿದರು.

ಸೀತಾಪಿ ಚರಣಾಂಸ್ತಾಸಾಮುಪಸಂಗೃಹ್ಯ ದುಃಖಿತಾ ।
ಶ್ವಶ್ರೂಣಾಮಶ್ರುಪೂರ್ಣಾಕ್ಷೀ ಸಾ ಬಭೂವಾಗ್ರತಃ ಸ್ಥಿತಾ ॥೨೨॥

ಸೀತೆಯೂ ದುಃಖಿಸುತ್ತ ಆ ಅತ್ತೆಯರ ಕಾಲುಗಳನ್ನು ಮುಟ್ಟಿ ಕಣ್ಣುಗಳಲ್ಲಿ ನೀರು ತುಂಬಿಕೊಂಡು ಅವರ ಎದುರಿನಲ್ಲಿ ನಿಂತಳು.

ತಾಂ ಪರಿಷ್ವಜ್ಯ ದುಃಖಾರ್ತಾ ಮಾತಾ ದುಹಿತರಂ ಯಥಾ ।
ವನವಾಸಕೃಶಾಂ ದೀನಾಂ ಕೌಸಲ್ಯಾ ವಾಕ್ಯಮಬ್ರವೀತ್ ॥೨೩॥

ವನವಾಸದಿಂದ ಸೊರಗಿ ದುಃಖಿಸುತ್ತಿದ್ದ ಸೀತೆಯನ್ನು ಕೌಸಲ್ಯೆಯು ತಾಯಿ ಮಗಳನ್ನು ಹೇಗೋ ಹಾಗೆ ಆಲಿಂಗಿಸಿ ನುಡಿದಳು.

ವಿದೇಹರಾಜಸ್ಯ ಸುತಾ ಸ್ನುಷಾ ದಶರಥಸ್ಯ ಚ ।
ರಾಮಪತ್ನೀ ಕಥಂ ದುಃಖಂ ಸಂಪ್ರಾಪ್ತಾ ನಿರ್ಜನೇ ವನೇ ॥೨೪॥

ವಿದೇಹರಾಜನ ಕುಮಾರಿ, ದಶರಥನ ಸೊಸೆ, ರಾಮನ ಪತ್ನಿ ನೀನು ನಿರ್ಜನ-ವಾದ ಅರಣ್ಯದಲ್ಲಿ ವಾಸಮಾಡುವ ದುಃಖವನ್ನು ಹೇಗೆ ಪಡೆದುಕೊಂಡೆ?

ಪದ್ಮಮಾತಪಸಂತಪ್ತಂ ಪರಿಕ್ಲಿಷ್ಟಮಿವೋತ್ಪಲಮ್ ।
ಕಾಂಚನಂ ರಜಸಾ ಧ್ವಸ್ತಂ ಕ್ಲಿಷ್ಟಂ ಚಂದ್ರಮಿವಾಂಬುದೈಃ ॥೨೫॥

ಮುಖಂ ತೇ ಪ್ರೇಕ್ಷ್ಯ ಮಾಂ ಶೋಕೋ ದಹತ್ಯಗ್ನಿರಿವಾಶ್ರಯಮ್ ।
ಭೃಶಂ ಮನಸಿ ವೈದೇಹಿ ವ್ಯಸನಾರಣಿಸಂಭವಃ ॥೨೬॥

ಬಿಸಿಲಿಗೆ ಬಾಡಿದ ತಾವರೆಯಂತೆ ಹೊಸಕಿ ಹಾಕಿದ ನೈದಿಲೆಯಂತೆ ಕೆಸರಲ್ಲಿ ಬಿದ್ದ ಬಂಗಾರದಂತೆ ಮೋಡ ಮುಸುಕಿದ ಚಂದ್ರನಂತೆ ನಿನ್ನ ಮುಖವನ್ನು ಕಂಡು ಸೀತೆ, ವ್ಯಸನವೆಂಬ ಅರಣಿಯಲ್ಲಿ ಹುಟ್ಟಿ ಅಗ್ನಿಯು ಆ ಅರಣಿಯನ್ನೇ ಸುಡುವಂತೆ, ನನ್ನ ಮನಸಿನಲ್ಲಿ ಉದ್ಭವಿಸಿದ ಶೋಕಾಗ್ನಿಯು ನನ್ನ ಮನಸ್ಸನ್ನೇ ಬಹಳ ಸುಡುತ್ತಿದೆ.

ಬ್ರುವಂತ್ಯಾಮೇವಮಾರ್ತಾಯಾಂ ಜನನ್ಯಾಂ ಭರತಾಗ್ರಜಃ ।
ಪಾದಾವಾಸಾದ್ಯ ಜಗ್ರಾಹ ವಸಿಷ್ಠಸ್ಯ ಚ ರಾಘವಃ ॥೨೭॥

ಕೌಸಲ್ಯೆ ದುಃಖಾರ್ತಳಾಗಿ ಹೀಗೆ ಹೇಳುತ್ತಿದ್ದಾಗ ಶ್ರೀರಾಮನು ವಸಿಷ್ಠರ ಬಳಿಗೆ ಹೋಗಿ ಪಾದಾಭಿವಾದನ ಮಾಡಿದನು.

ಪುರೋಹಿತಸ್ಯಾಗ್ನಿಸಮಸ್ಯ ವೈ ತದಾ
ಬೃಹಸ್ಪತೇರಿಂದ್ರ ಇವಾಮರಾಧಿಪಃ ।
ಪ್ರಗೃಹ್ಯ ಪಾದೌ ಸುಸಮೃದ್ಧತೇಜಸಃ
ಸಹೈವ ತೇನೋಪವಿವೇಶ ರಾಘವಃ ॥೨೮॥

ಬಹಳ ಸಮೃದ್ಧವಾದ ತೇಜಉಳ್ಳ ಅಗ್ನಿಸಮರಾದ ಪುರೋಹಿತರಾದ ವಸಿಷ್ಠರಿಗೆ ಶ್ರೀರಾಮನು ಬೃಹಸ್ಪತಿಗೆ ದೇವೇಂದ್ರನಂತೆ ಕಾಲು ಮುಟ್ಟಿ ನಮಸ್ಕರಿಸಿ ಅವರೊಂದಿಗೇ ಕುಳಿತುಕೊಂಡನು.

ತತೋ ಜಘನ್ಯಂ ಸಹಿತೈಃ ಸ್ವಮಂತ್ರಿಭಿಃ
ಪುರಪ್ರಧಾನೈಶ್ಚ ಸಹೈವ ಸೈನಿಕೈಃ ।
ಜನೇನ ಧರ್ಮಜ್ಞತಮೇನ ಧರ್ಮವಾನ್
ಉಪೋಪವಿಷ್ಟೋ ಭರತಸ್ತದಾಗ್ರಜಮ್ ॥೨೯॥

ಶ್ರೀರಾಮನೂ ವಸಿಷ್ಠರೂ ಕುಳಿತುಕೊಂಡ ಬಳಿಕ ಮಂತ್ರಿಗಳು ಪುರ ಪ್ರಮುಖರು ಸೈನಿಕರು ಧರ್ಮಜ್ಞರಾದ ಪ್ರಜೆಗಳು ಇವರೊಂದಿಗೆ ರಾಮನ ಬಳಿಯಲ್ಲಿ ಧಾರ್ಮಿಕನಾದ ಭರತನು ಕುಳಿತನು.

ಉಪೋಪವಿಷ್ಟಸ್ತು ಸದಾ ಸ ವೀರ್ಯವಾನ್
ತಪಸ್ವಿವೇಷೇಣ ಸಮೀಕ್ಷ್ಯ ರಾಘವಮ್ ।
ಶ್ರಿಯಾ ಜ್ವಲಂತಂ ಭರತಃ ಕೃತಾಂಜಲಿ
ರ್ಯಥಾ ಮಹೇಂದ್ರಃ ಪ್ರಯತಃ ಪ್ರಜಾಪತಿಮ್ ॥೩೦॥

ಆಗ ಬಳಿಯಲ್ಲಿ ಕುಳಿತ ವೀರ್ಯಶಾಲಿಯಾದ ಭರತನು ತಪಸ್ವಿವೇಷದಲ್ಲಿ ಕಾಂತಿಯಿಂದ ಬೆಳಗುತ್ತಿದ್ದ ರಾಮನನ್ನು ಕಂಡು, ಬ್ರಹ್ಮನ ಬಳಿಯಲ್ಲಿ ವಿನೀತನಾಗಿ ಮಹೇಂದ್ರನಂತೆ, ಕೈಮುಗಿದನು.

ಕಿಮೇಷ ವಾಕ್ಯಂ ಭರತೋಽದ್ಯ ರಾಘವಂ
ಪ್ರಣಮ್ಯ ಸತ್ಕೃತ್ಯ ಚ ಸಾಧು ವಕ್ಷ್ಯತಿ ।
ಇತೀವ ತಸ್ಯಾರ್ಯಜನಸ್ಯ ತತ್ತ್ವತೋ
ಬಭೂವ ಕೌತೂಹಲಮುತ್ತಮಂ ತದಾ ॥೩೧॥

ಆಗ ಭರತನು ರಾಮನನ್ನು ನಮಸ್ಕರಿಸಿ ಸತ್ಕರಿಸಿ ಏನು ಹೇಳುವನೆಂದು ಯಥಾರ್ಥವಾಗಿ ಚೆನ್ನಾಗಿ ತಿಳಿಯುವ ಉತ್ತಮವಾದ ಕುತೂಹಲವು ನೆರೆದ ಸಜ್ಜನ ಸಮುದಾಯಕ್ಕೆ ಉಂಟಾಯಿತು.

ಸ ರಾಘವಃ ಸತ್ಯಧೃತಿಶ್ಚ ಲಕ್ಷ್ಮಣೋ
ಮಹಾನುಭಾವೋ ಭರತಶ್ಚ ಧಾರ್ಮಿಕಃ ।
ವೃತಾಃ ಸುಹೃದ್ಭಿಶ್ಚ ವಿರೇಜುರಧ್ವರೇ ಯಥಾ
ಸದಸ್ಯೈಃ ಸಹಿತಾಸ್ತ್ರಯೋಽಗ್ನಯಃ ॥೩೨॥

ಸತ್ಯನಿಷ್ಠನಾದ ಶ್ರೀರಾಮ ಮಹಾನುಭಾವನಾದ ಲಕ್ಷ್ಮಣ ಮತ್ತು ಧಾರ್ಮಿಕನಾದ ಭರತ ಈ ಮೂವರೂ ಬಂಧುಗಳೊಡನೆ ಸೇರಿ, ಯಜ್ಞದಲ್ಲಿ ಸದಸ್ಯರಿಂದೊಡಗೂಡಿ ಗಾರ್ಹಪತ್ಯ ಆಹವನೀಯ ದಕ್ಷಿಣಾಗ್ನಿಗಳೆಂಬ ಮೂವರು ಅಗ್ನಿಗಳಂತೆ ಬೆಳಗಿದರು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ನೂರಮೂರನೇ ಸರ್ಗ ಮುಗಿಯಿತು.

❖

ಚತುರಧಿಕ ಶತತಮಃ ಸರ್ಗಃ

ಸರ್ಗ – 104

ರಾಜ್ಯವನ್ನು ಸ್ವೀಕರಿಸೆಂದು ಭರತನ ಪ್ರಾರ್ಥನೆ, ಶ್ರೀರಾಮನ ಸಮಾಧಾನ.

ತಂ ತು ರಾಮಃ ಸಮಾಜ್ಞಾಯ ಭ್ರಾತರಂ ಗುರುವತ್ಸಲಮ್ ।
ಲಕ್ಷ್ಮಣೇನ ಸಹ ಭ್ರಾತ್ರಾ ಪ್ರಷ್ಟುಂ ಸಮುಪಚಕ್ರಮೇ ॥೧॥

ಸೋದರ ಲಕ್ಷ್ಮಣನೊಡನೆ ಕುಳಿತ ಶ್ರೀರಾಮನು, 'ಅಣ್ಣನೆಂದು ತನ್ನಲ್ಲಿ ಭಕ್ತಿ ಉಳ್ಳವನು ಭರತನೆಂ'ದು ತಿಳಿದು ಪ್ರಶ್ನಿಸಲು ತೊಡಗಿದನು.

ಕಿಮೇತದಿಚ್ಛೇಯಮಹಂ ಶ್ರೋತುಂ ಪ್ರವ್ಯಾಹೃತಂ ತ್ವಯಾ ।
ಯಸ್ಮಾತ್ತ್ವಮಾಗತೋ ದೇಶಮಿಮಂ ಚೀರಜಟಾಜಿನೀ ॥೨॥

'ಇದೇನು? ಏಕೆ ನೀನು ನಾರುಮಡಿ ಜಟೆ ಕೃಷ್ಣಾಜಿನಗಳನ್ನು ಧರಿಸಿಕೊಂಡು ಇಲ್ಲಿಗೆ ಬಂದಿರುವೆ? ಹೇಳು, ನಾನು ಕೇಳಲು ಬಯಸುತ್ತೇನೆ'.

ಯನ್ನಿಮಿತ್ತಮಿಮಂ ದೇಶಂ ಕೃಷ್ಣಾಜಿನಜಟಾಧರಃ ।
ಹಿತ್ವಾ ರಾಜ್ಯಂ ಪ್ರವಿಷ್ಟಸ್ತ್ವಂ ತತ್ಸರ್ವಂ ವಕ್ತುಮರ್ಹಸಿ ॥೩॥

ರಾಜ್ಯವನ್ನು ತೊರೆದು ಕೃಷ್ಣಾಜಿನ ಜಟೆಗಳನ್ನು ಧರಿಸಿ ಇಲ್ಲಿಗೆ ಏಕೆ ಬಂದೆ? ಎಲ್ಲವನ್ನೂ ಹೇಳು.

ಇತ್ಯುಕ್ತಃ ಕೈಕಯೀಪುತ್ರಃ ಕಾಕುತ್ಸ್ಥೇನ ಮಹಾತ್ಮನಾ ।
ಪ್ರಗೃಹ್ಯ ಬಲವದ್ಭೂಯಃ ಪ್ರಾಂಜಲಿರ್ವಾಕ್ಯಮಬ್ರವೀತ್ ॥೪॥

ಹೀಗೆ ಭರತನನ್ನು ಬಲವಾಗಿ ಆಲಿಂಗಿಸಿ ಪುನಃಪುನಃ ಮಹಾತ್ಮ ರಾಮ ಹೇಳಿದಾಗ ಭರತನು ಕೈಮುಗಿದು ನುಡಿದನು.

ಆರ್ಯಂ ತಾತಃ ಪರಿತ್ಯಜ್ಯ ಕೃತ್ವಾ ಕರ್ಮ ಸುದುಷ್ಕರಮ್ ।
ಗತಃ ಸ್ವರ್ಗಂ ಮಹಾಬಾಹೋ ಪುತ್ರಶೋಕಾಭಿಪೀಡಿತಃ ॥೫॥

ಮಹಾಬಾಹುವೆ! ತಂದೆಯು ಆರ್ಯನಾದ ನಿನ್ನನ್ನು ಕಾಡಿಗೆ ಕಳಿಸುವ ಮೂಲಕ ಬಹಳ ದುಷ್ಕರಕರ್ಮವನ್ನು ಮಾಡಿ ಪುತ್ರಶೋಕದಿಂದ ಪೀಡಿತನಾಗಿ ಸ್ವರ್ಗಕ್ಕೆ ಹೋಗಿದ್ದಾನೆ.

ಸ್ತ್ರಿಯಾ ನಿಯುಕ್ತಃ ಕೈಕೇಯ್ಯಾ ಮಮ ಮಾತ್ರಾ ಪರಂತಪ ।
ಚಕಾರ ಸುಮಹತ್ ಪಾಪಮಿದಮಾತ್ಮಯಶೋಹರಮ್ ॥೬॥

ಶತ್ರುತಾಪಕನೆ! ಹೆಂಗಸಾದ ನನ್ನ ತಾಯಿಯಾದ ಕೈಕೇಯಿ ಹೇಳಿದಂತೆಯೇ ತನ್ನ ಕೀರ್ತಿಗೆ ನಾಶಕವಾದ ಈ ಮಹತ್ತಾದ ಪಾಪವನ್ನು ತಂದೆ ಮಾಡಿದ್ದಾನೆ.

ಸಾ ರಾಜ್ಯಫಲಮಪ್ರಾಪ್ಯ ವಿಧವಾ ಶೋಕಕರ್ಶಿತಾ ।
ಪತಿಷ್ಯತಿ ಮಹಾಘೋರೇ ನಿರಯೇ ಜನನಿ ಮಮ ॥೭॥

ನನ್ನ ತಾಯಿ ಕೈಕೇಯಿ ರಾಜ್ಯಫಲವನ್ನೂ ಪಡೆಯದೆ, ವಿಧವೆಯೂ ಆಗಿ, ಶೋಕದಿಂದ ಸೊರಗಿ ಮುಂದೆ ಮಹಾಭಯಂಕರವಾದ ನರಕದಲ್ಲಿ ಬೀಳಲಿದ್ದಾಳೆ.

ತಸ್ಯ ಮೇ ದಾಸಭೂತಸ್ಯ ಪ್ರಸಾದಂ ಕರ್ತುಮರ್ಹಸಿ ।
ಅಭಿಷಿಂಚಸ್ವ ಚಾದ್ಯೈವ ರಾಜ್ಯೇನ ಮಘವಾನಿವ ॥೮॥

ಅವಳ ಮಗನಾದ ನಾನು ನಿನಗೆ ದಾಸನಾಗಿದ್ದೇನೆ. ನನ್ನಲ್ಲಿ ಅನುಗ್ರಹ ಮಾಡು. ಇಂದೇ ಇಂದ್ರನಂತೆ ರಾಜ್ಯದಲ್ಲಿ ಅಭಿಷಿಕ್ತನಾಗು.

ಇಮಾಃ ಪ್ರಕೃತಯಃ ಸರ್ವಾ ವಿಧವಾ ಮಾತರಶ್ಚ ಯಾಃ ।
ತ್ವತ್ಸಕಾಶಮನುಪ್ರಾಪ್ತಾಃ ಪ್ರಸಾದಂ ಕರ್ತುಮರ್ಹಸಿ ॥೯॥

ಈ ಎಲ್ಲ ಪ್ರಜೆಗಳೂ ವಿಧವೆಯರಾದ ಈ ಮಾತೆಯರೂ ನಿನ್ನ ಬಳಿಗೆ ಬಂದಿದ್ದಾರೆ. ಎಲ್ಲರಿಗೂ ನೀನು ಅನುಗ್ರಹ ಮಾಡಬೇಕು.

ತದಾನುಪೂರ್ವ್ಯಾಯುಕ್ತಂ ಚ ಯುಕ್ತಂ ಚಾತ್ಮನಿ ಮಾನದ ।
ರಾಜ್ಯಂ ಪ್ರಾಪ್ನುಹಿ ಧರ್ಮೇಣ ಸಕಾಮಾನ್ ಸುಹೃದಃ ಕುರು ॥೧೦॥

ಪುರುಷೋತ್ತಮನೆ, ಈ ಎಲ್ಲ ಮಂತ್ರಿ ದುರ್ಗಕೋಶ ಮುಂತಾದ ಸಪ್ತಪ್ರಕೃತಿ ಮಂಡಲವು ನಮಗೆ ಪರಂಪರೆಯಿಂದ ಬಂದುದು, ತಂದೆ ಆಳಿದುದು. ಗೌರವಿಸಿ-ದುದು. ಅವರ ಅಭಿಪ್ರಾಯವನ್ನು ಅತಿಕ್ರಮಿಸಬೇಡ.

ಭವತ್ವವಿಧವಾ ಭೂಮಿಃ ಸಮಗ್ರಾ ಪತಿನಾ ತ್ವಯಾ ।
ಶಶಿನಾ ವಿಮಲೇನೇವ ಶಾರದೀ ರಜನೀ ಯಥಾ ॥೧೧॥

ಶರತ್ಕಾಲದ ರಾತ್ರಿಯು ನಿರ್ಮಲನಾದ ಚಂದ್ರನಿಂದ ಬೆಳಗುವಂತೆ ಈ ಸಮಗ್ರವಾದ ಭೂಮಿ ಪತಿಯಾದ ನಿನ್ನಿಂದ ಸುಮಂಗಲಿಯಾಗಿ ಬೆಳಗಲಿ.

ಏಭಿಶ್ಚ ಸಚಿವೈಃ ಸಾರ್ಧಂ ಶಿರಸಾ ಯಾಚಿತೋ ಮಯಾ ।
ಭ್ರಾತುಃ ಶಿಷ್ಯಸ್ಯ ದಾಸಸ್ಯ ಪ್ರಸಾದಂ ಕರ್ತುಮರ್ಹಸಿ ॥೧೨॥

ಈ ಸಚಿವರೊಂದಿಗೆ ನಾನು ನಿನಗೆ ತಲೆಬಾಗಿ ಬೇಡಿಕೊಳ್ಳುತ್ತೇನೆ, ನಾನು ನಿನಗೆ ಸೋದರನೂ ಶಿಷ್ಯನೂ ಮತ್ತು ದಾಸನೂ ಆಗಿದ್ದೇನೆ. ಅನುಗ್ರಹ ಮಾಡು.

ತದಿದಂ ಶಾಶ್ವತಂ ಪಿತ್ರ್ಯಂ ಸರ್ವಂ ಪ್ರಕೃತಿಮಂಡಲಮ್ ।
ಪೂಜಿತಂ ಪುರುಷವ್ಯಾಘ್ರ ನಾತಿಕ್ರಮಿತುಮರ್ಹಸಿ ॥೧೩॥

ಪರಂಪರೆಗನುಗುಣವಾಗಿ ಜ್ಯೇಷ್ಠನಾದ್ದರಿಂದ ರಾಜ್ಯ ನಿನಗೆ ಸೇರಬೇಕಾದುದು. ಪ್ರಜಾರಂಜನ ಸಾಮರ್ಥ್ಯದ ದೃಷ್ಟಿಯಿಂದಲೂ ರಾಜ್ಯವು ನಿನಗೇ ಸೇರ ಬೇಕಾದುದು. ಧರ್ಮದಿಂದ ರಾಜ್ಯವನ್ನು ನಿನ್ನದಾಗಿಸಿಕೊಳ್ಳು. ಬಂಧುಮಿತ್ರರ ಆಸೆಯನ್ನು ಈಡೇರಿಸು.

ಏವಮುಕ್ತ್ವಾ ಮಹಾಬಾಹುಃ ಸಬಾಷ್ಪಃ ಕೈಕಯೀಸುತಃ ।
ರಾಮಸ್ಯ ಶಿರಸಾ ಪಾದೌ ಜಗ್ರಾಹ ಭರತಃ ಪುನಃ ॥೧೪॥

ಹೀಗೆ ಹೇಳಿ ಮಹಾಬಾಹು ಕೈಕೇಯಿಸುತ ಭರತನು ಕಣ್ಣೀರು ಸುರಿಸುತ್ತ ಪುನಃ ರಾಮನ ಪಾದಗಳಿಗೆ ಮಣಿದನು.

ತಂ ಮತ್ತಮಿವ ಮಾತಂಗಂ ನಿಃಶ್ವಸಂತಂ ಪುನಃಪುನಃ ।
ಭ್ರಾತರಂ ಭರತಂ ರಾಮಃ ಪರಿಷ್ವಜ್ಯೇದಮಬ್ರವೀತ್ ॥೧೫॥

ಮದಭರಿತವಾದ ಆನೆಯಂತೆ ನಿಟ್ಟುಸಿರುಬಿಡುತ್ತಿದ್ದ ಸೋದರ ಭರತನನ್ನು ರಾಮನು ಪುನಃಪುನಃ ಆಲಿಂಗಿಸಿ ನುಡಿದನು.

ಕುಲೀನಃ ಸತ್ತ್ವಸಂಪನ್ನಸ್ತೇಜಸ್ವೀ ಚರಿತವ್ರತಃ ।
ರಾಜ್ಯಹೇತೋಃ ಕಥಂ ಪಾಪಮಾಚರೇತ್ತ್ವದ್ವಿಧೋ ಜನಃ ॥೧೬॥

ಒಳ್ಳೆಯ ಕುಲದಲ್ಲಿ ಬಂದವನು ಸತ್ವಗುಣಸಂಪನ್ನನು ತೇಜಸ್ವಿ ವ್ರತಾಚರಣ ಮಾಡುವವನು ನಿನ್ನಂಥ ಸಜ್ಜನನು ರಾಜ್ಯವಿಷಯದಲ್ಲಿ ಹಿರಿಯರಿಗೆ ಅವಿಧೇಯ

ತನವನ್ನು ತೋರುವ ಪಾಪವನ್ನು ಹೇಗೆ ಮಾಡಿಯಾನು? ನಿನ್ನಂಥವನು ಮಾಡಲಾರ ಎಂದಮೇಲೆ ನೀನೂ ಮಾಡುವುದು ಯುಕ್ತವಲ್ಲ.

ನ ದೋಷಂ ತ್ವಯಿ ಪಶ್ಯಾಮಿ ಸೂಕ್ಷ್ಮಮಪ್ಯರಿಸೂದನ ।
ನ ಚಾಪಿ ಜನನೀಂ ಬಾಲ್ಯಾತ್ತ್ವಂ ವಿಗರ್ಹಿತುಮರ್ಹಸಿ ॥೧೭॥

ಗುರುಹಿರಿಯರಲ್ಲಿ ಅವಿಧೇಯತನ ತೋರುವ ದೋಷವು ನಿನ್ನಲ್ಲಿ ಸ್ವಲ್ಪವೂ ನನಗೆ ಕಾಣುವುದಿಲ್ಲ. ಶತ್ರುನಾಶಕನೆ, ಈ ಸತ್ಯವನ್ನರಿಯದೆ ಅಜ್ಞಾನದಿಂದ ಹೆತ್ತತಾಯಿಯನ್ನು ನೀನು ನಿಂದಿಸಬಾರದು.

ಕಾಮಕಾರೋ ಮಹಾಪ್ರಾಜ್ಞ ಗುರೂಣಾಂ ಸರ್ವದಾನಘ ।
ಉಪಪನ್ನೇಷು ದಾರೇಷು ಪುತ್ರೇಷು ಚ ವಿಧೀಯತೇ ॥೧೮॥

ಒಳ್ಳೆಯ ಜ್ಞಾನಿಯಾದ ನಿಷ್ಪಾಪನಾದ ಭರತನೆ, ಗುರುಹಿರಿಯರಿಗೆ ತಮಗೆ ಪ್ರಿಯರಾದ ಸತಿಸುತರು ಶಿಷ್ಯರು ಸೇವಕರ ವಿಷಯದಲ್ಲಿ ಅವರಿಗೆ ಇಷ್ಟಬಂದಂತೆ ವರ್ತಿಸಲು ಸದಾ ಶಾಸ್ತ್ರಸಮ್ಮತಿ ಇದೆ.

ವಯಮಸ್ಯ ಯಥಾಲೋಕೇ ಸಂಖ್ಯಾತಾಃ ಸೌಮ್ಯ ಸಾಧುಭಿಃ ।
ಭಾರ್ಯಾಃ ಪುತ್ರಾಶ್ಚ ಶಿಷ್ಯಾಶ್ಚ ತ್ವಮಪಿ ಜ್ಞಾತುಮರ್ಹಸಿ ॥೧೯॥

ಭರತ! ಸತಿ–ಸುತ–ಶಿಷ್ಯ–ದಾಸರು ಅವರ ಪತಿ–ಪಿತ–ಗುರು–ಪ್ರಭುಗಳಿಗೆ ಸರ್ವಥಾ ವಿಧೇಯರಾಗಿರಬೇಕಾದವರೆಂದು ಲೋಕದಲ್ಲಿ ಸಜ್ಜನರಿಂದ ಹೇಗೆ ಪರಿಗಣಿತರಾಗಿರುವರೋ ಹಾಗೇ ನಾವೂ ಕೂಡ ರಾಜಾ ದಶರಥನಿಗೆ ವಿಧೇಯ–ರಾಗಿರಬೇಕಾದವರೆಂದು ಪರಿಗಣಿತರಾಗಿದ್ದೇವೆ.

ವನೇ ವಾ ಚೀರವಸನಂ ಸೌಮ್ಯ ಕೃಷ್ಣಾಜಿನಾಂಬರಮ್ ।
ರಾಜ್ಯೇ ವಾಪಿ ಮಹಾರಾಜೋ ಮಾಂ ವಾಸಯಿತುಮೀಶ್ವರಃ ॥೨೦॥

ಭರತ, ನಾರುಮಡಿ ಕೃಷ್ಣಾಜಿನದುಡೆಗೆ ಉಡಿಸಿ ನನ್ನಿಂದ ವನವಾಸ ಮಾಡಿಸು–ವುದಕ್ಕಾಗಲಿ, ರಾಜ್ಯಾಭಿಷೇಕಮಾಡಿ ಅರಮನೆ ವಾಸಮಾಡಿಸುವುದಕ್ಕಾಗಲಿ ಮಹಾ ರಾಜನಿಗೆ ಸ್ವಾತಂತ್ರ್ಯವಿದೆ.

ಯಾವತ್ ಪಿತರಿ ಧರ್ಮಜ್ಞೇ ಗೌರವಂ ಲೋಕಸತ್ಕೃತೇ ।
ತಾವದ್ಧರ್ಮಭೃತಾಂ ಶ್ರೇಷ್ಠ ಜನನ್ಯಾಮಪಿ ಗೌರವಮ್ ॥೨೧॥

ಧರ್ಮಜ್ಞನಾದ ಲೋಕಪೂಜ್ಯನಾದ ತಂದೆಯಲ್ಲಿ ಎಷ್ಟು ಗೌರವವಿರಬೇಕೋ ಅಷ್ಟು ಗೌರವವು ನಮಗೆ ಜನನಿಯಲ್ಲಿಯೂ ಇರಬೇಕು.

ಏತಾಭ್ಯಾಂ ಧರ್ಮಶೀಲಾಭ್ಯಾಂ ವನಂ ಗಚ್ಛೇತಿ ರಾಘವ ।
ಮಾತಾಪಿತೃಭ್ಯಾಮುಕ್ತೋಽಹಂ ಕಥಮನ್ಯತ್ ಸಮಾಚರೇ ॥೨೨॥

ಧರ್ಮಶೀಲರಾದ ತಾಯಿತಂದೆಗಳು ರಾಮ, ನೀನು ಕಾಡಿಗೆ ಹೋಗೆಂದರೆ ನಾನು ಹೇಗೆ ಹೋಗದಿರಲಿ?

ತ್ವಯಾ ರಾಜ್ಯಮಯೋಧ್ಯಾಯಾಂ ಪ್ರಾಪ್ತವ್ಯಂ ಲೋಕಸತ್ಕೃತಮ್ ।
ವಸ್ತವ್ಯಂ ದಂಡಕಾರಣ್ಯೇ ಮಯಾ ವಲ್ಕಲವಾಸಸಾ ॥೨೩॥

ನೀನು ಅಯೋಧ್ಯೆಯಲ್ಲಿ ಲೋಕ ಸಮ್ಮತವಾದ ರಾಜ್ಯಭಾರವನ್ನು ಮಾಡಬೇಕು. ನಾನು ನಾರುಡೆ ಉಟ್ಟು ದಂಡಕಾರಣ್ಯದಲ್ಲಿ ವಾಸಮಾಡಬೇಕು.

ಏವಂ ಕೃತ್ವಾ ಮಹಾರಾಜೋ ವಿಭಾಗಂ ಲೋಕಸಂನಿಧೌ ।
ವ್ಯಾದಿಶ್ಯ ಚ ಮಹಾತೇಜಾ ದಿವಂ ದಶರಥೋ ಗತಃ ॥೨೪॥

ಹೀಗೆ ನಮ್ಮಿಬ್ಬರಿಗೆ ಪ್ರಜೆಗಳ ಸಮ್ಮುಖದಲ್ಲಿ ಕರ್ತವ್ಯಗಳನ್ನು ವಿಭಾಗ ಮಾಡಿಕೊಟ್ಟು ಮಹಾರಾಜ ದಶರಥನು ದಿವಂಗತನಾಗಿದ್ದಾನೆ.

ಸ ಚ ಪ್ರಮಾಣಂ ಧರ್ಮಾತ್ಮಾ ರಾಜಾ ಲೋಕಗುರುಸ್ತವ ।
ಪಿತ್ರಾ ದತ್ತಂ ಯಥಾಭಾಗಮುಪಭೋಕ್ತುಂ ತ್ವಮರ್ಹಸಿ ॥೨೫॥

ಧರ್ಮಾತ್ಮನಾದ ಲೋಕಗುರುವಾದ ತಂದೆಯಾದ ಆ ರಾಜನು ನಿನಗೆ ಪ್ರಮಾಣ. ಅದರಿಂದ ತಂದೆ ನಿನ್ನ ಪಾಲಿಗೆ ಕೊಟ್ಟಿದ್ದನ್ನು ನೀನು ಉಪಭೋಗಿಸಬೇಕು.

ಚತುರ್ದಶ ಸಮಾಃ ಸೌಮ್ಯ ದಂಡಕಾರಣ್ಯಮಾಶ್ರಿತಃ ।
ಉಪಭೋಕ್ಷ್ಯೇ ತ್ವಹಂ ದತ್ತಂ ಭಾಗಂ ಪಿತ್ರಾ ಮಹಾತ್ಮನಾ ॥೨೬॥

ಭರತ, ನಾನು ಹದಿನಾಲ್ಕು ವರ್ಷಕಾಲ ದಂಡಕಾರಣ್ಯದಲ್ಲಿ ವಾಸಮಾಡುತ್ತೇನೆ. ಮಹಾತ್ಮನಾದ ತಂದೆ ನನ್ನ ಪಾಲಿಗೆ ಕೊಟ್ಟಿದ್ದನ್ನು ನಾನು ಉಪಭೋಗಿಸುತ್ತೇನೆ.

ಯದಬ್ರವೀನ್ಮಾಂ ನರಲೋಕಸತ್ಕೃತಃ
ಪಿತಾ ಮಹಾತ್ಮಾ ವಿಬುಧಾಧಿಪೋಪಮಃ ।

ತದೇವ ಮನ್ಯೇ ಪರಮಾತ್ಮನೋ ಹಿತಂ
ನ ಸರ್ವಲೋಕೇಶ್ವರಭಾವಮಪ್ಯಹಮ್ ॥೨೭॥

ಪ್ರಜೆಗಳ ಆದರಕ್ಕೆ ಪಾತ್ರನಾದ ದೇವೇಂದ್ರ ಸಮಾನನಾದ ಮಹಾತ್ಮನಾದ ತಂದೆ ನನಗೆ ಏನು ಕರ್ತವ್ಯವನ್ನು ಆದೇಶಿಸಿರುವನೋ ಅದೇ ನನಗೆ ಪರಮ ಹಿತಕರವೆಂದು ನಾನು ಭಾವಿಸುತ್ತೇನೆ. ಅದನ್ನು ಬಿಟ್ಟು ಸರ್ವಲೋಕಾಧಿಪತ್ಯವನ್ನು ನಾನು ಬಯಸುವುದಿಲ್ಲ.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ನೂರನಾಲ್ಕನೇ ಸರ್ಗ ಮುಗಿಯಿತು.

❖

ಪಂಚಾಧಿಕ ಶತತಮಃ ಸರ್ಗಃ

ಸರ್ಗ – 105

ಭರತನಿಗೆ ಶ್ರೀರಾಮನ ಉತ್ತರ.

ತತಃ ಪುರುಷಸಿಂಹಾನಾಂ ವೃತಾನಾಂ ತೈಃ ಸುಹೃದ್ಗಣೈಃ ।
ಶೋಚತಾಮೇವ ರಜನೀ ದುಃಖೇನ ವ್ಯತ್ಯವರ್ತತ ॥೧॥

ಬಂಧುಮಿತ್ರರಿಂದೊಡಗೂಡಿದ ಆ ಪುರುಷೋತ್ತಮರು ಹೀಗೆ ಶೋಕಿಸು-ತ್ತಿದ್ದಂತೆಯೇ ರಾತ್ರಿಯು ದುಃಖದಿಂದ ಕಳೆಯಿತು.

ರಜನ್ಯಾಂ ಸುಪ್ರಭಾತಾಯಾಂ ಭ್ರಾತರಸ್ತೇ ಸುಹೃದ್ವೃತಾಃ ।
ಮಂದಾಕಿನ್ಯಾಂ ಹುತಂ ಜಪ್ಯಂ ಕೃತ್ವಾ ರಾಮಮುಪಾಗಮನ್ ॥೨॥

ರಾತ್ರಿ ಬೆಳಗಾದಾಗ ಸೋದರರು ಬಂಧುಗಳೊಂದಿಗೆ ಮಂದಾಕಿನೀ ನದಿಯ-ತೀರದಲ್ಲಿ ಗಾಯತ್ರೀಜಪ ಔಪಾಸನ ಹೋಮಗಳನ್ನು ಮಾಡಿ ಮುಗಿಸಿ ರಾಮನ ಬಳಿಗೆ ಬಂದರು.

ತೂಷ್ಣೀಂ ತೇ ಸಮುಪಾಸೀನಾ ನ ಕಶ್ಚಿತ್ ಕಿಂಚಿದಬ್ರವೀತ್ ।
ಭರತಸ್ತು ಸುಹೃನ್ಮಧ್ಯೇ ರಾಮಂ ವಚನಮಬ್ರವೀತ್ ॥೩॥

ಅವರು ಮೌನವಾಗಿ ಕುಳಿತರು, ಯಾರೂ ಏನೂ ಮಾತನಾಡಲಿಲ್ಲ. ಭರತನು ಮಾತ್ರ ಬಂಧುಗಳ ಮಧ್ಯದಲ್ಲಿ ರಾಮನಿಗೆ ನುಡಿದನು.

ಸಾಂತ್ವಿತಾ ಮಾಮಿಕಾ ಮಾತಾ ದತ್ತಂ ರಾಜ್ಯಮಿದಂ ಮಮ ।
ತದ್ದದಾಮಿ ತವೈವಾಹಂ ಭುಂಕ್ಷ್ವ ರಾಜ್ಯಮಕಂಟಕಮ್ ॥೪॥

ಕುಪಿತಳಾದ ತಾಯಿ ಕೈಕೇಯಿಯನ್ನು ಸಂತೈಸಿ ರಾಜನು ಕೊಟ್ಟ ಈ ರಾಜ್ಯ ನನ್ನದೆಂದು ನೀನು ಹೇಳುವುದಾದರೆ ಅದನ್ನು ನಾನು ನಿನಗೇ ಬಿಟ್ಟುಕೊಡುತ್ತೇನೆ. ನಾನು ನಿನ್ನ ದಾಸ. 'ತ್ರಯ ಏವಾಧನಾಃ' ಎಂಬಂತೆ ದಾಸನ ಆಸ್ತಿ ಏನಿದ್ದರೂ ಅದು ಅವನದಲ್ಲ, ಪ್ರಭುವಿನದು. ನಿಷ್ಕಂಟಕವಾದ ರಾಜ್ಯವನ್ನು ನೀನೆ ಉಪಭೋಗಿಸು.

'ಭೂರ್ದತ್ತಾ ಭೂಭೃತಾ ಚೇನ್ಮೇ ದಾಸ ಸ್ತೇರ್ಪಿತವಾನಹಂ' ಎಂದು ಸಂಗ್ರಹ ರಾಮಾಯಣ(ಅಯೋ.12.81)ದಲ್ಲಿ ಹೇಳಿದ್ದರಿಂದ 'ದತ್ತಂ ರಾಜ್ಯಂ' ಎಂದರೆ

'ರಾಜ್ಯವು ದತ್ತ' ಎಂದರ್ಥವಲ್ಲ. 'ದತ್ತ ಎನ್ನುವುದಾದರೆ' ಎಂದರ್ಥ ವಿವಕ್ಷಿತವಾಗಿದೆ. ರಾಜ್ಯವು ವರವಾಗಿ ಕೊಡುವಂಥದ್ದಲ್ಲ. ನ್ಯಾಯವಾಗಿ ಅದು ಬರಬೇಕು. ಅದು ಬಂದಿಲ್ಲ; ಮುಂದೆ 110ನೇ ಸರ್ಗದಲ್ಲಿ ವಸಿಷ್ಠರು ರಾಮನಿಗೆ ಇದನ್ನೇ ಹೇಳುತ್ತಾರೆ.

ಮಹತೇವಾಂಬುವೇಗೇನ ಭಿನ್ನಃ ಸೇತುರ್ಜಲಾಗಮೇ ।
ದುರಾವಾರಂ ತ್ವದನ್ಯೇನ ರಾಜ್ಯಖಿಂಡಮಿದಂ ಮಹತ್ ॥೫॥

ನೆರೆಬಂದಾಗ ಪ್ರವಾಹದ ಮಹಾವೇಗಕ್ಕೆ ಅಣೆಕಟ್ಟು ಒಡೆದರೆ ಅದು ನೀರನ್ನು ಹಿಡಿದಿಟ್ಟುಕೊಳ್ಳಲಾರದು. ಹಾಗೇ ಮಹಾರಾಜನು ಸ್ವರ್ಗಸ್ಥನಾದ ಮೇಲೆ ರಾಜ್ಯವಾಳಲು ನಿನ್ನನ್ನು ಬಿಟ್ಟು ಅನ್ಯರಿಂದ ಸಾಧ್ಯವಾಗದು.

ಗತಿಂ ಖರ ಇವಾಶ್ವಸ್ಯ ತಾರ್ಕ್ಷ್ಯಸ್ಯೇವ ಪತತ್ರಿಣಃ ।
ಅನುಗಂತುಂ ನ ಶಕ್ತಿರ್ಮೇ ಗತಿಂ ತವ ಮಹೀಪತೇ ॥೬॥

ರಾಜನೆ, ಕುದುರೆಯಂತೆ ಕತ್ತೆ ಓಡಲಾರದು. ಗರುಡನಂತೆ ಬೇರೆ ಹಕ್ಕಿ ಹಾರಲಾರದು. ಹಾಗೇ ನಿನ್ನಂತೆ ರಾಜ್ಯವಾಳಲು ನನಗೆ ಶಕ್ತಿ ಇಲ್ಲ.

ಸುಜೀವಂ ನಿತ್ಯಶಸ್ತಸ್ಯ ಯಃ ಪರೈರುಪಜೀವ್ಯತೇ ।
ರಾಮ ತೇ ನ ತು ದುರ್ಜೀವಂ ಯಃ ಪರಾನುಪಜೀವತಿ ॥೭॥

ಯಾರನ್ನು ಆಶ್ರಯಿಸಿ ಇತರರು ಬದುಕುವರೋ ಅವನ ಬದುಕೇ ಒಳ್ಳೆಯ ಬದುಕು. ರಾಮ, ಯಾರು ಪರರನ್ನಾಶ್ರಯಿಸಿ ಬದುಕುವನೋ ಅವನದು ಕೆಟ್ಟ ಬದುಕು, ಅದು ನಿನ್ನದಾಗಬಾರದು. ನೀನು ಸ್ವತಂತ್ರನಾದ ರಾಜನೇ ಆಗಬೇಕು.

ಯಥಾ ತು ರೋಪಿತೋ ವೃಕ್ಷಃ ಪುರುಷೇಣ ವಿವರ್ಧಿತಃ ।
ಹ್ರಸ್ವಕೇನ ದುರಾರೋಹೋ ರೂಢಸ್ಕಂಧೋ ಮಹಾದ್ರುಮಃ ॥೮॥

ಸ ಯಥಾ ಪುಷ್ಪಿತೋ ಭೂತ್ವಾ ಫಲಾನಿ ನ ವಿದರ್ಶಯೇತ್ ।
ಸ ತಾಂ ನಾನುಭವೇತ್ ಪ್ರೀತಿಂ ಯಸ್ಯ ಹೇತೋಃ ಪ್ರರೋಪಿತಃ ॥೯॥

ಒಬ್ಬನು ಒಂದು ಮರವನ್ನು ನೆಟ್ಟು ಬೆಳೆಸಿ, ಅದು ಹೆಮ್ಮರವಾಗಿ, ಕುಳ್ಳನಾದ ತನಗೇ ಏರಲಾಗದಷ್ಟು ಎತ್ತರಕ್ಕೆ ಬೆಳೆದು, ದೃಢವಾದ ಕೊಂಬೆಗಳನ್ನು ಮತ್ತು ಹೂವುಗಳನ್ನು ತೋರಿಯೂ ಕೂಡ ಫಲವನ್ನು ತೋರದಿದ್ದರೆ ಮರನೆಟ್ಟವನು ಯಾವ

ಫಲಕ್ಕಾಗಿ ಮರವನ್ನು ನೆಟ್ಟನೋ ಆ ಫಲಾನುಭವ ಸುಖವನ್ನು ಆತನು ಅನುಭವಿಸಲಾರದವನಾಗುತ್ತಾನೆ.

ಏಷೋಪಮಾ ಮಹಾಬಾಹೋ ತಮರ್ಥಂ ವೇತ್ತುಮರ್ಹಸಿ ।
ಯದಿ ತ್ವಮಸ್ಮಾನ್ ವೃಷಭೋ ಭರ್ತಾ ಭೃತ್ಯಾನ್ನ ಶಾಧಿ ಹಿ ॥೧೦॥

ಇದು ನಿನಗೆ ನಿದರ್ಶನ, ಮಹಾಬಾಹು! ನೀನು ಶ್ರೇಷ್ಠನಾಗಿದ್ದೂ ರಾಜನಾಗಿ ನಮ್ಮನ್ನು ಆಳದಿದ್ದರೆ! ಇದರ ಅರ್ಥವನ್ನು ನೀನು ತಿಳಿ.

ದಶರಥನು ರಾಮನೆಂಬ ಮರವನ್ನು ನೆಟ್ಟು ಬೆಳೆಸಿದ್ದಾನೆ. ಅವನಿಗೂ ಸಾಧ್ಯ-ವಾಗದಷ್ಟು ಪ್ರಜಾಪ್ರೇಮ ಪಾತ್ರನಾಗಿ ಬೆಳೆದು ನಿಂತೆ ನೀನು. ಕೊನೆಯಲ್ಲಿ ಅಭಿಷೇಕಕ್ಕೆ ಒಪ್ಪುವ ಮೂಲಕ ಪುಷ್ಪವನ್ನು ತೋರಿದೆ. ಆದರೇನು? ರಾಜ್ಯವಾಳುವ ಮೂಲಕ ಫಲವನ್ನು ತೋರಲಿಲ್ಲ! ದಶರಥ ನಿರಾಶೆಹೊಂದಿ ಸ್ವರ್ಗಸ್ಥನಾದ.

ಶ್ರೇಣಯಸ್ತಾ ತ್ವಂ ಮಹಾರಾಜ ಪಶ್ಯಂತ್ವಗ್ರ್ಯಾಶ್ಚ ಸರ್ವಶಃ ।
ಪ್ರತಪಂತಮಿವಾದಿತ್ಯಂ ರಾಜ್ಯೇ ಸ್ಥಿತಮರಿಂದಮಮ್ ॥೧೧॥

ನೀನು ಶತ್ರುಸಂಹಾರಕನಾಗಿ ರಾಜ್ಯಸಿಂಹಾಸನದಲ್ಲಿ ಕುಳಿತುಕೊಳ್ಳು. ಮಹಾರಾಜ, ಬೆಳಗುವ ಸೂರ್ಯನಂತೆ ಎಲ್ಲ ಪ್ರಜೆಗಳೂ ನಿನ್ನನ್ನು ದರ್ಶನ ಮಾಡಲಿ.

ತವಾನುಯಾನೇ ಕಾಕುತ್ಸ್ಥ ಮತ್ತಾ ನರ್ದಂತು ಕುಂಜರಾಃ ।
ಅಂತಃಪುರಗತಾ ನಾರ್ಯೋ ನಂದಂತು ಸುಸಮಾಹಿತಾಃ ॥೧೨॥

ನೀನು ಹೊರಟರೆ, ರಾಮ, ಮದಭರಿತವಾದ ಆನೆಗಳು ಘೀಳಿಡಲಿ, ಅಂತಃ-ಪುರದ ನಾರಿಯರು ಏಕಚಿತ್ತರಾಗಿ ಆನಂದವನ್ನು ಅನುಭವಿಸಲಿ.

ತಸ್ಯ ಸಾಧ್ವಿತ್ಯಮನ್ಯಂತ ನಾಗರಾ ವಿವಿಧಾ ಜನಾಃ ।
ಭರತಸ್ಯ ವಚಃ ಶ್ರುತ್ವಾ ರಾಮಂ ಪ್ರತ್ಯನುಯಾಚತಃ ॥೧೩॥

ಹೀಗೆ ಭರತನು ರಾಮನನ್ನು ಪ್ರಾರ್ಥಿಸುವುದನ್ನು ಕೇಳಿ ನಗರದ ನಾನಾ ಬಗೆಯ ಜನರು ಎಲ್ಲರೂ ಅದನ್ನು ಯುಕ್ತವಾಗಿದೆ ಎಂದು ಒಪ್ಪಿಕೊಂಡರು.

ತಮೇವಂ ದುಃಖಿತಂ ಪ್ರೇಕ್ಷ್ಯ ವಿಲಪಂತಂ ಯಶಸ್ವಿನಮ್ ।
ರಾಮಃ ಕೃತಾತ್ಮಾ ಭರತಂ ಸಮಾಶ್ವಾಸಯದಾತ್ಮವಾನ್ ॥೧೪॥

ಯಶಸ್ವಿಯಾದ ಭರತನು ಹೀಗೆ ದುಃಖಿತನಾಗಿ ವಿಲಾಪಮಾಡುವುದನ್ನು ಕಂಡು ಧೀರನಾದ ದೃಢಮನಸ್ಕನಾದ ಶ್ರೀರಾಮನು ಅವನನ್ನು ಸಂತೈಸಿದನು.

ನಾತ್ಮನಃ ಕಾಮಕಾರೋಽಸ್ತಿ ಪುರುಷೋಽಯಮನೀಶ್ವರಃ ।
ಇತಶ್ಚೇತರತಶ್ಚೈನಂ ಕೃತಾಂತಃ ಪರಿಕರ್ಷತಿ ॥೧೫॥

ನನ್ನ ವನವಾಸಕ್ಕೆ ಕೈಕೇಯಿಯೂ ನೀನೂ ಕಾರಣರೆಂದು ತಿಳಿಯಬೇಡ. ಎಲ್ಲವೂ ದೈವಾಧೀನ. ಪುರುಷನಿಗೆ ತನ್ನಿಷ್ಟದಂತೆ ನಡೆಯುವ ಸಾಮರ್ಥ್ಯವಿಲ್ಲ. ಪುರುಷನು ಅಸ್ವತಂತ್ರ. ದೈವ ಅವನನ್ನು ಈಚೆ ಆಚೆ ಸೆಳೆಯುತ್ತಿರುತ್ತದೆ.

ಸರ್ವೇ ಕ್ಷಯಾಂತಾ ನಿಚಯಾಃ ಪತನಾಂತಾಃ ಸಮುಚ್ಛ್ರಯಾಃ ।
ಸಂಯೋಗಾ ವಿಪ್ರಯೋಗಾಂತಾ ಮರಣಾಂತಂ ಚ ಜೀವಿತಮ್ ॥೧೬॥

ಕೂಡಿಟ್ಟಿದ್ದೆಲ್ಲವೂ ಕೊನೆಯಲ್ಲಿ ವ್ಯಯವಾಗಲೇಬೇಕು. ಉಚ್ಛ್ರಾಯವು ಪತನ–ದಲ್ಲಿಯೇ ಕೊನೆಗೊಳ್ಳಬೇಕು. ಸಮಾಗಮಕ್ಕೆ ವಿಯೋಗದಲ್ಲಿಯೆ, ಬದುಕಿಗೆ ಸಾವಿನಲ್ಲಿಯೆ ಕೊನೆಯಾಗಬೇಕು.

ಯಥಾ ಫಲಾನಾಂ ಪಕ್ವಾನಾಂ ನಾನ್ಯತ್ರ ಪತನಾದ್‌ಭಯಮ್ ।
ಏವಂ ನರಸ್ಯ ಜಾತಸ್ಯ ನಾನ್ಯತ್ರ ಮರಣಾದ್ಭಯಮ್ ॥೧೭॥

ಮಾಗಿದ ಹಣ್ಣುಗಳಿಗೆ ಪತನಕ್ಕಿಂತ ಬೇರೆ ಭಯವಿಲ್ಲ. ಹುಟ್ಟಿದವನಿಗೆ ಸಾವಿಗಿಂತ ಬೇರೆ ಭಯವಿಲ್ಲ. ಬೇರೆ ಭಯವೇನಿದ್ದರೂ ಪರಿಹಾರ್ಯವಾಗಿರು ತ್ತದೆ. ಸಾವು ಅಪರಿಹಾರ್ಯ.

ಯಥಾಗಾರಂ ದೃಢಸ್ಥೂಣಂ ಜೀರ್ಣಂ ಭೂತ್ವಾವಸೀದತಿ ।
ತಥಾವಸೀದಂತಿ ನರಾ ಜರಾಮೃತ್ಯುವಶಂ ಗತಾಃ ॥೧೮॥

ದೃಢವಾದ ಕಂಬ ಊರಿ ಕಟ್ಟಿದ ಮನೆಯೂ ಕೂಡ ಕಾಲಾನುಕ್ರಮದಲ್ಲಿ ಶಿಥಿಲವಾಗಿ ಬೀಳುತ್ತದೆ. ಹಾಗೇ ಮನುಷ್ಯರು ಮುಪ್ಪು ಸಾವುಗಳಿಗೆ ವಶರಾಗಿಯೇ ಆಗುತ್ತಾರೆ.

ಅತ್ಯೇತಿ ರಜನೀ ಯಾ ತು ಸಾ ನ ಪ್ರತಿನಿವರ್ತತೇ ।
ಯಾತ್ಯೇವ ಯಮುನಾ ಪೂರ್ಣಾ ಸಮುದ್ರಂ ಉದಕಾಕುಲಂ ॥೧೯॥

ರಾತ್ರಿ ಕಳೆದು ಹೋಗುತ್ತದೆ, ಹಿಂದಿರುಗಿ ಬರುವುದಿಲ್ಲ. ಯಮುನಾನದಿ ತುಂಬಿ ಹರಿದು ಜಲಪೂರ್ಣವಾದ ಸಮುದ್ರವನ್ನು ಸೇರುತ್ತದೆ ಹೊರತು ಹಿಂದಿರುಗಿ ಬರುವುದಿಲ್ಲ.

ಅಹೋರಾತ್ರಾಣಿ ಗಚ್ಛಂತಿ ಸರ್ವೇಷಾಂ ಪ್ರಾಣಿನಾಮಿಹ ।
ಆಯೂಂಷಿ ಕ್ಷಪಯಂತ್ಯಾಶು ಗ್ರೀಷ್ಮೇ ಜಲಮಿವಾಂಶವಃ ॥೨೦॥

ಹಗಲು ರಾತ್ರಿಗಳು ಕಳೆದುಹೋಗುತ್ತವೆ. ಎಲ್ಲ ಪ್ರಾಣಿಗಳ ಆಯುಷ್ಯವನ್ನು ಹೀರುತ್ತವೆ, ಗ್ರೀಷ್ಮದಲ್ಲಿ ಸೂರ್ಯನ ಕಿರಣಗಳು ನೀರನ್ನು ಹೀರುವಂತೆ.

ಆತ್ಮಾನಮನುಶೋಚ ತ್ವಂ ಕಿಮನ್ಯಮನುಶೋಚಸಿ ।
ಆಯುಸ್ತೇ ಹೀಯತೇ ಯಸ್ಯ ಸ್ಥಿತಸ್ಯ ಚ ಗತಸ್ಯ ಚ ॥೨೧॥

ನಿನ್ನ ಬಗ್ಗೆ ನೀನು ಶೋಕಿಸು, ಅನ್ಯರ ಬಗ್ಗೆ ಏಕೆ ಶೋಕಿಸುವೆ? ನೀನು ಒಂದೆಡೆ ನಿಂತರೂ ಚಲಿಸಿದರೂ ನಿನ್ನಾಯುಷ್ಯವು ಕಳೆಯುತ್ತದೆ.

ಸಹೈವ ಮೃತ್ಯುರ್ವ್ರಜತಿ ಸಹ ಮೃತ್ಯುರ್ನಿಷೀದತಿ ।
ಗತ್ವಾ ಸುದೀರ್ಘಮಧ್ವಾನಂ ಸಹ ಮೃತ್ಯುರ್ನಿವರ್ತತೇ ॥೨೨॥

ಮೃತ್ಯು ನಮ್ಮೊಂದಿಗೇ ಹೋಗುತ್ತದೆ. ನಮ್ಮೊಂದಿಗೇ ಕುಳ್ಳಿರುತ್ತದೆ. ಬಲು ದೂರದ ಹಾದಿ ತುಳಿದ ಮೇಲೂ ಕೂಡ ನಮ್ಮೊಂದಿಗೇ ಅದೂ ಇಲ್ಲವಾಗುತ್ತದೆ. ನಾವಿದ್ದು, ನಮಗೆ ಅದು ಇಲ್ಲ ಎಂದು ಎಂದೂ ಆಗುವುದಿಲ್ಲ.

ಗಾತ್ರೇಷು ವಲಯಃ ಪ್ರಾಪ್ತಾಃ ಶ್ವೇತಾಶ್ಚೈವ ಶಿರೋರುಹಾಃ ।
ಜರಯಾ ಪುರುಷೋ ಜೀರ್ಣಃ ಕಿಂ ಹಿ ಕೃತ್ವಾ ಪ್ರಭಾವಯೇತ್ ॥೨೩॥

ಮುಪ್ಪಿನಿಂದ ಮನುಷ್ಯನು ಶಿಥಿಲನಾಗುತ್ತಾನೆ. ಮೈಚರ್ಮಗಳಲ್ಲಿ ಮಡಿಕೆ ಗಳು ಬೀಳುತ್ತವೆ. ತಲೆಗೂದಲು ಬೆಳ್ಳಗಾಗುತ್ತವೆ. ಏನು ಮಾಡಿ ಇದರ ಮೇಲೆ ಪ್ರಭುತ್ವ-ವನ್ನು ಸಂಪಾದಿಸಲು ಶಕ್ಯ?

ನಂದಂತ್ಯುದಿತ ಆದಿತ್ಯೇ ನಂದಂತ್ಯಸ್ತಮಿತೇ ರವೌ ।
ಆತ್ಮನೋ ನಾವಬುಧ್ಯಂತೇ ಮನುಷ್ಯಾ ಜೀವಿತಕ್ಷಯಮ್ ॥೨೪॥

ಸೂರ್ಯನು ಉದಿಸಿದಾಗ ಧನಾರ್ಜನಕಾಲ ಬಂದಿತೆಂದು ಹಿಗ್ಗುತ್ತಾರೆ.

ಸೂರ್ಯನು ಅಸ್ತಮಿಸಿದರೂ ಕಾಮೋಪಭೋಗ ಕಾಲವೆಂದು ಹಿಗ್ಗುತ್ತಾರೆ. ತಮ್ಮ ಆಯುಷ್ಯದ ಒಂದೊಂದು ರಾತ್ರಿ ಹಗಲು ಕಳೆದುಹೋದುದನ್ನು ಗಮನಿಸುವುದಿಲ್ಲ.

ಹೃಷ್ಯಂತ್ಯುತ್ಸವಮುಖಂ ದೃಷ್ಟ್ವಾ ನವಂ ನವಮಿಹಾಗತಮ್ ।
ಋತೂನಾಂ ಪರಿವರ್ತೇನ ಪ್ರಾಣಿನಾಂ ಪ್ರಾಣಸಂಕ್ಷಯಃ ॥೨೫॥

ಹೊಸ ಹೊಸ ಋತುಆದಿ, ಯುಗಾದಿ ಬಂದುದನ್ನು ಕಂಡು ಹರ್ಷಪಡುತ್ತಾರೆ. ಆದರೆ ಪ್ರತಿ ಋತು ಬದಲಾವಣೆಯಿಂದ ಪ್ರಾಣಿಗಳ ಆಯುಷ್ಯ ಕ್ಷಯಿಸಿರುತ್ತದೆ.

ಯಥಾ ಕಾಷ್ಠಂ ಚ ಕಾಷ್ಠಂ ಚ ಸಮೇಯಾತಾಂ ಮಹಾರ್ಣವೇ ।
ಸಮೇತ್ಯ ಚ ವ್ಯಪೇಯಾತಾಂ ಕಾಲಮಾಸಾದ್ಯ ಕಂಚನ ॥೨೬॥

ಕಾಷ್ಠ–ಕಾಷ್ಠಗಳು ಮಹಾಸಮುದ್ರದಲ್ಲಿ ಒಂದು ಕಾಲದಲ್ಲಿ ಜತೆಗೂಡುತ್ತವೆ. ಸ್ವಲ್ಪಕಾಲ ಜೊತೆಯಾಗಿದ್ದು ಇನ್ನೊಂದು ಕಾಲ ಬಂದಾಗ ದೂರವಾಗುತ್ತವೆ.

ಏವಂ ಭಾರ್ಯಾಶ್ಚ ಪುತ್ರಾಶ್ಚ ಜ್ಞಾತಯಶ್ಚ ಧನಾನಿ ಚ ।
ಸಮೇತ್ಯ ವ್ಯವಧಾವಂತಿ ಧ್ರುವೋ ಹ್ಯೇಷಾಂ ವಿನಾಭವಃ ॥೨೭॥

ಹಾಗೇ ಸತಿ ಸುತರು ಬಂಧುಬಾಂಧವರು ಐಶ್ವರ್ಯಗಳು ಎಲ್ಲವೂ ಜೊತೆ ಸೇರಿ ದೂರವಾಗುತ್ತವೆ ಎಂದಾದರೂ ಅವುಗಳ ವಿಯೋಗ ನಿಶ್ಚಿತ.

ನಾತ್ರ ಕಶ್ಚಿದ್ಯಥಾಭಾವಂ ಪ್ರಾಣೀ ಸಮಭಿವರ್ತತೇ ।
ತೇನ ತಸ್ಮಿನ್ನ ಸಾಮರ್ಥ್ಯಂ ಪ್ರೇತಸ್ಯಾಸ್ಯಾನುಶೋಚತಃ ॥೨೮॥

ಯಾವ ಪ್ರಾಣಿಯೂ ತನ್ನಿಷ್ಟದಂತೆ ಇಷ್ಟಮಿತ್ರರೊಂದಿಗೇ ಇರುವುದಿಲ್ಲ. ಸತ್ತವರಿಗಾಗಿ ಅವನು ಕೇವಲ ಶೋಕಿಸುತ್ತಾನೆ ಹೊರತು, ಅವರೊಡನೇ ಇರಲು ಅವನಿಗೆ ಸಾಮರ್ಥ್ಯವಿಲ್ಲ.

ಯಥಾ ಹಿ ಸಾರ್ಥಂ ಗಚ್ಛಂತಂ ಬ್ರೂಯಾತ್ ಕಶ್ಚಿತ್ ಪಥಿ ಸ್ಥಿತಃ ।
ಅಹಮಪ್ಯಾಗಮಿಷ್ಯಾಮಿ ಪೃಷ್ಠತೋ ಭವತಾಮಿತಿ ॥೨೯॥

ಮುಂದೆ ಹೋಗುತ್ತಿರುವ ಯಾತ್ರಿಕರ ಗುಂಪಿಗೆ ದಾರಿಯಲ್ಲಿ ನಿಂತಿರುವವನೊಬ್ಬನು ಹೇಳುತ್ತಾನೆ. 'ನಾನೂ ನಿಮ್ಮ ಹಿಂದಿನಿಂದ ಬರುತ್ತೇನೆ' ಎಂದು.

ಏವಂ ಪೂರ್ವೈರ್ಗತೋ ಮಾರ್ಗಃ ಪಿತೃಪೈತಾಮಹೋ ಧ್ರುವಃ ।
ತಮಾಪನ್ನಃ ಕಥಂ ಶೋಚೇದ್ಯಸ್ಯ ನಾಸ್ತಿ ವ್ಯತಿಕ್ರಮಃ ॥೩೦॥

ಹಾಗೇ ತಾತಮುತ್ತಾತಂದಿರ ಮಾರ್ಗವು ಅವರಿಗಿಂತ ಹಿಂದಿನವರು ನಡೆದ ಮಾರ್ಗವೇ ಎನ್ನುವುದು ನಿಶ್ಚಿತ. ಆ ಮಾರ್ಗದಲ್ಲಿರುವವನು ಶೋಕಿಸುವುದು ಹೇಗೆ ಯುಕ್ತವಾದೀತು? ಆ ಮಾರ್ಗವನ್ನು ಅತಿಕ್ರಮಿಸಲಾಗದು.

ವಯಸಃ ಪತಮಾನಸ್ಯ ಸ್ರೋತಸೋ ವಾನಿವರ್ತಿನಃ ।
ಆತ್ಮಾ ಸುಖೇ ನಿಯೋಕ್ತವ್ಯಃ ಸುಖಭಾಜಃ ಪ್ರಜಾಃ ಸ್ಮೃತಾಃ ॥೩೧॥

ಹೋದ ವಯಸ್ಸೂ ಹರಿದ ಪ್ರವಾಹವೂ ಹಿಂತಿರುಗಿ ಬಾರದಿರುವಾಗ, ಅದಕ್ಕೆ ಶೋಕಿಸದೆ, ತನುಮನಗಳನ್ನು ಸುಖಸಾಧನ ಧರ್ಮಾಚರಣೆಯಲ್ಲಿ ತೊಡಗಿಸಬೇಕು. ಪ್ರಜೆಗಳು ಸುಖಸಾಧನ ಧರ್ಮಾನುಷ್ಠಾನಕ್ಕಾಗಿಯೇ ಜನಿಸಿರುತ್ತಾರೆ.

ಧರ್ಮಾತ್ಮಾ ಸ ಶುಭೈಃ ಕೃತ್ಸ್ನೈಃ ಕ್ರತುಭಿಶ್ಚಾಪ್ತದಕ್ಷಿಣೈಃ ।
ಧೂತಪಾಪ್ಮಾ ಗತಃ ಸ್ವರ್ಗಂ ಪಿತಾ ನಃ ಪೃಥಿವೀಪತಿಃ ॥೩೨॥

ಧರ್ಮಾತ್ಮನಾದ ನಮ್ಮ ತಂದೆ ರಾಜಾ ದಶರಥನು ಮಂಗಳಕರವಾದ ಎಲ್ಲ ಯಜ್ಞಗಳನ್ನು ಮಾಡಿ ದಕ್ಷಿಣೆ ಕೊಟ್ಟು ಪಾಪಗಳನ್ನು ನೀಗಿಕೊಂಡು ಸ್ವರ್ಗಕ್ಕೆ ಹೋಗಿದ್ದಾನೆ.

ಭೃತ್ಯಾನಾಂ ಭರಣಾತ್ ಸಮ್ಯಕ್ ಪ್ರಜಾನಾಂ ಪರಿಪಾಲನಾತ್ ।
ಅರ್ಥಾದಾನಾಚ್ಚ ಧರ್ಮೇಣ ಪಿತಾ ನಸ್ತ್ರಿದಿವಂ ಗತಃ ॥೩೩॥

ಭೃತ್ಯರನ್ನು ಚೆನ್ನಾಗಿ ಪೋಷಿಸಿ ಪ್ರಜೆಗಳನ್ನು ಚೆನ್ನಾಗಿ ಪಾಲಿಸಿ ಧರ್ಮದಿಂದ ಅರ್ಥ, ಸಂಪಾದನೆಯನ್ನು ಮಾಡಿ ನಮ್ಮ ತಂದೆ ಸ್ವರ್ಗಕ್ಕೆ ಹೋಗಿದ್ದಾನೆ.

ಕರ್ಮಭಿಸ್ತು ಶುಭೈರಿಷ್ಟ್ವೈಃ ಕ್ರತುಭಿಶ್ಚಾಪ್ತದಕ್ಷಿಣೈಃ ।
ಸ್ವರ್ಗಂ ದಶರಥಃ ಪ್ರಾಪ್ತಃ ಪಿತಾ ನಃ ಪೃಥಿವೀಪತಿಃ ॥೩೪॥

ಶುಭಕರ್ಮಗಳಿಂದಲೂ ಯಜ್ಞಗಳನ್ನು ಮಾಡಿ ದಕ್ಷಿಣೆಗಳನ್ನು ಕೊಟ್ಟಿದ್ದರಿಂದಲೂ ನಮ್ಮ ತಂದೆ ರಾಜಾ ದಶರಥನು ಸ್ವರ್ಗಕ್ಕೆ ಹೋಗಿದ್ದಾನೆ.

ಇಷ್ಟ್ವಾ ಬಹುವಿಧೈರ್ಯಜ್ಞೈರಿಷ್ಟ್ವಾ ಭೋಗಾಂಶ್ಚಾವಾಪ್ಯ ಪುಷ್ಕಲಾನ್ ।
ಉತ್ತಮಂ ಚಾಯುರಾಸಾದ್ಯ ಸ್ವರ್ಗತಃ ಪೃಥಿವೀಪತಿಃ ॥೩೫॥

ಬಹುವಿಧವಾದ ಯಜ್ಞಗಳನ್ನು ಮಾಡಿ ಪುಷ್ಕಳವಾಗಿ ಭೋಗಗಳನ್ನು ಉಂಡು ಉತ್ತಮ ಆಯುಷ್ಯವನ್ನೂ ಹೊಂದಿ ರಾಜಾ ದಶರಥನು ಸ್ವರ್ಗಕ್ಕೆ ಹೋಗಿದ್ದಾನೆ.

ಆಯುರುತ್ತಮಮಾಸಾದ್ಯ ಭೋಗಾನಪಿ ಚ ರಾಘವಃ ।
ಸ ನ ಶೋಚ್ಯಃ ಪಿತಾ ತಾತ ಸ್ವರ್ಗತಃ ಸತೃತಃ ಸತಾಮ್ ॥೩೬॥

ಉತ್ತಮ ಆಯುಷ್ಯವನ್ನು ಹೊಂದಿ ಭೋಗಗಳನ್ನೂ ಉಂಡು ತಂದೆಯಾದ ದಶರಥನು ಸಜ್ಜನರಿಂದ ಮಾನಿತನಾಗಿ ಸ್ವರ್ಗಕ್ಕೆ ಹೋಗಿದ್ದಾನೆ. ಅವನ ಬಗ್ಗೆ ಶೋಕಿಸಬೇಕಾಗಿಲ್ಲ.

ಸ ಜೀರ್ಣಂ ಮಾನುಷಂ ದೇಹಂ ಪರಿತ್ಯಜ್ಯ ಪಿತಾ ಹಿ ನಃ ।
ದೈವೀಮೃದ್ಧಿಮನುಪ್ರಾಪ್ತೋ ಬ್ರಹ್ಮಲೋಕವಿಹಾರಿಣೀಮ್ ॥೩೭॥

ಮುಪ್ಪಾದ ಮನುಷ್ಯದೇಹವನ್ನು ಪರಿತ್ಯಜಿಸಿ ನಮ್ಮ ತಂದೆ ಬ್ರಹ್ಮಲೋಕದಲ್ಲಿ ವಿಹರಿಸುವ ದೈವೀಸಂಪತ್ತನ್ನು ಪಡೆದುಕೊಂಡಿದ್ದಾನೆ.

ತಂ ತು ನೈವಂವಿಧಃ ಕಶ್ಚಿತ್ ಪ್ರಾಜ್ಞಃ ಶೋಚಿತುಮರ್ಹತಿ ।
ತದ್ವಿಧೋ ಯದ್ವಿಧಶ್ಚಾಸಿ ಶ್ರುತವಾನ್ ಬುದ್ಧಿಮತ್ತರಃ ॥೩೮॥

ಇಂಥವನು, ಶಾಸ್ತ್ರಜ್ಞನೂ ಬುದ್ಧಿವಂತನೂ ಆದ ನಿನ್ನಂಥವನು, ಎಲ್ಲವನ್ನೂ ಚೆನ್ನಾಗಿ ತಿಳಿದವನು ಯಾರೂ ಶೋಕಿಸಬಾರದು.

ಏತೇ ಬಹುವಿಧಾಃ ಶೋಕಾ ವಿಲಾಪರುದಿತೇ ತಥಾ ।
ವರ್ಜನೀಯಾ ಹಿ ಧೀರೇಣ ಸರ್ವಾವಸ್ಥಾಸು ಧೀಮತಾ ॥೩೯॥

ಬಹುವಿಧವಾದ ಈ ಶೋಕಗಳು, ವಿಲಾಪ, ಕಣ್ಣೀರು, ಇವುಗಳನ್ನು ಧೀರನಾದ ಧೀಮಂತನು ಎಲ್ಲ ಅವಸ್ಥೆಗಳಲ್ಲಿಯೂ ವರ್ಜ್ಯಮಾಡಬೇಕು.

ಸ ಸ್ವಸ್ಥೋ ಭವ ಮಾ ಶೋಕೋ ಯಾತ್ವಾ ಚಾವಸ ತಾಂ ಪುರೀಮ್ ।
ತಥಾ ಪಿತ್ರಾ ನಿಯುಕ್ತೋಽಸಿ ವಶಿನಾ ವದತಾಂ ವರ ॥೪೦॥

ಸ್ವಸ್ಥನಾಗು, ಶೋಕಿಸಬೇಡ. ಹೋಗಿ ಅಯೋಧ್ಯೆಯಲ್ಲಿ ವಾಸಮಾಡು. ಹಾಗೇ ನಿನಗೆ ಜಿತೇಂದ್ರಿಯನಾದ ತಂದೆಯ ಆದೇಶವಿದೆ, ವಾಗ್ಮಿಶ್ರೇಷ್ಠನೆ!

ಯತ್ರಾಹಮಪಿ ತೇನೈವ ನಿಯುಕ್ತಃ ಪುಣ್ಯಕರ್ಮಣಾ ।
ತತ್ರೈವಾಹಂ ಕರಿಷ್ಯಾಮಿ ಪಿತುರಾರ್ಯಸ್ಯ ಶಾಸನಮ್ ॥೪೧॥

ನಾನೂ ಕೂಡ ಪುಣ್ಯಕರ್ಮಿಯಾದ ನಮ್ಮ ತಂದೆ ಯಾವ ವಿಷಯದಲ್ಲಿ ಆದೇಶ ನೀಡಿದನೋ ಅದೇ ವನವಾಸವಿಷಯದಲ್ಲಿ ಅವನ ಆ ಆದೇಶವನ್ನು ನಡೆಸುತ್ತೇನೆ.

ನ ಮಯಾ ಶಾಸನಂ ತಸ್ಯ ತ್ಯಕ್ತುಂ ನ್ಯಾಯ್ಯಮರಿಂದಮ ।
ತತ್ತ್ವಯಾಪಿ ಸದಾ ಮಾನ್ಯಂ ಸ ವೈ ಬಂಧುಃ ಸ ನಃ ಪಿತಾ ॥೪೨॥

ನಾನು ಅವನ ಆದೇಶವನ್ನು ಉಲ್ಲಂಘಿಸುವುದು ನ್ಯಾಯವಲ್ಲ. ಶತ್ರುನಾಶಕನೆ, ನೀನೂ ಕೂಡ ಅವನ ಆದೇಶವನ್ನು ಸದಾ ಪಾಲಿಸಬೇಕು. ಅವನು ನಮಗೆ ಬಂಧು, ನಮಗೆ ಪಿತ.

ತದ್ವಚಃ ಪಿತುರೇವಾಹಂ ಸಂಮತಂ ಧರ್ಮಚಾರಿಣಾಮ್ ।
ಕರ್ಮಣಾ ಪಾಲಯಿಷ್ಯಾಮಿ ವನವಾಸೇನ ರಾಘವ ॥೪೩॥

ಧರ್ಮಾಚಾರ ಮಾಡುವವರಿಗೆ ಸಮ್ಮತವಾದ ತಂದೆಯ ಮಾತನ್ನೇ, ಅದರಂತೆ ವನವಾಸ ಕರ್ಮವನ್ನು ಮಾಡುವ ಮೂಲಕ ಪಾಲನ ಮಾಡುತ್ತೇನೆ.

ಧಾರ್ಮಿಕೇಣಾನೃಶಂಸೇನ ನರೇಣ ಗುರುವರ್ತಿನಾ ।
ಭವಿತವ್ಯಂ ನರವ್ಯಾಘ್ರ ಪರಲೋಕಂ ಜಿಗೀಷತಾ ॥೪೪॥

ಪುರುಷೋತ್ತಮ, ಪರಲೋಕವನ್ನು ಪಡೆಯಲು ಬಯಸುವ ಧಾರ್ಮಿಕನಾದ ದಯಾಶೀಲನಾದ ಮಾನವನು ಗುರುಹಿರಿಯರಿಗೆ ವಿಧೇಯನಾಗಿರಬೇಕು.

ಆತ್ಮಾನಮನುತಿಷ್ಠ ತ್ವಂ ಸ್ವಭಾವೇನ ನರರ್ಷಭ ।
ನಿಶಾಮ್ಯ ತು ಶುಭಂ ವೃತ್ತಂ ಪಿತುರ್ದಶರಥಸ್ಯ ನಃ ॥೪೫॥

ಪುರುಷೋತ್ತಮನೆ, ನಮ್ಮ ತಂದೆಯಾದ ದಶರಥನ ಧರ್ಮಸಮ್ಮತವಾದ ನಡತೆಯನ್ನು ಗಮನದಲ್ಲಿಟ್ಟುಕೊಂಡು ನಿನ್ನ ಸತ್‌ಸ್ವಭಾವಾನುಗುಣವಾಗಿ ಆತ್ಮಹಿತ-ವನ್ನು ಅನುಷ್ಠಾನ ಮಾಡು.

ನಿರಪರಾಧಿಯಾದ ಜ್ಯೇಷ್ಠ ಪುತ್ರನನ್ನು ಕಾಡಿಗೆ ಕಳಿಸಿ ಕನಿಷ್ಠನಿಗೆ ರಾಜ್ಯವನ್ನು ನೀಡುವುದು ಧರ್ಮಸಮ್ಮತವಲ್ಲದಿದ್ದರೂ ಅಂಥ ಧರ್ಮವಿರುದ್ಧವಾದ ವರವನ್ನು ಕೈಕೇಯಿ ಅಧರ್ಮಮಾರ್ಗದಿಂದಲೇ ವಂಚನೆಯಿಂದಲೇ ಪಡೆದುಕೊಂಡಿದ್ದು

ಅವಳಿಗೆ ಅಧರ್ಮವಾಯಿತು. ಆದರೆ ತಾನು ಹಿಂದೆ ಮಾಡಿದ್ದ ವಾಗ್ದಾನವನ್ನು ಮುರಿಯದೆ ನಡೆಸಿಕೊಟ್ಟಿದ್ದು ದಶರಥನಿಗೆ ಧರ್ಮವೇ ಆಯಿತು. ಹೀಗಾಗಿ ದಶರಥನು ನೇರವಾಗಿ ಸ್ವರ್ಗಕ್ಕೆ ಹೋಗಿದ್ದಾನೆ.

ಕೌಸಲ್ಯೆ ಸುಮಿತ್ರೆಯರು ಕೂಡ ದಶರಥನ ಮರಣಾನಂತರ ಮೂರು ಸಾವಿರವರ್ಷ ಬದುಕಿದ್ದು ಮರಣ ಹೊಂದಿದ ಬಳಿಕ ನೇರವಾಗಿ ಪತಿಲೋಕಕ್ಕೆ ಹೋದರು.

ಕೈಕೇಯಿ ಮಾತ್ರ ಕೌಸಲ್ಯೆ ಸುಮಿತ್ರೆಯರೊಂದಿಗೇ ಮರಣ ಹೊಂದಿದರೂ ಆಗಲೇ ಪತಿಲೋಕ ಅವಳಿಗೆ ದೊರಕಲಿಲ್ಲ. ಸೂತಕ ದೋಷಪ್ರಯುಕ್ತವಾಗಿ ಬ್ರಾಹ್ಮಣನಿಗೆ ತತ್ಕಾಲದಲ್ಲಿ ದೇವಪೂಜಾನರ್ಹತ್ವ ಬರುವಂತೆ ಅವಳಿಗೂ ಪತಿಲೋಕ ತತ್ಕಾಲದಲ್ಲಿ ಸಿಗಲಿಲ್ಲ. ಅವಳು ಸ್ವಭಾವತಃ ಪತಿಲೋಕಕ್ಕೆ ಯೋಗ್ಯಳೇ ಆದರೂ ಹದಿನಾಲ್ಕು ವರ್ಷಕಾಲ ರಾಮನ ಪಟ್ಟಾಭಿಷೇಕವನ್ನು ತಡೆದ ಪಾಪಪ್ರಯುಕ್ತ ಪತಿಲೋಕಕ್ಕೆ ಹೋಗದೆ ರಾಮಾಭಿಷೇಕಾನಂತರ ಹತ್ತುಸಾವಿರ ವರ್ಷಕಾಲ ಅಸ್ಥಿರವಾದ ಸ್ವರ್ಗಲೋಕಗಳಲ್ಲಿ ಸಂಚರಿಸುತ್ತ ಕಾಲಕಳೆದಳು. ಬಳಿಕವೇ ಶ್ರೀರಾಮ ಅವಳಿಗೆ ಪತಿಲೋಕದಲ್ಲಿ ಸ್ಥಿರವಾಗಿ ನೆಲೆಸುವಂತೆ ವರವಿತ್ತಿದ್ದಾನೆ ಎಂದು ನಿರ್ಣಯದಲ್ಲಿ ಹೇಳಿದ್ದಾರೆ.

ಹೀಗಾಗಿ ದಶರಥನಲ್ಲಿ ಒಂದಿಷ್ಟು ದೋಷವಿಲ್ಲವೆಂದು ಶ್ರೀರಾಮ ಪುನಃ ಪುನಃ ಹೇಳುತ್ತಿದ್ದಾನೆ. ದಶರಥನ ಆದೇಶದಂತೆ ನಡೆ ಎಂದು ಭರತನಿಗೆ ಪುನಃಪುನಃ ಹೇಳುತ್ತಿದ್ದಾನೆ. ಆದರೆ ಅಧರ್ಮ ವರದಿಂದ ಬಂದ ರಾಜ್ಯ ತನಗೆ ಬೇಡ. ದಶರಥನು ತನಗೆ ನೇರವಾಗಿ ಆದೇಶವನ್ನೂ ನೀಡಲಿಲ್ಲ ಎಂದು ಭರತ ಪಟ್ಟುಹಿಡಿಯುತ್ತಾನೆ. ನೀನೇ ರಾಜ್ಯವನ್ನಾಳೆಂದು ಮತ್ತೆಮತ್ತೆ ರಾಮನನ್ನು ಬೇಡುತ್ತಾನೆ.

ಇತ್ಯೇವಮುಕ್ತ್ವಾ ವಚನಂ ಮಹಾತ್ಮಾ
ಪಿತುರ್ನಿದೇಶಪ್ರತಿಪಾಲನಾರ್ಥಮ್ ।
ಯವೀಯಸಂ ಭ್ರಾತರಮರ್ಥವಚ್ಚ
ಪ್ರಭುರ್ಮುಹೂರ್ತಾದ್ವಿರರಾಮ ರಾಮಃ ॥೪೬॥

ಮಹಾತ್ಮಾ ಪ್ರಭು ಶ್ರೀರಾಮನು ತಂದೆಯ ಆದೇಶವನ್ನು ಪಾಲಿಸುವ ಸಲುವಾಗಿ ಭರತನಿಗೆ ಹೀಗೆ ಮುಹೂರ್ತಕಾಲ ಅರ್ಥಗರ್ಭಿತವಾದ ಮಾತನ್ನು ಹೇಳಿ ವಿರಮಿಸಿದನು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ನೂರಐದನೇ ಸರ್ಗ ಮುಗಿಯಿತು.

ಷಡಧಿಕ ಶತತಮಃ ಸರ್ಗಃ

ಸರ್ಗ – 106

ಪುನಃ ಭರತನ ಪ್ರಾರ್ಥನೆ.

ಏವಮುಕ್ತ್ವಾ ತು ವಿರತೇ ರಾಮೇ ವಚನಮರ್ಥವತ್ ।
ತತೋ ಮಂದಾಕಿನೀತೀರೇ ರಾಮಂ ಪ್ರಕೃತಿವತ್ಸಲಮ್ ॥೧॥

ಉವಾಚ ಭರತಶ್ಚಿತ್ರಂ ಧಾರ್ಮಿಕೋ ಧಾರ್ಮಿಕಂ ವಚಃ ।
ಕೋ ಹಿ ಸ್ಯಾದೀದೃಶೋ ಲೋಕೇ ಯಾದೃಶಸ್ತ್ವಮರಿಂದಮ ॥೨॥

ಹೀಗೆ ಮಂದಾಕಿನೀ ತೀರದಲ್ಲಿ ಶ್ರೀರಾಮನು ಅರ್ಥಗರ್ಭಿತವಾದ ಮಾತನ್ನು ಹೇಳಿ ವಿರಮಿಸಿದಾಗ ಪ್ರಜಾವತ್ಸಲನಾದ ಧಾರ್ಮಿಕನಾದ ಶ್ರೀರಾಮನಿಗೆ ಧಾರ್ಮಿಕನಾದ ಭರತನು ಸುಂದರವಾದ ಹಾಗೂ ಧರ್ಮಸಮ್ಮತವಾದ ಈ ಮಾತನ್ನು ನುಡಿದನು– 'ಶತ್ರುನಾಶಕನೆ, ನಿನ್ನಂಥವನು ಲೋಕದಲ್ಲಿ ಯಾರಿರ ಬಹುದು?' ಎಂದು.

ನ ತ್ವಾಂ ಪ್ರವ್ಯಥಯೇದ್ದುಃಖಂ ಪ್ರೀತಿರ್ವಾ ನ ಪ್ರಹರ್ಷಯೇತ್ ।
ಸಂಮತಶ್ಚಾಸಿ ವೃದ್ಧಾನಾಂ ತಾಂಶ್ಚ ಪೃಚ್ಛಸಿ ಸಂಶಯಾನ್ ॥೩॥

'ಏಕೆಂದರೆ, ದುಃಖಕರವಾದುದು ನಿನಗೆ ದುಃಖಉಂಟುಮಾಡುವುದಿಲ್ಲ. ಸಂತೋಷಕರವಾದುದು ನಿನಗೆ ಸಂತೋಷ ಉಂಟುಮಾಡುವುದಿಲ್ಲ. ಜ್ಞಾನಿಗಳಿಗೂ ಮಾನನೀಯನಾಗಿರುವೆ. ಆದರೂ ಅವರಲ್ಲಿ ಧರ್ಮಸಂಶಯಗಳನ್ನು ಕೇಳುವೆ.

ಯಥಾ ಮೃತಸ್ತಥಾ ಜೀವನ್ ಯಥಾऽಸತಿ ತಥಾ ಸತಿ ।
ಯಸ್ಯೈಷ ಬುದ್ಧಿಲಾಭಃ ಸ್ಯಾತ್ ಪರಿತಪ್ಯೇತ ಕೇನ ಸಃ ॥೪॥

ನಿನಗೆ ಮೃತನಲ್ಲಿ ಹೇಗೋ ಹಾಗೆ ಬದುಕಿರುವವನಲ್ಲಿಯೂ ದ್ವೇಷ ಹುಟ್ಟುವು-ದಿಲ್ಲ. ಇಲ್ಲದ ಪದಾರ್ಥದಲ್ಲಿ ಹೇಗೋ ಹಾಗೆ ಇರುವ ಪದಾರ್ಥದಲ್ಲಿಯೂ ಪ್ರೀತಿ ಉಂಟಾಗುವುದಿಲ್ಲ. ಇಂಥ ಬುದ್ಧಿ ಯಾರಿಗೆ ಇರುವುದೋ ಅವನು ಯಾವುದಕ್ಕೆ ಅಳುತ್ತಾನೆ?

ಪರಾವರಜ್ಞೋ ಯಶ್ಚ ಸ್ಯಾದ್ಯಥಾ ತ್ವಂ ಮನುಜಾಧಿಪ ।
ಸ ಏವಂ ವ್ಯಸನಂ ಪ್ರಾಪ್ಯ ನ ವಿಷೀದಿತುಮರ್ಹತಿ ॥೫॥

ಯಾವನು ನಿನ್ನಂತೆ ಪರ ಅಪರ ತತ್ವವೆಲ್ಲವನ್ನೂ ತಿಳಿಯುವನೋ ಅವನು ಇಂಥ ವ್ಯಸನ ಬಂದರೂ ವಿಷಾದ ಹೊಂದುವುದಿಲ್ಲ.

ಅಮರೋಪಮಸತ್ತ್ವಸ್ತ್ವಂ ಮಹಾತ್ಮಾ ಸತ್ಯಸಂಗರಃ ।
ಸರ್ವಜ್ಞಃ ಸರ್ವದರ್ಶೀ ಚ ಬುದ್ಧಿಮಾಂಶ್ಚಾಸಿ ರಾಘವ ॥೬॥

ನೀನು ದೇವನಂತೆ ಸತ್ವಶಾಲಿ. ಮಹಾತ್ಮ ಸತ್ಯಪ್ರತಿಜ್ಞ ಸರ್ವಜ್ಞ ಸರ್ವದರ್ಶಿ ಬುದ್ಧಿವಂತನಾಗಿರುವೆ, ರಾಮ! ನೀನೇನೂ ತಪ್ಪು ಮಾಡುವುದಿಲ್ಲ.

ನ ತ್ವಾಮೇವಂಗುಣೈರ್ಯುಕ್ತಂ ಪ್ರಭವಾಭವಕೋವಿದಮ್ ।
ಅವಿಷಹ್ಯತಮಂ ದುಃಖಮಾಸಾದಯಿತುಮರ್ಹತಿ ॥೭॥

ಇಂಥ ಗುಣಗಳಿಂದ ಕೂಡಿದವನು ನೀನು, ಹುಟ್ಟು ಸಾವುಗಳನ್ನು ಬಲ್ಲವನು ಯಾರಿಗೂ ಸರ್ವಥಾ ಮಣಿಸಲಾಗದವನು ಇಂಥ ನಿನ್ನನ್ನು ಯಾವ ಪಾಪವೂ ದುಃಖವೂ ಪೀಡಿಸಲಾರದು.

ಪ್ರೋಷಿತೇ ಮಯಿ ಯತ್ಪಾಪಂ ಮಾತ್ರಾ ಮತ್ಕಾರಣಾತ್ ಕೃತಮ್ ।
ಕ್ಷುದ್ರಯಾ ತದನಿಷ್ಟಂ ಮೇ ಪ್ರಸೀದತು ಭವಾನ್ ಮಮ ॥೮॥

ಆದರೆ ನಾನು ನೀನಲ್ಲ. ನಾನು ತಪ್ಪು ಮಾಡಿದ್ದೇನೆ. ನಾನು ದೂರದೇಶದಲ್ಲಿ ಇದ್ದಾಗ ಇತ್ತ ಕ್ಷುದ್ರ ಬುದ್ಧಿಯವಳಾದ ನನ್ನ ತಾಯಿ ನನ್ನ ಸಲುವಾಗಿ ಏನು ಪಾಪ ಮಾಡಿದಳೋ ಅದು ನನ್ನದೇ ತಪ್ಪು. ಅದು ನನಗೆ ಇಷ್ಟವಲ್ಲ. ಅದರಿಂದ ನನ್ನಲ್ಲಿ ಪ್ರಸನ್ನನಾಗು.

ಧರ್ಮಬಂಧೇನ ಬದ್ಧೋಽಸ್ಮಿ ತೇನೇಮಾಂ ನೇಹ ಮಾತರಮ್ ।
ಹನ್ಮಿ ತೀವ್ರೇಣ ದಂಡೇನ ದಂಡಾರ್ಹಾಂ ಪಾಪಕಾರಿಣೀಮ್ ॥೯॥

ಸ್ತ್ರೀವಧೆ ಮಾಡಕೂಡದೆನ್ನುವ ಧರ್ಮದ ಕಟ್ಟಿಗೆ ಸಿಲುಕಿದ್ದೇನೆ. ಅದರಿಂದ ಪಾಪಕಾರಿಣಿಯಾದ ತಾಯಿಯನ್ನು ತೀವ್ರ ಶಿಕ್ಷೆಯಿಂದ ಶಿಕ್ಷಾರ್ಹಳಾದರೂ ಕೊಲ್ಲುತ್ತಿಲ್ಲ. ಸುಮ್ಮನಿದ್ದೇನೆ.

ಕಥಂ ದಶರಥಾಜ್ಜಾತಃ ಶುದ್ಧಾಭಿಜನಕರ್ಮಣಃ ।
ಜಾನನ್ ಧರ್ಮಮಧರ್ಮಿಷ್ಠಂ ಕುರ್ಯಾಂ ಕರ್ಮ ಜುಗುಪ್ಸಿತಮ್ ॥

ಶುದ್ಧ ವಂಶದಲ್ಲಿ ಬಂದು ಶುದ್ಧಕರ್ಮ ಮಾಡಿದ ದಶರಥನಿಂದ ಜನಿಸಿದವನು ನಾನು ಧರ್ಮವನ್ನು ತಿಳಿದವನು ನಿಂದ್ಯವಾದ ಸ್ತ್ರೀವಧರೂಪವಾದ ಪಾಪಿಷ್ಟ ಕರ್ಮವನ್ನು ಹೇಗೆ ಮಾಡಲಿ?

ಗುರುಃ ಕ್ರಿಯಾವಾನ್ ವೃದ್ಧಶ್ಚ ರಾಜಾ ಪ್ರೇತಃ ಪಿತೇತಿ ಚ ।
ತಾತಂ ನ ಪರಿಗರ್ಹೇಯಂ ದೈವತಂ ಚೇತಿ ಸಂಸದಿ ॥೧೧॥

ತಾಯಿ ಕೈಕೇಯಿ ಮಾತ್ರವಲ್ಲದೆ ತಂದೆ ದಶರಥನೂ ಕೂಡ ನಿನಗೆ ತಪ್ಪು ಮಾಡಿದ್ದಾನೆ. ಅವನು ನನಗೆ ಉಪದೇಶ ಮಾಡಿದ ಗುರು. ಯಜ್ಞಮಾಡುವವನು ವೃದ್ಧ ನಮಗೆ ತಂದೆ, ರಾಜ, ಗತಿಸಿದವನು, ಅದರಿಂದ ದೇವತೆ ಎಂಬ ದೃಷ್ಟಿಯಿಂದ ನಾನು ಸಭೆಯಲ್ಲಿ ನಿಂದಿಸಲು ಇಷ್ಟಪಡುವುದಿಲ್ಲ.

ಕೋ ಹಿ ಧರ್ಮಾರ್ಥಯೋರ್ಹೀನಮೀದೃಶಂ ಕರ್ಮ ಕಿಲ್ಬಿಷಮ್ ।
ಸ್ತ್ರಿಯಾಃ ಪ್ರಿಯಂ ಚಿಕೀರ್ಷುಃ ಸನ್ ಕುರ್ಯಾದ್ಧರ್ಮಜ್ಞ ಧರ್ಮವಿತ್ ॥

ಆದರೂ, ಧರ್ಮಜ್ಞನೆ, ಧರ್ಮಜ್ಞನಾದವನು ಹೆಂಡತಿಗೆ ಸಂತೋಷ ನೀಡಲು ಬಯಸಿ ಧರ್ಮ ಅರ್ಥಗಳಿಗೆರಡಕ್ಕೂ ಅನುಕೂಲವಾಗದ ಇಂಥ ಪಾಪಕರ್ಮವನ್ನು ಯಾರು ಮಾಡಿಯಾನು?

'ವಿಷಮದ್ಯೈವ ಪಾಸ್ಯಾಮಿ' 'ನಾನು ಈಗಲೆ ವಿಷಕುಡಿದು ಸಾಯುತ್ತೇನೆ' ಎಂದು ಕೈಕೇಯಿಯ ಬೆದರಿಕೆಗೆ ಹೆದರಿ ಅವಳಿಗೆ ಸಂತೋಷ ನೀಡಲು ದಶರಥನು ವರಕೊಟ್ಟ, ಇದು ರಾಮನಿಗೆ ವನವಾಸವಾದ್ದರಿಂದ ಧರ್ಮ ವಿರುದ್ಧ. ರಾಜ್ಯ ತನ್ನ ಕೈಬಿಟ್ಟು ಹೋದ್ದರಿಂದ ಅರ್ಥಕ್ಕೂ ವಿರುದ್ಧವಾಯಿತು. ಧರ್ಮ ಅರ್ಥಗಳ ಬಗ್ಗೆ ಉಪದೇಶ ಮಾಡುವ ಗುರು, ಅವುಗಳನ್ನು ಅನುಷ್ಠಾನ ಮಾಡುವ ರಾಜ, ಮತ್ತು ಪ್ರೀತಿಯ ತಂದೆಯಾಗಿರುವ ದಶರಥ ಮಾಡಿದ್ದು ಸರಿಯಲ್ಲ. ಇದು ಬುದ್ಧಿ ತಮ್ಮ ಹತೋಟಿಯಲ್ಲಿರುವವರು ಮಾಡುವ ಕೆಲಸವಲ್ಲ.

ಅಂತಕಾಲೇ ಹಿ ಭೂತಾನಿ ಮುಹ್ಯಂತೀತಿ ಪುರಾಶ್ರುತಿಃ ।
ರಾಜ್ಞೈವಂ ಕುರ್ವತಾ ಲೋಕೇ ಪ್ರತ್ಯಕ್ಷಂ ಸಾ ಶ್ರುತಿಃ ಕೃತಾ ॥೧೩॥

ಅಂತ್ಯಕಾಲದಲ್ಲಿ ಮಾನವರು ಬುದ್ಧಿ ಸ್ವಾಸ್ಥ್ಯವನ್ನು ಕಳೆದುಕೊಳ್ಳುವರೆಂದು ಹೇಳುವ ಹಿಂದಿನವರ ಒಂದು ಗಾದೆ ಇದೆ. ರಾಜನು ಹೀಗೆ ಮಾಡಿ ಈ ಗಾದೆ ಮಾತು ಹೇಳುವುದಕ್ಕೆ ಪ್ರತ್ಯಕ್ಷ ನಿದರ್ಶನನಾಗಿದ್ದಾನೆ.

ಸಾಧ್ವರ್ಥಮಭಿಸಂಧಾಯ ಕ್ರೋಧಾನ್ಮೋಹಾಚ್ಚ ಸಾಹಸಾತ್ ।
ತಾತಸ್ಯ ಯದತಿಕ್ರಾಂತಂ ಪ್ರತ್ಯಾಹರತು ತದ್ಭವಾನ್ ॥೧೪॥

ಯುಕ್ತವಾಗಿರುವ ಅರ್ಥವನ್ನು ಮನಸಿನಲ್ಲಿಟ್ಟುಕೊಂಡು, ಕ್ರೋಧ ಮೋಹ ಸಾಹಸಗಳಿಂದ ತಂದೆ ನೀಡಿದ ಅಯುಕ್ತವಾದ ಆದೇಶವನ್ನು ನೀನು ಹಿಂದೆ ತೆಗೆದುಕೊ. ಸರಿಪಡಿಸು.

ತಾಯಿಯ ಕೋಪ ತಂದೆಯ ವ್ಯಾಮೋಹ ಇವುಗಳ ಕಾರಣದಿಂದಾಗಿ ತಂದೆಯು ಸಾಹಸ ಮಾಡಿದ್ದಾನೆ. ಯುಕ್ತಾಯುಕ್ತ ವಿಮರ್ಶೆ ಮಾಡದೆ 'ಸಹಸಾ' ವರಕೊಡುವ ನಿಶ್ಚಯಮಾಡಿ ಧರ್ಮ ಅರ್ಥಗಳೆರಡನ್ನೂ ಅತಿಕ್ರಮಿಸಿದ್ದಾನೆ. ಇದನ್ನು ಸರಿಪಡಿಸಬೇಕಿದೆ ಶ್ರೀರಾಮ—

ಪಿತುರ್ಹಿ ಸಮತಿಕ್ರಾಂತಂ ಪುತ್ರೋ ಯಃ ಸಾಧು ಮನ್ಯತೇ ।
ತದಪತ್ಯಂ ಮತಂ ಲೋಕೇ ವಿಪರೀತಮತೋಽನ್ಯಥಾ ॥೧೫॥

ತಂದೆಯ ಅತಿಕ್ರಮವನ್ನು ಮಗನು ಸರಿಪಡಿಸಿ ಇದೀಗ ಸರಿಯಾಯಿತು ಎಂದು ಸಮಾಧಾನಪಟ್ಟುಕೊಳ್ಳಬೇಕು— 'ಸಾಧು ಮನ್ಯತೇ' ಹೀಗೆ ಮಾಡಿದರೆ ಮಗನು 'ಅಪತ್ಯ'ನೆನಿಸುತ್ತಾನೆ.

'ಅಪತನ'ಕ್ಕಾಗಿ, ತಂದೆ ನರಕದಲ್ಲಿ ಪತನಹೊಂದಬಾರದೆನ್ನುವುದಕ್ಕಾಗಿ ತಂದೆ ಮಾಡಿದ ತಪ್ಪನ್ನು ಸರಿಪಡಿಸುವವನೇ ನಿಜವಾಗಿ 'ಅ–ಪತ್ಯ' ಪುತ್ರ ಎನಿಸುತ್ತಾನೆ. 'ರಾಮನು ಕಾಡಿಗೆ ಹೋಗಬೇಕೆ'ನ್ನುವ ತಂದೆಯ ಆದೇಶವನ್ನು 'ರಾಮನು ರಾಜ್ಯವಾಳಬೇಕೆಂ'ದು ರಾಮನೆ ಸರಿಪಡಿಸಬೇಕು. ಹಾಗೆ ಮಾಡದ ಮಗನು 'ಅಪತ್ಯ' ಎಂದು ಅನ್ವರ್ಥವಾದ ಹೆಸರನ್ನು ಸಂಪಾದಿಸುವುದಿಲ್ಲ.

ತದಪತ್ಯಂ ಭವಾನಸ್ತು ಮಾ ಭವಾನ್ ದುಷ್ಕೃತಂ ಪಿತುಃ ।
ಅಭಿಪತ್ತಾ ಕೃತಂ ಕರ್ಮ ಲೋಕೇ ಧೀರವಿಗರ್ಹಿತಮ್ ॥೧೬॥

ಅದರಿಂದ ನೀನು ಅನ್ವರ್ಥವಾಗಿ 'ಅಪತ್ಯ'ವೆನಿಸು. ತಂದೆ ಮಾಡಿದ ತಪ್ಪಾದ ಆದೇಶವನ್ನು ನೀನು ಸ್ವೀಕರಿಸಬೇಡ. ಅವನು ಮಾಡಿದ ಈ ಕರ್ಮವು 'ಧೀರ'ರಿಗೆ ಧೀಮಂತರಿಗೆ ನಿಂದ್ಯವೆನಿಸುತ್ತದೆ.

ಕೈಕೇಯೀಂ ಮಾಂ ಚ ತಾತಂ ಚ ಸುಹೃದೋ ಬಾಂಧವಾಂಶ್ಚ ನಃ ।
ಪೌರಜಾನಪದಾನ್ ಸರ್ವಾಂಸ್ತ್ರಾತು ಸರ್ವಮಿದಂ ಭವಾನ್ ॥೧೭॥

ಕೈಕೇಯಿಯನ್ನೂ ನನ್ನನ್ನೂ ತಂದೆಯನ್ನೂ ನಮ್ಮ ಬಂಧುಮಿತ್ರರನ್ನೂ ಪೌರರನ್ನೂ ದೇಶವಾಸಿಗಳನ್ನೂ ಎಲ್ಲರನ್ನೂ ಕಾಪಾಡು, ರಾಜ್ಯಾಭಿಷೇಕ ಮಾಡಿಸಿಕೊಳ್ಳು.

ಕ್ವ ಚಾರಣ್ಯಂ ಕ್ವ ಚ ಕ್ಷಾತ್ರಂ ಕ್ವ ಜಟಾಃ ಕ್ವ ಚ ಪಾಲನಮ್ ।
ಈದೃಶಂ ವ್ಯಾಹತಂ ಕರ್ಮ ನ ಭವಾನ್ ಕರ್ತುಮರ್ಹತಿ ॥೧೮॥

ಎಲ್ಲಿ ಈ ಅರಣ್ಯ? ಎಲ್ಲಿ ನಿನ್ನ ಕ್ಷಾತ್ರಧರ್ಮ? ಎಲ್ಲಿ ಜಟಾಧಾರಣ? ಎಲ್ಲಿ ರಾಜ್ಯಪಾಲನ? ಇಂಥ ಪರಸ್ಪರವ್ಯಾಹತವಾದ ಕರ್ಮವನ್ನು ನೀನು ಮಾಡಬೇಡ.

ಏಷ ಹಿ ಪ್ರಥಮೋ ಧರ್ಮಃ ಕ್ಷತ್ರಿಯಸ್ಯಾಭಿಷೇಚನಮ್ ।
ಯೇನ ಶಕ್ಯಂ ಮಹಾಪ್ರಾಜ್ಞ ಪ್ರಜಾನಾಂ ಪರಿಪಾಲನಮ್ ॥೧೯॥

ಕ್ಷತ್ರಿಯನಿಗೆ ಅಭಿಷೇಕ ಮುಖ್ಯವಾದ ಧರ್ಮ. ಮಹಾಪ್ರಾಜ್ಞನೆ, ಅಭಿಷೇಕದಿಂದಲೆ ಪ್ರಜಾಪಾಲನ ಶಕ್ಯವಾಗುತ್ತದೆ.

ಕಶ್ಚ ಪ್ರತ್ಯಕ್ಷಮುತ್ಸೃಜ್ಯ ಸಂಶಯಸ್ಥಮಲಕ್ಷಣಮ್ ।
ಆಯತಿಸ್ಥಂ ಚರೇದ್ಧರ್ಮಂ ಕ್ಷತ್ರಿಬಂಧುರನಿಶ್ಚಿತಮ್ ॥೨೦॥

ಪ್ರತ್ಯಕ್ಷವಾಗಿ ಪ್ರಜಾರಂಜನರೂಪ ಫಲ ನೀಡುವ ಅಭಿಷೇಕವೆಂಬ ಕ್ಷಾತ್ರಧರ್ಮವನ್ನು ಬಿಟ್ಟು 'ವನವಾಸದಿಂದ ಪ್ರಜಾರಕ್ಷಣೆ ಸಾಧ್ಯವೆ ಅಲ್ಲವೆ?' ಎಂಬ ಸಂಶಯಕ್ಕೊಳಗಾಗುವ ಕ್ಷತ್ರಿಯನಿಗೆ ಇದು ಬೇಕೆಂದು ನಿಶ್ಚಯವಾಗದ ಪುಣ್ಯದಿಂದ ಮುಂದೆ ಬಹುಕಾಲಾನಂತರ ಸ್ವರ್ಗದಲ್ಲಿ ಫಲ ನೀಡುವ ವನವಾಸವೆಂಬ ಧರ್ಮವನ್ನು, ಕ್ಷತ್ರಿಯನಿಗೆ ಅದು ನಿತ್ಯವಾಗಿ ಹಿತವಲ್ಲದಿದ್ದರೂ ಒಳ್ಳೆಯ ಶುಭಲಕ್ಷಣವಲ್ಲದಿದ್ದರೂ, ಯಾವ ಕ್ಷತ್ರಿಯನು ಮಾಡುತ್ತಾನೆ? 'ಕ್ಷತ್ರಬಂಧು' ಹೆಸರಿಗೆ ಮಾತ್ರ ಕ್ಷತ್ರಿಯನಾದವನೂ ಕೂಡ ಮಾಡಲಾರ.

ಅಥ ಕ್ಲೇಶಜಮೇವ ತ್ವಂ ಧರ್ಮಂ ಚರಿತುಮಿಚ್ಛಸಿ ।
ಧರ್ಮೇಣ ಚತುರೋ ವರ್ಣಾನ್ ಪಾಲಯನ್ ಕ್ಲೇಶಮಾಪ್ನುಹಿ ॥೨೧॥

ನೀನು ವನವಾಸದಂಥ ಒಂದು ಕ್ಲೇಶಕರವಾದ ಧರ್ಮವನ್ನೇ ಆಚರಿಸಲು ಬಯಸುವೆನ್ನುವುದಾದರೆ ಧರ್ಮದಿಂದ ನಾಲ್ಕು ವರ್ಣವನ್ನು ಕಾಪಾಡುವ ಕ್ಲೇಶವನ್ನೇ ಸ್ವೀಕರಿಸು.

ಚತುರ್ಣಾಮಾಶ್ರಮಾಣಾಂ ಹಿ ಗಾರ್ಹಸ್ಥ್ಯಂ ಶ್ರೇಷ್ಠಮಾಶ್ರಮಮ್ ।
ಪ್ರಾಹುರ್ಧರ್ಮಜ್ಞ ಧರ್ಮಜ್ಞಾಸ್ತಂ ಕಥಂ ತ್ಯಕ್ತುಮರ್ಹಸಿ ॥೨೨॥

'ಕ್ಷತ್ರಿಯನಿಗೆ ವಾನಪ್ರಸ್ಥಧರ್ಮವೂ ವಿಹಿತವಾಗಿದೆ. ಅದನ್ನು ನಾನು ಸ್ವೀಕರಿಸು-ತ್ತೇನೆ' ಎನ್ನುವುದಾದರೆ, ಧರ್ಮಜ್ಞನೆ! ಧರ್ಮಜ್ಞರು ಕ್ಷತ್ರಿಯನಿಗೆ ನಾಲ್ಕು ಆಶ್ರಮ-ಗಳಲ್ಲಿ ಗೃಹಸ್ಥಧರ್ಮವೆ ಶ್ರೇಷ್ಠ ಎನ್ನುತ್ತಾರೆ. ಅದನ್ನು ನೀನು ಹೇಗೆ ತ್ಯಾಗಮಾಡುವೆ?

ಶ್ರುತೇನ ಬಾಲಃ ಸ್ಥಾನೇನ ಜನ್ಮನಾ ಭವತೋ ಹ್ಯಹಮ್ ।
ಸ ಕಥಂ ಪಾಲಯಿಷ್ಯಾಮಿ ಭೂಮಿಂ ಭವತಿ ತಿಷ್ಠತಿ ॥೨೩॥

ವಿದ್ಯೆ ಸ್ಥಾನ ಜನ್ಮ ಈ ಮೂರರ ದೃಷ್ಟಿಯಿಂದಲೂ ನಾನು ನಿನಗಿಂತ ಸಣ್ಣವನು. ಅದರಿಂದ ಹಿರಿಯನಾದ ನೀನಿರುವಾಗ ಸಣ್ಣವನು ನಾನು ಹೇಗೆ ರಾಜ್ಯಭಾರ ಮಾಡಲಿ?

ಹೀನಬುದ್ಧಿಗುಣೋ ಬಾಲೋ ಹೀನಃ ಸ್ಥಾನೇನ ಚಾಪ್ಯಹಮ್ ।
ಭವತಾ ಚ ವಿನಾ ಭೂತೋ ನ ವರ್ತಯಿತುಮುತ್ಸಹೇ ॥೨೪॥

ಬುದ್ಧಿ ಎಂಬ ಗುಣ ಕಡಿಮೆಯಾದ್ದರಿಂದ ವಿದ್ಯೆಯ ದೃಷ್ಟಿಯಿಂದ ನಾನು ಸಣ್ಣವನು, ಜನ್ಮದಿಂದಲೂ ನನ್ನ ಸ್ಥಾನ ಕಡಿಮೆಯದು. ಜ್ಯೇಷ್ಠನಾದ್ದರಿಂದ ರಾಜ್ಯಾಧಿಕಾರ ಪಡೆಯುವುದರಲ್ಲಿ ನಿನ್ನ ಸ್ಥಾನ ಮೊದಲನೆಯದು, ನೀನಿಲ್ಲದೆ ನಾನು ಬದುಕಿರಲೂ ಇಷ್ಟಪಡಲಾರೆ.

ಇದಂ ನಿಖಿಲಮವ್ಯಗ್ರಂ ರಾಜ್ಯಂ ಪಿತ್ರ್ಯಮಕಂಟಕಮ್ ।
ಅನುಶಾಧಿ ಸ್ವಧರ್ಮೇಣ ಧರ್ಮಜ್ಞ ಸಹ ಬಾಂಧವೈಃ ॥೨೫॥

ಧರ್ಮಜ್ಞನೆ, ತಂದೆಯಿಂದ ಬಂದಿರುವ ನಿಷ್ಕಂಟಕವಾದ ಈ ಎಲ್ಲ ರಾಜ್ಯವನ್ನೂ ನೀನು ಬಂಧುಗಳೊಂದಿಗೆ ಇದ್ದು ಸ್ವಧರ್ಮದಿಂದ ಆಳು.

ಇಹೈವ ತ್ವಾಭಿಷಿಂಚಂತು ಸರ್ವಾಃ ಪ್ರಕೃತಯಃ ಸಹ ।
ಋತ್ವಿಜಃ ಸವಸಿಷ್ಠಾಶ್ಚ ಮಂತ್ರವನ್ಮಂತ್ರಕೋವಿದಾಃ ॥೨೬॥

ಈ ಅರಣ್ಯದಲ್ಲಿಯೇ ಎಲ್ಲ ಪ್ರಜೆಗಳೂ, ಮಂತ್ರಕೋವಿದರಾದ, ವಸಿಷ್ಠರೂ ಋತ್ವಿಜರೂ ಮಂತ್ರಪೂರ್ವಕವಾಗಿ ನಿನಗೆ ಅಭಿಷೇಕ ಮಾಡಲಿ.

ಅಭಿಷಿಕ್ತಸ್ತ್ವಮಸ್ಮಾಭಿರಯೋಧ್ಯಾಂ ಪಾಲನೇ ವ್ರಜ ।
ವಿಜಿತ್ಯ ತರಸಾ ಲೋಕಾನ್ ಮರುದ್ಭಿರಿವ ವಾಸವಃ ॥೨೭॥

ಸ್ವಶಕ್ತಿಯಿಂದ ಲೋಕಗಳನ್ನು ಗೆದ್ದು ದೇವತೆಗಳೊಂದಿಗೆ ಇಂದ್ರನು ಅಮರಾವತಿಗೆ ನಡೆದಂತೆ ಪ್ರಜಾಪಾಲನೆಗಾಗಿ ನಮ್ಮಿಂದ ಅಭಿಷಿಕ್ತನಾದ ನೀನು ನಮ್ಮೊಂದಿಗೆ ಅಯೋಧ್ಯೆಗೆ ನಡೆ.

ಋಣಾನಿ ತ್ರೀಣ್ಯಪಾಕುರ್ವನ್ ದುರ್ಹೃದಃ ಸಾಧು ನಿರ್ದಹನ್ ।
ಸುಹೃದಸ್ತರ್ಪಯನ್ ಕಾಮೈಸ್ತ್ವಮೇವಾತ್ರಾನುಶಾಧಿ ಮಾಮ್ ॥೨೮॥

ದೇವ ಋಷಿ ಪಿತೃ ಋಣಗಳನ್ನು ಮೂರನ್ನೂ ತೀರಿಸುತ್ತ ದುರ್ಜನರನ್ನು ಚೆನ್ನಾಗಿ ನಾಶಮಾಡಿ ಸಜ್ಜನರನ್ನು ಅಭೀಷ್ಟ ಸಲ್ಲಿಸಿ ತೃಪ್ತಿಪಡಿಸುತ್ತ ಅಯೋಧ್ಯೆ- ಯಲ್ಲಿದ್ದು ನೀನೇ ದಾಸನಾದ ನನಗೆ ಪ್ರಭುವಾಗಿ ಆಳು.

ಅದ್ಯಾರ್ಯ ಮುದಿತಾಃ ಸಂತು ಸುಹೃದಸ್ತೇऽಭಿಷೇಚನೇ ।
ಅದ್ಯ ಭೀತಾಃ ಪಲಾಯಂತಾಂ ದುರ್ಹೃದಸ್ತೇ ದಿಶೋ ದಶ ॥೨೯॥

ಈಗಲೇ ಪೂಜ್ಯನೆ, ನಿನ್ನ ಅಭಿಷೇಕದಿಂದ ಎಲ್ಲ ಬಂಧುಗಳೂ ಆನಂದಪಡಲಿ. ಈಗಲೇ ನಿನ್ನ ಶತ್ರುಗಳು ಭೀತರಾಗಿ ಹತ್ತು ದಿಕ್ಕುಗಳಿಗೆ ಪಲಾಯನ ಮಾಡಲಿ.

ಆಕ್ರೋಶಂ ಮಮ ಮಾತುಶ್ಚ ಪ್ರಮೃಜ್ಯ ಪುರುಷರ್ಷಭ ।
ಅದ್ಯ ತತ್ರಭವಂತಂ ಚ ಪಿತರಂ ರಕ್ಷ ಕಿಲ್ಬಿಷಾತ್ ॥೩೦॥

ಪುರುಷೋತ್ತಮನೆ, ಈಗಲೆ ನನ್ನ ತಾಯಿಯ ಮೇಲಿನ ಪ್ರಜೆಗಳ ಆಕ್ರೋಶವನ್ನು ದೂರಮಾಡಿ ಪೂಜ್ಯನಾದ ತಂದೆಯನ್ನೂ ಪಾಪದಿಂದ ಕಾಪಾಡು.

ಶಿರಸಾ ತ್ವಾಭಿಯಾಚೇऽಹಂ ಕುರುಷ್ವ ಕರುಣಾಂ ಮಯಿ ।
ಬಾಂಧವೇಷು ಚ ಸರ್ವೇಷು ಭೂತೇಷ್ವಿವ ಮಹೇಶ್ವರಃ ॥೩೧॥

ತಲೆಬಾಗಿ ನಾನು ನಿನ್ನನ್ನು ಬೇಡುತ್ತೇನೆ. ಎಲ್ಲ ಪ್ರಾಣಿಗಳ ವಿಷಯದಲ್ಲಿ ಮಹೇಶ್ವರನು ಕರುಣೆದೋರುವಂತೆ ನೀನು ನನ್ನಲ್ಲಿಯೂ ಬಂಧುಗಳಲ್ಲಿಯೂ ಕರುಣೆದೋರು.

ಅಥೈತತ್ ಪೃಷ್ಠತಃ ಕೃತ್ವಾ ವನಮೇವ ಭವಾನಿತಃ ।
ಗಮಿಷ್ಯತಿ ಗಮಿಷ್ಯಾಮಿ ಭವತಾ ಸಾರ್ಧಮಪ್ಯಹಮ್ ॥೩೨॥

ಇದನ್ನು ಕಡೆಗಣಿಸಿ ನೀನು ಇಲ್ಲಿಂದ ದಂಡಕಾರಣ್ಯಕ್ಕೇ ಹೋಗುವುದಾದರೆ ನಾನೂ ನಿನ್ನೊಂದಿಗೇ ಬರುತ್ತೇನೆ.

ತಥಾ ಹಿ ರಾಮೋ ಭರತೇನ ತಾಮ್ಯತಾ
ಪ್ರಸಾದ್ಯಮಾನಃ ಶಿರಸಾ ಮಹೀಪತಿಃ ।
ನ ಚೈವ ಚಕ್ರೇ ಗಮನಾಯ ಸತ್ತ್ವವಾನ್
ಮತಿಂ ಪಿತುಸ್ತದ್ವಚನೇ ವ್ಯವಸ್ಥಿತಃ ॥೩೩॥

ಹೀಗೆ ಭರತನು ತಲೆಬಾಗಿ ದುಃಖದಿಂದ ಎಷ್ಟು ಬೇಡಿಕೊಂಡರೂ ಸತ್ವಶಾಲಿಯಾದ ರಾಜಾ ರಾಮನು ಅಯೋಧ್ಯೆಗೆ ಹೋಗಲು ಒಪ್ಪಲಿಲ್ಲ. ಪಿತೃವಾಕ್ಯ ಪರಿಪಾಲನ ಧರ್ಮದಲ್ಲಿಯೇ ಸ್ಥಿರವಾಗಿ ನಿಂತನು.

ತದದ್ಭುತಂ ಸ್ಥೈರ್ಯಮವೇಕ್ಷ್ಯ ರಾಘವೇ
ಸಮಂ ಜನೋ ಹರ್ಷಮವಾಪ ದುಃಖಿತಃ ।
ನ ಯಾತ್ಯಯೋಧ್ಯಾಮಿತಿ ದುಃಖಿತೋऽಭವತ್
ಸ್ಥಿರಪ್ರತಿಜ್ಞತ್ವಮವೇಕ್ಷ್ಯ ಹರ್ಷಿತಃ ॥೩೪॥

ರಾಮನಲ್ಲಿ ಈ ಅದ್ಭುತವಾದ ಸ್ಥೈರ್ಯವನ್ನು ಕಂಡು ಜನರು ಹರ್ಷಶೋಕ-ಗಳೆರಡನ್ನೂ ಜೊತೆಯಾಗಿ ಅನುಭವಿಸಿದರು. ಅಯೋಧ್ಯೆಗೆ ರಾಮ ಹೋಗುತ್ತಿಲ್ಲ ಎಂದು ದುಃಖಿತರಾದರು, ಅವನಿಗೆ ವನವಾಸ ಪ್ರತಿಜ್ಞೆಯಲ್ಲಿ ಸ್ಥೈರ್ಯವನ್ನು ಕಂಡು ಹರ್ಷಿತರೂ ಆದರು.

ತಮೃತ್ವಿಜೋ ನೈಗಮಯೂಥವಲ್ಲಭಾ
ಸ್ತಥಾ ಽಮಾತ್ಯಾಶ್ಚ ಕಲಾಶ್ಚ ಮಾತರಃ ।
ತಥಾ ಬ್ರುವಾಣಂ ಭರತಂ ಪ್ರತುಷ್ಟುವುಃ
ಪ್ರಣಮ್ಯ ರಾಮಂ ಚ ಯಯಾಚಿರೇ ಸಹ ॥೩೫॥

ಋತ್ವಿಜರೂ ಪೌರರೂ ಅಮಾತ್ಯಾದಿಗಳೂ, ಮೈಮರೆತು ಕಣ್ಣೀರು ಸುರಿಸುತ್ತಿದ್ದ ಮಾತೆಯರೂ ಏಕಕಾಲದಲ್ಲಿ ಭರತನ ಮಾತನ್ನು ಪ್ರಶಂಸಿಸಿದರು, ರಾಮನನ್ನು ನಮಿಸಿ, ಅಭಿಷೇಕ ಮಾಡಿಸಿಕೊಳ್ಳಲು ಬೇಡಿದರು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ನೂರಆರನೇ ಸರ್ಗ ಮುಗಿಯಿತು.

ಸಪ್ತಾಧಿಕ ಶತತಮಃ ಸರ್ಗಃ

ಸರ್ಗ – 107

ರಾಜ್ಯವನ್ನು ಸ್ವೀಕರಿಸಲಾರೆನೆಂದು ಶ್ರೀರಾಮನ ಉತ್ತರ.

ಪುನರೇವಂ ಬ್ರುವಾಣಂ ತಂ ಭರತಂ ಲಕ್ಷ್ಮಣಾಗ್ರಜಃ ।
ಪ್ರತ್ಯುವಾಚ ತತಃ ಶ್ರೀಮಾನ್ ಜ್ಞಾತಿಮಧ್ಯೇऽಭಿಸತ್ಕೃತಃ ॥೧॥

ಜ್ಞಾತಿಗಳ ನಡುವೆ ಸತ್ಕೃತನಾದ ಶ್ರೀಮಾನ್ ರಾಮಚಂದ್ರನು ಪುನಃ ಹೀಗೆ ಹೇಳುವ ಭರತನಿಗೆ ಪುನಃ ಉತ್ತರಿಸಿದನು.

ಉಪಪನ್ನಮಿದಂ ವಾಕ್ಯಂ ಯತ್ತ್ವಮೇವಮಭಾಷಥಾಃ ।
ಜಾತಃ ಪುತ್ರೋ ದಶರಥಾತ್ ಕೈಕೇಯ್ಯಾಂ ರಾಜಸತ್ತಮಾತ್ ॥೨॥

ರಾಜ ಶ್ರೇಷ್ಠನಾದ ದಶರಥನಿಂದ ಕೈಕೇಯಿಯಲ್ಲಿ ಜನಿಸಿದ ಪುತ್ರನು ನೀನು ಹೀಗೆ ಹೇಳಿದ್ದು ಯುಕ್ತವಾಗಿದೆ.

ಪುರಾ ಭ್ರಾತಃ ಪಿತಾ ನಃ ಸ ಮಾತರಂ ತೇ ಸಮುದ್ವಹನ್ ।
ಮಾತಾಮಹೇ ಸಮಾಶ್ರೌಷೀದ್ರಾಜ್ಯಶುಲ್ಕಮನುತ್ತಮಮ್ ॥೩॥

ಆದರೆ ತಮ್ಮ ! ಹಿಂದೆ ನಮ್ಮ ಪಿತನು ನಿನ್ನ ತಾಯಿಯನ್ನು ಮದುವೆಯಾಗುವಾಗ ತಾತನಿಗೆ ಉತ್ತಮವಾದ ರಾಜ್ಯವೆಂಬ ಕನ್ಯಾಶುಲ್ಕವನ್ನು ಕೊಡುವುದಾಗಿ ಪ್ರತಿಜ್ಞೆ ಮಾಡಿದ್ದನು.

ದೈವಾಸುರೇ ಚ ಸಂಗ್ರಾಮೇ ಜನನ್ಯೈ ತವ ಪಾರ್ಥಿವಃ ।
ಸಂಪ್ರಹೃಷ್ಟೋ ದದೌ ರಾಜಾ ವರಮಾರಾಧಿತಃ ಪ್ರಭುಃ ॥೪॥

ಮತ್ತು ದೇವಾಸುರ ಸಂಗ್ರಾಮದಲ್ಲಿ ನಿನ್ನ ತಾಯಿಗೆ ಅವಳಿಂದ ಉಪಕೃತನಾದ ಪ್ರಭು ರಾಜಾ ದಶರಥನು ಸಂತುಷ್ಟನಾಗಿ ಯಾವುದೇ ವರವನ್ನು ನೀನು ಕೇಳಿದರೂ ಆ ವರವನ್ನು ನೀಡುವೆನೆಂದು ವರವನ್ನೂ ನೀಡಿದ್ದ.

ತತಃ ಸಾ ಸಂಪ್ರತಿಶ್ರಾವ್ಯ ತವ ಮಾತಾ ಯಶಸ್ವಿನೀ ।
ಅಯಾಚತ ನರಶ್ರೇಷ್ಠಂ ದ್ವೌ ವರೌ ವರವರ್ಣಿನೀ ॥೫॥

ತವ ರಾಜ್ಯಂ ನರವ್ಯಾಘ್ರ ಮಮ ಪ್ರವ್ರಾಜನಂ ತಥಾ ।
ತೌ ಚ ರಾಜಾ ತದಾ ತಸ್ಯೈ ನಿಯುಕ್ತಃ ಪ್ರದದೌ ವರೌ ॥೬॥

ಅದರಿಂದ ಪುರುಷೋತ್ತಮನೆ, ಯಶಸ್ವಿಯಾದ ನಿನ್ನ ತಾಯಿ ಈಗ ರಾಜನಲ್ಲಿ 'ಹಿಂದೆ ನಾನು ನಿನಗೆ ವಾಗ್ದಾನ ಮಾಡಿದ್ದ ಎರಡು ವರಗಳನ್ನು ಈಗ ನೀಡುವೆ-ನೆಂ'ದು ಪ್ರತಿಜ್ಞೆ ಮಾಡಿಸಿ, ನಿನಗೆ ರಾಜ್ಯ, ನನಗೆ ವನವಾಸ ಎಂದು ಎರಡು ವರಗಳನ್ನು ಕೇಳಿದಳು. ಆಗ ವರ ವಾಗ್ದಾನ ಬಲದಿಂದಲೇ ಅನಿವಾರ್ಯವಾಗಿ ರಾಜನು ಆ ಎರಡು ವರಗಳನ್ನು ಅವಳಿಗೆ ನೀಡಲೇಬೇಕಾಯಿತು.

ತೇನ ಪಿತ್ರಾಹಮಪ್ಯತ್ರ ನಿಯುಕ್ತಃ ಪುರುಷರ್ಷಭ ।
ಚತುರ್ದಶ ವನೇ ವಾಸಂ ವರ್ಷಾಣಿ ವರದಾನಿಕಮ್ ॥೭॥

ಪುರುಷೋತ್ತಮನೆ, ಹೀಗಾಗಿ ವರದಾನಾನುಸಾರವಾಗಿ ತಂದೆ ನನಗೆ ಹದಿನಾಲ್ಕು ವರ್ಷ ವನವಾಸದ ಆಜ್ಞೆಯನ್ನು ನೀಡಿದನು.

ಸೋಽಹಂ ವನಮಿದಂ ಪ್ರಾಪ್ತೋ ನಿರ್ಜನಂ ಲಕ್ಷ್ಮಣಾನ್ವಿತಃ ।
ಸೀತಯಾ ಚಾಪ್ರತಿದ್ವಂದ್ವಃ ಸತ್ಯವಾದೇ ಸ್ಥಿತಃ ಪಿತುಃ ॥೮॥

ಪ್ರತಿಸ್ಪರ್ಧಿಗಳೇ ಇಲ್ಲದ ನಾನು ಪಿತನ ಆಜ್ಞೆಯನ್ನು ನಡೆಸಿಕೊಡುವುದಕ್ಕಾಗಿ ಲಕ್ಷ್ಮಣನೊಂದಿಗೆ ಮತ್ತು ಸೀತೆಯೊಂದಿಗೆ ಈ ನಿರ್ಜನವಾದ ಅರಣ್ಯಕ್ಕೆ ಬಂದಿದ್ದೇನೆ.

ಭವಾನಪಿ ತಥೇತ್ಯೇವ ಪಿತರಂ ಸತ್ಯವಾದಿನಮ್ ।
ಕರ್ತುಮರ್ಹತಿ ರಾಜೇಂದ್ರಂ ಕ್ಷಿಪ್ರಮೇವಾಭಿಷೇಚನಾತ್ ॥೯॥

ನೀನೂ ಕೂಡ ಹಾಗೇ ಬೇಗನೆ ಅಭಿಷೇಕ ಮಾಡಿಸಿಕೊಳ್ಳುವ ಮೂಲಕ ತಂದೆಯಾದ ರಾಜನನ್ನು ಸತ್ಯವಾದಿ ಎನಿಸುವಂತೆ ಮಾಡಬೇಕು.

ಋಣಾನ್ಮೋಚಯ ರಾಜಾನಂ ಮತ್ಕೃತೇ ಭರತ ಪ್ರಭುಮ್ ।
ಪಿತರಂ ತ್ರಾಹಿ ಧರ್ಮಜ್ಞಂ ಮಾತರಂ ಚಾಭಿನಂದಯ ॥೧೦॥

ಭರತ, ರಾಜನು ತಾಯಿಗೆ ವಾಗ್ದಾನಮಾಡಿದ ವರವನ್ನು ಸಫಲವಾಗುವಂತೆ ಮಾಡಿ ಅವಳ ಋಣದಿಂದ ರಾಜನನ್ನು ಮುಕ್ತಗೊಳಿಸು. ನನ್ನ ಸಂತೋಷಕ್ಕಾಗಿ ಧರ್ಮಜ್ಞ ಪ್ರಭುವಾದ ತಂದೆಯನ್ನು ಋಣ ಮುಕ್ತನನ್ನಾಗಿ ಮಾಡಿ ಕಾಪಾಡು. ತಾಯಿ ಕೈಕೇಯಿಯನ್ನೂ ಸಂತೈಸು.

ಶ್ರೂಯತೇ ಹಿ ಪುರಾ ತಾತ ಶ್ರುತಿರ್ಗೀತಾ ಯಶಸ್ವಿನಾ ।
ಗಯೇನ ಯಜಮಾನೇನ ಗಯೇಷ್ವೇವ ಪಿತೄನ್ ಪ್ರತಿ ॥೧೧॥

ಹಿಂದೆ ಪಿತೃಪ್ರೀತಿಯನ್ನು ಉದ್ದೇಶಿಸಿ ಪಿತೃಯಜ್ಞವನ್ನು ಸಂಕಲ್ಪಿಸಿ ಯಜಮಾನನಾದ ಯಶಸ್ವಿಯಾದ ಗಯಮಹಾರಾಜನು ಹಾಡಿದ ಒಂದು ಶ್ರುತಿಗೀತೆ ಪ್ರಸಿದ್ಧವಿದೆ.

ಪುನ್ನಾಮ್ನೋ ನರಕಾದ್ಯಸ್ಮಾತ್ ಪಿತರಂ ತ್ರಾಯತೇ ಸುತಃ ।
ತಸ್ಮಾತ್ ಪುತ್ರ ಇತಿ ಪ್ರೋಕ್ತಃ ಪಿತೄನ್ ಯತ್ ಪಾತಿ ವಾ ಸುತಃ ॥೧೨॥

ಶ್ರುತಿಗೀತೆ ಇದು— 'ಪುತ್ರ' ಎಂಬಲ್ಲಿ 'ಪುತ್+ತ್ರ' ಎಂದು ಪದವಿಭಾಗ. 'ಪುತ್' ಎಂದು ನರಕಕ್ಕೆ ಹೆಸರು. ನರಕದಲ್ಲಿ ಬೀಳದಂತೆ ಪಿತನನ್ನು 'ತ್ರ' ಕಾಪಾಡುವನಾದ್ದರಿಂದ ಮಗನು ಪುತ್ರನೆನಿಸುತ್ತಾನೆ. ಅಥವಾ 'ಪಾ ರಕ್ಷಣೇ' ಧಾತುವಿಗೆ 'ತೃಚ್' ಪ್ರತ್ಯಯ ಬಂದರೆ 'ಮಾತೃಪಿತೃದುಹಿತೃ' ಎಂದು ನಿಪಾತದಿಂದ 'ಪಿತೃ' ಎಂದಾಗುವಂತೆ ಪೃಷೋದರಾದಿಗಣದಂತೆ, 'ಪುತ್+ರ್' ಎಂದಾದಾಗ ಆ 'ಪುತೃ' ಶಬ್ದಕ್ಕೆ ಅಕಾರಾದೇಶ. 'ಪುತೃ' ಪುತ್ರ 'ರಕ್ಷಕ' ಎಂಬರ್ಥ.

'ಪಿತೄನ್ ಯಃ ಪಾತಿ ಸರ್ವತಃ' 'ಪಿತೃಗಳನ್ನು ಎಲ್ಲ ಪ್ರಕಾರಗಳಿಂದ ಎಲ್ಲ ದುಃಖಗಳಿಂದ ಕಾಪಾಡುತ್ತಾನೆ' ಎಂಬ ಪಾಠದಲ್ಲಿ ಅದು ಹಿಂದೆ ಹೇಳಿದ ಪುತ್ರಶಬ್ದ ನಿರ್ವಚನಕ್ಕೇ ವಿವರಣೆ. ಪ್ರಕೃತ ಪಾಠದಲ್ಲಿ ಪುತ್ರಶಬ್ದಕ್ಕೆ ಇನ್ನೊಂದು ರೀತಿಯಿಂದ ವ್ಯುತ್ಪತ್ತಿ. 'ಪಿತೃ' ಶಬ್ದದಂತೆಯೇ 'ರಕ್ಷಕ' ಎಂಬರ್ಥವನ್ನು ಪುತ್ರಶಬ್ದವೂ ಹೇಳುತ್ತದೆ. ಹೀಗಾಗಿ ಪುತ್ರರಕ್ಷಕನು ಪಿತೃ. ಪಿತೃರಕ್ಷಕನು ಪುತ್ರ ಎಂದಂತಾಗುವುದು.

ಏಷ್ಟವ್ಯಾ ಬಹವಃ ಪುತ್ರಾ ಗುಣವಂತೋ ಬಹುಶ್ರುತಾಃ ।
ತೇಷಾಂ ವೈ ಸಮವೇತಾನಾಮಪಿ ಕಶ್ಚಿದ್ಗಯಾಂ ವ್ರಜೇತ್ ॥೧೩॥

ಗುಣಶಾಲಿಗಳಾದ ಬಹುವಿದ್ಯಾವಂತರಾದ ಬಹಳ ಪುತ್ರರನ್ನು ಪಡೆಯಲು ಆಶಿಸಬೇಕು. ಆ ಬಹುಪುತ್ರರಲ್ಲಿ ಒಬ್ಬನಾದರೂ ಗಯೆಗೆ ಹೋಗಿ ಪಿಂಡಪ್ರದಾನ ಮಾಡಬಹುದು, ಎಂದು.

ಏವಂ ರಾಜರ್ಷಯಃ ಸರ್ವೇ ಪ್ರತೀತಾ ರಾಜನಂದನ ।
ತಸ್ಮಾತ್ ತ್ರಾಹಿ ನರಶ್ರೇಷ್ಠ ಪಿತರಂ ನರಕಾತ್ ಪ್ರಭೋ ॥೧೪॥

ರಾಜಕುಮಾರ, ಹೀಗೆ ರಾಜರ್ಷಿಗಳೆಲ್ಲರೂ ಪುತ್ರನು ತಮ್ಮನ್ನು ಉದ್ಧರಿಸುವನೆಂದು ವಿಶ್ವಾಸಉಳ್ಳವರಾಗಿದ್ದರು. ಅದರಿಂದ ಪುರುಷೋತ್ತಮ, ಪ್ರಭು, ನೀನೂ ಪಿತನನ್ನು ನರಕದಿಂದ ಕಾಪಾಡು.

ಇಷ್ಟೆಲ್ಲ ಅನುನಯದ ಮಾತನ್ನು ಶ್ರೀರಾಮ ಹೇಳುವುದು ಪರೀಕ್ಷೆಗಾಗಿ. 'ಭರತನಿಗೆ ರಾಜ್ಯದಾಶೆ ಇರುವುದಾದರೆ 'ಹಾಗೆ ಆಗಲಿ ಎನ್ನಬಹುದು, ನೋಡೋಣ' ಎಂದು. ಇಲ್ಲದಿದ್ದರೆ ಅವನು ಒಪ್ಪಿ ರಾಜ್ಯವಾಳಲು ತೊಡಗಿದರೆ ಮತ್ತೆ ರಾಮ ಸರ್ವಥಾ ಆ ರಾಜ್ಯವನ್ನು ಸ್ವೀಕರಿಸಲಾರ. ಇದನ್ನು ಕೌಸಲ್ಯೆ ಹಿಂದೆಯೆ (61.17,18) ದಶರಥನ ಮುಂದೆ ಹೇಳಿದ್ದಾಳೆ. ಆದರೆ ರಾಮ ಮತ್ತೆ ರಾಜ್ಯ ಸ್ವೀಕಾರ ಮಾಡುತ್ತೇನೆ ಎನ್ನುತ್ತಾನೆ! ಭರತನ ಮನೋದಾರ್ಢ್ಯವನ್ನು ಲೋಕಕ್ಕೆ ತೋರಲು ಶ್ರೀರಾಮ ಪರೀಕ್ಷೆ ಮಾಡುತ್ತಿದ್ದಾನೆ ಎನ್ನಬೇಕು. ಲಂಕೆಯಿಂದ ಬರುವ ಮೊದಲು ಪುನಃ ಪರೀಕ್ಷೆ ಮಾಡುತ್ತಾನೆ.

ಅಯೋಧ್ಯಾಂ ಗಚ್ಛ ಭರತ ಪ್ರಕೃತೀರನುರಂಜಯ ।
ಶತ್ರುಘ್ನಸಹಿತೋ ವೀರ ಸಹ ಸರ್ವೈರ್ದ್ವಿಜಾತಿಭಿಃ ॥೧೫॥

ಭರತ, ವೀರ, ಅಯೋಧ್ಯೆಗೆ ಹಿಂತಿರುಗು, ಶತ್ರುಘ್ನ ಸಹಿತನಾಗಿ ಎಲ್ಲ ದ್ವಿಜ-ರೊಂದಿಗೆ ರಾಜ್ಯವಾಳಿ ಪ್ರಜೆಗಳನ್ನು ಸಂತೋಷಪಡಿಸು.

ಪ್ರವೇಕ್ಷ್ಯೇ ದಂಡಕಾರಣ್ಯಮಹಮಪ್ಯವಿಲಂಬಯನ್ ।
ಆಭ್ಯಾಂ ತು ಸಹಿತೋ ರಾಜನ್ ವೈದೇಹ್ಯಾ ಲಕ್ಷ್ಮಣೇನ ಚ ॥೧೬॥

ನಾನು ತಡಮಾಡದೆ ಈ ಸೀತಾಲಕ್ಷ್ಮಣರಿಂದ ಸಮೇತನಾಗಿ ದಂಡಕಾರಣ್ಯವನ್ನು ಪ್ರವೇಶಿಸುವೆನು.

ತ್ವಂ ರಾಜಾ ಭರತ ಭವ ಸ್ವಯಂ ನರಾಣಾಂ
ವನ್ಯಾನಾಮಹಮಪಿ ರಾಜರಾಣ್ಮೃಗಾಣಾಮ್ ।
ಗಚ್ಛ ತ್ವಂ ಪುರವರಮದ್ಯ ಸಂಪ್ರಹೃಷ್ಟಃ
ಸಂಹೃಷ್ಟಸ್ತ್ವಹಮಪಿ ದಂಡಕಾನ್ ಪ್ರವೇಕ್ಷ್ಯೇ ॥೧೭॥

ಭರತ, ನೀನು ಮಾನವರಿಗೆ ಸ್ವಯಂ ರಾಜನಾಗು. ನಾನೂ ಕಾಡಿನ ಮೃಗಗಳಿಗೆ ರಾಜನಾಗುವೆನು. ನೀನು ಹೃಷ್ಟನಾಗಿ ಅಯೋಧ್ಯೆಗೆ ಹೋಗು, ನಾನು ಕೂಡ ಹೃಷ್ಟನಾಗಿ ದಂಡಕಾರಣ್ಯವನ್ನು ಪ್ರವೇಶಿಸುವೆನು.

ಛಾಯಾಂ ತೇ ದಿನಕರಭಾಃ ಪ್ರಬಾಧಮಾನಂ
ವರ್ಷತ್ರಂ ಭರತ ಕರೋತು ಮೂರ್ಧ್ನಿ ಶೀತಾಮ್ ।

ಏತೇಷಾಮಹಮಪಿ ಕಾನನದ್ರುಮಾಣಾಂ
ಛಾಯಾಂ ತಾಮತಿಶಯಿನೀಂ ಸುಖೀ ಶ್ರಯಿಷ್ಯೇ ॥೧೮॥

ಭರತ, ನಿನಗೆ ತಲೆಯ ಮೇಲೆ ಬಿಸಿಲನ್ನು ಬಾಧಿಸುವ ಶ್ವೇತಚ್ಛತ್ರವು ಶೀತಲವಾದ ನೆರಳುಂಟುಮಾಡಲಿ. ನಾನು ಆ ಶ್ವೇತಚ್ಛತ್ರದ ನೆರಳಿಗಿಂತಲೂ ಮೇಲೆನಿಸುವ ಕಾಡಿನ ವೃಕ್ಷಗಳ ನೆಳಲನ್ನು ಸುಖವಾಗಿ ಆಶ್ರಯಿಸುತ್ತೇನೆ.

ಶತ್ರುಘ್ನಃ ಕುಶಲಮತಿಸ್ತು ತೇ ಸಹಾಯಃ
ಸೌಮಿತ್ರಿರ್ಮಮ ವಿದಿತಃ ಪ್ರಧಾನಮಿತ್ರಮ್ ।
ಚತ್ವಾರಸ್ತನಯವರಾ ವಯಂ ನರೇಂದ್ರಂ
ಸತ್ಯಸ್ಥಂ ಭರತ ಚರಾಮ ಮಾ ವಿಷೀದ ॥೧೯॥

ಕುಶಲ ಬುದ್ಧಿಯವನಾದ ಶತ್ರುಘ್ನನು ನಿನಗೆ ಸಹಾಯಕನಾಗಿರಲಿ. ಪ್ರಸಿದ್ಧನಾದ ಲಕ್ಷ್ಮಣನು ನನಗೆ ಪ್ರಧಾನ ಮಿತ್ರನಾಗಲಿ. ನಾವು ನಾಲ್ಕು ಮಂದಿ ಮಕ್ಕಳೂ ರಾಜನನ್ನು ಸತ್ಯಪ್ರತಿಜ್ಞನನ್ನಾಗಿ ಮಾಡೋಣ. ವಿಷಾದ ಪಡಬೇಡ.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ನೂರಏಳನೇ ಸರ್ಗ ಮುಗಿಯಿತು.

❖

ಅಷ್ಟಾಧಿಕ ಶತತಮಃ ಸರ್ಗಃ

ಸರ್ಗ – 108

ನಾಸ್ತಿಕವಾದವನ್ನವಲಂಬಿಸಿ ಜಾಬಾಲಿಮುನಿಗಳ ಮಾತು.

ಆಶ್ವಾಸಯಂತಂ ಭರತಂ ಜಾಬಾಲಿರ್ಬ್ರಾಹ್ಮಣೋತ್ತಮಃ ।
ಉವಾಚ ರಾಮಂ ಧರ್ಮಜ್ಞಂ ಧರ್ಮಾಪೇತಮಿದಂ ವಚಃ ॥೧॥

ಬ್ರಾಹ್ಮಣೋತ್ತಮರಾದ ಜಾಬಾಲಿ ಮುನಿಗಳು ಭರತನನ್ನು ಸಂತೈಸುತ್ತಿದ್ದ ಧರ್ಮಜ್ಞನಾದ ಶ್ರೀರಾಮನಿಗೆ ಧರ್ಮವಿರೋಧಿಯಾದ ಮಾತನ್ನು ಹೇಳಲು ತೊಡಗಿದರು.

ಸಾಧು ರಾಘವ ಮಾ ಭೂತ್ತೇ ಬುದ್ಧಿರೇವಂ ನಿರರ್ಥಿಕಾ ।
ಪ್ರಾಕೃತಸ್ಯ ನರಸ್ಯೇವ ಹ್ಯಾರ್ಯಬುದ್ಧೇರ್ಮನಸ್ವಿನಃ ॥೨॥

ರಾಮ, ಮನಸ್ವಿಯಾದ ಒಳ್ಳೆಯ ಬುದ್ಧಿಯವನಾದ ನಿನಗೆ ಅಜ್ಞಮಾನವನಂತೆ ನಿರರ್ಥಕವಾದ ಇಂಥ ಬುದ್ಧಿ ಸರ್ವಥಾ ಬೇಡ.

ಕಃ ಕಸ್ಯ ಪುರುಷೋ ಬಂಧುಃ ಕಿಂ ಕಾರ್ಯಂ ಕಸ್ಯ ಕೇನಚಿತ್ ।
ಯದೇಕೋ ಜಾಯತೇ ಜಂತುರೇಕ ಏವ ವಿನಶ್ಯತಿ ॥೩॥

ಎಲ್ಲರೂ ಬದುಕಿರುವಾಗ ಬಂಧುಗಳು, ಸತ್ತಮೇಲೆ ಯಾರಿಗೆ ಯಾವ ಪುರುಷನು ಬಂಧು? ಯಾರಿಂದ ಯಾರಿಗೆ ಏನಾಗ ಬೇಕಿದೆ? ಏಕೆಂದರೆ ಹುಟ್ಟುವಾಗ ಒಬ್ಬನೆ ಹುಟ್ಟುತ್ತಾನೆ ಸಾಯುವಾಗ ಒಬ್ಬನೆ ಸಾಯುತ್ತಾನೆ.

ತಸ್ಮಾನ್ಮಾತಾ ಪಿತಾ ಚೇತಿ ರಾಮ ಸಜ್ಜೇತ ಯೋ ನರಃ ।
ಉನ್ಮತ್ತ ಇವ ಸ ಜ್ಞೇಯೋ ನಾಸ್ತಿ ಕಶ್ಚಿದ್ಧಿ ಕಸ್ಯಚಿತ್ ॥೪॥

ರಾಮ, ತಾಯಿ ತಂದೆ ಎಂದು ಸತ್ತುಹೋದ ಇನ್ನೊಬ್ಬರಲ್ಲಿ ಆಸಕ್ತನಾಗುವ ಮನುಷ್ಯನು ಉನ್ಮತ್ತನೆಂದೇ ತಿಳಿಯಬೇಕು. ಸತ್ತಮೇಲೆ ಯಾರಿಗೆ ಯಾರೂ ಇಲ್ಲ.

ಯಥಾ ಗ್ರಾಮಾಂತರಂ ಗಚ್ಛನ್ನರಃ ಕಶ್ಚಿತ್ ಕ್ವಚಿದ್ವಸೇತ್ ।
ಉತ್ಸೃಜ್ಯ ಚ ತಮಾವಾಸಂ ಪ್ರತಿಷ್ಠೇತಾಪರೇऽಹನಿ ॥೫॥

ಬೇರೆ ಊರಿಗೆ ಹೋಗುವವನು ದಾರಿಯಲ್ಲಿ ಒಂದೆಡೆ ತಂಗುವ ಮನುಷ್ಯನು ಮರುದಿನ ಆ ಸ್ಥಳವನ್ನು ಬಿಟ್ಟೇ ಹೋಗುತ್ತಾನೆ.

ಏವಮೇವ ಮನುಷ್ಯಾಣಾಂ ಪಿತಾ ಮಾತಾ ಗೃಹಂ ವಸು ।
ಅವಾಸಮಾತ್ರಂ ಕಾಕುತ್ಸ್ಥ ಸಜ್ಜಂತೇ ನಾತ್ರ ಸಜ್ಜನಾಃ ॥೬॥

ಹೀಗೇ ಮನುಷ್ಯರಿಗೆ ತಂದೆ ತಾಯಿ ಮನೆ ಧನ ಕನಕ ಎಲ್ಲವೂ ತತ್ಕಾಲದ ತಂಗುದಾಣ ಮಾತ್ರ. ರಾಮ, ಇವುಗಳಲ್ಲಿ ಸಜ್ಜನರೂ ಆಸಕ್ತರಾಗುವುದಿಲ್ಲ.

ಪಿತ್ರ್ಯಂ ರಾಜ್ಯಂ ಪರಿತ್ಯಜ್ಯ ಸ ನಾರ್ಹಸಿ ನರೋತ್ತಮ ।
ಆಸ್ಥಾತುಂ ಕಾಪಥಂ ದುಃಖಂ ವಿಷಮಂ ಬಹುಕಂಟಕಮ್ ॥೭॥

ಪುರುಷೋತ್ತಮ, ತಂದೆಯಿಂದ ಬಂದ ರಾಜ್ಯವನ್ನು ಬಿಟ್ಟು ದುಃಖಕರವಾದ ವಿಷಮವಾದ ಬಹುಕಂಟಕಗಳಿರುವ ಈ ಅಡ್ಡದಾರಿಯನ್ನು ಹಿಡಿಯಬೇಡ.

ಸಮೃದ್ಧಾಯಾಮಯೋಧ್ಯಾಯಾಮಾತ್ಮಾನಮಭಿಷೇಚಯ ।
ಏಕವೇಣೀಧರಾ ಹಿ ತ್ವಾಂ ನಗರೀ ಸಂಪ್ರತೀಕ್ಷತೇ ॥೮॥

ಅದಕ್ಕೆ ನೀನು ಸಮೃದ್ಧವಾದ ಅಯೋಧ್ಯೆಯಲ್ಲಿ ಅಭಿಷೇಕ ಮಾಡಿಸಿಕೊಳ್ಳು. ಪತಿವಿರಹ ಸೂಚಕವಾಗಿ ಒಂದೇ ಜೆಡೆ ಉಳ್ಳ ಸತಿಯಂತೆ ಅಯೋಧ್ಯೆ ನಿನಗಾಗಿ ಕಾದಿದ್ದಾಳೆ.

ರಾಜಭೋಗಾನನುಭವನ್ ಮಹಾರ್ಹಾನ್ ಪಾರ್ಥಿವಾತ್ಮಜ ।
ವಿಹರ ತ್ವಮಯೋಧ್ಯಾಯಾಂ ಯಥಾ ಶಕ್ರಸ್ತ್ರಿವಿಷ್ಟಪೇ ॥೯॥

ರಾಜಕುಮಾರ, ಅನರ್ಘ್ಯವಾದ ರಾಜಭೋಗಗಳನ್ನು ಅನುಭವಿಸುತ್ತ ಸ್ವರ್ಗ ದಲ್ಲಿ ಇಂದ್ರನು ವಿಹಾರಮಾಡುವಂತೆ ನೀನು ಅಯೋಧ್ಯೆಯಲ್ಲಿ ವಿಹಾರ ಮಾಡು.

ನ ತೇ ಕಶ್ಚಿದ್ದಶರಥಸ್ತ್ವಂ ಚ ತಸ್ಯ ನ ಕಶ್ಚನ ।
ಅನ್ಯೋ ರಾಜಾ ತ್ವಮನ್ಯಃ ಸ ತಸ್ಮಾತ್ ಕುರು ಯದುಚ್ಯತೇ ॥೧೦॥

ಸತ್ತುಹೋಗಿರುವ ದಶರಥ ನಿನಗೆ ಯಾರೂ ಅಲ್ಲ, ನೀನು ಅವನಿಗೆ ಯಾರೂ ಅಲ್ಲ. ಆ ರಾಜನು ಬೇರೆ, ನೀನು ಬೇರೆ. ಅದರಿಂದ ನಾನು ಹೇಳುವಂತೆ ಮಾಡು.

ಬೀಜಮಾತ್ರಂ ಪಿತಾ ಜಂತೋಃ ಶುಕ್ಲಂ ಶೋಣಿತಮೇವ ಚ ।
ಸಂಯುಕ್ತಮೃತುಮನ್ಮಾತ್ರಾ ಪುರುಷಸ್ಯೇಹ ಜನ್ಮ ತತ್ ॥೧೧॥

ಹುಟ್ಟುವವನಿಗೆ ತಂದೆ ಬೀಜಮಾತ್ರ. ಋತುಮತಿಯಾದ ತಾಯಿ ಧರಿಸುವ ಶುಕ್ರಶೋಣಿತಗಳಿಂದ ಪುರುಷನ ಜನನ.

ಗತಃ ಸ ನೃಪತಿಸ್ತತ್ರ ಗಂತವ್ಯಂ ಯತ್ರ ತೇನ ವೈ ।
ಪ್ರವೃತ್ತಿರೇಷಾ ಮರ್ತ್ಯಾನಾಂ ತ್ವಂ ತು ಮಿಥ್ಯಾ ವಿಹನ್ಯಸೇ ॥೧೨॥

ಆ ರಾಜನು ತಾನು ಎಲ್ಲಿಗೆ ಹೋಗಬೇಕಾಗಿತ್ತೋ ಅಲ್ಲಿಗೆ ಹೋಗಿದ್ದಾನೆ. ಇದು ಮರ್ತ್ಯರೆಲ್ಲರ ಪ್ರವೃತ್ತಿ. ನೀನು ವ್ಯರ್ಥವಾಗಿ ಸಂಬಂಧವನ್ನು ಕಲ್ಪಿಸಿಕೊಂಡು ಶೋಕಿಸುವೆ.

ಅರ್ಥಧರ್ಮಪರಾ ಯೇ ಯೇ ತಾಂಸ್ತಾನ್ ಶೋಚಾಮಿ ನೇತರಾನ್ ।
ತೇ ಹಿ ದುಃಖಮಿಹ ಪ್ರಾಪ್ಯ ವಿನಾಶಂ ಪ್ರೇತ್ಯ ಭೇಜಿರೇ ॥೧೩॥

ಅರ್ಥ ಮತ್ತು ಧರ್ಮಗಳನ್ನು ಸತ್ತುಹೋದ ಇನ್ನೊಬ್ಬರಿಗೆಂದು ಕೂಡಿಡಲು ಶ್ರಮಿಸುವವರಿ ಗಾಗಿ ನಾನು ಶೋಕಿಸುತ್ತೇನೆ. ಇತರರಿಗಾಗಿ ಅಲ್ಲ. ಏಕೆಂದರೆ ಗತಿಸಿದ ಬಂಧುಮಿತ್ರರ ಸುಖಕ್ಕಾಗಿ ಅವರು ಕಷ್ಟದಿಂದ ಐಹಿಕಸಂಪತ್ತನ್ನು ಪಾರತ್ರಿಕಸುಖವನ್ನು ಗಳಿಸಿ ತಾವು ಉಣದೆ ಅಂತ್ಯಕಾಲದಲ್ಲಿ ಅದನ್ನು ಬಿಟ್ಟೇ ಸಾಯುತ್ತಾರೆ.

ಅಷ್ಟಕಾ ಪಿತೃದೈವತ್ಯಮಿತ್ಯಯಂ ಪ್ರಸೃತೋ ಜನಃ ।
ಅನ್ನಸ್ಯೋಪದ್ರವಂ ಪಶ್ಯ ಮೃತೋ ಹಿ ಕಿಮಶಿಷ್ಯತಿ ॥೧೪॥

ಅಷ್ಟಕಾ ಎಂಬುದು ಪಿತೃಗಳ ಆರಾಧನೆ ಎಂದು ಜನರು ಅದರಲ್ಲಿ ಪ್ರವೃತ್ತ-ರಾಗುತ್ತಾರೆ. ಆದರೆ, ನೋಡು ಅಲ್ಲಿ ಅನ್ನದ ನಾಶ ಮಾತ್ರ ಆಗುತ್ತದೆ. ಸತ್ತವನು ಉಣ್ಣಲು ಬರುವನೇನು?

ಯದಿ ಭುಕ್ತಮಿಹಾನ್ಯೇನ ದೇಹಮನ್ಯಸ್ಯ ಗಚ್ಛತಿ ।
ದದ್ಯಾತ್ ಪ್ರವಸತಃ ಶ್ರಾದ್ಧಂ ನ ತತ್ ಪಥ್ಯಶನಂ ಭವೇತ್ ॥೧೫॥

ಶ್ರಾದ್ಧದಲ್ಲಿ ಒಬ್ಬ ಬ್ರಾಹ್ಮಣನು ಉಂಡರೆ ಆ ಅನ್ನ ಇನ್ನೊಬ್ಬನ ಹೊಟ್ಟೆಯನ್ನು ಹೋಗಿ ಸೇರುವುದೆ? ಹಾಗಾದರೆ ದೂರಪ್ರವಾಸಕ್ಕೆ ಹೋಗುವವನಿಗೆ ಇಲ್ಲಿಯೇ ಶ್ರಾದ್ಧಮಾಡಬಹುದು, ದಾರಿಯಲ್ಲಿ ಅವನು ಸ್ವತಃ ಉಣಬೇಕಾಗಿಲ್ಲ.

ದಾನಸಂವನನಾ ಹ್ಯೇತೇ ಗ್ರಂಥಾ ಮೇಧಾವಿಭಿಃ ಕೃತಾಃ ।
ಯಜಸ್ವ ದೇಹಿ ದೀಕ್ಷಸ್ವ ತಪಸ್ತಪ್ಯಸ್ವ ಸಂತ್ಯಜ ॥೧೬॥

ಯಾಗ ಮಾಡು, ದಾನ ಮಾಡು, ವ್ರತದೀಕ್ಷೆ ತೊಡು, ತಪಸು ಮಾಡು ಗೃಹತ್ಯಾಗ ಮಾಡು ಹೀಗೆ ಹೇಳುವ ಗ್ರಂಥಗಳೆಲ್ಲವೂ ಧನಿಕರಿಂದ ಧನವನ್ನು ಸೆಳೆದುಕೊಳ್ಳಲು ಬುದ್ಧಿವಂತರು ಮಾಡಿದ ಉಪಾಯಗಳು.

ಸ ನಾಸ್ತಿ ಪರಮಿತ್ಯೇವ ಕುರು ಬುದ್ಧಿಂ ಮಹಾಮತೇ ।
ಪ್ರತ್ಯಕ್ಷಂ ಯತ್ತದಾತಿಷ್ಠ ಪರೋಕ್ಷಂ ಪೃಷ್ಠತಃ ಕುರು ॥೧೭॥

ಮಹಾಮತಿಯಾದ ರಾಮನೆ, ಪರಲೋಕವೆಂಬುದು ಇಲ್ಲವೆಂದು ನಿಶ್ಚಯ ಮಾಡಿಕೊಳ್ಳು. ಪ್ರತ್ಯಕ್ಷವಾಗಿ ಕಾಣುವುದನ್ನೇ ನಂಬು. ಕಾಣದುದನ್ನು ಕಡೆಗಣಿಸು.

ಸತಾಂ ಬುದ್ಧಿಂ ಪುರಸ್ಕೃತ್ಯ ಸರ್ವಲೋಕನಿದರ್ಶಿನೀಮ್ ।
ರಾಜ್ಯಂ ತ್ವಂ ಪ್ರತಿಗೃಹ್ಣೀಷ್ವ ಭರತೇನ ಪ್ರಸಾದಿತಃ ॥೧೮॥

ಸರ್ವಲೋಕ ಸಮ್ಮತವಾದ ಸಜ್ಜನರ ಬುದ್ಧಿಯನ್ನು ಅನುಸರಿಸಿ ಭರತನು ಹೇಳಿದ ನಯವಾದ ಮಾತಿನಂತೆ ರಾಜ್ಯವನ್ನು ಸ್ವೀಕರಿಸು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ನೂರಎಂಟನೇ ಸರ್ಗ ಮುಗಿಯಿತು.

❖

ನವಾಧಿಕ ಶತತಮಃ ಸರ್ಗಃ

ಸರ್ಗ – 109

ಶ್ರೀರಾಮನು ನಾಸ್ತಿಕವಾದವನ್ನು ನಿರಾಕರಿಸಿ ಸತ್ಯವನ್ನು ಪ್ರಶಂಸಿಸುವುದು.

ಜಾಬಾಲೇಸ್ತು ವಚಃ ಶ್ರುತ್ವಾ ರಾಮಃ ಸತ್ಯವತಾಂ ವರಃ ।
ಉವಾಚ ಪರಯಾ ಸೂಕ್ತ್ಯಾ ಸ್ವಬುದ್ಧ್ಯಾ ಚಾವಿಪನ್ನಯಾ ॥೧॥

ಜಾಬಾಲಿಯ ಮಾತನ್ನು ಕೇಳಿ ಸತ್ಯನಿಷ್ಠರಲ್ಲಿ ಉತ್ತಮನಾದ ಶ್ರೀರಾಮನು ಬುದ್ಧಿಸ್ಥಿರತೆಯನ್ನು ಕಳೆದುಕೊಳ್ಳದೆ ಒಳ್ಳೆಯ ಮಾತಿನಿಂದ ಜಾಬಾಲಿಗೆ ಉತ್ತರಿಸಿದನು.

ಭವಾನ್ ಮೇ ಪ್ರಿಯಕಾಮಾರ್ಥಂ ವಚನಂ ಯದಿಹೋಕ್ತವಾನ್ ।
ಅಕಾರ್ಯಂ ಕಾರ್ಯಸಂಕಾಶಮಪಥ್ಯಂ ಪಥ್ಯಸಂಮಿತಮ್ ॥೨॥

ನನ್ನ ಸಂತೋಷಕ್ಕಾಗಿ ಅನುನಯಕ್ಕಾಗಿ ನೀವು ಹೇಳಿದ್ದು, ಮಾಡಲು ಯೋಗ್ಯ-ವೆಂಬಂತೆ ಕಂಡರೂ ಮಾಡಲು ಯೋಗ್ಯವಲ್ಲ. ಹಿತಕರವೆಂಬಂತೆ ಕಂಡರೂ ಹಿತಕರವಲ್ಲ.

ನಿರ್ಮರ್ಯಾದಸ್ತು ಪುರುಷಃ ಪಾಪಾಚಾರಸಮನ್ವಿತಃ ।
ಮಾನಂ ನ ಲಭತೇ ಸತ್ಸು ಭಿನ್ನಚಾರಿತ್ರದರ್ಶನಃ ॥೩॥

ಎಲ್ಲ ನಿಯಮಗಳನ್ನು ಉಲ್ಲಂಘಿಸಿ ಪಾಪಾಚರಣೆ ಮಾಡುವ ವ್ಯಕ್ತಿಯು ಸಜ್ಜನರಿಗಿಂತ ವಿಲಕ್ಷಣವಾದ ಶೀಲ ವಿಚಾರ ಉಳ್ಳವನಾಗಿದ್ದು ಸಜ್ಜನರಿಂದ ಮಾನ್ಯನೆನಿಸುವುದಿಲ್ಲ.

ಕುಲೀನಮಕುಲೀನಂ ವಾ ವೀರಂ ಪುರುಷಮಾನಿನಮ್ ।
ಚಾರಿತ್ರಮೇವ ವ್ಯಾಖ್ಯಾತಿ ಶುಚಿಂ ವಾ ಯದಿ ವಾಶುಚಿಮ್ ॥೪॥

ಒಬ್ಬನ ನಡತೆಯೆ ಅವನು ಒಳ್ಳೆಯ ಕುಲದವನೆ ಹೀನಕುಲದವನೆ ಧೀರನೆ ಧೀರನೆಂದು ಹೇಳಿಕೊಳ್ಳುವವನೆ ಶುಚಿಯೆ ಅಶುಚಿಯೆ ಎಂಬುದನ್ನು ನಿರ್ಣಯಿಸಿ ಕೊಡುತ್ತದೆ.

ಅನಾರ್ಯಸ್ತ್ವಾರ್ಯಸಂಕಾಶಃ ಶೌಚಾದ್ಧೀನಸ್ತಥಾ ಶುಚಿಃ ।
ಲಕ್ಷಣ್ಯವದಲಕ್ಷಣ್ಯೋ ದುಃಶೀಲಃ ಶೀಲವಾನಿವ ॥೫॥

ಒಳ್ಳೆಯ ಶೀಲಸದಾಚಾರಗಳನ್ನು ಪುರಸ್ಕರಿಸದಿದ್ದರೆ ದುರ್ಜನನು ಸಜ್ಜನನಂತೆ ಅಶುಚಿಯು ಶುಚಿಯಂತೆ, ದುರ್ಲಕ್ಷಣದವನು ಒಳ್ಳೆಯ ಲಕ್ಷಣ ಉಳ್ಳವನಂತೆ ದುಃಶೀಲದವನು ಶೀಲವಂತನಂತೆ ಕಾಣುತ್ತಾನೆ. ಇಬ್ಬರಲ್ಲಿ ಏನೂ ವೈಲಕ್ಷಣ್ಯವಿಲ್ಲ.

ಅಧರ್ಮಂ ಧರ್ಮವೇಷೇಣ ಯದೀಮಂ ಲೋಕಸಂಕರಮ್ ।
ಅಭಿಪತ್ಸ್ಯೇ ಶುಭಂ ಹಿತ್ವಾ ಕ್ರಿಯಾಂ ವಿಧಿವಿವರ್ಜಿತಾಮ್ ॥೬॥

ಧರ್ಮದಂತೆ ಕಾಣುವ ಅಧರ್ಮವು ಲೋಕಸಂಕರವನ್ನುಂಟು ಮಾಡುತ್ತದೆ. ಒಳ್ಳೆಯವರು ಕೆಟ್ಟವರೆನ್ನುವ ಭೇದವಿಲ್ಲದಂತೆ ಮಾಡುತ್ತದೆ. ಇಂಥ ಅಧರ್ಮ ವನ್ನು ನಾನು ಸ್ವೀಕರಿಸಿದರೆ ಕರ್ಮವಿಧಿ ರಹಿತವಾದ ಕ್ರಿಯೆಯನ್ನು ಮಾಡಿ ಶುಭವನ್ನು ಬಿಟ್ಟು ಅಶುಭವನ್ನು ಹೊಂದುವೆನು.

ಯಃಶಾಸ್ತ್ರವಿಧಿಮುತ್‌ಸೃಜ್ಯ ವರ್ತತೇ ಕಾಮಕಾರತಃ
ನ ಸ ಸಿದ್ಧಿಮವಾಪ್ನೋತಿ ನ ಸುಖಂ ನ ಪರಾಂ ಗತಿಂ ॥

ಎಂದು ಭಗವದ್ಗೀತೆಯಲ್ಲಿ ಹೇಳಿದ್ದು ಇದನ್ನೆ.

ಕಶ್ಚೇತಯಾನಃ ಪುರುಷಃ ಕಾರ್ಯಾಕಾರ್ಯವಿಚಕ್ಷಣಃ ।
ಬಹು ಮಂಸ್ಯತಿ ಮಾಂ ಲೋಕೇ ದುರ್ವೃತ್ತಂ ಲೋಕದೂಷಣಮ್ ॥೭

ಲೋಕದಲ್ಲಿ ಕಾರ್ಯ ಅಕಾರ್ಯ ವಿವೇಕಉಳ್ಳ ಯಾವ ಬುದ್ಧಿಶಾಲಿ ಪುರುಷನು ನಿನ್ನ ಉಪದೇಶವನ್ನು ಅನುಸರಿಸಿ ಕೆಟ್ಟ ನಡತೆಯಿಂದ ಲೋಕವನ್ನೇ ಹಾಳುಮಾಡುವ ನನ್ನನ್ನು ಆದರದಿಂದ ಕಾಣುವನು?

ಕಸ್ಯ ಯಾಸ್ಯಾಮ್ಯಹಂ ವೃತ್ತಂ ಕೇನ ವಾ ಸ್ವರ್ಗಮಾಪ್ನುಯಾಮ್ ।
ಅನಯಾ ವರ್ತಮಾನೋऽಹಂ ವೃತ್ತ್ಯಾ ಹೀನಪ್ರತಿಜ್ಞಯಾ ॥೮॥

ನಿನ್ನ ಉಪದೇಶಾನುಸಾರವಾಗಿ ಪ್ರತಿಜ್ಞಾಪಾಲನ ನಿಯಮವನ್ನು ಬಿಟ್ಟು ಯಾರ ನಡತೆಯನ್ನು ಅನುಸರಿಸಲಿ, ಯಾವ ಸಾಧನದಿಂದ ಸ್ವರ್ಗ ಪಡೆಯಲಿ?

ಪರಲೋಕವನ್ನು ನಂಬದ ಚಾರ್ವಾಕವಾದಿ ಜಾಬಾಲಿಯು 'ಸ್ವರ್ಗದಲ್ಲಿ ದೇವೇಂದ್ರನಂತೆ ಅಯೋಧ್ಯೆಯಲ್ಲಿ ಶ್ರೀರಾಮ ವಿಹರಿಸಲಿ' ಎಂದು ಸ್ವರ್ಗದ ದೃಷ್ಟಾಂತವನ್ನು ಕೊಡುತ್ತಾನೆ. ಶ್ರೀರಾಮನು ಕೂಡ ನಿನ್ನ ಮತವನ್ನು ನಾನು

ಸ್ವೀಕರಿಸಿದರೆ ಸ್ವರ್ಗಕ್ಕೆ ಹೇಗೆ ಹೋದೇನು ಎನ್ನುತ್ತಾನೆ. ಎರಡೂ ಅಸಂಗತವಲ್ಲವೆ? ಎಂದರೆ ಇದು ಚಾರ್ವಾಕಮತಬೋಧನೆಯೂ ಅಲ್ಲ, ಅದರ ನಿರಾಕರಣೆಯೂ ಅಲ್ಲ. ಶ್ರೀರಾಮನು ಕರ್ಮಬದ್ಧನಲ್ಲದ ಸ್ವತಂತ್ರನಾದ ಪರಮಾತ್ಮ. ಅವನಿಗೆ ಪಿತನಾರು? ಪಿತೃವಾಕ್ಯ ಪರಿಪಾಲನೆ ಅವನಿಗೆ ಹೇಗೆ ಧರ್ಮ? ಅವನಿಗೆ ಏಕೆ ಈ ವೇದಧರ್ಮದಲ್ಲಿ ಆಗ್ರಹ? ಭಗವಂತನಾದ ಅವನು ಭಕ್ತನಾದ ಭರತನ ಪ್ರಾರ್ಥನೆಯಂತೆ ಅಯೋಧ್ಯೆಯ ಸಿಂಹಾಸನದಲ್ಲಿ ಕುಳಿತು ರಾಜ್ಯವಾಳಲಿ. ಎಲ್ಲರ ಕಣ್ಣಿಗೆ ಹಬ್ಬ ಉಂಟುಮಾಡಲಿ ಎಂದು ಜಾಬಾಲಿ ಹೇಳುತ್ತಾನೆ. ಹೀಗೆ ತಾನು ವೇದಧರ್ಮವನ್ನು ಬಿಟ್ಟರೆ ಸಜ್ಜನರೂ ಬಿಡುತ್ತಾರೆ. 'ಉತ್ಸೀದೇಯಿಯು ರಿಮೇ ಲೋಕಾಃ ನಕುರ್ಯಾಂ ಕರ್ಮಚೇದಹಂ' (ಗೀತಾ) ಆಗ ಅವರು ಯಾವರೀತಿ ಸ್ವರ್ಗಸಾಧನೆ ಮಾಡಿಕೊಳ್ಳುವರೆಂದು ಶ್ರೀರಾಮ ಹೇಳುತ್ತಿದ್ದಾನೆ. ವಸ್ತುತಃ ಇದು ಭರತನದೇ ವಾದ. ಶ್ರೀರಾಮನು ಕ್ಲೇಶಕರವಾದ ಈ ವನವಾಸ ಮಾಡುವುದನ್ನು ಕಂಡಾಗ ಅವನಿಗೆ ತಡೆಯಲಾಗದಷ್ಟು ಬಹಳ ವೇದನೆಯಾಗುತ್ತದೆ. 'ಈ ವೈದಿಕಧರ್ಮವನ್ನೇ ನೀನೇಕೆ ಬಿಡಬಾರದು?' ಎಂದು ಜಾಬಾಲಿಯ ಮುಖದಿಂದ ಭರತನೇ ಹೇಳಿಸುತ್ತಿದ್ದಾನೆ.

ಕಾಮವೃತ್ತಸ್ತ್ವಯಂ ಲೋಕಃ ಕೃತ್ಸ್ನಃ ಸಮುಪವರ್ತತೇ ।
ಯದ್‌ವೃತ್ತಾಃ ಸಂತಿ ರಾಜಾನಸ್ತದ್‌ವೃತ್ತಾಃ ಸಂತಿ ಹಿ ಪ್ರಜಾಃ ॥೯॥

ರಾಜನ ನಡತೆ ಹೇಗೋ ಹಾಗೇ ಪ್ರಜೆಗಳ ನಡತೆಯೂ ಇರುತ್ತದೆ. ಅದರಿಂದ ನಾನು ಯಥೇಚ್ಛ ನಡೆದುಕೊಂಡರೆ ಲೋಕವೆಲ್ಲವೂ ಹಾಗೇ ಸ್ವಚ್ಛಂದವಾಗಿ ಪ್ರವೃತ್ತಿ ಮಾಡುತ್ತದೆ. ಲೋಕ ಹಾಳಾಗುತ್ತದೆ.

ಸತ್ಯಮೇವಾನೃಶಂಸಂ ಚ ರಾಜವೃತ್ತಂ ಸನಾತನಮ್ ।
ತಸ್ಮಾತ್ ಸತ್ಯಾತ್ಮಕಂ ರಾಜ್ಯಂ ಸತ್ಯೇ ಲೋಕಃ ಪ್ರತಿಷ್ಠಿತಃ ॥೧೦॥

ರಾಜರ ನಡತೆ ಸತ್ಯಾತ್ಮಕ, ದಯಾತ್ಮಕ, ಸನಾತನ. ಅದರಿಂದ ರಾಜ್ಯಭಾರವೂ ಸತ್ಯಾತ್ಮಕ ಸಮಸ್ತಲೋಕವೂ ಸತ್ಯಧರ್ಮದಿಂದಲೇ ಹಾಳಾಗದೆ ಉಳಿದಿದೆ.

ಋಷಯಶ್ಚೈವ ದೇವಾಶ್ಚ ಸತ್ಯಮೇವ ಹಿ ಮೇನಿರೇ ।
ಸತ್ಯವಾದೀ ಹಿ ಲೋಕೇಽಸ್ಮಿನ್ ಪರಮಂ ಗಚ್ಛತಿ ಕ್ಷಯಮ್ ॥೧೧॥

ಋಷಿಗಳೂ ದೇವತೆಗಳೂ ಸತ್ಯವನ್ನೇ ಆಶ್ರಯವೆಂದು ಬಗೆದಿದ್ದಾರೆ. ಸತ್ಯ-ವಾದಿಯು ಈ ಲೋಕದಲ್ಲಿ ಉತ್ತಮ ಸ್ಥಾನವನ್ನು ಪಡೆಯುತ್ತಾನೆ.

ಉದ್ವಿಜಂತೇ ಯಥಾ ಸರ್ಪಾನ್ನರಾದನೃತವಾದಿನಃ ।
ಧರ್ಮಃ ಸತ್ಯಂ ಪರೋ ಲೋಕೇ ಮೂಲಂ ಸರ್ವಸ್ಯ ಚೋಚ್ಯತೇ॥೧೨॥

ಸುಳ್ಳಾಡುವವನನ್ನು ಕಂಡರೆ ಜನರು ಸರ್ಪವನ್ನು ನೋಡಿದಂತೇ ಭಯ ಪಡುತ್ತಾರೆ. ಲೋಕದಲ್ಲಿ ಸತ್ಯವೇ ಪರಮಧರ್ಮ ಮತ್ತು ಸ್ವರ್ಗಪ್ರಾಪ್ತಿಗೆ ಮೂಲಕಾರಣವೆನಿಸಿದೆ.

ಸತ್ಯಮೇವೇಶ್ವರೋ ಲೋಕೇ ಸತ್ಯೇ ಪದ್ಮಾ ಪ್ರತಿಷ್ಠಿತಾ ।
ಸತ್ಯಮೂಲಾನಿ ಸರ್ವಾಣಿ ಸತ್ಯಾನ್ನಾಸ್ತಿ ಪರಂ ಪದಮ್ ॥೧೩॥

ಸತ್ಯವೇ ಲೋಕದಲ್ಲಿ ಪರಮಾತ್ಮನ ಪ್ರಾಪ್ತಿಗೆ ಸಾಧನ. ಸತ್ಯದಲ್ಲಿಯೇ ಎಲ್ಲ ಧರ್ಮ ನಿಂತಿದೆ. ಎಲ್ಲ ಕರ್ಮಗಳೂ ಸತ್ಯಮೂಲಕವಾಗಿವೆ. ಸತ್ಯಕ್ಕಿಂತ ಉತ್ತಮವಾದ ಆಶ್ರಯವಿಲ್ಲ.

ದತ್ತಮಿಷ್ಟಂ ಹುತಂ ಚೈವ ತಪ್ತಾನಿ ಚ ತಪಾಂಸಿ ಚ ।
ವೇದಾಃ ಸತ್ಯಪ್ರತಿಷ್ಠಾನಾಸ್ತಸ್ಮಾತ್ ಸತ್ಯಪರೋ ಭವೇತ್ ॥೧೪॥

ದಾನ ಯಾಗ ಹೋಮಗಳು ತಪಸ್ಸುಗಳು ವೇದಗಳು ಎಲ್ಲವೂ ಸತ್ಯದ ಆಧಾರದಲ್ಲಿಯೆ ನಿಂತಿವೆ. ಅದರಿಂದ ಸತ್ಯ ಪರನಾಗಬೇಕು.

ಏಕಃ ಪಾಲಯತೇ ಲೋಕಮೇಕಃ ಪಾಲಯತೇ ಕುಲಮ್ ।
ಮಜ್ಜತ್ಯೇಕೋ ಹಿ ನಿರಯೇ ಏಕಃ ಸ್ವರ್ಗೇ ಮಹೀಯತೇ ॥೧೫॥

ಒಬ್ಬನು ಲೋಕವನ್ನಾಳಿದರೆ ಇನ್ನೊಬ್ಬ ತನ್ನ ಮನೆಯನ್ನು ಮಾತ್ರ ಆಳುತ್ತಾನೆ.. ಒಬ್ಬನು ನರಕದಲ್ಲಿ ಮುಳುಗುತ್ತಾನೆ. ಇನ್ನೊಬ್ಬನು ಸ್ವರ್ಗದಲ್ಲಿ ಮೆರೆಯುತ್ತಾನೆ. ಇದು ಸತ್ಯ ಧರ್ಮದ ಪ್ರಭಾವ.

ಸೋಽಹಂ ಪಿತುರ್ನಿಯೋಗಂ ತು ಕಿಮರ್ಥಂ ನಾನುಪಾಲಯೇ ।
ಸತ್ಯಪ್ರತಿಶ್ರವಃ ಸತ್ಯಂ ಸತ್ಯೇನ ಸಮಯೀಕೃತಮ್ ॥೧೬॥

ಸತ್ಯಪ್ರತಿಜ್ಞನು ನಾನು. ಪಿತನ ಸತ್ಯವಾದ ಆಜ್ಞೆಯನ್ನು ನಾನೇಕೆ ಪಾಲನೆ ಮಾಡದೆ ಬಿಡಲಿ? ಪಿತನು ಸತ್ಯದ ಮೇಲೆ ಆಣೆ ಇಟ್ಟು ಸತ್ಯ ನುಡಿದಿದ್ದನು.

ನೈವ ಲೋಭಾನ್ನ ಮೋಹಾದ್ವಾ ನ ಹ್ಯಜ್ಞಾನಾತ್ತಮೋಽನ್ವಿತಃ ।
ಸೇತುಂ ಸತ್ಯಸ್ಯ ಭೇತ್ಸ್ಯಾಮಿ ಗುರೋಃ ಸತ್ಯಪ್ರತಿಶ್ರವಃ ॥೧೭॥

ಸತ್ಯಪ್ರತಿಜ್ಞನಾದ ನಾನು ಲೋಭದಿಂದಾಗಲಿ ವ್ಯಾಮೋಹದಿಂದಾಗಲಿ ಅಜ್ಞಾನ-ದಿಂದಾಗಲಿ ಅಧರ್ಮೋಪದೇಶವೆಂಬ ತಮಸ್ಸಿನಿಂದ ಆವೃತನಾಗಿ ಪಿತನ ಸತ್ಯದ ಸೇತುವನ್ನು ಮುರಿಯುವುದಿಲ್ಲ.

ಅಸತ್ಯಸಂಧಸ್ಯ ಸತಶ್ಚಲಸ್ಯಾಸ್ಥಿರಚೇತಸಃ ।
ನೈವ ದೇವಾ ನ ಪಿತರಃ ಪ್ರತೀಚ್ಛಂತೀತಿ ನಃ ಶ್ರುತಮ್ ॥೧೮॥

ಸತ್ಯಸಂಧನಲ್ಲದ ಚಂಚಲಸ್ವಭಾವವಿರುವ ಅಸ್ಥಿರ ಬುದ್ಧಿಯವನು ಹವ್ಯಕವ್ಯ-ಗಳನ್ನು ನೀಡಿದರೆ ದೇವತೆಗಳು ಪಿತೃಗಳು ಸ್ವೀಕರಿಸುವುದಿಲ್ಲ ಎಂಬುದನ್ನು ನಾನು ಕೇಳಿದ್ದೇನೆ.

ಪ್ರತ್ಯಗಾತ್ಮಮಿಮಂ ಧರ್ಮಂ ಸತ್ಯಂ ಪಶ್ಯಾಮ್ಯಹಂ ಧ್ರುವಮ್ ।
ಭಾರಃ ಸತ್ಪುರುಷೈಶ್ಚೀರ್ಣಸ್ತದರ್ಥಮಭಿಮನ್ಯತೇ ॥೧೯॥

ಪ್ರತಿ ಜೀವಾತ್ಮರಲ್ಲಿ ಮುಖ್ಯವಾದ ಈ ಸತ್ಯಧರ್ಮವನ್ನು ಸರ್ವಸಾಕ್ಷಿಯಾಗಿ ನಾನು ನೋಡುತ್ತಿದ್ದೇನೆ. ಈ ಸತ್ಯಧರ್ಮಕ್ಕಾಗಿ ಸಜ್ಜನರು ಧರಿಸುವ ಜಟಾಭಾರವನ್ನು ನಾನೂ ಧರಿಸುತ್ತೇನೆ.

ಕ್ಷಾತ್ರಂ ಧರ್ಮಮಹಂ ತ್ಯಕ್ಷ್ಯೇ ಹ್ಯಧರ್ಮಂ ಧರ್ಮಸಂಹಿತಮ್ ।
ಕ್ಷುದ್ರೈರ್ನೃಶಂಸೈರ್ಲುಬ್ಧೈಶ್ಚ ಸೇವಿತಂ ಪಾಪಕರ್ಮಭಿಃ ॥೨೦॥

ಧರ್ಮದಂತೆ ಕಾಣುವ ಅಧರ್ಮವೇ ಆಗಿರುವ ಕ್ಷಾತ್ರಧರ್ಮವನ್ನು ನಾನು ತ್ಯಜಿಸುತ್ತೇನೆ. ಅದನ್ನು ಕ್ಷುದ್ರರು ಕ್ರೂರಿಗಳು ಲೋಭಿಗಳು ಪಾಪಕರ್ಮಿಗಳು ಅನುಸರಿಸುತ್ತಾರೆ.

ವನವಾಸ ಮಾಡೆನ್ನುವ ಪಿತೃವಚನವನ್ನು ಉಲ್ಲಂಘಿಸಿ ರಾಜ್ಯ ಸಿಂಹಾಸನ-ವೇರುವ ಕ್ಷಾತ್ರಧರ್ಮವನ್ನಾಚರಿಸೆಂದು ಭರತ ಹೇಳುತ್ತಾನೆ. ಆದರೆ ಅದು ನಿಜವಾಗಿ ಕ್ಷಾತ್ರಧರ್ಮವೇ ಅಲ್ಲ. ಧರ್ಮದಂತೆ ಮೇಲುನೋಟಕ್ಕೆ ಕಾಣುವ ಅಧರ್ಮವದು. ಗುರುಹಿರಿಯರ ಆಶೀರ್ವಾದ ಪಡೆದು ಸಿಂಹಾಸನವೇರಬೇಕು. ಅದು ನಿಜವಾದ ಕ್ಷಾತ್ರಧರ್ಮ ಎನ್ನುತ್ತಾನೆ ರಾಮ. ಕ್ಷಾತ್ರಧರ್ಮವನ್ನೇ ಬಿಡಲು ನಾನು ಸಿದ್ಧನೆನ್ನುತ್ತಿಲ್ಲ.

ಕಾಯೇನ ಕುರುತೇ ಪಾಪಂ ಮನಸಾ ಸಂಪ್ರಧಾರ್ಯ ಚ ।
ಅನೃತಂ ಜಿಹ್ವಯಾ ಚಾಹ ತ್ರಿವಿಧಂ ಕರ್ಮ ಪಾತಕಮ್ ॥೨೧॥

ಮನಸಿನಲ್ಲಿ ಅನೃತರೂಪವಾದ ಪಾಪಕರ್ಮವನ್ನು ಸಂಕಲ್ಪಿಸಿ ಶರೀರದಿಂದ ಅದನ್ನು ಮಾಡುತ್ತಾನೆ, ಬಾಯಿಂದಲೂ ಹೇಳುತ್ತಾನೆ. ಹೀಗೆ ಅನೃತವೆಂಬ ಪಾತಕವು ಶಾರೀರ ವಾಚಿಕ ಮಾನಸಿಕ ಎಂದು ಮೂರು ಬಗೆಯಾಗುತ್ತದೆ.

ವನವಾಸ ಮಾಡೆಂದು ಪಿತನಾಜ್ಞೆ ಬಂದಾಗ ಮಾಡುವೆನೆಂದಿದ್ದೆ. ಈಗ ವನವಾಸ ಮಾಡಲಾರೆ ಎಂದು ಮನಸಿನಲ್ಲಿ ಆಲೋಚಿಸುವುದು ಮಾನಸಿಕವಾದ ಅನೃತರೂಪ ಪಾತಕ. ವನವಾಸ ಮಾಡಲಾರೆ ಎಂದು ಬಾಯಿಂದ ಹೇಳಿದರೆ ಅದು ವಾಚಿಕವಾದ ಅನೃತರೂಪವಾದ ಪಾತಕ. ವನವಾಸವನ್ನು ಬಿಟ್ಟು ರಾಜ್ಯ ಸಿಂಹಾಸನವೇರುವುದು ಕಾಯಿಕವಾದ ಅನೃತರೂಪ ಪಾತಕ. ಅದರಿಂದ ನಾನು ಸಿಂಹಾಸನವೇರಿದರೆ ತ್ರಿವಿಧವಾದ ಅನೃತರೂಪ ಪಾತಕ ಮಾಡಿದಂತಾಗುತ್ತದೆ.

ಭೂಮಿಃ ಕೀರ್ತಿರ್ಯಶೋ ಲಕ್ಷ್ಮೀಃ ಪುರುಷಂ ಪ್ರಾರ್ಥಯಂತಿ ಹಿ ।
ಸತ್ಯಂ ಸಮನುವರ್ತಂತೇ ಸತ್ಯಮೇವ ಭಜೇತ್ತತಃ ॥೨೨॥

ಸತ್ಯನಿಷ್ಠನಾದ ಪುರುಷನನ್ನು ಭೂಮಿ ಕೀರ್ತಿ ಯಶಸ್ಸು ಮತ್ತು ಸಂಪತ್ತು ಎಲ್ಲವೂ ಸ್ವತಃ ಬಂದು ಸೇರಲು ಬಯಸುತ್ತವೆ. ಕೊನೆಯಲ್ಲಿ ಅವನು ಸ್ವರ್ಗ ಪಡೆಯಲಿ ಎಂದೂ ಇಚ್ಛಿಸುತ್ತವೆ.

ಸತ್ಯನಿಷ್ಠನಿಗೆ ಭೂಮಿ, ಕೀರ್ತಿ, ಯಶಸ್ಸು, ಸಂಪತ್ತುಗಳು ಇಹದಲ್ಲಿ, ಸ್ವರ್ಗವು ಪರದಲ್ಲಿ ಅನಾಯಾಸವಾಗಿ ಲಭ್ಯವಾಗುತ್ತವೆ.

ಶ್ರೇಷ್ಠಂ ಹ್ಯನಾರ್ಯಮೇವ ಸ್ಯಾದ್ಯದ್ಭವಾನವಧಾರ್ಯ ಮಾಮ್ ।
ಆಹ ಯುಕ್ತಿಕರೈರ್ವಾಕ್ಯೈರಿದಂ ಭದ್ರಂ ಕುರುಷ್ವ ಹ ॥೨೩॥

ಇದು ಶ್ರೇಷ್ಠ ಮಂಗಳಕರವಾದ ಕಾರ್ಯ ಇದನ್ನು ಮಾಡೆಂದು ನೀವು ನಿಶ್ಚಯಿಸಿ ಯುಕ್ತಿಯುಕ್ತವಾದ ಮಾತುಗಳಿಂದ ನೀವೇನು ಹೇಳಿರುವಿರೋ ಅದನ್ನು ನಾನು ಮಾಡಿದರೆ ಅನಾರ್ಯಕಾರ್ಯವಾಗುವುದು.

ಕಥಂ ಹ್ಯಹಂ ಪ್ರತಿಜ್ಞಾಯ ವನವಾಸಮಿಮಂ ಗುರೌ ।
ಭರತಸ್ಯ ಕರಿಷ್ಯಾಮಿ ವಚೋ ಹಿತ್ವಾ ಗುರೋರ್ವಚಃ ॥೨೪॥

ಈ ವನವಾಸವನ್ನು ಮಾಡುವೆನೆಂದು ತಂದೆಯ ಬಳಿ ಪ್ರತಿಜ್ಞೆಮಾಡಿ ತಂದೆಯ ಮಾತನ್ನು ಬಿಟ್ಟು ಭರತನ ಮಾತನ್ನು ಹೇಗೆ ನಡೆಸಬಲ್ಲೆ?

ಸ್ಥಿರಾ ಮಯಾ ಪ್ರತಿಜ್ಞಾತಾ ಪ್ರತಿಜ್ಞಾ ಗುರುಸನ್ನಿಧೌ ।
ಪ್ರಹೃಷ್ಯಮಾಣಾ ಸಾ ದೇವೀ ಕೈಕೇಯೀ ಚಾಭವತ್ತದಾ ॥೨೫॥

ತಂದೆಯ ಬಳಿ ನಾನು ಸ್ಥಿರವಾದ ಪ್ರತಿಜ್ಞೆ ಮಾಡಿರುವೆನು. ಆಗ ದೇವಿ ಕೈಕೇಯಿಯೂ ಸಂತುಷ್ಟಳಾಗಿದ್ದಳು.

ವನವಾಸಂ ವಸನ್ನೇವಂ ಶುಚಿರ್ನಿಯತಭೋಜನಃ ।
ಮೂಲೈಃ ಪುಷ್ಪೈಃ ಫಲೈಃ ಪುಣ್ಯೈಃ ಪಿತೄನ್ ದೇವಾಂಶ್ಚ ತರ್ಪಯನ್॥

ಅದರಿಂದ ಮುಂದೆಯೂ ನಾನು ಹೀಗೇ ವನವಾಸಮಾಡುತ್ತ ಶುಚಿಯಾಗಿದ್ದು ನಿಯಮಿತವಾದ ಆಹಾರವನ್ನೇ ಸೇವಿಸುತ್ತೇನೆ. ಪವಿತ್ರವಾದ ಗಡ್ಡೆಗೆಣಸು ಹೂ ಹಣ್ಣುಗಳಿಂದ ಪಿತೃಗಳನ್ನು ದೇವತೆಗಳನ್ನು ಆರಾಧಿಸುತ್ತಿರುತ್ತೇನೆ.

ಸಂತುಷ್ಟ ಪಂಚವರ್ಗೋಽಹಂ ಲೋಕಯಾತ್ರಾಂ ಪ್ರವರ್ತಯೇ ।
ಅಕುಹಃ ಶ್ರದ್ದಾಧಾನಃ ಸನ್ ಕಾರ್ಯಾಕಾರ್ಯವಿಚಕ್ಷಣಃ ॥೨೭॥

ಪಂಚೇಂದ್ರಿಯಗಳನ್ನು ಸಂತುಷ್ಟವಾಗಿರಿಸಿಕೊಂಡು ಲೋಕರೀತಿಯ ಜೀವನವನ್ನು ನಿರ್ವಾಹಮಾಡುತ್ತೇನೆ. ಕಪಟವಿಲ್ಲದೆ ಶ್ರದ್ಧೆಯಿಂದ ಕಾರ್ಯ ಅಕಾರ್ಯ ವಿವೇಚನೆ ಮಾಡುತ್ತೇನೆ.

ಕರ್ಮಭೂಮಿಮಿಮಾಂ ಪ್ರಾಪ್ಯ ಕರ್ತವ್ಯಂ ಕರ್ಮ ಯಚ್ಶುಭಮ್ ।
ಅಗ್ನಿರ್ವಾಯುಶ್ಚ ಸೋಮಶ್ಚ ಕರ್ಮಣಾಂ ಫಲಭಾಗಿನಃ ॥೨೮॥

ಈ ಕರ್ಮಭೂಮಿಯಲ್ಲಿ ಜನ್ಮ ತಳೆದಮೇಲೆ ಶುಭಕರ್ಮಗವನ್ನೇ ಮಾಡಬೇಕು. ಅಗ್ನಿ ವಾಯು ಸೋಮ ದೇವತೆಗಳೂ ಕೂಡ ಇಲ್ಲಿ ಕರ್ಮಮಾಡಿ ಅವರವರ ಕರ್ಮಗಳ ಫಲಕ್ಕೇ ಅವರು ಭಾಗಿಗಳಾದರು. ಅಗ್ನಿ ವಾಯು ಸೋಮಪದವಿಗಳನ್ನು ಪಡೆದರು.

ಶತಂ ಕ್ರತೂನಾಮಾಹೃತ್ಯ ದೇವರಾಟ್ ತ್ರಿದಿವಂ ಗತಃ ।
ತಪಾಂಸ್ಯುಗ್ರಾಣಿ ಚಾಸ್ಥಾಯ ದಿವಂ ಯಾತಾ ಮಹರ್ಷಯಃ ॥೨೯॥

ಇಲ್ಲಿ ನೂರು ಯಾಗಗಳನ್ನು ಮಾಡಿ ಇಂದ್ರನೂ ದೇವರಾಜನಾಗಿ ಸ್ವರ್ಗ-ಸಿಂಹಾಸನವನ್ನು ಪಡೆದನು. ಉಗ್ರತಪಸ್ಸುಗಳನ್ನು ಮಾಡಿಯೇ ಋಷಿಗಳು ಸ್ವರ್ಗವನ್ನು ಪಡೆದರು.

ಅಮೃಷ್ಯಮಾಣಃ ಪುನರುಗ್ರತೇಜಾ ನಿಶಮ್ಯ ತನ್ನಾಸ್ತಿಕಹೇತುವಾಕ್ಯಮ್ ।
ಅಥಾಬ್ರವೀತ್ತಂ ನೃಪತೇಸ್ತನೂಜೋ ವಿಗರ್ಹಮಾಣೋ ವಚನಾನಿ ತಸ್ಯ ॥

ಮಹಾತೇಜಸ್ವಿ ರಾಜಕುಮಾರ ಶ್ರೀರಾಮನು ಜಾಬಾಲಿ ಮುನಿಯು ಆಡಿದ ನಾಸ್ತಿಕರ ಶುಷ್ಕತರ್ಕದ ಮಾತನ್ನು ಕೇಳಿ ಅವನ ಮಾತುಗಳನ್ನು ಸಹಿಸದೆ ನಿಂದಿಸುತ್ತ ಪುನಃ ನುಡಿದನು.

'ಜಾಬಾಲಿಃ ಬ್ರಾಹ್ಮಣೋತ್ತಮಃ ಧರ್ಮಾಪೇತಂ ಇದಂ ವಚಃ ಉವಾಚ'

ಮಹರ್ಷಿಗಳೊಬ್ಬರು ಇಂಥ ನಾಸ್ತಿಕವಾದವನ್ನು ರಾಜಕುಮಾರನಿಗೆ ಬೋಧಿಸುವುದೆಂದರೆ ಯಾರಿಗೂ ಸಹನೆಯಾಗದು, ನಿಜ. ಆದರೆ ಯಜ್ಞಶಾಲೆಯಲ್ಲಿ ಹೊಗೆ ಹೊರಗೆ ಹೋಗುವಂತೆ ವಾತಾಯನ ಕಿಟಕಿಗಳ ವ್ಯವಸ್ಥೆ ಮಾಡಬೇಕೆಂದು ಹೇಳುವ ಉದ್ದೇಶದಿಂದ 'ಕೋ ಹಿ ತದ್ವೇದ ಯದ್ಯಮುಷ್ಮಿನ್ ಲೋಕೋऽಸ್ತಿ ವಾ ನ ವೇತಿ' 'ಹೊಗೆ ತಿಂದು ಸತ್ತಮೇಲೆ ಪರಲೋಕವೆಂಬುದಿದೆ ಎಂದರೆ ಅದನ್ನು ಯಾರು ನೋಡಿದ್ದಾರೆ?' ಎಂದು ಅರ್ಥವಾದರೂಪದ ವೇದವಾಕ್ಯವೇ ನಾಸ್ತಿಕ ತರ್ಕವನ್ನು ಹೇಳುತ್ತದೆ. ಹಾಗೇ ಶ್ರೀರಾಮ ವನವಾಸ ಮಾಡುವುದು ಬೇಡ ರಾಜ್ಯವಾಳಬೇಕು ಎಂದು ಹೇಳುವ ಧರ್ಮಗ್ರಂಥಗಳು ಕೂಡ 'ದಾನ ಸಂವನನಾಃ' ಧನಿಕರಿಂದ ಧನವನ್ನು ಕಿತ್ತುಕೊಳ್ಳಲು ಬ್ರಾಹ್ಮಣರು ಹೂಡಿದ ಉಪಾಯ' ಎಂದು ಜಾಬಾಲಿ ಮುನಿಗಳು ಹೇಳ್ತುತಿದ್ದಾರೆ. ಅವರು ನಿಜವಾಗಿ ನಾಸ್ತಿಕವಾದಿಗಳೇ ಆಗಿದ್ದರೆ 'ಜಾಬಾಲಿ ಬ್ರಾಹ್ಮಣೋತ್ತಮಃ' ಎನ್ನುವುದು ವ್ಯಾಹತ. ಬ್ರಾಹ್ಮಣ್ಯವೆ ಕೂಡಲಾರದು ಬ್ರಾಹ್ಮಣೋತ್ತಮತ್ವವೆಲ್ಲಿಂದ?

ವಸ್ತುತಃ 'ಪ್ರತ್ಯಕ್ಷ ಒಂದೇ ಪ್ರಮಾಣ, ಪರೋಕ್ಷವನ್ನು ನಂಬಬೇಡ' ಎಂದು ಮುನಿ ಹೇಳಿದ್ದು ಶ್ರೀರಾಮನಿಗೇ ಹೊರತು ಲೋಕಕ್ಕೆ ಅಲ್ಲ. 'ಶ್ರೀರಾಮ ಸಾಕ್ಷಾತ್ ಪರಮಾತ್ಮ. ಅವನಿಗೆ ಎಲ್ಲವೂ ಸ್ವತಃ ಪ್ರತ್ಯಕ್ಷ. ಅನುಮಾನಾಗಮಗಳಿಂದೇನೂ ಆಗಬೇಕಿಲ್ಲ. ಆಗಮ ಬೋಧನೆಗೆ ಒಬ್ಬ ಗುರು ಅವನಿಗೆ ಬೇಡ. ವನವಾಸಾದಿ ಧರ್ಮಾಚರಣೆಯೂ ಬೇಡ. ಕರ್ಮವು ಅಂತಃಕರಣಶುದ್ಧಿಗಾಗಿ ಇದೆ. ಪ್ರಾಕೃತ-ಪದಾರ್ಥಗಳಲ್ಲಿ ವಿರಕ್ತಿ ಸಂಪಾದನೆಗಾಗಿ ವಿಹಿತವಾಗಿದೆ. ಮೊದಲೇ 'ಅಸಂಗೋ ಹ್ಯಯಂ ಪುರುಷಃ' ಪರಮಪುರುಷನು ಅಸಂಗ, ಪ್ರಾಕೃತ ಸುಖಭೋಗದಲ್ಲಿ ಆಸಕ್ತಿ ಇಲ್ಲದವನು, ಕರ್ಮಬಂಧರಹಿತನು, ಅವನಿಗೇಕೆ ಧರ್ಮಾಚರಣೆ?' ಎಂದು ಜಾಬಾಲಿ ಮುನಿಗಳು ಶ್ರೀರಾಮನನ್ನು ಸ್ತುತಿಸುತ್ತಿದ್ದಾರೆ! ನಾಸ್ತಿಕ್ಯವನ್ನು ಬೋಧಿಸುತ್ತಿಲ್ಲ. ಸಂಗ್ರಹ ರಾಮಾಯಣದಲ್ಲಿ ಹೀಗೇ ಹೇಳಿದ್ದಾರೆ—

ಕ್ವ ಗುರ್ವಾಜ್ಞಾ ಸರ್ವಗುರೋರ್ಧರ್ಮಃ ಕೋಽಸಂಗಿನಸ್ತವ?
ಗಚ್ಛ ದೇವ ಪುರೀಂ ಶೀಘ್ರಂ ಇತಿ ಜಾಬಾಲಿರಬ್ರವೀತ್ ॥ (ಅಯೋ.12.91)

ವಾಲ್ಮೀಕಿಯ ಜಾಬಾಲಿಯು ಸ್ಪಷ್ಟ ಹೇಳದಿದ್ದ ತಮ್ಮ ಅಭಿಪ್ರಾಯವನ್ನು ಪಂಡಿತಾಚಾರ್ಯರ ಜಾಬಾಲಿಯು ಸ್ಪಷ್ಟ ಹೇಳುತ್ತಿದ್ದಾರೆ !

ಹಾಗಾದರೆ ಶ್ರೀರಾಮನೇಕೆ ಜಾಬಾಲಿಗಳನ್ನು ನಿಂದಿಸುತ್ತಾನೆ? ಎಂದರೆ, ಅದು ಜಾಬಾಲಿಯ ನಿಂದನೆ ಅಲ್ಲ. ಅವನು ಮೇಲುನೋಟಕ್ಕೆ ಹೇಳಿದ ನಾಸ್ತಿಕ್ಯವಾದದ ನಿಂದನೆ!

'ಋಷೀಣಾಂ ಪುನರಾದ್ಯಾನಾಂ ವಾಚಮರ್ಥೋಽನುಧಾವತಿ'

ಆರ್ಷಗ್ರಂಥಗಳಲ್ಲಿ ಅರ್ಥವು ತಾನಾಗಿ ಹೊಳೆಯುತ್ತದೆ, ಅವುಗಳಲ್ಲಿ ಆದರ ಉಳ್ಳ ಸಹೃದಯರಿಗೆ!

ಸತ್ಯಂ ಚ ಧರ್ಮಂ ಚ ಪರಾಕ್ರಮಂ ಚ
ಭೂತಾನುಕಂಪಾಂ ಪ್ರಿಯವಾದಿತಾಂ ಚ ।
ದ್ವಿಜಾತಿದೇವಾತಿಥಿಪೂಜನಂ ಚ
ಪಂಥಾನಮಾಹುಸ್ತ್ರಿದಿವಸ್ಯ ಸಂತಃ ॥೩೧॥

ಸತ್ಯ, ಧರ್ಮ, ಪರಾಕ್ರಮ, ಭೂತದಯೆ, ಪ್ರಿಯವಾದಿತ್ವ, ದ್ವಿಜ ದೇವಾತಿಥಿ ಸತ್ಕಾರ ಇವೆಲ್ಲವೂ ಸ್ವರ್ಗ ಸಾಧನವೆಂದು ಸಜ್ಜನರು ಗ್ರಂಥಗಳಲ್ಲಿ ಹೇಳುತ್ತಾರೆ.

ತೇನೈವಮಾಜ್ಞಾಯ ಯಥಾವದರ್ಥ-
ಮೇಕೋದಯಂ ಸಂಪ್ರತಿಪದ್ಯ ವಿಪ್ರಾಃ ।
ಧರ್ಮಂ ಚರಂತಃ ಸಕಲಂ ಯಥಾವತ್
ಕಾಂಕ್ಷಂತಿ ಲೋಕಾಗಮಮಪ್ರಮತ್ತಾಃ ॥೩೨॥

ಅದರಿಂದ ಹೀಗೆ ಯಥಾವತ್ತಾಗಿ ಶಾಸ್ತ್ರಾರ್ಥವನ್ನು ತಿಳಿದು ಅದರ ಮುಖ್ಯ ಫಲವನ್ನು ನಿಶ್ಚಯಿಸಿಕೊಂಡು ವಿಪ್ರರು ಯಥಾವತ್ತಾಗಿ ಎಲ್ಲ ಧರ್ಮಗಳನ್ನು ಆಚರಿಸುತ್ತ ಅದರಲ್ಲಿ ಏನೂ ಪ್ರಮಾದ ಮಾಡದೆ ಉತ್ತಮ ಪರಲೋಕ ಪ್ರಾಪ್ತಿ-ಯನ್ನು ಬಯಸುತ್ತಾರೆ.

ನಿಂದಾಮ್ಯಹಂ ಕರ್ಮ ಪಿತುಃ ಕೃತಂ ತತ್
ಯಸ್ತ್ವಾಮಗೃಹ್ಣಾದ್ವಿಷಮಸ್ಥಬುದ್ಧಿಮ್ ।

ಬುದ್ಧ್ಯಾನಯೈವಂವಿಧಯಾ ಚರಂತಂ
ಸುನಾಸ್ತಿಕಂ ಧರ್ಮಪಥಾದಪೇತಮ್ ॥೩೩॥

ವಿಷಮಸ್ಥವಾದ ಧರ್ಮವಿರೋಧಿಯಾದ ಬುದ್ಧಿಯುಳ್ಳವನು, ಈ ರೀತಿಯ ಬುದ್ಧಿಯನ್ನೇ ಇತರರಿಗೆ ಬೋಧಿಸುವವನು, ಧರ್ಮಮಾರ್ಗದಿಂದ ದೂರ ಸರಿದವನು, ಬಹಳ ನಾಸ್ತಿಕನಾದವನು. ಇಂಥವನನ್ನು ಋತ್ವಿಜನನ್ನಾಗಿ ಪರಿಗ್ರಹಿಸಿದ ತಂದೆಯ ಈ ಕರ್ಮವನ್ನು ನಾನು ನಿಂದಿಸುವೆನು.

ಯಥಾ ಹಿ ಚೋರಃ ಸ ತಥಾ ಹಿ ಬುದ್ಧ
ಸ್ತಥಾಗತಂ ನಾಸ್ತಿಕಮತ್ರ ವಿದ್ಧಿ ।
ತಸ್ಮಾದ್ಧಿ ಯಃ ಶಂಕ್ಯತಮಃ ಪ್ರಜಾನಾಂ
ನ ನಾಸ್ತಿಕೇನಾಭಿಮುಖೋ ಬುಧಃ ಸ್ಯಾತ್ ॥೩೪॥

ಚೋರನಂತೆಯೇ ಪರಲೋಕವಿಲ್ಲ ಎನ್ನುವ ಬುದ್ಧನೂ ಶಿಕ್ಷಾರ್ಹನೆ. ಏಕೆಂದರೆ ಈ ತಥಾಗತನು ಚೋರನಂತೆಯೇ ನಾಸ್ತಿಕ. ಚೋರನು ಪರಪುರುಷರ ಸೊತ್ತನ್ನು ಅಪಹರಿಸಿ ಇಲ್ಲದಂತೆ ಮಾಡುತ್ತಾನೆ. ತಥಾಗತನು ಪರಮಪುರುಷನ ಸೊತ್ತಾದ ಈ ಲೋಕ ಪರಲೋಕ ಎಂದು ಎಲ್ಲ ಪ್ರಪಂಚವನ್ನೇ ಮಿಥ್ಯೆ ಎನ್ನುತ್ತ, ಇಲ್ಲದಂತೆ ಮಾಡಿ, ಎಲ್ಲವೂ ಶೂನ್ಯ ಎನ್ನುತ್ತಾನೆ. ಅದರಿಂದ ಪ್ರಜೆಗಳು ಸರ್ವಾಪಹಾರಕ ನೆಂದು ಅತಿ ಹೆಚ್ಚು ಭಯಪಡಬೇಕಾದುದು ಈ ಬುದ್ಧನನ್ನೆ. ತಥಾಗತನನ್ನೆ. ಶಾಸ್ತ್ರಬಲ್ಲ ವಿದ್ವಾಂಸನು ಈ ನಾಸ್ತಿಕನ ಮುಂದೆ ನಿಲ್ಲಬಾರದು. ನಿಂತು ಅವನ ಮುಖಾವ-ಲೋಕನವನ್ನು ಮಾಡಬಾರದು. ವೇದವನ್ನು ಪ್ರಮಾಣ ಎಂದರೆ 'ಅದು ಅಪ್ರಮಾಣ' ಎನ್ನುತ್ತಾನೆ. ಅದರಿಂದ ಅವನೊಡನೆ ವಾದ ಮಾಡುವುದು ಶಕ್ಯವಿಲ್ಲ.

'ತದ್ವೈಕ ಆಹುರಸದೇವೇದಮಗ್ರ ಆಸೀತ್' 'ಅಸತ್, ಶೂನ್ಯವೇ ತತ್ವ. ಅದನ್ನು ಅಜ್ಞಾನದಿಂದ ಪ್ರಪಂಚವೆಂದು ಮಾನವನು ಭ್ರಮಿಸುತ್ತಾನೆ' ಎಂದು ಬೌದ್ಧವಾದವನ್ನು ಛಾಂದೋಗ್ಯೋಪನಿಷತ್ತಿನಲ್ಲಿ ಹೇಳಿ ಅದನ್ನು ಸ್ಪಷ್ಟ ನಿರಾಕರಿಸ-ಲಾಗಿದೆ. ಅದರಿಂದ ಜಾಬಾಲಿಗಳಾಗಲಿ ವಾಲ್ಮೀಕಿಗಳಾಗಲಿ ಬುದ್ಧನಿಗಿಂತ ಹಿಂದಿನವರಾದರೂ ಬುದ್ಧನ ಹೆಸರನ್ನಾಗಲಿ ಬೌದ್ಧಮತದ ವಿಚಾರವನ್ನಾಗಲಿ ರಾಮಾಯಣದಲ್ಲಿ ಅವರು ಹೇಳುವುದು ಅಸಂಭವವೇನಲ್ಲ. ಬೌದ್ಧಮತವೂ ಆಸ್ತಿಕ ಮತದಂತೇ ಅನಾದಿ. ಹೀಗಾಗಿ ಬೌದ್ಧಮತವನ್ನೂ ಜಾಬಾಲಿಗಳನ್ನೂ ನಿಂದಿಸುವ ಕಡೆಯ ಈ ಎಂಟು ಶ್ಲೋಕಗಳನ್ನು ಓರಿಯೆಂಟಲ್ ಇನ್‌ಸ್ಟಿಟ್ಯೂಟ್ ಬರೋಡ ಅವರು ಪ್ರಕ್ಷಿಪ್ತವೆಂದು ತೀರ್ಮಾನಿಸಿರುವುದು ಸಮರ್ಥನೀಯವಲ್ಲ.

ತ್ವತ್ತೋ ಜನಾಃ ಪೂರ್ವತರೇ ದ್ವಿಜಾಶ್ಚ
ಶುಭಾನಿ ಕರ್ಮಾಣಿ ಬಹೂನಿ ಚಕ್ರುಃ ।
ಜಿತ್ವಾ ಸದೇಮಂ ಚ ಪರಂ ಚ ಲೋಕಂ
ತಸ್ಮಾದ್ದ್ವಿಜಾಃ ಸ್ವಸ್ತಿ ಹುತಂ ಕೃತಂ ಚ ॥೩೫॥

ದ್ವಿಜರೆ, ನಿಮ್ಮ ಪೂರ್ವಪೂರ್ವಜರಾದ ದ್ವಿಜರು ಬಹಳ ಶುಭಕರ್ಮಗಳನ್ನು ಆಚರಿಸಿದ್ದರು. ಈ ಲೋಕ ಪರಲೋಕಗಳನ್ನೂ ಪಡೆದು ಕೃತಾರ್ಥರಾಗಿದ್ದರು. ಅದರಿಂದ ದ್ವಿಜರೆ, ಹೋಮವೂ, ಬೇರೆ ಕರ್ಮವೂ ಮಂಗಳಕರವೇ ಆಗಿರುತ್ತದೆ.

ಧರ್ಮೇ ರತಾಃ ಸತ್ಪುರುಷೈಃ ಸಮೇತಾ-
ಸ್ತೇಜಸ್ವಿನೋ ದಾನಗುಣಪ್ರಧಾನಾಃ ।
ಅಹಿಂಸಕಾ ವೀತಮಲಾಶ್ಚ ಲೋಕೇ
ಭವಂತಿ ಪೂಜ್ಯಾ ಮುನಯಃ ಪ್ರಧಾನಾಃ ॥೩೬॥

ದ್ವಿಜರೆ, ಧರ್ಮದಲ್ಲಿ ನಿರತರು, ಸಜ್ಜನರ ಸಹವಾಸದಲ್ಲಿರುವವರು, ತೇಜಸ್ವಿಗಳು, ದಾನಶೀಲತೆಯನ್ನು ಮುಖ್ಯವಾಗಿ ಆದರಿಸುವವರು, ಅಹಿಂಸಾ ಧರ್ಮಪರರು, ಪ್ರಾರಬ್ಧ ಪಾಪಗಳನ್ನು ತೊಡೆದುಕೊಂಡವರು ಇಂಥ ಮುನಿಗಳೆ ನಿಮಗೆ ಮುಖ್ಯ-ವಾಗಿ ಪೂಜ್ಯರು.

'ಇಂಥ ಮುನಿಗಳನ್ನು ರಕ್ಷಿಸುವುದಕ್ಕಾಗಿಯೇ ನಾನು ದಂಡಕಾರಣ್ಯದಲ್ಲಿ ವಾಸಮಾಡುತ್ತೇನೆ ಹೊರತು ಪ್ರಾರಬ್ಧಕರ್ಮದಿಂದ ವನವಾಸಕ್ಲೇಶವನ್ನು ಅನುಭವಿಸುವುದಕ್ಕಾಗಿ ಅಲ್ಲ' ಎಂದು ಶ್ರೀರಾಮ ಇಲ್ಲಿ ಪರ್ಯಾಯವಾಗಿ ಹೇಳಿದ್ದಾನೆ. ರಾಮನಿಗಾಗಲಿ ಸೀತೆಗಾಗಲಿ ಪ್ರಾರಬ್ಧ ಕರ್ಮವೆಂಬುದಿಲ್ಲ. ಅವರು ಕ್ಲೇಶ ಪಡುವುದೂ ಇಲ್ಲ.

ಇತಿ ಬ್ರುವಂತಂ ವಚನಂ ಸರೋಷಂ
ರಾಮಂ ಮಹಾತ್ಮಾನಮದೀನಸತ್ವಮ್ ।
ಉವಾಚ ತಥ್ಯಂ ಪುನರಾಸ್ತಿಕಂ ಚ
ಸತ್ಯಂ ವಚಃ ಸಾನುನಯಂ ಚ ವಿಪ್ರಃ ॥೩೭॥

ಮಹಾಸತ್ವನಾದ ಮಹಾತ್ಮ ಶ್ರೀರಾಮನು ರೋಷದಿಂದ ಹೀಗೆ ನುಡಿದಾಗ ಜಾಬಾಲಿ ಮುನಿಯು ಪುನಃ ಅನುನಯಯುಕ್ತವಾದ ಸಜ್ಜನರಿಗೆ ಹಿತವಾದ ಸತ್ಯವಾದ ಆಸ್ತಿಕ ವಚನವನ್ನು ನುಡಿದನು.

ನ ನಾಸ್ತಿಕಾನಾಂ ವಚನಂ ಬ್ರವೀಮ್ಯಹಂ
ನ ನಾಸ್ತಿಕೋऽಹಂ ನ ಚ ನಾಸ್ತಿ ಕಿಂಚನ ।
ಸಮೀಕ್ಷ್ಯ ಕಾಲಂ ಪುನರಾಸ್ತಿಕೋऽಭವಂ
ಭವೇಯ ಕಾಲೇ ಪುನರೇವ ನಾಸ್ತಿಕಃ ॥೩೮॥

ರಾಮ, ನಾನು ನಿನಗೆ ಚಾರ್ವಾಕ ನಾಸ್ತಿಕರ ವಾದವನ್ನು ಉಪದೇಶಿಸುವು ದಿಲ್ಲ, ನಾನು ನಾಸ್ತಿಕನೂ ಅಲ್ಲ, ಬೌದ್ಧನು ಹೇಳುವಂತೆ ಎಲ್ಲವೂ ಶೂನ್ಯವೆಂದೂ ಒಪ್ಪುವು-ದಿಲ್ಲ., ಯೋಗ್ಯಕಾಲವನ್ನು ನೋಡಿಕೊಂಡು ಆಸ್ತಿಕನೇ ಆಗುತ್ತೇನೆ. ಆದರೆ ಇಂಥ ಕೆಲವು ಕಾಲದಲ್ಲಿ ಪುನಃ ನಾಸ್ತಿಕನಾಗುತ್ತೇನೆ.

ಸ ಚಾಪಿ ಕಾಲೋऽಯಮುಪಾಗತಃ ಶನೈ
ರ್ಯಥಾ ಮಯಾ ನಾಸ್ತಿಕವಾಗುದೀರಿತಾ ।
ನಿವರ್ತನಾರ್ಥಂ ತವ ರಾಮ ಕಾರಣಾತ್
ಪ್ರಸಾದನಾರ್ಥಂ ಚ ಮಯೈತದೀರಿತಮ್ ॥೩೯॥

ಈಗ ನಾನು ನಾಸ್ತಿಕನಾಗಿರಬೇಕಾದ ಕಾಲವಿದು ಬಂದಿದೆ. ನಿನ್ನನ್ನು ಅಯೋಧ್ಯೆಗೆ ಹಿಂತಿರುಗಿಸಲು ಭರತನು ಪ್ರಯತ್ನಿಸುತ್ತಿದ್ದಾನೆ. ಅವನಿಗೆ ಅನೂಕೂಲವಾಗಲಿ ಎಂದು ನಾನು ನಾಸ್ತಿಕವಾದವನ್ನು ಉಚ್ಚರಿಸಿದೆನು. ಆ ಕಾರಣದಿಂದ ನಿನಗೆ ಕೋಪ ಬಂದಿತೆಂದು ಅದರ ನಿವೃತ್ತಿಗಾಗಿ ಈಗ ಆಸ್ತಿಕವಚನವನ್ನು ಉಚ್ಚರಿಸಿದ್ದೇನೆ.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ನೂರಒಂಭತ್ತನೇ ಸರ್ಗ ಮುಗಿಯಿತು.

❖

ದಶಾಧಿಕ ಶತತಮಃ ಸರ್ಗಃ

ಸರ್ಗ – 110

ಹಿರಿಯನಿಗೇ ಪಟ್ಟ ಎಂದು ಇಕ್ಷ್ವಾಕು ವಂಶದವರ ಸಂಪ್ರದಾಯ.

ಕ್ರುದ್ಧಮಾಜ್ಞಾಯ ರಾಮಂ ತು ವಸಿಷ್ಠಃ ಪ್ರತ್ಯುವಾಚ ಹ ।
ಜಾಬಾಲಿರಪಿ ಜಾನೀತೇ ಲೋಕಸ್ಯಾಸ್ಯ ಗತಾಗತಿಮ್ ॥೧॥

ನಿವರ್ತಯಿತುಕಾಮಸ್ತು ತ್ವಾಮೇತದ್ವಾಕ್ಯಮುಕ್ತವಾನ್ ।
ಇಮಾಂ ಲೋಕಸಮುತ್ಪತ್ತಿಂ ಲೋಕನಾಥ ನಿಬೋಧ ಮೇ ॥೨॥

ಶ್ರೀರಾಮನಿಗೆ ಜಾಬಾಲಿಯ ಮಾತನ್ನು ಕೇಳಿ ಕೋಪ ಬಂದುದನ್ನು ತಿಳಿದು ವಸಿಷ್ಠರು ನುಡಿದರು— 'ಜಾಬಾಲಿಯು ಕೂಡ ಈ ಲೋಕವು ಕರ್ಮದಿಂದ ಪರಲೋಕಕ್ಕೆ ಹೋಗಿಬರುವುದನ್ನು ತಿಳಿದೇ ಇದ್ದಾನೆ.

ಭಸ್ಮೀಭೂತಸ್ಯ ದೇಹಸ್ಯ ಪುನರಾಗಮನಂ ಕುತಃ?

'ಸತ್ತು ಬೂದಿಯಾದ ಮೇಲೆ ಪುನಃ ಹಿಂತಿರುಗುವುದು ಹೇಗೆ ಸಾಧ್ಯ' ಎಂದು ನಾಸ್ತಿಕನಂತೆ ಜಾಬಾಲಿ ವಾದಿಸುವುದಿಲ್ಲ. ಆದರೂ ನಿನ್ನನ್ನು ಅರಣ್ಯದಿಂದ ಹಿಂತಿರುಗಿಸುವ ಉದ್ದೇಶದಿಂದ ನಿನಗೆ ಈ ನಾಸ್ತಿಕವಾದವನ್ನು ಉಚ್ಚರಿಸಿದ್ದಾನಷ್ಟೆ. ಲೋಕೇಶ್ವರ, ನೀನು ನಿನ್ನ ವಂಶದ ಪೂರ್ವಜರಿಂದ ಬಂದ ಸಂಪ್ರದಾಯದಂತೆ ಅಯೋಧ್ಯೆಗೆ ರಾಜನಾಗಬೇಕು. ಅದಕ್ಕೆ ಲೋಕದ ಉತ್ಪತ್ತಿಯಾದಂದಿನಿಂದಲೂ ನಡೆದುಬಂದ ಸಂಪ್ರದಾಯವನ್ನು ಹೇಳುತ್ತೇನೆ ಕೇಳು.

ಸರ್ವಂ ಸಲಿಲಮೇವಾಸೀತ್ ಪೃಥಿವೀ ಯತ್ರ ನಿರ್ಮಿತಾ ।
ತತಃ ಸಮಭವದ್ಬ್ರಹ್ಮಾ ಸ್ವಯಂಭೂರ್ದೈವತೈಃ ಸಹ ॥೩॥

ಮೊದಲಿಗೆ ಲಕ್ಷ್ಯಾತ್ಮಕವಾದ ಅಪ್ರಾಕೃತ ನೀರೇ ಸರ್ವತ್ರ ಇತ್ತು. ಅದರ ಮೇಲೆ ನವಾವರಣಸಹಿತ ಬ್ರಹ್ಮಾಂಡ ಸೃಷ್ಟಿಯಾಯಿತು. ಬ್ರಹ್ಮಾಂಡದಲ್ಲಿ ದೇವತೆ-ಗಳೊಂದಿಗೆ ಚತುರ್ಮುಖ ಬ್ರಹ್ಮನು ಜನಿಸಿದನು.

ಸ ವರಾಹಸ್ತತೋ ಭೂತ್ವಾ ಪ್ರೋಜ್ಜಹಾರ ವಸುಂಧರಾಮ್ ।
ಅಸೃಜಚ್ಚ ಜಗತ್ ಸರ್ವಂ ಸಹ ಪುತ್ರೈಃ ಕೃತಾತ್ಮಭಿಃ ॥೪॥

ಬಳಿಕ ಬ್ರಹ್ಮನ ಪ್ರಾರ್ಥನೆಯಂತೆ ಪರಮಾತ್ಮನು ವರಾಹ ರೂಪವನ್ನು ಧರಿಸಿ ಭೂಮಿಯನ್ನು ಉದ್ಧರಿಸಿದನು. ಬ್ರಹ್ಮನು ಮುಂದೆ ತನ್ನ ಜ್ಞಾನಿಗಳಾದ ಪುತ್ರ-ರೊಂದಿಗೆ ಸರ್ವಪ್ರಪಂಚವನ್ನು ಸೃಜಿಸಿದನು.

ಆಕಾಶಪ್ರಭವೋ ಬ್ರಹ್ಮಾ ಶಾಶ್ವತೋ ನಿತ್ಯ ಅವ್ಯಯಃ ।
ತಸ್ಮಾನ್ಮರೀಚಿಃ ಸಂಜಜ್ಞೇ ಮರೀಚೇಃ ಕಶ್ಯಪಃ ಸುತಃ ॥೫॥

'ಆಕಾಶ' ಸರ್ವವ್ಯಾಪಿ ಮೂಲರೂಪಿ ಭಗವಂತನಿಂದ ಶಾಶ್ವತ ನಿತ್ಯ ಅವ್ಯಯ-ನಾದ ಬ್ರಹ್ಮನು ವ್ಯಕ್ತನಾದನು. ಚತುರ್ಮುಖಾಂತರ್ಯಾಮಿಯಾದ ಈ ಬ್ರಹ್ಮನಿಂದ ಬ್ರಹ್ಮನ ಮೂಲಕ ಮರೀಚಿ ಮುನಿ ಜನಿಸಿದನು. ಮರೀಚಿಯ ಪುತ್ರನು ಕಶ್ಯಪಮುನಿ.

ವಿವಸ್ವಾನ್ ಕಶ್ಯಪಾಜ್ಜಜ್ಞೇ ಮನುರ್ವೈವಸ್ವತಃ ಸುತಃ ।
ಸ ತು ಪ್ರಜಾಪತಿಃ ಪೂರ್ವಮಿಕ್ಷ್ವಾಕುಸ್ತು ಮನೋಃ ಸುತಃ ॥೬॥

ಕಶ್ಯಪನಿಂದ ಸೂರ್ಯನು ಜನಿಸಿದನು. ಅವನ ಪುತ್ರನು ವೈವಸ್ವತಮನು. ಅವನು ಆದಿಯಲ್ಲಿ ಪ್ರಜೆಗಳನ್ನು ಆಳುವ ರಾಜನು. ಮನುವಿನ ಮಗನು ಇಕ್ಷ್ವಾಕು.

ಯಸ್ಯೇಯಂ ಪ್ರಥಮಂ ದತ್ತಾ ಸಮೃದ್ಧಾ ಮನುನಾ ಮಹೀ ।
ತಮಿಕ್ಷ್ವಾಕುಮಯೋಧ್ಯಾಯಾಂ ರಾಜಾನಂ ವಿದ್ಧಿ ಪೂರ್ವಕಮ್ ॥೭॥

ಮೊದಲಿಗೆ ಮನುವು ಸಮೃದ್ಧವಾದ ಭೂಮಿಯನ್ನು ಇಕ್ಷ್ವಾಕುವಿಗೆ ಕೊಟ್ಟನು. ಈ ಇಕ್ಷ್ವಾಕುವೇ ಅಯೋಧ್ಯೆಯಲ್ಲಿ ಆಳಿದ ಮೊದಲನೆಯ ರಾಜನೆಂದು ತಿಳಿ.

ಇಲ್ಲಿ ತಂದೆ ತನ್ನ ಆಸ್ತಿಯನ್ನು ಮಗನಿಗೆ ಕೊಡುವಂತೆ ರಾಜನು ತನ್ನ ರಾಜ್ಯವನ್ನು ಮಗನಿಗೆ ಕೊಡುವುದಿಲ್ಲ. ತಂದೆಯ ಅನಂತರ ಮಗನು ರಾಜ್ಯವಾಳಲು ಯೋಗ್ಯ ಅಧಿಕಾರಿಯಾಗುತ್ತಾನೆ. ಅಧಿಕಾರ ಅವನಿಗೆ ಸ್ವತಃ ಬರುತ್ತದೆ. ಆಗ ಮಗನು ತಂದೆಯಿಂದ ಅಭಿಷೇಕ ಮಾಡಿಸಿಕೊಳ್ಳುತ್ತಾನೆ. ಹೀಗಾಗಿ ದಶರಥನು ರಾಜ್ಯವನ್ನು ಯಾರಿಗೂ ಕೊಡಲಿಲ್ಲ. ಭರತನಿಗೆ ಅಭಿಷೇಕ ಮಾಡುವೆನೆಂದು ವರ ನೀಡಿದ್ದಾನಷ್ಟೆ. ದಶರಥನ ಅನಂತರ ಸ್ವತಃ ರಾಜ್ಯಾಧಿಕಾರ ರಾಮನಿಗೆ ಬರುತ್ತದೆ. ಅವನು ಯಾರಿಂದಾದರೂ ಅಭಿಷೇಕ ಮಾಡಿಸಿಕೊಳ್ಳಬೇಕು ಎಂದು ವಸಿಷ್ಠರು ಇಕ್ಷ್ವಾಕು ಕುಲ ಕ್ರಮಾಗತವಾದ ಸಂಪ್ರದಾಯವನ್ನು ಹೇಳುತ್ತಿದ್ದಾರೆ.

ಇಕ್ಷ್ವಾಕೋಸ್ತು ಸುತಃ ಶ್ರೀಮಾನ್ ಕುಕ್ಷಿರಿತ್ಯೇವ ವಿಶ್ರುತಃ ।
ಕುಕ್ಷೇರಥಾತ್ಮಜೋ ವೀರೋ ವಿಕುಕ್ಷಿರುದಪದ್ಯತ ॥೮॥

ಇಕ್ಷ್ವಾಕುವಿನ ಪುತ್ರನು ಶ್ರೀಮಾನ್ ಕುಕ್ಷಿ ಎಂದು ಪ್ರಸಿದ್ಧನಾಗಿದ್ದಾನೆ. ಕುಕ್ಷಿಯ ಮಗನಾಗಿ ವೀರನಾದ ವಿಕುಕ್ಷಿ ಜನಿಸಿದನು.

ವಿಕುಕ್ಷೇಸ್ತು ಮಹಾತೇಜಾ ಬಾಣಃ ಪುತ್ರಃ ಪ್ರತಾಪವಾನ್ ।
ಬಾಣಸ್ಯ ತು ಮಹಾಬಾಹುರನರಣ್ಯೋ ಮಹಾಯಶಾಃ ॥೯॥

ವಿಕುಕ್ಷಿಯಿಂದ ಮಹಾತೇಜಸ್ವಿ ಪ್ರತಾಪಶಾಲಿ ಬಾಣನೆಂಬ ಮಗನು ಜನಿಸಿದನು. ಬಾಣನ ಮಗನು ಮಹಾಯಶಸ್ವಿ ಮಹಾಬಾಹು ಅನರಣ್ಯನು.

ನಾನಾವೃಷ್ಟಿರ್ಬಭೂವಾಸ್ಮಿನ್ನ ದುರ್ಭಿಕ್ಷಂ ಸತಾಂ ವರೇ ।
ಅನರಣ್ಯೇ ಮಹಾರಾಜೇ ತಸ್ಕರೋ ನಾಪಿ ಕಶ್ಚನ ॥೧೦॥

ಸಜ್ಜನ ಶ್ರೇಷ್ಠನಾದ ಅನರಣ್ಯನು ಮಹಾರಾಜನಾಗಿದ್ದಾಗ ಅನಾವೃಷ್ಟಿ ಇರಲಿಲ್ಲ. ದುರ್ಭಿಕ್ಷವಿರಲಿಲ್ಲ. ಯಾರೂ ಕಳ್ಳರಿರಲಿಲ್ಲ.

ಅನರಣ್ಯಾನ್ಮಹಾಬಾಹುಃ ಪೃಥೂ ರಾಜಾ ಬಭೂವ ಹ ।
ತಸ್ಮಾತ್ಪೃಥೋರ್ಮಹಾರಾಜಸ್ತ್ರಿಶಂಕುರುದಪದ್ಯತ ॥೧೧॥

ಅನರಣ್ಯನಿಂದ ಮಹಾಬಾಹು ರಾಜಾ ಪೃಥು ಜನಿಸಿದನು. ಆ ಪೃಥುವಿನಿಂದ ತ್ರಿಶಂಕು ಮಹಾರಾಜನು ಜನಿಸಿದನು.

ಸ ಸತ್ಯವಚನಾದ್ವೀರಃ ಸಶರೀರೋ ದಿವಂ ಗತಃ ।
ತ್ರಿಶಂಕೋರಭವತ್ಸೂನುರ್ಧುಂಧುಮಾರೋ ಮಹಾಯಶಾಃ ॥೧೨॥

ಸತ್ಯವಚನ ಬಲದಿಂದ ಆ ವೀರ ತ್ರಿಶಂಕು ಸಶರೀರನಾಗಿ ವಿಶ್ವಾಮಿತ್ರರು ಸೃಜಿಸಿದ ಸ್ವರ್ಗದ ಸಿಂಹಾಸನವನ್ನು ಪಡೆದನು. ತ್ರಿಶಂಕುವಿನಿಂದ ಮಹಾಯಶಸ್ವಿಯಾದ ಧುಂಧುಮಾರನು ಜನಿಸಿದನು.

ದುಂಧುಮಾರೋ ಮಹಾತೇಜಾ ಯುವನಾಶ್ವೋ ವ್ಯಜಾಯತ ।
ಯುವನಾಶ್ವಸುತಃ ಶ್ರೀಮಾನ್ ಮಾಂಧಾತಾ ಸಮಪದ್ಯತ ॥೧೩॥

ತ್ರಿಶಂಕು ಪುತ್ರನು ಯುವನಾಶ್ವ. ಅವನು ಧುಂಧು ಎಂಬ ಅಸುರನನ್ನು ಕೊಂದು ಧುಂಧುಮಾರ ಎಂಬ ಹೆಸರಿನಿಂದ ಪ್ರಸಿದ್ಧನಾದನು. ಈ ಯುವನಾಶ್ವನ ಮಗನಾಗಿ ಶ್ರೀಮಾನ್ ಮಾಂಧಾತನು ಜನಿಸಿದನು.

ಮಾಂಧಾತುಸ್ತು ಮಹಾತೇಜಾಃ ಸುಸಂಧಿರುದಪದ್ಯತ ।
ಸುಸಂಧೇರಪಿ ಪುತ್ರೌ ದ್ವೌ ಧ್ರುವಸಂಧಿಃ ಪ್ರಸೇನಜಿತ್ ॥೧೪॥

ಮಾಂಧಾತೃವಿನಿಂದ ಮಹಾತೇಜಸ್ವಿಯಾದ ಸುಸಂಧಿಯು ಜನಿಸಿದನು. ಸುಸಂಧಿಗೆ ಇಬ್ಬರು ಪುತ್ರರು, ಧ್ರುವಸಂಧಿ ಮತ್ತು ಪ್ರಸೇನಜಿತ್ ಎಂದು.

ಯಶಸ್ವೀ ಧ್ರುವಸಂಧೇಸ್ತು ಭರತೋ ರಿಪುಸೂದನಃ ।
ಭರತಾತ್ತು ಮಹಾಬಾಹೋರಸಿತೋ ನಾಮ ಜಾಯತ ॥೧೫॥

ಧ್ರುವಸಂಧಿಯಿಂದ ಶತ್ರುನಾಶಕನಾದ ಯಶಸ್ವಿಯಾದ ಭರತನು ಜನಿಸಿದನು. ಮಹಾಬಾಹುವಾದ ಭರತನಿಂದ ಅಸಿತನೆಂಬ ಮಗನು ಜನಿಸಿದನು.

ಯಸ್ಯೈತೇ ಪ್ರತಿರಾಜಾನ ಉದಪದ್ಯಂತ ಶತ್ರವಃ ।
ಹೈಹಯಾಸ್ತಾಲಜಂಘಾಶ್ಚ ಶೂರಾಶ್ಚ ಶಶಬಿಂದವಃ ॥೧೬॥

ಅಸಿತ ರಾಜನಿಗೆ ಹೈಹಯರು ತಾಲಜಂಘರು ಶೂರರು ಮತ್ತು ಶಶಬಿಂದುಗಳೆಂದು ನಾಲ್ಕು ಗುಂಪುಗಳು ಶತ್ರುಗಳಾದರು.

ತಾಂಸ್ತು ಸರ್ವಾನ್ ಪ್ರತಿವ್ಯೂಹ್ಯ ಯುದ್ಧೇ ರಾಜಾ ಪ್ರವಾಸಿತಃ ।
ಸ ಚ ಶೈಲವರೇ ರಮ್ಯೇ ಬಭೂವಾಭಿರತೋ ಮುನಿಃ ॥೧೭॥

ಅವರೆಲ್ಲರನ್ನೂ ಯುದ್ಧದಲ್ಲಿ ರಾಜಾ ಅಸಿತನು ಇದಿಸಿದರೂ ಸೋತು ರಮ್ಯವಾದ ಪರ್ವತದಲ್ಲಿ ಮುನಿಯಾಗಿ ತಪಸ್ಸಿಗೆ ಕುಳಿತನು.

ದ್ವೇ ಚಾಸ್ಯ ಭಾರ್ಯೇ ಗರ್ಭಿಣ್ಯೌ ಬಭೂವತುರಿತಿ ಶ್ರುತಿಃ
ಏಕಾ ಗರ್ಭವಿನಾಶಾಯ ಸಪತ್ನ್ಯೈ ಗರಳಂ ದದೌ ॥೧೮॥

ಅಸಿತನ ಇಬ್ಬರು ರಾಣಿಯರು ಗರ್ಭಿಣಿಯರಾಗಿದ್ದರು ಎಂದು ಕೇಳಿದ್ದೇವೆ. ಅವರಲ್ಲಿ ಒಬ್ಬಳು ಸವತಿಗೆ ಗರ್ಭನಾಶಕ್ಕಾಗಿ ವಿಷವಿಕ್ಕಿದಳು.

ಭಾರ್ಗವಶ್ಚ್ಯವನೋ ನಾಮ ಹಿಮವಂತಮುಪಾಶ್ರಿತಃ
ತಮೃಷಿಂ ಸಮುಪಾಗಮ್ಯ ಕಾಲಿಂದೀ ತ್ವಭ್ಯವಾದಯತ್ ॥೧೯॥

ಭೃಗುಪುತ್ರನಾದ ಚ್ಯವನ ಋಷಿಯು ಹಿಮಾಲಯದಲ್ಲಿದ್ದನು. ಅಸಿತನ ರಾಣಿ ಕಾಲಿಂದಿಯು ಚ್ಯವನನ ಬಳಿಗೆ ಹೋಗಿ ಅಭಿವಾನಗೈದಳು.

ಸ ತಾಮಭ್ಯವದದ್ವಿಪ್ರೋ ವರೇಪ್ಸುಂ ಪುತ್ರಜನ್ಮನಿ ।
ಪುತ್ರಸ್ತೇ ಭವಿತಾ ದೇವಿ ಮಹಾತ್ಮಾ ಲೋಕವಿಶ್ರುತಃ ॥೨೦॥

ಧಾರ್ಮಿಕಶ್ಚ ಸುಶೀಲಶ್ಚ ವಂಶಕರ್ತಾರಿಸೂದನಃ ।
ಕೃತ್ವಾ ಪ್ರದಕ್ಷಿಣಂ ಸಾ ತು ಮುನಿಂ ತಮನುಮಾನ್ಯ ಚ ॥೨೧॥

ಪುತ್ರಜನ್ಮ ವರವನ್ನು ಬಯಸಿ ಬಂದಿದ್ದ ಅವಳಿಗೆ ಮುನಿಯು ದೇವಿ ನಿನಗೆ ಲೋಕಪ್ರಸಿದ್ಧನಾದ ಮಹಾತ್ಮನಾದ ಪುತ್ರನು ಜನಿಸುವನೆಂದೂ ಆ ಪುತ್ರನು ಧಾರ್ಮಿಕ ಸುಶೀಲ ವಂಶವನ್ನು ಬೆಳೆಸುವವನು ಶತ್ರುನಾಶಕನಾಗುವನೆಂದೂ ವರವಿತ್ತರು. ಕಾಳಿಂದಿಯು ಮಗನಿಗೆ ಪ್ರದಕ್ಷಿಣೆ ನಮಸ್ಕಾರಗಳನ್ನು ಮಾಡಿ ಮನೆಗೆ ಹಿಂತಿರುಗಿದಳು.

ಪದ್ಮಪತ್ರಸಮಾನಾಕ್ಷಂ ಪದ್ಮಗರ್ಭಸಮಪ್ರಭಮ್ ।
ತತಃ ಸಾ ಗೃಹಮಾಗಮ್ಯ ದೇವೀ ಪುತ್ರಂ ವ್ಯಜಾಯತ ॥೨೨॥

ಮನೆಗೆ ಬಂದು ಕಾಳಿಂದಿದೇವಿಯು ಕಮಲದಳದಂಥ ಕಣ್ಣಿನವನೂ ಪದ್ಮಗರ್ಭ–ಸಮಾನ ಪ್ರಭೆಉಳ್ಳವನೂ ಆದ ಮಗನನ್ನು ಹೆತ್ತಳು.

ಸಪತ್ನ್ಯಾತು ಗರಸ್ತಸ್ಯೈ ದತ್ತೋ ಗರ್ಭಜಿಘಾಂಸಯಾ ।
ಗರೇಣ ಸಹ ತೇನೈವ ಜಾತಃ ಸ ಸಗರೋಽಭವತ್ ॥೨೩॥

ಸವತಿ ಅವಳಿಗೆ ಗರ್ಭನಾಶಕ್ಕಾಗಿ ವಿಷವಿಕ್ಕಿದ್ದಳು. ಆ ವಿಷದಿಂದ ಕೂಡಿಕೊಂಡೇ ಜನಿಸಿದ ಆ ಪುತ್ರನು 'ಸಗರ' ಸ–ಗರ ವಿಷದಿಂದ ಕೂಡಿದವನು ಎಂದೆ ಪ್ರಸಿದ್ಧ–ನಾದನು.

ಸ ರಾಜಾ ಸಗರೋ ನಾಮ ಯಃ ಸಮುದ್ರಮಖಾನಯತ್ ।
ಇಷ್ಟ್ವಾ ಪರ್ವಣಿ ವೇಗೇನ ತ್ರಾಸಯಂತಮಿಮಾಃ ಪ್ರಜಾಃ ॥೨೪॥

ಆ ಸಗರನೆಂಬ ರಾಜನು ಪರ್ವಕಾಲದಲ್ಲಿ ಯಾಗ ಮಾಡುವಾಗ ತನ್ನ ಮಕ್ಕಳಿಂದ ಸಮುದ್ರವನ್ನು ತೋಡಿಸಿದನು. ಆ ಸಮುದ್ರವು ಉಕ್ಕಿ ವೇಗದಿಂದ ಜನರನ್ನು ಭಯಪಡಿಸುತ್ತಿದೆ.

ಅಸಮಂಜಸ್ತು ಪುತ್ರೋಽಭೂತ್ ಸಗರಸ್ಯೇತಿ ನಃ ಶ್ರುತಮ್ ।
ಜೀವನ್ನೇವ ಸ ಪಿತ್ರಾ ತು ನಿರಸ್ತಃ ಪಾಪಕರ್ಮಕೃತ್ ॥೨೫॥

ಸಗರನಿಗೆ ಅಸಮಂಜಸನೆಂಬ ಪುತ್ರನಿದ್ದನೆಂದು ಕೇಳಿದ್ದೇವೆ. ಅವನು ಬದುಕಿದ್ದಾಗ ಪಾಪಕರ್ಮಕಾರಿಯಂತೇ ತೋರಿಕೊಂಡಿದ್ದರಿಂದ ಅವನನ್ನು ರಾಜನು ಪರಿತ್ಯಾಗ ಮಾಡಿದನು. 'ಪಾಪಕರ್ಮಕೃತ್ ಏವ' ಎಂಬಲ್ಲಿ ಏವಕಾರವು ಇವಾರ್ಥಕ. ಇಲ್ಲದಿದ್ದರೆ ವ್ಯರ್ಥ.

ಅಂಶುಮಾನಿತಿ ಪುತ್ರೋಽಭೂದಸಮಂಜಸ್ಯ ವೀರ್ಯವಾನ್ ।
ದಿಲೀಪೋಽಂಶುಮತಃ ಪುತ್ರೋ ದಿಲೀಪಸ್ಯ ಭಗೀರಥಃ ॥೨೬॥

ಅಸಮಂಜನಿಗೆ ವೀರ್ಯವಂತನಾದ ಅಂಶುಮಂತನೆಂಬ ಪುತ್ರನಿದ್ದನು. ಅಂಶುಮಂತನ ಪುತ್ರನು ದಿಲೀಪ. ದಿಲೀಪನ ಪುತ್ರನು ಭಗೀರಥ.

ಭಗೀರಥಾತ್ ಕಕುತ್ಸ್ಥಸ್ತು ಕಾಕುತ್ಸ್ಥಾ ಯೇನ ವಿಶ್ರುತಾಃ ।
ಕಕುತ್ಸ್ಥಸ್ಯ ಚ ಪುತ್ರೋಽಭೂದ್ರಘುರ್ಯೇನ ತು ರಾಘವಾಃ ॥೨೭॥

ಭಗೀರಥನಿಂದ ಕಕುತ್‌ಸ್ಥ. ಅವನ ವಂಶದವರು ಕಾಕುತ್‌ಸ್ಥರೆಂದು ಪ್ರಸಿದ್ಧ-ರಾದರು. ಕಕುತ್‌ಸ್ಥನ ಪುತ್ರನು ರಘು. ಅವನಿಂದ ಆ ವಂಶದವರು ರಾಘವರೆಂದು ಪ್ರಸಿದ್ಧರಾದರು.

ರಘೋಸ್ತು ಪುತ್ರಸ್ತೇಜಸ್ವೀ ಪ್ರವೃದ್ಧಃ ಪುರುಷಾದಕಃ ।
ಕಲ್ಮಾಷಪಾದಃ ಸೌದಾಸ ಇತ್ಯೇವಂ ಪ್ರಥಿತೋ ಭುವಿ ॥೨೮॥

ರಘುವಿನ ಪುತ್ರನು ತೇಜಸ್ವಿಯಾಗಿ 'ಪ್ರವೃದ್ಧ' 'ಪುರುಷಾದಕ' 'ಕಲ್ಮಾಷ ಪಾದ' 'ಸೌದಾಸ' ಎಂದು ನಾಮಗಳಿಂದ ಭೂಮಿಯಲ್ಲಿ ಪ್ರಸಿದ್ಧನಾದನು.

ಕಲ್ಮಾಷಪಾದಪುತ್ರೋಽಭೂಚ್ಛಂಖಣಸ್ತಿ ತ್ವತಿ ವಿಶ್ರುತಃ ।
ಯಸ್ತು ತದ್ವೀರ್ಯಮಾಸಾದ್ಯ ಸಹಸೈನ್ಯೋ ವ್ಯನೀನಶತ್ ॥೨೯॥

ಕಲ್ಮಾಷಪಾದನ ಪುತ್ರನು ಶಂಖಿಣನೆಂದು ಪ್ರಸಿದ್ಧ. ಕಲ್ಮಾಷಪಾದನು ವಸಿಷ್ಠ ಮುನಿಯ ಶಾಪದಿಂದ ರಾಕ್ಷಸನಾಗಿದ್ದಾಗ ಶಂಖಿಣನು ಕಲ್ಮಾಷಪಾದ ರಾಕ್ಷಸನ ಪರಾಕ್ರಮಕ್ಕೆ ಸೋತು ಅವನಿಗೆ ಸೈನ್ಯಸಮೇತ ಆಹಾರವಾಗಿ ನಾಶವಾದನು.

ಶಂಖಿಣಸ್ಯ ಚ ಪುತ್ರೋಽಭೂಚ್ಛೂರಃ ಶ್ರೀಮಾನ್ ಸುದರ್ಶನಃ ।
ಸುದರ್ಶನಸ್ಯಾಗ್ನಿವರ್ಣ ಅಗ್ನಿವರ್ಣಸ್ಯ ಶೀಘ್ರಗಃ ॥೩೦॥

ಶಂಖಿಣನಿಗೆ ಶೂರನಾದ ಶ್ರೀಮಾನ್ ಸುದರ್ಶನನು ಪುತ್ರನಾಗಿ ಜನಿಸಿದ್ದನು. ಆ ಸುದರ್ಶನನಿಗೆ ಅಗ್ನಿವರ್ಣನೂ ಅಗ್ನಿವರ್ಣನಿಗೆ ಶೀಘ್ರಗನೂ ಪುತ್ರರು.

ಶೀಘ್ರಗಸ್ಯ ಮರುಃ ಪುತ್ರೋ ಮರೋಃ ಪುತ್ರಃ ಪ್ರಶುಶ್ರುಕಃ ।
ಪ್ರಶುಶ್ರುಕಸ್ಯ ಪುತ್ರೋಽಭೂದಂಬರೀಷೋ ಮಹಾದ್ಯುತಿಃ ॥೩೧॥

ಶೀಘ್ರಗನಿಗೆ ಮರು ಪುತ್ರ, ಮರುವಿಗೆ ಪ್ರಶುಶ್ರುಕನು ಪುತ್ರ. ಪ್ರಶುಶ್ರುಕನಿಗೆ ಮಹಾ ಪ್ರಕಾಶಶಾಲಿಯಾದ ಅಂಬರೀಷನು ಪುತ್ರ.

ಅಂಬರೀಷಸ್ಯ ಪುತ್ರೋಽಭೂನ್ನಹುಷಃ ಸತ್ಯವಿಕ್ರಮಃ ।
ನಹುಷಸ್ಯ ಚ ನಾಭಾಗಃ ಪುತ್ರಃ ಪರಮಧಾರ್ಮಿಕಃ ॥೩೨॥

ಅಂಬರೀಷನಿಗೆ ಸತ್ಯಪರಾಕ್ರಮನಾದ ನಹುಷನು ಪುತ್ರನಾದನು. ನಹುಷನಿಗೆ ಪರಮಧಾರ್ಮಿಕನಾದ ನಾಭಾಗನು ಪುತ್ರ.

ಅಜಶ್ಚ ಸುವ್ರತಶ್ಚೈವ ನಾಭಾಗಸ್ಯ ಸುತಾವುಭೌ ।
ಅಜಸ್ಯ ಚೈವ ಧರ್ಮಾತ್ಮಾ ರಾಜಾ ದಶರಥಃ ಸುತಃ ॥೩೩॥

ನಾಭಾಗನಿಗೆ ಅಜ ಮತ್ತು ಸುವ್ರತರು ಇಬ್ಬರು ಪುತ್ರರು. ಅಜನಿಗೆ ಧರ್ಮಾತ್ಮ-ನಾದ ರಾಜಾ ದಶರಥನು ಪುತ್ರ.

ಯೋ ಜಿತ್ವಾ ವಸುಧಾಂ ಕೃತ್ಸ್ನಾಂ ದಿವಂ ಶಾಸತಿ ಸ ಪ್ರಭುಃ ।
ತಸ್ಯ ಜ್ಯೇಷ್ಠೋಽಸಿ ದಾಯಾದೋ ರಾಮ ಇತ್ಯಭಿವಿಶ್ರುತಃ ॥೩೪॥

ದಶರಥನು ಸಮಸ್ತ ಪೃಥಿವಿಯನ್ನು ಗೆದ್ದು ಈಗ ಸ್ವರ್ಗವನ್ನು ಆಳುತ್ತಾನೆ. ಅವನ ಜ್ಯೇಷ್ಠಪುತ್ರನು ರಾಮನೆಂದು ಪ್ರಸಿದ್ಧನಾದವನು ನೀನು.

ತದ್ಗೃಹಾಣ ಸ್ವಕಂ ರಾಜ್ಯಮವೇಕ್ಷ್ವ ಜನಂ ನೃಪ ।
ಇಕ್ಷ್ವಾಕೂಣಾಂ ಹಿ ಸರ್ವೇಷಾಂ ರಾಜಾ ಭವತಿ ಪೂರ್ವಜಃ
ಪೂರ್ವಜೇ ನಾವರಃ ಪುತ್ರೋ ಜ್ಯೇಷ್ಠೋ ರಾಜ್ಯೇಽಭಿಷಿಚ್ಯತೇ ॥೩೫॥

ಅದರಿಂದ ನಿನಗೆ ಸ್ವಾಭಾವಿಕವಾಗಿ ಬಂದಿರುವ ನಿನ್ನ ರಾಜ್ಯವನ್ನು ನೀನು ಪರಿಗ್ರಹಿಸು. ಏಕೆಂದರೆ ಇಕ್ಷ್ವಾಕುವಂಶದವರೆಲ್ಲರಲ್ಲಿಯೂ ಜ್ಯೇಷ್ಠನು ರಾಜ-ನಾಗುವನೆಂದು ನಿಯಮವಿದೆ. ಜ್ಯೇಷ್ಠನಿರುವಾಗ ಕನಿಷ್ಠನು ರಾಜ್ಯದಲ್ಲಿ ಅಭಿಷಿಕ್ತ ನಾಗುವುದಿಲ್ಲ.

ಸ ರಾಘವಾಣಾಂ ಕುಲಧರ್ಮಮಾತ್ಮನಃ
ಸನಾತನಂ ನಾದ್ಯ ವಿಹಂತುಮರ್ಹಸಿ ।
ಪ್ರಭೂತರತ್ನಾಮನುಶಾಧಿ ಮೇದಿನೀಂ
ಪ್ರಭೂತರಾಷ್ಟ್ರಾಂ ಪಿತೃವನ್ಮಹಾಯಶಾಃ ॥೩೬॥

ನಿನ್ನ ರಘುಕುಲದವರ ಸನಾತನವಾದ ಕುಲಧರ್ಮವನ್ನು ನೀನು ಈಗ ವ್ಯತ್ಯಯಗೊಳಿಸಬಾರದು. ಹೇರಳವಾದ ಸಂಪತ್ತುಳ್ಳ ಬಹಳ ಸಾಮಂತ ರಾಜ್ಯ-ಗಳಿಂದ ಯುಕ್ತವಾದ ಪೃಥಿವಿಯನ್ನು ಮಹಾಯಶಸ್ವಿಯಾದ ನೀನು ತಂದೆ-ಯಂತೆಯೇ ಆಳು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ನೂರಹತ್ತನೇ ಸರ್ಗ ಮುಗಿಯಿತು.

❖

ಏಕಾದಶಾಧಿಕ ಶತತಮಃ ಸರ್ಗಃ

ಸರ್ಗ – 111

ಶ್ರೀರಾಮನು ಭರತನಿಗೆ ಬುದ್ಧಿವಾದವನ್ನು ಹೇಳುವುದು.

ವಸಿಷ್ಠಸ್ತು ತದಾ ರಾಮಮುಕ್ತ್ವಾ ರಾಜಪುರೋಹಿತಃ ।
ಅಬ್ರವೀದ್ಧರ್ಮಸಂಯುಕ್ತಂ ಪುನರೇವಾಪರಂ ವಚಃ ॥೧॥

ರಾಜಪುರೋಹಿತರಾದ್ದರಿಂದ ರಾಜ್ಯದ ಹಿತದೃಷ್ಟಿಯಿಂದ ವಸಿಷ್ಠರು ಹೀಗೆ ರಾಮನಿಗೆ ಹೇಳಿ ಪುನಃ ಧರ್ಮಸಮ್ಮತವಾದ ಇನ್ನೊಂದು ಮಾತನ್ನು ಹೇಳಿದರು.

ಪುರುಷಸ್ಯೇಹ ಜಾತಸ್ಯ ಭವಂತಿ ಗುರವಸ್ತ್ರಯಃ ।
ಆಚಾರ್ಯಶ್ಚೈವ ಕಾಕುತ್ಸ್ಥ ಪಿತಾ ಮಾತಾ ಚ ರಾಘವ ॥೨॥

ರಾಮ, ಹುಟ್ಟಿದ ಮಾನವನಿಗೆ ಹಿರಿಯರು ಮೂವರು ಇರುತ್ತಾರೆ— ಆಚಾರ್ಯ ತಂದೆ ಮತ್ತು ತಾಯಿ ಎಂದು.

ಪಿತಾ ಹ್ಯೇನಂ ಜನಯತಿ ಪುರುಷಂ ಪುರುಷರ್ಷಭ ।
ಪ್ರಜ್ಞಾಂ ದದಾತಿ ಚಾಚಾರ್ಯಸ್ತಸ್ಮಾತ್ ಸ ಗುರುರುಚ್ಯತೇ ॥೩॥

ಪುರುಷೋತ್ತಮ, ತಂದೆಯು ಈ ಪುರುಷನಿಗೆ ಜನ್ಮ ಕೊಡುತ್ತಾನೆ. ಅದರಿಂದ ಅವನು ಹಿರಿಯನೆನಿಸುತ್ತಾನೆ. ಆಚಾರ್ಯನು ವಿದ್ಯೆ ನೀಡುತ್ತಾನೆ ಅದರಿಂದ ಅವನೂ ಹಿರಿಯನೆನಿಸುತ್ತಾನೆ.

ಸೋಽಹಂ ತೇ ಪಿತುರಾಚಾರ್ಯಸ್ತವ ಚೈವ ಪರಂತಪ ।
ಮಮ ತ್ವಂ ವಚನಂ ಕುರ್ವನ್ನಾತಿವರ್ತೇಃ ಸತಾಂ ಗತಿಮ್ ॥೪॥

ನಾನು ನಿನ್ನ ಪಿತನಿಗೂ ನಿನಗೂ ಆಚಾರ್ಯನಾಗಿರುವುದರಿಂದ ಶತ್ರುನಾಶಕನೆ, ಈಗ ನೀನು ನನ್ನ ಮಾತಿನಂತೆ ನಡೆದರೆ ಸಜ್ಜನರ ಮಾರ್ಗವನ್ನು ಅತಿಕ್ರಮಿಸಿ ದಂತಾಗುವುದಿಲ್ಲ.

ಇಮಾ ಹಿ ತೇ ಪರಿಷದಃ ಶ್ರೇಣಯಶ್ಚ ದ್ವಿಜಾತಯಃ ।
ಏಷು ತಾತ ಚರನ್ ಧರ್ಮಂ ನಾತಿವರ್ತೇಃ ಸತಾಂ ಗತಿಮ್ ॥೫॥

ಮಗು, ಇವರು ನಿನ್ನ ಮಂತ್ರಿಪರಿಷತ್ತಿನವರು. ಇವರು ಪ್ರಜೆಗಳು, ಇವರು ದ್ವಿಜರು, ಇವರಲ್ಲಿ ಪಾಲನರೂಪ ಧರ್ಮವನ್ನು ಆಚರಿಸುವುದರಿಂದ ನೀನು ಸಜ್ಜನರ ಮಾರ್ಗವನ್ನು ಬಿಟ್ಟಂತಾಗುವುದಿಲ್ಲ.

ವೃದ್ಧಾಯಾ ಧರ್ಮಶೀಲಾಯಾ ಮಾತುರ್ನಾರ್ಹಸ್ಯವರ್ತಿತುಮ್ ।
ಅಸ್ಯಾಸ್ತು ವಚನಂ ಕುರ್ವನ್ನಾತಿವರ್ತೇಃ ಸತಾಂ ಗತಿಮ್ ॥೬॥

ವೃದ್ಧೆಯಾದ ಧರ್ಮಶೀಲೆಯಾದ ತಾಯಿ ಕೌಸಲ್ಯೆಯ ಮಾತನ್ನು ಮೀರಬೇಡ. ಅವಳ ಮಾತನ್ನು ಕೇಳಿದರೆ ನೀನು ಸಜ್ಜನರ ಮಾರ್ಗವನ್ನು ಬಿಟ್ಟಂತಾಗುವು ದಿಲ್ಲ.

ಭರತಸ್ಯ ವಚಃ ಕುರ್ವನ್ ಯಾಚಮಾನಸ್ಯ ರಾಘವ ।
ಆತ್ಮಾನಂ ನಾತಿವರ್ತೇಸ್ತ್ವಂ ಸತ್ಯಧರ್ಮಪರಾಯಣ ॥೭॥

ರಾಮ, ಸತ್ಯಧರ್ಮಪರಾಯಣ, ಬೇಡುತ್ತಿರುವ ಭರತನ ಮಾತನ್ನು ನಡೆಸಿ-ಕೊಟ್ಟರೆ ನೀನು ನಿನ್ನ ಹಿತವನ್ನು ಕಡೆಗಣಿಸಿದಂತಾಗುವುದಿಲ್ಲ.

ಏವಂ ಮಧುರಮುಕ್ತಸ್ತು ಗುರುಣಾ ರಾಘವಃ ಸ್ವಯಮ್ ।
ಪ್ರತ್ಯುವಾಚ ಸಮಾಸೀನಂ ವಸಿಷ್ಠಂ ಪುರುಷರ್ಷಭಃ ॥೮॥

ಹೀಗೆ ಗುರು ವಸಿಷ್ಠರು ನಯವಾಗಿ ಹೇಳಿದರೂ ಪುರುಷೋತ್ತಮ ಶ್ರೀರಾಮನು ಆಸನದಲ್ಲಿ ಕುಳಿತಿದ್ದ ವಸಿಷ್ಠರಿಗೆ ಪ್ರತಿಯಾಗಿ ಉತ್ತರ ನೀಡಿದನು.

ಯನ್ಮಾತಾಪಿತರೌ ವೃತ್ತಂ ತನಯೇ ಕುರುತಃ ಸದಾ ।
ನ ಸುಪ್ರತಿಕರಂ ತತ್ತು ಮಾತ್ರಾ ಪಿತ್ರಾ ಚ ಯತ್ಕೃತಮ್ ॥೯॥

ಯಥಾಶಕ್ತಿ ಪ್ರದಾನೇನ ಸ್ನಾಪನಾಚ್ಛಾದನೇನ ಚ ।
ನಿತ್ಯಂ ಚ ಪ್ರಿಯವಾದೇನ ತಥಾ ಸಂವರ್ಧನೇನ ಚ ॥೧೦॥

ತಾಯಿತಂದೆಗಳು ಮಗನಲ್ಲಿ ಯಾವ ಉಪಕಾರವನ್ನು ಮಾಡುವರೋ ಅದಕ್ಕೆ ಪ್ರತಿಯಾಗಿ ಏನೂ ಉಪಕಾರ ಮಾಡಲಾಗುವುದಿಲ್ಲ. ಯಥಾಶಕ್ತಿ ಎಲ್ಲ ಸುಖವನ್ನೂ ಕೊಡುವುದು ಮೈತೊಳೆಯುವುದು ಉಡುಗೆ ತೊಡಿಸುವುದು ಪ್ರೀತಿಯಿಂದ ಮಧುರವಾಗಿ ಮಾತನಾಡಿಸುವುದು ಆಹಾರ ನೀಡಿ ಬೆಳೆಸುವುದು ಮುಂತಾದವುಗಳ ಮೂಲಕ ಮಾತಾಪಿತೃಗಳು ಏನು ಆರೈಕೆ ಮಾಡುವರೋ ಅದಕ್ಕೆ ಪ್ರತಿಯಾಗಿ ಏನೂ ಉಪಕಾರ ಮಾಡುವುದು ದುಃಸಾಧ್ಯ.

ಸ ಹಿ ರಾಜಾ ಜನಯಿತಾ ಪಿತಾ ದಶರಥೋ ಮಮ ।
ಆಜ್ಞಾತಂ ಯನ್ಮಯಾ ತಸ್ಯ ನ ತನ್ಮಿಥ್ಯಾ ಭವಿಷ್ಯತಿ ॥೧೧॥

ದಶರಥನು ನಮಗೆ ಜನ್ಮಕೊಟ್ಟ ತಂದೆ. ಅವನು ಮಾಡಿದ ಪ್ರತಿಜ್ಞೆ, ನನ್ನಿಂದ ಹಾಳಾಗಬಾರದು.

ಏವಮುಕ್ತಸ್ತು ರಾಮೇಣ ಭರತಃ ಪ್ರತ್ಯನಂತರಮ್ ।
ಉವಾಚ ಪರಮೋದಾರಃ ಸೂತಂ ಪರಮದುರ್ಮನಾಃ ॥೧೨॥

ಗುರುಗಳನ್ನು ನೋಡಿ ರಾಮನು ಆಡಿದ ಮಾತು ವಸ್ತುತಃ ಭರತನಿಗೇ ಹೇಳಿದ್ದು. ಅದರಿಂದ ಅದನ್ನು ಕೇಳಿ ಪರಮ ಉದಾರನಾದ ಭರತನು ಪರಮ ದುಃಖದಿಂದ ಬಳಿಯಲ್ಲಿದ್ದ ಸುಮಂತ್ರನಿಗೆ ಹೇಳಿದನು.

ಇಹ ಮೇ ಸ್ಥಂಡಿಲೇ ಶೀಘ್ರಂ ಕುಶಾನಾಸ್ತರ ಸಾರಥೇ ।
ಆರ್ಯಂ ಪ್ರತ್ಯುಪವೇಕ್ಷ್ಯಾಮಿ ಯಾವನ್ಮೇ ನ ಪ್ರಸೀದತಿ ॥೧೩॥

ಸಾರಥಿ, ಇಲ್ಲಿ ನೆಲದ ಮೇಲೆ ದರ್ಭೆ ಹಾಸು. ಅಣ್ಣನ ಎದುರಿಗೆ 'ಪ್ರತ್ಯುಪ-ವೇಶ'ವನ್ನು ಉಪವಾಸ ಸತ್ಯಾಗ್ರಹವನ್ನು, ಅವನು ಎಂದಿನವರೆಗೆ ನನ್ನ ವಿಷಯದಲ್ಲಿ ಪ್ರಸನ್ನನಾಗುವುದಿಲ್ಲವೋ ಅಂದಿನವರೆಗೂ ನಡೆಸುತ್ತೇನೆ.

ಅನಾಹಾರೋ ನಿರಾಲೋಕೋ ಧನಹೀನೋ ಯಥಾ ದ್ವಿಜಃ ।
ಶೇಷ್ಯೇ ಪುರಸ್ತಾಚ್ಚಾಲಾಯಾಂ ಯಾವನ್ಮಾಂ ಪ್ರತಿಯಾಸ್ಯತಿ ॥೧೪॥

ಬಡ್ಡಿಗಾಗಿ ಹಣವನ್ನು ಸಾಲವಾಗಿ ಕೊಟ್ಟು ಕಳೆದುಕೊಂಡ ಬ್ರಾಹ್ಮಣನು ಧನಿಕನ ಮುಂದೆ ಸತ್ಯಾಗ್ರಹ ಮಾಡುವಂತೆ ನಾನೂ ಈ ಪರ್ಣಶಾಲೆಯಲ್ಲಿ ರಾಮನ ಎದುರಿಗೆ ನಿರಾಹಾರನಾಗಿ ಮುಖಕ್ಕೆ ಮುಸುಕು ಹಾಕಿಕೊಂಡು ರಾಮನು ನನ್ನೊಂದಿಗೆ ಅಯೋಧ್ಯೆಗೆ ಹಿಂದಿರುವವರೆಗೂ ಮಲಗಿರುತ್ತೇನೆ' ಎಂದನು.

ಸ ತು ರಾಮಮವೇಕ್ಷಂತಂ ಸುಮಂತ್ರಂ ಪ್ರೇಕ್ಷ್ಯ ದುರ್ಮನಾಃ ।
ಕುಶೋತ್ತರಮುಪಸ್ಥಾಪ್ಯ ಭೂಮಾವೇವಾಸ್ಥಿತಃ ಸ್ವಯಮ್ ॥೧೫॥

ಸುಮಂತ್ರನು ರಾಮನ ಮುಖವನ್ನು ನೋಡುತ್ತ ನಿಂತುದನ್ನು ಕಂಡು ಈತ ನನ್ನ ಮಾತನ್ನು ಕೇಳುವುದಿಲ್ಲ ಎಂದು ದುಃಖಿತನಾದ ಭರತನು, ತಾನೇ ದರ್ಭೆ ತಂದು ಹಾಸಿ ನೆಲದ ಮೇಲೆ ಒರಗಿದನು.

ತಮುವಾಚ ಮಹಾತೇಜಾ ರಾಮೋ ರಾಜರ್ಷಿಸತ್ತಮಃ ।
ಕಿಂ ಮಾಂ ಭರತ ಕುರ್ವಾಣಂ ತಾತ ಪ್ರತ್ಯುಪವೇಕ್ಷ್ಯಸಿ ॥೧೬॥

ರಾಜರ್ಷಿ ಶ್ರೇಷ್ಠನಾದ ಮಹಾತೇಜಸ್ವಿ ರಾಮನು ಭರತನಿಗೆ ನುಡಿದನು, 'ಮಗು ಭರತ, ನಾನು ಏನು ತಪ್ಪು ಮಾಡುತ್ತಿದ್ದೇನೆ ಎಂದು ನೀನು ಸತ್ಯಾಗ್ರಹ ಮಾಡುವಿ?'

ಬ್ರಾಹ್ಮಣೋ ಹ್ಯೇಕಪಾರ್ಶ್ವೇನ ನರಾನ್ ರೋದ್ಧುಮಿಹಾರ್ಹತಿ ।
ನ ತು ಮೂರ್ಧಾಭಿಷಿಕ್ತಾನಾಂ ವಿಧಿಃ ಪ್ರತ್ಯುಪವೇಶನೇ ॥೧೭॥

ಮತ್ತು, ಬ್ರಾಹ್ಮಣನಾದವನು ತನಗೆ ಅನ್ಯಾಯ ಮಾಡಿದವರ ಮನೆಬಾಗಿಲ ಮುಂದೆ ದರ್ಭೆಯ ಹಾಸಿನ ಮೇಲೆ ಒಂದೇ ಮಗ್ಗುಲಾಗಿ ಮಲಗಿ ತನಗಾದ ಅನ್ಯಾಯವನ್ನು ಪ್ರತಿಭಟಿಸಬಹುದು. ಮೂರ್ಧಾಭಿಷಿಕ್ತರಾದ ಕ್ಷತ್ರಿಯರಿಗೆ ಹೀಗೆ ಸತ್ಯಾಗ್ರಹ ಮಾಡುವುದಕ್ಕೆ ವಿಧಿ ಇಲ್ಲ.

ಉತ್ತಿಷ್ಠ ನರಶಾರ್ದೂಲ ಹಿತ್ವೈತದ್ದಾರುಣಂ ವ್ರತಮ್ ।
ಪುರವರ್ಯಾಮಿತಃ ಕ್ಷಿಪ್ರಮಯೋಧ್ಯಾಂ ಯಾಹಿ ರಾಘವ ॥೧೮॥

ಪುರುಷೋತ್ತಮ, ಈ ಕಠಿನವಾದ ವ್ರತ ಮಾಡುವುದನ್ನು ಬಿಟ್ಟು ಎದ್ದೇಳು. ಭರತ, ಅಯೋಧ್ಯಾಪಟ್ಟಣಕ್ಕೆ ಬೇಗನೆ ಹೊರಟುಹೋಗು.

ಆಸೀನಸ್ತ್ವೇವ ಭರತಃ ಪೌರಜಾನಪದಂ ಜನಮ್ ।
ಉವಾಚ ಸರ್ವತಃ ಪ್ರೇಕ್ಷ್ಯ ಕಿಮಾರ್ಯಂ ನಾನುಶಾಸಥ ॥೧೯॥

ಭರತನು ಕುಳಿತೇ ಸುತ್ತಲೂ ನೋಡುತ್ತ ಪೌರರಿಗೆ ಮತ್ತು ದೇಶವಾಸಿ ಪ್ರಜೆಗಳಿಗೆ ಹೇಳಿದನು— 'ನೀವಾದರೂ ಶ್ರೀರಾಮನಿಗೆ ಏಕೆ ಒತ್ತಾಯ ಮಾಡುವುದಿಲ್ಲ?' ಎಂದು.

ಧನಿಕನ ಮನೆ ಬಾಗಿಲ ಮುಂದೆ ದರ್ಭೆಯನ್ನು ಹಾಸಿ ಮುಖಕ್ಕೆ ಮುಸುಕು ಹಾಕಿಕೊಂಡು ಒಂದು ಮಗ್ಗುಲಿಗೆ ಮಲಗಬೇಕು, ಕಾರ್ಯಸಿದ್ಧಿಯಾಗುವವರೆಗೂ ಒಂದೇ ಪಾರ್ಶ್ವದಲ್ಲಿ ಮಲಗಬೇಕು. ನಿರಾಹಾರನಾಗಿರಬೇಕು. ಕಾರ್ಯಸಿದ್ಧಿಯಾಗದಿದ್ದರೆ ಪ್ರಾಣ ಬಿಡಲೂ ಸಿದ್ಧನಾಗಿರಬೇಕು. ಇದು ಪ್ರತ್ಯುಪವೇಶ ವ್ರತ. ಬ್ರಾಹ್ಮಣನು ಹೀಗೆ ಮಾಡಬಹುದು. ಕ್ಷತ್ರಿಯನು ಬಲಾತ್ಕಾರವಾಗಿ ಆಕ್ರಮಣವನ್ನೇ ಮಾಡಬೇಕು. ಕ್ಷತ್ರಿಯನಾದ ಭರತನು ಈ ಸತ್ಯಾಗ್ರಹವ್ರತವನ್ನು ಮಾಡುವುದು ಅವಿಹಿತವಾದ್ದರಿಂದ ಸರಿಯಲ್ಲ. ಆಕ್ರಮಣವನ್ನೆ ಮಾಡೋಣ

ಎಂದರೆ ಶ್ರೀರಾಮನು ಗುರು. ಅದಕ್ಕೆ ಪ್ರಜೆಗಳಿಂದಲೇ ಸತ್ಯಾಗ್ರಹ ಮಾಡಿಸೋಣ ಎಂದು ಬಗೆದು ಅವರಿಗೆ ಹಾಗೆ ಹೇಳುತ್ತಾನೆ.

ತೇ ತಮೂಚುರ್ಮಹಾತ್ಮಾನಂ ಪೌರಜಾನಪದಾ ಜನಾಃ ।
ಕಾಕುತ್ಸ್ಥಮಭಿಜಾನೀಮಃ ಸಮ್ಯಗ್ವದತಿ ರಾಘವಃ ॥೨೦॥

ಪೌರರು ಮತ್ತು ದೇಶವಾಸಿ ಜನರು ಮಹಾತ್ಮ ಭರತನಿಗೆ ಹೇಳಿದರು— 'ರಾಮನೇನೆಂದು ನಮಗೆ ಗೊತ್ತಿದೆ. ಅವನು ಹೇಳುವುದು ಸರಿಯಾಗೇ ಇದೆ'.

ಏಷೋಽಪಿ ಹಿ ಮಹಾಭಾಗಃ ಪಿತುರ್ವಚಸಿ ತಿಷ್ಠತಿ ।
ಅತ ಏವ ನ ಶಕ್ತಾ ಸ್ಮೋ ವ್ಯಾವರ್ತಯಿತುಮಂಜಸಾ ॥೨೧॥

'ರಾಮನು ಪಿತೃವಾಕ್ಯ ಪರಿಪಾಲನ ವ್ರತದಲ್ಲಿ ಸ್ಥಿರವಾಗಿ ನಿಂತಿದ್ದಾನೆ. ಅವನನ್ನು ಹಿಂತಿರುಗಲು ಚೆನ್ನಾಗಿ ಒಪ್ಪಿಸುವುದು ನಮಗೆ ಶಕ್ಯವಾಗಲಾರದು'.

ತೇಷಾಮಾಜ್ಞಾಯ ವಚನಂ ರಾಮೋ ವಚನಮಬ್ರವೀತ್ ।
ಏತನ್ನಿಬೋಧ ವಚನಂ ಸುಹೃದಾಂ ಧರ್ಮಚಕ್ಷುಷಾಮ್ ॥೨೨॥

ಪ್ರಜೆಗಳ ಮಾತನ್ನು ಕೇಳಿ ಶ್ರೀರಾಮನು ಭರತನಿಗೆ ಹೇಳಿದನು. 'ಬಂಧು ಗಳಾದ ಪ್ರಜೆಗಳು ಧರ್ಮಪ್ರಜ್ಞೆ ಉಳ್ಳವರು. ಅವರ ಮಾತನ್ನು ನೀನು ಕೇಳು'.

ಏತಚ್ಚೈವೋಭಯಂ ಶ್ರುತ್ವಾ ಸಮ್ಯಕ್ ಸಂಪಶ್ಯ ರಾಘವ ।
ಉತ್ತಿಷ್ಠ ತ್ವಂ ಮಹಾಬಾಹೋ ಮಾಂ ಚ ಸ್ಪೃಶ ತಥೋದಕಮ್ ॥೨೩॥

ಸತ್ಯಾಗ್ರಹವನ್ನು ಬಿಡೆಂದು ನಾನೂ ಹೇಳುತ್ತೇನೆ. ಪ್ರಜೆಗಳೂ ಹೇಳುತ್ತಿದ್ದಾರೆ. ಎರಡನ್ನೂ ಕೇಳಿ ಚೆನ್ನಾಗಿ ಆಲೋಚಿಸು, ಭರತ, ಮಹಾಬಾಹು, ಎದ್ದೇಳು. ಅವಿಹಿತವಾದ ಕಾರ್ಯಕ್ಕೆ ಹೊರಟಿದ್ದನ್ನು ಕ್ಷಮಿಸೆಂದು ನನ್ನ ಪಾದಸ್ಪರ್ಶ ಮಾಡು. ಪ್ರಾಯಶ್ಚಿತ್ತವಾಗಿ 'ಉದಕಸ್ಪರ್ಶ'ವನ್ನು ಆಚಮನವನ್ನು ಮಾಡು.

ಅಥೋತ್ಥಾಯ ಜಲಂ ಸ್ಪೃಷ್ಟ್ವಾ ಭರತೋ ವಾಕ್ಯಮಬ್ರವೀತ್ ।
ಶೃಣ್ವಂತು ಮೇ ಪರಿಷದೋ ಮಂತ್ರಿಣಃ ಶ್ರೇಣಯಸ್ತಥಾ ॥೨೪॥

ಭರತನು ಎದ್ದು ಶುದ್ಧಾಚಮನ ಮಾಡಿ ರಾಮನ ಪಾದಸ್ಪರ್ಶ ಮಾಡಿ ನುಡಿದನು— ಬ್ರಾಹ್ಮಣರು ಮಂತ್ರಿಗಳು ಮತ್ತು ಪ್ರಜೆಗಳು, ನನ್ನ ಮಾತನ್ನು ಕೇಳಿರಿ.

ನ ಯಾಚೇ ಪಿತರಂ ರಾಜ್ಯಂ ನಾನುಶಾಸಾಮಿ ಮಾತರಮ್ ।
ಆರ್ಯಂ ಪರಮಧರ್ಮಜ್ಞಂ ನಾನುಜಾನಾಮಿ ರಾಘವಮ್ ॥೨೫॥

ನಾನು ತಂದೆಯಲ್ಲಿ ರಾಜ್ಯವನ್ನು ಯಾಚಿಸಿದವನಲ್ಲ, ತಾಯಿಯಲ್ಲಿಯೂ ರಾಜ್ಯವನ್ನು ಕೊಡಿಸಲು ಆಗ್ರಹಿಸಿದವನಲ್ಲ. ಪರಮಧರ್ಮಜ್ಞನಾದ ಪೂಜ್ಯ ರಾಮನಿಗೆ ವನವಾಸ ಮಾಡಲು ಅನುಮತಿಸಿದವನೂ ಅಲ್ಲ.

ಯದಿ ತ್ವವಶ್ಯಂ ವಸ್ತವ್ಯಂ ಕರ್ತವ್ಯಂ ಚ ಪಿತುರ್ವಚಃ ।
ಅಹಮೇವ ನಿವತ್ಸ್ಯಾಮಿ ಚತುರ್ದಶ ಸಮಾ ವನೇ ॥೨೬॥

'ಆದರೂ ರಾಮನು 'ಅವಶ್ಯ ವನವಾಸ ಮಾಡಬೇಕು, ತಂದೆಯ ಆಜ್ಞೆಯನ್ನು ಪಾಲಿಸಬೇಕು' ಎನ್ನುವುದಾದರೆ ರಾಮನಿಗೆ ಪ್ರತಿನಿಧಿಯಾಗಿ ನಾನೇ ಹದಿನಾಲ್ಕು ವರ್ಷಕಾಲ ವನವಾಸ ಮಾಡುವೆನು'. ರಾಮನು ರಾಜ್ಯವಾಳಲಿ.

ಧರ್ಮಾತ್ಮಾ ತಸ್ಯ ತಥ್ಯೇನ ಭ್ರಾತುರ್ವಾಕ್ಯೇನ ವಿಸ್ಮಿತಃ ।
ಉವಾಚ ರಾಮಃ ಸಂಪ್ರೇಕ್ಷ್ಯ ಪೌರಜಾನಪದಂ ಜನಮ್ ॥೨೭॥

ಭರತನು ಆಡಿದ ಸತ್ಯವಾದ ಮಾತನ್ನು ಕೇಳಿ ವಿಸ್ಮಿತನಾದ ಧರ್ಮಾತ್ಮನಾದ ರಾಮನು ಪೌರ ಮತ್ತು ದೇಶವಾಸಿ ಜನರನ್ನು ನೋಡುತ್ತ ನುಡಿದನು.

ವಿಕ್ರೀತಮಾಹಿತಂ ಕ್ರೀತಂ ಯತ್ ಪಿತ್ರಾ ಜೀವತಾ ಮಮ ।
ನ ತಲ್ಲೋಪಯಿತುಂ ಶಕ್ಯಂ ಮಯಾ ವಾ ಭರತೇನ ವಾ ॥೨೮॥

ನನ್ನ ತಂದೆ ಜೀವಿತಕಾಲದಲ್ಲಿ ಮಾರಿದ್ದನ್ನು ನ್ಯಾಸವಾಗಿಟ್ಟಿದ್ದನ್ನು ಬೆಲೆಗೆ ಕೊಂಡಿದ್ದನ್ನು ಏನಾದರೂ ಲೋಪಮಾಡಲು ನನ್ನಿಂದಾಗಲಿ ಭರತನಿಂದಾಗಲಿ ಶಕ್ಯವಿಲ್ಲ.

ಕ್ರಯ ವಿಕ್ರಯಗಳು ನ್ಯಾಸಕ್ಕೆ ಉದಾಹರಣೆಗಾಗಿ ಉಕ್ತವಾಗಿದೆ. ಪ್ರಕೃತ ದಶರಥನು ದೇವಾಸುರಯುದ್ಧ ಕಾಲದಲ್ಲಿ ಕೈಕೇಯಿ ತನ್ನ ಜೀವಉಳಿಸಿದ್ದಕ್ಕಾಗಿ ಕೃತಜ್ಞತಾ ಬುದ್ಧಿಯಿಂದ ಎರಡು ವರಗಳನ್ನು ಕೊಟ್ಟಿದ್ದ. ಕೈಕೇಯಿ 'ಈಗ ಬೇಡ, ಬೇಕಾದಾಗ ತೆಗೆದುಕೊಳ್ಳುವೆನೆ'ಂದು ಹೇಳಿದ್ದರಿಂದ ಆ ವರಗಳನ್ನು ತನ್ನಲ್ಲಿಯೆ ನ್ಯಾಸವಾಗಿ ಇರಿಸಿಕೊಂಡಿದ್ದನು. ಅವುಗಳನ್ನು ತಾನು ಲೋಪ ಮಾಡಬಾರ-ದೆನ್ನುತ್ತಾನೆ ರಾಮ. ತಾನು ವನವಾಸ ಮಾಡದಿದ್ದರೆ ಭರತ ರಾಜ್ಯವಾಳದಿದ್ದರೆ

ನ್ಯಾಸವಾಗಿ ದಶರಥನು ತನ್ನಲ್ಲಿರಿಸಿಕೊಂಡಿದ್ದ ಎರಡೂ ವರಗಳಿಗೆ ಲೋಪ ಬಂದಂತಾಗುತ್ತದೆ ಎನ್ನುತ್ತಾನೆ.

ಉಪಧಿರ್ನ ಮಯಾ ಕಾರ್ಯೋ ವನವಾಸೇ ಜುಗುಪ್ಸಿತಃ ।
ಯುಕ್ತಮುಕ್ತಂ ಚ ಕೈಕೇಯ್ಯಾ ಪಿತ್ರಾ ಮೇ ಸುಕೃತಂ ಕತಮ್ ॥೨೯॥

ಭರತನು ಹೇಳಿದಂತೆ ನನಗೆ ಪ್ರತಿನಿಧಿಯಾಗಿ ಅವನೇ ವನವಾಸ ಮಾಡಿದರೆ ಅದು ಸರಿಯಾಗುವುದಿಲ್ಲ. ನಾನು ಮಾಡಬೇಕಾಗುವ ವನವಾಸ ರೂಪವಾದ ಕಾರ್ಯವನ್ನು ನನ್ನ ಬದಲು ಪ್ರತಿನಿಧಿಯಾದ ಇನ್ನೊಬ್ಬ ವ್ಯಕ್ತಿಗೆ ನಾನು ವಹಿಸಿ ಕೊಡುವುದು 'ಉಪಧಿ' ಅದು ಜುಗುಪ್ಸಿತ. ಹೀನಕಲ್ಪದ ಆಚರಣೆಯಾಗುತ್ತದೆ. ಮತ್ತು ನನ್ನ ತಂದೆ ಶಕ್ತನಾದ ನನಗೇ ವನವಾಸಾಜ್ಞೆ ಮಾಡಿದ್ದು ಸರಿಯಾಗಿಯೇ ಇದೆ. ಕೈಕೇಯಿಯೂ ನಾನು ವನವಾಸ ಮಾಡಬೇಕೆಂದು ಹೇಳಿದ್ದು ಯುಕ್ತವೇ ಆಗಿದೆ.

ಹೀನ ಕಲ್ಪದ ಆಚರಣೆಯಾಗುತ್ತದೆ. ಉತ್ತಮ ಕಲ್ಪದ ಆಚರಣೆಯಾಗುವುದಿಲ್ಲ ಏಕೆಂದರೆ ಶಕ್ತನು ನಾನು ಶಕ್ತಿ ಇದ್ದರೂ ಅಶಕ್ತನಂತೆ ವರ್ತಿಸುವುದು, ನಾನು ಮಾಡದೆ ಇನ್ನೊಬ್ಬನಿಂದ ಮಾಡಿಸುವುದು ತಪ್ಪು. ಸೋಮಾಭಾವೇ ಪೂತೀಕ-ಗ್ರಹಣ. ಪ್ರಧಾನವಾದ ಸೋಮವೇ ಸಿಗುತ್ತಿರುವಾಗ ಅದಕ್ಕೆ ಪ್ರತಿನಿಧಿಯಾದ ಪೂತೀಕವನ್ನೇ ಯಾಗದಲ್ಲಿ ಗ್ರಹಣ ಮಾಡುವುದು ನಿಷಿದ್ಧ.

ಯದ್ಯಪಿ 'ಧರ್ಮಾತ್ಮಾ ತಸ್ಯ ತಥ್ಯೇನ ಭ್ರಾತುರ್ವಾಕ್ಯೇನ ವಿಸ್ಮಿತಃ' ಎಂದು ಹೇಳಿದಂತೆ ಭರತನು 'ಉಪಧಿ'ಯನ್ನು ಹೇಳಿದ್ದು ತಥ್ಯವೆ. ತಾವು ಮಾಡಬೇಕಾಗಿರುವ ವ್ರತವನ್ನು ಇನ್ನೊಬ್ಬರಿಂದ ಮಾಡಿಸುವುದುಂಟು—

ವೈಶಂಪಾಯನ ಶಿಷ್ಯಾ ವೈ ಚರಕಾಧ್ವರ್ಯವೋ೨ ಭವನ್ ।
ಯಚ್ಚೇರುರ್ಬ್ರಹ್ಮ ಹತ್ಯಾಂಹಃ ಕ್ಷಪಣಾಯ ಗುರೋರ್ವ್ರತಂ ॥
(ಭಾಗ.12.6.26)

ಎಂದು ಭಾಗವತದಲ್ಲಿ ಹೇಳಿದಂತೆ ವೈಶಂಪಾಯನರ ಶಿಷ್ಯರಾದ ಚರಕಾಧ್ವರ್ಯುಗಳು ಗುರುವಿನ ಬ್ರಹ್ಮಹತ್ಯಾಪಾಪವನ್ನು ಕಳೆಯಲು ತಾವು ವ್ರತಾನುಷ್ಠಾನ ಮಾಡಿದರು. ಗುರು ಅಶಕ್ತರಲ್ಲ, ಆದರೂ ಗುರು ಮಾಡಿಕೊಳ್ಳಬೇಕಾಗಿದ್ದ ಬ್ರಹ್ಮಹತ್ಯಾ ಪಾಪಪ್ರಾಯಶ್ಚಿತ್ತವನ್ನು ಶಿಷ್ಯರು ಭಕ್ತಿಯಿಂದ ಮಾಡಿದರು. ಅದರಿಂದ ಗುರುವಿಗೆ ಕೆಟ್ಟ ಹೆಸರು ಬರಲಿಲ್ಲ. ರಾಮನ ಅಭಿಪ್ರಾಯದಲ್ಲಿ ಇಂಥ ಉಪಧಿ ತನಗೆ ಪ್ರಶಸ್ತವಲ್ಲ. ತನಗೆ ಇದರಿಂದ ಕೀರ್ತಿ ಬರುವುದಿಲ್ಲ. ರಾಜ್ಯದ ಆಸೆಯಿಂದ

ವನವಾಸವನ್ನು ತಾನು ಮಾಡದೆ, ಪಾಪ ಭರತನಿಂದ ಮಾಡಿಸುತ್ತಾನೆ ರಾಮ!' ಎಂದು ಪ್ರಜೆಗಳು ನಿಂದಿಸುತ್ತಾರೆ. ಅದರಿಂದ ಜುಗುಪ್ಸಿತ.

ಜಾನಾಮಿ ಭರತಂ ಕ್ಷಾಂತಂ ಗುರುಸತ್ಕಾರಕಾರಿಣಮ್ ।
ಸರ್ವಮೇವಾತ್ರ ಕಲ್ಯಾಣಂ ಸತ್ಯಸಂಧೇ ಮಹಾತ್ಮನಿ ॥೩೦॥

ಭರತನು ಕೂಡ ಅವನಿಗೆ ತಂದೆತಾಯಿಗಳು ಒಪ್ಪಿಸಿರುವ ರಾಜ್ಯಭಾರ-ಕಾರ್ಯದಲ್ಲಿ ಶಕ್ತನೆ. ಅವನು ಕ್ಷಮಾಶೀಲ. ಗುರುಹಿರಿಯರ ಸತ್ಕಾರ ಮಾಡುವವನು. ಸತ್ಯಸಂಧನಾದ ಮಹಾತ್ಮನಾದ ಆತನಲ್ಲಿ ಎಲ್ಲ ಸ್ವಕರ್ತವ್ಯಾಚರಣೆಯೂ ಮಂಗಳದಾಯಕವೇ ಆಗುತ್ತದೆ.

ಅನೇನ ಧರ್ಮಶೀಲೇನ ವನಾತ್ ಪ್ರತ್ಯಾಗತಃ ಪುನಃ ।
ಭ್ರಾತ್ರಾ ಸಹ ಭವಿಷ್ಯಾಮಿ ಪೃಥಿವ್ಯಾಃ ಪತಿರುತ್ತಮಃ ॥೩೧॥

ಭರತನು ಧರ್ಮಶೀಲನಾಗಿದ್ದಾನೆ. ಅಂದರೆ ಜ್ಯೇಷ್ಠನಿರುವಾಗ ಕನಿಷ್ಠನು ಸಿಂಹಾಸನವೇರುವುದು ಅಧರ್ಮ. ಅಧರ್ಮವನ್ನು ತಂದೆತಾಯಿಗಳು ವರವಾಗಿ ನೀಡಿದರೂ ತನಗೆ ಬೇಡವೆಂದೂ ಜ್ಯೇಷ್ಠನೆ ರಾಜ್ಯವಾಳಬೇಕೆಂದು ಆಗ್ರಹಿಸಿದ ಧರ್ಮಾತ್ಮನು ಭರತ. ನಾನು ವನದಿಂದ ಹಿಂತಿರುಗಿ ಬಂದವನು ಅವನೊಂದಿಗೇ ರಾಜ್ಯಕ್ಕೆ ಉತ್ತಮ ಅಧಿಪತಿಯಾಗುವೆನು.

ಸೋದರರು ಅಧಿಕಾರಕ್ಕಾಗಿ ಪರಸ್ಪರ ಸ್ಪರ್ಧೆಯಿಂದ ಎಂಥ ಅಕೃತ್ಯವೆಸಗುವುದಕ್ಕೂ ಹೇಸದಿರುವುದು ಸಾಮಾನ್ಯವೇ ಆದರೂ ಭರತನು ಅಪ್ರಯತ್ನವಾಗಿ ತನಗೆ ಬಂದ ಸದವಕಾಶವನ್ನು ಬೇಡವೆಂದು ಬಿಟ್ಟ. ರಾಮನು ಒತ್ತಾಯ ಮಾಡಿದರೂ ಆಮಿಷಕ್ಕೊಳಗಾಗಲಿಲ್ಲ. ರಾಮನು ಅವನ ಈ ಧರ್ಮನಿಷ್ಠೆಯನ್ನು ಬಹಳ ಪರೀಕ್ಷಿಸಿ ಕೊನೆಗೆ ತಾನೇ ಸೋತನು. ಭರತನೇ ರಾಜ್ಯವಾಳಬೇಕೆಂದು ಆಗ್ರಹಿಸಿದ್ದ ರಾಮನು ಆಗ್ರಹವನ್ನು ಬದಿಗಿಟ್ಟು 'ಇಂಥ ಧರ್ಮಶೀಲನಾದ ಭರತನೊಂದಿಗೆ, ತಾನು, ವನವಾಸದಿಂದ ಹಿಂತಿರುಗಿ ಬಂದ ಬಳಿಕ, ಪೃಥಿವಿಗೆ ಉತ್ತಮ ರಾಜನಾಗಿ ರಾಜ್ಯಭಾರ ಮಾಡುತ್ತೇನೆ' ಎನ್ನುತ್ತಾನೆ.

ವೃತೋ ರಾಜಾ ಹಿ ಕೈಕೇಯ್ಯಾ ಮಯಾ ತದ್ವಚನಂ ಕೃತಮ್ ।
ಅನೃತಾನ್ಮೋಚಯಾನೇನ ಪಿತರಂ ತಂ ಮಹೀಪತಿಮ್ ॥೩೨॥

ಶ್ರೀರಾಮನು ಭರತನಿಗೆ ಕೊನೆಯದಾಗಿ ಹೇಳುತ್ತಾನೆ— 'ಕೈಕೇಯಿಯು ದಶರಥನಲ್ಲಿ ನನ್ನ ವನವಾಸದ ವರವನ್ನು ಕೇಳಿ ಪಡೆದಳು. ಆ ವರವನ್ನು ನಾನು ನಡೆಸಿಕೊಡುತ್ತಿದ್ದೇನೆ. ತಂದೆಯನ್ನು ಸುಳ್ಳಿನಿಂದ ಪಾರುಮಾಡುತ್ತಿದ್ದೇನೆ. ನೀನೂ ಕೂಡ ರಾಜ್ಯಾಧಿಕಾರವನ್ನು ಕೈಗೊಂಡು ಪಿತನನ್ನು ಸುಳ್ಳಿನಿಂದ ಪಾರುಮಾಡು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ನೂರಹನ್ನೊಂದನೇ ಸರ್ಗ ಮುಗಿಯಿತು.

❖

ದ್ವಾದಶಾಧಿಕ ಶತತಮಃ ಸರ್ಗಃ

ಸರ್ಗ – 112

ಶ್ರೀರಾಮನು ಭರತನಿಗೆ ಪಾದುಕೆಗಳನ್ನು ಕೊಡುವುದು.

ತಮಪ್ರತಿಮತೇಜೋಭ್ಯಾಂ ಭ್ರಾತೃಭ್ಯಾಂ ರೋಮಹರ್ಷಣಮ್ ।
ವಿಸ್ಮಿತಾಃ ಸಂಗಮಂ ಪ್ರೇಕ್ಷ್ಯ ಸಮವೇತಾ ಮಹರ್ಷಯಃ ॥೧॥

ಅಂತರ್ಹಿತಾಸ್ತ್ವೃಷಿಗಣಾಃ ಸಿದ್ಧಾಶ್ಚ ಪರಮರ್ಷಯಃ ।
ತೌ ಭ್ರಾತರೌ ಮಹಾತ್ಮಾನೌ ಕಾಕುತ್ಸ್ಥಾ ಪ್ರಶಶಂಸಿರೇ ॥೨॥

ಅಪ್ರತಿಮ ತೇಜರಾದ ಇಬ್ಬರು ಸೋದರರ ರೋಮಾಂಚಕವಾದ ಸಮಾಗಮ-ವನ್ನು ನೋಡಿ ಅಲ್ಲಿ ಸೇರಿದ್ದ ಮಹರ್ಷಿಗಳೂ, ಅದೃಶ್ಯರಾಗಿ ಆಕಾಶದಲ್ಲಿ ನೋಡು-ತ್ತಿದ್ದ ರಾಜರ್ಷಿಗಳೂ ಸಿದ್ಧರೂ ಪರಮಋಷಿಗಳೂ ಮಹಾತ್ಮರಾದ ಆ ಸೋದರರನ್ನು ಪ್ರಶಂಸೆ ಮಾಡಿದರು.

ಸ ಧನ್ಯೋ ಯಸ್ಯ ಪುತ್ರೌ ದ್ವೌ ಧರ್ಮಜ್ಞೌ ಧರ್ಮವಿಕ್ರಮೌ ।
ಶ್ರುತ್ವಾ ವಯಂ ಹಿ ಸಂಭಾಷಾಮುಭಾಭ್ಯಾಂ ಸ್ಪೃಹಯಾಮಹೇ ॥೩॥

ಒಬ್ಬರನ್ನೊಬ್ಬರು ಮೀರಿಸುವಂತಿರುವ ಧರ್ಮಜ್ಞರೂ ಧರ್ಮವೀರರೂ ಆಗಿರುವ ಸೋದರರನ್ನು ಮಕ್ಕಳನ್ನಾಗಿ ಪಡೆದ ದಶರಥನೆ ಧನ್ಯ. ಇಬ್ಬರೂ ವಾದ ಮಾಡುವು-ದನ್ನು ಕೇಳಿ ಇಬ್ಬರನ್ನೂ ಮೆಚ್ಚಿಕೊಳ್ಳುತ್ತೇವೆ.

ತತಸ್ತ್ವೃಷಿಗಣಾಃ ಕ್ಷಿಪ್ರಂ ದಶಗ್ರೀವವಧೈಷಿಣಃ ।
ಭರತಂ ರಾಜಶಾರ್ದೂಲಮಿತ್ಯೂಚುಃ ಸಂಗತಾ ವಚಃ ॥೪॥

ರಾವಣ ವಧೆಯನ್ನು ಬಯಸಿದ್ದ ಋಷಿಗಳು ಬೇಗನೆ ಒಕ್ಕೊರಲಿನಿಂದ ಭರತನಿಗೆ ಹೇಳಿದರು.

ಕುಲೇ ಜಾತ ಮಹಾಪ್ರಾಜ್ಞ ಮಹಾವೃತ್ತ ಮಹಾಯಶಃ ।
ಗ್ರಾಹ್ಯಂ ರಾಮಸ್ಯ ವಾಕ್ಯಂ ತೇ ಪಿತರಂ ಯದ್ಯವೇಕ್ಷಸೇ ॥೫॥

ಒಳ್ಳೆಯ ಕುಲದಲ್ಲಿ ಹುಟ್ಟಿದವನು. ಮಹಾಪ್ರಾಜ್ಞ ಮಹಾಶೀಲ ಮಹಾ ಯಶಸ್ವಿ-ಯಾದ ಭರತನೆ, ತಂದೆಯ ಸದ್ಗತಿಯನ್ನು ನೀನು ಬಯಸುವಿಯಾದರೆ ತಂದೆಯ ವಚನವನ್ನು ಕಾಪಾಡುತ್ತಿರುವ ರಾಮನ ಮಾತು ನಿನಗೆ ಗ್ರಾಹ್ಯವಾಗಿದೆ.

ಸದಾನೃಣಮಿಮಂ ರಾಮಂ ವಯಮಿಚ್ಛಾಮಹೇ ಪಿತುಃ ।
ಅನೃಣತ್ವಾಚ್ಚ ಕೈಕೇಯ್ಯಾಃ ಸ್ವರ್ಗಂ ದಶರಥೋ ಗತಃ ॥೬॥

ತಂದೆತಾಯಿಗಳಿಗೆ ಇಬ್ಬರಿಗೂ ತಾನು ವನವಾಸ ಮಾಡುವೆನೆಂದಿದ್ದ ರಾಮನು ಹಾಗೇ ಮಾಡಿ ಇಬ್ಬರ ಋಣವನ್ನೂ ಪರಿಹರಿಸಿಕೊಳ್ಳಲೆಂದು ನಾವು ಇಚ್ಛಿಸುತ್ತೇವೆ. ಕೈಕೇಯಿಗೆ ಎರಡು ವರವಿತ್ತು ಅವಳ ಋಣ ಪರಿಹರಿಸಿಕೊಂಡು ದಶರಥನೂ ಸ್ವರ್ಗವನ್ನು ಪಡೆದಿದ್ದಾನೆ.

ಏತಾವದುಕ್ತ್ವಾ ವಚನಂ ಗಂಧರ್ವಾಃ ಸಮಹರ್ಷಯಃ ।
ರಾಜರ್ಷಯಶ್ಚೈವ ತದಾ ಸರ್ವೇ ಸ್ವಾಂ ಸ್ವಾಂ ಗತಿಂ ಗತಾಃ ॥೭॥

ಆಕಾಶದಲ್ಲಿ ಅದೃಶ್ಯರಾಗಿ ನಿಂತು ನೋಡುತ್ತಿದ್ದ ರಾಜರ್ಷಿಗಳೂ ಗಂಧರ್ವರೂ ಋಷಿಗಳೂ ಇಷ್ಟು ಹೇಳಿ ಎಲ್ಲರೂ ತಮ್ಮತಮ್ಮ ಸ್ಥಾನವನ್ನು ಹೋಗಿ ಸೇರಿದರು.

ಹ್ಲಾದಿತಸ್ತೇನ ವಾಕ್ಯೇನ ಶುಭೇನ ಶುಭದರ್ಶನಃ ।
ರಾಮಃ ಸಂಹೃಷ್ಟವದನಸ್ತಾನೃಷೀನಭ್ಯಪೂಜಯತ್ ॥೮॥

ಆ ಶುಭಕರವಾದ ಮಾತಿನಿಂದ, ತನ್ನ ದರ್ಶನದಿಂದ ಶುಭ ಉಂಟುಮಾಡುವ ರಾಮನು ಸಂತೋಷಭರಿತನಾದನು. ಅರಳಿದ ಮುಖದಿಂದ ಆ ಋಷಿಗಳನ್ನು ಅಭಿನಂದಿಸಿದನು.

ತ್ರಸ್ತಗಾತ್ರಸ್ತು ಭರತಃ ಸ ವಾಚಾ ಸಜ್ಜಮಾನಯಾ ।
ಕೃತಾಂಜಲಿರಿದಂ ವಾಕ್ಯಂ ರಾಘವಂ ಪುನರಬ್ರವೀತ್ ॥೯॥

ಮಹರ್ಷಿಗಳ ಮಾತನ್ನು ಕೇಳಿ, ದೇವತೆಗಳಿಗೆ ಇಷ್ಟವಾದ ರಾಮನ ವನವಾಸ-ವನ್ನು ವಿರೋಧಿಸಿ ಸತ್ಯಾಗ್ರಹ ಮಾಡಿದ್ದಕ್ಕೆ ಭರತನ ಮೈಯಲ್ಲಿ ನಡುಕ ಉಂಟಾ-ಯಿತು. ಮಾತು ಗದ್ಗದವಾಯಿತು. ಕೈಮುಗಿದು ಪುನಃ ಹೇಳಿದನು.

ರಾಜಧರ್ಮಮನುಪ್ರೇಕ್ಷ್ಯ ಕುಲಧರ್ಮಾನುಸಂತತಿಮ್ ।
ಕರ್ತುಮರ್ಹಸಿ ಕಾಕುತ್ಸ್ಥ ಮಮ ಮಾತುಶ್ಚ ಯಾಚನಾಮ್ ॥೧೦॥

ರಾಜ್ಯಭಾರ ಮಾಡುವ ರಾಜಧರ್ಮವನ್ನು ಆಲೋಚಿಸು. ಜ್ಯೇಷ್ಠನು ಅಭಿಷಿಕ್ತ-ನಾಗುವ ಸಂತತವಾಗಿ ನಡೆದುಬಂದ ಕುಲಧರ್ಮವನ್ನು ಆಲೋಚಿಸು, ತಾಯಿ

ಕೈಕೇಯಿಯೂ ಈಗ ನೀನು ಹಿಂತಿರುಗಿ ಬರುವುದನ್ನು ಯಾಚಿಸುತ್ತಿದ್ದಾಳೆ. ಎಲ್ಲವನ್ನೂ ಆಲೋಚಿಸಿ ಅದರಂತೆ ಮಾಡು.

ರಕ್ಷಿತುಂ ಸುಮಹದ್ರಾಜ್ಯಮಹಮೇಕಸ್ತು ನೋತ್ಸಹೇ ।
ಪೌರಜಾನಪದಾಂಶ್ಚಾಪಿ ರಕ್ತಾನ್ ರಂಜಯಿತುಂ ತಥಾ ॥೧೧॥

ಬಲು ದೊಡ್ಡದಾದ ರಾಜ್ಯವನ್ನು ನಾನೊಬ್ಬನೆ ಆಳಲಾರೆ. ಅನುರಕ್ತರಾಗಿರುವ ಪೌರ ಹಾಗೂ ದೇಶವಾಸಿಗಳನ್ನು ತೃಪ್ತಿಪಡಿಸಲೂ ನಾನು ಶಕ್ತನಾಗಲಾರೆ.

ಜ್ಞಾತಯಶ್ಚ ಹಿ ಯೋಧಾಶ್ಚ ಮಿತ್ರಾಣಿ ಸುಹೃದಶ್ಚ ನಃ ।
ತ್ವಾಮೇವ ಪ್ರತಿಕಾಂಕ್ಷಂತೇ ಪರ್ಜನ್ಯಮಿವ ಕರ್ಷಕಾಃ ॥೧೨॥

ಬಂಧುಗಳು ಯೋಧರು ಮಿತ್ರರೂ ಸಜ್ಜನರೂ ಎಲ್ಲರೂ, ಬೇಸಾಯಗಾರರು ಮಳೆಯನ್ನು ಇದಿರುನೋಡುವಂತೆ, ನಿನ್ನನ್ನೇ ಇದಿರು ನೋಡುತ್ತಿದ್ದಾರೆ.

ಇದಂ ರಾಜ್ಯಂ ಮಹಾಪ್ರಾಜ್ಞ ಸ್ಥಾಪಯ ಪ್ರತಿಪದ್ಯ ಹಿ ।
ಶಕ್ತಿಮಾನಸಿ ಕಾಕುತ್ಸ್ಥ ಲೋಕಸ್ಯ ಪರಿಪಾಲನೇ ॥೧೩॥

ಈ ರಾಜ್ಯವನ್ನು ಸ್ವೀಕರಿಸಿ ವ್ಯವಸ್ಥಿತವಾಗುವಂತೆ ಮಾಡು. ಲೋಕರಕ್ಷಣೆಯಲ್ಲಿ ನೀನೆ ಶಕ್ತನಾಗಿರುವಿ.

ಇತ್ಯುಕ್ತ್ವಾ ನ್ಯಪತದ್ಭ್ರಾತುಃ ಪಾದಯೋರ್ಭರತಸ್ತದಾ ।
ಭೃಶಂ ಸಂಪ್ರಾರ್ಥಯಾಮಾಸ ರಾಮಮೇವ ಪ್ರಿಯಂವದಃ ॥೧೪॥

ಹೀಗೆ ಹೇಳಿ ಭರತನು ರಾಮನ ಪಾದಗಳಿಗೆ ಎರಗಿದನು. ನಯವಾಗಿ ನುಡಿಯುತ್ತ ರಾಮನನ್ನೇ ಬಹಳ ಪ್ರಾರ್ಥಿಸಿದನು.

ತಮಂಕೇ ಭ್ರಾತರಂ ಕೃತ್ವಾ ರಾಮೋ ವಚನಮಬ್ರವೀತ್ ।
ಶ್ಯಾಮಂ ನಲಿನಪತ್ರಾಕ್ಷಂ ಮತ್ತಹಂಸಸ್ವರಃ ಸ್ವಯಮ್ ॥೧೫॥

ಶ್ರೀರಾಮನು ಶ್ಯಾಮಲವರ್ಣದ ಕಮಲನಯನನಾದ ಭರತನನ್ನು ತೊಡೆಯ ಮೇಲಿರಿಸಿಕೊಂಡು ತಾನೇ ಮದಿಸಿದ ಹಂಸದ ಧ್ವನಿಯಿಂದ ನುಡಿದನು.

ಆಗತಾ ತ್ವಾಮಿಯಂ ಬುದ್ಧಿಃ ಸ್ವಜಾ ವೈನಯಿಕೀ ಚ ಯಾ ।
ಭೃಶಮುತ್ಸಹಸೇ ತಾತ ರಕ್ಷಿತುಂ ಪೃಥಿವೀಮಪಿ ॥೧೬॥

ಮಗು ನಿನ್ನಲ್ಲಿ ಬಂದಿರುವ ಈ ಸ್ವಾಭಾವಿಕ ವಿನಯಶೀಲವಾದ ಬುದ್ಧಿಯಿಂದ ಇಡೀ ಪೃಥಿವಿಯನ್ನೇ ಚೆನ್ನಾಗಿ ರಕ್ಷಿಸಬಲ್ಲೆ.

ಅಮಾತ್ಯೈಶ್ಚ ಸುಹೃದ್ಭಿಶ್ಚ ಬುದ್ಧಿಮದ್ಭಿಶ್ಚ ಮಂತ್ರಿಭಿಃ ।
ಸರ್ವಕಾರ್ಯಾಣಿ ಸಂಮಂತ್ರ್ಯ ಸುಮಹಾಂತ್ಯಪಿ ಕಾರಯ ॥೧೭॥

ಅದರಿಂದ ಅಮಾತ್ಯರು ಸಜ್ಜನರು ಬುದ್ಧಿವಂತರಾದ ಮಂತ್ರಿಗಳು ಇವರೆಲ್ಲರೊಡನೆ ಚೆನ್ನಾಗಿ ಮಂತ್ರಾಲೋಚನೆ ಮಾಡಿ ಮಹತ್ತಾದ ಎಲ್ಲ ಕಾರ್ಯಗಳನ್ನೂ ಮಾಡು.

ಲಕ್ಷ್ಮೀಶ್ಚಂದ್ರಾದಪೇಯಾದ್ವಾ ಹಿಮವಾನ್ ವಾ ಹಿಮಂ ತ್ಯಜೇತ್ ।
ಅತೀಯಾತ್ ಸಾಗರೋ ವೇಲಾಂ ನ ಪ್ರತಿಜ್ಞಾಮಹಂ ಪಿತುಃ ॥೧೮॥

ನಾನು ಮಾತ್ರ, ಬೆಳದಿಂಗಳು ಚಂದ್ರನನ್ನು ಬಿಟ್ಟೀತು, ಹಿಮಾಲಯವು ಹಿಮವನ್ನು ಬಿಡಬಹುದು, ಸಾಗರವು ತೀರವನ್ನು ಅತಿಕ್ರಮಿಸೀತು. ನಾನು ಮಾತ್ರ ತಂದೆಯ ಪ್ರತಿಜ್ಞೆಯನ್ನು ಕಡೆಗಣಿಸಲಾರೆ.

ಕಾಮಾದ್ವಾ ತಾತ ಲೋಭಾದ್ವಾ ಮಾತ್ರಾ ತುಭ್ಯಮಿದಂ ಕೃತಮ್ ।
ನ ತನ್ಮನಸಿ ಕರ್ತವ್ಯಂ ವರ್ತಿತವ್ಯಂ ಚ ಮಾತೃವತ್ ॥೧೯॥

ನಿನ್ನ ತಾಯಿ ರಾಜ್ಯವಿಷಯದಲ್ಲಿ ಕಾಮದಿಂದಾಗಲಿ ಲೋಭದಿಂದಾಗಲಿ ನಿನ್ನ ಸಲುವಾಗಿ ಈ ಕೃತ್ಯವನ್ನು ಮಾಡಿರಬಹುದು. ದೈವಾಧೀನವೆಂದು ಬಗೆದು ನೀನು ಅದನ್ನು ಮನಸ್ಸಿನಲ್ಲಿಟ್ಟುಕೊಳ್ಳಬಾರದು. ಮಾತೆಯನ್ನು ಮಾತೆಯಂತೆಯೇ ನೋಡಿಕೊಳ್ಳಬೇಕು.

ಏವಂ ಬ್ರುವಾಣಂ ಭರತಃ ಕೌಸಲ್ಯಾಸುತಮಬ್ರವೀತ್ ।
ತೇಜಸಾದಿತ್ಯಸಂಕಾಶಂ ಪ್ರತಿಪಚ್ಚಂದ್ರದರ್ಶನಮ್ ॥೨೦॥

ತೇಜಸ್ಸಿನಿಂದ ಸೂರ್ಯನಂತಿರುವ, ಪ್ರತಿಪದೆಯ ಚಂದ್ರನಂತೆ ದರ್ಶನೀಯನಾದ ರಾಮನು ಹೀಗೆ ಹೇಳಿದಾಗ ಭರತನು ನುಡಿದನು.

ಅಧಿರೋಹಾರ್ಯ ಪಾದಾಭ್ಯಾಂ ಪಾದುಕೇ ಹೇಮಭೂಷಿತೇ ।
ಏತೇ ಹಿ ಸರ್ವಲೋಕಸ್ಯ ಯೋಗಕ್ಷೇಮಂ ವಿಧಾಸ್ಯತಃ ॥೨೧॥

ನಿನ್ನ ಪ್ರತಿನಿಧಿಯಾಗಿ ನಿನ್ನ ಪಾದುಕೆಗಳನ್ನು ಒಯ್ಯಲು ಭರತನಿಗೆ ನೀಡೆಂದು ವಸಿಷ್ಠರು ರಾಮನನ್ನು ಕೇಳಿಕೊಂಡಾಗ ಭರತನು ಬಂಗಾರದ ಪಾದುಕೆಗಳನ್ನು ರಾಮನ ಮುಂದಿಟ್ಟು 'ಪೂಜ್ಯನೆ, ಚಿನ್ನದಿಂದ ಅಲಂಕೃತವಾದ ಈ ಪಾದುಕೆಗಳ ಮೇಲೆ ಪಾದಗಳನ್ನಿರಿಸು. ಇವೇ ಎಲ್ಲ ಲೋಕಗಳ ಯೋಗಕ್ಷೇಮಗಳನ್ನು ನೋಡಿ-ಕೊಳ್ಳುತ್ತವೆ' ಎಂದು.

ರಾಮನ ಮನಒಲಿಸಿ ಅಭಿಷೇಕಮಾಡಿ ವೈಭವದಿಂದ ಅವನನ್ನು ಅಯೋಧ್ಯೆಗೆ ಹಿಂತಿರುಗಿ ಕರೆಸಿಕೊಳ್ಳುವಾಗ ಅವಶ್ಯಬೇಕಾದವುಗಳೆಂದು ಅಭಿಷೇಕ ಸಾಮಗ್ರಿ ಮತ್ತು ಛತ್ರಚಾಮರಾದಿಗಳೊಂದಿಗೆ ಚಿನ್ನದ ಪಾದುಕೆಗಳನ್ನೂ ಭರತ ತಂದಿದ್ದ. ಹೊರತು ರಾಮ ತಾನೇ ಚಿನ್ನದ ಪಾದುಕೆ ಧರಿಸಿ ಕಾಡಿಗೆ ಹೊರಟಿರಲಿಲ್ಲ. ಮೈಮೇಲಿನ ಬೆಲೆಬಾಳುವ ಬಟ್ಟೆಗಳನ್ನೂ ತೆಗೆಸಿ ನಾರುಡೆಉಡಿಸಿರುವ ಕೈಕೇಯಿ ಚನ್ನದ ಪಾದುಕೆ ಧರಿಸಲು ಅನುಮತಿ ಕೊಡುವ ಸಂಭವವೇ ಇರಲಿಲ್ಲ.

ಭಕ್ತನಾದ ಭರತನಿಗೆ ಭಗವಂತ ಪಾದುಕೆಗಳನ್ನು ಅನುಗ್ರಹಿಸಿದ್ದು ಗುರುವಸಿಷ್ಠರ ಅನುಗ್ರಹದಿಂದ. ಇದು ಮುಂದಿನ ಸರ್ಗದಲ್ಲಿ ಭರದ್ವಾಜರಿಗೆ ಭರತನು ಹೇಳುವ ಮಾತಿನಿಂದ ಸ್ಪಷ್ಟವಾಗುತ್ತದೆ.

ಸೋಽಧಿರುಹ್ಯ ನರವ್ಯಾಘ್ರಃ ಪಾದುಕೇ ವ್ಯವಮುಚ್ಯ ಚ ।
ಪ್ರಾಯಚ್ಛತ್ ಸುಮಹಾತೇಜಾ ಭರತಾಯ ಮಹಾತ್ಮನೇ ॥೨೨॥

ಸುಮಹಾತೇಜನಾದ ಪುರುಷೋತ್ತಮ ಶ್ರೀರಾಮನು ಪಾದುಕೆಗಳನ್ನು ಧರಿಸಿ ಕಳಚಿ ಮಹಾತ್ಮ ಭರತನಿಗೆ ಇತ್ತನು.

ಸ ಪಾದುಕೇ ಸಂಪ್ರಣಮ್ಯ ರಾಮಂ ವಚನಮಬ್ರವೀತ್ ।
ಚತುರ್ದಶ ಹಿ ವರ್ಷಾಣಿ ಜಟಾಚೀರಧರೋ ಹ್ಯಹಮ್ ॥೨೩॥

ಫಲಮೂಲಾಶನೋ ವೀರ ಭವೇಯಂ ರಘುನಂದನ ।
ತವಾಗಮನಮಾಕಾಂಕ್ಷನ್ ವಸನ್ ವೈ ನಗರಾದ್ಬಹಿಃ ॥೨೪॥

ಭರತನು ಪಾದುಕೆಗಳಿಗೆ ನಮಿಸಿ, 'ವೀರ ರಾಮ, ನಾನು ಹದಿನಾಲ್ಕು ವರ್ಷಕಾಲ ನಾರುಡೆ ಕೃಷ್ಣಾಜಿನಗಳನ್ನು ಧರಿಸಿ ಹಣ್ಣುಗಡ್ಡೆಗಳನ್ನುಣ್ಣುತ್ತ ನಿನ್ನ ಆಗಮವನ್ನೆ ಇದಿರುನೋಡುತ್ತ ನಗರದ ಹೊರಗೇ ನಂದಿಗ್ರಾಮದಲ್ಲಿ ವಾಸ ಮಾಡುತ್ತಿರುವೆನು.

ತವ ಪಾದುಕಯೋರ್ನ್ಯಸ್ಯ ರಾಜ್ಯತಂತ್ರಂ ಪರಂತಪ ।
ಚತುರ್ದಶೇ ಹಿ ಸಂಪೂರ್ಣೇ ವರ್ಷೇಽಹನಿ ರಘೂತ್ತಮ ॥೨೫॥

ನ ದ್ರಕ್ಷ್ಯಾಮಿ ಯದಿ ತ್ವಾಂ ತು ಪ್ರವೇಕ್ಷ್ಯಾಮಿ ಹುತಾಶನಮ್ ।
ತಥೇತಿ ಚ ಪ್ರತಿಜ್ಞಾಯ ತಂ ಪರಿಷ್ವಜ್ಯ ಸಾದರಮ್ ॥೨೬॥

ಶತ್ರುಘ್ನಂ ಚ ಪರಿಷ್ವಜ್ಯ ಭರತಂ ಚೇದಮಬ್ರವೀತ್ ।
ಮಾತರಂ ರಕ್ಷ ಕೈಕೇಯೀಂ ಮಾ ರೋಷಂ ಕುರು ತಾಂ ಪ್ರತಿ ॥೨೭॥

ಮಯಾ ಚ ಸೀತಯಾ ಚೈವ ಶಪ್ತೋಽಸಿ ರಘುಸತ್ತಮ ।
ಇತ್ಯುಕ್ತ್ವಾ ಶ್ರುಪರೀತಾಕ್ಷೋ ಭ್ರಾತರಂ ವಿಸಸರ್ಜ ಹ ॥೨೮॥

‘ಶತ್ರುನಾಶಕನೆ, ರಾಜ್ಯಭಾರಕಾರ್ಯವನ್ನು ನಿನ್ನ ಪ್ರತಿನಿಧಿಯಾದ ನಿನ್ನ ಈ ಪಾದುಕೆಗಳಿಗೆ ನಿವೇದಿಸುತ್ತ ಹದಿನಾಲ್ಕನೆ ವರ್ಷಪೂರ್ಣವಾಗುವ ದಿನದಲ್ಲಿ ರಾಮ, ನಾನು ನಿನ್ನನ್ನು ನೋಡಲಾರದೆ ಹೋದರೆ ಅಗ್ನಿಪ್ರವೇಶ ಮಾಡುತ್ತೇನೆ’ ಎಂದು ಭರತನು ನುಡಿದನು. ಶ್ರೀರಾಮನು ಹಾಗೇ ಆಗಲಿ ಎಂದು ಹೇಳಿ ಭರತನನ್ನೂ ಶತ್ರುಘ್ನನನ್ನೂ ಆದರದಿಂದ ಆಲಿಂಗಿಸಿ ಭರತನಿಗೆ ನುಡಿದನು. ‘ತಾಯಿ ಕೈಕೇಯಿ-ಯನ್ನು ರಕ್ಷಿಸಿಕೊಂಡಿರು. ಅವಳಲ್ಲಿ ಕೋಪ ಮಾಡಬೇಡ, ನನ್ನ ಮೇಲೆ ಮತ್ತು ಸೀತೆಯ ಮೇಲೆ ಆಣೆ ಇಟ್ಟು ಹೇಳುತ್ತಿದ್ದೇನೆ’. ಹೀಗೆ ಹೇಳಿ ಕಣ್ಣುಗಳಲ್ಲಿ ನೀರು ತುಂಬಿಕೊಂಡು ಭರತನನ್ನು ಬೀಳ್ಕೊಟ್ಟನು.

ಸ ಪಾದುಕೇ ತೇ ಭರತಃ ಪ್ರತಾಪವಾನ್
ಸ್ವಲಂಕೃತೇ ಸಂಪರಿಗೃಹ್ಯ ಧರ್ಮವಿತ್ ।
ಪ್ರದಕ್ಷಿಣಂ ಚೈವ ಚಕಾರ ರಾಘವಂ
ಚಕಾರ ಚೈವೋತ್ತಮನಾಗಮೂರ್ಧನಿ ॥೨೯॥

ಪ್ರತಾಪಶಾಲಿ ಧರ್ಮಜ್ಞನಾದ ಭರತನು ಅಲಂಕೃತವಾದ ಪಾದುಕೆಗಳನ್ನು ತಲೆಯಮೇಲಿಟ್ಟುಕೊಂಡು ರಾಮನಿಗೆ ಪ್ರದಕ್ಷಿಣೆ ಮಾಡಿ ಪಟ್ಟದಾನೆಯ ಮೇಲೆ ಆ ಪಾದುಕೆಗಳನ್ನು ಇರಿಸಿದನು.

ಅಥಾನುಪೂರ್ವ್ಯಾತ್ ಪ್ರತಿನಂದ್ಯ ತಂ ಜನಂ
ಗುರೂಂಶ್ಚ ಮಂತ್ರಿಪ್ರಕೃತೀಸ್ತಥಾವುಭೌ ।
ವ್ಯಸರ್ಜಯದ್ರಾಘವವಂಶವರ್ಧನಃ
ಸ್ಥಿರಃ ಸ್ವಧರ್ಮೇ ಹಿಮವಾನಿವಾಚಲಃ ॥೩೦॥

ಬಳಿಕ ರಘುವಂಶ ವರ್ಧಕನಾದ ತನ್ನ ಧರ್ಮದಲ್ಲಿ ಹಿಮಾಲಯದಂತೆ ಅಚಲನಾದ ಶ್ರೀರಾಮನು ಯಥಾಕ್ರಮವಾಗಿ ಗುರು ಜನರನ್ನೂ ಮಂತ್ರಿಗಳನ್ನೂ ಅಮಾತ್ಯರನ್ನೂ ಭರತಶತ್ರುಘ್ನರನ್ನೂ ಸತ್ಕರಿಸಿ ಬೀಳ್ಕೊಟ್ಟನು.

ತಂ ಮಾತರೋ ಬಾಷ್ಪಗೃಹೀತಕಂಠ್ಯೋ
ದುಃಖೇನ ನಾಮಂತ್ರಯಿತುಂ ಹಿ ಶೇಕುಃ ।
ಸ ತ್ವೇವ ಮಾತೃರಭಿವಾದ್ಯ ಸರ್ವಾ
ರುದನ್ ಕುಟೀಂ ಸ್ವಾಂ ಪ್ರವಿವೇಶ ರಾಮಃ ॥೩೧॥

ಮಾತೆಯರು ದುಃಖದ ಕಣ್ಣೀರಿನಿಂದ ಗದ್ಗದಕಂಠ ಉಳ್ಳವರಾಗಿ ರಾಮನಿಂದ ಬೀಳ್ಕೊಳ್ಳಲೂ ಅಸಮರ್ಥರಾದರು. ರಾಮನೇ ಮಾತೆಯರನ್ನು ಎಲ್ಲರನ್ನೂ ಅಭಿವಾದನ ಮಾಡಿ ಕಣ್ಣೀರಿಡುತ್ತ ತನ್ನ ಪರ್ಣಕುಟೀರವನ್ನು ಪ್ರವೇಶಿಸಿದನು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ನೂರಹನ್ನೆರಡನೇ ಸರ್ಗ ಮುಗಿಯಿತು.

❖

ತ್ರಯೋದಶಾಧಿಕ ಶತತಮಃ ಸರ್ಗಃ

ಸರ್ಗ – 113

ಭರತನು ಪಾದುಕೆಗಳನ್ನು ಅಯೋಧ್ಯೆಗೆ ತರುವುದು.

ತತಃ ಶಿರಸಿ ಕೃತ್ವಾ ತು ಪಾದುಕೇ ಭರತಸ್ತದಾ ।
ಆರುರೋಹ ರಥಂ ಹೃಷ್ಟಃ ಶತ್ರುಘ್ನೇನ ಸಮನ್ವಿತಃ ॥೧॥

ಅನಂತರ ಭರತನು ಶ್ರೀರಾಮನ ಪಾದುಕೆಗಳನ್ನು ತಲೆಯ ಮೇಲೆ ಇರಿಸಿ-ಕೊಂಡು ಶತ್ರುಘ್ನನೊಂದಿಗೆ ಸಂತೋಷದಿಂದ ರಥವನ್ನೇರಿದನು.

ವಸಿಷ್ಠೋ ವಾಮದೇವಶ್ಚ ಜಾಬಾಲಿಶ್ಚ ದೃಢವ್ರತಃ ।
ಅಗ್ರತಃ ಪ್ರಯಯುಃ ಸರ್ವೇ ಮಂತ್ರಿಣೋ ಮಂತ್ರಪೂಜಿತಾಃ ॥೨॥

ವಸಿಷ್ಠ, ವಾಮದೇವ, ದೃಢವ್ರತನಾದ ಜಾಬಾಲಿ, ಮಂತ್ರಾಲೋಚನ ಸಾಮರ್ಥ್ಯದಿಂದ ಆದರಣೀಯರಾದ ಎಲ್ಲ ಮಂತ್ರಿಗಳೂ ರಥದ ಮುಂಭಾದಲ್ಲಿ ಪ್ರಯಾಣ ಮಾಡಿದರು.

ಮಂದಾಕಿನೀಂ ನದೀಂ ಪುಣ್ಯಾಂ ಪ್ರಾಙ್ಮುಖಾಸ್ತೇ ಯಯುಸ್ತದಾ ।
ಪ್ರದಕ್ಷಿಣಂ ಚ ಕುರ್ವಾಣಾಶ್ಚಿತ್ರಕೂಟಂ ಮಹಾಗಿರಿಮ್ ॥೩॥

ಪುಣ್ಯಕರವಾದ ಮಂದಾಕಿನೀ ನದೀತೀರಕ್ಕೆ ಹೋಗಿ ಅಲ್ಲಿಂದ ಪೂರ್ವಾಭಿ-ಮುಖವಾಗಿ ಚಿತ್ರಕೂಟ ಮಹಾಪರ್ವತಕ್ಕೆ ಪ್ರದಕ್ಷಿಣೆ ಮಾಡುತ್ತ ಪ್ರಯಾಣ ಮಾಡಿದರು.

ಪಶ್ಯನ್ ಧಾತುಸಹಸ್ರಾಣಿ ರಮ್ಯಾಣಿ ವಿವಿಧಾನಿ ಚ ।
ಪ್ರಯಯೌ ತಸ್ಯ ಪಾರ್ಶ್ವೇನ ಸಸೈನ್ಯೋ ಭರತಸ್ತದಾ ॥೪॥

ರಮ್ಯವಾದ ನಾನಾವಿಧವಾದ ಗೈರಿಕಾದಿ ಧಾತುಗಳನ್ನು ನೋಡುತ್ತ ಆ ಬೆಟ್ಟದ ಪಾರ್ಶ್ವದಲ್ಲಿ ಭರತನು ಸೈನ್ಯ ಸಹಿತನಾಗಿ ಪ್ರಯಾಣ ಮಾಡಿದನು.

ಅದೂರಾಚ್ಚಿತ್ರಕೂಟಸ್ಯ ದದರ್ಶ ಭರತಸ್ತದಾ ।
ಆಶ್ರಮಂ ಯತ್ರ ಸ ಮುನಿರ್ಭರದ್ವಾಜಃ ಕೃತಾಲಯಃ ॥೫॥

ಚಿತ್ರಕೂಟದ ಸಮೀಪದಲ್ಲಿ ಭರದ್ವಾಜ ಮುನಿಯು ವಾಸಮಾಡುತ್ತಿದ್ದ ಆಶ್ರಮವನ್ನು ನೋಡಿದನು.

ಭರತನ ರಥವು ಬೆಟ್ಟದ ಮೇಲುಭಾಗದಲ್ಲಿದ್ದುದರಿಂದ ಕೆಳಗೆ ದೂರದಲ್ಲಿದ್ದ ಆಶ್ರಮ ಹತ್ತಿರವಿದ್ದಂತೆ ಕಂಡಿತೆಂದು ತಿಳಿಯಬಹುದು.

ಸ ತಮಾಶ್ರಮಮಾಗಮ್ಯ ಭರದ್ವಾಜಸ್ಯ ಬುದ್ಧಿಮಾನ್ ।
ಅವತೀರ್ಯ ರಥಾತ್ ಪಾದೌ ವವಂದೇ ಕುಲನಂದನಃ ॥೬॥

ಇಕ್ಷ್ವಾಕು ಕುಲನಂದನನಾದ ಬುದ್ಧಿಶಾಲಿಯಾದ ಭರತನು ಆಶ್ರಮಕ್ಕೆ ಹೋಗಿ ರಥದಿಂದ ಇಳಿದು ಭರದ್ವಾಜರ ಪಾದಗಳಿಗೆ ಮಣಿದನು.

ತತೋ ಹೃಷ್ಟೋ ಭರದ್ವಾಜೋ ಭರತಂ ವಾಕ್ಯಮಬ್ರವೀತ್ ।
ಅಪಿ ಕೃತ್ಯಂ ಕೃತಂ ತಾತ ರಾಮೇಣ ಚ ಸಮಾಗತಮ್ ॥೭॥

ಆಗ ಸಂತುಷ್ಟರಾದ ಭರದ್ವಾಜರು ಹೇಳಿದರು— ಮಗು, ಹೋದ ಕಾರ್ಯ-ವನ್ನು ಸಾಧಿಸಿದೆಯ? ರಾಮನನ್ನು ಭೆಟ್ಟಿ ಮಾಡಿದೆಯ?

ಏವಮುಕ್ತಸ್ತು ಭರತೋ ಭರದ್ವಾಜೇನ ಧೀಮತಾ ।
ಪ್ರತ್ಯುವಾಚ ಭರದ್ವಾಜಂ ಭರತೋ ಭ್ರಾತೃವತ್ಸಲಃ ॥೮॥

ಧೀಮಂತರಾದ ಭರದ್ವಾಜರು ಹೀಗೆ ಹೇಳಿದಾಗ ಭ್ರಾತೃವತ್ಸಲನಾದ ಭರತನು ಭರದ್ವಾಜರಿಗೆ ಪ್ರತಿಯಾಗಿ ನುಡಿದನು.

ಸ ಯಾಚ್ಯಮಾನೋ ಗುರುಣಾ ಮಯಾ ಚ ದೃಢವಿಕ್ರಮಃ ।
ರಾಘವಃ ಪರಮಪ್ರೀತೋ ವಸಿಷ್ಠಂ ವಾಕ್ಯಮಬ್ರವೀತ್ ॥೯॥

ರಾಮನನ್ನು ಆಯೋಧ್ಯೆಗೆ ಹಿಂತಿರುಗಲು ಗುರುವಸಿಷ್ಠರೂ ನಾನೂ ಪ್ರಾರ್ಥಿಸಿ-ದೆವು. ದೃಢವಿಕ್ರಮನಾದ ರಾಮನು ಪರಮಪ್ರೀತನಾಗಿ ವಸಿಷ್ಠರಿಗೆ ನುಡಿದನು.

ಪಿತುಃ ಪ್ರತಿಜ್ಞಾಂ ತಾಮೇವ ಪಾಲಯಿಷ್ಯಾಮಿ ತತ್ತ್ವತಃ ।
ಚತುರ್ದಶ ಹಿ ವರ್ಷಾಣಿ ಯಾ ಪ್ರತಿಜ್ಞಾ ಪಿತುರ್ಮಮ ॥೧೦॥

ಹದಿನಾಲ್ಕು ವರ್ಷ ವನವಾಸ ಮಾಡಬೇಕೆನ್ನುವ ನನ್ನ ತಂದೆಯ ಆಜ್ಞೆ ಇದೆ. ಆ ಪ್ರತಿಜ್ಞೆಯನ್ನೇ ಯಥಾವತ್ತಾಗಿ ಪಾಲಿಸುವೆನು ಎಂದು.

ಏವಮುಕ್ತೋ ಮಹಾಪ್ರಾಜ್ಞೋ ವಸಿಷ್ಠಃ ಪ್ರತ್ಯುವಾಚ ಹ ।
ವಾಕ್ಯಜ್ಞೋ ವಾಕ್ಯಕುಶಲಂ ರಾಘವಂ ವಚನಂ ಮಹತ್ ॥೧೧॥

ರಾಮನು ಹೀಗೆ ಹೇಳಿದಾಗ ಮಹಾಪ್ರಾಜ್ಞ ಮಾತುಗಾರರಾದ ವಸಿಷ್ಠರು ಮಾತುಗಾರನಾದ ರಾಮನಿಗೆ ಒಂದು ದೊಡ್ಡ ಮಾತನ್ನು ಹೇಳಿದರು.

ಏತೇ ಪ್ರಯಚ್ಛ ಸಂಹೃಷ್ಟಃ ಪಾದುಕೇ ಹೇಮಭೂಷಿತೇ ।
ಅಯೋಧ್ಯಾಯಾಂ ಮಹಾಪ್ರಾಜ್ಞ ಯೋಗಕ್ಷೇಮಕರೇ ತವ ॥೧೨॥

ಸಂತುಷ್ಟನಾಗಿ ಚಿನ್ನದಿಂದ ಅಲಂಕೃತವಾದ ಈ ನಿನ್ನ ಪಾದುಕೆಗಳನ್ನು ಭರತನಿಗೆ ನೀಡು. ಮಹಾಪ್ರಾಜ್ಞ, ಅದೇ ಅಯೋಧ್ಯೆಯಲ್ಲಿ ಯೋಗಕ್ಷೇಮಗಳನ್ನು ನೋಡಿ-ಕೊಳ್ಳುತ್ತವೆ.

ಏವಮುಕ್ತೋ ವಸಿಷ್ಠೇನ ರಾಘವಃ ಪ್ರಾಙ್ಮುಖಃ ಸ್ಥಿತಃ ।
ಪಾದುಕೇ ಅಧಿರುಹ್ಯೈತೇ ಮಮ ರಾಜ್ಯಾಯ ವೈ ದದೌ ॥೧೩॥

ವಸಿಷ್ಠರು ಹೀಗೆ ಹೇಳಿದಾಗ ರಾಮನು ಪೂರ್ವಾಭಿಮುಖವಾಗಿ ಆ ಪಾದುಕೆಗಳನ್ನು ಏರಿ ನಿಂತು ಅವುಗಳನ್ನು ನನ್ನ ರಾಜ್ಯವನ್ನಾಳಲು ನನಗೆ ನೀಡಿದನು.

ನಿವೃತ್ತೋಽಹಮನುಜ್ಞಾತೋ ರಾಮೇಣ ಸುಮಹಾತ್ಮನಾ ।
ಅಯೋಧ್ಯಾಮೇವ ಗಚ್ಛಾಮಿ ಗೃಹೀತ್ವಾ ಪಾದುಕೇ ಶುಭೇ ॥೧೪॥

ಮಹಾತ್ಮನಾದ ರಾಮನಿಂದ ಅನುಜ್ಞೆ ಪಡೆದು ಹಿಂತಿರುಗಿದ್ದೇನೆ. ಮಂಗಳಕರ-ವಾದ ಪಾದುಕೆಗಳನ್ನು ಹೊತ್ತು ಅಯೋಧ್ಯೆಗೆ ಹೋಗುತ್ತೇನೆ.

ಏಚಚ್ಛ್ರುತ್ವಾ ಶುಭಂ ವಾಕ್ಯಂ ಭರತಸ್ಯ ಮಹಾತ್ಮನಃ ।
ಭರದ್ವಾಜಃ ಶುಭತರಂ ಮುನಿರ್ವಾಕ್ಯಮುವಾಚ ತಮ್ ॥೧೫॥

ಮಹಾತ್ಮ ಭರತನ ಈ ಶುಭವಾದ ಮಾತನ್ನು ಕೇಳಿ ಭರದ್ವಾಜರು ಇನ್ನೂ ಹೆಚ್ಚು ಶುಭಕರವಾದ ಮಾತನ್ನು ಅವನಿಗೆ ಹೇಳಿದರು.

ನೈತಚ್ಚಿತ್ರಂ ನರವ್ಯಾಘ್ರೇ ಶೀಲವೃತ್ತವಿದಾಂ ವರೇ ।
ಯದಾರ್ಯಂ ತ್ವಯಿ ತಿಷ್ಠೇತ್ತು ನಿಮ್ನೇ ಸೃಷ್ಟಮಿವೋದಕಮ್ ॥೧೬॥

ಒಳ್ಳೆಯ ಶೀಲ ಆಚಾರಉಳ್ಳವರಲ್ಲಿ ಶ್ರೇಷ್ಠನಾದ ಪುರುಷೋತ್ತಮನಾದ ನಿನ್ನಲ್ಲಿ ಇದೇನೂ ಆಶ್ಚರ್ಯವಲ್ಲ. ಏಕೆಂದರೆ ಹರಿವ ನೀರು ತಗ್ಗಿನಲ್ಲಿ ಬಂದು ಸೇರುವಂತೆ ನಿನ್ನಲ್ಲಿ ಎಲ್ಲ ಸದ್ಗುಣವೂ ಬಂದು ಸೇರಿದೆ.

ಅನೃಣಃ ಸ ಮಹಾಬಾಹುಃ ಪಿತಾ ದಶರಥಸ್ತವ ।
ಯಸ್ಯ ತ್ವಮೀದೃಶಃ ಪುತ್ರೋ ಧರ್ಮಜ್ಞೋ ಧರ್ಮವತ್ಸಲಃ ॥೧೭॥

ನಿನ್ನ ತಂದೆ ಮಹಾಬಾಹು ದಶರಥನು ಋಣಮುಕ್ತನಾಗಿದ್ದಾನೆ. ಏಕೆಂದರೆ ಅವನಿಗೆ ಧರ್ಮಜ್ಞನಾದ ಧರ್ಮಪ್ರಿಯನಾದ ಇಂಥ ಪುತ್ರನು ನೀನು.

ತಮೃಷಿಂ ತು ಮಹಾತ್ಮಾನಮುಕ್ತವಾಕ್ಯಂ ಕೃತಾಂಜಲಿಃ ।
ಆಮಂತ್ರಯಿತುಮಾರೇಭೇ ಚರಣಾವುಪಗೃಹ್ಯ ಚ ॥೧೮॥

ಮಹಾತ್ಮನಾದ ಆ ಋಷಿ ಹೀಗೆ ಹೇಳಿದಾಗ ಭರತನು ಅವನಿಗೆ ಕೈಮುಗಿದು ಪಾದಗಳನ್ನು ಹಿಡಿದು ಬೀಳ್ಕೊಳ್ಳಲು ತೊಡಗಿದನು.

ತತಃ ಪ್ರದಕ್ಷಿಣಂ ಕೃತ್ವಾ ಭರದ್ವಾಜಂ ಪುನಃ ಪುನಃ ।
ಭರತಸ್ತು ಯಯೌ ಶ್ರೀಮಾನಯೋಧ್ಯಾಂ ಸಹ ಮಂತ್ರಿಭಿಃ ॥೧೯॥

ಭರದ್ವಾಜರಿಗೆ ಪುನಃ ಪುನಃ ಪ್ರದಕ್ಷಿಣೆ ಮಾಡಿ ಶ್ರೀಮಾನ್ ಭರತನು ಮಂತ್ರಿಗಳೊಂದಿಗೆ ಅಯೋಧ್ಯೆಗೆ ಪ್ರಯಾಣ ಮಾಡಿದನು.

ಯಾನೈಶ್ಚ ಶಕಟೈಶ್ಚೈವ ಹಯೈರ್ನಾಗೈಶ್ಚ ಸಾ ಚಮೂಃ ।
ಪುನರ್ನಿವೃತ್ತಾ ವಿಸ್ತೀರ್ಣಾ ಭರತಸ್ಯಾನುಯಾಯಿನೀ ॥೨೦॥

ಭರತನನ್ನು ಹಿಂಬಾಲಿಸಿ ಬಂದಿದ್ದ ಅವನ ದೊಡ್ಡ ಸೈನ್ಯವು ವಾಹನ ರಥ ಕುದುರೆ ಆನೆಗಳನ್ನೇರಿ ಪುನಃ ಅಯೋಧ್ಯೆಗೆ ಹಿಂತಿರುಗಿತು.

ತತಸ್ತೇ ಯಮುನಾಂ ದಿವ್ಯಾಂ ನದೀಂ ತೀರ್ತ್ವೋರ್ಮಿಮಾಲಿನೀಮ್ ।
ದದೃಶುಸ್ತಾಂ ಪುನಃ ಸರ್ವೇ ಗಂಗಾಂ ಶುಭಜಲಾಂ ನದೀಮ್ ॥೨೧॥

ಅವರೆಲ್ಲರೂ ಅಲೆಗಳ ಸಮೂಹಗಳುಳ್ಳ ದಿವ್ಯವಾದ ಯಮುನಾನದಿಯನ್ನು ದಾಟಿ ಪುನಃ ಶುಭಜಲಗಳುಳ್ಳ ಗಂಗಾನದಿಯನ್ನು ಕಂಡರು.

ತಾಂ ಪುಣ್ಯಜಲಸಂಪೂರ್ಣಾಂ ಸಂತೀರ್ಯ ಸಹಬಾಂಧವಃ ।
ಶೃಂಗಿವೇರಪುರಂ ರಮ್ಯಂ ಪ್ರವಿವೇಶ ಸಸೈನಿಕಃ ॥೨೨॥

ಪುಣ್ಯಜಲದಿಂದ ತುಂಬಿದ ಆ ಗಂಗಾನದಿಯನ್ನು ಬಾಂಧವರೊಂದಿಗೆ ದಾಟಿ ರಮ್ಯವಾದ ಶೃಂಗಿವೇರಪುರವನ್ನು ಭರತನು ಸೈನಿಕರೊಂದಿಗೆ ಪ್ರವೇಶಿಸಿದನು.

ಶೃಂಗಿವೇರಪುರಾದ್ಭೂಯಸ್ತ್ವಯೋಧ್ಯಾಂ ಸಂದದರ್ಶ ಹ ।
ಅಯೋಧ್ಯಾಂ ಚ ತತೋ ದೃಷ್ಟ್ವಾ ಪಿತ್ರಾ ಭ್ರಾತ್ರಾ ವಿವರ್ಜಿತಾಮ್ ।
ಭರತೋ ದುಃಖಸಂತಪ್ತಃ ಸಾರಥಿಂ ಚೇದಮಬ್ರವೀತ್ ॥೨೩॥

ಶೃಂಗಿವೇರಪುರದಿಂದ ಪುನಃ ಅಯೋಧ್ಯೆಯನ್ನು ಸೇರಿ ನೋಡಿದನು. ತಂದೆಯಿಂದಲೂ ಸೋದರನಿಂದಲೂ ರಹಿತವಾದ ಅಯೋಧ್ಯೆಯನ್ನು ಕಂಡು ಭರತನು ದುಃಖಸಂತಪ್ತನಾಗಿ ಸಾರಥಿಗೆ ನುಡಿದನು.

ಸಾರಥೇ ಪಶ್ಯ ವಿಧ್ವಸ್ತಾ ಸಾಯೋಧ್ಯಾ ನ ಪ್ರಕಾಶತೇ
ನಿರಾಕಾರಾ ನಿರಾನಂದಾ ದೀನಾ ಪ್ರತಿಹತಸ್ವನಾ ॥೨೪॥

ಸಾರಥಿಯೆ, ನೋಡು. ಹಿಂದಿನ ಅಯೋಧ್ಯೆ ನಷ್ಟವಾಗಿದೆ. ಈಗ ರಮ್ಯ ಆಕಾರವಿಲ್ಲ ಆನಂದವಿಲ್ಲ ಶಬ್ದವಿಲ್ಲದಂತಾಗಿ ದುಃಖಭರಿತವಾಗಿದೆ. ಏನೂ ಶೋಭಿಸುವುದಿಲ್ಲ.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ನೂರಹದಿಮೂರನೇ ಸರ್ಗ ಮುಗಿಯಿತು.

❖

ಚತುರ್ದಶಾಧಿಕ ಶತತಮಃ ಸರ್ಗಃ

ಸರ್ಗ – 114

ಭರತನು ಅಯೋಧ್ಯೆಯ ದುಃಸ್ಥಿತಿ ಕಂಡು ಮರುಗುವುದು.

ಸ್ನಿಗ್ಧಗಂಭೀರಘೋಷೇಣ ಸ್ಯಂದನೇನೋಪಯಾನ್ ಪ್ರಭುಃ ।
ಅಯೋಧ್ಯಾಂ ಭರತಃ ಕ್ಷಿಪ್ರಂ ಪ್ರವಿವೇಶ ಮಹಾಯಶಾಃ ॥೧॥

ಮಧುರ ಗಂಭೀರ ಧ್ವನಿಗೈವ ರಥದಿಂದ ಮಹಾಯಶಸ್ವಿಯಾದ ಪ್ರಭು ಭರತನು ಅಯೋಧ್ಯೆಗೆ ಬಂದು ಬೇಗನೆ ಪ್ರವೇಶಿಸಿದನು.

ಬಿಡಾಲೋಲೂಕಚರಿತಾಮಾಲೀನನರವಾರಣಾಮ್ ।
ತಿಮಿರಾಭ್ಯಾಹತಾಂ ಕಾಲೀಮಪ್ರಕಾಶಾಂ ನಿಶಾಮಿವ ॥೨॥

ಅಲ್ಲಿ ಬೆಕ್ಕು ಗೂಬೆಗಳು ಸಂಚರಿಸುತ್ತಿವೆ. ಮನೆ ಬಾಗಿಲು ಮುಚ್ಚಿವೆ. ಕತ್ತಲು ಆವರಿಸಿದೆ. ಪ್ರಕಾಶವಿಲ್ಲದ ಕೃಷ್ಣಪಕ್ಷದ ರಾತ್ರಿಯಂತಿದೆ ಅಯೋಧ್ಯೆ.

ರಾಹುಶತ್ರೋಃ ಪ್ರಿಯಾಂ ಪತ್ನೀಂ ಶ್ರಿಯಾ ಪ್ರಜ್ವಲಿತಪ್ರಭಾಮ್ ।
ಗ್ರಹೇಣಾಭ್ಯುದಿತೇನೈಕಾಂ ರೋಹಿಣೀಮಿವ ಪೀಡಿತಾಮ್ ॥೩॥

ರಾಹುಶತ್ರುವಾದ ಚಂದ್ರನ ಪ್ರಿಯಪತ್ನಿ ಹಿಂದೆ ಕಾಂತಿಯಿಂದ ಪ್ರಜ್ವಲಿಸಿ ಹೊಳೆಯುತ್ತಿದ್ದವಳು ರೋಹಿಣಿಯು ಈಗ ಉದಿಸಿದ ರಾಹುಗ್ರಹದಿಂದ ಪೀಡಿತ-ಳಾಗಿ ಅಸಹಾಯಕಳಾಗಿರುವಂತಿತ್ತು ಭರತನು ಪ್ರವೇಶಿಸುವಾಗ ಅಯೋಧ್ಯೆ.

ಅನಿಲೋತ್ಕ್ಷುಬ್ಧಸಲಿಲಾಂ ಘರ್ಮೋತ್ತಪ್ತವಿಹಂಗಮಾಮ್ ।
ಲೀನಮೀನಝಷಗ್ರಾಹಾಂ ಕೃಶಾಂ ಗಿರಿನದೀಮಿವ ॥೪॥

ಗಾಳಿಯಿಂದ ನೀರು ಕದಡಿದಾಗ ಬಿಸಿಲತಾಪದಿಂದ ನೀರುಹಕ್ಕಿಗಳು ಬೇಯುವಾಗ ಮೀನು ಮೊಸಳೆಗಳು ಕಣ್ಮರೆಯಾದಾಗ ಬತ್ತಿದ ಬೆಟ್ಟದ ಝರಿಯಂತೆ ಅಯೋಧ್ಯೆ ಕಾಣುತ್ತಿತ್ತು.

ವಿಧೂಮಾಮಿವ ಹೇಮಾಭಾಮಧ್ವರಾಗ್ನೇಃ ಸಮುತ್ಥಿತಾಮ್ ।
ಹವಿರಭ್ಯುಕ್ಷಿತಾಂ ಪಶ್ಚಾಚ್ಛಿಖಾಂ ಪ್ರವಿಲಯಂ ಗತಾಮ್ ॥೫॥

ಹವಿಸ್ಸು ಬಿದ್ದಾಗ ಹೊಗೆ ಇಲ್ಲದೆ ಬಂಗಾರದಂತೆ ಹೊಳೆಯುತ್ತಿದ್ದ ಯಾಗಾಗ್ನಿಯ ಜ್ವಾಲೆ ಬಳಿಕ ನಂದಿ ಕಾಂತಿಹೀನವಾದಂತಿತ್ತು ಅಯೋಧ್ಯೆ.

ವಿಧ್ವಸ್ತಕವಚಾಂ ರುಗ್ಣಗಜವಾಜಿರಥಧ್ವಜಾಮ್ ।
ಹತಪ್ರವೀರಾಮಾಪನ್ನಾಂ ಚಮೂಮಿವ ಮಹಾಹವೇ ॥೬॥

ಮಹಾಯುದ್ಧದಲ್ಲಿ ಕವಚಗಳು ಪುಡಿಯಾಗಿವೆ. ಆನೆ ಕುದುರೆಗಳು ರಥಧ್ವಜಗಳು ಜರ್ಜರಿತವಾಗಿವೆ. ಪ್ರಧಾನವೀರರು ಹತರಾಗಿದ್ದಾರೆ. ಆಪತ್ತಿಗೊಳಗಾಗಿದೆ ಸೈನ್ಯ. ಹಾಗೆ ಕಾಣುತ್ತಿತ್ತು ಅಯೋಧ್ಯೆ.

ಸಫೇನಾಂ ಸಸ್ವನಾಂ ಭೂತ್ವಾ ಸಾಗರಸ್ಯ ಸಮುತ್ಥಿತಾಮ್ ।
ಪ್ರಶಾಂತಮಾರುತೋದ್ಧೂತಾಂ ಜಲೋರ್ಮಿಮಿವ ನಿಃಸ್ವನಾಮ್ ॥೭॥

ಚಂಡಮಾರುತ ಬೀಸಿದಾಗ ಸಾಗರದ ನೀರಿನ ಅಲೆಗಳು ಎದ್ದು ನೊರೆಗಳಿಂದಲೂ ಶಬ್ದಗಳಿಂದಲೂ ಕೂಡಿದ್ದುವು. ಬಿರುಗಾಳಿ ಶಾಂತವಾದಾಗ ಏಳುವ ಅಲೆಗಳಲ್ಲಿ ನೊರೆ ಇಲ್ಲ ಶಬ್ದವೂ ಇಲ್ಲ. ಹಾಗಿತ್ತು ಅಯೋಧ್ಯೆ.

ತ್ಯಕ್ತಾಂ ಯಜ್ಞಾಯುಧೈಃ ಸರ್ವೈರಭಿರೂಪೈಶ್ಚ ಯಾಜಕೈಃ ।
ಸುತ್ಯಾಕಾಲೇ ವಿನಿರ್ವೃತ್ತೇ ವೇದಿಂ ಗತರವಾಮಿವ ॥೮॥

ಸೋಮಾಹುತಿ ನೀಡುವ ಕಾಲದಲ್ಲಿ ಯಜ್ಞವೇದಿಯಲ್ಲಿ ಬಹಳ ಒಳ್ಳೆಯ ಯಾಜ್ಞಿಕರಿದ್ದರು, ಯಜ್ಞದ ಸಲಕರಣೆಗಳಿದ್ದುವು, ವೇದಘೋಷಗಳಿದ್ದುವು. ಆಹುತಿಕಾಲ ಕಳೆದಾಗ ಇವು ಯಾವುವೂ ಇಲ್ಲ. ಹಾಗೇ ಅಯೋಧ್ಯೆ ಕಂಡಿತು.

ಗೋಷ್ಠಮಧ್ಯೇ ಸ್ಥಿತಾಮಾರ್ತಾಮಚರಂತೀಂ ತೃಣಂ ನವಮ್ ।
ಗೋವೃಷೇಣ ಪರಿತ್ಯಕ್ತಾಂ ಗವಾಂ ಪತ್ನೀಮಿವೋತ್ಸುಕಾಮ್ ॥೯॥

ಕೊಟ್ಟಿಗೆಯಲ್ಲಿ ಹಸಿಹುಲ್ಲು ತಿನ್ನುತ್ತ ಹೋರಿಯೊಂದಿಗೆ ಇದ್ದ ಅಲೆಬಂದ ಹಸು ಈಗ ಹೋರಿ ಬಿಟ್ಟು ಹೋದ ಬಳಿಕ ಅವನಿಗಾಗಿ ಉತ್ಸುಕವಾಗಿದ್ದು ಆರ್ತವಾಗಿದೆ. ಹಸಿಹುಲ್ಲನ್ನು ತಿನ್ನುತ್ತಿಲ್ಲ. ಅಂಥ ಹಸುವಿನಂತೆ. ಅಯೋಧ್ಯೆ ಇತ್ತು.

ಪ್ರಭಾಕರಾದ್ಯೈಃ ಸುಸ್ನಿಗ್ಧೈಃ ಪ್ರಜ್ವಲದ್ಭಿರಿವೋತ್ತಮೈಃ ।
ವಿಯುಕ್ತಾಂ ಮಣಿಭಿರ್ಹಾತ್ಯೈರ್ನವಾಂ ಮುಕ್ತಾವಲೀಮಿವ ॥೧೦॥

ಜ್ವಲಿಸುವಂತಿರುವ ಸುಂದರವಾದ ಉತ್ತಮವಾದ ಒಳ್ಳೆಯ ಜಾತಿಯ ಪದ್ಮ-ರಾಗಾದಿ ಮಣಿಗಳಿಂದ ಕೂಡಿದ ಹೊಸ ಮುತ್ತಿನ ಮಾಲೆ, ಅದು ಈಗ ಅವುಗಳಿಂದ ರಹಿತವಾಗಿ ಶೋಭಿಸುತ್ತಿಲ್ಲ, ಹಾಗೇ ಅಯೋಧ್ಯೆ ಶೋಭಿಸಲಿಲ್ಲ.

ಸಹಸಾ ಚಲಿತಾಂ ಸ್ಥಾನಾನ್ಮಹೀಂ ಪುಣ್ಯಕ್ಷಯಾದ್ಗತಾಮ್ ।
ಸಂಹೃತದ್ಯುತಿವಿಸ್ತಾರಾಂ ತಾರಾಮಿವ ದಿವಶ್ಚ್ಯುತಾಮ್ ॥೧೧॥

ಪುಣ್ಯಕ್ಷಯದಿಂದ ವೇಗದಿಂದ ಸ್ಥಾನಭ್ರಷ್ಟವಾಗಿ ಆಕಾಶದಿಂದ ಉದುರಿ ಭೂಮಿಗೆ ಬಿದ್ದು ತನ್ನ ವಿಸ್ತೃತ ಪ್ರಕಾಶವನ್ನು ಕಳೆದುಕೊಂಡ ತಾರೆಯಂತೆ ಅಯೋಧ್ಯೆ ಇತ್ತು.

ಪುಷ್ಪನದ್ಧಾಂ ವಸಂತಾಂತೇ ಮತ್ತಭ್ರಮರನಾದಿತಾಮ್ ।
ದ್ರುತದಾವಾಗ್ನಿವಿಪ್ಲುಷ್ಟಾಂ ಕ್ಲಾಂತಾಂ ವನಲತಾಮಿವ ॥೧೨॥

ಪುಷ್ಪಭರಿತವಾಗಿ ಮದಿಸಿದ ದುಂಬಿಗಳ ನಿನಾದದಿಂದ ಯುಕ್ತವಾಗಿದ್ದ ಕಾಡಿನ ಬಳ್ಳಿ ಕಾಳ್ಗಿಚ್ಚಿನಲ್ಲಿ ಬೆಂದು ಸೊರಗಿದೆ. ಹಾಗಾಗಿದೆ ಅಯೋಧ್ಯೆ.

ಸಂಮೂಢನಿಗಮಾಂ ಸ್ತಬ್ಧಾಂ ಸಂಕ್ಷಿಪ್ತವಿಪಣಾಪಣಾಮ್ ।
ಪ್ರಚ್ಛನ್ನಶಶಿನಕ್ಷತ್ರಾಂ ದ್ಯಾಮಿವಾಂಬುಧರೈರ್ವೃತಾಮ್ ॥೧೩॥

ವರ್ತಕರು ಏನೂ ದಿಕ್ಕುತೋಚದೆ ಕುಳಿತಿರುವುದರಿಂದ ಅಂಗಡಿ ಬೀದಿಗಳು ಸೊರಗಿವೆ. ಚಂದ್ರತಾರೆಯರನ್ನು ಮುಸುಕಿದ ಮೋಡಗಳಿಂದ ತುಂಬಿದ ಆಗಸದಂತೆ ಅಯೋಧ್ಯೆ ಇತ್ತು.

ಕ್ಷೀಣಪಾನೋತ್ತಮೈರ್ಭಿನ್ನೈಃ ಶರಾವೈರಭಿಸಂವೃತಾಮ್ ।
ಗತಶೌಂಡಾಮಿವ ಧ್ವಸ್ತಾಂ ಪಾನಭೂಮಿಮಸಂಸ್ಕೃತಾಮ್ ॥೧೪॥

ಪಾನಗೃಹದಲ್ಲಿ ಉತ್ತಮ ಪೇಯವಾದ ಮದ್ಯ ಖಾಲಿಯಾಗಿದೆ. ಪಾನಪಾತ್ರೆಗಳು ಒಡೆದು ರಾಶಿ ಬಿದ್ದಿವೆ. ಮದ್ಯಪಾಯಿಗಳೆಲ್ಲರೂ ಹೊರಟು ಹೋಗಿದ್ದಾರೆ. ನಿರ್ಮಲೀಕರಣವಿಲ್ಲದೆ ಹಾಳಾದ ಇಂಥ ಪಾನಗೃಹದಂತೆ ಅಯೋಧ್ಯೆ ಕಾಣುತ್ತಿತ್ತು.

ವೃಕ್ಣಭೂಮಿತಲಾಂ ನಿಮ್ನಾಂ ವೃಕ್ಣಪಾತ್ರೈಃ ಸಮಾವೃತಾಮ್ ।
ಉಪಯುಕ್ತೋದಕಾಂ ಭಗ್ನಾಂ ಪ್ರಪಾಂ ನಿಪತಿತಾಮಿವ ॥೧೫॥

ಅರವಟ್ಟಿಗೆಯಲ್ಲಿ ನೆಲ ಬಿರುಕು ಬಿಟ್ಟಿದೆ. ಹಳ್ಳ ಬಿದ್ದಿದೆ, ಒಡೆದ ಪಾತ್ರೆಗಳಿಂದ ತುಂಬಿದೆ. ಕುಡಿವ ನೀರು ಖಾಲಿಯಾಗಿದೆ. ಹೀಗೆ ಒಡೆದು ಬಿದ್ದುಹೋದ ಅರವಟ್ಟಿಗೆಯಂತೆ ಅಯೋಧ್ಯೆ ಇತ್ತು.

ವಿಪುಲಾಂ ವಿತತಾಂ ಚೈವ ಯುಕ್ತಪಾಶಾಂ ತರಸ್ವಿನಾಮ್ ।
ಭೂಮೌ ಬಾಣೈರ್ವಿನಿಷ್ಕೃತ್ತಾಂ ಪತಿತಾಂ ಜ್ಯಾಮಿವಾಯುಧಾತ್ ॥೧೬॥

ಧನುಸ್ಸಿನಲ್ಲಿ ಎರಡೂ ತುದಿಗಳಲ್ಲಿ ಬಿಗಿದಿದ್ದ ಉದ್ದವಾದ ಹೆದೆ ವೀರ ಧನುರ್ಧಾರಿಗಳ ಬಾಣಗಳಿಂದ ಕಡಿದು ಧನುಸ್ಸಿನಿಂದ ಕಳಚಿ ಬಿದ್ದಂತಿದೆ ಅಯೋಧ್ಯೆ.

ಸಹಸಾ ಯುದ್ಧಶೌಂಡೇನ ಹಯಾರೋಹೇಣ ವಾಹಿತಾಮ್ ।
ನಿಕ್ಷಿಪ್ತಭಾಂಡಾಮುತ್ಸೃಷ್ಟಾಂ ಕಿಶೋರೀಮಿವ ದುರ್ಬಲಾಮ್ ॥೧೭॥

ಯುದ್ಧ ಸಮರ್ಥನಾದ ಅಶ್ವಾರೋಹಿಯು ತಾನೇ ವೇಗವಾಗಿ ನಡೆಸುತ್ತಿದ್ದ ಆಭರಣಗಳಿಂದ ಅಲಂಕೃತವಾಗಿದ್ದ ಕುದುರೆಯನ್ನು ತಾನೆ ಆಭರಣಗಳನ್ನು ಕಳಚಿ, ಸವಾರಿಗೆ ಯೋಗ್ಯವಲ್ಲವೆಂದು ಪರಿತ್ಯಾಗ ಮಾಡಿದ. ಅಂಥ ದುರ್ಬಲವಾದ ಹೆಣ್ಣುಕುದುರೆಮರಿಯಂತೆ ಅಯೋಧ್ಯೆಯ ಸ್ಥಿತಿಯಾಗಿದೆ.

ಶುಷ್ಕತೋಯಾಂ ಮಹಾಮತ್ಸ್ಯೈಃ ಕೂರ್ಮೈಶ್ಚ ಬಹುಭಿರ್ವೃತಾಮ್ ।
ಪ್ರಭಿನ್ನತಟವಿಸ್ತೀರ್ಣಾಂ ವಾಪೀಮಿವ ಹೃತೋತ್ಪಲಾಮ್ ॥೧೮॥

ಬಹಳ ದೊಡ್ಡ ದೊಡ್ಡ ಮೀನು ಆಮೆಗಳಿಂದ ಯುಕ್ತವಾದ ವಿಸ್ತೀರ್ಣವಾದ ಕೊಳದ ದಡವನ್ನು ಒಡೆದು ನೈದಿಲೆಗಳನ್ನು ಕಿತ್ತು ನೀರೊಣಗುವಂತೆ ಮಾಡಿದಂತಾಗಿದೆ ಅಯೋಧ್ಯೆಯ ಸ್ಥಿತಿ.

ಪುರುಷಸ್ಯಾಪ್ರಹೃಷ್ಟಸ್ಯ ಪ್ರತಿಷಿದ್ಧಾನುಲೇಪನಾಮ್ ।
ಸಂತಪ್ತಾಮಿವ ಶೋಕೇನ ಗಾತ್ರಯಷ್ಟಿಮಭೂಷಣಾಮ್ ॥೧೯॥

ಪುರುಷನು ಹರ್ಷರಹಿತನಾಗಿ ಶೋಕದಿಂದ ಬೆಂದ ತನ್ನ ಶರೀರಕ್ಕೆ ಚಂದನಲೇಪ ಅಲಂಕಾರಗಳೆಲ್ಲವನ್ನೂ ನಿಷೇಧಿಸಿದಂತಾಗಿದೆ ಅಯೋಧ್ಯೆಯ ಸ್ಥಿತಿ.

ಪ್ರಾವೃಷಿ ಪ್ರವಿಗಾಢಾಯಾಂ ಪ್ರವಿಷ್ಟಸ್ಯಾಭ್ರಮಂಡಲಮ್ ।
ಪ್ರಚ್ಛನ್ನಾಂ ನೀಲಜೀಮೂತೈರ್ಭಾಸ್ಕರಸ್ಯ ಪ್ರಭಾಮಿವ ॥೨೦॥

ಮಳೆಗಾಲದಲ್ಲಿ ಮೋಡಗಳ ಸಮೂಹದಲ್ಲಿ ಪ್ರವಿಷ್ಟನಾದ ಸೂರ್ಯನ ಪ್ರಭೆಯು ಕರಿಮೋಡಗಳಿಂದ ಮುಚ್ಚಿಹೋದಂತಾಗಿದೆ ಅಯೋಧ್ಯೆಯ ಸ್ಥಿತಿ.

ನಿಹತಾಂ ಪ್ರತಿಸೈನ್ಯೇನ ವಡವಾಮಿವ ಪಾಲಿತಾಮ್ ।
ಭರತಸ್ತು ರಥಸ್ಥಃ ಸನ್ ಶ್ರೀಮಾನ್ ದಶರಥಾತ್ಮಜಃ
ವಾಹಯಂತಂ ರಥಂ ಶ್ರೇಷ್ಠಂ ಸಾರಥಿಂ ವಾಕ್ಯಮಬ್ರವೀತ್ ॥೨೧॥

ಕಿಂ ನು ಖಲ್ವದ್ಯ ಗಂಭೀರೋ ಮೂರ್ಛಿತೋ ನ ನಿಶಮ್ಯತೇ
ಯಥಾಪುರಮಯೋಧ್ಯಾಯಾಂ ಗೀತವಾದಿತ್ರನಿಸ್ವನಃ ॥೨೨॥

ಶತ್ರುಸೈನ್ಯವು ನಮ್ಮ ಸೈನ್ಯದಲ್ಲಿ ರಕ್ಷಿತವಾಗಿದ್ದ ಹೆಣ್ಣುಕುದುರೆಯನ್ನು ಕೊಂದಂತಾಗಿದೆ ಅಯೋಧ್ಯೆಯ ಸ್ಥಿತಿ. ದಶರಥಪುತ್ರ ಶ್ರೀಮಾನ್ ಭರತನು ರಥದಲ್ಲಿದ್ದು ಆ ಶ್ರೇಷ್ಠ ರಥವನ್ನು ನಡೆಸುತ್ತಿದ್ದ ಸಾರಥಿಗೆ ಹೇಳಿದನು. 'ಅಯೋಧ್ಯೆಯಲ್ಲಿ ಹಿಂದಿನಂತೆ ಗಂಭೀರವಾದ ಆರೋಹಣ ಅವರೋಹಣ ಯುಕ್ತವಾದ ಗೀತ ವಾದ್ಯ ಧ್ವನಿ ಏಕೆ ಕೇಳಿಸುತ್ತಿಲ್ಲ?

ವಾರುಣೀಮದಗಂಧಶ್ಚ ಮಾಲ್ಯಗಂಧಶ್ಚ ಮೂರ್ಛಿತಃ
ಧೂಪಿತಾಗರುಗಂಧಶ್ಚ ನ ಪ್ರವಾತಿ ಸಮಂತತಃ ॥೨೩॥

ವಾರುಣೀ ಮದ್ಯದ ವಾಸನೆಯೂ ಗಾಢವಾದ ಮಾಲ್ಯಗಂಧವೂ ಅಗುರು ಧೂಪದ ಗಂಧವೂ ಗಾಳಿಯಲ್ಲಿ ಎಲ್ಲೆಡೆ ಹರಡುತ್ತಿಲ್ಲ.

ಯಾನಪ್ರವರಘೋಷಶ್ಚ ಸ್ನಿಗ್ಧಶ್ಚ ಹಯನಿಸ್ವನಃ ॥೨೪॥

ಪ್ರಮತ್ತಗಜನಾದಶ್ಚ ಮಹಾಂಶ್ಚ ರಥನಿಸ್ವನಃ ।
ನೇದಾನೀಂ ಶ್ರೂಯತೇ ಪುರ್ಯಾಮಸ್ಯಾಂ ರಾಮೇ ನಿವಾಸಿತೇ ॥೨೫॥

ಶ್ರೇಷ್ಠ ವಾಹನಗಳ ಶಬ್ದ ಮದುರವಾದ ಕುದುರೆ ಕೆನೆಯುವ ಶಬ್ದ ಮದಿಸಿದ ಆನೆ ಘೀಳಿಡುವ ಶಬ್ದ, ದೊಡ್ಡ ರಥಶಬ್ದ ಈಗ ಯಾವುದೂ ಈ ನಗರದಲ್ಲಿ ರಾಮನು ಕಾಡಿಗೆ ಹೋದಬಳಿಕ ಕೇಳಿಬರುತ್ತಿಲ್ಲ.

ಚಂದನಾಗರುಗಂಧಾಶ್ಚ ಮಹಾರ್ಹಾಶ್ಚ ನವಸ್ರಜಃ ।
ಗತೇ ಹಿ ರಾಮೇ ತರುಣಾಃ ಸಂತಪ್ತಾ ನೋಪಭುಂಜತೇ ॥೨೬॥

ರಾಮನು ಹೊರಟುಹೋದ ಬಳಿಕ ಶೋಕ ಸಂತಪ್ತರಾದ ತರುಣರು ಈಗ ಚಂದನ ಅಗುರು ಗಂಧ ಯುಕ್ತವಾದ ಬಹು ಬೆಲೆಬಾಳುವ ಹೊಸ ಮಾಲೆಗಳನ್ನು ಉಪಭೋಗಿಸುವುದಿಲ್ಲ.

ಬಹಿರ್ಯಾತ್ರಾಂ ನ ಗಚ್ಛಂತಿ ಚಿತ್ರಮಾಲ್ಯಧರಾ ನರಾಃ ।
ನೋತ್ಸವಾಃ ಸಂಪ್ರವರ್ತಂತೇ ರಾಮಶೋಕಾರ್ದಿತೇ ಪುರೇ ॥೨೭॥

ರಾಮಶೋಕದಿಂದ ಪೀಡಿತವಾದ ನಗರದಲ್ಲಿ ಈಗ ಸುಂದರಮಾಲೆಗಳನ್ನು ಧರಿಸಿ ಪ್ರಜೆಗಳು ಹೊರಗೆ ವಿಹಾರ ಮಾಡುವುದಿಲ್ಲ. ಉತ್ಸವಗಳು ನಡೆಯುವುದಿಲ್ಲ.

ಸಹ ನೂನಂ ಮಮ ಭ್ರಾತ್ರಾ ಪುರಸ್ಯಾಸ್ಯ ದ್ಯುತಿರ್ಗತಾ ।
ನ ಹಿ ರಾಜತ್ಯಯೋಧ್ಯೇಯಂ ಸಾಸಾರೇವಾರ್ಜುನೀ ಕ್ಷಪಾ ॥೨೮॥

ನನ್ನ ಅಣ್ಣನೊಂದಿಗೇ ನಗರದ ಶೋಭೆಯೂ ನಿಶ್ಚಯವಾಗಿ ಹೊರಟು ಹೋಗಿದೆ. ಜಡಿಮಳೆ ಸುರಿಯುವ ಶರತ್ಕಾಲದ ರಾತ್ರಿಯಂತೆ ಅಯೋಧ್ಯೆ ಬೆಳಗುತ್ತಿಲ್ಲ.

ಕದಾ ನು ಖಲು ಮೇ ಭ್ರಾತಾ ಮಹೋತ್ಸವ ಇವಾಗತಃ ।
ಜನಯಿಷ್ಯತ್ಯಯೋಧ್ಯಾಯಾಂ ಹರ್ಷಂ ಗ್ರೀಷ್ಮ ಇವಾಂಬುದಃ ॥೨೯॥

ಗ್ರೀಷ್ಮದಲ್ಲಿ ಮೋಡದಂತೆ ಮಹಾ ಉತ್ಸವದಂತೆ ನಮ್ಮಣ್ಣನು ಬಂದು ಅಯೋಧ್ಯೆ-ಯಲ್ಲಿ ಎಂದು ಹರ್ಷವನ್ನುಂಟು ಮಾಡುವನು?

ತರುಣೈಶ್ಚಾರುವೇಷೈಶ್ಚ ನರೈರುನ್ನತಗಾಮಿಭಿಃ ।
ಸಂಪತದ್ಭಿರಯೋಧ್ಯಾಯಾಂ ನಾಭಿಭಾಂತಿ ಮಹಾಪಥಾಃ ॥೩೦॥

ಸುಂದರ ವೇಷಧರಿಸಿ ಎದೆಯುಬ್ಬಿ ಹೆಜ್ಜೆ ಇಡುತ್ತ ಬರುವ ತರುಣರಿಂದ ರಾಜಮಾರ್ಗಗಳು ಶೋಭಿಸುತ್ತಿಲ್ಲ.

ಏವಂ ಬಹುವಿಧಂ ಜಲ್ಪನ್ ವಿವೇಶ ವಸತಿಂ ಪಿತುಃ ।
ತೇನ ಹೀನಾಂ ನರೇಂದ್ರೇಣ ಸಿಂಹಹೀನಾಂ ಗುಹಾಮಿವ ॥೩೧॥

ಹೀಗೆ ಸಾರಥಿಯೊಡನೆ ಬಹುವಿಧದಿಂದ ಅಯೋಧ್ಯೆಯ ದುಃಸ್ಥಿತಿಯನ್ನು ವರ್ಣಿಸುತ್ತ ಭರತನು ತಂದೆ ಇಲ್ಲದೆ ಸಿಂಹವಿಲ್ಲದ ಗುಹೆಯಂತಿದ್ದ ತಂದೆಯ ಅರಮನೆಯನ್ನು ಪ್ರವೇಶಿಸಿದನು.

ತದಾ ತದಂತಃಪುರಮುಜ್ಝಿತಪ್ರಭಂ
ಸುರೈರಿವೋತ್ಸೃಷ್ಟಮಭಾಸ್ಕರಂ ದಿನಮ್ ।
ನಿರೀಕ್ಷ್ಯ ಸರ್ವಂ ತು ವಿವಿಕ್ತಮಾತ್ಮವಾನ್
ಮುಮೋಚ ಬಾಷ್ಪಂ ಭರತಃ ಸುದುಃಖಿತಃ ॥೩೨॥

ಆಗ ಅಂತಃಪುರವು ಕಾಂತಿಹೀನವಾಗಿತ್ತು. ದೇವತೆಗಳು ಅಲ್ಲಿಂದ ಹೊರಟು

ಹೋದಂತಿತ್ತು. ದಿನವಿಡೀ ಮೋಡ ಮುಸುಕಿದ್ದು ಸೂರ್ಯದರ್ಶನವೇ ಇಲ್ಲದ ಹಗಲಿನಂತಿತ್ತು. ಜನಶೂನ್ಯವಾದ ಈ ಇಡೀ ಅಂತಃಪುರವನ್ನು ನೋಡಿ ಧೀರನಾದ ಭರತನು ಬಲು ದುಃಖಿತನಾಗಿ ಕಣ್ಣೀರು ಸುರಿಸಿದನು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ನೂರಹದಿನಾಲ್ಕನೇ ಸರ್ಗ ಮುಗಿಯಿತು.

❖

ಪಂಚದಶಾಧಿಕ ಶತತಮಃ ಸರ್ಗಃ

ಸರ್ಗ – 115

ಪಾದುಕಾಪಟ್ಟಾಭಿಷೇಕ. ನಂದಿಗ್ರಾಮದಲ್ಲಿ ಭರತನವಾಸ.

ತತೋ ನಿಕ್ಷಿಪ್ಯ ಮಾತೄಃ ಸ ಅಯೋಧ್ಯಾಯಾಂ ದೃಢವ್ರತಃ ।
ಭರತಃ ಶೋಕಸಂತಪ್ತೋ ಗುರೂನಿದಮಥಾಬ್ರವೀತ್ ॥೧॥

ಬಳಿಕ ದೃಢವ್ರತನಾದ ಶೋಕಸಂತಪ್ತನಾದ ಭರತನು ಮಾತೆಯರನ್ನು ಅಯೋಧ್ಯೆಯಲ್ಲಿ ಇರಿಸಿ ತಾನು ಗುರುಗಳಿಗೆ ಹೇಳಿದನು.

ನಂದಿಗ್ರಾಮಂ ಗಮಿಷ್ಯಾಮಿ ಸರ್ವಾನಾಮಂತ್ರಯೇಽದ್ಯ ವಃ ।
ತತ್ರ ದುಃಖಮಿದಂ ಸರ್ವಂ ಸಹಿಷ್ಯೇ ರಾಘವಂ ವಿನಾ ॥೨॥

ನಾನು ನಂದಿಗ್ರಾಮಕ್ಕೆ ಹೋಗುವೆನು. ನಿಮ್ಮೆಲ್ಲರ ಅನುಜ್ಞೆಯನ್ನು ಕೇಳಿ-ಕೊಳ್ಳುವೆನು. ಅಲ್ಲಿ ರಾಮನಿಲ್ಲದ ದುಃಖವೆಲ್ಲವನ್ನೂ ಸಹಿಸಿಕೊಳ್ಳುವೆನು.

ಗತಶ್ಚ ಹಿ ದಿವಂ ರಾಜಾ ವನಸ್ಥಶ್ಚ ಗುರುರ್ಮಮ ।
ರಾಮಂ ಪ್ರತೀಕ್ಷೇ ರಾಜ್ಯಾಯ ಸ ಹಿ ರಾಜಾ ಮಹಾಯಶಾಃ ॥೩॥

ರಾಜನು ದಿವಂಗತನಾಗಿದ್ದಾನೆ. ನನ್ನ ಗುರು ರಾಮನು ಕಾಡಿಗೆ ಹೋಗಿದ್ದಾನೆ. ರಾಜ್ಯಭಾರಕ್ಕೆ ನಾನು ರಾಮನನ್ನು ನಿರೀಕ್ಷಿಸುತ್ತೇನೆ. ಮಹಾಯಶಸ್ವಿಯಾದ ಅವನೇ ರಾಜ.

ಏತಚ್ಛ್ರುತ್ವಾ ಶುಭಂ ವಾಕ್ಯಂ ಭರತಸ್ಯ ಮಹಾತ್ಮನಃ ।
ಅಬ್ರುವನ್ ಮಂತ್ರಿಣಃ ಸರ್ವೇ ವಸಿಷ್ಠಶ್ಚ ಪುರೋಹಿತಃ ॥೪॥

ಮಹಾತ್ಮಭರತನ ಈ ಶುಭಕರವಾದ ಮಾತನ್ನು ಕೇಳಿ ಎಲ್ಲ ಮಂತ್ರಿಗಳೂ ಪುರೋಹಿತರಾದ ವಸಿಷ್ಠರೂ ಹೇಳಿದರು.

ಸದೃಶಂ ಶ್ಲಾಘನೀಯಂ ಚ ಯದುಕ್ತಂ ಭರತ ತ್ವಯಾ ।
ವಚನಂ ಭ್ರಾತೃವಾತ್ಸಲ್ಯಾದನುರೂಪಂ ತಥೈವ ತತ್ ॥೫॥

ಭರತ, ನೀನು ಭ್ರಾತೃ ವಾತ್ಸಲ್ಯದಿಂದ ಆದಕ್ಕೆ ಅನುರೂಪವಾದ ಏನು ಮಾತನ್ನು ಹೇಳಿದೆಯೋ ಆ ಮಾತು ಹಾಗೆಯೇ ನಿನಗೆ ತಕ್ಕುದಾಗಿದೆ.

ನಿತ್ಯಂ ತೇ ಬಂಧುಲುಬ್ಧಸ್ಯ ತಿಷ್ಠತೋ ಭ್ರಾತೃಸೌಹೃದೇ ।
ಆರ್ಯಮಾರ್ಗಂ ಪ್ರಪನ್ನಸ್ಯ ನಾನುಮನ್ಯೇತ ಕಃ ಪುಮಾನ್ ॥೬॥

ಸದಾ ಬಂಧುಗಳನ್ನು ಪ್ರೀತಿಸುವವನು ಸೋದರಪ್ರೇಮ ಸಂಪಾದನೆಗೇ ಯತ್ನಿಸುವ ಸಜ್ಜನರ ಮಾರ್ಗದಲ್ಲಿರುವ ನಿನ್ನ ಮಾತನ್ನು ಯಾರು ತಾನೆ ಅಂಗೀಕರಿಸಲಾರ?

ಮಂತ್ರಿಣಾಂ ವಚನಂ ಶ್ರುತ್ವಾ ಯಥಾಭಿಲಷಿತಂ ಪ್ರಿಯಮ್ ।
ಅಬ್ರವೀತ್ಸಾರಥಿಂ ವಾಕ್ಯಂ ರಥೋ ಮೇ ಯುಜ್ಯತಾಮಿತಿ ॥೭॥

ತಾನು ಬಯಸಿದಂತೇ ಮಂತ್ರಿಗಳು ಪ್ರಿಯವಾಗಿ ನುಡಿಯುವುದನ್ನು ಕೇಳಿ ಭರತನು ಸಾರಥಿಗೆ ಹೇಳಿದನು. ನನಗೆ ರಥವನ್ನು ಸಜ್ಜುಗೊಳಿಸು.

ಪ್ರಹೃಷ್ಟವದನಃ ಸರ್ವಾ ಮಾತೄಃ ಸಮಭಿವಾದ್ಯ ಸಃ ।
ಆರುರೋಹ ರಥಂ ಶ್ರೀಮಾನ್ ಶತ್ರುಘ್ನೇನ ಸಮನ್ವಿತಃ ॥೮॥

ಮುಖದಲ್ಲಿ ಹರ್ಷತೋರುತ್ತ ಮಾತೆಯರಿಗೆ ಅಭಿವಾದನ ಮಾಡಿ ಶ್ರೀಮಾನ್ ಭರತನು ಶತ್ರುಘ್ನನೊಂದಿಗೆ ರಥವನ್ನೇರಿದನು.

ಆರುಹ್ಯ ಚ ರಥಂ ಶೀಘ್ರಂ ಶತ್ರುಘ್ನಭರತಾವುಭೌ ।
ಯಯತುಃ ಪರಮಪ್ರೀತೌ ವೃತೌ ಮಂತ್ರಿಪುರೋಹಿತೈಃ ॥೯॥

ಶತ್ರುಘ್ನ ಭರತರು ಇಬ್ಬರೂ ಬಹಳ ಸಂತುಷ್ಟರಾಗಿ ರಥವನ್ನೇರಿ ಮಂತ್ರಿ , ಪುರೋಹಿತರೊಂದಿಗೆ ಹೊರಟರು.

ಅಗ್ರತೋ ಗುರವಸ್ತತ್ರ ವಸಿಷ್ಠಪ್ರಮುಖಾ ದ್ವಿಜಾಃ ।
ಪ್ರಯಯುಃ ಪ್ರಾಙ್ಮುಖಾಃ ಸರ್ವೇ ನಂದಿಗ್ರಾಮೋ ಯತೋಽಭವನ್ ॥

ಮುಂದಿನಿಂದ ಪೂರ್ವಾಭಿಮುಖವಾಗಿ ವಸಿಷ್ಠರು ಮುಂತಾದ ಎಲ್ಲ ದ್ವಿಜರೂ ನಂದಿಗ್ರಾಮವಿರುವಲ್ಲಿಗೆ ಹೊರಟರು.

ಬಲಂ ಚ ತದನಾಹೂತಂ ಗಜಾಶ್ವರಥಸಂಕುಲಮ್ ।
ಪ್ರಯಯೌ ಭರತೇ ಯಾತೇ ಸರ್ವೇ ಚ ಪುರುವಾಸಿನಃ ॥೧೧॥

ಗಜ ಅಶ್ವ ರಥಗಳಿಂದ ತುಂಬಿದ ಸೈನ್ಯವು ಕರೆಯದೆಯೇ ಭರತನು ಹೊರಟೊಡನೆ ಅವನ ಹಿಂದೆ ಹೊರಟಿತು. ಎಲ್ಲ ಪುರವಾಸಿಗಳೂ ಹೊರಟರು.

ರಥಸ್ಥಃ ಸ ಹಿ ಧರ್ಮಾತ್ಮಾ ಭರತೋ ಭ್ರಾತೃವತ್ಸಲಃ ।
ನಂದಿಗ್ರಾಮಂ ಯಯೌ ತೂರ್ಣಂ ಶಿರಸ್ಯಾಧಾಯ ಪಾದುಕೇ ॥೧೨॥

ಭ್ರಾತೃವತ್ಸಲನಾದ ಧರ್ಮಾತ್ಮ ಭರತನು ರಥದಲ್ಲಿ ಕುಳಿತು ತಲೆಯಮೇಲೆ ಪಾದುಕೆಗಳನ್ನಿರಿಸಿಕೊಂಡು ಬೇಗನೆ ನಂದಿಗ್ರಾಮಕ್ಕೆ ಹೋದನು.

ತತಸ್ತು ಭರತಃ ಕ್ಷಿಪ್ರಂ ನಂದಿಗ್ರಾಮಂ ಪ್ರವಿಶ್ಯ ಸಃ ।
ಅವತೀರ್ಯ ರಥಾತ್ತೂರ್ಣಂ ಗುರೂನಿದಮುವಾಚ ಹ ॥೧೩॥

ಬಳಿಕ ಬೇಗನೆ ನಂದಿಗ್ರಾಮವನ್ನು ಪ್ರವೇಶಿಸಿ ಬೇಗೆ ರಥದಿಂದ ಇಳಿದು ಭರತನು ಗುರುಗಳಿಗೆ ಹೇಳಿದನು.

ಏತದ್ರಾಜ್ಯಂ ಮಮ ಭ್ರಾತ್ರಾ ದತ್ತಂ ಸನ್ನ್ಯಾಸವತ್ ಸ್ವಯಮ್ ।
ಯೋಗಕ್ಷೇಮವಹೇ ತಸ್ಯ ಪಾದುಕೇ ಹೇಮಭೂಷಿತೇ ॥೧೪॥

ಈ ರಾಜ್ಯವನ್ನು ಸೋದರನು ಸ್ವತಃ ನನಗೆ ನ್ಯಾಸವಾಗಿ ಕೊಟ್ಟಿರುವನು. ಅದರ ಯೋಗಕ್ಷೇಮವನ್ನು ಬಂಗಾರದಿಂದ ಅಲಂಕೃತವಾದ ಅವನ ಪಾದುಕೆಗಳೇ ವಹಿಸಿಕೊಳ್ಳುವುವು.

ಭರತಃ ಶಿರಸಾ ಕೃತ್ವಾ ಸನ್ನ್ಯಾಸಂ ಪಾದುಕೇ ತತಃ ।
ಅಬ್ರವೀದ್ದುಃಖಸಂತಪ್ತಃ ಸರ್ವಂ ಪ್ರಕೃತಿಮಂಡಲಮ್ ॥೧೫॥

ನ್ಯಾಸಭೂತವಾದ ಪಾದುಕೆಗಳನ್ನು ಭರತನು ತಲೆಯಮೇಲೆ ಇಟ್ಟುಕೊಂಡು ದುಃಖಸಂತುಪ್ತನಾಗಿ ಎಲ್ಲ ಮಂತ್ರಿವರ್ಗಕ್ಕೆ ಹೇಳಿದನು.

ಛತ್ರಂ ಧಾರಯತ ಕ್ಷಿಪ್ರಮಾರ್ಯಪಾದಾವಿಮೌ ಮತೌ ।
ಆಭ್ಯಾಂ ರಾಜ್ಯೇ ಸ್ಥಿತೋ ಧರ್ಮಃ ಪಾದುಕಾಭ್ಯಾಂ ಗುರೋರ್ಮಮ ॥

ಈ ಪಾದುಕೆಗಳಿಗೆ ಬೇಗನೆ ಶ್ವೇತಚ್ಛತ್ರವನ್ನು ಹಿಡಿಯಿರಿ. ಇವುಗಳನ್ನು ರಾಮನ ಪಾದಗಳೆಂದೇ ತಿಳಿಯುತ್ತೇನೆ. ನನ್ನ ಗುರು ರಾಮನ ಈ ಪಾದುಕೆಗಳಿಂದಲೇ ರಾಜ್ಯದಲ್ಲಿ ಧರ್ಮವು ನಿಂತಿರುತ್ತದೆ.

ಭ್ರಾತ್ರಾ ಹಿ ಮಯಿ ಸನ್ನ್ಯಾಸೋ ನಿಕ್ಷಿಪ್ತಃ ಸೌಹೃದಾದಯಮ್ ।
ತಮಿಮಂ ಪಾಲಯಿಷ್ಯಾಮಿ ರಾಘವಾಗಮನಂ ಪ್ರತಿ ॥೧೭॥

ಸೋದರನು ನನ್ನಲ್ಲಿ ಪ್ರೀತಿಯಿಂದ ಇವುಗಳನ್ನು ನ್ಯಾಸವಾಗಿ ಕೊಟ್ಟಿದ್ದಾನೆ. ಅವನು ಬರುವವರೆಗೂ ಈ ನ್ಯಾಸವನ್ನು ಕಾಪಾಡುವೆನು.

ಕ್ಷಿಪ್ರಂ ಸಂಯೋಜಯಿತ್ವಾ ತು ರಾಘವಸ್ಯ ಪುನಃ ಸ್ವಯಮ್ ।
ಚರಣೌ ತೌ ತು ರಾಮಸ್ಯ ದ್ರಕ್ಷ್ಯಾಮಿ ಸಹಪಾದುಕೌ ॥೧೮॥

ಈ ಪಾದುಕೆಗಳನ್ನು ಬೇಗನೆ ರಾಮನ ಪಾದಗಳಿಗೆ ಜೋಡಿಸಿ, ಪಾದುಕೆಗಳನ್ನು ಮೆಟ್ಟಿದ ರಾಮನ ಪಾದಗಳನ್ನು ಪುನಃ ನೋಡುವೆನು.

ತತೋ ನಿಕ್ಷಿಪ್ತಭಾರೋಽಹಂ ರಾಘವೇಣ ಸಮಾಗತಃ ।
ನಿವೇದ್ಯ ಗುರವೇ ರಾಜ್ಯಂ ಭಜಿಷ್ಯೇ ಗುರುವರ್ತಿತಾಮ್ ॥೧೯॥

ರಾಜ್ಯಭಾರ ಹೊರೆ ಹೊತ್ತವನು ನಾನು ರಾಮನ ಸಮಾಗಮವಾದೊಡನೆ ಗುರುವಿಗೇ ರಾಜ್ಯವನ್ನು ಸಮರ್ಪಿಸಿ ಗುರುವಿನ ದಾಸನಾಗಿರುತ್ತೇನೆ.

ರಾಘವಾಯ ಚ ಸನ್ನ್ಯಾಸಂ ದತ್ತ್ವೇಮೇ ವರಪಾದುಕೇ ।
ರಾಜ್ಯಂ ಚೇದಮಯೋಧ್ಯಾಂ ಚ ಧೂತಪಾಪೋ ಭವಾಮ್ಯಹಮ್ ॥

ರಾಮನಿಗೆ ಅವನು ನ್ಯಾಸವಾಗಿರಿಸಿದ ಅವನ ದಿವ್ಯ ಪಾದುಕೆಗಳನ್ನು ಈ ರಾಜ್ಯವನ್ನೂ ಅಯೋಧ್ಯೆಯನ್ನೂ ಅವನಿಗೆ ಕೊಟ್ಟು ನಾನು ನನ್ನ ಪಾಪವನ್ನು ತೊಡೆದುಕೊಳ್ಳುತ್ತೇನೆ.

ಭರತನು ಯಾವ ಪಾಪವನ್ನೂ ಮಾಡಿಲ್ಲ. ಭರತನ ತಾಯಿ ಪಾಪ ಮಾಡಿದ್ದಳು. ಆ ಪಾಪವನ್ನು ತೊಡೆಯುತ್ತೇನೆ ಎನ್ನುತ್ತಿದ್ದಾನೆ ಭರತ. ಮಾತೆಯ ಪಾಪಕ್ಕೆ ಮಾತೆಗೆ ಪ್ರತಿನಿಧಿಯಾಗಿ ಮಗನು ಪ್ರಾಯಶ್ಚಿತ್ತ ಮಾಡಿಕೊಳ್ಳುತ್ತಾನೆ. ಮಾತೆಗೆ ಪ್ರಾಯಶ್ಚಿತ್ತ ಮಾಡಿಕೊಳ್ಳಲು ಶಕ್ತಿಯಿಲ್ಲ. ಅದರಿಂದ ಈ ಉಪಧಿ ಜುಗುಪ್ಸಿತವಲ್ಲ. ಹೀಗೆ ಭರತನು ಪ್ರಾಯಶ್ಚಿತ್ತ ಮಾಡಿದ್ದರಿಂದ,

'ಸೂತ್ವಾ ತು ಭರತಂ ನೈಷಾ ಗಚ್ಛೇತ ನಿರಯಾನ್'

'ಭರತನನ್ನು ಹೆತ್ತ ತಾಯಿ ಕೈಕೇಯಿ ನರಕಕ್ಕೆ ಹೋಗಬಾರದು' ಎಂದು ರಾಮನ ಆಜ್ಞೆ ಇತ್ತು. ಕೈಕೇಯಿಗೆ ಸದ್ಗತಿಯಾಯಿತು.

ಭರತನು ರಾಜ್ಯವನ್ನು ಸ್ವೀಕರಿಸಿದ್ದರೆ ಅದು ಮಹಾಪಾಪವಾಗುತ್ತಿತ್ತು. ಜ್ಯೇಷ್ಠನು ವಿವಾಹವಾಗದಿದ್ದಾಗ ತಮ್ಮನು ವಿವಾಹವಾದರೆ ಅವನು 'ಪರಿವಿತ್ತಿ' ಎನಿಸುತ್ತಾನೆ. ಪರಿವಿತ್ತಿಯು ನರಕ ಭಾಗಿಯಾಗುತ್ತಾನೆ ಎಂದು ಮನುಸ್ಮೃತಿ ಹೇಳಿದೆ(3.172) 'ಭೂಪರಿಗ್ರಹೋಽಪಿ ದಾರಪರಿಗ್ರಹ ಸಮಃ' ರಾಜ್ಯಾಭಿಷೇಕವೂ ಕೂಡ ವಿವಾಹಕ್ಕೆ ಸಮಾನ. 'ಶಂತನು ಬ್ರಾಹ್ಮಣೈರುಕ್ತಃ ಪರಿವೇತ್ತಾಯಮಗ್ರಭುಕ್' (ಭಾಗ.9.19.15) ಶಂತನು ಮಹಾರಾಜನು ಅಣ್ಣ ದೇವಾಪಿಗಿಂತ ಮೊದಲು ರಾಜ್ಯಸ್ವೀಕಾರ ಮಾಡಿದ್ದರಿಂದ 'ಪರಿವೇತ'ನೆನಿಸಿದ್ದಾನೆ. ಅದರಿಂದ ಅವನ ರಾಜ್ಯದಲ್ಲಿ ಮಳೆ-ಯಾಗಲಿಲ್ಲ' ಎಂದು ಭಾಗವತ ಹೇಳುವಂತೆ ಭರತನು ಅಪರಾಯಾಗುತ್ತಿದ್ದ. ಅದರಿಂದ ರಾಮನೆಷ್ಟು ಬೋಧಿಸಿದರೂ ಭರತನು ಅಭಿಷೇಕ ಮಾಡಿಸಿಕೊಳ್ಳಲು ಒಪ್ಪಲಿಲ್ಲ. ಕೈಕೇಯಿ ಭರತನಿಗೆ ರಾಜ್ಯಾಭಿಷೇಕ ವರವನ್ನು ಪಡೆದುಕೊಂಡಿದ್ದು ಪರಿವಿತ್ತಿಗೆ ಸಮಾನವಾದ ಪಾಪವಾಗಿತ್ತು. ರಾಜ್ಯಾಭಿಷೇಕಮಾಡಿಸುವ ಪುರೋಹಿತ ವಸಿಷ್ಠರಿಗೂ ದೋಷ ಬರುತ್ತಿತ್ತು!

ಪರಿವಿತ್ತಿಃ ಪರಿವೇತ್ತಾ ಯಯಾ ಚ ಪರಿವಿದ್ಯತೇ ।
ಸರ್ವೇ ತೇ ನರಕಂ ಯಾಂತಿ ದಾತೃಯಾಜಕ ಪಂಚಮಾಃ ॥

ಅಣ್ಣ ಮದುವೆಯಾಗದಿದ್ದಾಗ ಮದುವೆಯಾಗುವ ತಮ್ಮ, ಅವನ ಅಣ್ಣ, ಮದುವೆಯಾಗುವ ಹೆಣ್ಣು, ಹೆಣ್ಣು ಕೊಡುವ ಮಾವ, ಮದುವೆ ಮಾಡಿಸುವ ಪುರೋಹಿತ ಈ ಐವರೂ ನರಕ ಭಾಗಿಗಳಾಗುತ್ತಾರೆ ಎಂದು ಮನುಸ್ಮೃತಿ (3.172) ವಚನವು ಹೇಳುತ್ತಿದೆ.

ಅಭಿಷಿಕ್ತೇ ತು ಕಾಕುತ್ಸ್ಥೇ ಪ್ರಹೃಷ್ಟಮುದಿತೇ ಜನೇ ।
ಪ್ರೀತಿರ್ಮಮ ಯಶಶ್ಚೈವ ಭವೇದ್ರಾಜ್ಯಾಚ್ಚತುರ್ಗುಣಮ್ ॥೨೧॥

ರಾಮನು ಅಭಿಷಿಕ್ತನಾದಾಗ ಪ್ರಜೆಗಳು ಸಂತೋಷದಿಂದ ಉಬ್ಬಿದರೆ ನನಗೆ ರಾಜ್ಯ ಸಿಕ್ಕಿದ್ದಕ್ಕಿಂತ ನಾಲ್ಕುಪಾಲು ಸಂತೋಷವಾದೀತು ಮತ್ತು ಕೀರ್ತಿಯೂ ಬಂದೀತು.

ಏವಂ ತು ವಿಲಪನ್ ದೀನೋ ಭರತಃ ಸ ಮಹಾಯಶಾಃ ।
ನಂದಿಗ್ರಾಮೇಽಕರೋದ್ರಾಜ್ಯಂ ದುಃಖಿತೋ ಮಂತ್ರಿಭಿಃ ಸಹ ॥೨೨॥

ಹೀಗೆ ವಿಲಾಪ ಮಾಡುತ್ತ, ಮಹಾಯಶಸ್ವಿಯಾದ ಭರತನು ದೀನನಾಗಿ ದುಃಖಿತನಾಗಿ ನಂದಿಗ್ರಾಮದಲ್ಲಿಯೇ ಮಂತ್ರಿಗಳೊಂದಿಗೆ ರಾಜ್ಯಭಾರ ಮಾಡಿದನು.

ಸ ವಲ್ಕಲಜಟಾಧಾರೀ ಮುನಿವೇಷಧರಃ ಪ್ರಭುಃ ।
ನಂದಿಗ್ರಾಮೇಽವಸದ್ವೀರಃ ಸಸೈನ್ಯೋ ಭರತಸ್ತದಾ ॥೨೩॥

ವೀರಪ್ರಭು ಭರತನು ನಾರುಡೆ ಜಟೆ ಧರಿಸಿ ಮುನಿವೇಷ ತೊಟ್ಟು ಸೈನ್ಯ-ದೊಂದಿಗೆ ನಂದಿಗ್ರಾಮದಲ್ಲಿಯೇ ವಾಸಮಾಡಿದನು.

ರಾಮಾಗಮನಮಾಕಾಂಕ್ಷನ್ ಭರತೋ ಭ್ರಾತೃವತ್ಸಲಃ ।
ಭ್ರಾತುರ್ವಚನಕಾರೀ ಚ ಪ್ರತಿಜ್ಞಾಪಾರಗಸ್ತಥಾ ॥೨೪॥

ಪಾದುಕೇ ತ್ವಭಿಷಿಚ್ಯಾಥ ನಂದಿಗ್ರಾಮೇऽವಸತ್ತದಾ ।
ಸ ವಾಲವ್ಯಜನಂ ಛತ್ರಂ ಧಾರಯಾಮಾಸ ಚ ಸ್ವಯಮ್ ॥೨೫॥

ಭ್ರಾತೃವತ್ಸಲನು ಭ್ರಾತೃವಚನಕಾರಿ ಪ್ರತಿಜ್ಞಾಪಾಲಕನು ಭರತ. ರಾಮ ಹಿಂತಿರುಗಿ ಬರುವುದನ್ನೇ ಇದಿರುನೋಡುತ್ತ ಪಾದುಕೆಗಳಿಗೆ ರಾಜ್ಯಾಭಿಷೇಕ ಮಾಡಿ ನಂದಿ-ಗ್ರಾಮದಲ್ಲಿ ವಾಸಮಾಡಿದನು. ಆ ಪಾದುಕೆಗಳಿಗೆ ಚಾಮರವ್ಯಜನ ಛತ್ರಗಳನ್ನು ತಾನೇ ಹಿಡಿದನು.

ಭರತಃ ಶಾಸನಂ ಸರ್ವಂ ಪಾದುಕಾಭ್ಯಾಂ ನ್ಯವೇದಯತ್ ।
ತತಸ್ತು ಭರತಃ ಶ್ರೀಮಾನಭಿಷಿಚ್ಯಾರ್ಯಪಾದುಕೇ ॥೨೬॥

ಶ್ರೀಮಾನ್ ಭರತನು ಅಣ್ಣನ ಪಾದುಕೆಗಳಿಗೆ ರಾಜ್ಯಾಭಿಷೇಕ ಮಾಡಿ ರಾಜ್ಯ-ಶಾಸನವೆಲ್ಲವನ್ನೂ ಪಾದುಕೆಗಳಿಗೆ ನಿವೇದಿಸಿದನು.

ತದಧೀನಸ್ತದಾ ರಾಜ್ಯಂ ಕಾರಯಾಮಾಸ ಸರ್ವದಾ ॥೨೭॥

ಪಾದುಕೆಗಳಿಗೆ ಅಧೀನವಾಗಿ ಅವುಗಳ ಪರವಾಗಿಯೇ ಸದಾ ಭರತನು ರಾಜ್ಯಭಾರವನ್ನು ನಡೆಸಿದನು.

ಯದಾ ಹಿ ಯತ್ಕಾರ್ಯಮುಪೈತಿ ಕಿಂಚಿ-
ದುಪಾಯನಂ ಚೋಪಹೃತಂ ಮಹಾರ್ಹಮ್ ।
ಸ ಪಾದುಕಾಭ್ಯಾಂ ಪ್ರಥಮಂ ನಿವೇದ್ಯ
ಚಕಾರ ಪಶ್ಚಾದ್ಭರತೋ ಯಥಾವತ್ ॥೨೮॥

ಯಾವುದಾದರೂ ವಿಶೇಷಕಾರ್ಯಮಾಡಬೇಕಾಗಿ ಬಂದಾಗ ಅದನ್ನೂ ಸಾಮಂತರು ಏನಾದರೂ ಬೆಲೆಬಾಳುವ ಕಾಣಿಕೆ ಕೊಟ್ಟಾಗ ಅದನ್ನೂ ಭರತನು ಮೊದಲಿಗೆ ಪಾದುಕೆ-ಗಳಿಗೆ ನಿವೇದಿಸಿಯೇ ಅನಂತರ ಯಥಾವತ್ತಾಗಿ ಕಾರ್ಯ ಮಾಡುತ್ತಿದ್ದನು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ನೂರಹದಿನೈದನೇ ಸರ್ಗ ಮುಗಿಯಿತು.

ಷೋಡಶಾಧಿಕ ಶತತಮಃ ಸರ್ಗಃ

ಸರ್ಗ – 116

ಕಾಕಾಸುರನ ಕಥೆ. ಮತ್ತು ಖರಾದಿ ರಾಕ್ಷಸರ ಬಾಧೆಯನ್ನು ಮುನಿಗಳು ಶ್ರೀರಾಮನಿಗೆ ಹೇಳುವುದು.

ರಾಮಸ್ತು ನಳಿನೀಂ ರಮ್ಯಾಂ ಚಿತ್ರಕೂಟಂ ಚ ಪರ್ವತಮ್ ।
ಉತ್ತರೇ ತು ಗಿರೇಃ ಪಾದೇ ಚಿತ್ರಕೂಟಸ್ಯ ರಾಘವಃ ॥೧॥

ದದರ್ಶ ಕನ್ದರಂ ರಮ್ಯಂ ಶಿಲಾಧಾತುಸಮನ್ವಿತಮ್ ।
ಸುಖಪ್ರಸೇಕೈಸ್ತರುಭಿಃ ಪುಷ್ಪಭಾರಾವಲಮ್ಬಿಭಿಃ ॥೨॥

ಸಂವೃತಂ ಚ ರಹಸ್ಯಂ ಚ ಮತ್ತದ್ವಿಜಗಣಾಯುತಮ್ ।
ತದ್ದೃಷ್ಟ್ವಾ ಸರ್ವಭೂತಾನಾಂ ಮನೋದೃಷ್ಟಿಹರಂ ವನಮ್ ।
ಉವಾಚ ಸೀತಾಂ ಕಾಕುತ್ಸ್ಥೋ ವನದರ್ಶನವಿಸ್ಮಿತಃ ॥೩॥

ಭರತನು ಹೊರಟು ಹೋದಮೇಲೆ ಒಂದುದಿನ ಶ್ರೀರಾಮನು ರಮ್ಯವಾದ ಮಂದಾಕಿನೀ ನದಿಯನ್ನೂ ಚಿತ್ರಕೂಟಪರ್ವತವನ್ನೂ ಪರ್ವತದ ಉತ್ತರ ಪಾರ್ಶ್ವದ ಕೆಳಭಾಗದಲ್ಲಿ ರಮ್ಯವಾದ ಮನಃಶಿಲಾ ಮತ್ತು ಗೈರಿಕಾದಿಧಾತುಗಳಿಂದ ಕೂಡಿದ ಕಣಿವೆಯನ್ನೂ ನೋಡುತ್ತಿದ್ದನು. ಅದು ಸುಖವಾಗಿ ನೀರುಂಡು ಪುಷ್ಪಭರಿತವಾಗಿರುವ ಮರಗಳಿಂದ ತುಂಬಿದ್ದು ನಿರ್ಜನವಾಗಿತ್ತು. ಮದಿಸಿದ ಹಕ್ಕಿಗಳ ಸಮೂಹಗಳಿಂದಲೂ ತುಂಬಿತ್ತು. ಎಲ್ಲ ಪ್ರಾಣಿಗಳಿಗೂ ಕಣ್ಮನಗಳಿಗೆ ಆಹ್ಲಾದಕರವಾದ ಆ ಅರಣ್ಯವನ್ನು ಕಂಡು ವಿಸ್ಮಿತನಾಗಿ ಸೀತೆಗೆ ಹೇಳಿದನು.

ವೈದೇಹಿ ರಮತೇ ಚಕ್ಷುಸ್ತವಾಸ್ಮಿನ್ಗಿರಿಕನ್ದರೇ ।
ಪಥಿ ಶ್ರಮವಿಘಾತಾರ್ಥಂ ಸಾಧು ತಾವದಿಹಾಸ್ಯತಾಮ್ ॥೪॥

ಸೀತೆ, ಈ ಪರ್ವತದ ಕಣಿವೆಯನ್ನು ಕಂಡರೆ ನಿನ್ನ ಕಣ್ಣುಗಳಿಗೆ ಆಹ್ಲಾದವಾಗುತ್ತದೆ. ದಾರಿ ನಡೆದ ಆಯಾಸ ಪರಿಹಾರಕ್ಕೆ ನೀನು ಇಲ್ಲಿ ಚೆನ್ನಾಗಿ ವಿಶ್ರಾಂತಿ ತೆಗೆದುಕೊಳ್ಳು.

ತ್ವದರ್ಥಮಿಹ ವಿನ್ಯಸ್ತಾ ತ್ವಿಯಂ ಶ್ಲಕ್ಷ್ಣಾ ಸಮಾ ಶಿಲಾ ।
ಯಸ್ಯಾಃ ಪಾರ್ಶ್ವೇ ತರುಃ ಪುಷ್ಪೈಃ ಪ್ರವಿಷ್ಟ ಇವ ಕೇಸರೈಃ ॥೫॥

ನಿನಗಾಗಿಯೇ ಇಟ್ಟಂತಿದೆ ಈ ಸುಂದರವಾದ ಸಮತಟ್ಟಾದ ಬಂಡೆಕಲ್ಲು. ಅದರ ಪಾರ್ಶ್ವದಲ್ಲಿರುವ ಮರವನ್ನು ಕುಂಕುಮ ಕೇಸರಿ ಪುಷ್ಪಗಳು ತಾವೇ ಪ್ರವೇಶಿಸಿದಂತಿವೆ.

ರಾಘವೇಣೈವಮುಕ್ತಾ ಸಾ ಸೀತಾ ಪ್ರಕೃತಿದಕ್ಷಿಣಾ ।
ಉವಾಚ ಪ್ರಣಯಸ್ನಿಗ್ಧಮಿದಂ ಶ್ಲಕ್ಷ್ಣತರಂ ವಚಃ ॥೬॥

ಶ್ರೀರಾಮ ಹೀಗೆ ಹೇಳಿದಾಗ ಸಂಕೋಚ ಪ್ರಕೃತಿಯವಳಾದ ಸೀತೆಯು ಪ್ರೀತಿ ತುಂಬಿದ ಅತಿ ಸುಂದರವಾದ ಮಾತನ್ನು ಹೇಳಿದಳು.

ಅವಶ್ಯಕಾರ್ಯಂ ವಚನಂ ತವ ಮೇ ರಘುನನ್ದನ ।
ಬಹುಶೋ ಭ್ರಮಿತಶ್ಚಾದ್ಯ ತವ ಚೈವಂ ಮನೋರಥಃ ॥೭॥

ನಿನ್ನ ಮಾತಿನಂತೆ ರಾಮ, ನಾನು ಅವಶ್ಯನಡೆಯಬೇಕು. ನೀನು ಇಂದು ಬಹಳ ಸಂಚರಿಸಿರುವೆ. ಅದರಿಂದ ನಿನಗೂ ಇಲ್ಲಿ ವಿಶ್ರಮಿಸುವ ಇಚ್ಛೆ ಇದೆ.

ಏವಮುಕ್ತಾ ವರಾರೋಹಾ ಶಿಲಾಂ ತಾಮುಪಸರ್ಪ ಹ ।
ಸಹ ಭರ್ತ್ರಾನವದ್ಯಾಂಗೀ ರನ್ತುಕಾಮಾ ಮನಸ್ವಿನೀ ॥೮॥

ಹೀಗೆ ಹೇಳಿ ಮನಸ್ವಿನಿಯಾದ ನಿರ್ದೋಷ ಶರೀರಿಯಾದ ವರಾರೋಹೆ ಸೀತೆ ಪತಿಯೊಂದಿಗೆ ರಮಿಸಲು ಬಯಸಿ ಆ ಶಿಲೆಯ ಬಳಿಗೆ ನಡೆದಳು.

ತಾಮೇವಂ ಬ್ರುವತೀಂ ಸೀತಾಂ ರಾಮೋ ವಚನಮಬ್ರವೀತ್ ।
ರಮ್ಯಂ ಪಶ್ಯಸಿ ಭೂತಾರ್ಥಂ ವನಂ ಪುಷ್ಪಿತಪಾದಪಮ್ ॥೯॥

ಸೀತೆ ಹೀಗೆ ಹೇಳಿದಾಗ ರಾಮನು ಹೇಳಿದನು. ಹೂಬಿಟ್ಟ ಮರಗಳ ಈ ಕಾಡು ನಿನಗೆ ನಿಜವಾಗಿಯೂ ರಮ್ಯವಾಗಿ ಕಾಣುತ್ತಿದೆ ತಾನೆ?

ಪಶ್ಯ ದೇವಿ ಗಿರೌ ರಮ್ಯೇ ರಮ್ಯಪುಷ್ಪಾಂಕಿತಾನಿಮಾನ್ ।
ಗಜದಂತಕ್ಷತಾನ್‌ವೃಕ್ಷಾನ್‌ಪಶ್ಯ ನಿರ್ಯಾಸವರ್ಷಿಣಃ ॥೧೦॥

ನೋಡು ದೇವಿ, ರಮ್ಯವಾದ ಈ ಬೆಟ್ಟದಲ್ಲಿ ರಮ್ಯಪುಷ್ಪಭರಿತ ವೃಕ್ಷಗಳನ್ನು ನೋಡು. ಅವು ಆನೆಗಳ ದಂತಕ್ಷತದಿಂದ ರಸವನ್ನು ಸುರಿಸುತ್ತಿವೆ.

ಝಿಲ್ಲಿಕಾವಿರುತೈರ್ದೀಪ್ತೈಃ ರುದನ್ತೀವ ಸಮಂತತಃ ।
ಪುತ್ರಪ್ರಿಯೋಽಸೌ ಶಕುನಿಃ ಪುತ್ರ ಪುತ್ರೇತಿ ಭಾಷತೇ ।

ಮಧುರಾಂ ಕರುಣಾಂ ವಾಚಂ ಪುರೇವ ಜನನೀ ಮಮ ॥೧೧॥

ಜೀರುಂಡೆ ಎಲ್ಲಕಡೆ ದೀರ್ಘವಾದ ಧ್ವನಿಮಾಡುತ್ತ ಅಳುತ್ತಿರುವಂತಿದೆ. ಮಗನನ್ನು ಪ್ರೀತಿಸುವ ಈ ಹದ್ದು 'ಪುತ್ರ ಪುತ್ರ' ಎಂದು ಕೂಗು ನುಡಿಯುತ್ತಿದೆ. ಮಧುರವಾದ ದಯೆದುಂಬಿದ ಮಾತನ್ನು ನನ್ನತಾಯಿ ನುಡಿಯುತ್ತಿದ್ದಂತೆ.

ವಿಹಗೋ ಭೃಂಗರಾಜೋಽಯಂ ಸಾಲಸ್ಕನ್ಧಂ ಸಮಾಸ್ಥಿತಃ ।
ಸಂಗೀತಮಿವ ಕುರ್ವಾಣಃ ಕೋಕಿಲೇನಾವಕೂಜತಿ ॥೧೨॥

ಸಾಲವೃಕ್ಷದ ಕೊಂಬೆಯಲ್ಲಿ ಕುಳಿತು ಈ ಭೃಂಗರಾಜಪಕ್ಷಿಯು ಸಂಗೀತ ಹಾಡುವಂತೆ ಕೋಗಿಲೆಯೊಂದಿಗೆ ಕೂಗುತ್ತಿದೆ.

ಅಯಂ ವಾ ಬಾಲಕಃ ಶಂಕೇ ಕೋಕಿಲಾನಾಂ ವಿಹಂಗಮಃ ।
ಸಸಮ್ಬಂಧಮಸಮ್ಬಂಧಂ ತಥಾ ಹ್ಯೇಷ ಪ್ರಭಾಷತೇ ॥೧೩॥

ಈ ಕೋಗಿಲೆ ಇನ್ನೂ ಮರಿಯಾಗಿರಬಹುದು. ಅಸಂಬದ್ಧವಾಗಿಯೂ ಸಂಬದ್ಧ-ವಾಗಿಯೂ ಕೂಗುತ್ತಿದೆ.

ಏಷಾ ಕುಸುಮಿತಾ ನೂನಂ ಪುಷ್ಪಭಾರಾನತಾ ಲತಾ ।
ದೃಶ್ಯತೇ ಮಾಮಿವಾತ್ಯರ್ಥಂ ಶ್ರಮಾದ್ದೇವಿ ತ್ವಮಾಶ್ರಿತಾ ॥೧೪॥

ಹೂಬಿಟ್ಟಿರುವ ಈ ಬಳ್ಳಿ ಹೂವಿನ ಭಾರದಿಂದ ಬಾಗಿರುವುದನ್ನು ಕಂಡರೆ ದೇವಿ, ನೀನು ಬಹಳ ಶ್ರಮದಿಂದ ನನ್ನ ಮೈಮೇಲೆ ಒರಗಿದಂತೆ ಕಾಣುತ್ತದೆ.

ಏವಮುಕ್ತಾ ಪ್ರಿಯಸ್ಯಾಂಗೇ ಮೈಥಿಲೀ ಪ್ರಿಯಭಾಷಿಣೀ ।
ಭೂಯಸ್ತರಾಂ ತ್ವನಿನ್ದ್ಯಾಂಗೀ ಸಮಾರೋಹತ ಭಾಮಿನೀ ॥೧೫॥

ರಾಮನು ಹೀಗೆ ಹೇಳಿದಾಗ ಬಹಳ ಪ್ರಿಯಭಾಷಿಣಿಯದ ಸರ್ವಾಂಗ ಸುಂದರಿಯಾದ ಸೀತೆ ಪ್ರಿಯಕರನ ತೊಡೆಯನ್ನೇರಿದಳು.

ಅಂಕೇ ತು ಪರಿವರ್ತನ್ತೀ ಸೀತಾ ಸುರಸುತೋಪಮಾ ।
ಹರ್ಷಯಾಮಾಸ ರಾಮಸ್ಯ ಮನೋ ಮನಸಿಜಾರ್ಪಿತಮ್ ॥೧೬॥

ತೊಡೆಯಮೇಲೆ ಕುಳಿತ ದೇವಕನ್ಯೆಯಂಥ ಸೀತೆ ಮನ್ಮಥನಿಗೆ ವಶವಾದ ರಾಮನ ಮನಸಿಗೆ ಉಲ್ಲಾಸ ಉಂಟುಮಾಡಿದಳು.

ಸ ನಿಷ್ಕೃಷ್ಯಾಂಗುಲಿಂ ರಾಮೋ ಧೌತೇ ಮನಃಶಿಲೋಚ್ಚಯೇ ।
ಚಕಾರ ತಿಲಕಂ ತಸ್ಯಾ ಲಲಾಟೇ ರುಚಿರಂ ತದಾ ॥೧೭॥

ರಾಮನು ನೀರಿಂದ ಒದ್ದೆಯಾದ ಮನಃಶಿಲೆಯನ್ನು ಬೆರಳಿಂದ ತಿಕ್ಕಿ ಸೀತೆಯ ಹಣೆಯಲ್ಲಿ ಸುಂದರವಾದ ತಿಲಕವನ್ನಿಟ್ಟನು.

ಬಾಲಾರ್ಕಸಮವರ್ಣೇನ ತೇಜಸಾ ಗಿರಿಧಾತುನಾ ।
ಚಕಾಸೇ ವಿನಿವಿಷ್ಟೇನ ಸಸನ್ಧ್ಯೇವ ನಿಶಾ ಸಿತಾ ॥೧೮॥

ಉದಿಸುವ ಸೂರ್ಯನಂತೆ ಹೊಳೆಯುವ ಗಿರಿಧಾತುವಿನ ತಿಲಕದಿಂದ ಸೀತೆ ಸಂಜೆಗೆಂಪಿನಿಂದ ಕೂಡಿದ ಬೆಳದಿಂಗಳ ರಾತ್ರಿಯಂತಾದಳು.

ಕೇಸರಸ್ಯ ಚ ಪುಷ್ಪಾಣಿ ಕರೇಣಾಮೃದ್ಯ ರಾಘವಃ ।
ಅಲಕಂ ಪೂರಯಾಮಾಸ ಮೈಥಿಲ್ಯಾಃ ಪ್ರೀತಮಾನಸಃ ॥೧೯॥

ಕುಂಕುಮಕೇಸರಿಪುಷ್ಪಗಳನ್ನು ಕೈಯಿಂದ ಬಿಡಿಸಿ ಮನೋಲ್ಲಾಸಗೊಂಡ ರಾಮನು ಸೀತೆಯ ಮುಡಿಯಲ್ಲಿ ತುಂಬಿಸಿದನು.

ಅಭಿರಮ್ಯ ತದಾ ತಸ್ಯಾಂ ಶಿಲಾಯಾಂ ರಘುನನ್ದನಃ ।
ಅನ್ವೀಯಮಾನೋ ವೈದೇಹ್ಯಾ ದೇಶಮನ್ಯಂ ಜಗಾಮ ಹ ॥೨೦॥

ರಾಮನು ಆ ಶಿಲೆಯ ಮೇಲೆ ರಮಿಸಿ ಬಳಿಕ ಇನ್ನೊಂದು ಕಡೆಗೆ ನಡೆದನು. ಸೀತೆ ಹಿಂಬಾಲಿಸಿದಳು.

ವಿಚರಂತೀ ತದಾ ಸೀತಾ ದದರ್ಶ ಹರಿಯೂಥಪಮ್ ।
ವನೇ ಬಹುಮೃಗಾಕೀರ್ಣೇ ವಿತ್ರಸ್ತಾ ರಾಮಮಾಶ್ಲಿಷತ್ ॥೨೧॥

ಬಹುಮೃಗಗಳಿಂದ ತುಂಬಿದ ಕಾಡಿನಲ್ಲಿ ಓಡಾಡುತ್ತ ಸೀತೆ. ದೊಡ್ಡ ಕೋತಿ-ಯನ್ನು ಕಂಡು ಹೆದರಿ ರಾಮನನ್ನು ತಬ್ಬಿಕೊಂಡಳು.

ರಾಮಸ್ತಾಂ ಪರಿರಬ್ಧಾಂಗೀಂ ಪರಿರಭ್ಯ ಮಹಾಭುಜಃ ।
ಸಾನ್ತ್ವಯಾಮಾಸ ವಾಮೋರೂಮವಧಾಸ್ಯೇಥ ವಾನರಮ್ ॥೨೨॥

ತನ್ನನ್ನು ತಬ್ಬಿಕೊಂಡ ಸೀತೆಯನ್ನು ಮಹಾಬಾಹುವಾದ ರಾಮನು ತಬ್ಬಿಕೊಂಡು, ಕೋತಿಯನ್ನು ಗದರಿಸಿ ಸೀತೆಯನ್ನು ಸಂತೈಸಿದನು.

ಮನಃಶಿಲಾಯಾಸ್ತಿಲಕಃ ಸೀತಾಯಾಃ ಸೋಽಥ ವಕ್ಷಸಿ ।
ಸಮದೃಶ್ಯತ ಸಂಕ್ರಾಂತೋ ರಾಮಸ್ಯ ವಿಪುಲೌಜಸಃ ॥೨೩॥

ಸೀತೆಯ ಹಣೆಯಲ್ಲಿಟ್ಟ ಮನಃಶಿಲಾಧಾತುವಿನ ತಿಲಕವು ಮಹಾಶಕ್ತಿಶಾಲಿಯಾದ ರಾಮನ ಎದೆಯಲ್ಲಿ ಅಂಟಿಕೊಂಡು ಕಾಣಿಸಿತು.

ಪ್ರಜಹಾಸ ತದಾ ಸೀತಾ ಗತೇ ವಾನರಪುಂಗವೇ ।
ದೃಷ್ಟ್ವಾ ಭರ್ತರಿ ಸಂಕ್ರಾನ್ತಮಪಾಂಗೈಃ ಸಮನಃಶಿಲಮ್ ॥೨೪॥

ದೊಡ್ಡ ಕೋತಿ ಹೊರಟುಹೋದಾಗ ಸೀತೆ ಪತಿಯ ಎದೆಯಲ್ಲಿ ಅಂಟಿಕೊಂಡಿದ್ದ ಮನಃಶಿಲೆಯ ತಿಲಕವನ್ನು ಕಂಡು ಜೋರಾಗಿ ನಕ್ಕಳು.

ನಾತಿದೂರೇ ತ್ವಶೋಕಾನಾಂ ಪ್ರದೀಪ್ತಮಿವ ಕಾನನಮ್ ।
ದದರ್ಶ ಪುಷ್ಪಸ್ತಬಕೈಸ್ತರ್ಜದ್ಭಿರಿವ ವಾನರೈಃ ॥೨೫॥

ಹೂಗೊಂಚಲುಗಳಿಂದ ಬೆದರಿಸುವಂತಿರುವ ಕೋತಿಗಳುಳ್ಳ, ಬೆಂಕಿಯಂತೆ ಕೆಂಪಾಗಿ ಹೊಳೆವ ಅಶೋಕವನವು ಸಮೀಪದಲ್ಲಿರುವುದನ್ನು ಸೀತೆ ಕಂಡಳು.

ವೈದೇಹೀ ತ್ವಬ್ರವೀದ್ರಾಮಮಶೋಕಕುಸುಮಾರ್ಥಿನೀ ।
ವಯಂ ತದಭಿಗಚ್ಛಾಮೋ ವನಮಿತ್ಯಾಹ್ವ ಕುನನ್ದನ ॥೨೬॥

ಸೀತೆ ಅಶೋಕದ ಹೂವನ್ನು ಬಯಸಿ ರಾಮನಿಗೆ ಹೇಳಿದರು, 'ರಾಮ, ನಾವು ಆ ಕಾಡಿಗೆ ಹೋಗೋಣ'.

ತಸ್ಯಾಃ ಪ್ರಿಯೇ ಸ್ಥಿತೋ ರಾಮೋ ದೇವ್ಯಾ ದಿವ್ಯಾರ್ಥರೂಪಯಾ ।
ಸಹಿತಸ್ತದಶೋಕಾನಾಂ ವಿಶೋಕಃ ಪ್ರಯಯೌ ವನಮ್ ॥೨೭॥

ಸೀತೆಯ ಮನಃಸಂತೋಷ ಉಂಟುಮಾಡುವಲ್ಲಿ ಆಸಕ್ತನಾಗಿರುವ, ಶೋಕ ರಹಿತನಾದ ರಾಮನು ದಿವ್ಯಸಂಪದ್ರೂಪಳಾದ ದೇವಿಯೊಂದಿಗೆ ಆ ಅಶೋಕವನಕ್ಕೆ ಹೋದನು.

ತದಶೋಕವನಂ ರಾಮಃ ಸಭಾರ್ಯೋ ವ್ಯಚರತ್ತದಾ ।
ಗಿರಿಪುತ್ರ್ಯಾ ಪಿನಾಕೀವ ಸಹ ಹೈಮವತಂ ವನಮ್ ॥೨೮॥

ಪಾರ್ವತಿಯೊಂದಿಗೆ ಶಿವನು ಹಿಮಾಲಯದ ಕಾಡಿನಲ್ಲಿ ವಿಹರಿಸಿದಂತೆ ರಾಮನು ಸೀತೆಯೊಂದಿಗೆ ಆ ಅಶೋಕವನದಲ್ಲಿ ವಿಹರಿಸಿದನು.

ತಾವನ್ಯೋನ್ಯಮಶೋಕಸ್ಯ ಪುಷ್ಪೈಃ ಪಲ್ಲವಧಾರಿಭಿಃ ।
ಸಮಲಂಚಕ್ರತುರುಭೌ ಕಾಮಿನೌ ನೀಲಲೋಹಿತೌ ॥೨೯॥

ಪ್ರಣಯಿಗಳಿಂದ ಸೀತಾರಾಮರು ಚಿಗುರೆಲೆಗಳಿಂದ ಯುಕ್ತವಾದ ಅಶೋಕ-ಪುಷ್ಪಗಳಿಂದ ಪರಸ್ಪರ ಅಲಂಕರಿಸಿಕೊಂಡರು. ಕಪ್ಪುಕೆಂಪುಬಣ್ಣಗಳಿಂದ ಎಸೆದರು.

ಆಬದ್ಧವನಮಾಲೌ ತೌ ಕೃತಾಪೀಡಾವತಂಸಕೌ ।
ಭಾರ್ಯಾಪತೀ ತಾವಚಲಂ ಶೋಭಯಾಂಚಕ್ರತುರ್ಭೃಶಮ್ ॥೩೦॥

ವನಮಾಲೆಗಳನ್ನು ಧರಿಸಿ ತಲೆಗೆ ಹೂವಿನ ಅಲಂಕಾರ ಮಾಡಿಕೊಂಡು ಸತಿಪತಿ-ಗಳಿಬ್ಬರೂ ಬೆಟ್ಟವನ್ನು ಬಹಳ ಶೋಭಾಯಮಾನವಾಗುವಂತೆ ಮಾಡಿದರು.

ಏವಂ ಸ ವಿವಿಧಾನ್ದೇಶಾನ್ದರ್ಶಯಿತ್ವಾ ಪ್ರಿಯಾಂ ಪ್ರಿಯಃ ।
ಆಜಗಾಮಾಶ್ರಮಪದಂ ಸುಸಂಶ್ಲಿಷ್ಟಮಲಂಕೃತಮ್ ॥೩೧॥

ಹೀಗೆ ನಾನಾ ವಿಧವಾದ ಪ್ರದೇಶಗಳನ್ನು ಪ್ರಿಯೆಗೆ ಪ್ರಿಯಕರ ರಾಮನು ತೋರಿಸಿ ಚೆನ್ನಾಗಿ ಸಂಯೋಜಿತವಾದ ಅಲಂಕೃತವಾದ ಆಶ್ರಮಪ್ರದೇಶಕ್ಕೆ ಬಂದನು.

ಪ್ರತ್ಯುಜ್ಜಗಾಮ ತಂ ಭ್ರಾತಾ ಲಕ್ಷ್ಮಣೋ ಗುರುವತ್ಸಲಃ ।
ದರ್ಶಯನ್ವಿವಿಧಂ ಧರ್ಮಂ ಸೌಮಿತ್ರಿಃ ಸುಕೃತಂ ತದಾ ॥೩೨॥

ಗುರುಹಿರಿಯರನ್ನು ಪ್ರೀತಿಸುವ ಸೋದರ ಲಕ್ಷ್ಮಣನು ರಾಮನನ್ನು ಇದಿರು-ಗೊಂಡನು. ತಾನು ಚೆನ್ನಾಗಿ ಸಿದ್ಧಪಡಿಸಿದ ನಾನಾ ವಿಧವಾದ ಧರ್ಮಸಂಮತ ಪದಾರ್ಥಗಳನ್ನು ತೋರಿಸಿದನು.

ಶುದ್ಧಬಾಣಹತಾಂಸ್ತತ್ರ ಮೇಧ್ಯಾನ್ಕೃಷ್ಣಮೃಗಾನ್ದಶ ।
ರಾಶೀಕೃತಾನ್ ಶುಷ್ಯಮಾಣಾನನ್ಯಾನ್ಕಾಂಶ್ಚನ ಕಾಂಶ್ಚನ ॥೩೩॥

ಶುದ್ಧ ಬಾಣಗಳಿಂದ ಹತವಾದ ಹತ್ತು ಶುದ್ಧವಾದ ಕೃಷ್ಣಮೃಗಗಳನ್ನು ರಾಶಿಯಾಗಿ ಸಂಗ್ರಹಿಸಿಟ್ಟ ಬೇರೆ ಹಣ್ಣುಗಡ್ಡೆಗಳನ್ನೂ ತೋರಿಸಿದನು.

ತದ್ದೃಷ್ಟ್ವಾ ಕರ್ಮ ಸೌಮಿತ್ರೇರ್ಭ್ರಾತಾ ಪ್ರೀತೋಽಭವತ್ತದಾ ।
ಕ್ರಿಯಂತಾಂ ಬಲಯಶ್ಚೇತಿ ರಾಮಃ ಸೀತಾಮಥಾನ್ವಶಾತ್ ॥೩೪॥

ಲಕ್ಷ್ಮಣನು ಮಾಡಿದ ಈ ಸೇವೆಯನ್ನು ನೋಡಿ ಶ್ರೀರಾಮನು ಸಂತುಷ್ಟನಾದನು. ಪ್ರಾಣಿಗಳಿಗೆ ಬಲಿಗಳನ್ನಿಡುವಂತೆ ಸೀತೆಗೆ ಆದೇಶ ನೀಡಿದನು.

ಅಗ್ರಂ ಪ್ರದಾಯ ಭೂತೇಭ್ಯಃ ಸೀತಾಥ ವರವರ್ಣಿನೀ ।
ತಯೋರುಪಾದದದ್ಭ್ರಾತ್ರೋರ್ಮಧು ಮಾಂಸಂ ಚ ತದ್ಬಹುಶಮ್ ॥

ಸೀತೆ ಮೊದಲಿಗೆ ಪ್ರಾಣಿಗಳಿಗೆ ಬಲಿ ಆಹಾರವನ್ನು ನೀಡಿ ಸೋದರರಿಗೆ ಮಧು ಮಾಂಸಗಳನ್ನು ಬಡಿಸಿದಳು.

ತಯೋಸ್ತುಷ್ಟಿಮಥೋತ್ಪಾದ್ಯ ವೀರಯೋಃ ಕೃತಶೌಚಯೋಃ ।
ವಿಧಿವಜ್ಜಾನಕೀ ಪಶ್ಚಾಚ್ಚಕ್ರೇ ಸಾ ಪ್ರಾಣಧಾರಣಮ್ ॥೩೬॥

ಶೌಚ ಮಾಡಿಕೊಂಡು ಕುಳಿತ ಇಬ್ಬರಿಗೂ ವಿಧ್ಯುಕ್ತವಾಗಿ ಭೋಜನದಿಂದ ತೃಪ್ತಿಯನ್ನುಂಟು ಮಾಡಿ ಸೀತೆ ಬಳಿಕ ತಾನು ಭೋಜನ ಮಾಡಿದಳು.

ಶಿಷ್ಟಂ ಮಾಂಸಂ ನಿಕೃಷ್ಟಂ ಯಚ್ಚೋಷಣಾಯಾವಕಲ್ಪಿತಮ್ ।
ತದ್ರಾಮವಚನಾತ್ಸೀತಾ ಕಾಕೇಭ್ಯಃ ಪರ್ಯರಕ್ಷತ ॥೩೭॥

ಉಳಿದಿದ್ದ ಮಾಂಸವನ್ನು ನಿಕೃಷ್ಟವಾದ ಇತರ ಪದಾರ್ಥಗಳನ್ನೂ ರಾಮನ ಆದೇಶದಂತೆ ಕಾಗೆಗಳಿಗೆ ಹಾಕಿದಳು.

ಶ್ರಮಾತ್ತತೋ ನಿದದ್ರೌ ಸಾ ಪ್ರಿಯಾಂಕಾಹಿತಮಸ್ತಕಾ ।
ಪ್ರಬುದ್ಧಾಯಾಂ ತತಸ್ತಸ್ಯಾಂ ಸೋಽಪಿ ಶಿಷ್ಯೇ ರಘೂತ್ತಮಃ ॥೩೮॥

ಉಪಧಾಯ ತು ವೈದೇಹ್ಯಾಸ್ತಥಾಂಕಮರಿಸೂದನಃ ।
ತತ್ರಾಜಗ್ಮುಸ್ತದಾ ಕಾಕಾ ಮೃಗಮಾಂಸಬುಭುಕ್ಷಯಾ ॥೩೯॥

ಬಳಿಕ ಆಯಾಸಗೊಂಡಿದ್ದ ಸೀತೆ ರಾಮನ ತೊಡೆಯಲ್ಲಿ ತಲೆಇಟ್ಟು ಸ್ವಲ್ಪ ನಿದ್ದೆ ಮಾಡಿದಳು. ಅವಳು ಎಚ್ಚರಗೊಂಡಾಗ ರಾಮನೂ ಕೂಡ ಸೀತೆಯ ತೊಡೆಯನ್ನು ದಿಂಬನ್ನಾಗಿ ಮಾಡಿಕೊಂಡು ಮಲಗಿದನು. ಆಗ ಬಲಿಯಾಗಿ ಹಾಕಿದ್ದ ಮೃಗ ಮಾಂಸಗಳ ಭಕ್ಷಣದಾಸೆಯಿಂದ ಕಾಗೆಗಳು ಬಂದುವು.

ತೇಷ್ವೇಕೋಽಪೀಡಯತ್ಸೀತಾಂ ತತ್ಸ್ತನಾಮಿಷಲೋಲುಪಃ ।
ನಿವಾರ್ಯಮಾಣೋಽಪಿ ಮುಹುರ್ನ ವ್ಯಾವರ್ತತ ಸೋಽಧಮಃ ॥

ಆ ಕಾಗೆಗಳಲ್ಲಿ ಒಂದು ಸೀತೆಯನ್ನು ಪರಸ್ತ್ರೀ ಕಾಮನೆಯಿಂದ ಅವಳ ಸ್ತನದ ಮಾಂಸವನ್ನು ಉಣ್ಣುವ ಬಯಕೆಯಿಂದಲೋ ಎಂಬಂತೆ ಅವಳನ್ನು ಪೀಡಿಸಿತು. ಪುನಃ ಪುನಃ ಎಷ್ಟು ಓಡಿಸಿದರೂ ಆ ಕೆಟ್ಟ ಕಾಗೆ ಮಾತ್ರ ಹೊರಟು ಹೋಗಲಿಲ್ಲ.

ನಾಬೋಧಯತ್ಪ್ರಿಯಂ ಸೀತಾ ಸುಖಸುಪ್ತಂ ತಥಾಪಿ ಸಾ ।
ಖಂಡಿತಾತ್ತತ್‌ಸ್ತನಭರಾತ್‌ಸ್ರವದ್ಭೀ ರುಧಿರೈಸ್ತತಃ ॥೪೧॥

ಪ್ರತಿಬುದ್ಧಃ ಸ್ವಯಂ ರಾಮಃ ಕಿಮೇತದಿತಿ ದೃಷ್ಟವಾನ್ ।
ಉಪಾಂತೇ ಕಾಕಮಾಸೀನಮಾಪತದ್ರುಧಿರಂ ಚ ತತ್ ॥೪೨॥

ಸುಖವಾಗಿ ನಿದ್ರಿಸುತ್ತಿದ್ದ ಪ್ರಿಯನಾದ ರಾಮನನ್ನು ಸೀತೆ ಎಬ್ಬಿಸಲಿಲ್ಲ. ಆದರೂ ಗಾಯಗೊಂಡ ಅವಳ ಸ್ತನಭಾರದಿಂದ ಸುರಿವ ನೆತ್ತರಿನಿಂದ ರಾಮನು ಸ್ವತಃ ಎಚ್ಚರಗೊಂಡು ಇದೇನು ಎಂದು ನೋಡಿದನು. ಸಮೀಪದಲ್ಲಿ ಕುಳಿತ ಕಾಗೆಯನ್ನೂ ಸೀತೆಯ ಸ್ತನದಿಂದ ಸುರಿವ ರಕ್ತವನ್ನೂ ಕಂಡನು.

ತಾಂ ದದರ್ಶ ತದಾ ಭರ್ತಾ ಕಾಕೇನಾಯಾಸಿತಾಂ ದೃಢಮ್ ।
ಯಸ್ಯಾಸ್ಯದ್ಧರಾಂತಚರಃ ಕಾಮಚಾರೀ ವಿಹಂಗಮಃ ॥೪೩॥

'ಧರಾಂತರಚರ' ಭೂಮಿಯಲ್ಲಿ ಎಲ್ಲೆಡೆ ಸಂಚರಿಸುತ್ತ ಬೇಕಾದ ಕಡೆ ಹೋಗ ಬಲ್ಲ ಪಕ್ಷಿಯಾದ ಕಾಕಾಸುರನಿಂದ ದೇವಿ ಬಹಳ ಆಯಾಸಪಟ್ಟಿದ್ದನ್ನು ಪತಿಯಾದ ರಾಮನು ಕಂಡನು.

ಕಾಕೇನಾರೋಪ್ಯಮಾಣಾಂ ತಾಂ ಸಾ ಮುಮೋಹ ತದಾತುರಮ್ ।
ಸಾ ಚುಕೋಪಾನವದ್ಯಾಂಗೀ ಭರ್ತೃಪ್ರಣಯದರ್ಪಿತಾ ॥೪೪॥

ಆ ಕಾಗೆ ಕಾಮಾತುರತೆಯಿಂದ ದೇವಿಯ ಮೈಮೇಲೆ ಹತ್ತಿ ಕುಳಿತುದನ್ನೂ ಕಂಡನು. ದೇವಿ ದಿಕ್ಕು ತೋಚದಾದಳು. ಸರ್ವಾಂಗಸುಂದರಿ, ಪತಿಯ ಪ್ರಣಯ ತನಗೇ ಮೀಸಲೆಂದು ದರ್ಪಿತಳಾದವಳು ದೇವಿ ಕಾಗೆಯ ಮೇಲೆ ಕುಪಿತಳಾದಳು.

ಇತಶ್ಚೇತಶ್ಚ ತಾಂ ಕಾಕೋ ವಾರಯನ್ತೀಂ ಪುನಃ ಪುನಃ ।
ಪಕ್ಷತುಂಡನಖಾಗ್ರೈಶ್ಚ ಕೋಪಯಾಮಾಸ ಕೋಪನಾಮ್ ॥೪೫॥

ದೇವಿ ಇಲ್ಲಿಂದಲ್ಲಿ ಅಲ್ಲಿಂದಿಲ್ಲ ಎಂದು ಮತ್ತೆ ಮತ್ತೆ ಹೊಡೆದು ಓಡಿಸಿದರೂ, ಕಾಗೆ ಬಿಡದೆ ರೆಕ್ಕೆ ಕೊಕ್ಕು ಉಗುರುಗಳಿಂದ ಕೋಪನೆಯಾದ ದೇವಿಯನ್ನು ಅಲ್ಲಲ್ಲಿ ಪೀಡಿಸಿ ಬಹಳ ಕೋಪ ಬರಿಸಿತು.

ತಸ್ಯಾಃ ಪ್ರಸ್ಫುರಮಾಣೌಷ್ಠಂ ಭ್ರುಕುಟೀಪುಟಸೂಚಿತಮ್ ।
ಮುಖಮಾಲೋಕ್ಯ ಕಾಕುತ್ಸ್ಥಸ್ತಂ ಕಾಕಂ ಪ್ರತ್ಯಷೇಧಯತ್ ॥೪೬॥

ದೇವಿಯ ಮುಖದಲ್ಲಿ ತುಟಿಗಳು ಅದುರುತ್ತಿರುವುದನ್ನೂ ಗಂಟಿಕ್ಕಿದ ಹುಬ್ಬು-ಗಳಿಂದ ಕೋಪ ಸೂಚಿತವಾಗುವುದನ್ನೂ ಕಂಡು ರಾಮನು ಕಾಗೆಯನ್ನು ಗದರಿಸಿ ಎಚ್ಚರಿಸಿದನು.

ಸ ಧೃಷ್ಟಮಾನೋ ವಿಹಗೋ ರಾಮವಾಕ್ಯಮಚಿನ್ತಯನ್ ।
ಸೀತಾಮಭಿಪಪಾತೈವ ತತಶ್ಚಕ್ರೋಧ ರಾಘವಃ ॥೪೭॥

ಉದ್ಧಟ ಅಹಂಕಾರದಿಂದ ಕಾಗೆ ರಾಮನು ನೀಡಿದ ಎಚ್ಚರಿಕೆಯನ್ನು ನಿರ್ಲಕ್ಷಿಸಿ ಸೀತೆಯ ಮೇಲೇ ಎರಗಿತು. ರಾಮನು ಕುಪಿತನಾದನು.

ಸೋಽಭಿಮನ್ತ್ರ್ಯ ಶರೈಷೀಕಮೈಷೀಕಾಸ್ತ್ರೇಣ ವೀರ್ಯವಾನ್ ।
ಕಾಕಂ ತಮಭಿಸಂಧಾಯ ಸಸರ್ಜ ಪುರುಷರ್ಷಭಃ ॥೪೮॥

ಒಂದು ಮೌಂಜಿಹುಲ್ಲಿನ ಕಡ್ಡಿಯನ್ನು ಐಷೀಕಾಸ್ತಮಂತ್ರದಿಂದ ಅಭಿಮಂತ್ರಿಸಿ ವೀರ್ಯಶಾಲಿ ಪುರುಷೋತ್ತಮ ರಾಮನು ಕಾಗೆಯ ಮೇಲೆ ಎಸೆದನು.

ಸ ತೇನಾಭಿದ್ರುತಃ ಕಾಕಸ್ತ್ರೀಂಲ್ಲೋಕಾನ್‌ಪರ್ಯಗಾತ್ತತಃ ।
ದೇವೈರ್ದತ್ತವರಃ ಪಕ್ಷೀ ಧರಾನ್ತರಚರೋ ಲಘುಃ ॥೪೯॥

ಅಸ್ತ್ರ ಬೆನ್ನಟ್ಟಿ ಬರುವಾಗ ಕಾಗೆ ಮೂರುಲೋಕವನ್ನು ಸುತ್ತಿತು. ಅದು ರುದ್ರಾದಿ ದೇವತೆಗಳ ವರಬಲದಿಂದ ಭೂಮಿಯಲ್ಲಿ ಎಲ್ಲೆಡೆ ವಾಯುವೇಗದಿಂದ ಹಾರುತ್ತಿತ್ತು.

ಯತ್ರ ಯತ್ರಾಗಮತ್‌ಕಾಕಸ್ತತ್ರ ತತ್ರ ದದರ್ಶ ಹ ।
ಇಷೀಕಾಂ ಭೂತಸಂಕಾಶಾಂ ಸ ರಾಮಂ ಪುನರಾಗಮತ್ ॥೫೦॥

ಕಾಗೆ ಎಲ್ಲಿಗೆ ಹಾರಿದರೂ ಅಲ್ಲಿ ಇಷೀಕಾಸ್ತ್ರ ಭೂತಾಕಾರವಾಗಿ ಹಿಂಬಾಲಿಸಿದ್ದನ್ನು ಕಂಡು ಅದು ರಾಮನ ಬಳಿಗೇ ಪುನಃ ಬಂದಿತು.

ಸ ಮೂರ್ಧ್ನಾ ನ್ಯಪತತ್‌ಕಾಕೋ ರಾಘವಸ್ಯ ಮಹಾತ್ಮನಃ ।
ಸೀತಾಯಾಸ್ತತ್ರ ಪಶ್ಯನ್ತ್ಯಾ ಮಾನುಷೀಮ್ಯೈರಯದ್ಗಿರಮ್ ॥೫೧॥

ಮಹಾತ್ಮನಾದ ರಾಮನ ಕಾಲುಗಳಿಗೆ ತಲೆಬಾಗಿ ಬಿದ್ದಿತು. ಸೀತೆ ನೋಡುತ್ತಿರು-ವಂತೆ ಮನುಷ್ಯರಂತೆ ಮಾತನಾಡಿತು.

ಪ್ರಸಾದಂ ಕುರು ಮೇ ರಾಮ ಪ್ರಾಣೈಃ ಸಾಮಗ್ರ್ಯಮಸ್ತು ಮೇ ।
ಅಸ್ತ್ರಸ್ಯಾಸ್ಯ ಪ್ರಭಾವೇಣ ಶರಣಂ ನ ಲಭೇ ಕ್ವಚಿತ್ ॥೫೨॥

'ರಾಮ! ಪ್ರಸನ್ನನಾಗು. ಅಸ್ತ್ರಪ್ರಭಾವದಿಂದ ನನಗೆ ಮೂಲೋಕಗಳಲ್ಲಿ ಎಲ್ಲಿಯೂ ಆಶ್ರಯ ಸಿಗುತ್ತಿಲ್ಲ. ನನಗೆ ಪ್ರಾಣಗಳು ಇಂದ್ರಿಯಗಳೆಲ್ಲವೂ ಸಮಗ್ರವಾಗಿ ಇರುವಂತೆ ಅನುಗ್ರಹಿಸು' ಎಂದಿತು.

ತಂ ಕಾಕಮಬ್ರವೀದ್ರಾಮಃ ಪಾದಯೋಃ ಶಿರಸಾ ಗತಮ್ ।
ಸಾನುಕ್ರೋಶತಯಾ ಧೀಮಾನಿದಂ ವಚನಮರ್ಥವತ್ ॥೫೩॥

ಕಾಲುಗಳಮೇಲೆ ತಲೆಯನ್ನಿಟ್ಟಿರುವ ಆ ಕಾಗೆಗೆ ಧೀಮಂತನಾದ ರಾಮನು ದಯೆಯಿಂದ ಅರ್ಥಗರ್ಭಿತವಾದ ಮಾತನ್ನಾಡಿದನು.

ಮಯಾ ರೋಷಪರೀತೇನ ಸೀತಾಪ್ರಿಯಹಿತಾರ್ಥಿನಾ ।
ಅಸ್ತ್ರಮೇತತ್ಸಮಾಧಾಯ ತ್ವದ್ವಧಾಯಾಭಿಮನ್ತ್ರಿತಮ್ ॥೫೪॥

ಸೀತೆಯ ಪ್ರಿಯವನ್ನೂ ಹಿತವನ್ನೂ ಬಯಸುವ ನಾನು ಕೋಪಾವಿಷ್ಟನಾಗಿ ನಿನ್ನ ವಧೆಗಾಗಿ ಈ ಐಷೀಕಾಸ್ತ್ರವನ್ನು ಬ್ರಹ್ಮಾಸ್ತ್ರ ಮಂತ್ರದಿಂದ ಅಭಿಮಂತ್ರಿಸಿದೆನು.

ಯತ್ತು ಮೇ ಚರಣೌ ಮೂರ್ಧ್ನಾ ಗತಸ್ತ್ವಂ ಜೀವಿತೇಪ್ಸಯಾ ।
ಅತ್ರಾಸ್ಯವೇಕ್ಷಾ ತ್ವಯಿ ಮೇ ರಕ್ಷ್ಯೋ ಹಿ ಶರಣಾಗತಃ ॥೫೫॥

ನೀನು ಪ್ರಾಣರಕ್ಷಣೆಯ ಬಯಕೆಯಿಂದ ನನ್ನ ಕಾಲುಗಳಲ್ಲಿ ತಲೆಇಟ್ಟು ಶರಣಾಗತನಾದ್ದರಿಂದ ನಿನ್ನ ಪ್ರಾಣರಕ್ಷಣೆಯನ್ನು ನಾನು ಬಯಸುತ್ತೇನೆ. ಶರಣಾಗತನನ್ನು ರಕ್ಷಿಸಬೇಕು ತಾನೆ?

ಅಮೋಘಂ ಕ್ರಿಯತಾಮಸ್ತ್ರಮೇಕಮಂಗಂ ಪರಿತ್ಯಜ ।
ಕಿಮಂಗಂ ಶಾತಯತು ತೇ ಶರೈಷೀಕಾ ಬ್ರವೀಹಿ ಮೇ ॥೫೬॥

ಆದರೆ ಈ ನನ್ನ ಅಸ್ತ್ರ ಅಮೋಘ. ಅದು ಅಮೋಘವಾಗುವಂತೆ ಒಂದು ಇಂದ್ರಿಯವನ್ನು ತ್ಯಾಗಮಾಡು. ಯಾವ ಇಂದ್ರಿಯವನ್ನು ನನ್ನ ಅಸ್ತ್ರ ನಾಶ ಮಾಡಲಿ, ಹೇಳು.

ಏತಾವದ್ಧಿ ಮಯಾ ಶಕ್ಯಂ ತವ ಕರ್ತುಂ ಪ್ರಿಯಂ ಖಗ ।
ಏಕಾಂಗಹೀನಂ ಹ್ಯಸ್ತ್ರೇಣ ಜೀವಿತಂ ಮರಣಾದ್ವರಮ್ ॥೫೭॥

ಇಷ್ಟು ಮಾತ್ರ ನಿನಗೆ ಇಷ್ಟವಾದುದನ್ನು ನಾನು ಮಾಡಬಲ್ಲೆ, ಕಾಗೆಯೆ, ಅಸ್ತ್ರದಿಂದ ಒಂದು ಇಂದ್ರಿಯವಿಲ್ಲದಂತಾದರೂ ಬದುಕಿರಬಹುದು. ಮರಣಕ್ಕಿಂತ ಅದು ಮೇಲು.

ಏವಮುಕ್ತಸ್ತು ರಾಮೇಣ ಸಂಪ್ರಧಾರ್ಯ ಸ ವಾಯಸಃ ।
ಅಭ್ಯಗಚ್ಛದ್ದ್ವಯೋರಕ್ಷ್ಣಸ್ತ್ಯಾಗಮೇಕಸ್ಯ ಪಂಡಿತಃ ॥೫೮॥

ರಾಮನು ಹೀಗೆ ಹೇಳಿದಾಗ ಬುದ್ಧಿಶಾಲಿಯಾದ ಕಾಗೆ ಆಲೋಚನೆ ಮಾಡಿ ಎರಡು ಕಣ್ಣುಗಳಲ್ಲಿ ಒಂದನ್ನು ತ್ಯಾಗಮಾಡುವುದೇ ಸರಿ ಎಂದು ನಿರ್ಧರಿಸಿತು.

ಸೋಽಬ್ರವೀದ್ರಾಘವಂ ಕಾಕೋ ನೇತ್ರಮೇಕಂ ತ್ಯಜಾಮ್ಯಹಮ್ ।
ಏಕನೇತ್ರೋಽಪಿ ಜೀವೇಯಂ ತ್ವತ್ಪ್ರಸಾದಾನ್ನರಾಧಿಪ ॥೫೯॥

ಕಾಗೆ 'ಒಂದು ಕಣ್ಣನ್ನು ತ್ಯಜಿಸುತ್ತೇನೆ' ಎಂದು ರಾಮನಲ್ಲಿ ಹೇಳಿಕೊಂಡಿತು. 'ಒಂದು ಕಣ್ಣಿನವನಾಗಿಯಾದರೂ ನಿನ್ನ ಅನುಗ್ರಹದಿಂದ ಬದುಕಿರುತ್ತೇನೆ' ಎಂದಿತು.

ರಾಮಾನುಜ್ಞಾತಮಸ್ತ್ರಂ ತತ್ಕಾಕಸ್ಯ ನಯನೇಽಪತತ್ ।
ವೈದೇಹೀ ವಿಸ್ಮಿತಾ ತತ್ರ ಕಾಕಸ್ಯ ನಯನೇ ಹತೇ ॥೬೦॥

ರಾಮನ ಅನುಜ್ಞೆಯಿಂದ ಅಸ್ತ್ರವು ಕಾಗೆಯ ಒಂದು ಕಣ್ಣಮೇಲೆ ಎರಗಿತು. ಕಾಗೆಯ ಆ ಕಣ್ಣು ನಾಶವಾದಾಗ ಸೀತೆ ವಿಸ್ಮಿತಳಾದಳು.

ನಿಪತ್ಯ ಶಿರಸಾ ಕಾಕೋ ಜಗಾಮಾಶು ಯಥೇಪ್ಸಿತಮ್ ।
ಲಕ್ಷ್ಮಣಾನುಚರೋ ರಾಮಶ್ಚಕಾರಾನನ್ತರಕ್ರಿಯಾಃ ॥೬೧॥

ಕಾಗೆ ಪುನಃ ತಲೆಯಿಂದ ರಾಮನಿಗೆ ನಮಿಸಿ ತನ್ನಿಷ್ಟ ಬಂದೆಡೆಗೆ ಹಾರಿಹೋಯಿತು. ಶ್ರೀರಾಮನು ಲಕ್ಷ್ಮಣನೊಂದಿಗೆ ಮುಂದಿನ ಕಾರ್ಯಗಳಲ್ಲಿ ನಿರತನಾದನು.

ಈ ಕಾಕಾಸುರನು ಯಾರು?

ಇಂದ್ರನ ಪುತ್ರನು ಜಯಂತ ಪಾದೇಂದ್ರಿಯಾಭಿಮಾನಿಯಾದ ಒಬ್ಬ ತತ್ವಾಭಿಮಾನಿ ದೇವತೆ. ಕಾರಣಾಂತರದಿಂದ ಅವನು ಭೂಲೋಕದಲ್ಲಿ ಹುಟ್ಟಬೇಕಾಯಿತು. ಆಗ ಅವನಲ್ಲಿ ಒಬ್ಬ ಅಸುರನ ಆವೇಶ ಉಂಟಾಗಿತ್ತು. ಕಷ್ಟಪಡದೆ ಕಾಕಬಲಿ ಅನ್ನವನ್ನು ಉಣ್ಣುತ್ತ ಚಿರಕಾಲ ಬದುಕಬಹುದೆಂದು ಅಭಿಪ್ರಾಯದಿಂದ ಅವನು ಕಾಗೆಯಾಗಿ ಜನಿಸಿದ. ಅವನಿಗೆ ದೇವತೆಗಳ ವರ ಬಲದಿಂದ ಎಲ್ಲ ಲೋಕಗಳಲ್ಲಿ ಸಂಚರಿಸುವ ಶಕ್ತಿ ಬಂದಿತು. ಭೂಲೋಕದಲ್ಲಿ ಎಲ್ಲೆಡೆ ಸಂಚರಿಸಿ ಸಜ್ಜನರಿಗೆ ಪೀಡೆ ಕೊಡುವುದರಿಂದ 'ಧರಾಂತರ ಚರ'ನೆನಿಸಿದ.

ಕುರಂಗಾಸುರನು ಅದೇ ಸಮಯದಲ್ಲಿ ತಾನು, ಈಗ ಇರುವ ಮುಂದೆಯೂ ಹುಟ್ಟಲಿರುವ ಎಲ್ಲ ಕಾಗೆಗಳ ಕಣ್ಣುಗಳಲ್ಲಿಯೂ ಒಂದೊಂದು ಅಂಶದಿಂದಿರಬೇಕು.

ಕಾಗೆಗಳಿಗೆ ಎರಡು ಕಣ್ಣುಗಳಿರುವವರೆಗೂ ತನಗೆ ಸಾವು ಬರಕೂಡದೆ'ಂದು ಶಿವನಿಂದ ವರ ಪಡೆದಿದ್ದ. ಅದರಿಂದ ಅವನು ಈ ಧರಾಂತರಚರ ಕಾಕನ ಕಣ್ಣುಗಳಲ್ಲಿಯೂ ಸುರಕ್ಷಿತವಾಗಿದ್ದ.

ಹೀಗೆ ಜಯಂತನು ತನ್ನೊಳಗೆ ಆವಿಷ್ಟನಾದ ಅಸುರ ಮತ್ತು ಕಣ್ಣುಗಳಲ್ಲಿ ಕುಳಿತ ಇನ್ನೊಬ್ಬ ಅಸುರರ ಪ್ರೇರಣೆಯಿಂದ ಕಾಕಾಸುರನಾದ. ಚಿತ್ರಕೂಟದಲ್ಲಿ ಸೀತಾ-ರಾಮರು ಮಾತ್ರವಿದ್ದಾಗ ಅವರ ಬಳಿಗೆ ಅವನು ಬಂದನು. ಅವನನ್ನು ಉದ್ಧರಿಸುವ ಸಂಕಲ್ಪದಿಂದ ಶ್ರೀರಾಮನೂ ಸೀತೆಯ ತೊಡೆಯ ಮೇಲೆ ಮಲಗಿ ನಿದ್ರಿಸುವಂತೆ ತೋರಿಕೊಂಡನು. ಅಸುರಾವೇಶದಿಂದ ಇದನ್ನು ನಿದ್ದೆ ಎಂದೇ ಬಗೆದು ಕಾಮ-ಭಾವನೆಯಿಂದ ಜಯಂತನು ಸೀತಾಮಾತೆಯ ಸ್ತನಗಳನ್ನು ಕೊಕ್ಕಿನಿಂದ ಕುಕ್ಕಿದ. ರಕ್ತ ಸುರಿಯಿತು.

ದೇವಿಯ ಶುದ್ಧ ಚಿನ್ಮಯ ಶರೀರದಲ್ಲಿ ಗಾಯವಾಗುವುದು ರಕ್ತ ಸುರಿಯುವುದು ಕಣ್ಣನಲ್ಲಿ ನೀರು ಬರುವುದು ಎಲ್ಲವೂ ತತ್ಕಾಲದಲ್ಲಿ ಮಾಡಿದ ಪ್ರಾಕೃತಸೃಷ್ಟಿ.

ರಾಮನೆದ್ದು ಗದರಿದರೂ ಕಾಗೆ ಮತ್ತೂ ಮತ್ತೂ ಅಪರಾಧ ಗೈದಾಗ ರಾಮ ಬ್ರಹ್ಮಾಸ್ತ್ರಪ್ರಯೋಗ ಮಾಡಿದ. ಕಾಗೆ ಮೂಲೋಕವನ್ನು ಸುತ್ತಿತು. ದೇವತೆಗಳು ಯಾರೂ ಅವನಿಗೆ ರಕ್ಷಣೆ ಕೊಡದಿದ್ದಾಗ ಕೊನೆಗೆ ರಾಮನಿಗೇ ಶರಣಾಗಿ ಜೀವದಾನವನ್ನು ಬೇಡಿತು.

ಅಷ್ಟರಲ್ಲಿಯೇ ಕಾಗೆಯನ್ನು ರಾಮನು ಕೊಲ್ಲಬಹುದಿತ್ತು. ಪ್ರೀತಿಯ ಒಬ್ಬ ದೇವತೆ ಎಂದು ಕೊಲ್ಲಲಿಲ್ಲ.

ಜಯಂತನೀಗ ಪಶ್ಚಾತ್ತಾಪದಿಂದ ಶರಣಾಗಿದ್ದಾನೆ. ಆದರೂ ಪಶ್ಚಾತ್ತಾಪ ತಾತ್ಕಾಲಿಕವಾಗಿರಬಾರದೆಂದು ಶಿಕ್ಷಾರೂಪದಿಂದ ಒಂದು ಕಣ್ಣನ್ನು ಕಿತ್ತು ಕ್ಷಮಿಸಿದ.

ಆಗ ಜಯಂತಕಾಗೆಯ ಒಂದು ಕಣ್ಣನ್ನು ಮಾತ್ರವಲ್ಲದೆ ಲೋಕದಲ್ಲಿರುವ ಎಲ್ಲ ಕಾಗೆಗಳ ಒಂದು ಕಣ್ಣನ್ನೂ ಕಿತ್ತುಹಾಕಿದ. ಎಲ್ಲಾ ಕಾಗೆಗಳ ಕಣ್ಣಿನಲ್ಲಿರುವ ಕುರಂಗಾ-ಸುರನ ಎಲ್ಲ ಅಂಶಗಳೂ ನಾಶವಾದುವು.

ಮುಂದೆ ಕಾಗೆಗಳು ಹುಟ್ಟುವಾಗಲೂ ಅವುಗಳಿಗೆ ಒಂದೇ ಕಣ್ಣಿರುವಂತೆ ನಿಯಮವನ್ನೂ ಮಾಡಿದ. ಇಲ್ಲದಿದ್ದರೆ ಕಾಗೆಗಳಿಗೆ ಎರಡೂ ಕಣ್ಣುಗಳಿದ್ದಷ್ಟು ಕಾಲ ತಾನಿರಬೇಕೆಂದು ಕುರಂಗಾಸುರನು ವರ ಪಡೆದಿದ್ದರಿಂದ ಅವನು ಪುನಃ ಹುಟ್ಟಿ ಬರುವ ಪ್ರಸಂಗವಿತ್ತು.

ಎರಡೂ ಕಣ್ಣುಗಳನ್ನು ಕಿತ್ತುಹಾಕಬಹುದಿತ್ತು. ಆದರೂ ಒಂದು ಕಣ್ಣು ಕಳೆದರೂ ಅಸುರನಿರುವುದಿಲ್ಲ ಎಂದು ಕಾಗೆಗಳ ಮೇಲಿನ ಕರುಣೆಯಿಂದ ಒಂದೇ ಕಣ್ಣನ್ನು ಕಿತ್ತಿದ್ದ ಶ್ರೀರಾಮ.

ಒಂದು ಕಣ್ಣನ್ನು ಕಿತ್ತನೆಂದರೆ ಕಣ್ಣುಗುಡ್ಡೆಯನ್ನು ನಾಶಪಡಿಸಿದನೆಂದರ್ಥ ವಲ್ಲ. ಎರಡೂ ಕಣ್ಣುಗುಡ್ಡೆಗಳು ಆರೋಗ್ಯವಾಗಿಯೇ ಇವೆ. ಆದರೆ ಒಂದು ಸಲಕ್ಕೆ ಕಾಣುವುದು ಒಂದು ಕಣ್ಣು ಮಾತ್ರ. ಒಮ್ಮೆ ಆ ಕಣ್ಣು, ಇನ್ನೊಮ್ಮೆ ಈ ಕಣ್ಣು ಕಾಣುತ್ತದೆ, ಹೊರತು ಎರಡೂ ಕಣ್ಣು ಏಕಕಾಲದಲ್ಲಿ ಕಾಣುವುದಿಲ್ಲ. ಏಕಕಾಲದಲ್ಲಿ ಕಾಗೆ ಎರಡು ಪಾರ್ಶ್ವಗಳನ್ನು ನೋಡುವುದಿಲ್ಲ. ಒಂದು ಚಕ್ಷುರಿಂದ್ರಿಯದ ಎರಡು ಅಂಶಗಳು ಎರಡು ಕಣ್ಣುಗಳಲ್ಲಿರುತ್ತವೆ. ಅವುಗಳಲ್ಲಿ ಒಂದು ಅಂಶವನ್ನು ನಾಶಮಾಡಿದ್ದಾನೆ ರಾಮ. ರಾಮಬಾಣ ಅಮೋಘ. ಅದು ಏನೂ ಕಾರ್ಯ ಮಾಡದೆ ವ್ಯರ್ಥವಾಗುವುದಿಲ್ಲ.

ಪ್ರತಿಪ್ರಯಾತೇ ಭರತೇ ವಸನ್ ರಾಮಸ್ತಪೋವನೇ ।
ಲಕ್ಷಯಾಮಾಸ ಸೋದ್ವೇಗಮಥೌತ್ಸುಕ್ಯಂ ತಪಸ್ವಿನಾಮ್ ॥೬೨॥

ಭರತನು ಹಿಂತಿರುಗಿ ಹೋದಮೇಲೆ ಶ್ರೀರಾಮನು ಚಿತ್ರಕೂಟದ ತಪೋವನ-ದಲ್ಲಿ ವಾಸಮಾಡುತ್ತಿದ್ದಾಗ ತಪಸ್ವಿಗಳ ಉದ್ವೇಗವನ್ನೂ ಚೌತ್ಸುಕ್ಯವನ್ನೂ ಕಂಡನು.

ಯೇ ತತ್ರ ಚಿತ್ರಕೂಟಸ್ಯ ಪುರಸ್ತಾತ್ತಾಪಸಾಶ್ರಮೇ ।
ರಾಮಮಾಶ್ರಿತ್ಯ ನಿರತಾಸ್ತಾನಲಕ್ಷಯದುತ್ಸುಕಾನ್ ॥೬೩॥

ಚಿತ್ರಕೂಟದ ಮುಂಭಾಗದ ತಾಪಸಾಶ್ರಮಗಳಲ್ಲಿ ರಾಮನನ್ನು ಆಶ್ರಯಿಸಿ ತಪೋನಿರತರಾಗಿದ್ದ ಮುನಿಗಳು ಬೇರೆಕಡೆ ಹೋಗಲು ಉತ್ಸುಕರಾದುದನ್ನು ರಾಮನು ಕಂಡನು.

ನಯನೈರ್ಭ್ರುಕುಟೀಭಿಶ್ಚ ರಾಮಂ ನಿರ್ದಿಶ್ಯ ಶಂಕಿತಾಃ ।
ಅನ್ಯೋನ್ಯಮುಪಜಲ್ಪಂತಃ ಶನೈಶ್ಚಕ್ರುರ್ಮಿಥಃ ಕಥಾಃ ॥೬೪॥

'ಆತ್ಮಾನಂ ಮಾನುಷಂ ಮನ್ಯೇ' ಎಂದು ಹೇಳುತ್ತ ಮನುಷ್ಯನಂತೆ ರಾಮನು ನಟನೆ ಮಾಡುವುದರಿಂದ ಅದಕ್ಕೆ ಅನುಕೂಲವಾಗಿ ಅಜ್ಞಮಾನವರಂತೆ ನಟನೆ ಮಾಡಲು ತೊಡಗಿದರು ಜ್ಞಾನಿಗಳಾದ ತಪಸ್ವಿಗಳು. ರಾಮನಿಗೆ ತಮ್ಮ ನಟನೆಯಿಂದ ಕೋಪಬಂದೀತೆಂದು ಶಂಕಿತರಾಗಿ, ರಾಮನನ್ನು ಕಣ್ಣಿಂದ ನೋಡುತ್ತ ಹುಬ್ಬು ತಿರುಗಿಸುತ್ತ ಮೆತ್ತಗೆ ಮಾತನಾಡುತ್ತ ಪರಸ್ಪರ ಮಾತನಾಡಿಕೊಂಡರು.

ತೇಷಾಮೌತ್ಸುಕ್ಯಮಾಲಕ್ಷ್ಯ ರಾಮಸ್ತಾತ್ಮನಿ ಶಂಕಿತಃ ।
ಕೃತಾಂಜಲಿರುವಾಚೇದಮೃಷಿಂ ಕುಲಪತಿಂ ತತಃ ॥೬೫॥

ಬೇರೆ ಸ್ಥಳಕ್ಕೆ ಹೋಗಲು ತಪಸ್ವಿಗಳು ಉತ್ಸುಕರಾಗಿದ್ದುದನ್ನು ಲೀಲಾಮಾನುಷ ವಿಗ್ರಹನಾದ ಶ್ರೀರಾಮನು ಗಮನಿಸಿ ತಾನು ಅದಕ್ಕೆ ಕಾರಣನಾಗಿರಬಹುದೇ ಎಂದು ಶಂಕಿತನಾಗಿ ಕುಲಪತಿಯಾದ ಋಷಿಗೆ ಕೈಮುಗಿದು ಹೇಳಿದನು.

ಹತ್ತುಸಾವಿರ ಮಂದಿ ಗುರುಕುಲವಾಸಿ ವಿದ್ಯಾರ್ಥಿಗಳಿಗೆ ಆಶ್ರಯ ಅನ್ನಬಟ್ಟೆ-ಗಳನ್ನು ನೀಡಿ ವಿದ್ಯಾಭ್ಯಾಸ ಮಾಡಿಸುವವನಿಗೆ 'ಕುಲಪತಿ' ಎನ್ನುತ್ತಾರೆ.

ನ ಕಚ್ಚಿದ್ಭಗವನ್ ಕಿಂಚಿತ್ ಪೂರ್ವವೃತ್ತಮಿದಂ ಮಯಿ ।
ದೃಶ್ಯತೇ ವಿಕೃತಂ ಯೇನ ವಿಕ್ರಿಯಂತೇ ತಪಸ್ವಿನಃ ॥೬೬॥

ಪೂಜ್ಯ ತಪಸ್ವಿಗಳೆ, ನನ್ನಲ್ಲಿ ಹಿಂದೆ ನಿಮಗೆ ಮಾಡಿದ್ದ ಏನಾದರೂ ತಪ್ಪು ನಿಮಗೆ ಕಂಡುಬಂದಿಲ್ಲ ತಾನೆ? ನನ್ನಲ್ಲಿ ಕೋಪವಿಲ್ಲ ತಾನೆ?

ಪ್ರಮಾದಾಚ್ಚರಿತಂ ಕಚ್ಚಿತ್ ಕಚ್ಚಿನ್ನಾವರಜಸ್ಯ ಮೇ ।
ಲಕ್ಷ್ಮಣಸ್ಯರ್ಷಿಭಿರ್ದೃಷ್ಟಂ ನಾನುರೂಪಮಿವಾತ್ಮನಃ ॥೬೭॥

ನನ್ನ ತಮ್ಮ ಲಕ್ಷ್ಮಣನಾದರೂ ಪ್ರಮಾದದಿಂದ ತಮಗೆ ತಕ್ಕುದಲ್ಲದ ಯಾವು-ದಾದರೂ ತಪ್ಪುಮಾಡಿದ್ದು ತಮ್ಮ ಗಮನಕ್ಕೆ ಬಂದಿಲ್ಲ ತಾನೆ?

ಕಚ್ಚಿಚ್ಛುಶ್ರೂಷಮಾಣಾ ವಃ ಶುಶ್ರೂಷಣಪರಾ ಮಯಿ ।
ಪ್ರಮದಾಭ್ಯುಚಿತಾಂ ವೃತ್ತಿಂ ಸೀತಾ ಯುಕ್ತಾಂ ನ ವರ್ತತೇ ॥೬೮॥

ನಿಮ್ಮ ಶುಶ್ರೂಷೆ ಮಾಡುವಾಗ ಸೀತೆ ಸದಾ ನನ್ನ ಶಶ್ರೂಷೆಯಲ್ಲಿಯೇ ಆಸಕ್ತ-ಳಾದ್ದರಿಂದ ಸ್ತ್ರೀಗೆ ಉಚಿತವಾದ ನಡತೆಯನ್ನು ತಮ್ಮಲ್ಲಿ ಸರಿಯಾಗಿ ತೋರಲಿಲ್ಲವೆ?

ಅಥರ್ಷಿರ್ಜರಯಾ ವೃದ್ಧಸ್ತಪಸಾ ಚ ಜರಾಂ ಗತಃ ।
ವೇಪಮಾನ ಇವೋವಾಚ ರಾಮಂ ಭೂತದಯಾಪರಮ್ ॥೬೯॥

ವಯಸಿನಿಂದಲೂ ವೃದ್ಧ, ತಪಶ್ಚರ್ಯೆಯಿಂದಲೂ ವೃದ್ಧನಾದ ಋಷಿಯು ನಡುಗುತ್ತ ಭೂತದಯಾಪರನಾದ ರಾಮನಿಗೆ ನುಡಿದನು.

ಕುತಃ ಕಲ್ಯಾಣಸತ್ತ್ವಾಯಾಃ ಕಲ್ಯಾಣಾಭಿರತೇಸ್ತಥಾ ।
ಸ್ಖಲನಂ ತಾತ ವೈದೇಹ್ಯಾಸ್ತಪಸ್ವಿಷು ವಿಶೇಷತಃ ॥೭೦॥

ಮಗು, ಶುಭಸ್ವಭಾವದವಳಾದ ಶುಭಾಚಾರದಲ್ಲಿ ಆಸಕ್ತಳಾದ ಸೀತೆಯಲ್ಲಿ ವಿಶೇಷವಾಗಿ ತಪಸ್ವಿಗಳ ವಿಷಯದಲ್ಲಿ ತಪ್ಪು ನಡೆ ಹೇಗೆ ಇದ್ದೀತು?

ತ್ವನ್ನಿಮಿತ್ತಮಿದಂ ತಾವತ್ತಾಪಸಾನ್ ಪ್ರತಿ ವರ್ತತೇ ।
ರಕ್ಷೋಭ್ಯಸ್ತೇನ ಸಂವಿಗ್ನಾಃ ಕಥಯಂತಿ ಮಿಥ ಕಥಾಃ ॥೭೧॥

ಸೀತಾಸಮೇತನಾಗಿ ನೀನು ಇಲ್ಲಿ ಇರುವುದರಿಂದ ಸೀತೆಯ ಮೇಲಿನ ಆಕರ್ಷಣೆಯಿಂದ ಬರುವ ರಾಕ್ಷಸರು ತಪಸ್ವಿಗಳಿಗೆ ಉಪದ್ರವ ಮಾಡುತ್ತಿದ್ದಾರೆ. ಅದರಿಂದ ಉದ್ವೇಗಗೊಂಡು ತಪಸ್ವಿಗಳು ಪರಸ್ಪರ ಮಾತನಾಡಿಕೊಳ್ಳುತ್ತಿದ್ದಾರೆ. ತಪಸ್ವಿಗಳಿಗೆ ಉಪದ್ರವ ಮಾಡುವುದು ಸ್ವಭಾವ.

ರಾವಣಾವರಜಃ ಕಶ್ಚಿತ್ ಖರೋ ನಾಮೇಹ ರಾಕ್ಷಸಃ ।
ಉತ್ಪಾಟ್ಯ ತಾಪಸಾನ್ ಸರ್ವಾನ್ ಜನಸ್ಥಾನನಿಕೇತನಾನ್ ॥೭೨॥

ರಾವಣನ ತಮ್ಮನಾದ ಖರನೆಂಬ ಒಬ್ಬ ರಾಕ್ಷಸನು ಇಲ್ಲಿ ಜನಸ್ಥಾನದಲ್ಲಿ ವಾಸ ಮಾಡುತ್ತಿರುವ ಎಲ್ಲ ತಪಸ್ವಿಗಳನ್ನೂ ದೂರ ಓಡಿಸುತ್ತಿದ್ದಾನೆ.

ಧೃಷ್ಟಶ್ಚ ಜಿತಕಾಶೀ ಚ ನೃಶಂಸಃ ಪುರುಷಾದಕಃ ।
ಅವಲಿಪ್ತಶ್ಚ ಪಾಪಶ್ಚ ತ್ವಾಂ ಚ ತಾತ ನ ಮೃಷ್ಯತೇ ॥೭೩॥

ಮಗು, ಆ ಖರನು ಕ್ರೂರ ನರಭಕ್ಷಕ, ಪಾಪಿ, ಧಾರ್ಷ್ಟ್ಯದಿಂದ ಎಲ್ಲರನ್ನೂ ಗೆದ್ದು ಗರ್ವಿಷ್ಠನೂ ಆಗಿದ್ದಾನೆ. ಅವನು ನಿನ್ನನ್ನೂ ಕೂಡ ಪೀಡಿಸದೆ ಬಿಡುವುದಿಲ್ಲ.

ತ್ವಂ ಯದಾಪ್ರಭೃತಿ ಹ್ಯಸ್ಮಿನ್ನಾಶ್ರಮೇ ತಾತ ವರ್ತಸೇ ।
ತದಾಪ್ರಭೃತಿ ರಕ್ಷಾಂಸಿ ವಿಪ್ರಕುರ್ವಂತಿ ತಾಪಸಾನ್ ॥೭೪॥

ನೀನು ಎಂದಿನಿಂದ ಈ ಆಶ್ರಮದಲ್ಲಿ ವಾಸಿಸಲು ಬಂದೆಯೋ ಅಂದಿನಿಂದ ರಾಕ್ಷಸರು ತಪಸ್ವಿಗಳನ್ನು ಪೀಡಿಸುತ್ತಲೇ ಇದ್ದಾರೆ.

ದರ್ಶಯಂತಿ ಹಿ ಬೀಭತ್ಸೈಃ ಕ್ರೂರೈರ್ಭೀಷಣಕೈರಪಿ ।
ನಾನಾರೂಪೈರ್ವಿರೂಪೈಶ್ಚ ರೂಪೈರ್ವಿಕೃತದರ್ಶನೈಃ ॥೭೫॥

ಅಸಹ್ಯ ಕ್ರೂರ ಭಯಂಕರ ಎಂದು ನಾನಾ ವಿಧ ರೂಪಗಳಿಂದಲೂ ವಿಕಾರವಾಗಿ ವಿರೂಪವಾಗಿ ಕಾಣುವ ರೂಪಗಳಿಂದಲೂ ತಮ್ಮನ್ನು ಪ್ರದರ್ಶಿಸುತ್ತಾರೆ.

ಅಪ್ರಶಸ್ತೈರಶುಚಿಭಿಃ ಸಂಪ್ರಯುಜ್ಯ ಚ ತಾಪಸಾನ್ ।
ಪ್ರತಿಘ್ನಂತ್ಯಪರಾನ್ ಕ್ಷಿಪ್ರಂ ಮಾಯಯಾ ಪುರತಃ ಸ್ಥಿತಾನ್ ॥೭೬॥

ಅಪ್ರಶಸ್ತ ಅಶುಚಿಯಾದ ಮಲ ಮೂತ್ರಾದಿ ಪದಾರ್ಥಗಳನ್ನು ಆಶ್ರಮಗಳಲ್ಲಿ ಸುರಿದು ಹೋಗುತ್ತಾರೆ. ಮುಂದೆ ನಿಂತ ಬೇರೆ ಮುನಿಗಳನ್ನು ಮಾಯೆಯಿಂದ ಪೀಡಿಸುತ್ತಾರೆ.

ತೇಷು ತೇಷ್ವಾಶ್ರಮಸ್ಥಾನೇಷ್ವಬುದ್ಧಮವಲೀಯ ಚ ।
ರಮಂತೇ ತಾಪಸಾಂಸ್ತತ್ರ ನಾಶಯಂತೋऽಲ್ಪಚೇತಸಃ ॥೭೭॥

ಅಲ್ಪಬುದ್ಧಿಯವರಾದ ರಾಕ್ಷಸರು ಆಯಾ ಆಶ್ರಮಗಳಲ್ಲಿ ಕಾಣದಂತೆ ಬಚ್ಚಿಟ್ಟುಕೊಂಡು ತಾಪಸರನ್ನು ಹೆದರಿಸಿ ಓಡಿಸುತ್ತ ಆನಂದಪಡುತ್ತಾರೆ.

'ನಶ ಅದರ್ಶನೇ' ಧಾತು. 'ನಾಶಯಂತಃ' ಓಡಿಸಿ ಕಾಣದಂತೆ ಮಾಡುತ್ತಾರೆ. 'ನಾಶಃ ಪಲಾಯನೇऽಪಿ ಸ್ಯಾತ್' ವೇದಿನೀಕೋಶಪ್ರಕಾರ ಪಲಾಯನಗೈಸುತ್ತಾನೆ.

ಅಪಕ್ಷಿಪಂತಿ ಸ್ರುಗ್ಭಾಂಡಾನಗ್ನೀನ್ ಸಿಂಚಂತಿ ವಾರಿಣಾ ।
ಕಲಶಾಂಶ್ಚ ಪ್ರಮೃದ್ನಂತಿ ಹವನೇ ಸಮುಪಸ್ಥಿತೇ ॥೭೮॥

ಸ್ರುಕ್‌ಸ್ರುವ ಮುಂತಾದ ಯಜ್ಞಪಾತ್ರೆಗಳನ್ನು ದೂರ ಎಸೆಯುತ್ತಾರೆ. ಯಾಗ ಮಾಡಲು ಪ್ರಾರಂಭಿಸಿದಾಗಲೆ ಹೋಮಾಗ್ನಿಗಳ ಮೇಲೆ ನೀರೆರೆಯುತ್ತಾರೆ. ಕಲಶಗಳನ್ನು ಒಡೆಯುತ್ತಾರೆ.

ನರಭಕ್ಷಕರಾದರೂ ಈ ರಾಕ್ಷಸರು ಮುನಿಗಳನ್ನು ತಿನ್ನುತ್ತಿಲ್ಲ. ಏಕೆಂದರೆ ಅಲ್ಲಿಯೆ ಶ್ರೀರಾಮನಿದ್ದಾನೆ. ಆದರೆ ರಾಮನಿರುವುದರಿಂದಲೇ ಅವನ ಭಕ್ತರನ್ನು ಪೀಡಿಸುತ್ತಾರೆ. ಅವನ ಪೂಜಾರೂಪವಾಗಿ ಮಾಡುವ ಯಾಗಗಳಿಗೆ ವಿಘ್ನ ಮಾಡುತ್ತಾರೆ. ಪಾಪದ ಕೊಡ ತುಂಬಲೆಂದು ರಾಮನೂ ಸುಮ್ಮನಿದ್ದಾನೆ. ಹೊರತು, 'ಮುನಿಗಳಿಗೆ ರಾಮನನ್ನು ಒಬ್ಬ ಮಾವನೆಂದು ತಿಳಿದು ಮೊರೆ ಹೋಗದಿದ್ದುದರಿಂದ ರಾಮ ಅವರಿಗಾಗುತ್ತಿದ್ದ ಪೀಡೆಯನ್ನು ತಡೆಯಲಿಲ್ಲ' ಎನ್ನಬಾರದು. ಹೀಗಾಗಿ ತತ್ಕಾಲದಲ್ಲಿ ಪೀಡೆಯನ್ನು ತಡೆಯಲಾರದೆ ತಪಸ್ವಿಗಳು ಮಾತ್ರ ಇಲ್ಲಿಂದ ಬೇರೆ ಕಡೆಗೆ ಹೋಗುವುದೇ ಕ್ಷೇಮ ಎಂದುಕೊಳ್ಳುತ್ತಾರೆ.

ರಾಮನು ಈ ರಾಕ್ಷಸರ ಪಾಪದ ಕೊಡ ತುಂಬಿದ ಬಳಿಕ ಖರದೂಷಣಾದಿ-ಗಳೊಂದಿಗೇ ಎಲ್ಲರನ್ನೂ ಸಂಹಾರ ಮಾಡುತ್ತಾನೆ. ಹಾಗೆ ಮಾಡಲಿ ಎಂದೇ ತತ್ಕಾಲದಲ್ಲಿ ಮುನಿಗಳು ಬೇರೆ ಕಡೆಗೆ ಹೋಗುತ್ತಾರೆ.

ತೈರ್ದುರಾತ್ಮಭಿರಾಮೃಷ್ಟಾನಾಶ್ರಮಾನ್ ಪ್ರಜಿಹಾಸವಃ ।
ಗಮನಾಯಾನ್ಯದೇಶಸ್ಯ ಚೋದಯಂತ್ಯೃಷಯೋಽದ್ಯ ಮಾಮ್ ॥೭೯॥

ಆ ದುರಾತ್ಮರಾದ ರಾಕ್ಷಸರ ಆಕ್ರಮಣಕ್ಕೊಳಗಾಗಿರುವ ಆಶ್ರಮಗಳನ್ನು ಬಿಟ್ಟು-ಬಿಡಲು ಬಯಸಿದ ಋಷಿಗಳು ನನ್ನಲ್ಲಿ ಬೇರೆ ಕಡೆಗೆ ಹೋಗಲು ಒತ್ತಾಯಿಸುತ್ತಿದ್ದಾರೆ.

ತತ್ ಪುರಾ ರಾಮ ಶಾರೀರೀಮುಪಹಿಂಸಾಂ ತಪಸ್ವಿಷು ।
ದರ್ಶಯಂತಿ ಹಿ ದುಷ್ಟಾಸ್ತೇ ತ್ಯಕ್ಷ್ಯಾಮ ಇಮಮಾಶ್ರಯಮ್ ॥೮೦॥

ರಾಮ, ಈ ರಾಕ್ಷಸರನ್ನು ಹೀಗೆ ಬಿಟ್ಟರೆ ದುಷ್ಟರಾದ ಅವರು ಮುಂದೆ ತಪಸ್ವಿಗಳಲ್ಲಿ ಶಾರೀರಕವಾಗಿಯೂ ಹಿಂಸೆ ಮಾಡುವರು. ಅದರಿಂದ ನಾವು ಈ ಆಶ್ರಮವನ್ನು ಬಿಡೋಣ.

ಬಹುಮೂಲಫಲಂ ಚಿತ್ರಮವಿದೂರಾದಿತೋ ವನಮ್ ।
ಪುರಾಣಾಶ್ರಮಮೇವಾಹಂ ಶ್ರಯಿಷ್ಯೇ ಸಗಣಃ ಪುನಃ ॥೮೧॥

ಬಹಳ ಕಂದ ಮೂಲ ಫಲಭರಿತವಾದ ಸುಂದರವಾದ ಆಶ್ರಮ ಇಲ್ಲಿಗೆ ಹತ್ತಿರದಲ್ಲಿಯೇ ಇದೆ. ಅದು ನಮ್ಮ ಹಿಂದಿನ ಆಶ್ರಮ. ನೀನು ಇಲ್ಲಿಗೆ ಬಂದಿರುವೆ ಎಂದು ಇಲ್ಲಿಗೆ ಬಂದವರು ನಾವು. ಈಗ ಪುನಃ ಪರಿವಾರ ಸಮೇತ ಅಲ್ಲಿಗೆ ಹೋಗುವೆವು.

ಖರಸ್ತ್ವಯ್ಯಪಿ ಚಾಯುಕ್ತಂ ಪುರಾ ತಾತ ಪ್ರವರ್ತತೇ ।
ಸಹಾಸ್ಮಾಭಿರಿತೋ ಗಚ್ಛ ಯದಿ ಬುದ್ಧಿಃ ಪ್ರವರ್ತತೇ ॥೮೨॥

ಮಗು, ಖರನು ನಿನ್ನ ವಿಷಯದಲ್ಲಿಯೂ ಅಯುಕ್ತವಾಗಿ ನಡೆದು ಕೊಳ್ಳುವನು. ನಿನಗೆ ಸರಿ ಕಾಣುವುದಾದರೆ ನಮ್ಮೊಂದಿಗೆ ನೀನೂ ಬರಬಹುದು.

ಸಕಲತ್ರಸ್ಯ ಸಂದೇಹೋ ನಿತ್ಯಂ ಯತ್ತಸ್ಯ ರಾಘವ ।
ಸಮರ್ಥಸ್ಯಾಪಿ ಹಿ ಸತೋ ವಾಸೋ ದುಃಖಮಿಹಾದ್ಯ ತೇ ॥೮೩॥

ರಾಮ, ನೀನು ಯತ್ನಶೀಲನಾಗಿರುವೆ, ಸಮರ್ಥನಾಗಿರುವೆ. ಆದರೂ ಪತ್ನೀ ಸಹಿತನಾಗಿರುವುದರಿಂದ ಇಲ್ಲಿ ವಾಸವು ನಿನಗೆ ಅಪಾಯಶಂಕಾಸ್ಪದ, ದುಃಖಕರವಾದೀತು.

ಸೀತೆಯನ್ನು ಮುಂದೆ ರಾವಣನು ಅಪಹರಿಸುತ್ತಾನೆ. ಹಾಗೇ ರಾಕ್ಷಸರು ಅಪಹರಿಸಲು ಬರುವ ಶಂಕೆಯಿಂದ ಮುನಿಗಳು ಹೀಗೆ ಹೇಳುತ್ತಾರೆ. ಲಕ್ಷ್ಮಣನು ಈ ಶಂಕೆಯಿಂದಲೇ ಸದಾ ರಕ್ಷಣ ಮಾಡುತ್ತಿದ್ದಾನೆ. ಮುನಿಗಳೂ ಹಾಗೇ ರಕ್ಷಣೆಗಾಗಿಯೋ ಬೇರೆ ಸ್ಥಳಕ್ಕೆ ಹೋಗೋಣ ಎನ್ನುತ್ತಾರೆ. ಇದಕ್ಕೆ ರಾಮನನ್ನು ಮಾನವನೆಂದು ತಿಳಿದಿದ್ದರಿಂದಲ್ಲ. ಮಾನವನಂತೆ ನಟನೆ ಮಾಡುವನೆಂದು ತಿಳಿದಿದ್ದರಿಂದ ಎನ್ನಬೇಕು. ಮುನಿಗಳು ಜ್ಞಾನಿಗಳು.

ಇತ್ಯುಕ್ತವಂತಂ ರಾಮಸ್ತಂ ರಾಜಪುತ್ರಸ್ತಪಸ್ವಿನಮ್ ।
ನ ಶಶಾಕೋತ್ತರೈರ್ವಾಕ್ಯೈರವರೋದ್ಧುಂ ಸಮುತ್ಸುಕಮ್ ॥೮೪॥

ರಾಜಕುಮಾರ ರಾಮನು, ಹೀಗೆ ಹೇಳಿದ ಉತ್ಸುಕನಾದ ತಪಸ್ವಿಯನ್ನು ಪ್ರತ್ಯುತ್ತರಗಳಿಂದ ತಡೆದು ನಿಲ್ಲಿಸಲು ಶಕ್ತನಾಗಲಿಲ್ಲ.

ಅಭಿನಂದ್ಯ ಸಮಾಪೃಚ್ಛ್ಯ ಸಮಾಧಾಯ ಚ ರಾಘವಮ್ ।
ಸ ಜಗಾಮಾಶ್ರಮಂ ತ್ಯಕ್ತ್ವಾ ಕುಲೈಃ ಕುಲಪತಿಃ ಸಹ ॥೮೫॥

ಕುಲಪತಿಯು ಋಷಿಗಳ ವಿಯೋಗದಿಂದ ದುಃಖಿತನಾದ ರಾಮನಿಗೆ ಸಮಾಧಾನ ಹೇಳಿ, ಅಭಿನಂದಿಸಿ ಆ ಆಶ್ರಮವನ್ನು ತೊರೆದು ಋಷಿ ಸಮೂಹಗಳೊಂದಿಗೆ ಹೊರಟು ಹೋದನು.

ರಾಮಃ ಸಂಸಾಧ್ಯ ತ್ವೃಷಿಗಣಮನುಗಮನಾದ್
ದೇಶಾತ್ತಸ್ಮಾತ್ ಕುಲಪತಿಮಭಿವಾದ್ಯ ಋಷಿಮ್ ।
ಸಮ್ಯಕ್ ಪ್ರೀತೈಸ್ತೈರನುಮತ ಉಪದಿಷ್ಟಾರ್ಥಃ
ಪುಣ್ಯಂ ವಾಸಾಯ ಸ್ವನಿಲಯಮಭಿಸಂಪೇದೇ ॥೮೬॥

ಶ್ರೀರಾಮನು ಋಷಿಸಮೂಹದ ಹಿಂದೆ ಸ್ವಲ್ಪ ನಡೆದು ಆ ಪ್ರದೇಶದಿಂದ ಬೀಳ್ಕೊಟ್ಟು ಕುಲಪತಿಯಾದ ಋಷಿಯನ್ನು ಅಭಿವಂದಿಸಿದನು. ಚೆನ್ನಾಗಿ ಸುಪ್ರೀತ-ರಾದ ಋಷಿಗಳಿಂದ ಉಪದೇಶವನ್ನೂ ಹಿಂದಿರುಗಲು ಅನುಮತಿಯನ್ನೂ ಪಡೆದು ವಾಸಕ್ಕೆ ತನ್ನಾಶ್ರಮಕ್ಕೆ ಹಿಂತಿರುಗಿದನು.

ಆಶ್ರಮಮೃಷಿವಿರಹಿತಂ ಪ್ರಭುಃ
ಕ್ಷಣಮಪಿ ನ ವಿಜಹೌ ಸ ರಾಘವಃ ।
ರಾಘವಂ ಹಿ ಸತತಮನುಗತಾ
ಸ್ತಾಪಸಾಶ್ಚರ್ಷಿಚರಿತೇ ಧೃತಗುಣಾಃ ॥೨೬॥

ಪ್ರಭು ಶ್ರೀರಾಮನು ಮುಂದೆ ಸೀತಾರಕ್ಷಣದೃಷ್ಟಿಯಿಂದ ಋಷಿರಹಿತವಾದ ಆಶ್ರಮಪ್ರದೇಶವನ್ನು ಕ್ಷಣವೂ ಬಿಟ್ಟುಹೋಗಲಿಲ್ಲ. ಋಷಿತುಲ್ಯ ಆಚಾರಉಳ್ಳ ರಾಮನಲ್ಲಿ ಭಕ್ಯಾದಿಗುಣಗಳನ್ನಿರಿಸಿಕೊಂಡಿದ್ದ ತಾಪಸರು ಕೂಡ ಮನಸಿನಿಂದ ರಾಮನನ್ನು ಸದಾ ಅನುಸರಿಸಿದ್ದರು. ಕ್ಷಣವೂ ಬಿಟ್ಟು ಹೋಗಲಿಲ್ಲ.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ನೂರಹದಿನಾರನೇ ಸರ್ಗ ಮುಗಿಯಿತು.

❖

ಸಪ್ತದಶಾಧಿಕ ಶತತಮಃ ಸರ್ಗಃ

ಸರ್ಗ – 117

ಅನಸೂಯೆ ಸೀತೆಗೆ ಪಾತಿವ್ರತ್ಯವನ್ನು ಬೋಧಿಸುವುದು.

ರಾಘವಸ್ತ್ವಥ ಯಾತೇಷು ತಪಸ್ವಿಷು ವಿಚಿಂತಯನ್ ।
ನ ತತ್ರಾರೋಚಯದ್ವಾಸಂ ಕಾರಣೈರ್ಬಹುಭಿಸ್ತದಾ ॥೧॥

ತಪಸ್ವಿಗಳು ಹೊರಟುಹೋದ ಬಳಿಕ ಶ್ರೀರಾಮನೂ ಕೂಡ ಅನೇಕ ಕಾರಣ-ಗಳಿಂದ ಅಲ್ಲಿಯೇ ವಾಸಮಾಡಲು ಬಯಸಲಿಲ್ಲ.

ಇಹ ಮೇ ಭರತೋ ದೃಷ್ಟೋ ಮಾತರಶ್ಚ ಸನಾಗರಾಃ ।
ಸಾ ಚ ಮೇ ಸ್ಮೃತಿರನ್ವೇತಿ ತಾನ್ನಿತ್ಯಮನುಶೋಚತಃ ॥೨॥

ಇಲ್ಲಿಯೇ ನನಗೆ ಭರತನ ಮಾತೆಯರ ಮತ್ತು ಪ್ರಜೆಗಳ ದರ್ಶನವಾಯಿತು, ಅವರ ವಿಯೋಗದಿಂದ ದುಃಖಿಸುವ ನನಗೆ ಇಲ್ಲಿದ್ದರೆ ಅವರ ಸ್ಮರಣೆ ಸದಾ ನನ್ನನ್ನು ಕಾಡುತ್ತದೆ.

ಸ್ಕಂಧಾವಾರನಿವೇಶೇನ ತೇನ ತಸ್ಯ ಮಹಾತ್ಮನಃ ।
ಹಯಹಸ್ತಿಕರೀಷೈಶ್ಚ ಉಪಮರ್ದಃ ಕೃತೋ ಭೃಶಮ್ ॥೩॥

ಮಹಾತ್ಮ ಭರತನ ಸೈನ್ಯ ಬೀಡುಬಿಟ್ಟಿದ್ದರಿಂದ ಕುದುರೆ ಆನೆಗಳ ಲದ್ದಿಗಳಿಂದ ಈ ಪ್ರದೇಶ ಬಹಳ ಕಲುಷಿತವೂ ಆಗಿದೆ.

ತಸ್ಮಾದನ್ಯತ್ರ ಗಚ್ಛಾಮ ಇತಿ ಸಂಚಿಂತ್ಯ ರಾಘವಃ ।
ಪ್ರಾತಿಷ್ಠತ ಸ ವೈದೇಹ್ಯಾ ಲಕ್ಷ್ಮಣೇನ ಚ ಸಂಗತಃ ॥೪॥

ಅದರಿಂದ ಬೇರೆ ಕಡೆಗೆ ಹೋಗೋಣ ಎಂದು ಆಲೋಚಿಸಿ ಶ್ರೀರಾಮನು ಸೀತೆಯೊಂದಿಗೆ ಮತ್ತು ಲಕ್ಷ್ಮಣನೊಂದಿಗೆ ಕೂಡಿಕೊಂಡು ಹೊರಟನು.

ಸೋಽತ್ರೇರಾಶ್ರಮಮಾಸಾದ್ಯ ತಂ ವವಂದೇ ಮಹಾಯಶಾಃ ।
ತಂ ಚಾಪಿ ಭಗವಾನತ್ರಿಃ ಪುತ್ರವತ್ ಪ್ರತ್ಯಪದ್ಯತ ॥೫॥

ಮಹಾಯಶಸ್ವಿ ಶ್ರೀರಾಮನು ಅತ್ರಿಯ ಆಶ್ರಮಕ್ಕೆ ಬಂದು ಅವರನ್ನು ವಂದಿಸಿದನು. ಪೂಜ್ಯರಾದ ಅತ್ರಿಮುನಿಯೂ ರಾಮನನ್ನು ಮಗನಂತೆ ಆದರದಿಂದ ಬರಮಾಡಿಕೊಂಡರು.

ಸ್ವಯಮಾತಿಥ್ಯಮಾದಿಶ್ಯ ಸರ್ವಮಸ್ಯ ಸುಸತ್ಕೃತಮ್ ।
ಸೌಮಿತ್ರಿಂ ಚ ಮಹಾಭಾಗಾಂ ಸೀತಾಂ ಚ ಸಮಸಾಂತ್ವಯತ್ ॥೬॥

ಪತ್ನಿ ಅನಸೂಯೆ ವೃದ್ಧಳಾಗಿದ್ದು ಅಶಕ್ತಳಾದ್ದರಿಂದ ಮುನಿಯು ಸ್ವಯಂ ರಾಮನಿಗೆ ಎಲ್ಲ ಅತಿಥಿಸತ್ಕಾರವನ್ನು ಮಾಡಿ ಲಕ್ಷ್ಮಣನನ್ನೂ ಮಹಾಭಾಗ್ಯವತಿ ಸೀತೆಯನ್ನೂ ಸಂತೋಷಪಡಿಸಿದರು.

ಪತ್ನೀಂ ಚ ಸಮನುಪ್ರಾಪ್ತಾಂ ವೃದ್ಧಾಮಾಮಂತ್ರ್ಯ ಸತ್ಕೃತಾಮ್ ।
ಸಾಂತ್ವಯಾಮಾಸ ಧರ್ಮಜ್ಞಃ ಸರ್ವಭೂತಹಿತೇ ರತಃ ॥೭॥

ಆಗ ಬಂದ ವೃದ್ಧೆಯಾದ ಪತ್ನಿ ಅನಸೂಯೆಯನ್ನು ಎಲ್ಲರೂ ಸತ್ಕರಿಸಿದರು. ಸರ್ವಪ್ರಾಣಿಗಳ ಹಿತವನ್ನೇ ಮಾಡುವ ಧರ್ಮಜ್ಞರಾದ ಮುನಿಯೂ ಅನಸೂಯೆ-ಯನ್ನು ಮಾತಿನಿಂದ ಸಂತೋಷಗೊಳಿಸಿದರು.

ಅನಸೂಯಾಂ ಮಹಾಭಾಗಾಂ ತಾಪಸೀಂ ಧರ್ಮಚಾರಿಣೀಮ್ ।
ಪ್ರತಿಗೃಹ್ಣೀಷ್ವ ವೈದೇಹೀಮಬ್ರವೀದೃಷಿಸತ್ತಮಃ ॥೮॥

ಮಹಾಭಾಗ್ಯವತಿ ಧರ್ಮಚಾರಿಣಿ ತಾಪಸಿಯಾದ ಅನಸೂಯೆಗೆ 'ಸೀತೆಯನ್ನು' ಆಲಿಂಗಿಸು ಎಂದು ಋಷಿಶ್ರೇಷ್ಠರಾದ ಅತ್ರಿಮುನಿಗಳು ನುಡಿದರು.

ರಾಮಾಯ ಚಾಚಚಕ್ಷೇ ತಾಂ ತಾಪಸೀಂ ಧರ್ಮಚಾರಿಣೀಮ್ ।
ದಶ ವರ್ಷಾಣ್ಯನಾವೃಷ್ಟ್ಯಾ ದಗ್ಧೇ ಲೋಕೇ ನಿರಂತರಮ್ ॥೯॥

ಯಯಾ ಮೂಲಫಲೇ ಸೃಷ್ಟೇ ಜಾಹ್ನವೀ ಚ ಪ್ರವರ್ತಿತಾ ।
ಉಗ್ರೇಣ ತಪಸಾ ಯುಕ್ತಾ ನಿಯಮೈಶ್ಚಾಪ್ಯಲಂಕೃತಾ ॥೧೦॥

ದಶವರ್ಷಸಹಸ್ರಾಣಿ ಯಯಾ ತಪ್ತಂ ಮಹತ್ತಪಃ ।
ಅನಸೂಯಾ ವ್ರತೈಃ ಸ್ನಾತ್ವಾ ಪ್ರತ್ಯೂಹಾಶ್ಚ ನಿವರ್ತಿತಾಃ ॥೧೧॥

ಅತ್ರಿಮುನಿ ಶ್ರೀರಾಮನಿಗೆ ಧರ್ಮಚಾರಿಣಿಯಾದ ಅನಸೂಯೆಯ ಬಗ್ಗೆ ಹೇಳಿದರು— ಹತ್ತುವರ್ಷಕಾಲ ಅನಾವೃಷ್ಟಿಯಿಂದ ನಿರಂತರವಾಗಿ ಲೋಕವು ಬೆಂದಾಗ ಅನಸೂಯೆ ಋಷಿಮುನಿಗಳಿಗೆ ಕಂದಮೂಲ ಫಲಗಳನ್ನು ಸೃಷ್ಟಿಮಾಡಿ ಕೊಟ್ಟಳು. ಅವರಿಗೆ ಸ್ನಾನಕ್ಕಾಗಿ ಗಂಗಾನದಿಯನ್ನೂ ಆಶ್ರಮಗಳ ಮೂಲಕ ಹರಿದು-ಹೋಗುವಂತೆ ಮಾಡಿದಳು. ಉಗ್ರತಪಸ್ಸಿನಿಂದ ಯುಕ್ತಳಾಗಿ ನಿಯಮಗಳಿಂದಲೂ

ಅಲಂಕೃತಳಾಗಿ ಹತ್ತುಸಾವಿರ ವರ್ಷಕಾಲ ದೊಡ್ಡ ತಪಸ್ಸನ್ನು ಮಾಡಿದಳು. ವ್ರತಸ್ನಾನ ಮಾಡಿ ಎಲ್ಲ ಋಷಿಗಳಿಗೆ ತಪೋವಿಘ್ನಗಳನ್ನೂ ದೂರ ಮಾಡಿದಳು.

ದೇವಕಾರ್ಯನಿಮಿತ್ತಂ ಚ ಯಯಾ ಸಂತ್ವರಮಾಣಯಾ ।
ದಶರಾತ್ರಂ ಕೃತಾ ರಾತ್ರಿಃ ಸೇಯಂ ಮಾತೇವ ತೇऽನಘ ॥೧೨॥

ದೇವಕಾರ್ಯಸಿದ್ಧಿಗಾಗಿಯೂ ಒಮ್ಮೆ ಹತ್ತುರಾತ್ರಿಗಳನ್ನು ಒಂದು ರಾತ್ರಿಯಾಗಿ ಮಾಡಿದಳು. ಇಂಥ ಅನಸೂಯೆ, ಅನಘನಾದ ರಾಮನೆ, ನಿನಗೆ ತಾಯಿಯಂತೆ ಇದ್ದಾಳೆ.

ಕರ್ದಮಮುನಿಯಿಂದ ದೇವಹೂತಿಯಲ್ಲಿ ಜನಿಸಿದವಳು ಅನಸೂಯೆ. ಪಾತಿವ್ರತ್ಯ ವಿಷಯದಲ್ಲಿ ಇವಳೊಂದಿಗೆ ಅಸೂಯಾ ಸ್ಪರ್ಧಾ ಮಾಡಲು ಯಾರಿಂದಲೂ ಸಾಧ್ಯವಿಲ್ಲವೆಂದು 'ಅನಸೂಯೆ' ಎಂದೇ ಹೆಸರು. ಶಾಲಾಯಿನೀ ಎಂಬ ಇವಳ ಸಖಿಯೊಬ್ಬಳೂ ಹಾಗೇ ಪತಿವ್ರತೆ. ಪತಿ ಬಯಸಿದನೆಂದು ಅವನನ್ನು ವೇಶ್ಯೆಯ ಬಳಿಗೆ ಹೊತ್ತು ನಡೆದಳು. ಆಗ ಪತಿಯ ಕಾಲು ಮಾಂಡವ್ಯ ಮುನಿಗೆ ತಗಲಿತು. ಮುನಿ ಶಪಿಸಿದ, ಹತ್ತು ದಿನಗಳೊಳಗೆ ಒಂದು ರಾತ್ರಿ ಬೆಳಗಾದೊಡನೆ ನೀನು ವಿಧವೆಯಾಗುವಿ ಎಂದು. ಅವಳು ಅನಸೂಯೆಯನ್ನು ಕಾಪಾಡೆಂದು ಬೇಡಿದಾಗ ಅನಸೂಯೆ 'ಹತ್ತು ರಾತ್ರಿಗಳೂ ಬೆಳಗಾಗುವುದೇ ಬೇಡ' ಎಂದಳು. ಬೆಳಗಾಗದಿದ್ದರೆ ಯಜ್ಞಾದಿಗಳೆಲ್ಲ ನಿಂತುಹೋಗುವುವು ಎಂದು ಹೆದರಿ ದೇವತೆ-ಗಳೆಲ್ಲರೂ ಅನಸೂಯೆಯ ಬಳಿಗೆ ಧಾವಿಸಿದರು. ಆಗ ಅವಳು ಹತ್ತುರಾತ್ರಿಗಳನ್ನು ಒಂದು ರಾತ್ರಿಯಾಗಿ ಮಾಡಿ ಅದು ಕಳೆದಾಗಲೇ ಬೆಳಗಾಗುವಂತೆ ಮಾಡಿದಳು. ಹತ್ತುದಿನಗಳೊಳಗೆ ರಾತ್ರಿ ಬೆಳಗಾಗಲೇ ಇಲ್ಲ. ಸಖಿಗೆ ವೈಧವ್ಯ ಬರಲಿಲ್ಲ. ಯಜ್ಞಾದಿ ದೇವಕಾರ್ಯಸಿದ್ಧಿಯೂ ಆಯಿತು.

ತಮಿಮಾಂ ಸರ್ವಭೂತಾನಾಂ ನಮಸ್ಕಾರ್ಯಾಂ ಯಶಸ್ವಿನೀಮ್ ।
ಅಭಿಗಚ್ಛತು ವೈದೇಹಿ ವೃದ್ಧಾಮಕ್ರೋಧಾನಾಂ ಸದಾ
ಅನಸೂಯೇತಿ ಯಾ ಲೋಕೇ ಕರ್ಮಭಿಃ ಖ್ಯಾತಿಮಾಗತಾ ॥೧೩॥

ಅನಸೂಯೆ ಎಂದು ಅನ್ವರ್ಥವಾಗಿ ಲೋಕದಲ್ಲಿ ತನ್ನ ಕರ್ಮಗಳಿಂದ ಖ್ಯಾತಿ ಹೊಂದಿದವಳೂ ಎಲ್ಲರಿಗೂ ನಮಸ್ಕಾರಾರ್ಹಳೂ ಯಶಸ್ವಿನಿಯೂ ಸದಾಕ್ರೋಧ-ವನ್ನು ಗೆದ್ದವಳೂ ವೃದ್ಧೆಯೂ ಆಗಿರುವ ಇವಳ ಬಳಿಗೆ ಸೀತೆ ಹೋಗಲಿ.

ಏವಂ ಬ್ರುವಾಣಂ ತಮೃಷಿಂ ತಥೇತ್ಯುಕ್ತ್ವಾ ಸ ರಾಘವಃ ।
ಸೀತಾಮುವಾಚ ಧರ್ಮಜ್ಞಾಮಿದಂ ವಚನಮುತ್ತಮಮ್ ॥೧೪॥

ಅತ್ರಿಮುನಿ ಹೀಗೆ ಹೇಳಿದಾಗ ಶ್ರೀರಾಮನು ಹಾಗೆ ಆಗಲಿ ಎಂದು ಹೇಳಿ ಧರ್ಮಜ್ಞಳಾದ ಸೀತೆಗೆ ಉತ್ತಮವಾದ ಈ ಮಾತನ್ನು ಹೇಳಿದನು.

ರಾಜಪುತ್ರಿ ಶ್ರುತಂ ತ್ವೇತನ್ಮುನೇರಸ್ಯ ಸಮೀರಿತಮ್ ।
ಶ್ರೇಯೋऽರ್ಥಮಾತ್ಮನಃ ಶೀಘ್ರಮಭಿಗಚ್ಛ ತಪಸ್ವಿನೀಮ್ ॥೧೫॥

'ರಾಜಕುಮಾರಿ, ಮುನಿಗಳು ಹೇಳಿದ್ದನ್ನು ನೀನು ಕೇಳಿದೆ ತಾನೆ? ತನ್ನ ಶ್ರೇಯಸ್ಸಿಗಾಗಿ ತಪಸ್ವಿನಿಯಾದ ಅನಸೂಯೆಯ ಬಳಿಗೆ ಬೇಗನೆ ಹೋಗು'.

ಸೀತಾ ತ್ವೇತದ್ವಚಃ ಶ್ರುತ್ವಾ ರಾಘವಸ್ಯ ಹಿತೈಷಿಣಃ
ತಾಮತ್ರಿಪತ್ನೀಂ ಧರ್ಮಜ್ಞಾಮಭಿಚಕ್ರಾಮ ಮೈಥಿಲೀ ॥೧೬॥

ಹಿತೈಷಿಯಾದ ರಾಮನು ಈ ಮಾತನ್ನು ಕೇಳಿ ಮೈಥಿಲಿ ಸೀತೆ ಧರ್ಮಜ್ಞಳಾದ ಅತ್ರಿ ಪತ್ನಿಯ ಬಳಿಗೆ ಹೋದಳು.

ಶಿಥಿಲಾಂ ವಲಿತಾಂ ವೃದ್ಧಾಂ ಜರಾಪಾಂಡರಮೂರ್ಧಜಾಮ್ ।
ಸತತಂ ವೇಪಮಾನಾಂಗೀಂ ಪ್ರವಾತೇ ಕದಲೀಂ ಯಥಾ ॥೧೭॥

ಅನಸೂಯೆಯ ಅಂಗಾಂಗಗಳು ಶಿಥಿಲವಾಗಿದ್ದುವು. ತೊವಲು ಸುಕ್ಕಾಗಿತ್ತು. ವೃದ್ಧಳಾಗಿದ್ದರಿಂದ ತಲೆಗೂದಲು ಮುಪ್ಪಿನಿಂದ ಬಿಳುಪಾಗಿತ್ತು. ಬಿರುಗಾಳಿಗೆ ಬಾಳೆಗಿಡ ಕಂಪಿಸುವಂತೆ ಮೈಯಲ್ಲಿ ಸತತವಾಗಿ ನಡುಗುತ್ತಿದ್ದಳು.

ತಾಂ ತು ಸೀತಾ ಮಹಾಭಾಗಾಮನಸೂಯಾಂ ಪತಿವ್ರತಾಮ್ ।
ಅಭ್ಯವಾದಯದವ್ಯಗ್ರಾ ಸ್ವಂ ನಾಮ ಸಮುದಾಹರತ್ ॥೧೮॥

ಇಂಥ ಮಹಾಭಾಗ್ಯವಂತೆ ಪತಿವ್ರತೆಯಾದ ಅನಸೂಯೆಯನ್ನು ಸೀತೆ ಏಕಾಗ್ರತೆ-ಯಿಂದ ಅಭಿವಂದಿಸಿದಳು. ಅದಕ್ಕೆ ಅಂಗವಾಗಿ ತನ್ನ ನಾಮವನ್ನು ಉಚ್ಚರಿಸಿದಳು.

ಅಭಿವಾದ್ಯ ಚ ವೈದೇಹೀ ತಾಪಸೀಂ ತಾಮನಿಂದಿತಾಮ್
ಬದ್ಧಾಂಜಲಿಪುಟಾ ಹೃಷ್ಟಾ ಪರ್ಯಪೃಚ್ಛದನಾಮಯಮ್ ॥೧೯॥

ಸೀತೆ ಅನಿಂದಿತಳಾದ ತಾಪಸಿಯಾದ ಅನಸೂಯೆಯನ್ನು ಅಭಿವಂದಿಸಿ ಹೃಷ್ಟಳಾಗಿ ಕೈಮುಗಿದು ಆರೋಗ್ಯವನ್ನು ವಿಚಾರಿಸಿದಳು.

ತತಃ ಸೀತಾಂ ಮಹಾಭಾಗಾಂ ದೃಷ್ಟ್ವಾ ತಾಂ ಧರ್ಮಚಾರಿಣೀಮ್ ।
ಸಾಂತ್ವಯಂತ್ಯಬ್ರವೀದ್ ಹೃಷ್ಟಾ ದಿಷ್ಟ್ಯಾ ಧರ್ಮಮವೇಕ್ಷಸೇ ॥೨೦॥

ಧರ್ಮಚಾರಿಣಿಯಾದ ಮಹಾಭಾಗ್ಯವತಿಯಾದ ಸೀತೆಯನ್ನು ನೋಡಿ ಅನಸೂಯೆ ಹೃಷ್ಟಳಾಗಿ ಸಂತೈಸುತ್ತ ಹೇಳಿದಳು. 'ನೀನು ಧರ್ಮವನ್ನು ಆದರಿಸು-ತ್ತಿರುವುದು ಬಹಳ ಸಂತೋಷ'.

ತ್ಯಕ್ತ್ವಾ ಜ್ಞಾತಿಜನಂ ಸೀತೇ ಮಾನಮೃದ್ಧಿಂ ಚ ಭಾಮಿನಿ ।
ಅವರುದ್ಧಂ ವನೇ ರಾಮಂ ದಿಷ್ಟ್ಯಾ ತ್ವಮನುಗಚ್ಛಸಿ ॥೨೧॥

ಸೀತೆ, ನೀನು ಬಂಧುಜನರನ್ನು ತೊರೆದು ರಾಜಕುಮಾರಿ ರಾಜನ ರಾಣಿ ಎಂಬ ಹಮ್ಮು ತೊರೆದು ರಾಜ್ಯೈಶ್ವರ್ಯವನ್ನೂ ಕಡೆಗಣಿಸಿ ವನವಾಸದ ಕಷ್ಟದಲ್ಲಿ ಸಿಲುಕಿರುವ ರಾಮನನ್ನು ಬಿಡದೆ ಅನುಸರಿಸುತ್ತಿರುವುದು ಬಹಳ ಸಂತೋಷ.

ನಗರಸ್ಥೋ ವನಸ್ಥೋ ವಾ ಶುಭೋ ವಾ ಯದಿ ವಾಶುಭಃ ।
ಯಾಸಾಂ ಸ್ತ್ರೀಣಾಂ ಪ್ರಿಯೋ ಭರ್ತಾ ತಾಸಾಂ ಲೋಕಾ
ಮಹೋದಯಾಃ ॥೨೨॥

ಪತಿಯು ನಗರದಲ್ಲಿರಲಿ ಕಾಡಿನಲ್ಲಿರಲಿ. ಸುಖಿಯಾಗಿರಲಿ ದುಃಖಿಯಾಗಿರಲಿ ಯಾವ ಸ್ತ್ರೀಯರಿಗೆ ಪ್ರಿಯನಾಗಿರುವನೋ ಆ ಸ್ತ್ರೀಯರಿಗೆ ಉತ್ತಮ ಲೋಕಗಳು ಲಭ್ಯವಾಗುವುವು.

ದುಃಶೀಲಃ ಕಾಮವೃತ್ತೋ ವಾ ಧನೈರ್ವಾ ಪರಿವರ್ಜಿತಃ ।
ಸ್ತ್ರೀಣಾಮಾರ್ಯಸ್ವಭಾವಾನಾಂ ಪರಮಂ ದೈವತಂ ಪತಿಃ । ॥೨೩॥

ಪತಿಯು ಶೀಲಗೆಟ್ಟಿದ್ದರೂ ಸ್ವಚ್ಛಂದಚಾರಿಯಾಗಿದ್ದರೂ ಧನಸಂಪತ್ತನ್ನು ಕಳೆದುಕೊಂಡಿದ್ದರೂ ಒಳ್ಳೆಯ ಸ್ವಭಾವದ ಸ್ತ್ರೀಯರಿಗೆ ಪರದೇವತೆ ಎನಿಸುತ್ತಾನೆ.

ನಾತೋ ವಿಶಿಷ್ಟಂ ಪಶ್ಯಾಮಿ ಬಾಂಧವಂ ವಿಮೃಶಂತ್ಯಹಮ್ ।
ಸರ್ವತ್ರ ಯೋಗ್ಯಂ ವೈದೇಹಿ ತಪಃ ಕೃತಮಿವಾವ್ಯಯಮ್ ॥೨೪॥

ಎಷ್ಟು ಆಲೋಚನೆ ಮಾಡಿದರೂ ತಪಸ್ಸಿನಿಂದ ಸಿಗುವ ಅವ್ಯಯ ಫಲದಂತೆ ಇಹಪರಗಳಲ್ಲಿ ಎಲ್ಲಕಡೆ ಸುಖ ಕೊಡಲು ಯೋಗ್ಯನಾದ ಪತಿಗಿಂತ ಹೆಚ್ಚಿನ ಬಂಧುವನ್ನು ನಾನು ಕಾಣೆ.

ನ ತ್ವೇವಮವಗಚ್ಛಂತಿ ಗುಣದೋಷಮಸತ್‌ಸ್ತ್ರಿಯಃ ।
ಕಾಮವಕ್ತವ್ಯಹೃದಯಾ ಭರ್ತೃನಾಥಾಶ್ಚರಂತಿ ಯಾಃ । ॥೨೫॥

ಕಾಮವಶವಾದ ಚಿತ್ತಉಳ್ಳ ಪತಿಯನ್ನು ಮನಬಂದಂತೆ ಆಡಿಸುವ ಯಾವ ದುಷ್ಟಸ್ತ್ರೀಯರು ಲೋಕದಲ್ಲಿ ಸಂಚರಿಸುತ್ತಿರುವರೋ ಅವರು ಪತಿಸೇವೆ ಪತಿ–ನಿಂದೆಗಳಲ್ಲಿರುವ ಗುಣದೋಷಗಳನ್ನು ತಿಳಿದುಕೊಳ್ಳಲಾರರು.

ಪ್ರಾಪ್ನುವಂತ್ಯಯಶಶ್ಚೈವ ಧರ್ಮಭ್ರಂಶಂ ಚ ಮೈಥಿಲಿ ।
ಅಕಾರ್ಯವಶಮಾಪನ್ನಾಃ ಸ್ತ್ರಿಯೋ ಯಾಃ ಖಲು ತದ್ವಿಧಾಃ ॥೨೬॥

ಅಂಥ ಸ್ತ್ರೀಯರು ಅಕೃತ್ಯಗಳಿಗೆ ಪರವಶರಾಗಿ ಅಪಯಶಸ್ಸನ್ನು ಹೊಂದುತ್ತಾರೆ. ಪುಣ್ಯನಾಶ ಮಾಡಿಕೊಳ್ಳುತ್ತಾರೆ.

ತ್ವದ್ವಿಧಾಸ್ತು ಗುಣೈರ್ಯುಕ್ತಾ ದೃಷ್ಟಲೋಕಪರಾವರಾಃ ।
ಸ್ತ್ರಿಯಃ ಸ್ವರ್ಗೇ ಚರಿಷ್ಯಂತಿ ಯಥಾ ಧರ್ಮಕೃತಸ್ತಥಾ ॥೨೭॥

ನಿನ್ನಂಥ ಸ್ತ್ರೀಯರು ಗುಣಸಂಪನ್ನೆಯರಾಗಿ ಇಹಪರ ಲೋಕಗಳಲ್ಲಿ ಸುಖಗಳನ್ನು ಉಣ್ಣುತ್ತ ಪುಣ್ಯವಂತರಂತೆ ಸ್ವರ್ಗದಲ್ಲಿ ವಿಹರಿಸುತ್ತಾರೆ.

ತದೇವಮೇನಂ ತ್ವಮನುವ್ರತಾ ಸತೀ
ಪತಿವ್ರತಾನಾಂ ಸಮಯಾನುವರ್ತಿನೀ ।
ಭವ ಸ್ವಭರ್ತುಃ ಸಹಧರ್ಮಚಾರಿಣೀ
ಯಶಶ್ಚ ಧರ್ಮಂ ಚ ತತಃ ಸಮಾಪ್ಸ್ಯಸಿ ॥೨೮॥

ಅದರಿಂದ ನೀನು ಪತಿಗೆ ಅಧೀನಳಾಗಿ ಸತೀಧರ್ಮವನ್ನು ಪಾಲಿಸುತ್ತ ನಿನ್ನ ಈ ಪತಿಗೆ ವಿಧೇಯಳಾಗಿ ಪತಿಗೆ ಸಹಧರ್ಮಿಣಿಯಾಗು. ಆಗ ಯಶಸ್ಸನ್ನೂ ಪುಣ್ಯವನ್ನೂ ಪಡೆಯುವೆ.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ನೂರಹದಿನೇಳನೇ ಸರ್ಗ ಮುಗಿಯಿತು.

ಅಷ್ಟಾದಶಾಧಿಕ ಶತತಮಃ ಸರ್ಗಃ

ಸರ್ಗ – 118

ಅನಸೂಯೆ ಕೊಟ್ಟ ದಿವ್ಯ ಅಲಂಕಾರಗಳನ್ನು ಸ್ವೀಕರಿಸುವುದು.

ಸಾ ತ್ವೇವಮುಕ್ತಾ ವೈದೇಹೀ ತ್ವನಸೂಯಾನಸೂಯಯಾ ।
ಪ್ರತಿಪೂಜ್ಯ ವಚೋ ಮಂದಂ ಪ್ರವಕ್ತುಮುಪಚಕ್ರಮೇ ॥೧॥

ಅನಸೂಯೆ ಹೀಗೆ ಹೇಳಿದಾಗ ಅಸೂಯಾರಹಿತಳಾದ ಸೀತೆ ಅದನ್ನು ಅಭಿನಂದಿಸಿ ಮೆಲ್ಲನೆ ಮಾತನಾಡಲು ತೊಡಗಿದಳು.

ನೈತದಾಶ್ಚರ್ಯಮಾರ್ಯಾಯಾ ಯನ್ಮಾಂ ತ್ವಮನುಭಾಷಸೇ ।
ವಿದಿತಂ ತು ಮಯಾಪ್ಯೇತದ್ಯಥಾ ನಾರ್ಯಾಃ ಪತಿರ್ಗುರುಃ ॥೨॥

ಪೂಜ್ಯಳಾದ ನೀನು ನನಗೆ ಹೀಗೆ ಬೋಧಿಸುವುದು ಆಶ್ಚರ್ಯವಲ್ಲ. ಆದರೆ ಸತಿಗೆ ಪತಿಯೇ ಗುರು ಎನ್ನುವುದು ನನಗೂ ತಿಳಿದಿದೆ.

ಯದ್ಯಪ್ಯೇಷ ಭವೇದ್ಭರ್ತಾ ಮಮಾರ್ಯೇ ವೃತ್ತವರ್ಜಿತಃ ।
ಅದ್ವೈಧಮುಪಚರ್ತವ್ಯಸ್ತಥಾಪ್ಯೇಷ ಮಯಾ ಭವೇತ್ ॥೩॥

ಪತಿಯು ದುಷ್ಟನಿರಲಿ ಶೀಲಗೆಟ್ಟವನಿರಲಿ ಅವನಲ್ಲಿ ನನ್ನ ನಡತೆ ಇಬ್ಬಗೆ ಇರಕೂಡದು ಒಂದೇ ಬಗೆಯಾಗಿರಬೇಕು.

ಕಿಂ ಪುನರ್ಯೋ ಗುಣಶ್ಲಾಘ್ಯಃ ಸಾನುಕ್ರೋಶೋ ಜಿತೇಂದ್ರಿಯಃ ।
ಸ್ಥಿರಾನುರಾಗೋ ಧರ್ಮಾತ್ಮಾ ಮಾತೃವತ್ ಪಿತೃವತ್ ಪ್ರಿಯಃ ॥೪॥

ಪತಿಯು ಒಳ್ಳೆಯ ಗುಣಉಳ್ಳವನು ದಯೆಉಳ್ಳವನು ಜಿತೇಂದ್ರಿಯನು ಸ್ಥಿರವಾದ ಅನುರಾಗಉಳ್ಳವನು ಧರ್ಮಾತ್ಮ ತಾಯಿ ತಂದೆಗಳಂತೆ ಪ್ರೀತಿಪಾತ್ರನೇ ಆಗಿದ್ದರೆ ಇನ್ನೇನು ಹೇಳಬೇಕು.

ಯಾಂ ವೃತ್ತಿಂ ವರ್ತತೇ ರಾಮಃ ಕೌಸಲ್ಯಾಯಾಂ ಮಹಾಬಲಃ ।
ತಾಮೇವ ನೃಪನಾರೀಣಾಮನ್ಯಾಸಾಮಪಿ ವರ್ತತೇ ॥೫॥

ಮಹಾಬಲನಾದ ರಾಮನು ಕೌಸಲ್ಯೆಯ ವಿಷಯದಲ್ಲಿ ಯಾವ ರೀತಿ ನಡೆದುಕೊಳ್ಳುವನೋ ಅದೇ ರೀತಿಯಿಂದ ರಾಜನ ಬೇರೆ, ನಾರಿಯರಲ್ಲಿಯೂ ನಡೆದುಕೊಳ್ಳುತ್ತಾನೆ.

ಸಕೃದ್ದೃಷ್ಟಾಸ್ವಪಿ ಸ್ತ್ರೀಷು ನೃಪೇಣ ನೃಪವತ್ಸಲಃ ।
ಮಾತೃವದ್ವರ್ತತೇ ವೀರೋ ಮಾನಮುತ್ಸೃಜ್ಯ ಧರ್ಮವಿತ್ ॥೬॥

ತಂದೆಯಲ್ಲಿ ಪ್ರೀತಿಮಾಡುವ ಧರ್ಮಜ್ಞನಾದ ವೀರ ರಾಮನು ಒಮ್ಮೆ ತಂದೆಯ ಪ್ರಣಯದೃಷ್ಟಿಗೆ ಗೋಚರರಾದ ಸ್ತ್ರೀಯರನ್ನೂ ಕೂಡ ತಾಯಿಯಂತೆ ತಾನು ಮಹಾಪ್ರಭು ಎಂಬ ಅಭಿಮಾನವನ್ನು ಬದಿಗಿಟ್ಟು ಶುಶ್ರೂಷೆ ಮಾಡುತ್ತಾನೆ.

ಆಗಚ್ಛಂತ್ಯಾಶ್ಚ ವಿಜನಂ ವನಮೇವಂ ಭಯಾವಹಮ್ ।
ಸಮಾಹಿತಂ ಮೇ ಶ್ವಶ್ರ್ವಾ ಚ ಹೃದಯೇ ತದ್ಧೃತಂ ಮಹತ್ ॥೭॥

ನಿರ್ಜನವಾದ ಭಯಂಕರವಾದ ಇಂಥ ಅರಣ್ಯಕ್ಕೆ ನಾನು ಬರುವಾಗ ಅತ್ತೆ ಕೌಸಲ್ಯೆ ಉತ್ತಮವಾದ ಉಪದೇಶವನ್ನು ಮಾಡಿದ್ದು ಕೂಡ ನನ್ನ ಹೃದಯಲ್ಲಿದೆ.

ಪಾಣಿಗ್ರಹಣಕಾಲೇ ಚ ಯತ್ ಪುರಾ ತ್ವಗ್ನಿಸಂನಿಧೌ ।
ಅನುಶಿಷ್ಟಾ ಜನನ್ಯಾಸ್ಮಿ ವಾಕ್ಯಂ ತದಪಿ ಮೇ ಧೃತಮ್ ॥೮॥

ಹಿಂದೆ ಅಗ್ನಿಸನ್ನಿಧಿಯಲ್ಲಿ ಪಾಣಿಗ್ರಹಣ ಮಾಡುವಾಗ ತಾಯಿ ಉಪದೇಶಿಸಿದ್ದೂ ನನ್ನ ಹೃದಯದಲ್ಲಿದೆ.

ನವೀಕೃತಂ ಚ ತತ್ ಸರ್ವಂ ವಾಕ್ಯೈಸ್ತೇ ಧರ್ಮಚಾರಿಣಿ ।
ಪತಿಶುಶ್ರೂಷಣಾನ್ನಾರ್ಯಾಸ್ತಪೋ ನಾನ್ಯದ್ವಿಧೀಯತೇ ॥೯॥

ಧರ್ಮಚಾರಿಣಿಯೆ, ನಿನ್ನ ಉಪದೇಶಗಳಿಂದ ಅದೆಲ್ಲವೂ ನವೀಕೃತವಾಗಿದೆ. ಪತಿ ಶುಶ್ರೂಷೆಗಿಂತ ಬೇರೆಯಾಗಿ ಇನ್ನೊಂದು ತಪಸ್ಸು ನಾರಿಗೆ ವಿಹಿತವಾಗಿಲ್ಲ ಎಂದು.

ಸಾವಿತ್ರೀ ಪತಿಶುಶ್ರೂಷಾಂ ಕೃತ್ವಾ ಸ್ವರ್ಗೇ ಮಹೀಯತೇ ।
ತಥಾವೃತ್ತಿಶ್ಚ ಯಾತಾ ತ್ವಂ ಪತಿಶುಶ್ರೂಷಯಾ ದಿವಮ್ ॥೧೦॥

ಸಾವಿತ್ರಿಯು ಪತಿಶುಶ್ರೂಷೆಯನ್ನು ಮಾಡಿ ಸ್ವರ್ಗದಲ್ಲಿ ಪೂಜ್ಯಳಾಗಿದ್ದಾಳೆ. ಅವಳಂತೆಯೆ ನಡೆಯುವ ನೀನೂ ಕೂಡ ಪತಿಶುಶ್ರೂಷೆಯಿಂದ ಇನ್ನೊಂದು ದಿವ್ಯರೂಪದಿಂದ ಸ್ವರ್ಗವನ್ನು ಹೊಂದಿರುವೆ.

ವರಿಷ್ಠಾ ಸರ್ವನಾರೀಣಾಮೇಷಾ ಚ ದಿವಿ ದೇವತಾ ।
ರೋಹಿಣೀ ನ ವಿನಾ ಚಂದ್ರಂ ಮುಹೂರ್ತಮಪಿ ದೃಶ್ಯತೇ ॥೧೧॥

ಸ್ವರ್ಗದಲ್ಲಿ ದೇವತೆಯಾಗಿರುವ ರೋಹಿಣಿಯು ಎಲ್ಲ ನಾರಿಯರಲ್ಲಿ ಶ್ರೇಷ್ಠಳಾಗಿದ್ದು ಅವಳು ಚಂದ್ರನನ್ನು ಮುಹೂರ್ತಕಾಲವೂ ಬಿಟ್ಟಿರುವುದು ಕಂಡಿಲ್ಲ.

ಏವಂವಿಧಾಶ್ಚ ಪ್ರವರಾಃ ಸ್ತ್ರಿಯೋ ಭರ್ತೃದೃಢವ್ರತಾಃ ।
ದೇವಲೋಕೇ ಮಹೀಯಂತೇ ಪುಣ್ಯೇನ ಸ್ವೇನ ಕರ್ಮಣಾ ॥೧೨॥

ದೃಢವಾದ ಪಾತಿವ್ರತ್ಯವುಳ್ಳ ಇಂಥ ಉತ್ತಮ ಸ್ತ್ರೀಯರು ದೇವಲೋಕದಲ್ಲಿ ತಮ್ಮ ಪುಣ್ಯ ಕರ್ಮದಿಂದ ಪೂಜ್ಯರಾಗಿದ್ದಾರೆ.

ತತೋऽನಸೂಯಾ ಸಂಹೃಷ್ಟಾ ಶ್ರುತ್ವೋಕ್ತಂ ಸೀತಯಾ ವಚಃ ।
ಶಿರಸ್ಯಾಘ್ರಾಯ ಚೋವಾಚ ಮೈಥಿಲೀಂ ಹರ್ಷಯಂತ್ಯುತ ॥೧೩॥

ಸೀತೆ ಹೇಳಿದ ಈ ಮಾತನ್ನು ಕೇಳಿ ಅನಸೂಯೆ ಸಂತುಷ್ಟಳಾಗಿ ಅವಳ ನೆತ್ತಿಯನ್ನು ಆಘ್ರಾಣಿಸಿ ಅವಳನ್ನು ಸಂತೋಷಗೊಳಿಸುತ್ತ ಹೀಗೆ ನುಡಿದಳು.

ನಿಯಮೈರ್ವಿವಿಧೈರಾಪ್ತಂ ತಪೋ ಹಿ ಮಹದಸ್ತಿ ಮೇ ।
ತತ್ ಸಂಶ್ರಿತ್ಯ ಬಲಂ ಸೀತೇ ಛಂದಯೇ ತ್ವಾಂ ಶುಚಿಸ್ಮಿತೇ ॥೧೪॥

ನಾನಾವಿಧವಾದ ನಿಯಮಾನುಷ್ಠಾನಗಳಿಂದ ನಾನು ಸಂಪಾದಿಸಿರುವ ತಪಃ ಶಕ್ತಿ ನನ್ನಲ್ಲಿ ಬಹಳ ಇದೆ. ಅದರ ಬಲದಿಂದ ಶುಚಿಸ್ಮಿತೆ ಸೀತೆ! ನಾನು ನಿನಗೆ ಇಷ್ಟವಾದುದನ್ನು ಏನು ಬೇಕಾದರೂ ಕೊಡಬಲ್ಲೆ.

ಉಪಪನ್ನಂ ಮನೋಜ್ಞಂ ಚ ವಚನಂ ತವ ಮೈಥಿಲಿ ।
ಪ್ರೀತಾ ಚಾಭ್ಯುಚಿತಂ ಕಿಂ ತೇ ಕರವಾಣಿ ಬ್ರವೀಹಿ ಮೇ ॥೧೫॥

ಸೀತೆ! ನಿನ್ನ ಮಾತು ನಿನಗೆ ತಕ್ಕುದಾಗಿದೆ, ಸುಂದರವಾಗಿದೆ. ಅದರಿಂದ ಸುಪ್ರೀತಳಾಗಿದ್ದೇನೆ. ನಿನಗೆ ಉಚಿತವಾದ ಯಾವ ಇಷ್ಟವನ್ನು ನಿನಗೆ ಕೊಡಲಿ?

ತಸ್ಯಾಸ್ತದ್ವಚನಂ ಶ್ರುತ್ವಾ ವಿಸ್ಮಿತಾ ಮಂದವಿಸ್ಮಯಾ ।
ಕೃತಮಿತ್ಯಬ್ರವೀತ್ ಸೀತಾ ತಪೋಬಲಸಮನ್ವಿತಾಮ್ ॥೧೬॥

ಅನಸೂಯೆ ಹೇಳಿದ ಮಾತನ್ನು ಕೇಳಿ ಸೀತೆ ವಿಸ್ಮಿತಳಾದಳು. ಮಂದಹಾಸ ಬೀರಿದಳು. ತಪೋಬಲಸಂಪನ್ನಳಾದ ಅನಸೂಯಾದೇವಿಗೆ 'ನಿನ್ನ ಅನುಗ್ರಹ ಒಂದರಿಂದಲೇ ಎಲ್ಲವೂ ದೊರೆತಂತಾಯಿತು' ಎಂದಳು.

ಸಾ ತ್ವೇವಮುಕ್ತಾ ಧರ್ಮಜ್ಞಾ ತಯಾ ಪ್ರೀತರಾಭವತ್ ।
ಸಫಲಂ ಚ ಪ್ರಹರ್ಷಂ ತೇ ಹಂತ ಸೀತೇ ಕರೋಮ್ಯಹಮ್ ॥೧೭॥

ಸೀತೆ ಹೀಗೆ ಹೇಳಿದಾಗ ಧರ್ಮಜ್ಞಳಾದ ಅನಸೂಯೆ ಇನ್ನಷ್ಟು ಸುಪ್ರೀತಳಾದಳು. 'ಸೀತೆ, ನಿನ್ನ ಈ ಸಂತೋಷವನ್ನು ನಾನು ಸಫಲಗೊಳಿಸುವೆನು'.

ಇದಂ ದಿವ್ಯಂ ವರಂ ಮಾಲ್ಯಂ ವಸ್ತ್ರಮಾಭರಣಾನಿ ಚ ।
ಅಂಗರಾಗಂ ಚ ವೈದೇಹಿ ಮಹಾರ್ಹಂ ಚಾನುಲೇಪನಮ್ ॥೧೮॥

ಇಗೋ ಇದು ದಿವ್ಯವಾದ ಶ್ರೇಷ್ಠವಾದ ಮಾಲೆ. ಇವು ವಸ್ತ್ರಾಭರಣಗಳು. ಇದು ಮೈಗೆ ಪೂಸಿಕೊಳ್ಳಲು ಯೋಗ್ಯವಾದ ದಿವ್ಯವಾದ ಸುಗಂಧದ್ರವ್ಯ.

ಮಯಾ ದತ್ತಮಿದಂ ಸೀತೇ ತವ ಗಾತ್ರಾಣಿ ಶೋಭಯೇತ್ ।
ಅನುರೂಪಮಸಂಕ್ಲಿಷ್ಟಂ ನಿತ್ಯಮೇವ ಭವಿಷ್ಯತಿ ॥೧೯॥

ಇದೆಲ್ಲವೂ ನಿನಗೆ ನಾನು ಕೊಟ್ಟಿದ್ದು ನಿನ್ನ ಮೈಗೆ ಶೋಭೆ ನೀಡುತ್ತದೆ. ಅನುರೂಪವಾಗಿದೆ, ಹಾಳಾಗದೆ ಇರುತ್ತದೆ, ನಿತ್ಯವಾಗಿರುತ್ತದೆ.

ಅಂಗರಾಗೇಣ ದಿವ್ಯೇನ ಲಿಪ್ತಾಂಗೀ ಜನಕಾತ್ಮಜೇ ।
ಶೋಭಯಿಷ್ಯಸಿ ಭರ್ತಾರಂ ಯಥಾ ಶ್ರೀರ್ವಿಷ್ಣುಮವ್ಯಯಮ್ ॥೨೦॥

ಜನಕಕುಮಾರಿ, ದಿವ್ಯವಾದ ಅಂಗರಾಗದಿಂದ ಮೈಗೆ ಪೂಸಿಕೊಂಡು ಶ್ರೀದೇವಿ ವಿಷ್ಣುವನ್ನು ಹೇಗೋಹಾಗೆ ನೀನು ನಿನ್ನ ಪತಿಯನ್ನು ಆಹ್ಲಾದಪಡಿಸುವೆ.

ಸಾ ವಸ್ತ್ರಮಂಗರಾಗಂ ಚ ಭೂಷಣಾನಿ ಸ್ರಜಸ್ತಥಾ ।
ಮೈಥಿಲೀ ಪ್ರತಿಜಗ್ರಾಹ ಪ್ರೀತಿದಾನಮನುತ್ತಮಮ್ ॥೨೧॥

ಆ ವಸ್ತ್ರ ಅಂಗರಾಗ ಆಭರಣಮಾಲೆಗಳನ್ನು ಸೀತೆ ಉತ್ತಮ ಉಡುಗೊರೆಯಾಗಿ ಸ್ವೀಕರಿಸಿದಳು.

ಕ್ಷತ್ರಿಯಳಾದ್ದರಿಂದ ಅವಳು ದಾನ ತೆಗೆದುಕೊಳ್ಳಬಾರದು. ಆದರೆ ಪ್ರೀತಿಯ ಉಡುಗೊರೆ ಬಳುವಳಿಗಳನ್ನು ತೆಗೆದುಕೊಂಡರೆ ದೋಷವಿಲ್ಲ.

ಪ್ರತಿಗೃಹ್ಯ ಚ ತತ್ ಸೀತಾ ಪ್ರೀತಿದಾನಂ ಯಶಸ್ವಿನೀ ।
ಶ್ಲಿಷ್ಟಾಂಜಲಿಪುಟಾ ತತ್ರ ಸಮುಪಾಸ್ತ ತಪೋಧನಾಮ್ ॥೨೨॥

ಯಶಸ್ವಿನಿಯಾದ ಸೀತೆ ಆ ಬಳುವಳಿಯನ್ನು ಸ್ವೀಕರಿಸಿ ಕೈಮುಗಿದು ತಪೋಧನ-ಳಾದ ಅನಸೂಯೆಯ ಸಮೀಪದಲ್ಲಿ ಕುಳಿತಳು.

ತಥಾ ಸೀತಾಮುಪಾಸೀನಾಮನಸೂಯಾ ದೃಢವ್ರತಾ ।
ವಚನಂ ಪ್ರಷ್ಟುಮಾರೇಭೇ ಕಥಾಂ ಕಾಂಚಿದನು ಪ್ರಿಯಾಮ್ ॥೨೩॥

ಬಳಿಯಲ್ಲಿ ಕುಳಿತ ಸೀತೆಗೆ ದೃಢವ್ರತಳಾದ ಅನಸೂಯೆ ತನಗೆ ಪ್ರಿಯವಾದ ಒಂದು ಕಥೆಯನ್ನು ಕೇಳಲು ಬಯಸಿ ಪ್ರಶ್ನೆ ಮಾಡಲು ತೊಡಗಿದಳು.

ಸ್ವಯಂವರೇ ಕಿಲ ಪ್ರಾಪ್ತಾ ತ್ವಮನೇನ ಯಶಸ್ವಿನಾ ।
ರಾಘವೇಣೇತಿ ಮೇ ಸೀತೇ ಕಥಾ ಶ್ರುತಿಮುಪಾಗತಾ ॥೨೪॥

ಯಶಸ್ವಿಯಾದ ಈ ರಾಮನು ಸ್ವಯಂವರದಿಂದ ನಿನ್ನನ್ನು ಪಡೆದುಕೊಂಡನೆಂದು ಕಥೆಯನ್ನು ಕೇಳಿದ್ದೇನೆ.

ತಾಂ ಕಥಾಂ ಶ್ರೋತುಮಿಚ್ಛಾಮಿ ವಿಸ್ತರೇಣ ಚ ಮೈಥಿಲಿ ।
ಯಥಾನುಭೂತಂ ಕಾರ್ತ್ಸ್ನ್ಯೇನ ತನ್ಮೇ ತ್ವಂ ವಕ್ತುಮರ್ಹಸಿ ॥೨೫॥

ಆ ಕಥೆಯನ್ನು ವಿಸ್ತಾರವಾಗಿ ನಿನ್ನಿಂದ ಕೇಳಲು ಬಯಸುತ್ತೇನೆ. ಅದೆಲ್ಲವನ್ನೂ ನೀನು ಅನುಭವಿಸಿದಂತೆ ನನಗೆ ಹೇಳು.

ಏವಮುಕ್ತಾ ತು ಸಾ ಸೀತಾ ತಾಂ ತತೋ ಧರ್ಮಚಾರಿಣೀಮ್ ।
ಶ್ರೂಯತಾಮಿತಿ ಚೋಕ್ತ್ವಾ ವೈ ಕಥಯಾಮಾಸ ತಾಂ ಕಥಾಮ್ ॥೨೬॥

ಅನಸೂಯೆ ಹೀಗೆ ಹೇಳಿದಾಗ ಸೀತೆ ಧರ್ಮಚಾರಿಣಿಯಾದ ಅನಸೂಯೆಗೆ 'ಕೇಳು' ಎಂದು ಹೇಳಿ ಆ ಕಥೆಯನ್ನು ಹೇಳಿದಳು.

ಮಿಥಿಲಾಧಿಪತಿರ್ವೀರೋ ಜನಕೋ ನಾಮ ಧರ್ಮವಿತ್ ।
ಕ್ಷತ್ರಧರ್ಮೇ ಹ್ಯಭಿರತೋ ನ್ಯಾಯತಃ ಶಾಸ್ತಿ ಮೇದಿನೀಮ್ ॥೨೭॥

ಧರ್ಮಜ್ಞನಾದ ಕ್ಷಾತ್ರಧರ್ಮದಲ್ಲಿ ನಿರತನಾದ ಜನಕನೆಂಬ ವೀರನು ಮಿಥಿಲೆಯ ಅಧಿಪತಿ, ನ್ಯಾಯವಾಗಿ ಭೂಮಿಯನ್ನು ಆಳುತ್ತಿದ್ದಾನೆ.

ತಸ್ಯ ಲಾಂಗಲಹಸ್ತಸ್ಯ ಕೃಷತಃ ಕ್ಷೇತ್ರಮಂಡಲಮ್ ।
ಅಹಂ ಕಿಲೋತ್ಥಿತಾ ಭಿತ್ವಾ ಜಗತೀಂ ನೃಪತೇಃ ಸುತಾ ॥೨೮॥

ಅವನು ನೇಗಿಲನ್ನು ಹಿಡಿದು ಯಾಗಭೂಮಿಯನ್ನು ಉಳುವಾಗ ಭೂಮಿ ಯನ್ನು ಭೇದಿಸಿ ನಾನು ಹೊರಗೆ ಬಂದು ರಾಜನ ಮಗಳೆನಿಸಿದೆನು.

ಸ ಮಾಂ ದೃಷ್ಟ್ವಾ ನರಪತಿರ್ಮುಷ್ಟಿವಿಕ್ಷೇಪತತ್ಪರಃ ।
ಪಾಂಸುಕುಂಠಿತಸರ್ವಾಂಗೀಂ ಜನಕೋ ವಿಸ್ಮಿತೋಽಭವತ್ ॥೨೯॥

ಮುಷ್ಟಿಯಲ್ಲಿ ಧಾನ್ಯದ ಬೀಜಗಳನ್ನು ಹಿಡಿದು ಅವುಗಳನ್ನು ಬಿತ್ತುವಾಗ ಮೈಯೆಲ್ಲ ಮಣ್ಣಿನಿಂದ ತುಂಬಿದ್ದ ನನ್ನನ್ನು ಕಂಡು ರಾಜಾ ಜನಕನು ಅಚ್ಚರಿ ಗೊಂಡನು.

ವಸಂತದಲ್ಲಿ ಅಗ್ನಿಚಯನ ಎಂಬ ಯಾಗವನ್ನು ಮಾಡುವುದಕ್ಕೆ ಒಂದು ವರ್ಷ ಮೊದಲೇ ಸಂಕಲ್ಪಮಾಡಿ ಒಂದು ನೇಗಿಲಿಗೆ ಆರು ಅಥವಾ ಹನ್ನೆರಡು ಎತ್ತುಗಳನ್ನು ಕಟ್ಟಿ ಉತ್ತು ನೀರೆರೆದು ಹನ್ನೆರಡು ನೇಗಿಲ ಸಾಲುಗಳಲ್ಲಿ ಎಳ್ಳು ಉದ್ದು ಬತ್ತ ಯವ ಪ್ರಿಯಂಗು ಅಣು ಗೋದಿ ಎಂಬ ಏಳು ಬಗೆಯ ಗ್ರಾಮ್ಯ ಔಷಧಿ ಬೀಜಗಳನ್ನೂ ವೇಣುಶ್ಯಾಮಾಕ ನೀವಾರ ಅರಣ್ಯತಿಲ ಅರಣ್ಯಗೋಧೂಮ ಮರ್ಕಟಕ ಅರಣ್ಯ ಮುದ್ಗಗಳೆಂಬ ಏಳು ಬಗೆಯ ಆರಣ್ಯಧಾನ್ಯ ಬೀಜಗಳನ್ನೂ ಬಿತ್ತಬೇಕು. ಗ್ರಾಮ್ಯ ಬೀಜಗಳನ್ನು ಉತ್ತ ನೆಲದಲ್ಲಿಯೂ ಆರಣ್ಯ ಬೀಜಗಳನ್ನು ಬೇರೆ ನೆಲದಲ್ಲಿಯೂ ನೀರೆರೆದು ಬಿತ್ತಬೇಕು. ಆಗ

'ಯಾಜಾತಾ ಓಷಧಯೋ ದೇವೇಭ್ಯಸ್ತ್ರಿಯುಗಂ ಪುರಾ'

ಇತ್ಯಾದಿ ಹದಿನಾಲ್ಕು ಮಂತ್ರಗಳಿಂದ ಹದಿನಾಲ್ಕು ಬಗೆಯ ಬೀಜಗಳನ್ನು ಬಿತ್ತಬೇಕು. ಎಂದು ವಿಧಿ ಇದೆ.

ಅನಪತ್ಯೇನ ಚ ಸ್ನೇಹಾದಂಕಮಾರೋಪ್ಯ ಚ ಸ್ವಯಮ್ ।
ಮಮೇಯಂ ತನಯೇತ್ಯುಕ್ತ್ವಾ ಸ್ನೇಹೋ ಮಯಿ ನಿಪಾತಿತಃ ॥೩೦॥

ಮಕ್ಕಳಿಲ್ಲದ ಜನಕನು ಪ್ರೀತಿಯಿಂದ ನನ್ನನ್ನು ಸ್ವಯಂ ಎತ್ತಿಕೊಂಡು 'ನನ್ನ ಮಗಳು' ಎಂದು ಹೇಳಿ ನನ್ನಲ್ಲಿ ಪ್ರೀತಿ ಇಟ್ಟನು.

ಅಂತರಿಕ್ಷೇ ಚ ವಾಗುಕ್ತಾ ಪ್ರತಿ ಮಾಽಮಾನುಷೀ ಕಿಲ ।
ಏವಮೇತನ್ನರಪತೇ ಧರ್ಮೇಣ ತನಯಾ ತವ ॥೩೧॥

ಅಂತರಿಕ್ಷದಲ್ಲಿ 'ಮಹಾರಾಜ, ನೀನು ಹೇಳಿದ್ದು ಸರಿ. ನಿನ್ನ ಕ್ಷೇತ್ರದಲ್ಲಿ ಇವಳು ಜನಿಸಿದ್ದರಿಂದ ಧರ್ಮದಿಂದ ಇವಳು ನಿನ್ನ ಮಗಳೆ' ಎಂದು ಅಶರೀರವಾಣಿ ನುಡಿಯಿತು.

ತತಃ ಪ್ರಹೃಷ್ಟೋ ಧರ್ಮಾತ್ಮಾ ಪಿತಾ ಮೇ ಮಿಥಿಲಾಧಿಪಃ ।
ಅವಾಪ್ತೋ ವಿಪುಲಾಮೃದ್ಧಿಂ ಮಾಮವಾಪ್ಯ ನರಾಧಿಪಃ ॥೩೨॥

ಆಗ ಧರ್ಮಾತ್ಮನಾದ ನನ್ನ ತಂದೆ ಮಿಥಿಲಾಧಿಪನು ಸಂತುಷ್ಟನಾದನು. ನನ್ನನ್ನು ಮಗಳಾಗಿ ಪಡೆದ ಅನಂತರ ರಾಜನು ವಿಪುಲವಾದ ಸಂಪತ್ತನ್ನು ಪಡೆದನು.

ದತ್ತಾ ಚಾಸ್ಮೀಷ್ಟವದ್ದೇವ್ಯೈ ಜ್ಯೇಷ್ಠಾಯೈ ಪುಣ್ಯಕರ್ಮಣಾ ।
ತಯಾ ಸಂಭಾವಿತಾ ಚಾಸ್ಮಿ ಸ್ನಿಗ್ಧಯಾ ಮಾತೃಸೌಹೃದಾತ್ ॥೩೩॥

ಪುಣ್ಯಕರ್ಮಿಯಾದ ಜನಕನು ತನಗೆ ಇಷ್ಟಳಾದ ಜ್ಯೇಷ್ಠ ಪತ್ನಿಗೆ ನನ್ನನ್ನು ಕೊಟ್ಟನು. ಅವಳೂ ಪ್ರೀತಿಯಿಂದ ಮಾತೃವಾತ್ಸಲ್ಯದಿಂದ ನನ್ನನ್ನು ಆರೈಕೆ ಮಾಡಿದಳು.

ಪತಿಸಂಯೋಗಸುಲಭಂ ವಯೋ ದೃಷ್ಟ್ವಾ ತು ಮೇ ಪಿತಾ ।
ಚಿಂತಾಮಭ್ಯಗಮದ್ದೀನೋ ವಿತ್ತನಾಶಾದಿವಾಧನಃ ॥೩೪॥

ನನಗೆ ಪತಿಯನ್ನು ಪಡೆಯುವ ವಯಸ್ಸಾದುದನ್ನು ಕಂಡು ನನ್ನ ತಂದೆ ದರಿದ್ರನು ಧನನಾಶದಿಂದ ದೀನನಾಗಿ ಚಿಂತೆಗೊಳಗಾಗುವಂತೆ ಚಿಂತಿಸಲು ತೊಡಗಿದನು.

ಪ್ರೀತಿಯ ಮಗಳನ್ನು ಮದುವೆ ಮಾಡಿ ಕೊಟ್ಟು ಬಿಟ್ಟರೆ ಧನನಾಶದಿಂದ ದರಿದ್ರನಿಗಾಗುವಷ್ಟೇ ದುಃಖವಾಗುತ್ತದೆ. ಇದೀಗ ಸೀತೆಗೆ ಮದುವೆಯಾಗುವ ವಯಸ್ಸು.

'ಅಷ್ಟಾದಶ ಹಿ ವರ್ಷಾಣಿ ಮಮ ಜನ್ಮನಿ ಗಣ್ಯತೇ'

ವನವಾಸಕ್ಕೆ ಹೊರಡುವಾಗ ನನಗೆ ಹದಿನೆಂಟು ವರ್ಷ ವಯಸ್ಸು ಎಂದು (ಅರಣ್ಯಕಾಂಡ 47.10) ಸೀತೆ ಹೇಳುವುದರರಿಂದ ಸೀತೆಗೆ ಆರು ವರ್ಷ ವಯಸ್ಸಾದೊಡನೆ ಮದುವೆಯಾಯಿತು. ಏಕೆಂದರೆ ಮದುವೆಯಾದ ಬಳಿಕ ಹನ್ನೆರಡು ವರ್ಷಕಾಲ ಅಯೋಧ್ಯೆಯಲ್ಲಿದ್ದಳು.

ಸದೃಶಾಚ್ಚಾಪಕೃಷ್ಟಾಚ್ಚ ಲೋಕೇ ಕನ್ಯಾಪಿತಾ ಜನಾತ್ ।
ಪ್ರಧರ್ಷಣಮವಾಪ್ನೋತಿ ಶಕ್ರೇಣಾಪಿ ಸಮೋ ಭುವಿ ॥೩೫॥

ಕನ್ಯಾಪಿತನು ಭೂಮಿಯಲ್ಲಿ ಇಂದ್ರನಿಗೆ ಸಮಾನನಾದರೂ ಅವನು ಕನ್ಯೆಗೆ ಮದುವೆ ಮಾಡದಿದ್ದರೆ ಲೋಕದಲ್ಲಿ ಅವನನ್ನು ಸದೃಶನಾದ ಅಥವಾ ಕಡಿಮೆ-ಯವನಾದ ಕನ್ಯಾರ್ಥಿಯೂ ಬಲಾತ್ಕಾರ ಮಾಡಬಹುದು. ಇನ್ನು ಪ್ರಬಲನಾದ ಕನ್ಯಾರ್ಥಿಯ ಬಗ್ಗೆ ಬೇರೆ ಏನು ಹೇಳಬೇಕು?

ತಾಂ ಧರ್ಷಣಾಮದೂರಸ್ಥಾಂ ದೃಷ್ಟ್ವಾ ಚಾತ್ಮನಿ ಪಾರ್ಥಿವಃ ।
ಚಿಂತಾರ್ಣವಗತಃ ಪಾರಂ ನಾಸಸಾದಾಪ್ಲವೋ ಯಥಾ ॥೩೬॥

ಬಲಾತ್ಕಾರ ಮಾಡುವ ಕಾಲವು ಹತ್ತಿರದಲ್ಲಿಯೇ ಇರುವುದನ್ನು ಕಂಡ ರಾಜಾ ಜನಕನು ಮನಸಿನಲ್ಲಿ ಚಿಂತಾಸಾಗರದಲ್ಲಿ ಮುಳುಗುತ್ತ ದೋಣಿ ಇಲ್ಲದವನಂತೆ ಪಾರಗಾಣದವನಾದ.

ಅಯೋನಿಜಾಂ ಹಿ ಮಾಂ ಜ್ಞಾತ್ವಾ ನಾಧ್ಯಗಚ್ಛದ್ವಿಚಿಂತಯನ್ ।
ಸದೃಶಂ ಚಾನುರೂಪಂ ಚ ಮಹೀಪಾಲಃ ಪತಿಂ ಮಮ ॥೩೭॥

ನಾನು ಅಯೋನಿಜೆ ಎಂದು ತಿಳಿದಿದ್ದ ರಾಜನಿಗೆ ಎಷ್ಟು ಆಲೋಚಿಸಿದರೂ ನನಗೆ ಸದೃಶನೂ ಅನುರೂಪನೂ ಆದ ವರನು ಸಿಗಲಿಲ್ಲ.

ತಸ್ಯ ಬುದ್ಧಿರಿಯಂ ಜಾತಾ ಚಿಂತಯಾನಸ್ಯ ಸಂತತಮ್ ।
ಸ್ವಯಂವರಂ ತನೂಜಾಯಾಃ ಕರಿಷ್ಯಾಮೀತಿ ಧೀಮತಃ ॥೩೮॥

ಸತತವಾಗಿ ಆಲೋಚನೆ ಮಾಡಿದ ಬಳಿಕ 'ತಾನು ಮಗಳಿಗೆ ಸ್ವಯಂವರ ಮಾಡಿಸಬೇಕು' ಎನ್ನುವ ಆಲೋಚನೆ ಉಂಟಾಯಿತು.

ಮಹಾಯಜ್ಞೇ ತದಾ ತಸ್ಯ ವರುಣೇನ ಮಹಾತ್ಮನಾ ।
ದತ್ತಂ ಧನುರ್ವರಂ ಪ್ರೀತ್ಯಾ ತೂಣೇ ಚಾಕ್ಷಯಸಾಯಕೌ ॥೩೯॥

ಬಳಿಕ ತಂದೆಯು ಮಹಾಯಜ್ಞವೊಂದನ್ನು ಮಾಡಿದಾಗ ದೇವತೆಗಳಿಂದ ಪ್ರೇರಿತನಾದ ಮಹಾತ್ಮನಾದ ವರುಣನು ಅವನಿಗೆ ಉತ್ತಮವಾದ ಒಂದು ಶಿವಧನುಸ್ಸನ್ನೂ ಅಕ್ಷಯಬಾಣಗಳ ಎರಡು ಬತ್ತಳಿಕೆಗಳನ್ನೂ ಕೊಟ್ಟನು.

ಅಸಂಚಾಲ್ಯಂ ಮನುಷ್ಯೈಶ್ಚ ಯತ್ನೇನಾಪಿ ಚ ಗೌರವಾತ್ ।
ತನ್ನ ಶಕ್ತಾ ನಮಯಿತುಂ ಸ್ವಪ್ನೇಷ್ವಪಿ ನರಾಧಿಪಾಃ ॥೪೦॥

ಆ ಧನುಸ್ಸು ಭಾರದಿಂದ ಮನುಷ್ಯರಿಗೆ ಅಲ್ಲಾಡಿಸಲಾಗದಂತಿತ್ತು. ಪ್ರಯತ್ನದಿಂದ ಅಲ್ಲಾಡಿಸಿದರೂ ಎತ್ತಿ ಬಗ್ಗಿಸಿ ಹೆದೆಯೇರಿಸಲು ಅವರಿಗೆ ಸ್ವಪ್ನದಲ್ಲಿಯೂ ಸಾಧ್ಯ-ವಿರಲಿಲ್ಲ.

ತದ್ಧನುಃ ಪ್ರಾಪ್ಯ ಮೇ ಪಿತ್ರಾ ವ್ಯಾಹೃತಂ ಸತ್ಯವಾದಿನಾ ।
ಸಮವಾಯೇ ನರೇಂದ್ರಾಣಾಂ ಪೂರ್ವಮಾಮಂತ್ರ್ಯ ಪಾರ್ಥಿವಾನ್ ॥

ಆ ಧನುಸ್ಸನ್ನು ಪಡೆದ ಬಳಿಕ ಸತ್ಯವಾದಿಯಾದ ನನ್ನ ತಂದೆ ಎಲ್ಲ ರಾಜರನ್ನು ಕರೆದು ರಾಜರ ಸಭೆಯಲ್ಲಿ ಘೋಷಣ ಮಾಡಿದನು.

ಇದಂ ಚ ಧನುರುದ್ಯಮ್ಯ ಸಜ್ಯಂ ಯಃ ಕುರುತೇ ನರಃ
ತಸ್ಯ ಮೇ ದುಹಿತಾ ಭಾರ್ಯಾ ಭವಿಷ್ಯತಿ ನ ಸಂಶಯಃ ॥೪೨॥

ಈ ಶಿವಧನುಸ್ಸನ್ನು ಎತ್ತಿ ಬಗ್ಗಿಸಿ ಯಾರು ಹೆದೆಯೇರಿಸುವನೋ ಅವನಿಗೆ ನನ್ನ ಮಗಳು ಪತ್ನಿಯಾಗುವಳು, ಸಂಶಯವಿಲ್ಲ ಎಂದು.

ತಸ್ಯ ದೃಷ್ಟ್ವಾ ಧನುಃಶ್ರೇಷ್ಠಂ ಗೌರವಾದ್ಗಿರಿಸಂನಿಭಮ್।
ಅಭಿವಾದ್ಯ ನೃಪಾ ಜಗ್ಮುರಶಕ್ತಾಸ್ತಸ್ಯ ತೋಲನೇ ॥೪೩॥

ಭಾರದಿಂದ ಬೆಟ್ಟಕ್ಕೆ ಸಮವಾಗಿದ್ದ ತಂದೆಯ ಶ್ರೇಷ್ಠಧನುಸ್ಸನ್ನು ಎತ್ತಲು ಅಶಕ್ತರಾಗಿ ಅದಕ್ಕೆ ನಮಸ್ಕಾರಮಾಡಿ ರಾಜರು ಹೊರಟು ಹೋದರು.

ಸುದೀರ್ಘಸ್ಯಾಥ ಕಾಲಸ್ಯ ರಾಘವೋಽಯಂ ಮಹಾದ್ಯುತಿಃ ।
ವಿಶ್ವಾಮಿತ್ರೇಣ ಸಹಿತೋ ಯಜ್ಞಂ ದ್ರಷ್ಟುಂ ಸಮಾಗತಃ ।
ಲಕ್ಷ್ಮಣೇನ ಸಹ ಭ್ರಾತ್ರಾ ರಾಮಃ ಸತ್ಯಪರಾಕ್ರಮಃ ॥೪೪॥

ಬಹಳ ದೀರ್ಘಕಾಲಾನಂತರ ವಿಶ್ವಾಮಿತ್ರರಿಂದ ಕೂಡಿದ್ದವನು ಸತ್ಯ ಪರಾಕ್ರಮ ಉಳ್ಳವನು ಮಹಾಕಾಂತಿಯುಳ್ಳವನು ಈ ರಾಮನು ಸೋದರ ಲಕ್ಷ್ಮಣನೊಂದಿಗೆ ಆ ಯಜ್ಞವನ್ನು ನೋಡಲು ಬಂದನು.

ವಿಶ್ವಾಮಿತ್ರಸ್ತು ಧರ್ಮಾತ್ಮಾ ಮಮ ಪಿತ್ರಾ ಸುಪೂಜಿತಃ ॥೪೫॥

ವಿಶ್ವಾಮಿತ್ರರು ಧರ್ಮಾತ್ಮರು. ಅವರನ್ನು ತಂದೆ ಸತ್ಕರಿಸಿದನು.

ಪ್ರೋವಾಚ ಪಿತರಂ ತತ್ರ ಭ್ರಾತರೌ ರಾಮಲಕ್ಷ್ಮಣೌ ।
ಸುತೌ ದಶರಥಸ್ಯೇಮೌ ಧನುರ್ದರ್ಶನಕಾಂಕ್ಷಿಣೌ ॥೪೬॥

ಆಗ ವಿಶ್ವಾಮಿತ್ರರು ತಂದೆಗೆ ಹೇಳಿದರು— ಈ ರಾಮಲಕ್ಷ್ಮಣರು ಸೋದರರು ದಶರಥರಾಜನ ಪುತ್ರರು ಧನುಸ್ಸನ್ನು ನೋಡಲು ಬಯಸುತ್ತಾರೆ.

ಧನುರ್ದರ್ಶಯ ರಾಮಾಯ ರಾಜಪುತ್ರಾಯ ದೈವಿಕಮ್ ॥೪೭॥

ದೈವಿಕವಾದ ಧನುಸ್ಸನ್ನು ರಾಜಕುಮಾರ ರಾಮನಿಗೆ ತೋರಿಸು.

ಇತ್ಯುಕ್ತಸ್ತೇನ ವಿಪ್ರೇಣ ತದ್ಧನುಃ ಸಮುಪಾನಯಾತ್
ನಿಮೇಷಾಂತರಮಾತ್ರೇಣ ತದಾನಮ್ಯ ಸವೀರ್ಯವಾನ್ ।
ಜ್ಯಾಂ ಸಮಾರೋಪ್ಯ ರುಟಿತಿ ಪೂರಯಾಮಾಸ ವೀರ್ಯವಾನ್ ॥೪೮

ವಿಶ್ವಾಮಿತ್ರರು ಹೀಗೆ ಹೇಳಿದಾಗ ತಂದೆ ಆ ಧನುಸ್ಸನ್ನು ತರಿಸಿದನು. ವೀರ್ಯ-ವಂತನಾದ ರಾಮನು ವೀರ್ಯವಂತರಾದ ರಾಜರೆಲ್ಲರೂ ನೋಡುತ್ತಿದ್ದಂತೇ ಕಣ್ಣುಮುಚ್ಚಿ ತೆರೆಯುವುದರೊಳಗೆ ಬಿಲ್ಲನ್ನು ಬಗ್ಗಿಸಿ ಕೂಡಲೆ ಹೆದೆಯೇರಿಸಿದನು.

ಪಶ್ಯತಾಂ ನೃಸಹಸ್ರಾಣಾಂ ಬಹೂನಾಂ ರಘುನಂದನಃ ।
ಆರೋಪಯತ್ ಸ ಧರ್ಮಾತ್ಮಾ ಸಲೀಲಮಿವ ತದ್ಧನುಃ ॥ (ಬಾಲ.67.16)

'ಸಾವಿರಾರು ಮಂದಿ ಪ್ರೇಕ್ಷಕರಾಗಿ ನಿಂತು ನೋಡುತ್ತಿರುವಾಗಲೇ ಶ್ರೀರಾಮನು ಧನುರ್ಭಂಗ ಮಾಡಿದನೆಂ'ದು ಬಾಲಕಾಂಡದಲ್ಲಿ ಹೇಳಿದ್ದನ್ನು 'ಸವೀರ್ಯವಾನ್' ಎಂಬ ಒಂದೇ ಶಬ್ದದಿಂದ ಚಮತ್ಕಾರವಾಗಿ ಇಲ್ಲಿ ಸೀತೆ ಹೇಳುತ್ತಿದ್ದಾಳೆ—

'ಸವೀರ್ಯವಾನ್' ಎಂದು ಒಂದೇ ಪದ. 'ವೀರ್ಯವಂತರಾದ ಪ್ರೇಕ್ಷಕರಿಂದ ಕೂಡಿದ' ಶ್ರೀರಾಮನು ಅವರೆಲ್ಲರೂ ನೋಡುತ್ತಿದ್ದಂತೇ ಧನುಸ್ಸಿಗೆ ಹೆದೆ ಏರಿಸಿದ' ಎಂದರ್ಥ. ಸಹಪೂರ್ವಪದ ಬಹುವ್ರೀಹಿ. ಅದರಿಂದ ಇದು ಏಕಾಂತದಲ್ಲಿ ನಡೆದ ಪ್ರಸಂಗವಲ್ಲ ಎಂದು ಹೇಳಿದಂತಾಯಿತು. ಹೀಗೆ ಹೇಳದಿದ್ದರೆ,

ತದಾನಮ್ಯ ಸ ವೀರ್ಯವಾನ್
ಪೂರಯಾಮಾಸ ವೀರ್ಯವಾನ್

ಎಂದು ವ್ಯರ್ಥಪುನರುಕ್ತಿಯಾಗುತ್ತಿತ್ತು. ಯದ್ಯಪಿ 'ತದಾನಮ್ಯಮಹಾ ಬಲಃ' ಎಂದೂ ಪಾಠಾಂತರವಿದೆ. ಅದಕ್ಕಿಂತ ಮೇಲಿನ ಪಾಠವೇ ಹೆಚ್ಚು ಅರ್ಥ-ಗರ್ಭಿತವಾಗತ್ತದೆ. ಹೀಗೆ ಸತ್ಯಧರ್ಮತೀರ್ಥರ ವ್ಯಾಖ್ಯಾನವಿದೆ.

ತೇನ ಪೂರಯತಾ ವೇಗಾನ್ಮಧ್ಯೇ ಭಗ್ನಂ ದ್ವಿಧಾ ಧನುಃ ।
ತಸ್ಯ ಶಬ್ದೋಽಭವದ್ಭೀಮಃ ಪತಿತಸ್ಯಾಶನೇರಿವ ॥೪೯॥

ಶ್ರೀರಾಮನು ವೇಗದಿಂದ ಹೆದೆಯೇರಿಸುವಾಗ ಆ ಶಿವಧನುಸ್ಸು ಮಧ್ಯದಲ್ಲಿ ಎರಡು ಭಾಗವಾಗಿ ಮುರಿಯಿತು. ಆಗ ಸಿಡಿಲು ಎರಗಿದಂಥ ಭಯಂಕರವಾದ ಶಬ್ದ ಉಂಟಾಯಿತು.

ತತೋಽಹಂ ತತ್ರ ರಾಮಾಯ ಪಿತ್ರಾ ಸತ್ಯಾಭಿಸಂಧಿನಾ ।
ನಿಶ್ಚಿತಾ ದಾತುಮುದ್ಯಮ್ಯ ಜಲಭಾಜನಮುತ್ತಮಮ್ ॥೫೦॥

ಸತ್ಯಪ್ರತಿಜ್ಞನಾದ ನನ್ನ ತಂದೆ ನನ್ನನ್ನು ಶ್ರೀರಾಮನಿಗೆ ಕೊಡಲು ನಿಶ್ಚಯಿಸಿದನು. ಮತ್ತು ಉತ್ತಮವಾದ ಜಲಕುಂಭವನ್ನೆತ್ತಿಕೊಂಡು ಧಾರೆಯೆರೆದು ಕೊಡಲು ಉದ್ಯುಕ್ತನಾದನು.

ದೀಯಮಾನಾಂ ನ ತು ತದಾ ಪ್ರತಿಜಗ್ರಾಹ ರಾಘವಃ ।
ಅವಿಜ್ಞಾಯ ಪಿತುಶ್ಛಂದಮಯೋಧ್ಯಾಧಿಪತೇಃ ಪ್ರಭೋಃ ॥೫೧॥

ಆದರೆ ಅಯೋಧ್ಯಾಧಿಪತಿ ಪ್ರಭುವಾದ ತನ್ನ ತಂದೆಯ ಅಭಿಪ್ರಾಯವನ್ನು ತಿಳಿಯದೆ, ನನ್ನ ತಂದೆ ನನ್ನನ್ನು ಕೊಡುತ್ತಿದ್ದರೂ, ರಾಮನು ಸ್ವೀಕರಿಸಲಿಲ್ಲ.

ತತಃ ಶ್ವಶುರಮಾಮಂತ್ರ್ಯ ವೃದ್ಧಂ ದಶರಥಂ ನೃಪಮ್ ।
ಮಮ ಪಿತ್ರಾ ತ್ವಹಂ ದತ್ತಾ ರಾಮಾಯ ವಿದಿತಾತ್ಮನೇ ॥೫೨॥

ಬಳಿಕ ನನ್ನ ಮಾವನಾದ ವೃದ್ಧನಾದ ದಶರಥ ರಾಜನನ್ನು ಕರೆಸಿಕೊಂಡು ಅವನ ಉಪಸ್ಥಿತಿಯಲ್ಲಿ ನನ್ನನ್ನು ಆತ್ಮಜ್ಞನಾದ ರಾಮನಿಗೆ ನನ್ನ ತಂದೆ ಧಾರೆಯೆರೆದು ಕೊಟ್ಟನು.

ಮಮ ಚೈವಾನುಜಾ ಸಾಧ್ವೀ ಊರ್ಮಿಲಾ ಪ್ರಿಯದರ್ಶನಾ ।
ಭಾರ್ಯಾರ್ಥೇ ಲಕ್ಷ್ಮಣಸ್ಯಾಪಿ ದತ್ತಾ ಪಿತ್ರಾ ಮಮ ಸ್ವಯಮ್ ॥೫೩॥

ನನ್ನ ತಂಗಿ ನೋಡಲು ಸುಂದರಿ ಸಾಧ್ವಿ ಅವಳನ್ನು ಕೂಡ ನಮ್ಮ ತಂದೆ ಸ್ವಯಂ ಲಕ್ಷ್ಮಣನಿಗೆ ಪತ್ನಿಯಾಗಿ ಧಾರೆಯೆರೆದು ಕೊಟ್ಟನು.

ಏವಂ ದತ್ತಾಸ್ಮಿ ರಾಮಾಯ ತದಾ ತಸ್ಮಿನ್ ಸ್ವಯಂವರೇ ।
ಅನುರಕ್ತಾಸ್ಮಿ ಧರ್ಮೇಣ ಪತಿಂ ವೀರ್ಯವತಾಂ ವರಮ್ ॥೫೪॥

ಹೀಗೆ ಆ ಸ್ವಯಂವರದಲ್ಲಿ ತಂದೆ ನನ್ನನ್ನು ರಾಮನಿಗೆ ವಿವಾಹ ಮಾಡಿ ಕೊಟ್ಟನು. ವೀರ್ಯವಂತರಲ್ಲಿ ಶ್ರೇಷ್ಠನಾದ ರಾಮನಲ್ಲಿ ನಾನು ನ್ಯಾಯವಾಗಿಯೆ ಅನುರಕ್ತಳಾಗಿದ್ದೇನೆ.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ನೂರಹದಿನೆಂಟನೇ ಸರ್ಗ ಮುಗಿಯಿತು.

ಏಕೋನವಿಂಶತ್ಯಧಿಕ ಶತತಮಃ ಸರ್ಗಃ

ಸರ್ಗ – 119

ಶ್ರೀರಾಮನು ಸೀತಾಲಕ್ಷ್ಮಣರೊಂದಿಗೆ ದಂಡಕಾರಣ್ಯವನ್ನು ಪ್ರವೇಶಿಸುವುದು.

ಅನಸೂಯಾ ತು ಧರ್ಮಜ್ಞಾ ಶ್ರುತ್ವಾ ತಾಂ ಮಹತೀಂ ಕಥಾಮ್ ।
ಪರ್ಯಷ್ವಜತ ಬಾಹುಭ್ಯಾಂ ಶಿರಸ್ಯಾಘ್ರಾಯ ಮೈಥಿಲೀಮ್ ॥೧॥

ಧರ್ಮಜ್ಞಳಾದ ಅನಸೂಯೆ ಆ ಸೀತಾಸ್ವಯಂವರದ ದೊಡ್ಡ ಕಥೆಯನ್ನು ಕೇಳಿ ಸೀತೆಯನ್ನು ಶಿರದಲ್ಲಿ ಆಘ್ರಾಣಿಸಿ ಎರಡು ತೋಳುಗಳಿಂದ ಆಲಿಂಗಿಸಿದಳು.

ವ್ಯಕ್ತಾಕ್ಷರಪದಂ ಚಿತ್ರಂ ಭಾಷಿತಂ ಮಧುರಂ ತ್ವಯಾ ।
ಯಥಾ ಸ್ವಯಂವರಂ ವೃತ್ತಂ ತತ್ ಸರ್ವಂ ಹಿ ಶ್ರುತಂ ಮಯಾ ॥೨॥

ಸ್ಪಷ್ಟ ಅಕ್ಷರಶಬ್ದಗಳಿಂದ ಅದ್ಭುತವಾಗಿ ಮಧುರವಾಗಿ ಸ್ವಯಂವರವು ಹೇಗೆ ನಡೆದಿತ್ತೋ ಹಾಗೇ ಎಲ್ಲವನ್ನೂ ನಿನ್ನ ಮುಖದಿಂದ ನಾನು ಈಗ ಕೇಳಿದೆನು.

ರಮೇಽಹಂ ಕಥಯಾ ತೇ ತು ದೃಢಂ ಮಧುರಭಾಷಿಣಿ ।
ರವಿರಸ್ತಂಗತಃ ಶ್ರೀಮಾನುಪೋಹ್ಯ ರಜನೀಂ ಶಿವಾಮ್ ॥೩॥

ಮಧುರಭಾಷಿಣಿ, ನೀನು ಹೇಳಿದ ಕಥೆಯಿಂದ ನಾನು ಅತ್ಯಂತ ಆನಂದಭರಿತ-ಳಾಗಿರುವೆನು. ಶ್ರೀಮಾನ್ ಸೂರ್ಯನು ಮಂಗಳಕರವಾದ ರಾತ್ರಿಯನ್ನುಂಟು ಮಾಡುತ್ತ ಅಸ್ತಂಗತನಾಗುತ್ತಿದ್ದಾನೆ.

ದಿವಸಂ ಪ್ರತಿ ಕೀರ್ಣಾನಾಮಾಹಾರಾರ್ಥಂ ಪತತ್ರಿಣಾಮ್ ।
ಸಂಧ್ಯಾಕಾಲೇ ನಿಲೀನಾನಾಂ ನಿದ್ರಾರ್ಥಂ ಶ್ರೂಯತೇ ಧ್ವನಿಃ ॥೪॥

ಬೆಳಗಾದೊಡನೆ ಆಹಾರಕ್ಕಾಗಿ ಅಲ್ಲಲ್ಲಿ ಹಾರಿಹೋಗಿದ್ದ ಪಕ್ಷಿಗಳು ಸಂಧ್ಯಾ-ಕಾಲದಲ್ಲಿ ನಿದ್ರೆಗಾಗಿ ಗೂಡಿನಲ್ಲಿ ಸೇರಿಕೊಳ್ಳುವ ಶಬ್ದವು ಕೇಳಿಸುತ್ತಿದೆ.

ಏತೇ ಚಾಪ್ಯಭಿಷೇಕಾರ್ದ್ರಾ ಮುನಯಃ ಕಲಶೋದ್ಯತಾಃ ।
ಸಹಿತಾ ಉಪವರ್ತಂತೇ ಸಲಿಲಾಪ್ಲುತವಲ್ಕಲಾಃ ॥೫॥

ಈ ಮುನಿಗಳು ಸಾಯಂಕಾಲದ ಸ್ನಾನವನ್ನು ತೀರಿಸಿಕೊಂಡು ಒದ್ದೆಬಟ್ಟೆಯಲ್ಲಿ ಕಲಶೋದಕವನ್ನು ಹೊತ್ತು ಎಲ್ಲರೂ ಜೊತೆಯಾಗಿ ಆಶ್ರಮಕ್ಕೆ ಹಿಂತಿರುಗುತ್ತಿದ್ದಾರೆ.

ಋಷೀಣಾಮಗ್ನಿಹೋತ್ರೇಷು ಹುತೇಷು ವಿಧಿಪೂರ್ವಕಮ್ ।
ಕಪೋತಾಂಗಾರುಣೋ ಧೂಮೋ ದೃಶ್ಯತೇ ಪವನೋದ್ಧತಃ ॥೬॥

ಋಷಿಗಳು ಅಗ್ನಿಹೋತ್ರಗಳಲ್ಲಿ ವಿಧಿಪೂರ್ವಕವಾಗಿ ಹೋಮಿಸಿದಾಗ ಪಾರಿವಾಳದ ಮೈಬಣ್ಣದಂಥ ಕಪ್ಪುಕೆಂಪುಬಣ್ಣದ ಹೊಗೆ ಗಾಳಿಯಲ್ಲಿ ಮೇಲೇರುತ್ತಿದೆ.

ಅಲ್ಪಪರ್ಣಾ ಹಿ ತರವೋ ಘನೀಭೂತಾಃ ಸಮಂತತಃ ।
ವಿಪ್ರಕೃಷ್ಟೇಽಪಿ ದೇಶೇಽಸ್ಮಿನ್ನ ಪ್ರಕಾಶಂತಿ ವೈ ದಿಶಃ ॥೭॥

ದೂರದ ಪ್ರದೇಶದಲ್ಲಿಯೂ ಮರಗಳು ಸ್ವಲ್ಪ ಎಲೆಗಳುಳ್ಳವುಗಳಾದರೂ ಕತ್ತಲಾಗುತ್ತಿರುವುದರಿಂದ ಎಲ್ಲೆಡೆ ದಟ್ಟವಾಗಿದ್ದು ದಿಕ್ಕುಗಳನ್ನು ಕಾಣದಂತೆ ಮಾಡುತ್ತಿವೆ.

ರಜನೀಚರಸತ್ತ್ವಾನಿ ಪ್ರಚರಂತಿ ಸಮಂತತಃ ।
ತಪೋವನಮೃಗಾ ಹ್ಯೇತೇ ವೇದಿತೀರ್ಥೇಷು ಶೇರತೇ ॥೮॥

ರಾತ್ರಿ ಸಂಚರಿಸುವ ಪ್ರಾಣಿಗಳು ಎಲ್ಲೆಡೆ ಸಂಚರಿಸುತ್ತಿವೆ. ತಪೋವನದ ಮೃಗಗಳು ಯಜ್ಞವೇದಿ ಸಮೀಪದಲ್ಲಿ ಮಲಗುತ್ತಿವೆ.

ಸಂಪ್ರವೃತ್ತಾ ನಿಶಾ ಸೀತೇ ನಕ್ಷತ್ರಸಮಲಂಕೃತಾ ।
ಜ್ಯೋತ್ಸ್ನಾಪ್ರಾವರಣಶ್ಚಂದ್ರೋ ದೃಶ್ಯತೇಽಭ್ಯುದಿತೋಽಂಬರೇ ॥೯॥

ನಕ್ಷತ್ರಗಳು ಅಲಂಕೃತವಾದ ರಾತ್ರಿ ಪ್ರಾರಂಭವಾಗಿದೆ. ಸೀತೆ, ಆಕಾಶದಲ್ಲಿ ಬೆಳದಿಂಗಳಿನಿಂದ ಎಲ್ಲವನ್ನು ಆವರಿಸುವ ಚಂದ್ರನು ಉದಿಸಿ ಗೋಚರಿಸುತ್ತಿದ್ದಾನೆ.

ಗಮ್ಯತಾಮನುಜಾನಾಮಿ ರಾಮಸ್ಯಾನುಚರೀ ಭವ ।
ಕಥಯಂತ್ಯಾ ಹಿ ಮಧುರಂ ತ್ವಯಾಹಂ ಪರಿತೋಷಿತಾ ॥೧೦॥

ನೀನಿನ್ನು ಹೋಗಬಹುದು. ಅನುಜ್ಞೆ ನೀಡುತ್ತೇನೆ. ರಾಮನ ಶುಶ್ರೂಷೆ ಮಾಡು. ನೀನು ಮಧುರವಾಗಿ ಕಥೆಯನ್ನು ಹೇಳಿ ನನ್ನನ್ನು ಸಂತೋಷ ಗೊಳಿಸಿರುವೆ.

ಅಲಂಕುರು ಚ ತಾವತ್ತ್ವಂ ಪ್ರತ್ಯಕ್ಷಂ ಮಮ ಮೈಥಿಲಿ ।
ಪ್ರೀತಿಂ ಜನಯ ಮೇ ವತ್ಸೇ ದಿವ್ಯಾಲಂಕಾರಶೋಭಿತಾ ॥೧೧॥

ಸೀತೆ, ನನ್ನೆದುರಲ್ಲಿಯೇ ಈ ಆಭರಣಗಳನ್ನು ತೊಟ್ಟು ನಿನ್ನನ್ನು ಸಿಂಗರಿಸಿಕೊಳ್ಳು. ಮಗು, ದಿವ್ಯ ಅಲಂಕಾರಗಳಿಂದ ಶೋಭಿಸುತ್ತ ನನ್ನ ಕಣ್ಣಿಗೆ ಹಬ್ಬವನ್ನುಂಟು ಮಾಡು.

ಸಾ ತಥಾ ಸಮಲಂಕೃತ್ಯ ಸೀತಾ ಸುರಸುತೋಪಮಾ ।
ಪ್ರಣಮ್ಯ ಶಿರಸಾ ತಸ್ಯೈ ರಾಮಂ ತ್ವಭಿಮುಖೀ ಯಯೌ ॥೧೨॥

ದೇವಕನ್ನಿಕೆಯಂಥ ಸೀತೆ ತನ್ನನ್ನು ಸಿಂಗರಿಸಿಕೊಂಡು ಅನಸೂಯೆಗೆ ತಲೆಬಾಗಿ ನಮಿಸಿ ರಾಮನಿದ್ದೆಡೆಗೆ ನಡೆದಳು.

ತಥಾ ವಿಭೂಷಿತಾಂ ಸೀತಾಂ ದದರ್ಶ ವದತಾಂ ವರಃ ।
ರಾಘವಃ ಪ್ರೀತಿದಾನೇನ ತಪಸ್ವಿನ್ಯಾ ಜಹರ್ಷ ಚ ॥೧೩॥

ತಪಸ್ವಿನಿ ಅನುಸೂಯೆ ಉಡುಗೊರೆಯಾಗಿ ಕೊಟ್ಟ ಅಲಂಕಾರಗಳಿಂದ ಭೂಷಿತ–ಳಾದ ಸೀತೆಯನ್ನು ವಾಗ್ಮಿಗಳಲ್ಲಿ ಶ್ರೇಷ್ಠನಾದ ರಾಮನು ನೋಡಿದನು ಹರ್ಷಪಟ್ಟನು.

ನ್ಯವೇದಯತ್ತತಃ ಸರ್ವಂ ಸೀತಾ ರಾಮಾಯ ಮೈಥಿಲೀ ।
ಪ್ರೀತಿದಾನಂ ತಪಸ್ವಿನ್ಯಾ ವಸನಾಭರಣಸ್ರಜಮ್ ॥೧೪॥

ಬಳಿಕ ಸೀತೆ ತಪಸ್ವಿನಿ ಕೊಟ್ಟ ವಸ್ತ್ರಾಭರಣ ಮಾಲೆಗಳ ಉಡುಗೊರೆಯನ್ನು ಎಲ್ಲವನ್ನೂ ರಾಮನಿಗೆ ಸಮರ್ಪಿಸಿದಳು.

ಪ್ರಹೃಷ್ಟಸ್ತ್ವಭವದ್ರಾಮೋ ಲಕ್ಷ್ಮಣಶ್ಚ ಮಹಾರಥಃ ।
ಮೈಥಿಲ್ಯಾಃ ಸತ್ಕ್ರಿಯಾಂ ದೃಷ್ಟ್ವಾ ಮಾನುಷೇಷು ಸುದುರ್ಲಭಾಮ್॥೧೫॥

ಅನಸೂಯೆ ಸೀತೆಗೆ ಮಾಡಿದ, ಮನುಷ್ಯರಲ್ಲಿ ನೋಡಲು ಸುದುರ್ಲಭವಾದ ಸತ್ಕಾರವನ್ನು ನೋಡಿ ಮಹಾರಥನಾದ ರಾಮನೂ ಲಕ್ಷ್ಮಣನೂ ಬಹಳ ಹರ್ಷ ಪಟ್ಟರು.

ತತಸ್ತಾಂ ಶರ್ವರೀಂ ಪ್ರೀತಃ ಪುಣ್ಯಾಂ ಶಶಿನಿಭಾನನಃ ।
ಅರ್ಚಿತಸ್ತಾಪಸೈಃ ಸಿದ್ಧೈರುವಾಸ ರಘುನಂದನಃ ॥೧೬॥

ಚಂದ್ರನಂಥ ಮುಖವುಳ್ಳ ಶ್ರೀರಾಮನು ತಪಃಸಿದ್ಧರಾದ ತಾಪಸರಿಂದ ಪೂಜಿತನಾಗಿ ಪುಣ್ಯಕರವಾದ ಆ ರಾತ್ರಿಯನ್ನು ಆ ಆಶ್ರಮದಲ್ಲಿ ಕಳೆದನು.

ತಸ್ಯಾಂ ರಾತ್ರ್ಯಾಂ ವ್ಯತೀತಾಯಾಮಭಿಷಿಚ್ಯ ಹುತಾಗ್ನಿಕಾನ್ ।
ಆಪೃಚ್ಛ್ಯೇತಾಂ ನರವ್ಯಾಘ್ರೌ ತಾಪಸಾನ್ ವನಗೋಚರಾನ್ ॥೧೭॥

ಆ ರಾತ್ರಿಕಳೆದೊಡನೆ ಪುರುಷೋತ್ತಮರಾದ ರಾಮಲಕ್ಷ್ಮಣರು ಸ್ನಾನಮಾಡಿ, ಹೋಮಗಳನ್ನು ಮುಗಿಸಿದ ವನವಾಸಿಗಳಾದ ತಾಪಸರಿಂದ ಬೀಳ್ಕೊಂಡರು.

ತಾವೂಚುಸ್ತೇ ವನಚರಾಸ್ತಾಪಸಾ ಧರ್ಮಚಾರಿಣಃ ।
ವನಸ್ಯ ತಸ್ಯ ಸಂಚಾರಂ ರಾಕ್ಷಸೈಃ ಸಮಭಿಪ್ಲುತಮ್ ॥೧೮॥

ಧರ್ಮಚಾರಿ ವನಚಾರಿಗಳಾದ ಆ ತಾಪಸರು ರಾಮಲಕ್ಷ್ಮಣರಿಗೆ ಹೇಳಿದರು, 'ಕಾಡುದಾರಿ ಇಲ್ಲಿ ರಾಕ್ಷಸರಿಂದ ತುಂಬಿರುತ್ತದೆ!' ಎಂದು.

ರಕ್ಷಾಂಸಿ ಪುರುಷಾದೀನಿ ನಾನಾರೂಪಾಣಿ ರಾಘವ ।
ವಸಂತ್ಯಸ್ಮಿನ್ ಮಹಾರಣ್ಯೇ ವ್ಯಾಳಾಶ್ಚ ರುಧಿರಾಶನಾಃ ॥೧೯॥

ರಾಮ, ಈ ಮಹಾ ಅರಣ್ಯದಲ್ಲಿ ರಾಕ್ಷಸರು ನರಭಕ್ಷಕರು ನಾನಾರೂಪ ಧರಿಸುವವರು ಮತ್ತು ರಕ್ತಾಹಾರಿ ಕ್ರೂರಮೃಗಗಳೂ ವಾಸಮಾಡುತ್ತಿವೆ.

ಉಚ್ಛಿಷ್ಟಂ ವಾ ಪ್ರಮತ್ತಂ ವಾ ತಾಪಸಂ ಧರ್ಮಚಾರಿಣಮ್ ।
ಅದಂತ್ಯಸ್ಮಿನ್ ಮಹಾರಣ್ಯೇ ತಾನ್ನಿವಾರಯ ರಾಘವ ॥೨೦॥

ರಾಮ, ಈ ಮಹಾಅರಣ್ಯದಲ್ಲಿ ಧರ್ಮಚಾರಿಯಾದ ತಾಪಸನನ್ನು ಕೂಡ ಅವನು ಅಶುಚಿಯೋ ಅಜಾಗರೂಕನೋ ಆಗಿರುವಾಗ ಈ ರಾಕ್ಷಸರು ತಿಂದು ಹಾಕುತ್ತಾರೆ. ಅವರನ್ನು ನೀನು ನಿವಾರಿಸಿಕೊಳ್ಳು.

ಏಷ ಪಂಥಾ ಮಹರ್ಷೀಣಾಂ ಫಲಾನ್ಯಾಹರತಾಂ ವನೇ ।
ಅನೇನ ತು ವನಂ ದುರ್ಗಂ ಗಂತುಂ ರಾಘವ ತೇ ಕ್ಷಮಮ್ ॥೨೧॥

ಕಾಡಿನಲ್ಲಿ ಮಹರ್ಷಿಗಳಿಗೆ ಹಣ್ಣುಗಳನ್ನು ತರಲು ಇದೇ ದಾರಿ. ಈ ದಾರಿ-ಯಿಂದಲೇ, ರಾಮ, ನೀನು ದುರ್ಗಮವಾದ ಅರಣ್ಯವನ್ನು ಪ್ರವೇಶಿಸುವುದು ಯುಕ್ತ.

ಇತೀವ ತೈಃ ಪ್ರಾಂಜಲಿಭಿಸ್ತಪಸ್ವಿಭಿ
ರ್ದ್ವಿಜೈಃ ಕೃತಸ್ವಸ್ತ್ಯಯನಃ ಪರಂತಪಃ ।
ವನಂ ಸಭಾರ್ಯಃ ಪ್ರವಿವೇಶ ರಾಘವಃ
ಸಲಕ್ಷ್ಮಣಃ ಸೂರ್ಯ ಇವಾಭ್ರಮಂಡಲಮ್ ॥೨೨॥

ಹೀಗೆ ತಪಸ್ವಿಗಳಾದ ಋಷಿಗಳು ಕೈಮುಗಿದು ಸ್ವಸ್ತಿವಾಚನ ಮಾಡಿದಾಗ ಸೂರ್ಯನು ಮೋಡಗಳ ಸಮೂಹದೊಳಗೆ ಪ್ರವೇಶಿಸುವಂತೆ ಶ್ರೀರಾಮನು ಪತ್ನೀಸಮೇತನಾಗಿ ಲಕ್ಷ್ಮಣನೊಂದಿಗೆ ದಂಡಕಾರಣ್ಯವನ್ನು ಪ್ರವೇಶಿಸಿದನು.

ಇಲ್ಲಿಗೆ ಶ್ರೀವಾಲ್ಮೀಕಿ ರಾಮಾಯಣ ಅಯೋಧ್ಯಾಕಾಂಡದಲ್ಲಿ
ನೂರಹತ್ತೊಂಬತ್ತನೇ ಸರ್ಗ ಮುಗಿಯಿತು.

॥ ಅಯೋಧ್ಯಾಕಾಂಡಃ ಸಂಪೂರ್ಣಃ ॥

ಇಲ್ಲಿಗೆ ಅಯೋಧ್ಯಾಕಾಂಡವು ಮುಗಿಯಿತು.

ರಾಮಾಯಣದ ಏಳು ಕಾಂಡಗಳಲ್ಲಿ ಎರಡನೇ ಕಾಂಡ ಅದು ಅಯೋಧ್ಯಾಕಾಂಡ. ಮನಸ್ಸು ಬಾಲಕನಂತಾದರೆ ಸಾಧಕ ಅಯೋಧ್ಯ. ಮನಸ್ಸು ನಿರ್ವಿಕಾರ. ಪರಿಸ್ಥಿತಿ, ಆವೇಶ, ಉದ್ವೇಗ, ಮಾನಾಪಮಾನಗಳು ಮನಸ್ಸಿನ ಮೇಲೆ ಯುದ್ಧ ಮಾಡಲಾರವು. ವಿಕೃತಗೊಳಿಸವು.

ಯೋದ್ಧುಂ ಯೋಗ್ಯಾ ಯೋಧ್ಯಾ, ನ ಯೋಧ್ಯಾ ಅಯೋಧ್ಯಾ ಯುದ್ಧವಿಲ್ಲದ ಕಾಂಡವಿದು. ರಾಜನಾಗಲು ಹೊರಟ ರಾಮ, ನಾರಮಡಿಯುಟ್ಟು ಕಾಡದಾರಿ ಹಿಡಿದ. ಯಾರನ್ನೂ ದೂರಲಿಲ್ಲ. ಆಸೆ ಇಲ್ಲ. ಸಹಜ ಸಹನೆ. ವಿಕಾರೋ ನೈವ ಲಕ್ಷಿತಃ ಮುಖದಲ್ಲಿಯೂ ಸರ್ವಥಾ ವಿಕಾರವಿಲ್ಲ. ಇದು ರಾಮನ ಅಯೋಧ್ಯತೆ. ಇಲ್ಲಿಯೇ ಶ್ರೀರಾಮ ಉಳಿದಿದ್ದರೆ ತಮ್ಮಂದಿರಲ್ಲಿ, ತಾಯಂದಿರಲ್ಲಿ, ತಂದೆಗೂ ಪರಸ್ಪರ ಸಂಘರ್ಷ. ಮನಸ್ತಾಪ. ಅದನ್ನು ತಪ್ಪಿಸಲು ಕಾಡಿಗೆ ತೆರಳಿದ. ಅಯೋಧ್ಯನಾದ ರಾಮ ಕಾಡಿಗೆ ಮಡದಿ, ತಮ್ಮನೊಡನೆ ತೆರಳಿದ. ದ್ವೇಷ, ಅತೃಪ್ತಿ ಇಲ್ಲದೇ ಸಂತಸದಿಂದ ಅಯೋಧ್ಯನಾಗಿ ಅಯೋಧ್ಯೆಯಿಂದ ವನಕ್ಕೆ ತೆರಳಿದ.

ತಂದೆ-ತಾಯಿಗಳ, ಮಕ್ಕಳ, ಅಣ್ಣ-ತಮ್ಮಂದಿರ, ಪತಿ-ಪತ್ನಿಯರ, ರಾಜ-ಪ್ರಜೆಗಳ ಪ್ರೀತಿ ತುಂಬಿದ ಕಾಂಡ. ಅನಂತಗುಣಗಣಿ ರಾಮ. ವಿವೇಕ, ಪ್ರೀತಿಯ ಲಕ್ಷ್ಮಣ. ಭಕ್ತಿಯ ಭರತ. ಸಾತ್ತ್ವಿಕ ಶತ್ರುಘ್ನ. ಇವರಿಂದ ಅರಮನೆ ಅಯೋಧ್ಯೆಯಾಯಿತು. ಸ್ವಾರ್ಥ ಸೋತಿತು. ಸಂಘರ್ಷ ಕರಗಿತು. ಇದು ತ್ಯಾಗದ ಅಯೋಧ್ಯಾಕಾಂಡ. ಬಾಲಕನಾಗಿ ಅಯೋಧ್ಯನಾಗುವ ದ್ವಿತೀಯ ಸೋಪಾನ.